# ಜನಪದ ಕಥಾವಳಿ

ಡಾ. ಎಚ್.ಜೆ. ಲಕ್ಕಪ್ಪಗೌಡ

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ಜನಪದ ಕಥಾವಳಿ

ಡಾ. ಎಚ್.ಜೆ. ಲಕ್ಕಪ್ಪಗೌಡ

ಕರ್ನಾಟಕ ಸರ್ಕಾರ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಕನ್ನಡ ಭವನ, ಜೆ.ಸಿ.ರಸ್ತೆ

ಬೆಂಗಳೂರು – ೫೬೦ ೦೦೨

**JANAPADA KATHAVALI :** Collection of folk stories Edited by **Dr. H.J. Lakkappagowda**, Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧
ಪ್ರತಿಗಳು : ೧೦೦೦
ಪುಟಗಳು : XVI + ೨೯೪
ಬೆಲೆ : ರೂ. ೭೦/–

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೭೨೪



**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

## ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವ ಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

**(ಬಿ.ಎಸ್. ಯಡಿಯೂರಪ್ಪ)**

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

# ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೦೧.೨೦೧೧

**(ಗೋವಿಂದ ಎಂ. ಕಾರಜೋಳ)**



# ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

**(ರಮೇಶ್ ಬಿ.ಝುಳಕಿ)**
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

## ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ !

**ಎಲ್.ಎಸ್. ಶೇಷಗಿರಿ ರಾವ್**
ಅಧ್ಯಕ್ಷ
ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦



## ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ: ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ



# ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ


**ಅಧ್ಯಕ್ಷರು**
ಪ್ರೊ. ಎಲ್.ಎಸ್. ಶೇಷಗಿರಿರಾವ್

**ಸದಸ್ಯರು**
ಡಾ॥ ಚಂದ್ರಶೇಖರ ಕಂಬಾರ
ಡಾ॥ ಎಂ.ಎಂ. ಕಲಬುರ್ಗಿ
ಡಾ॥ ದೊಡ್ಡರಂಗೇಗೌಡ
ಡಾ॥ ಅರವಿಂದ ಮಾಲಗತ್ತಿ
ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
ಡಾ॥ ಪ್ರಧಾನ್ ಗುರುದತ್ತ
ಡಾ॥ ಹಂಪ ನಾಗರಾಜಯ್ಯ
ಡಾ॥ ಎಚ್.ಜೆ. ಲಕ್ಕಪ್ಪಗೌಡ
ಶ್ರೀಮತಿ ಸಾರಾ ಅಬೂಬಕರ್
ಡಾ॥ ಪಿ.ಎಸ್. ಶಂಕರ್

**ಸದಸ್ಯ ಕಾರ್ಯದರ್ಶಿ**
ಶ್ರೀ ಮನು ಬಳಿಗಾರ್, ಕ.ಆ.ಸೇ.
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಮೊದಲ ಮಾತು

೧

ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಗೆ ಸಾವಿರಾರು ವರ್ಷಗಳ ಸಮೃದ್ಧವಾದ ಮತ್ತು ವೈವಿಧ್ಯಪೂರ್ಣವಾದ ಶ್ರೀಮಂತ ಪರಂಪರೆಯಿದೆ. ಭಾರತದ ಆದಿ ಮಹಾಕಾವ್ಯಗಳೇ ನಮ್ಮ ಜನಪದರ ವ್ಯಾಪಕ ಜೀವನಾನುಭವದ, ಕಲ್ಪನಾಶಕ್ತಿಯ, ಅದ್ಭುತ ಸೃಜನ ಸಾಮರ್ಥ್ಯದ, ಚಿರಂತನ ಚಿಂತನೆಗಳ ಮತ್ತು ಅನನ್ಯ ಭಾಷಿಕ ಶಕ್ತಿಯ ಅಮೃತ ಫಲಗಳಾಗಿವೆ. ಈ ಸುದೀರ್ಘ ಲಿಖಿತ ಪರಂಪರೆಯ ಹಿಂದೆ, ಮತ್ತಷ್ಟು ವ್ಯಾಪಕವಾದ ಸೂಕ್ಷ್ಮವಾದ ಪ್ರತಿಭಾಪೂರ್ಣವಾದ ಮೌಖಿಕ ಪರಂಪರೆ ಜೀವಂತವಾಗಿದೆ, ಕ್ರಿಯಾಶೀಲವಾಗಿದೆ. ಅಕ್ಷರ ಸಂಸ್ಕೃತಿಯ ಆರಂಭಕ್ಕಿಂತ ಬಹು ಬಹು ಹಿಂದೆಯೇ ಮೊಳಕೆಗೊಂಡು ಪಲ್ಲವಿಸಿದ ಸಾಹಿತ್ಯ ಹಲವು ಮುಖಗಳಲ್ಲಿ ತನ್ನನ್ನು ಅನಾವರಣ ಮಾಡಿಕೊಂಡಿತು. ಮನುಷ್ಯನ ವೈಯಕ್ತಿಕ ಮತ್ತು ಸಾಮೂಹಿಕ ಅನುಭವಗಳ ತುಡಿತ ಮಿಡಿತಗಳು, ಮನುಷ್ಯ ತಾನೇ ಸೃಷ್ಟಿಸಿಕೊಂಡ ಭಾಷೆಯ ರೂಪದಲ್ಲಿ ಸಹಜವಾಗಿ ಅಭಿವ್ಯಕ್ತವಾಗ ತೊಡಗಿದವು. ಪ್ರತಿಭಾವಂತನಾದ ಮನುಷ್ಯ ತನ್ನ ವೈಯಕ್ತಿಕ ಆಸೆ ಅಕಾಂಕ್ಷೆಗಳ ಸಂವಹನಕ್ಕಾಗಿಯೆಂತೋ, ಅಂತೆಯೇ ತನ್ನ ವಿಶಿಷ್ಟ ಅನುಭವಗಳು ಆಲೋಚನೆಗಳು ಕೌಶಲಗಳು ಕಲ್ಪನೆಗಳು ಊಹೆಗಳು ಇತರರಿಗೂ ತಲಪಲಿ ಎನ್ನುವ ಆಶಯವನ್ನು ಹೊತ್ತಾಗ ಅವು ಕಥೆಯಾಗಿ ಕಾವ್ಯವಾಗಿ ಮೂಡತೊಡಗಿದವು. ಇಂಥ ಆಶಯದ ಪ್ರತಿಭಾಫಲಗಳೇ ಜನಪದ ಕಥೆಗಳು. ಕಂಡದ್ದನ್ನು ಗ್ರಹಿಸುವ, ಕಾಣದ್ದನ್ನು ಕಲ್ಪಿಸಿಕೊಳ್ಳುವ, ಈ ಗ್ರಹಣೆ ಕಲ್ಪನೆ ಊಹನೆಗಳನ್ನು ಇತರರಿಗೆ ತಲಪಿಸುವ ಪ್ರಯತ್ನವೇ ಈ ಕಥೆಗಳು. ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ, ತಲೆಮಾರಿನಿಂದ ತಲೆ ಮಾರಿಗೆ, ಪ್ರದೇಶದಿಂದ ಪ್ರದೇಶಕ್ಕೆ, ಭಾಷೆಯಿಂದ ಭಾಷೆಗೆ ಇವು ಪ್ರವಹಿಸಿವೆ ಜನಪದ ಸಂಸ್ಕೃತಿಯ ಸಂವಹನದಲ್ಲಿ ಈ ಕಥೆಗಳದು ಪ್ರಮುಖ ಪಾತ್ರ.

೨

ಕನ್ನಡ ಜನಪದ ಕಥೆಗಳಿಗೆ ಸಾಹಿತ್ಯದಲ್ಲಿ ವಿಶಿಷ್ಟವಾದ ಸ್ಥಾನವಿದೆ. ಜನಪದರ ಸೃಜನ ಪ್ರತಿಭೆಯ ಸ್ವಯಂಭು ಫಲವಾಗಿ ಆವಿರ್ಭವಿಸಿದ ಇವು ಕಲಿಯದವರಿಗೂ ಕಾಮಧೇನುವಾಗಿವೆ.



ಕರ್ನಾಟಕದಲ್ಲಿ ಜನಪದ ಕಥೆಗಳ ಬಾಹುಳ್ಯ ಅಧಿಕವಾಗಿದ್ದರೂ, ಈ ನಾಡಿನ ವೈಶಾಲ್ಯಕ್ಕೆ ಸಂಸ್ಕೃತಿ ವೈವಿಧ್ಯಕೆ ಭಾಷಿಕ ಬಹುಳತೆಗೆ ಅನುಗುಣವಾಗಿ ಕ್ಷೇತ್ರಕಾರ್ಯವಾಗಲಿ ಸಂಪಾದನೆಯಾಗಲಿ ಅಧ್ಯಯನವಾಗಲಿ ಸಂಶೋಧನೆಯಾಗಲಿ ನಡೆದಿಲ್ಲವೆಂದೇ ಹೇಳಬೇಕು. ದೇವುಡು, ಜಿ.ಪಿ. ರಾಜರತ್ನಂ, ಮಿರ್ಜಿ ಅಣ್ಣಾರಾಯರು, ಮತಿಘಟ್ಟ ಕೃಷ್ಣಮೂರ್ತಿಯವರು ಮುಂತಾದವರು ಈ ಕಥಾಕ್ಷೇತ್ರದಲ್ಲಿ ಕೆಲಸ ಮಾಡಿದ ಹಿರಿಯರು. ಈ ಪ್ರವೃತ್ತಿಗೆ ಮಹಾಪೂರ ಬಂದದ್ದು, ಮೈಸೂರು ವಿ.ವಿ. ನಿಲಯದಲ್ಲಿ ಪ್ರೊ. ದೇ.ಜವರೇಗೌಡರ ನೇತೃತ್ವದಲ್ಲಿ ಜಾನಪದ ಅಧ್ಯಯನ ವಿಭಾಗ ಆರಂಭವಾದಾಗ. ದೇಜಗೌ ಅವರ ಉತ್ಸಾಹದಾಯಕ ಚೇತನಪೂರ್ಣ ಪ್ರೋತ್ಸಾಹ ಮತ್ತು ಮಾರ್ಗದರ್ಶನ, ಡಾ. ಹಾಮಾನಾ ಮತ್ತು ಡಾ. ಜೀಶಂಪ ಅವರ ಸ್ಫೂರ್ತಿದಾಯಕ ವ್ಯಕ್ತಿತ್ವಗಳ ಕಾರಣದಿಂದ ಇಡೀ ಕನ್ನಡ ನಾಡಿನಲ್ಲಿ ಜಾನಪದ ಜಾಗೃತಿ ಆರಂಭವಾದಾಗ ಜನಪದ ಕಥೆಗಳ ಸಂಗ್ರಹ ಸಂಶೋಧನೆ ಪ್ರಕಟಣೆಗಳಿಗೆ ಪ್ರಾಮುಖ್ಯ ದೊರೆತು, ನೂರಾರು ಕಥಾಸಂಗ್ರಹಗಳು ಪ್ರಕಟವಾದವು. ಜಾನಪದ ಅಧ್ಯಯನದ ಇತಿಹಾಸದಲ್ಲಿ ಇದೊಂದು ಪರ್ವಕಾಲವೆನ್ನಬಹುದು. ಈ ಬೆಳಕಿನಲ್ಲಿ ಕರ್ನಾಟಕದ ವಿಶ್ವವಿದ್ಯಾನಿಲಯಗಳ ಕನ್ನಡ ವಿಭಾಗಗಳು, ಕನ್ನಡ ಸಾಹಿತ್ಯ ಪರಿಷತ್ತು, ಜನಪದ ಸಾಹಿತ್ಯ ಸಂಸ್ಕೃತಿಯ ಬಗ್ಗೆ ರಾಜ್ಯ ಮಟ್ಟದ ವಿಚಾರ ಸಂಕಿರಣಗಳನ್ನು ಏರ್ಪಡಿಸಿ, ಜಾನಪದ ವಿದ್ವಾಂಸರನ್ನು ಕೂಡಿಸಿ ಜಾನಪದ ಪ್ರಕಟಣೆಗಳನ್ನು ಮಾಡಲಾರಂಭಿಸಿದವು. ಪ್ರಕಟಣೆ ಮತ್ತು ಸಂಶೋಧನೆಗಳು ಭರದಿಂದ ನಡೆದು, ವೈಯಕ್ತಿಕ ಸಂಗ್ರಹ–ಸಂಪಾದನೆಗಳೂ ಆರಂಭವಾಗಿ, ಪ್ರಕಾಶಕರೂ ಈ ಬಗ್ಗೆ ಗಮನಹರಿಸಿ ಉತ್ತಮ ಕೃತಿಗಳನ್ನು ಬೆಳಕಿಗೆ ತಂದರು. ಆದರೆ ಇದೇ ಉತ್ಸಾಹ ಈಗ ಕಂಡು ಬರುತ್ತಿಲ್ಲದಿರುವುದು ವಿಷಾದನೀಯ. ವಿ.ವಿ.ಗಳ ಜಾನಪದ ವಿಭಾಗಗಳು ಕಥಾವಿಭಾಗ, ಕಾವ್ಯ ವಿಭಾಗ ಮತ್ತು ಸಂಸ್ಕೃತಿ ವಿಭಾಗಗಳನ್ನು ಪ್ರತ್ಯೇಕವಾಗಿ ತೆರೆದು ವ್ಯಾಪಕವಾದ ಕ್ಷೇತ್ರಕಾರ, ಸಂಪಾದನೆ, ವಿವೇಚನೆ, ಪ್ರಕಟಣೆಗಳನ್ನು ಆರಂಭಿಸಿಬೇಕು. ಈಗ ಕರ್ನಾಟಕದಲ್ಲಿ ಆರಂಭವಾಗಲಿರುವ 'ಜಾನಪದ ವಿಶ್ವವಿದ್ಯಾನಿಲಯ' ಈ ಬಗ್ಗೆ ಆದ್ಯಗಮನ ನೀಡಬೇಕು.

೩

ಕನ್ನಡ ಜನಪದ ಸಾಹಿತ್ಯದ ಸಂಭ್ರಮದ ಕಾಲದಲ್ಲಿ ಪುಂಖಾನುಪುಂಖವಾಗಿ ಜನಪದ ಕಥೆಗಳ ಸಂಗ್ರಹಗಳು ಪ್ರಕಟವಾದವು. ಡಾ. ಸಂಧ್ಯಾರೆಡ್ಡಿಯವರು 'ಕನ್ನಡ ಜನಪದ ಕಥೆ'ಗಳನ್ನೇ ಕುರಿತು ಗಂಭೀರವಾದ ತಲಸ್ಪರ್ಶಿ ಸಂಶೋಧನೆಯ ಮೌಲಿಕ ಗ್ರಂಥವೊಂದನ್ನು ಪ್ರಕಟಿಸಿದ್ದು, ಈ ಬಗೆಯ ಅಧ್ಯಯನಕ್ಕೆ ಮಾದರಿಯಾಗಿದೆ.

೪

ಸುಮಾರು ನಲವತ್ತು ವರ್ಷಗಳ ಹಿಂದೆ, ನಾನು ಹಾಸನ ಮತ್ತು ಮೈಸೂರು

ಜಿಲ್ಲೆಗಳಲ್ಲಿ ಸಂಗ್ರಹಿಸಿ ಸಂಪಾದಿಸಿ ಪ್ರಕಟಿಸಿದ 'ಜನಪದ ಕಥಾವಳಿ' ಕೃತಿಯಿದು. ಹಿರಿಯರಾದ ಶ್ರೀ ನಿರಂಜನ, ಪ್ರೊ. ದೇಜಗೌ ಮತ್ತು ಪ್ರೊ ಹಾಮಾನಾ ಅವರು 'ಸಹಕಾರಿ ಪ್ರಕಾಶನ'ದ ಅಡಿಯಲ್ಲಿ ಇದನ್ನು ಮೊದಲ ಬಾರಿಗೆ ಪ್ರಕಟಿಸಿದರು. ಇದು ಜಾನಪದ ವಿದ್ವಾಂಸರ ಗಮನ ಮತ್ತು ಆದರಗಳಿಗೆ ಪಾತ್ರವಾಗಿ ಹಲವು ಮುದ್ರಣಗಳನ್ನು ಕಂಡಿದೆ. ಇದೀಗ ಸರ್ಕಾರದ 'ಕನ್ನಡದ ಮೇರುಕೃತಿಗಳ ಪ್ರಕಟಣೆ'ಯ ಅಡಿಯಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇದನ್ನು ಪ್ರಕಟಿಸುತ್ತಿದೆ. ಈ ಯೋಜನೆಯ ಅಧ್ಯಕ್ಷರಾದ ಪ್ರೊ. ಎಲ್. ಎಸ್. ಶೇಷಗಿರಿರಾಯರಿಗೆ, ನಿರ್ದೇಶರಾದ ಮಾನ್ಯ ಶ್ರೀ ಮನು ಬಳಿಗಾರ್ ಅವರಿಗೆ ಮತ್ತು ಪ್ರಕಟನಾ ಸಮಿತಿಯ ಮಾನ್ಯ ಸದಸ್ಯರಿಗೆ ನನ್ನ ಕೃತಜ್ಞತೆಯ ವಂದನೆಗಳು. ಇದನ್ನು ಸುಂದರವಾಗಿ ಮುದ್ರಿಸಿರುವ ಮಯೂರ ಪ್ರಿಂಟ್ ಆ್ಯಡ್ಸ್ ಅವರಿಗೂ ವಂದನೆಗಳು.

**ಎಚ್.ಜೆ. ಲಕ್ಕಪ್ಪಗೌಡ**



# ಪರಿವಿಡಿ


| | |
|---|---|
| ಶುಭ ಸಂದೇಶ | III |
| ಚೆನ್ನುಡಿ | IV |
| ಎರಡು ನುಡಿ | V |
| ಅಧ್ಯಕ್ಷರ ಮಾತು | VI |
| ಪ್ರಕಾಶಕರ ಮಾತು | VII |
| ಆಯ್ಕೆ ಸಮಿತಿ | IX |
| ಮೊದಲ ಮಾತು | X |
| **ಕಿನ್ನರ ಕತೆಗಳು** | |
| ಕುಂಟಣ್ಣ ಕಂಡ ಕೈಲಾಸ | ೧ |
| ಕಂಚಿನ ಕೊಳ | ೨೫ |
| ಮರಗುದುರೆ | ೪೧ |
| ನಳ್ಳಿಗೊಮಾರ | ೫೪ |
| ಬುದ್ದಿಯ ಬಲ | ೬೭ |
| ಚಿಕ್ಕಹೊನ್ನಿ – ದೊಡ್ಡಹೊನ್ನಿ | ೭೮ |
| ಪದ್ಮಾವತಿ | ೮೮ |
| ಮಾಡಿದ್ದುಣ್ಣೋ ಮಾರಾಯ | ೯೭ |
| **ನೀತಿ ಕಥೆಗಳು** | |
| ಬ್ರಹ್ಮಗಂಟು | ೧೧೧ |
| ಹಣೇಬರಹ | ೧೧೯ |
| ಯಾರು ಹೆಚ್ಚು | ೧೨೫ |
| ಅಣ್ಣ–ತಂಗಿ | ೧೩೫ |

**ಅತಿಮಾನುಷ ಕಥೆಗಳು**


| | |
|---|---|
| ಗೌಡನ ಮಗ | ೧೪೫ |
| ದೆವ್ವದ ದಯೆ | ೧೫೯ |
| ಬೆನ್ನ ಹಿಂದೆ ಬಂದ ಭಾಗ್ಯ | ೧೭೫ |
| ಗುರು-ಶಿಷ್ಯ | ೧೮೩ |
| ಟೋಪಿ-ಕೋಲು-ಉಂಗುರ | ೧೯೩ |
| ಹಾವು-ಬೆಕ್ಕು-ಮುರ್ಕಾಟಿ | ೨೦೩ |
| ಗುಲಗಂಜಿ ಮಾದೇವಿ | ೨೧೪ |


**ವಿನೋದ ಕಥೆಗಳು**


| | |
|---|---|
| ಪೆದ್ದಪಾಪಣ್ಣ | ೨೨೭ |
| ಚದುರ ಚನ್ನಯ್ಯ | ೨೩೬ |
| ಘಾಟಿ ಸೊಸೆ | ೨೪೪ |
| ಗುರುವ ಗುರುವಾದ | ೨೫೧ |
| ಕಥೆಗಳನ್ನು ಹೇಳಿದವರು | ೨೫೭ |
| ಅರ್ಥಕೋಶ | ೨೬೧ |




# ಜನಪದ ಕಥಾವಳಿ

೧

# ಕಿನ್ನರ ಕತೆಗಳು

**Blank**



# ಕುಂಟಣ್ಣ ಕಂಡ ಕೈಲಾಸ*

ಒಂದು ದೊಡ್ಡ ಮನೆ. ಸುತ್ತಲೂ ಹದಿನಾರು ಹಳ್ಳೀಲೂ ಅದು ಹೆಸರುವಾಸಿಯಾಗಿತ್ತು. ಆ ಮನೆಯಲ್ಲಿ ಐದು ಜನ ಅಣ್ಣತಮ್ಮದೀರು ಇದ್ದರು. ಕಿರಿಯೋನು ಕುಂಟ. ಅವನೊಬ್ಬನೇ ಆ ಮನೇಲಿ ಒಂದಿಷ್ಟು ಮಠಕ್ಕೆ ಮಣ್ ಹಾಕಿದ್ದೋನು. ಹೊಲ ಮನೆ ಕೆಲಸ ಮಾಡಾಕೂ ಅವನಿಗೆ ಆಗುತ್ತಿರಲಿಲ್ಲ. ಆದ್ದರಿಂದ ಎಲ್ಲಾ ಸೇರಿ ಮನೇ ಯಜಮಾನಿಕೆ ಅವನಿಗೆ ವಹಿಸಿದರು. ಅದರ ಆರ ಭಾರ ಎಲ್ಲಾನೂ ಅವನಿಗೆ ಹೊರಿಸಿದರು. "ನೀನು ಹೇಳಿದಂತೆ ನಾವು ಕೇಳಿಕೊಂಡಿರ್ತೀವಿ. ನಮಗೆ ಹೊಟ್ಟೆ ತುಂಬಾ ಹಿಟ್ಟು, ಮೈ ಮುಚ್ಚಾಕೆ ಒಂದಿಷ್ಟು ಬಟ್ಟೆ ಕೊಟ್ಬುಡು. ನಮಗೆ ಇನ್ನೇನೂ ಬ್ಯಾಡ. ನಿನ್ನ ಆದಾಯ ಯಚ್ಚ ನಾವೇನೂ ಕೇಳಾಕೆ ಬರೋದಿಲ್ಲ. ಕೂಡಿಸಿದರೂ ನಿಂದೇಯ, ಕಳದರೂ ನಿಂದೇಯ" ಅಂತ ಎಲ್ಲಾ ಅಣ್ಣದೀರೂ ಹೇಳಿದರು. ಹಂಗೇ ಅವನು ಹಾಕಿದ ಗೆರೆ ದಾಟದೇ ಅವರೆಲ್ಲ ನಡೀತಾ ಬಂದರು. ಇವನೂ ಚಂದಾಗಿ ಒಂದೇ ಹದವಾಗಿ ಸಂಸಾರ ನಡಿಸಿಕೊಂಡು ಹೋಯ್ತಾ ಇದ್ದ. ಮನೆ ಬತ್ತಾ ಬತ್ತಾ ಬಲಕಾಯಿಸಿ ಬುಡ್ತು.

ಕುಂಟಣ್ಣ ತನ್ನ ಯವಾರ ಆಯ್ತು, ತಾನಾಯ್ತು ಅಂತ ಇದ್ದು ಬುಟ್ಟ. ಹೊಲದ ಮೊಖಾನೇ ಅವನು ನೋಡಲಿಲ್ಲ. ಒಂದು ದಿನ ಮಳೆ ಯದ್ವಾತದ್ವ ಹೊಡುದು ಬುಡ್ತು. ಊರು ಕೇರೀಲೆಲ್ಲ ನೀರು ಉಳ್ಳಾಡಿ ಬುಡ್ತು. ಹೊತ್ತಾರೆ ಮಸುವಿನಲ್ಲೇ ಅಣ್ಣದೀರು ನಾಕು ಜನಾನೂ ಆರುಕಟ್ಟಿಕೊಂಡು ಹೊಲಕ್ಕೆ ಹೋದರು. ಸ್ವಲ್ಪ ಎಳೆಬಿಸಲು ಬಂದ ಮೇಲೆ ಕುಂಟಣ್ಣನಿಗೆ ಮನಸ್ಸಿಗೆ ಏನೋ ಖುಷಿಯಾಯಿತು. ಕುಂಟಿಗೊಂಡು ಕುಂಟಿಗೊಂಡು ಹೊಲತಾಕೆ ಹೋದ. ಸುತ್ತ ಮುತ್ತ ಎಲ್ಲಾ ಹಾಡಿಕೊಂಡು ಹೊಲ ಉಳ್ತಾ ಇದ್ರು. ಒಂದು ಹೊಲದಲ್ಲಿ ಗರಿಕೆ ಬೇಕಾದೋಟು ಬೆಳದು ನಿಂತಿತ್ತು. ಅದ ನೋಡಿದ ತಕ್ಷಣ ಅವನಿಗೆ ಸೀಮೇಲಿಲ್ಲದ ಸಿಟ್ಟು ಬಂದು ಬುಡ್ತು. "ಬಿಟ್ಟಿ ಅನ್ನ ಉಂಡ್ಕೊಂಡು ಬೀದಿ ಮೇಲೆ ತಿರಿಗಿಕೊಂಡು ಹೊಲ ಪಲ ಏನೂ ಉಳದೆ ಆಳುದ್ದ ಗರಿಕೆ ಬೆಳಸ್ಯವರೆ, ಮೈಗಳ್ಳ ಬಡ್ಡಿ ಹಕ್ಕಳು.

---

* ಹೇಳಿದವರು : ಜವರೇಗೌಡ, ಬಡಗನ ಕೊಪ್ಪಲು, ಕೃಷ್ಣರಾಜನಗರ ತಾಲ್ಲೂಕು.

ಇವರೇನು ಆರಂಬಸ್ಥನಿಗೆ ಹುಟ್ಟಿದ್ದೋರಾ" ಹಂಗೆ ಹಿಂಗೆ ಅಂತ ಬೋದು ಬಂಗೇಳಿಸಿಬುಟ್ಟ. ಅಣ್ಣದೀರಿಗೆ ಅವಮಾನವಾಯಿತು. "ಬಿದ್ದಿದ್ದೋನ್ಗೆ ಬಿಸಿ ಹಿಟ್ ಕೊಟ್ರೆ ಎದ್ದು ಬಂದು ಎದೆಗೆ ಒದ್ನಂತೆ–ಹಂಗಾಯ್ತು ನಾವು ಮಾಡಿಕೊಂಡ ಕಥೆ. ಕುಂಟ, ಕೆಲಸಮಾಡೋಕಾಗೋದಿಲ್ಲ ಅಂತ ಅವನಿಗೆ ಯಜಮಾನಿಕೆ ಕೊಟ್ಟು ನಾವು ಅವನ ಆಳಿನಂಗೆ ಮೈಮುರಿದು ಗೇದ್ರೂವೆ ಹಿಂಗೆ–ಭಿಕ್ಷದೋರಿಗೆ ಹೇಳಿದಂಗೆ ಸಣ್ಣ ಪುಟ್ಟ ಮಾತಾಡ್ತಾನೆ. ಇವನ ಹತ್ರ ಏನು ಹಂಗು ? ನಮ್ಮ ಕೈ ಹಗ್ಗ ಕೊಟ್ಟು ನಾವ್ಯಾಕೆ ಹೆಡೆಮುರಿ ಕಟ್ಟಿಸ್ಕೋಬೇಕು. ಬ್ಯಾಡವೇ ಬ್ಯಾಡ. ಇವನ ಹತ್ರ ದೊಕ್ ಸಲಾಂ ಹೊಡೆಯೋದೇ ಬ್ಯಾಡ. ನಮಗೆ ಬರಬೇಕಾದ್ದು ಕೊಟ್ಟು ಬುಡ್ಲಿ. ನಾವೇನೂ ಅಪ್ಪ ಸತ್ತ ಮೇಲೆ ಹುಟ್ಟಿಲ್ಲ" ಅಂತ ಒಬ್ಬರಿಗೊಬ್ಬರು ಮಾತಾಡಿಕೊಂಡರು. ಕಟ್ಟಿದ ಆರು ಬುಟ್ಟು ಎತ್ತುಗಳೆಲ್ಲಾನೂ ಮೇಯಾಕೆ ಓಡಿಸಿ ಮನೆಗೆ ಬಂದೇ ಬುಟ್ಟರು.

ಸಂದೇಲಿ ಊರಿನ ತಲೆಯಾಳುಗಳೆಲ್ಲಾನೂ ಕರೆದು ನ್ಯಾಯಕ್ಕೆ ಕುಂಡಿರಿಸಿದರು. 'ನಮ್ಮ ಪಾಲು ನಮಗೆ ಕೊಡಿಸಿ' ಅಂದರು. ಬಂದ ಜನ "ತುಂಬಿದ ಮನೆ ಒಡೀಬಾರ್ದು. ಸುತ್ತಲ ಹಳ್ಳೀಗೇ ಕಣ್ಣಾದ ಕುಳ ನೀವು. ಅದಲ್ದೆ ಒಂದೇ ರಕ್ತ ಹಂಚಿಕೊಂಡು ಹುಟ್ಟಿದೋರು. ಏನೋ ಕೆಟ್ಟ ಗಳಿಗೇಲಿ ಒಂದು ಮಾತು ಬತ್ತದೆ, ಹೋಯ್ತದೆ. ಅದೆಲ್ಲಾನೂ ಮರತು ಹಾಲು ಸಕ್ಕರೆ ಹಂಗೆ ಹೊಂದಿಕೊಂಡು ಹೋಗಿ" ಅಂತ ಗಿಣೀಗೆ ಹೇಳೊ ಹಂಗೆ ಹೇಳಿದರು. ಅವರ ಮಾತಿಗೆ ಯಾರೂ ಮುನೀಲೇ ಇಲ್ಲ. 'ನಮಗೆ ಪಾಲು ಬೇಕೇಬೇಕು' ಅಂತ ಪಟ್ಟು ಹಿಡಿದರು. ಕುಂಟಣ್ಣ ಮಾತ್ರ ಪಟ್ ಪಿಟ್ ಅಂತ ಉಸುರು ಹುಯ್ಯದೆ ಕೂತಿದ್ದ. ಸರಿ, ಆಸ್ತೀನೆಲ್ಲಾ ಐದು ಭಾಗ ಮಾಡಿದರು. ಗಂಗಳ ಚೊಂಬು ದನಕರ ಒಡವೆ ವಸ್ತ್ರ ದುಡ್ಡುಕಾಸು ಎಲ್ಲಾನೂ ಹಂಚಿದರು. ಆಗ ಕುಂಟಣ್ಣ ಹೇಳಿದ :

"ನೀವು ಕಂಡಂಗೇ ನಾನು ಕುಂಟ. ನನಗೆ ಜಮೀನು ಸಮೀನು ದನಕರ ನೋಡ್ಕೊಳಕಾದಾತಾ? ಅದೊಂದೂ ನನಗೆ ಬ್ಯಾಡ. ಅದೆಲ್ಲಾನೂ ಅವರೇ ಮಡಗಿಕೊಂಡು, ಅದು ಬಾಳೋವಷ್ಟು ದುಡ್ಡು ಕೊಡಲಿ ನಂಗೆ"

ಸರಿ, ಅವನು ಹೇಳಿದಂಗೇ ಎಲ್ಲಾ ಆಯಿತು. ಅವರವರು ಅವರವರ ಪಾಡು ನೋಡಿಕೊಂಡರು. ಕುಂಟಣ್ಣ ಮನೇಲೇ ಕೂತ, ಮೊದಲೇ ದೊಡ್ಡ ಸಂಸಾರದಲ್ಲಿ ಬೆಳದೋನು, ದುಂದಾಗಿ ಖರ್ಚು ಮಾಡಿದ ಕೈ. ಕೂತುಣ್ಣೋನಿಗೆ ಕುಡಿಕೆ ಹೊನ್ನೂ ಸಾಲದು ಅನ್ನೋ ಹಂಗೆ ಅವನ ಹತ್ರ ಇದ್ದ ದುಡ್ಡೆಲ್ಲಾ



ಕರಗಿಹೋಯ್ತು. ಬರೀ ಕೈ ಆಯ್ತು. ಗೇದುಣ್ಣಾಕೆ ಮೈಲಿ ಶಕ್ತಿಯಿಲ್ಲ. ತಂದು ತಿನ್ನಾಕೆ ಕೈಲಿ ಕಾಸಿಲ್ಲ. ಹಿಂಗಾಯ್ತು ಅವನ ಸ್ಥಿತಿ. ತುಪ್ಪಾ ಅನ್ನ ಹಿಂಡಿಕೊಂಡು ತಿಂತಿದ್ದೋನು ಸೊಪ್ಪು ತಿನ್ನಾಕೂ ಗತಿಯಿಲ್ಲದ ಹಂಗಾದ. ಅವನ ಪಾಡು ನೋಡಲಾರದೆ ಅವನ ಅವ್ವ ಕದ್ದಂಗೆ ಕಾಣದಂಗೆ ತನ್ನ ದೊಡ್ಡ ಮಕ್ಕಳ ಮನೇಲಿ ಅಷ್ಟು ಇಷ್ಟು ತಂದುಕೊಡುತ್ತಿದ್ದಳು. ಹಿಂಗೇ ಅವಳೂ ಒಂದೊರ್ಸ ಸಾಕಿದಳು. ಅವಳ ಬುದ್ಧಿ ನೋಡಿ ಆ ಸೊಸೇರೆಲ್ಲ ಸನ್ನೇಲಿ ಬನ್ನೇಲಿ ಅತ್ತೇನ ಬಯ್ಯಾಕೆ ಶುರುಮಾಡಿದರು. ಅವಳ ಕೈ ಕಾದರು. ಗಂಡದೀರಿಗೆ ದೂರು ಹೇಳಿದರು. ಅವರು ಅವ್ವನ್ನ ತರಾಟೆಗೆ ತಕ್ಕೊಂಡರು, ಅವಳಿಗೆ ತುಂಬಾ ಬೇಜಾರಾಯಿತು. ಎಲ್ಲೂ ಇಲ್ಲದ ದುಃಖವೇ ಬಂದು ಬುಡ್ತು. 'ಹ್ಯಂಗಿದ್ದ ಮಗ ಹ್ಯಂಗಾಗೋದ. ಅವನ ಸಲುವಾಗಿ ತನ್ನ ಮನೇಲಿ ತಾನೇ ಕಳ್ಳಿ ಅಂತ ಅನ್ನಿಸ್ಕೋಬೇಕಾಯಿತಲ್ಲ' ಅಂತ ಕೊರಗಿ ಕೊರಗಿ ಕಡ್ಡಿಯಾದಳು. ಒಂದು ದಿನ ಸೊಸೇರ ಬೋಗಳ ತಡೀಲಾರದೆ ಕುಂಟನ ಹತ್ರಬಂದು,

"ನಿನಗೇನು ಬಂದದೆ ಬರಬಾರದ್ದು, ಒಲೆ ಮುಂದೇ ಕೂತುಕೊಂಡಿದ್ರೆ ಉಣ್ಣಾಕೆ ಉಟ್ಕೋಳಾಕೆ ಎಲ್ಲಾ ಬಂದಾದ? ಹಾಲಿನಂಗೆ ಇದ್ದ ಸಂಸಾರ ನೀರಿನಂಗೆ ಮಾಡಿದೆ. ನಿಮ್ಮಣ್ಣದೀರ ನೋಡಿಯಾದ್ರು ನಿನ್ನ ಜಲ್ಮಕ್ಕೆ ನಾಚಿಕೆ ಆಗೋದಿಲ್ವ? ನನ್ನ ಹೊಟ್ಟೇಲಿ ನೀನು ಏನೂ ಅಂತ ಹುಟ್ಟಿದೆ? ನಿನ್ನ ಹೆರೋ ಬದ್ಲು ಒಂದು ಕರೀಕಲ್ನಾದ್ರೂ ಹೆತ್ತಿದ್ರೆ ಏನೋ ಅನುಕೂಲಾಗೋದು. ನಿನ್ನಿಂದ ನಾನೂ ಸಾಯ್ಬೇಕಾಗ್ಯಾದಲ್ಲಾ" ಅಂತ ಅವನ ಚ್ವಾಟೆಗೆ ತಿವಿದಳು. ಅವನ ಜೀವ ಒಂದು ಹಿಡಿಯಾಗ್ಹೋಯ್ತು. 'ಹಿಂಗೆ ಮಾನ ಮರ್ಯಾದಿ ಎಲ್ಲಾನು ಕಳಕೊಂಡು ಇಲ್ಲಿರೋದಕ್ಕಿಂತಾ ಕಣ್ಣಿಗೆ ಕಾಣದಂಗೆ ಎತ್ತಾಗಾರೂ ಹೋಗಿಬುಡಬೇಕು' ಅಂತ ಮನಸ್ಸಿನಲ್ಲಿ ದಿಟ್ಟಮಾಡಿಕೊಂಡ.

ರಾತ್ರೆಯೆಲ್ಲಾ ಕಣ್ಣಿಗೆ ಕಣ್ಣು ಹತ್ತಿಸಲಿಲ್ಲ. ಮುಂಗೋಳಿ ಕೊಕ್ಕೋ ಅನ್ನೋಗಂಟ್ಲೂ ಆಚೆ ಮಗ್ಗುಲಿಂದ ಈಚೆ ಮಗ್ಗುಲಿಗೆ ಹೊರಳಾಡಿದ. ಆ ಮೇಲೆ ಮೆತ್ತಗೆ ಎದ್ದು ಒಂದು ವಲ್ಲಿ ಹೆಗಲ ಮೇಲೆ ಹಾಕಿಕೊಂಡು, ದೊಣ್ಣೆ ಊರಿಕೊಂಡು ಮಿಸುಕಾಡದಂಗೆ ಯಾರಿಗೂ ಗೊತ್ತಾಗದ ಹಂಗೆ ಮನೇ ಬುಟ್ಟು ಹೊಂಟುಬಿಟ್ಟ.

ರಾತ್ರೆಯೆಲ್ಲಾ ಗಂಡ ನಿದ್ದೆ ಬರದೆ ಅತ್ತಿಂದಿತ್ತ ಇತ್ತಿಂದತ್ತ ಹೊರಳಾಡಿ ಕೋಳಿ ಕೂಗೋಹೊತ್ತಿನಲ್ಲಿ ಎದ್ದು ಹೋದದ್ದನ್ನು ಹೆಂಡತಿ ನೋಡಿಕೊಂಡಿದ್ದಳು. ಅವನು ಮುಂದಕ್ಕೆ ಹೋದಮೇಲೆ ತಾನೂ ಎದ್ದಳು. ತಲೆಬಾಗಿಲಿನ ಹತ್ರ

ಬಂದು ನಿಂತು ನೋಡಿದಳು. ಗಂಡ ಕುಂಟಗಾಲು ಎತ್ತಿಹಾಕುತ್ತಾ ಬಿರಬಿರನೆ ಅತ್ತಿತ್ತ ನೋಡದೆ ಹೋಯ್ತಾ ಇರೋದನ್ನು ಕಂಡಳು. ಅವನು ಮನೆ ಬಿಟ್ಟು ಎಲ್ಲಿಗೋ ಹೋಯ್ತಾ ಅವ್ನೆ ಅಂತ ಅವಳಿಗೆ ತಿಳಿದುಹೋಯಿತು. ತಾನೂ ಹಿಂದುಗುಟ್ಟೇ ಅವನಿಗೆ ಕಾಣದಂಗೆ ದೂರದಲ್ಲಿ ಹೋದಳು.

ಕುಂಟಣ್ಣ ದೆಂಗುತಾ ದೆಂಗುತಾ ನಡೆದ ನಡೆದ, ಸುಸ್ತಾಗೋವರೆಗೂ ನಡೆದ. ನೆಟ್ಟ ಮಧ್ಯಾಹ್ನವಾಯಿತು. ಧರೆ ಕತ್ತಿಗೊಂಡು ಬೇಯುತ್ತಿತ್ತು. ಕಾಲು ಮಡಗಾಕಾಯ್ತಾ ಇರಲಿಲ್ಲ. ಬಾಯಾರಿಕೆ ಬೇರೆ ಸುರುವಾಯಿತು. ಒಂದು ದೊಡ್ಡ ಆಲದಮರದ ಅಂಡೀಲಿ ಕೂತುಕೊಂಡು ಹಿಂತಿರುಗಿ ನೋಡಿದ. ಹೆಂಡತಿ ಕಾಲೆಳಕೊಂಡು ತಲೆ ಮೇಲೆ ಸೆರಗು ಹಾಕ್ಕೊಂಡು ಬತ್ತಾ ಇದ್ದಳು. ಅವಳ ಕಷ್ಟನೋಡಿ ಅವನಿಗೆ ಕಣ್ಣಲ್ಲಿ ನೀರು ತುಂಬಿಕೊತ್ತು. 'ಬಿಸಲ ಮೋರೇನೂ ಕಾಣದೇ ಇದ್ದೋಳು ನನ್ನಿಂದ ಹಿಂಗೆ ಕಷ್ಟಪಡಬೇಕಾಯ್ತಲ್ಲ, ನಾನೆಂಥಾ ಪಾಪಿ' ಅಂದುಕೊಂಡ. ಅವಳು ಬಂದಮೇಲೆ "ದೊಂಬನಕುಟ್ಟೆ ದೊಂಬತಿ ಬಂದಹಂಗೆ ನೀನ್ಯಾಕೆ ನನ್ನ ಹಿಂದಗುಟ್ಟೆ ಬಂದೆ, ತೌರುಮನೆ ಸೇರಿಕೋ, ನಾನಂತೂ ನಿಂಗೆ ಸುಖಕೊಡ್ನಿಲ್ಲ. ಹೋಗು, ನಾ ಬದುಕಿದ್ರೆ ಯಾವತ್ತಾರೂ ಒಂದು ದಿನ ಬಂದು ನಿನ್ನ ಕರಕೊಂಡು, ಹೋಯ್ತೀನಿ" ಅಂತ ಅವಳ ಕೈ ಹಿಡಕೊಂಡ. ಅವಳೂ ಬುಳುಬುಳನೆ ಕಣ್ಣೀರು ಬುಟ್ಟು "ನನಗೆ ನಿಮಗಿಂತ ತೌರು ಹೆಚ್ಚಲ್ಲ. ಸುಖದಲ್ಲಿದ್ದಾಗ ನೀವು, ಕಷ್ಟದಲ್ಲಿದ್ದಾಗ ತೌರು ನನಗೆ ಬೇಕಾ ? ಬದುಕಿದರೆ ಇಬ್ರೂ ಅಂಬಲಿಯೋ ಗಂಜಿಯೋ ಕುಡಕೊಂಡು ಬದುಕಾನ, ಸತ್ರೆ ಇಬ್ರೂ ಒಟ್ಗೇ ಸಾಯನೆ. ನಿಮ್ಮ ದಮ್ಮಯ್ಯ ಅಂತೀನಿ, ನನ್ನ ಹೋಗು ಅನಬ್ಯಾಡಿ" ಅಂತ ಗೋಳಾಡಿದಳು. "ಸರಿ, ನಿನ್ನಿಷ್ಟ" ಅಂದ. ಆಮೇಲೆ "ಏನ್ಮಾಡ್ಲಿ. ಬಾಳಹಸೀತದೆ. ನೆನ್ನೆ ರಾತ್ರಿಂದ್ಲೂ ಸರಿಯಾಗಿ ಉಂಡಿಲ್ಲ" ಅಂದ.

"ನಿಮಗೆ ಗೊತ್ತಿರೋಹಂಗೇ ನಂತಾವು ಇದೊಂದು ಏರ್ದಾಲಿ, ಇವೆರಡು ಕಡಗ–ಇಷ್ಟೇ ಇರೋದು. ಈ ಕಡಗ ಬಿಚ್ಚಿಗೊಳ್ಳಿ. ತಕ್ಕೊಂಡು ಹೋಗಿ ಎಲ್ಯಾರೂ ಮಾರಿ. ಹೊಟ್ಟೆಗೆ ಏನಾದ್ರೂ ತಿನ್ನಾನೆ" ಅಂದಳು.

ಸರಿ, ಕಡಗ ಬಿಚ್ಚಿಕೊಂಡು ಇಬ್ರೂ ಹತ್ತರದಲ್ಲಿ ಕಾಣುತ್ತಿದ್ದ ಒಂದೂರಿಗೆ ಹೊಂಟರು. ಹೋಗುವಾಗ ಮಧ್ಯದಲ್ಲಿ ಒಂದು ಹೊಳೆ ಸಿಕ್ಕಿತು. ಇಬ್ರೂ ಹಾಯ್ಗಡದಲ್ಲಿ ಹೋದರು. ಕುಂಟಣ್ಣನಿಗೆ ಬಾಯಾರಿ ಗಂಟಲೆಲ್ಲಾ ಒಣಗಿ ಹೋಗಿತ್ತು. ನೀರು ಕಂಡದ್ದೇ ತಡ, ಮೂರು ಬೊಗಸೆ ಕುಡಿದು ದುಂಡು ವರಸಿಕೊಂಡು ಮುಂದಕ್ಕೆ ಹೋದ. ಅವನ ಹೆಂಡತಿ ಹಿಂದುಗಡೆ ಹೋಯ್ತಾ



ಇದ್ದಳು. ತಾನೂ ನೀರು ಕುಡೀಬೇಕು ಅಂತ ಬಗ್ಗಿದಾಗ ಮೇಲುಗಡೆಯಿಂದ ಎಂಥದೋ ಬೆಳಕು ನೀರಿನ ಒಪ್ಪರ ಎಲ್ಲಾನೂ ಹಗಲುಮಾಡಿಕೊಂಡು ಬತ್ತಾ ಇತ್ತು. ಅವಳಿಗೆ ಬೋ ಚೋಜಿಗವಾಗಿ ಇದೇನು ನೋಡಾನೆ ಅಂತ ನಿಂತುಕೊಂಡಳು. ಒಂದು ರತ್ನದ ಹರಳು ಮೇಲಿನಿಂದ ಉಳ್ಳಿಕೊಂಡು ಉಳ್ಳಿಕೊಂಡು ಇವಳ ಹತ್ರಕ್ಕೆ ಬತ್ತು. ಅದ ಗಬಕ್ಕನೆ ತಕ್ಕೊಂದು ಎಡಕ್ಕೆ ಚೀಲಕ್ಕೆ ಹಾಕಿಕೊಂಡಳು. ನೀರು ಕುಡಿದು ಮುಂದಕ್ಕೆ ಹೋದಳು. ಅಷ್ಟು ಹೊತ್ತಿಗಾಗಲೇ ಕುಂಟಣ್ಣ ಹೊಳೇ ಆಚೇಲಿದ್ದ ಸುರವಾನ್ನೆ ಮರದ ತೋಪಿನಲ್ಲಿ ಕೂತುಕೊಂಡು ತಳಾರಿಸಿಕೊತ್ತಿದ್ದ. ಇವಳೂ ಹೋಗಿ ಕೂತುಕೊಂಡಳು. "ನೋಡಿ, ಆ ಕಡಗ ಕೊಡಿ ಇಲ್ಲಿ, ಬ್ಯಾರೆ ಒಂದು ಬದುಕು ಕೊಡ್ತೀನಿ" ಅಂದಳು. ಅವನು ಕಡಗ ವಾಪಸ್‌ಕೊಟ್ಟ. ಆಮೇಲೆ ಅವಳು ಚೀಲದಲ್ಲಿದ್ದ ರತ್ನದ ಹರಳು ತಗೆದು ಅವನ ಕೈಗೆ ಕೊಟ್ಟಳು. ಅದೇನು, ರವರವನೆ ಒಂದು ಮರಿಸೂರ್ಯನಂಗೆ ಉರೀತಿತ್ತು. ಇದನ್ನೋಡಿ ಕುಂಟಣ್ಣ ತನ್ನ ಕಣ್ಣು ತಾನೇ ನಂಬಲಿಲ್ಲ. ಬೆಕ್ಕಸಬೆರಗಾಗಿ ಹೆಡ್ತೀಕಡೆ ನೋಡಿ "ಇದೆಲ್ಲಿತ್ತೇ ಇದು?" ಅಂದ.

"ಏ, ನೆನ್ನೆ ಸಂದೇಲಿ ಮನೆ ಕಸ ಗುಡಿಸುವಾಗ ಕದದ ಸಂದೀ ಬಿದ್ದಿತ್ತು. ಅದೆಂಥದೋ ಅಂತ ತಕ್ಕೊಂಡು ಚೀಲಕ್ಕೆ ಹಾಕ್ಕೊಂಡಿದ್ದೆ. ಈಗ ಗ್ಯಪ್ತಿಗೆ ಬತ್ತು. ಇದೆಂಥೇದು?" ಅಂದಳು.

"ಅಯ್ಯೋ ದಡ್ಡೀ, ಇದು ರತ್ನದ ಹರಳು ಕಣೇ. ನೀನು ಮೊದಲೇ ಇದಕೊಟ್ಟಿದ್ರೆ ನಾವು ಇಲ್ಲಿಗಂಟ ಬರೋ ಹಂಗೇ ಇಲ್ಲ. ಇನ್ನು ನಮ್ಮ ಬಡತನ ಕಳೀತು ಬುಡು. ದೇವರು ಭಗವಂತ ಕಣ್‌ಬುಟ್ಟ... ನಡೀ ಹೋಗಾನೆ. ಇದ ಎಲ್ಲಾರೂ ಮಾರಿ ನೆಮ್ಮದಿಯಾಗಿ ಒಂದು ಕಡೆ ಇದ್‌ಬುಡಾನೆ"

ಸರಿ, ಇಬ್ರೂ ಹತ್ರದಲ್ಲೇ ಇದ್ದ ಒಂದು ಪಟ್ಟಣಕ್ಕೆ ಹೋದರು. ಅಲ್ಲಿ ಒಂದು ಚಿನ್ನ ಬೆಳ್ಳಿ ಅಂಗಡಿಗೆ ಆ ಹರಳು ತೋರಿಸಿದ. ಆವಯ್ಯ ನೋಡಿ ಬಾಯ್ಮೇಲೆ ಕಯ್ ಮಡೀಕೊಂಡ. ತಿರುಗಿಸಿ ಮುರುಗಿಸಿ ನೋಡಿದ. "ಇದೆಲ್ಲಿತ್ತಯ್ಯ?" ಅಂದ. "ಯಾಕೆ, ನಮ್ಮನೇಲೇ ಇತ್ತು" ಅಂದ ಕುಂಟಣ್ಣ. ಆ ವರ್ತಕ ಇವನ್ನ ಮ್ಯಾಕೂ ಕೆಳೀಕೂ ನೋಡಿ "ಈ ರತ್ನ ಕೊಂಡ್‌ಕೊಳ್ಳೋ ತಾಕತ್ತು ನಂಗಿಲ್ಲಕನಪ್ಪ. ನನ್ನ ಅಂಗಡಿ ಪಂಗಡಿ ಮನೆ ಮಠ ಎಲ್ಲಾ ಮಾರಿದರೂ ಅದರ ಬೆಲೆ ಆಗೋದಿಲ್ಲ. ಎಲ್ಲಾರೂ ಬ್ಯಾರೆ ಕಡೆ ತೋರಿಸಪ್ಪ" ಅಂದು ಆ ಹರಳು ವಾಪಸ್ ಕೊಟ್ಟ. ಅದ ತಕ್ಕೊಂಡು ಕುಂಟಣ್ಣ ಆ ಪಟ್ಟಣದ ದೊಡ್ಡ ದೊಡ್ಡ ಅಂಗಡಿಯೆಲ್ಲಾನೂ ತಿರುಗಿದ. ಯಾರೂ ಅದಕ್ಕೆ ಬೆಲೆಕಟ್ಟಿ ತಕ್ಕೊಳ್ಳೋ

ಚರ್ಬಿ ತೋರಿಸಲಿಲ್ಲ. ಎಲ್ಲಾ ನೋಡಿ ನೋಡಿ ದೊಡ್ಡದಾಗಿ ಕಣ್‌ಬುಟ್ಟು ಕೈ ಅಳ್ಳಾಡಿಸಿ ಬುಟ್ಟರು. ಅವನಿಗೋ ಹೊಟ್ಟೆ ಹಸಿದು ಸಂಕಟಾಯ್ತಾ ಇತ್ತು. ಮುಂದಕ್ಕೆ ಹೆಜ್ಜೆ ಮಡಗಾಕೆ ಶಕ್ತಿ ಇರಲಿಲ್ಲ. ಹೆಡತೀನ ತೋಪಿನಲ್ಲಿ ಕುಂಡಿರಿಸಿದ. ತಾನು ಹಿಂಗೆ ಅಲ್ಲಿ ಇಲ್ಲಿ ಅಲೆದು ಹಂಗಾಡಿ ಹಿಂಗಾಡಿ ಮಹಾರಾಜನ ಹತ್ರಕ್ಕೆ ತಕ್ಕೊಂಡು ಹೋದ. ಆಳುಗಳು ಆ ರತ್ನ ತಕ್ಕೊಂಡು ಹೋಗಿ ರಾಜನಿಗೆ ತೋರಿಸಿದರು. ಅದ ನೋಡುತ್ತಿದ್ದ ಹಂಗೇ ಅವನಿಗೆ ಬಾಳ ಆಚರ್ಯವಾಯಿತು. "ಇದನ್ನ ಯಾರು ತಂದರು, ಕರ್ಕೊಂಡು ಬನ್ನಿ" ಅಂದ. ಕುಂಟಣ್ಣ ದೆಂಗಿಕೊಂಡು ದೆಂಗಿಕೊಂಡು ಬಂದು ದೊರೇ ಮುಂದೆ ನಿಂತುಕೊಂಡ. "ನಿನಗೆ ಇದೆಲ್ಲಿ ಸಿಕ್ತು?" ಅಂತ ಕೇಳಿದ ದೊರೆ.

"ನಮ್ಮನೇಲೇ ಇತ್ತು ದೇವರು" ಅಂದ ಕುಂಟ.

"ಇದರ ಬೆಲೆ ಏನು ಹೇಳ್ತೀ ?"

"ನಂಗೊತ್ತಿಲ್ಲ. ನೀವೇ ಏಟ್‌ಕೊಡ್ತೀರೋ ಕೊಡಿ ಸ್ವಾಮಿ" ಅಂತ ಕೈ ಮುಗಿದ ಕುಂಟ.

ರಾಜ ಆ ಹರಳನ್ನು ಜೋಬಿಗೆ ಮಡಗಿಕೊಂಡು ಹೇಳಿದ :

"ಇನ್ಮೇಲೆ ನನಗೆ ನೀನೊಬ್ಬ ಹೊಸ ಬಂಟ, ನಿನಗೆ ಸೊಗಸಾದ ಮಾಡಿಮನೆ, ಬೇಕ್ ಬೇಕಾದ ಸಾಮಾನು ಸರಂಜಾಮು ಎಲ್ಲಾನೂ ಕೊಡ್ತೀನಿ. ಆದರೆ ಇನ್ನೊಂದು ಮಾತು. ಈ ಹರಳಿನ ಜೊತೆಗೆ ಇನ್ನೊಂದ್ ಹರಳ ನೀನು ತಂದುಕೊಡಬೇಕು. ತಿಳೀತಾ ? ಇಲ್ದೇ ಇದ್ರೆ ನಿನ್ನ ಸಿಗಿಸಿ ಕೋಟೆ ಬಾಗಿಲಿಗೆ ತೋರಣ ಕಟ್ಟಿಸ್ತೀನಿ." ಕುಂಟಣ್ಣನಿಗೆ ಒಳ್ಳೇ ಪೀಕಲಾಟಕ್ಕೆ ಬತ್ತು. ಕೈ ಕೈ ಹಿಸಿಕಿಕೊಂಡ. "ಅಯ್ಯೋ ಇನ್ನೊಂದು ನಾನೆಲ್ಲಿ ತರಲಿ ಮಾಸ್ವಾಮಿ, ಇದ್ದದ್ದೇ ಇದೊಂದು" ಅಂದ.

"ಅದೆಲ್ಲಾ ನಂಗೊತ್ತಿಲ್ಲ. ನೀನು ಏನು ಸಬೂಬು ಹೇಳಿದರೂ ನಾನು ಕೇಳೋನಲ್ಲ. ನೀನು ಏನಾದರೂ ಮಾಡಿ ತರಲೇ ಬೇಕು. ಇಲ್ದೇ ಇದ್ರೆ ನಾನು ಮೊದ್ಲೇ ಹೇಳಿವ್ನಿ ನೋಡು" ಅಂದ ರಾಜ. ಒಂದಿಷ್ಟು ಸಾಮಾನು ಕೊಡಿಸಿಕೊಟ್ಟ. ಕುಂಟಣ್ಣ ಅದ ತಕ್ಕೊಂದು ತೋಪಿಗೆ ಹೋಗಿ ಹೆಡತೀಗೆ ಕೊಟ್ಟು, ತಾನು ಮಲಗಿಕೊಂಡ. ಅವನಿಗೆ ಬರಬಾರದ ಯೋಚನೆ ಬಂದು ಕವ್‌ಕೊಂಡು ಬುಡ್ತು. ಹೆಡತಿ ಮೂರು ಕಲ್ಲು ಮಡಗಿ ಒಲೆ ಹತ್ತಿಸಿ ಮಡಕೆಪಡಕೇಲಿ ಹ್ಯಂಗೋ ಒಂದಿಷ್ಟು ಅಡಿಗೆ ಮಾಡಿದಳು. ತಿರುಗಿ ತಿರುಗಿ ಸುಸ್ತಾಗಿ ಬೆಪ್ಪಾಗಿ ಮಲಗಿದ್ದ ಗಂಡನ್ನ ಏಳಿಸಿದಳು. "ಅಯ್ಯೋ ನಿನ್ನ ಊಟ ಯಾರಿಗೆ ಬೇಕು ಹೋಗು. ನೀನು ಬೇಕಾದ್ರೆ ಉಣ್ಣು. ನಂಗೆ ಬ್ಯಾಡ" ಅಂದ ಕುಂಟಣ್ಣ



"ಅದ್ಯಾಕ್ ಹಂಗಂತೀರಿ. ನೆನ್ನೆ ದಿನದಿಂದ್ಲೂ ಹೊಟ್ಗೆ ಏನೂ ಇಲ್ಲ, ಸಂಕಟಾಗಕಿಲ್ವ? ಅದೇನು ಹೇಳಿ" ಅಂತ ಅವಳು ಒತ್ತಾಯ ಮಾಡಿದಳು. ಅವಳು ಅಷ್ಟು ಜಿಂಜಿನ್‌ಜಿರಿ ಹತ್ತಿಸಿದ ಮ್ಯಾಲೆ ಕುಂಟಣ್ಣ ರಾಜ ಹೇಳಿದ್ದೆಲ್ಲಾನೂ ಹೇಳಿದ. "ಇಷ್ಟೇ ತಾನೆ, ಇದಕ್ಕೆಲ್ಲಾ ಹಿಂಗೆ ಗಂಡಸು ಯೋಚನೆ ಸಿಂತೆ ಮಾಡ್ತಾ ಕೂತ್ಕೊಳ್ಳೋದಾ? ಏಳಿ, ಊಟ ಮಾಡಿ. ಅದಕ್ ನಾನು ಉಪಾಯ ಹೇಳ್ತೀನಿ" ಅಂದಳು. ಎದ್ದು ಗಬಗಬನೆ ಬಿಕ್ಕಿನ್‌ಬಿರಿಯ ಉಂಡ, ಕಳ್ಳುಮುಚ್ಚೋಗಂಟ. ಆ ಮೇಲೆ ಹೆಡತಿ ಹೇಳಿದಳು :

"ಹೋಗಿ ರಾಜನ ಹತ್ರ ಒಂದು ತಿಂಗಳು ವಾಯಿದೆ ತಕ್ಕೊಂಡು ಬನ್ನಿ."

ಅವನು ಹೋಗಿ ಒಂದು ತಿಂಗಳ ವಾಯಿದೆ ಕೇಳಿದ. ರಾಜ 'ಆಗಲಿ' ಅಂದ. ಅವನಿಗೆ ಒಳ್ಳೇ ಭರ್ಜರಿಯಾದ ಒಂದು ಮಾಡಿ ಮನೆ, ಬೇಕುಬೇಕಾದ ಸಾಮಾನು ಸರಂಜಾಮು ಎಲ್ಲಾನೂ ಕೊಟ್ಟ. ಕುಂಟಣ್ಣ ಹೆಡತೀ ಕರಕೊಂಡು ಬಂದು ಆ ಮನೇಲಿ ಇರಿಸಿದ. ಆ ಮೇಲೆ ಹೆಡತಿ ಹೇಳಿದಳು :

"ನಾವು ಬರುವಾಗ ದಾಟಿ ಬಂದ್ವಲ್ಲಾ ಆ ಹೊಳೇತಾಕೆ ಹೋಗಿ ಅದರ ನಡೂ ಮಧ್ಯದಲ್ಲಿ ಮೇಲಕ್ ಮುನ್ನಾಗಿ ನೋಡ್ತಾ ನಿಂತ್‌ಕೊಳ್ಳಿ. ರತ್ನ ಉಳ್ಳುಳ್ಳಿ ಬತ್ತದೆ"

## ೨

ಕುಂಟಣ್ಣ ಹೊಳೆ ನಡೂ ಮಧ್ಯಕ್ಕೆ ಹಾದು ಹೋಗಿ ಮ್ಯಾಕ್ ನೋಡ್ತಾ ನಿಂತ್‌ಕೊಂಡ, ಒಂದೀಟ್ ಹೊತ್ತಾದ ಮೇಲೆ ಹೊಳೇನೆ ಭಾಗಮಾಡಿದಂಗೆ ಹಗಲಾಗಿ ರತ್ನದ ಹರಳು ಉಳ್ಳುಳ್ಳಿಕೊಂಡು ಬತ್ತು. ಆದ ಗಬಕ್ ಅಂತ ಕೈಲಿ ಹಿಡಕೊಂಡ. ದಡಕ್ಕೆ ಬಂದ. ಆ ಮೇಲೆ ತಟಕ್ಕನೆ ಅವನ ತಲೇಲಿ ಒಂದು ಯೋಚನೆ ಹೊಳೀತು. 'ಈ ರತ್ನ ಎಲ್ಲಿ ಹುಟ್ಟದೆ? ಯಾಕ್ ಹಿಂಗೆ ಉಳ್ಳಿಕೊಂಡು ಬತ್ತದೆ? ಇದರ ಗುಟ್ಟ ಏನಾರು ಮಾಡಿ ಕಂಡು ಹಿಡೀಲೇ ಬೇಕು.' ಅಂದುಕೊಂಡು ಹೊಳೇ ಮಗ್ಗುಲಲ್ಲೇ ಉದ್ದಕ್ಕೂ ಹೋದ. ಹೋದ ಹೋದ ಹೋದ, ಬೇಕಾದೋಟು ದೂರಹೋದ. ಅಲ್ಲೊಂದು ಪಟ್ಟಣ. ಅಲ್ಲೊಂದು ರಾಕ್ಷಸ ಇತ್ತು. ಅದು ಊರೆಲ್ಲಾನೂ ತಿಂದುಕೊಂಡು ಒಂದೇ ಇತ್ತು. ಆ ಊರಲ್ಲಿ ಒಂದು ಕೊಣ. ಅಲ್ಲಿಗೆ ಅಚ್ಚಗನ್ನೇರು ದೇವಗನ್ನೇರು ದಿನಾ ನಿತ್ಯ ಮೀಯಕ್ಕೆ ಬತ್ತಾ ಇದ್ದರು. ಒಂದು ದಿನ 'ರತ್ನಾವತಿ' ಅನ್ನೋ ಕಿರಿ ಹುಡುಗಿ ರಾಕ್ಷಸನ ಕೈಗೆ ಸಿಕ್ಕಿಹಾಕ್ಕೊಂಡು ಬುಡ್ತು. ಉಳಿದೋರೆಲ್ಲ ದೇವಲೋಕಕ್ಕೆ ಹಾರಿಹೊಂಟೋಗ್ ಬುಟ್ರು. ರಾಕ್ಷಸ ಅವಳಿಗೆ "ನಾನೇ ಗಂಡ ನೀನೇ ಹೆಡ್ತಿ" ಅಂದ. ಅವಳು

ಒಪ್ಪಲಿಲ್ಲ. ಅವನು "ನಿನ್ನ ತಿಂದ್ ಹಾಕ್‌ಬುಡ್ತೀನಿ" ಅಂತ ಹೆದರಿಸಿದ. ಅವಳು ಬುದ್ಧಿವಂತೆ. "ಹಂಗೇ ಆಗಲಿ. ಆದರೆ ಒಂದು ತಿಂಗಳ ಗಂಟ ನಂದೊಂದು ರತ ಅದೆ. ಅದು ತೀರಿದ ಮ್ಯಾಕೆ ನಿನ್ನ ಮದುವೆ ಆಯ್ತೀನಿ" ಅಂದಳು. ಅವನು ಒಪ್ಪಿಕೊಂಡ. ಆ ಮೇಲೆ "ನೀನೇನೋ ಅಲ್ಲಿ ಇಲ್ಲಿ ಹೊಂಟ್‌ಹೋಯ್ತೀಯೆ. ನಾನೊಬ್ಬಳೇ ಹ್ಯಂಗಿರಲಿ ?" ಅಂತ ಕೇಳಿದಳು. ಅವನು ದಿನಾ ಬೆಳಗಿನ ಹೊತ್ತು ಅವಾರ ತರಾಕೆ ಹೋಗುವಾಗ ಅವಳ ತಲೆ ಕತ್ತರಿಸುತಿದ್ದ. ತಲೆ ತಗದು ಮ್ಯಾಕೆ ನೇತ್ಹಾಕಿ, ಮುಂಡ ತಗದು ಬಚ್ಚಲ ಬಾಯಿಗೆ ನೂಕುತ್ತಿದ್ದ. ಆ ಮುಂಡದ ರಕ್ತ ತೊಟ್ಟಿಕ್ಕಿ ಉಳ್ಳುಳ್ಳಿ ಉಂಡೆಯಾಗಿ ಹೊಳೆ ಸೇರುತ್ತಿತ್ತು. ಆ ಹೊಳೇ ನೀರು ಸೋಕಿದ ತಕ್ಷಣ ಅದು ರತ್ನದ ಹರಳಾಗುತ್ತಿತ್ತು.

ಕುಂಟ ಆ ಕೋಣದ ಹತ್ರ ಇದ್ದ ತರಗಿನ ರಾಶಿಯಲ್ಲಿ ಅವಿತು ಕೊಂಡು ದೇವಗನ್ನೇರು ಮೀಯಕ್ಕೆ ಬಂದು ಆಡುತ್ತಿದ್ದ ಈ ಮಾತ್ನೆಲ್ಲಾ ಕೇಳಿಕೊಂಡ. ಅವನ ಬುದ್ಧಿ ಚುರುಕಾಯಿತು. ಏನೇನೋ ಯೋಚನೆ ಮಾಡಿಕೊಂಡ. ಅವತ್ತು ಹೊತ್ತಾರೆ ರಾಕ್ಷಸ ಅವಾರ ತರಾಕೆ ಹೋಗೋ ಸಮಯ ಕಾದುಕೂತುಕೊಂಡ. ಅದು ಹೋದಮೇಲೆ ಪಟ್ಟಣದ ವಳಕ್ಕೆ ಹೋದ. ಇವನ್ನ ನೋಡಿ ರತ್ನಾವತಿಯ ತಲೆ ಕಿಲಕಿಲನೆ ನಗ್ತು. ಕುಂಟಣ್ಣ "ಯಾಕ್ ನಗ್ತೀಯಾ?" ಅಂದ.

"ಅಲ್ಲಾ ನೀನ್ಯಾಕೆ ಬಂದೆ ಇಲ್ಲಿಗೆ ? ನೀನ್ ನೋಡಿದರೆ ಕುಂಟ. ರಾಕ್ಷಸ ಬಂದ್ರೆ ನಿನ್ನ ಬುಟ್ಟಾತಾ ? ನೀನು ಅದರ ಒಂದು ಹಲ್ಲಿಗೆ ಸಾಲೋದಿಲ್ಲ. ಪಾಪ, ಅನ್ಯಾಯವಾಗಿ ಯಾಕ್ ಸಾಯ್ತೀಯೆ, ಬಿರ ಬಿರನೆ ಹೋಗಿಬಿಡು" ಅಂತು ಆ ತಲೆ.

"ನಾನು ಸುಮ್ ಸುಮ್ನೆ ಹೋಗಾಕೆ ಅಂತ ಬಂದಿಲ್ಲ. ನಿನ್ನ ಏನಾದರೂ ಮಾಡಿ ಬುಡಿಸಬೇಕೂ ಅಂತ ಬಂದಿವ್ನಿ" ಅಂದ ಕುಂಟಣ್ಣ. ಅದು ಇನ್ನೊಂದು ಸತಿ ಜೋರಾಗಿ ನಗಾಡಿತು.

"ಅಯ್ಯೋ ಪಾಪ, ಅದು ನಿನ್ನ ಕೈಲಿ ಆಗೋ ಕೆಲಸವಾ? ಅದು ಆಗೋದಲ್ಲ ಹೋಗೋದಲ್ಲ ಸುಮ್ನೆ ಹೋಗು, ಬರೀ ಚಪಲ ಯಾಕ್ ಮಾಡ್ತೀಯಾ?"

"ಇಲ್ಲ, ನಾನೂ ಸತ್ರೂ ಪರವಾಯಿಲ್ಲ. ಒಂದು ಕೈ ನೋಡೇ ಬುಡ್ತೀನಿ. ನೀನು ನಾನು ಹೇಳಿದಂಗೆ ಕೇಳು."

"ಅದೇನು ಹೇಳಿ"

"ರಾಕ್ಷಸ ಬಂದ ಮೇಲೆ 'ನೀನು ನನ್ನ ಹಿಂಗ್ ಮಾಡಿ ಹೊಂಟ್ ಹೋಯ್ತೀಯಾ. ನೀನು ಯಾರ ಕೈಗಾದರೂ ಸಿಕ್ಕಿದರೆ ನನ್ನ ಗತಿ ಏನು" ಅಂತ ಕೇಳು. ಆಮ್ಯಾಲೆ ನಾನು ಉಪಾಯ ಹೇಳ್ತೀನಿ."

ಅದು 'ಆಗಲಿ' ಅಂತ ಒಪ್ಪಿಕೊಂಡಿತು. ಅವತ್ತು ಸಂದೇಲಿ ರಾಕ್ಷಸ ಬತ್ತು. ಮುಂಡ ರುಂಡ ಸೇರಿಸಿ ಜೀವಮಾಡ್ತು. ಅವಳು ಕಿಲಕಿಲನೆ ನಗ್ತಾ "ಅಲ್ಲ, ನನ್ನ ಅದು ಹ್ಯಂಗೆ ಜೀವಮಾಡ್ತೀ" ಅಂದಳು.

"ಏ ಅದೇನ್ ಕಷ್ಟ? ನಿನ್ನ ರುಂಡ ಮುಂಡ ಸೇರಿಸಿ ಮೂಲೇಲಿ ಇರೋ ನವಿಲುಗರಿ ಕಂತೆ ತಂದು ನೀವಾಳಿಸಿದರೆ ಜೀವ ಬತ್ತದೆ. ಅಷ್ಟೇಯ" ಅಂದ. ಅವಳು ಮತ್ತೆ ಮುದ್ದುಮುದ್ದಾಗಿ ನಗ್ತಾ,

"ಅದು ಸರಿ, ನೀನು ನನ್ನ ಹಿಂಗ್ ಮಾಡಿಬಿಟ್ಟು ಹೋಯ್ತೀಯಲ್ಲ. ಅಲ್ಲಿ ಏನಾದ್ರೂ ನೀನು ಯಾರ ಕೈಗಾದ್ರೂ ಸಿಕ್ಕಿಹಾಕ್ಕೊಂಡ್ರೆ ನನ್ನ ಗತಿಯೇನು?" ಅಂದಳು.

ಎಂದೂ ಇಲ್ಲದ ಅವಳ ನಗು ಕಂಡು ಅವನಿಗೆ ಸ್ವರ್ಗಕ್ಕೆ ಮೂರೇ ಗೇಣು ಉಳಿದಿತ್ತು. ಅವನು ಮೀಸೆ ನೀವ್ತಾ ಹೇಳಿದ :

"ನನ್ನ ಸಾಯಿಸೋರು ಈ ಪರ್ಪಂಚದಲ್ಲೇ ಯಾರೂ ಇಲ್ಲ. ನನ್ನ ಜೀವ ಇರೋ ಜಾಗ ಕಂಡು ಹಿಡಿಯಾಕೆ ಹರಿ ಹರ ಬ್ರಹ್ಮನ ಕೈಲೂ ಆಗೋದಿಲ್ಲ."

"ಹಂಗಾರೆ ನಿನ್ನ ಜೀವ ಎಲ್ಯದೆ ?" ಅಂತ ಅವಳು ಪೂಸಿ ಮಾಡಿದಳು. ಅವಳ ಮಾತಿಗೆ ಅವನು ಮರುಳಾಗಿಬುಟ್ಟ.

"ನೀವು ಮೀಯಾಕೆ ಬತ್ತಿದ್ರ್ಯಲ್ಲ ಅಕ್ಕತಂಗೇರ ಕೊಣ, ಅದರೊಳಗೆ ಹನ್ನೆರಡಾಳುದ್ದ ಬಾವಿ ಅದೆ. ಅದರೊಳಗೆ ಒಂದು ಗೆಂಡೆ ಮೀನದೆ. ಅದರ ಹೊಟ್ಟೇವಳಗೆ ಒಂದು ಮುಳ್ಳುಪಂಜರ ಅದೆ. ಆ ಪಂಜರದಲ್ಲಿ ಒಂದು ಗಿಣಿ ಅದೆ. ಅದೇ ನನ್ನ ಜೀವಾಳ" ಅಂದ.

"ಸರಿಬುಡು ಹಂಗಾದ್ರೆ, ನಿರ್ಚಿಂತೆ ಆಯಿತು. ನಿನ್ನ ಜೀವ ತಗಿಯಾಕೆ ಯಾವೋನಪ್ಪನ ಕೈಲೂ ಆಗೋದಿಲ್ಲ" ಅಂತ ಅವಳು ನಗಾಡಿದಳು.

ಆವತ್ತು ಹೊತ್ತಾರೆಲೇ ರಾಕ್ಷಸ ಅವಾರ ತರಾಕೆ ಹೊಂಟ್ ಹೋಯ್ತು. ಕುಂಟಣ್ಣ ಮೆತ್ತಗೆ ಬಂದ. "ನಾನು ಹೇಳಿದ್ದೆಲ್ಲಾನೂ ಕೇಳಿದ್ಯಾ?" ಅಂದ.

"ಹೂಂ. ಕೇಳ್ದೆ. ಅವ್ನು ಹೇಳಿದ್ದು ನೋಡಿದರೆ ನಿಂಗೆ ನನ್ನ ಬುಡಸಾಕಾಗೋದಿಲ್ಲ. ನನ್ನ ಹಣೇಬರ ಇದ್ದಂಗಾಯ್ತದೆ. ನನ್ನ ಸಲವಾಗಿ ನೀನ್‌ಯಾಕೆ ಸಾಯ್ತಿ. ಬ್ಯಾಡ ಹೋಗು" ಅಂದಳು.

"ಇಲ್ಲ, ನನ್ನ ಪ್ರಾಣ ಹೋದ್ರೂ ಪರವಾಯಿಲ್ಲ. ನೀನು ಹೇಳು. ನಾನು ಮಾಡ್ತೀನಿ" ಅಂದ.

ಅವಳು ತನ್ನ ಜೀವ ಕೂಡಿಸೋ ಉಪಾಯ ಹೇಳಿದಳು. ಬಚ್ಚಲ ಕಂಡೀಲಿದ್ದ ಮುಂಡ ತಗದು ರುಂಡ ಸೇರಿಸಿದ. ಮೂಲೇಲಿದ್ದ ನವಿಲುಗರಿ ಕಂತೆ ತಂದು ನೀವಾಳಿಸಿದ. ಅವಳು ಜೀವ ಬಂದು ಎದ್ದುನಿಂತು ಕೊಂಡಳು. ಆ ಮೇಲೆ ರಾಕ್ಷಸನ ಜೀವಾಳದ ಗುಟ್ಟು ಹೇಳಿದಳು. ಇಬ್ಬರೂ ಕೊಣದ ಹತ್ರ ಹೋದರು. ಕೊಣದಲ್ಲಿ ನೀರು ಉಕ್ಕಂದವಾಗಿ ಇತ್ತು.

"ಈ ಗಂಗೆ ಭಾಗ ಮಾಡಾಕೆ ನನಗೆ ಆಗೋದಿಲ್ಲ. ನೀನೇ ಏನಾರೂ ಮಾಡು" ಅಂದ ಕುಂಟ.

"ಆಗಲಿ. ನಾನೇ ಗಂಗೆ ಭಾಗಮಾಡಿಸ್ತೀನಿ" ಅಂತ ಹೇಳಿ ಕೊಣದ ಕಲ್ಲಿನ ಮೇಲೆ ನಿಂತುಕೊಂಡು ಮಂತ್ರ ಹಾಕಿದಳು. ನೀರು ಎರಡು ಭಾಗವಾಯಿತು. ಗೆಂಡೆ ಮೀನು ವಳಗೆ ವದ್ದಾಡಿತು. ಕುಂಟ ಹಿಂದೆಮುಂದೆ ನೋಡದೆ ಅದರೊಳಕ್ಕೆ ಧುಮುಕಿ ಮೀನು ಹಿಡಕೊಂಡ. ರತ್ನಾವತಿ ಮೇಲೆ ನಿಂತುಕೊಂಡು ಮತ್ತೆ ಮಂತ್ರಹಾಕಿದಳು. ಗೆಂಡೆಮೀನು ಸಹಿತವಾಗಿ ಕುಂಟನ್ನ ಮೇಲಕ್ಕೆ ತಂದಳು. ಅವನು ಮೀನು ಹಿಡಕೊಂಡು ದಡಕ್ಕೆ ಬಂದ, ಅದರ ಹೊಟ್ಟೆ ಸೀಳಿ ಮುಳ್ಳುಪಂಜರ ತಕ್ಕೊಂಡು. ಅಷ್ಟು ಹೊತ್ತಿಗೆ ಆಗಲೆ ರಾಕ್ಷಸನಿಗೆ ಸಳಿಜರ ಎಲ್ಲಾ ಬಂದ್‌ಬುಡ್ತು. ಅದು ದುಳ್ಳಾಡಿಕೊಂಡು ಹ್ಯಂಗೋ ಬತ್ತಾ ಇತ್ತು. ಅದ ನೋಡಿದ ತಕ್ಷಣ ಕುಂಟ ಗಿಣಿಯ ಕಾಲು ಮುರಿದ. ರಾಕ್ಷಸನ ಕಾಲು ಮುರಿದು ಹೋಯಿತು. ಅದು ದುಬುಕ್ ಅಂತ ಭೂಮೀಗೆ ಬಿದ್ದು ಉಳ್ಳಿಕೊಂಡು ಉಳ್ಳಿಕೊಂಡು ಹೆಬ್ಬಾಗಿಲಗಂಟ ಬಂತು. ಕುಂಟ ಗಿಣಿಯ ಕತ್ತು ನುಲಿಚಿದ. ರಾಕ್ಷಸ ಪಟ್ಟಣವೆಲ್ಲಾ ಎದ್ದು ಹಾರೋಹಂಗೆ ಒಂದು ಸತಿ "ಅಯ್ಯೋ" ಅಂತ ಕೂಗಿ ಪ್ರಾಣಬುಡ್ತು.

ರತ್ನಾವತಿ ಮತ್ತೆ ಕುಂಟ ಇಬ್ರೂ ಪಟ್ಟಣಾನೆಲ್ಲ ಸುದ್ದ ಮಾಡಿದರು. ಆ ಮೇಲೆ ಕುಂಟ "ಈಪಟು ನಾನು ಹೋಯ್ತೀನಿ. ನಾನು ಬಂದ ಕೆಲಸ ಆಯ್ತು. ನೀನು ಸುಖವಾಗಿ ನಿನ್ನ ಅಕ್ಕತಂಗೇರ್ನ ಸೇರಿ ಬದೀಕೋ" ಅಂದ.

"ಇಲ್ಲ, ಇಲ್ಲ ಮತ್ತೆ ನಾನು ನಮ್ಮ ಲೋಕಕ್ಕೆ ಹೋಗೋಹಂಗಿಲ್ಲ. ನೀನು ನನ್ನ ಪ್ರಾಣ ಉಳ್ಸಿದ್ದೀಯಾ, ರಾಕ್ಷಸನ ಕೈಯಿಂದ ಬುಡ್ಸಿದ್ದೀಯಾ. ಆದ್ರಿಂದ ನೀನೇ ನನ್ನ ಗಂಡ" ಅಂದಳು ರತ್ನಾವತಿ. "ನೀನೇ ಒಪ್ಪಿದಮೇಲೆ ನಂಗೇನು? ಆಗಲಿ ಬಾ" ಅಂದ ಕುಂಟ. ಇಬ್ಬರೂ ನಡಕೊಂಡೇ ಹಿರೀ ಹೆಡತಿ ಇದ್ದ ಪಟ್ಟಣಕ್ಕೆ ಬಂದರು.

೩

ಕುಂಟಣ್ಣ ಮನೇಬಿಟ್ಟು ಅಲ್ಲಿಗೆ ಸರಿಯಾಗಿ ಒಂದು ತಿಂಗಳಾಗಿತ್ತು. ಅವನ



ರೂಪೆಲ್ಲಾ ಮಾಸಿ ಹೋಗಿತ್ತು. ಗಡ್ಡಮೀಸೆ ಒಂದು ಗೇಣುದ್ದ ಬೆಳೆದಿದ್ದವು. ಅವತ್ತು ಹೊತ್ತಾರೆ ಎದ್ದು ಚೌರಮಾಡಿಸಾಕೆ ಅಂತ ಅರಮನೇ ಕೆಲಸಿ ಕರೆಸಿದ. ಚೌರ ಎಲ್ಲಾ ಆಯಿತು. "ಏಟು ದುಡ್ಡು ಕೊಡಬೇಕು?" ಅಂತ ಕೇಳಿದ.

"ಏ, ಏನು ಮಹಾ ಲಕ್ಷಾಂತರವ. ಕೊಡಿ ಬುದ್ಧಿ ನಿಮಗೆ ತಿಳಿದದ್ದ" ಅಂದ ಕೆಲಸಿಗ.

"ರತ್ನಾ, ಇವನಿಗೇನಾದರೂ ತಂದುಕೊಡು" ಅಂತ ಕೂತ ಜಾಗದಿಂದಲೇ ಕೂಗಿ ಹೇಳಿದ. ರತ್ನಾವತಿ ಒಂದು ಮೊರದಲ್ಲಿ ರತ್ನ ತುಂಬಿಕೊಂಡು ತಕ್ಕೊಂಡು ಈಚೆಗೆ ಬಂದಳು. ಅವಳ ಮೂಖ ನೋಡಿದೇಟಿಗೇ ಚೌರದವನು ಮೂರ್ಛೆ ಹೋಗಿ ಬಿದ್ದು ಬುಟ್ಟ. ಅವನ ಮೊಖಕ್ಕೆ ನೀರುಗೀರು ಚಿಮುಕಿಸಿದರು. ಆಗ ಅವನು ದಡಕ್ಕನೆ ಎದ್ದು ಬೀಳೋದ್ನ ಕಾಣದೆ ಒಂದೇ ಉಸಿರಿಗೆ ಓಡಿದ.

ಅರಮನೇಲಿ ರಾಜ ಕೂತಿದ್ದ. ಅವನ ಹತ್ರಕ್ಕೆ ಈ ಕೆಲಸಿಗ ಓಡಿಹೋಗಿ ಏದುಸುರು ಬುಡ್ತಾ ನಿಂತುಕೊಂಡ. "ಏನು ಏನಾಯ್ತು ?" ಅಂತ ಕೇಳಿದ ರಾಜ.

"ಅಯ್ಯೋ ಏನ್ ಹೇಳ್ಲಿ ಬುದ್ದೀ. ನಿಮ್ಮ ಹೊಸ ಬಂಟವ್ನಲ್ಲಾ, ಅವನು ಒಂದ್ ಹೆಣ್‌ತಂದವ್ನೆ. ಅಯ್ಯೋ ಅಯ್ಯೋ ಎರಡು ಕಣ್ಣಿಂದ ನೋಡಾಕಾಗೋದಿಲ್ಲ. ಸೂರಚಂದ್ರನಂಗೆ ಹುಡುಗಿ ಉರೀತಾ ಅವಳೆ. ನಾನು ನೋಡಿದ ತಕ್ಷಣ ಕಣ್ಣಿಗೆ ಕತ್ತಲೆ ಕವಕೊಂಡು ಗ್ಯಾನತಪ್ಪಿ ಬಿದ್ದು ಬುಟ್ಟೆ. ಅದು ನಿಮಗೆ ತಕ್ಕಾದ ಹೆಣ್ಣು ಬುದ್ದೀ" ಅಂದ.

ರಾಜನಿಗೆ ಬಾಳ ಸೋಜಿಗವಾಯಿತು. 'ಏನಾರೂ ಮಾಡಿ ಆ ಹೆಣ್ಣ ತಾನು ಹೊಡಕೊಬೇಕು' ಅಂತ ಲೆಕ್ಕಾಚಾರ ಹಾಕಿದ. "ಸರಿ. ನೀನು ಹೋಗು" ಅಂತ ಅವನ್ನ ಕಳಿಸಿದ.

ಕುಂಟ ಮೀದು ಮಡಿ ಉಟ್ಕೊಂಡು ಹರಳು ತಕ್ಕೊಂಡು ಅರಮನೆಗೆ ಬಂದ. ಅವನು ಬತ್ತಿದ್ದ ಹಂಗೇ ರಾಜ ಎದ್ದು ಅವನ ಕೊಳ್ಳು ತಬ್ಬಿಕೊಂಡ. ಅವನ ಕಷ್ಟಸುಖ ಇಚಾರಿಸಿದ. ರಾಜನ ಉಪಚಾರ ನೋಡಿ ಕುಂಟನಿಗೆ ತಬ್ಬಿಬ್ಬಾಯಿತು. ಹರಳು ತಗದು ರಾಜನಿಗೆ ಕೊಟ್ಟ. ಅದನ್ನ ನೋಡಿದ ತಕ್ಷಣ ಅವನು ಬೇಕಾದೋಟು ಹೊಗಳಿದ.

"ಹೊಸ ಬಂಟ ಅಂದ್ರೆ ನೀನೇ ಸರಿ. ನನಗೆ ತಕ್ಕಾದೊನು ನೀನು. ನೀನು ಬಂದದ್ದು ನನಗೆ ಹತ್ತು ಭುಜ ಬಂದಂಗಾಯಿತು. ನೀನು ಏನು ಬೇಕಾದ್ರೂ ಕೇಳು ಕೊಡ್ತೀನಿ. ಆದ್ರೆ ನಿನ್ನಿಂದ ಇನ್ನೊಂದ್ ಕೆಲಸ ಆಗಬೇಕಲ್ಲಾ" ಅಂದ.

“ಏನಾಗಬೇಕು ಹೇಳಿ ಸ್ವಾಮಿ. ನನ್ನ ಕೈಲಿ ಆಗೋ ಕೆಲಸಾದ್ರೆ ಮಾಡ್ತೀನಿ”

“ನಿನ್ನ ಕೈಲಿ ಆಗದೆ ಏನು ? ನಿನ್ನ ಕೈಲಿ ಆಗದೇ ಇದ್ರೆ ಇನ್ಯಾರ ಕೈಲೂ ಆಗೋದಿಲ್ಲ”

“ಅದೇನ್ ಹೇಳಿ”

“ನಮ್ಮನೇಲೆಲ್ಲ ಕುಸುಮೆ ಅನ್ನ ಉಣಬೇಕು ಅಂತ ಬಾಳ ದಿನದಿಂದ ಗೋಳುಹುಯ್ತಾ ಅವ್ರೆ. ಅವರ ಬವಕೆ ನೀನು ಏನಾರೂ ಮಾಡಿ ತೀರಿಸ್ಬೇಕು”

“ಅಯ್ಯೋ ಸ್ವಾಮಿ ಕುಸುಮೆ ಅಂದ್ರೇನು ಅನ್ನೋದೇ ನಂಗೆ ಗೊತ್ತಿಲ್ಲ. ಅದೆಲ್ಯದೆ ಅನ್ನೋದೂ ನಂಗೆ ಗೊತ್ತಿಲ್ಲ. ನಾನು ಹ್ಯಂಗೆ ತರಲಿ. ಈ ಬಡವನ ಮೇಲೆ ಕ್ವಾಪ ಮಾಡಬ್ಯಾಡಿ” ಅಂತ ಕೈಮುಗಿದ ಕುಂಟ.

“ನೋಡು, ನೀನು ಏನು ಹೇಳಿದ್ರೂ ನಾನು ಕೇಳೋದಿಲ್ಲ. ಆ ಕುಸುಮೆ ಅನ್ನೋದು ನಾಗರಾಜನ ಪಟ್ಟಣದಲ್ಲಿ ಅದಂತೆ. ಈ ಭೂಲೋಕದಲ್ಲಿ ಎಲ್ಲೂ ಅದು ಸಿಕ್ಕೋದಿಲ್ಲ. ನೀನು ಅದ ತಕ್ಕೊಂಡು ಬಂದ್ರೆ ಸರಿ. ಇಲ್ಲದೇ ಇದ್ರೆ ನಿನ್ನ ಸಿಗಿಸಿ ಕೋಟೆ ಬಾಗಿಲಿಗೆ ತೋರಣ ಕಟ್ಟಿಸ್ತೀನಿ” ಅಂತ ರಾಜ ಜಬರುದಸ್ತು ಮಾಡಿದ.

ಇನ್ನೇನೂ ದಾರಿಯಿಲ್ಲದೆ “ಆಗಲಿ” ಅಂತ ಒಪ್ಪಿಕೊಂಡು ಕುಂಟ ಮನೆಗೆ ಹಿಂದಿರುಗಿದ. ಯಾರು ಮಾತಾಡಿಸಿದರೂ ಮಾತಾಡಲಿಲ್ಲ. ಮುಸುಗು ಹಾಕ್ಕೊಂಡು ಮಂಚದ ಮೇಲೆ ಮಲಗಿಬುಟ್ಟ. ರತ್ನಾವಳಿ ಬಂದು “ಊಟ ಮಾಡ್ಬನ್ನಿ” ಅಂದಳು. “ನಂಗೆ ಬ್ಯಾಡ” ಅಂದ. “ನಿಮಗೆ ಏನು ಕಷ್ಟ ಬಂದಿದ್ರೂ ನಾನು ಪರಿಹಾರ ಮಾಡ್ತೀನಿ. ನೀವೇನೂ ಹೆದರಿಕೋ ಬ್ಯಾಡಿ. ಎದ್ದು ಊಟ ಮಾಡಿ” ಅಂದಳು.

ಊಟ ಆಯಿತು. ಎಲೆ ಅಡಿಕೆ ಹಾಕ್ಕೊಳ್ತಾ ಕುಂಟ ಮಂಚದ ಮೇಲೆ ಕೂತುಗೊಂಡ. ರತ್ನಾವಳಿ ಬಂದು ಎದುರಿಗೆ ಕೂತುಗೊಂಡು “ಹೇಳಿ. ಏನು ನಿಮ್ಮ ಕಷ್ಟ” ಅಂದಳು. ಕುಂಟ ರಾಜ ಹೇಳಿದ್ದೆಲ್ಲಾನೂ ಚಾಚೂ ತಪ್ಪದಂಗೆ ಹೇಳಿದ. “ಇಷ್ಟೇ ತಾನೇ ? ನೀವೇನೂ ಹೆದರ ಬ್ಯಾಡಿ” ಅಂದಳು.

“ಏನು ಮಾಡ್ಬೇಕು, ಹೇಳು ಮತ್ತೆ”

“ನಾನು ಐದು ಮಂತ್ರದ ಗುಳಿಗೆ ಕೊಡ್ತೀನಿ. ಒಂದು ಗುಳಿಗೆ ನೀವು ಇಲ್ಲಿ ನುಂಗಿ ಬಿಡಿ, ಗರುಡಾಳ ಪಕ್ಷಿ ಆಗಿ ಬುಡ್ತೀರಿ. ಹಾರಿಕೊಂಡು ಹಾರಿಕೊಂಡು ಏಳು ಸಮುದ್ರದಿಂದ ಆಚೆಗೆ ಹೋಗಿ. ಅಲ್ಲೊಂದು ದೊಡ್ಡ ತಿಟ್ಟದೆ. ಅಲ್ಲಿ ಒಂದು ಗುಳಿಗೆ ನುಂಗಿ. ಮೊದಲ ರೂಪ ಬತ್ತದೆ. ಹಂಗೇ ಮುಂದಕ್ಕೆ ಹೋಗಿ, ಅಲ್ಲೊಂದು ಮಹಾಗುತ್ತಿ ಅದೆ. ಅದರ ಅಡೇಲೇ ಒಂದು ಪರ್ವತದಂಥ ಹುತ್ತ



ಅದೆ. ಅಲ್ಲಿ ಬೇಕಾದೋಟು ಏಳು ಹೆಡೆ ಸರ್ಪಗಳು ಕಾವಲವೆ. ಅವು ನಿಮ್ಮ ಸುಮ್ಮನೆ ಬುಡೋದಿಲ್ಲ. ಅಟ್ಟಿಕೊಂಡು ಬತ್ತವೆ. ಆಗ ಒಂದು ಗುಳಿಗೆ ನುಂಗಿ. ಒಂಬತ್ತು ಹೆಡೆ ಸರ್ಪ ಆಯ್ತೀರಿ. ಆಗ ಅವೇ ನಿಮ್ಮನ್ನ ವಳಕ್ಕೆ ಕರಕೊಂಡು ಹೋಯ್ತವೆ. ಆ ಮ್ಯಾಲೆ ನಿಮಗೇ ಗೊತ್ತಾಯ್ತದೆ” ಅಂದಳು. ಐದು ಮಂತ್ರದ ಗುಳಿಗೆ ಅವನಿಗೆ ಕೊಟ್ಟಳು.

ಕುಂಟ ಹೆಂಡತೀರ ಎದುರಿಗೇ ಒಂದು ಗುಳಿಗೆ ನುಂಗಿದ. ಅವರು ನೋಡ ನೋಡುತ್ತಿದ್ದಂಗೇ ದೊಡ್ಡ ಗರುಡಾಳ ಪಕ್ಷಿಯಾದ. ಭರ್ರ್ ಅಂತ ಆಕಾಶದ ಮಾರ್ಗದಲ್ಲಿ ಹಾರಿ ಹೊಂಟೋದ. ಒಂದೊಂದಾಗಿ ಏಳು ಸಮುದ್ರಗಳನ್ನೂ ದಾಟಿದ. ಅದರಾಚೆಗೆ ತಿಟ್ಟಿಗೆ ಹೋಗಿ ಒಂದು ಗುಳಿಗೆ ನುಂಗಿದ. ಮತ್ತೆ ಯಥಾ ಪ್ರಕಾರ ಮನುಷನಾದ. ಅಲ್ಲಿಂದ ಕುಂಟಿಗೊಂಡು ಮುಂದಕ್ಕೆ ಹೋದ. ಅಲ್ಲೊಂದು ಆಕಾಸಕ್ಕೂ ಭೂಮ್ಗೂ ಒಂದೇ ಸಮನಾಗಿ ಬೆಳದಿರೋ ದೊಡ್ಡ ಗುತ್ತಿ ಇತ್ತು. ಅದರ ವತೀಲಿ ತಲೇ ಆಚೇಕಡೆ ಒಂದು ಪರ್ವತದಂಥ ಗಂಡುಹುತ್ತ. ಅದರ ಸುತ್ತ ಮುತ್ತ ಏಳು ತಲೆ ಹಾವುಗಳು ಮಿತಿ ಮಿತಿ ಅಂತಿದ್ದೋ. ಇವನ ಕಂಡ ತಕ್ಷಣ ಹರಿಸಿಕೊಂಡು ಬಂದು ಬುಟ್ವೋ. ಇವನು ಕೂಡಲೇ ಒಂದು ಗುಳಿಗೆ ನುಂಗಿದ. ಭಾರೀ ಒಂಬತ್ತು ಹೆಡೆಯ ಸರ್ಪವಾಗಿ ಬುಟ್ಟ. ಅದನ್ನು ನೋಡಿದ ತಕ್ಷಣ ಮಿಕ್ಕ ಸರ್ಪಗಳು ಬಂದು ಅಡ್ಡಬಿದ್ದೊ. ಆ ಮೇಲೆ ಅದ ಕರಕೊಂಡು ನಾಗಲೋಕಕ್ಕೆ ಹೋದವೂ.

ನಾಗರಾಜನಿಗೆ ಕುಸುಮಾಲೇರು ಅಂತ ಇಬ್ಬರು ಹೆಣ್ಮಕ್ಕಳಿದ್ದರು. ಅವರೋ ಸುಂದರಿಯರು ಅಂದರೆ ಅಂಥಿಂಥ ಸುಂದರಿಯರಲ್ಲ. ‘ಆ ಪಟ್ಟಣದೊಳಕ್ಕೆ ಬಂದೋರಿಗೆ ಆ ಹೆಣ್ಣು ಮಕ್ಕಳ ಕೊಟ್ಟು ಮದುವೆ ಮಾಡ್ತೀನಿ’ ಅಂತ ನಾಗರಾಜ ಶಪಥ ಮಾಡಿದ್ದ. ಇಲ್ಲೀಗಂಟ ಯಾರೂ ಬಂದಿರಲಿಲ್ಲ. ‘ಬಾಳೋ ಬದುಕೋ ಮಕ್ಕಳ ಮದುವೆ ಮಾಡ್ದೆ ನಾನು ಹಿಂಗ್ ಮಾಡ್‌ಬುಟ್ನಲ್ಲಾ’ ಅಂತ ಅವನಿಗೆ ಅದೇ ಕೊರತನೆ ಆಗಿ ಬುಟ್ಟಿತ್ತು. ಅದೇ ಯೇಚ್ನೇಲಿ ಹಾಸಿಗೆ ಹಿಡಿದು ಬುಟ್ಟಿದ್ದ. ಸರ್ಪಗಳು ಬಂದು “ಭೂಲೋಕದಿಂದ ಯಾರೋ ಬಂದವ್ರೆ” ಅಂದೊ. ಅವನಿಗೆ ಅಮುರ್ತ ಕುಡಿದಷ್ಟು ಆನಂದವಾಯ್ತು. ಗಕ್ಕನೆ ಹಾಸಿಗೆಯಿಂದ ಎದ್ದು ಈಚೆಗೆ ಓಡಿಬಂದ. ಒಂಬತ್ತು ಹೆಡೆ ಸರ್ಪವಾಗಿದ್ದ ಕುಂಟಣ್ಣ ಇನ್ನೊಂದು ಗುಳಿಗೆ ನುಂಗಿದ. ಮತ್ತೆ ಮೊದಲಿನಂತೆ ಒಂದು ಗಳಿಗೇವಳಗೆ ಮನುಷ್ಯನ ರೂಪಾದ. ನಾಗರಾಜನಿಗೆ ಕೈ ಮುಗಿದ. ನಾಗರಾಜ “ನೀನು ಯಾರು ? ಯಾತಕ್ಕೆ ಬಂದೆ?” ಅಂದ. ಕುಂಟ ತಾನು ಬಂದ ಕಾರ್ಯ ತಿಳಿಸಿದ.

"ಆಗಲಿ, ಕುಸುಮೆ ಕೊಡ್ತೀನಿ. ತಕ್ಕೊಂಡ್ ಹೋಗೂವಂತೆ" ಅಂತ ಹೇಳಿದ. ತನ್ನ ಇಬ್ಬರೂ ಮಕ್ಕಳ್ನೂ ಬಾಳ ವೈಭೋಗದಿಂದ ಅದ್ದೂರಿಯಿಂದ ಅವನಿಗೆ ಮದುವೆ ಮಾಡಿದ. ಕುಸುಮೆ ತರಿಸಿಕೊಟ್ಟ. ಬೇಕಾದಂಥ ಮುತ್ತು ರತ್ನ ವಜ್ರ ವೈಢೂರ್ಯ ಎಲ್ಲಾನೂ ಕೊಟ್ಟ. ಅಳಿಯನ್ನೂ ಮಕ್ಕಳನ್ನೂ ಎಂಟು ದಿನ ತಡಕೊಂಡಿದ್ದು ಹಬ್ಬ ಮಾಡಿಸಿ ಆ ಮೇಲೆ ಕಳಿಸಿಕೊಟ್ಟ. ಕುಂಟಣ್ಣ ಇಬ್ಬರು ಹೆಡತೀರ್ನೂ ಕರಕೊಂಡು ಹುತ್ತದಿಂದ ಈಚೆಗೆ ಬಂದ. ಒಂದು ಗುಳಿಗೆ ನುಂಗಿದ. ಮತ್ತೆ ಗರುಡಾಳ ಪಕ್ಷಿಯಾದ. ಅವರೂ ಅವರ ಮಾಯದಿಂದ ಎರಡು ಗರುಡಾಳ ಪಕ್ಷಿಗಳಾದರು. ಹಾರಿಕೊಂಡು ಸಮುದ್ರ ದಾಟಿಕೊಂಡು ಮತ್ತೆ ಪಟ್ಟಣಕ್ಕೆ ಬಂದು ಮನೇ ಮುಂದೆ ಇಳಿದರು. ರತ್ನಾವತಿ ನಗ್‌ನಗ್ತಾ ಬಂದು ನೀರು ತಂದು ಮಂತ್ರ ಹೇಳಿ ಅವರ ಮೇಲೆ ಚಿಮುಕಿಸಿದಳು. ಅವರು ಮೂರು ಜನವೂ ಮೊದಲಿನ ರೂಪಪಡೆದರು. ಆರತಿ ಮಾಡಿ ಒಳಕ್ಕೆ ಕರಕೊಂಡಳು.

೪

ಎಂದಿನಂತೆ ಗಡ್ಡ ಮೀಸೆ ಬೆಳೆದು 'ಕಂಡಿ'ಯಂತಿದ್ದ ಮೊಖಕ್ಕೆ ಚೌರಮಾಡಿಸಾಕೆ ಹಜಾಮನ ಕರೆಸಿದ ಕುಂಟಣ್ಣ. ಅವನ ಮೊಖಾ ಎಲ್ಲಾನೂ ನುಣ್ಣಗೆ ಬೋಳಿಸಿದ ಮೇಲೆ ಕುಂಟಣ್ಣ ಮಲಗಿದ್ದ ಕುಸುಮಾಲೇರನ್ನು ಕರೆದು, "ಕುಸುಮಾಲೇ, ಇವನಿಗೊಂದಿಷ್ಟು ಮುತ್ತು ರತ್ನ ತಂದ್‌ಕೊಡಿ" ಅಂದ. ಅವರಿಬ್ಬರೂ ಎರಡು ಮೊರಗಳಲ್ಲಿ ಮುತ್ತುರತ್ನ ತುಂಬಿಕೊಂಡು ಈಚೆಗೆ ತಕ್ಕೊಂಡು ಬಂದರು. ಆ ಜೋಡಿ ಬಾಲೇರನ್ನು ನೋಡಿದ ತಕ್ಷಣವೇ ಅವನಿಗೆ ಫಳಾರನೆ ಮಿಂಚು ಹೊಳೆದಂತಾಯಿತು. ಕಣ್ಣಿಗೆ ಕತ್ತಲೆ ಕವ್‌ಕೊಂಡು ಬುಡ್ತು. ತಲೆ ತಿರುಗಿ ಧಡೀರ್ ಅಂತ ಬಿದ್ದು ಬುಟ್ಟ. ಅವರೆಲ್ಲ ಸೇರಿ ನೀರು ಗೀರು ತಟ್ಟಿ ಏಳಿಸಿದರು. ಎದ್ದ ಕೂಡಲೇ ಅತ್ತಿತ್ತ ನೋಡದೆ ಒಂದೇ ಭರ ಕಿತ್ತು ಅರಮನೆಗೆ ಬಂದ್‌ಬುಟ್ಟ. ರಾಜನ ಹತ್ರಕ್ಕೆ ಹೋಗಿ,

"ಮಾಸ್ವಾಮಿ ನಾನೇನ್ ಹೇಳ್ಲಿ. ಆಗ ಅಂದರೆ ಆಗ ನಿಮ್ಮ ಹೊಸ ಬಂಟ ಒಂದು ರತ್ನದಂಥ ಹುಡುಗಿ ಹೊಡಕೊಂಡ್ ಬಂದಿದ್ದ. ಈಗ ಅಂದ್ರೆ ಈಗ ಬೆಳ್ಳಿಚಿಕ್ಕಿಯಂಥ ಎರಡು ಹುಡುಗೀರ್ನ ಕರಕೊಂಡ್ ಬಂದವ್ನೆ. ಮನುಷ ಮಾತ್ರದೋರು ಅವರ ಈ ರೂಪನೋಡಿ ಸೈಸಕಾಗೋದಿಲ್ಲ. ಅವರೇನು ರಂಭೆ ಊರೋಶಿಯರೋ ಏನೋ. ಅಂತೂ ಆ ಕುಂಟನ ಅದೃಷ್ಟವೇ ಅದೃಷ್ಟ". ಅಂತ ಬಾಯಿಗೆ ಬಂದಂಗೆ ಹೊಗಳಿದ. ರಾಜನಿಗೆ ಮನಸೇ ಕೆಟ್ಟು ಹೋಯಿತು. "ನಾಗಲೋಕಕ್ಕೆ ಹೋದೋರು ಹಿಂತಿರುಗಿ ಬರೋದುಂಟಾ? ಹ್ಯಂಗೂ ಅಲ್ಲಿ



ಸತ್‌ಹೋಯ್ತಾನೆ. ಆಮೇಲೆ ಒಂದು ತಿಂಗಳ ಗಂಟ ಕಾದು ಅವನ ರತ್ನದಂಥ ಹೆಂಡತೀಯ ಹೇಗಾದರೂ ಮಾಡಿ ವಸಮಾಡ್ಕೋಳಾನೆ ಅಂದ್ರೆ, ಈ ಸತಿ ಮತ್ತೆ ಇಬ್ಬರ್ನ ಕರಕೊಂಡು ಬಂದವನಂತಲ್ಲಾ. ಅವನ ಪುಣ್ಯಕ್ಕೆ ಏಟ್ ಹೇಳಿದ್ರೂ ತೀರ್ದು. ಈ ಸತಿ ಏನಾರೂ ಭಾರಿ ಕೆಲಸ ಹೇಳಿ ಅವನು ಹಿಂತಿರುಗಿ ಬರದಂಗೆ ಮಾಡಬೇಕು" ಅಂತ ರಾಜ ಮನಸ್ಸಿನಲ್ಲೇ ಏನೇನೋ ಹುನಾರ ಹಾಕ್ಕೊಂಡ.

ಕುಂಟಣ್ಣ ಎಂದಿನಂಗೇ ತಾನ ಮಡಿ ಮಾಡ್ಕೋಂಡು ಕುಸುಮಾಲೇರ ಹತ್ರ ಕುಸುಮೆ ಈಸಿಕೊಂಡು ರಾಜನ ಹತ್ರಕ್ಕೆ ಬಂದ. ಕುಸುಮೆ ಕೊಟ್ಟು ಕೈಮುಗಿದ. "ಏನೋ ತಮ್ಮ ದಯದಿಂದ ಹೋದ ಕೆಲಸ ಹೂವಿನ ಸರ ಎತ್ತಿದಂಗೆ ಹಗುರಾಯ್ತು. ಇಲ್ದೇ ಇದ್ರೆ ನಾನು ಹಿಂದಿರುಗಿ ಬರೋಂಗೂ ಇತ್ತಿಲ್ಲ, ತಮ್ಮ ದರುಶನ ಮಾಡೊಂಗೂ ಇತ್ತಿಲ್ಲ" ಅಂದ. ರಾಜನಿಗೆ ಬಾಳ ಆನಂದವಾಯಿತು. ದೂರದಲ್ಲಿ ನಿಂತಿದ್ದ ಕುಂಟಣ್ಣನ ಕೈ ಹಿಡಿದು ಎಳೆದುಕೊಂಡು ತನ್ನ ಸಿಂಹಾಸನದ ಮೇಲೆ ಕುಂಡಿರಿಸಿಕೊಂಡ, ಬೆನ್ನು ತಟ್ಟಿದ. "ನಿನ್ನಂಥ ಬಂಟ ನಮ್ಮ ರಾಜ್ಯದಲ್ಲೇ ಇಲ್ಲ, ಎಂಥೆಂಥ ಸೂರರ ಕೈಲೂ ಆಗದೇ ಇರೋ ಕೆಲಸಾನೆಲ್ಲ ನೀನು ಮಾಡಿದ್ದೀ. ನಿನ್ನ ಸಮಾನ ಯಾರೂ ಇಲ್ಲ. ನಿನಗೆ ಅರ್ಧರಾಜ್ಯ ಮುಪ್ಪತ್ತಾಗಿ ಕೊಟ್ ಬಿಡ್ತೀನಿ" ಅಂದ.

"ಅಯ್ಯೋ ಅಯ್ಯೋ ನಾನು ಬಡವ. ಅದಲ್ದೇ ಕುಂಟ. ನನಗೆ ರಾಜ್ಯಗೀಜ್ಯ ಯಾತಕೆ ಸ್ವಾಮಿ. ತಮ್ಮ ದಯೆ ನನ್ನ ಮೇಲೆ ಇದ್ದರೆ ಅಷ್ಟೇ ಸಾಕು" ಅಂತ ಕುಂಟ ಕೈಮುಗಿದ.

"ಇಲ್ಲ ಇಲ್ಲ. ನನಗೆ ಬಾಳ ಸಂತೋಷವಾಗ್‌ಬುಟ್ಟದೆ. ನಿನಗೆ ಅರ್ಧ ರಾಜ್ಯಕ್ಕೆ ಪಟ್ಟ ಕಟ್ಟೇ ಬುಡ್ತೀನಿ, ಆದರೆ ಇನ್ನೊಂದ್ ಕೆಲಸ ಮಾಡಿಕೊಡಬೇಕು."

'ಅಯ್ಯೋ ಇನ್ನೇನೋ ಗಾಚಾರ ಬತ್ತಲ್ಲಾ' ಅಂದುಕೊಂಡು "ಏನು ಹೇಳಿ ಸ್ವಾಮಿ. ನನ್ನ ಕೈಲಿ ಆಗೋ ಕೆಲಸ ಯಾವುದಿದ್ರೂ ಮಾಡಾಕೆ ಸಿದ್ಧವಾಗಿವ್ನಿ" ಅಂದ.

"ನೀನು ಸುಮ್ನೇ ಹಂಗೆ ಹೇಳ್ತೀಯ ಅಷ್ಟೆ. ನಿನ್ನ ಕೈಲಿ ಆಗದೆ ಇರೋ ಕೆಲಸ ಈ ಪರ್ಪಂಚದಲ್ಲಿ ಯಾವದೂ ಇಲ್ಲ" ಅಂತ ರಾಜ ಉಬ್ಬಿಸಿದ.

"ಅದೇನ್ ಹೇಳಿ"

"ಇದೇನೂ ಭಾರಿ ದೊಡ್ಡ ಕೆಲಸ ಅಲ್ಲ. ನಮ್ಮ ಹೆಂಗಸರೂ ಮಕ್ಕಳೂ ಎಲ್ಲಾ ಇನಿ ಮಾವಿನ ಹಣ್ಣು ತಿನ್ಬೇಕು ಅಂತ ಒಂದೇ ಸಮನೆ ನಂಗೆ ಹೇಳ್ತಾ ಅವರೆ. ಇಲ್ಲಿಗಂಟ ಯಾರೂ ತಂದ್ ಕೊಡ್ಲಿಲ್ಲ. ಈಗ ನೀನಾರೂ ತಂದು

ಕೊಡಬೇಕು."

"ಅಯ್ಯೋ ಅದೆಲ್ಲಿ ಅದೋ, ಹ್ಯಂಗದೋ ನನಗೊಂದೂ ಗೊತ್ತಿಲ್ಲ. ನಾನು ಹ್ಯಂಗೆ ತರಲಿ" ಅಂತ ಕುಂಟ ಕಣ್ ಕಣ್ ಬುಟ್ಟ.

"ಅದೆಲ್ಲಾ ನಂಗೊತ್ತಿಲ್ಲ. ನಿನಗೆ ಗೊತ್ತದೆ. ಸುಮ್ನೇ ಸುಳ್ ಸುಳ್ ಹೇಳಬ್ಯಾಡ. ತಂದರೇ ಅರ್ಧರಾಜ್ಯ, ಇಲ್ದೇ ಇದ್ರೆ ಸಿಗಿಸಿ ತೋರಣ ಕಟ್ಟಿಸ್ತೀನಿ" ಅಂತ ರೇಗಿದ.

"ಹ್ಯಂಗೋ ನನ್ನ ಹಣೇಲೆ ಬರದಂಗಾಗಲಿ. ಒಂದು ತಿಂಗಳು ವಾಯಿದೆ ಕೊಡಿ" ಅಂತ ಅಂಗಲಾಚಿದ.

"ಆಗಲಿ ಹೋಗು" ಅಂತ ಹೇಳಿದ ರಾಜ.

ಕುಂಟಣ್ಣ ಹಿಂತಿರುಗಿ ಬಂದ ಮನೆಗೆ. ಮೊಖ ಸುಟ್ಟ ಬದನೆಕಾಯಿ ಹಂಗಾಗಿತ್ತು. ನಾಕು ಜನ ಹೆಡತೀರೂ ಬಂದು ಅವನ ಹತ್ರ ಕೂತುಕೊಂಡು "ಯಾಕೆ ಸಪ್ಪಗಿದ್ದೀರಿ. ಏನ್ ಹೇಳಿದ ನಿಮ್ಮ ರಾಜ?" ಅಂದರು. ಅವನು ನಡೆದ ಸಂಗತಿ ತಿಳಿಸಿದ. "ಇದಕ್ಕೆ ಯಾಕೆ ಆಕಾಸವೇ ಕಳಚಿಕೊಂಡು ತಲೇಮೇಲೆ ಬಿದ್ದದ್ದೇ ಅನ್ನೋ ಹಂಗೆ ಬಾರಿ ಯೋಚನೆ ಮಾಡ್ತೀರಿ. ನಿಮ್ಮ ರಾಜನ ಹತ್ರ ಹೋಗಿ ಒಂದು ಭಾರೀ ಕುದುರೇನೂ ಒಂದು ಚಂದ್ರಾಯುಧಾನೂ ಈಸಿಕೊಂಡು ಬನ್ನಿ, ನಾವು ದಾರಿ ತೋರಿಸ್ತೀವಿ" ಅಂದರು.

ಅವನು ಅವರು ಹೇಳಿದಂಗೇ ರಾಜನ ಹತ್ರಕ್ಕೆ ಹೋದ. ಕುದುರೆ ಚಂದ್ರಾಯುಧ ಎರಡನ್ನೂ ತಂದ. ಅವರು ಹೇಳಿದರು : "ಈಗ ಕುದುರೆ ಮೇಲೆ ಕೂತುಗೊಳ್ಳಿ. 'ಖಂಗ್ರಾಕ್ಷಸಿ ಪಟ್ಟಣಕ್ಕೆ ದಾರಿಯಾವುದು' ಅಂತ ಉದ್ದೂಕ ಕೇಳಿಕೊಂಡು ಹೋಗಿ. ಅಲ್ಲಿಗೆ ಹೋದಮೇಲೆ ಎಲ್ಲಾ ನಿಮಗೇ ತಿಳೀತದೆ."

ಕುಂಟಣ್ಣ ಕುದುರೆ ಮೇಲೆ ಕೂತುಗೊಂಡ. ಚಂದ್ರಾಯುಧ ಹಿಡಕೊಂಡ. ದಾರಿ ಕೇಳಿಕೊಂಡು ಕೇಳಿಕೊಂಡು ಖಂಡ್ರಾಕ್ಷಸಿ ಪಟ್ಟಣದ ಹತ್ರಕ್ಕೆ ಹೋದ. ಈಚೆ ಕಡೆ ಒಂದು ದೊಡ್ಡ ಹೊಳೆ. ಅದರ ದಡದಲ್ಲಿ ದನ ಕುರಿ ಕಾಯ್ತಾ ಇದ್ದ ಜನರನ್ನು ಕೇಳಿದ "ಇದು ಯಾವ ಹೊಳೆ" ಅಂತ. ಅವರು ಹೇಳಿದಳು :

"ಅಯ್ಯೋ ಇದು ಹೋಳೇನೂ ಅಲ್ಲ ಗಿಳೇನೂ ಅಲ್ಲ. ಆ ಪಟ್ಟಣದ ರಾಕ್ಷಸನಿಗೆ ಒಬ್ಬಳು ತಿದ್ದಿದ ಗೊಂಬೆಯಂಥ ಮಗಳವಳೆ. ಅವಳು ಮೀಯೋದು ದಿನಕ್ಕೆ ಒಂದು ಕೊಳದಪ್ಪಲೆ ನೀರು. ಆ ನೀರೇ ಈ ಹೊಳೆಯಾಗಿ ಹರೀತಾ ಅದೆ. ಇದನ್ನ ಒಂದೇ ನೆಗೆತಕ್ಕೆ ದಾಟಿ ಬಂದೋರಿಗೆ ಮದುವೆ ಆಗ್ತೀನಿ ಅಂತ ಶಪಥ ಮಾಡ್ಯವಳೆ. ಹಿಂಗೇ ಹನ್ನೆರಡು ವರ್ಷದಿಂದ ಕಾದು ಕಾದು ಕೂತವಳೆ, ಇಲ್ಲೀಗಂಟ ಇದ ದಾಟೋ ಸೂರರು ಯಾರೂ ಬಂದಿಲ್ಲ."



ಕುಂಟಣ್ಣನಿಗೆ ನಗೆ ಬತ್ತು. "ಓಹೋ ಇದು ಹೆಂಗಸು ಮೀದ ಹೊಳೇನಾ" ಅಂತ ನಗಾಡಕೊಂಡು ಒಂದೇ ಹಾರತಕ್ಕೆ ಕುದುರೇ ನೆಗೆಸಿ ಅದ ದಾಟಿಬುಟ್ಟ. ಆ ರಾಕ್ಷಸನ ಮಗಳು ಮಾಡೀಮೇಲೆ ನಿಂತುಕೊಂಡು ಇದ್ನೇ ನೋಡ್ತಾ ಇದ್ದಳು. ಕೂಡಲೇ ಪಲ್ಲಕ್ಕಿ ಕಳಿಸಿದಳು. ಕುದುರೆಯಿಂದ ಇಳಿದು ಪಲ್ಲಕ್ಕಿ ಮೇಲೆ ಕೂತುಗೊಂಡು ಅರಮನೆಗೆ ಹೋದ. ಅಲ್ಲಿ ಆ ರಾಕ್ಷಸನ ಮಗಳಿಗೂ ಅವನಿಗೂ ಅದ್ದೂರಿಯಾಗಿ ಮದುವೆ ಆಯ್ತು. ಅಲ್ಲೊಂದು ನಾಕು ದಿನ ಸುಖವಾಗಿ ಕಾಲ ಕಳದ. ಆ ಮೇಲೆ ತಾನು ಬಂದ ಕಾರ್ಯ ಹೆಂಡತಿಗೆ ತಿಳಿಸಿದ. ಅವಳು,

"ಅಯ್ಯೋ ಅದೇನು ಇಲ್ಲಿದ್ದಾತಾ? ಆ ಮರ ಕೈಲಾಸದಲ್ಲದೆ. ಅದರ ಸುತ್ತ ಮುತ್ತ ಮಾರುದ್ದದ ಮುಳ್ಳು ಬೆಳೆದು ನಿಂತವೆ. ಅದು ಬುಡೋದು ವರ್ಷಕ್ಕೆ ಒಂದೇ ಒಂದು ಹಣ್ಣು. ಅದು ದೇವರಿಗೆ ಮಾತ್ರ ಮೀಸಲು. ಅದ ನರಮನುಷ್ಯರು ಕುಯ್ಯಾಕೆ ಆಗೋದಿಲ್ಲ" ಅಂದಳು.

"ಅದೇನಾದ್ರೂ ಆಗಲಿ, ನಾನು ಸತ್ರೂ ಪರವಾಯಿಲ್ಲ. ಅದ ನಾನು ತಂದೇ ತರಬೇಕು" ಅಂತ ಅವನು ಹಠಹಿಡಿದ.

"ಹಂಗಾರೆ ನೀವು ಸಾಯೋದಕ್ಕೆ ಕುರುವೇನು?" ಅಂತ ಕೇಳಿದಳು.

"ನಿನ್ನ ಕೋಣೆವತ್ತೀಲಿ ಒಂದು ಮಲ್ಲಿಗೆ ಗಿಡ ನೆಡು. ದಿನಾ ನೀರು ಹಾಕು. ಅದೇನಾದ್ರೂ ಸತ್ತುಹೋದರೆ, ಆಗ ನಾನು ಸತ್ತಿವ್ನಿ ಅಂತ ತಿಳುಕೋ" ಅಂದ.

"ಇದೇ ಮೂಡಲಾಗಿ ಹೋಗಿ. ಮೂಳು ರಾಕ್ಷಸಿ ಪಟ್ಟಣಕ್ಕೆ ದಾರಿ ಯಾವುದು ಅಂತ ಕೇಳ್ಕೊಂಡ್ ಹೋಗಿ. ಆ ಮೇಲೆ ನಿಮಗೇ ಗೊತ್ತಾಯ್ತದೆ" ಅಂತ ಹೇಳಿ ಅವನಿಗೆ ಆರತಿ ಮಾಡಿ ಕಳಿಸಿ ಕೊಟ್ಟಳು.

ಕುಂಟಣ್ಣ ಕುದುರೆ ಮೇಲೆ ಕೂತುಗೊಂಡು ಚಂದ್ರಾಯುಧ ಹಿಡಕೊಂಡು ಉದ್ದಕ್ಕೂ ದಾರೀ ಕೇಳಿಕೊಂಡು ಮೂಡಲಾಗಿ ಹೊಂಟ. ಮಧ್ಯದಲ್ಲಿ ಒಂದು ಹೊಳೇ ಹರೀತಾ ಇತ್ತು. "ಇದೆಂಥಾ ಹೊಳೆ?" ಅಂತ ಕೇಳಿದ.

"ಮೂಳು ರಾಕ್ಷಸಗೆ ಒಬ್ಬಳು ಮಗಳವಳೆ. ಅವಳಂಥಾ ಹೆಣ್ಣು ಯಾವ ಲೋಕದಲ್ಲಿ ಹುಡುಕಿದರೂ ಸಿಕ್ಕೋದಿಲ್ಲ. ಅವಳು ದಿನಕ್ಕೆ ಎರಡು ಕೊಳಗ ನೀರು ಮೀಯ್ತಾಳೆ. ಆ ಮೀದ ನೀರು ಹಿಂಗೆ ಹೊಳೆಯಾಗಿ ಹರೀತಾ ಅದೆ. ಇದ ಒಂದೇ ನೆಗೆತಕ್ಕೆ ದಾಟಿದೋನಿಗೆ ಮದುವೆಯಾಯ್ತೀನಿ ಅಂತ ಹನ್ನೆರಡು ವರ್ಷದಿಂದ್ಲೂ ಕಣ್ಣಿಗೆ ಎಣ್ಣೆ ಬುಟ್ಕೊಂಡು ಕಾಯ್ತಾ ಅವಳೆ. ಇಲ್ಲೀಗಂಟ ಅವಳನ್ನ

ಮದುವೆಯಾಗೋ ಪೂಣ್ಯವಂತ ಯಾರೂ ಬಂದಿಲ್ಲ" ಅಂದರು ದಡದಲ್ಲಿದ್ದೋರು.

ಅವನು ಆಕ್ಲಾಸಮಾಡಿಕೊಂಡು ನಗಾಡಿ "ಓ ಇದು ಹೆಂಗಸು ಮೀದ ನೀರಾ?" ಅಂದುಕೊಂಡು ಒಂದೇ ಹಾರತಕ್ಕೆ ಕುದುರೆ ನೆಗೆಸಿದ. ಹಿಂದಿನಂಗೇ ಅಂದಣ ಪಲ್ಲಕ್ಕಿ ಬತ್ತು. ಅದರ ಮೇಲೆ ಕೂತುಕೊಂಡು ಅರಮನೆಗೆ ಹೋದ. ಆ ಮೂಳು ರಾಕ್ಷಸ ತನ್ನ ಮಗಳ ಕೊಟ್ಟು ಹಿಂದಿಲ್ಲ ಮುಂದಿಲ್ಲ ಅನ್ನೋ ಅಂಥ ದೇವೇಂದ್ರನ ಐಭೋಗದಿಂದ ಲಗ್ನ ಮಾಡಿದ. ನಾಕು ದಿನ ಸುಖವಾಗಿ ಕಳೆದ ಮೇಲೆ ಕುಂಟಣ್ಣ ತಾನು ಬಂದ ಕಾರ್ಯ ತಿಳಿಸಿದ. ಅವಳು ಬಾಯಮೇಲೆ ಕೈಮಡಗಿಕೊಂಡು "ಅಯ್ಯೋ ಅಯ್ಯೋ ಇದು ನರಮನುಷ್ಯರಿಂದ ಆಗೋ ಕೆಲಸ ಅಲ್ಲ. ಸುಮ್ಮನೆ ಮಾಡಬಾರದ್ದಕ್ಕೆ ಆಸೆ ಮಾಡಿ ಪ್ರಾಣ ಯಾಕ್ ಕಳ್ಕೋತೀರಿ. ನಿಮ್ಮ ರಾಜ ಇಲ್ಲಿಗೆ ಬರಾಕಾಗೋದಿಲ್ಲ. ನೀವು ಸುಮ್ಮನೆ ಇಲ್ಲಿ ಸುಖವಾಗಿ ಇದ್ಬುಡಿ" ಅಂತ ಬುದ್ಧಿ ಹೇಳಿದಳು.

"ಇಲ್ಲ, ಇಲ್ಲ. ನಾನು ತತ್ತೀನಿ ಅಂತ ಮಾತುಕೊಟ್‌ಬುಟ್ಟಿವ್ನಿ. ಏನಾದರೂ ಸರಿ. ನನ್ನ ಪ್ರಾಣ ಅಲ್ಲೇ ಹೋದರೂ ಸರಿ, ನಾನು ಮಾತಿಗೆ ತಪ್ಪೋದಿಲ್ಲ. ನಾನು ಹೋಗಲೇ ಬೇಕು" ಅಂತ ಕುಂಟಣ್ಣ ಹಠ ಹಿಡಿದ. "ಸರಿ, ನಿಮ್ಮಿಷ್ಟ. ಆದ್ರೆ ನಿಮ್ಗೆ ಏನಾದ್ರೂ ಅಲ್ಲಿ ಕಂಟಕಗಿಂಟಕ ಬಂದ್ರೆ ನಮಗೆ ಗೊತ್ತಾಗೋದು ಹ್ಯಂಗೆ"? ಅಂತ ಕೇಳಿದಳು.

"ಒಂದು ತೊಳಸಿ ಗಿಡ ನೆಟ್ಟು ದಿನಾ ರೋಜೀನು ಅದಕ್ಕೆ ನೀರು ಹುಯ್ಯಿ. ಅದೇನಾದರೂ ಸತ್‌ಹೋದ್ರೆ ನಾನೂ ಸತ್ತೋದೇ ಅಂತ ತಿಳ್ಕೋ" ಅಂದ.

ಸರಿ, ಅವಳು ಜೀವರಾಕ್ಷಸಿ ಪಟ್ಟಣಕ್ಕೆ ಹಾದಿ ತೋರಿಸಿಕೊಟ್ಟಳು. ಅವನು ಕುದುರೆಮೇಲೆ ಕೂತುಕೊಂಡು ಚಂದ್ರಾಯುಧ ಹಿಡಕೊಂಡು ಉದ್ಕೂ ದಾರಿ ಕೇಳ್ಕೊಂಡು ಹೊಂಟ. ಮಧ್ಯದಲ್ಲಿ ಹಿಂದಿನಂಗೇ ಒಂದು ಸಮುದ್ರದಂಥಾ ಭಾರಿ ಹೊಳೆ ಹರೀತಾ ಇತ್ತು. ಅಲ್ಲಿದ್ದೋರನ್ನ "ಈ ಹೊಳೆ ಎಲ್ಲಿಂದ ಹರಿದು ಬತ್ತದೆ?" ಅಂದ. ಅವರು ಹೇಳಿದರು :

"ಜೀವರಾಕ್ಷಸಿಗೆ ಒಬ್ಬಳು ಮಗಳವಳೆ. ಸೂರಚಂದ್ರರಿಗಿಂತಲೂ ಅವಳು ರವರವನೆ ಉರೀತಾ ಅವಳೆ. ಎಂಥೆಂಥಾ ದೇವಾನುದೇವತೆಗಳು ಬಂದ್ರೂ ಅವಳು ಅವರ್ನ ಕತ್ತೆತ್ತಿ ನೋಡಿಲ್ಲ. ಅವಳು ದಿನಕ್ಕೆ ಮೂರು ಕೊಳಗ ಮೀಯ್ತಾಳೆ. ಆ ನೀರು ಹಿಂಗೆ ಸಮುದ್ರವಾಗಿ ಹರೀತಾ ಅದೆ. ಇದ ಒಂದೇ ನೆಗೆತಕ್ಕೆ ದಾಟಿದೊರ್ಗೆ ಲಗ್ನವಾಗಬೇಕೂಂತ ಹನ್ನೆರಡು ವರ್ಷದಿಂದ್ಲೂ ತಪಸು ನೀಸ್ಯವಳೆ, ಅವಳ ಸೆರೆ ಬುಡುಸೋ ಸೂರ ಯಾವಾಗ ಬತ್ತಾನೋ ಏನೋ!"



"ಓಹೋ ಇಷ್ಟೇ ತಾನೇ. ಇದು ಹೆಣ್‌ಹೆಂಗಸು ಮೀದ ನೀರಾ?" ಅಂದು ಕೊಂಡು ಹಿಂದಿನಂಗೇ ಒಂದೇ ನೆಗೆತಕ್ಕೆ ಆ ಹೊಳೆ ದಾಟಿದ. ಅತ್ತಲಿಂದ ಅಂದಣ ಪಲ್ಲಕ್ಕಿ ವಾಲಗ ಎಲ್ಲಾ ಬತ್ತು. ಅರಮನೆಗೆ ಹೋದ. ಆ ಜೀವರಾಕ್ಷಸಿಗೆ ಬಾಳ ಸಂತೋಷವಾಯಿತು. ಮಗಳ ಕೊಟ್ಟು ಕೈಲಾಸಾನೆ ಭೂಮಿಗೆ ಇಳಿಸಿದಂಗೆ ಮದುವೆ ಮಾಡಿದಳು. ಅಲ್ಲೂ ನಾಕು ದಿನ ಹೊಸ ಹೆಂಡತೀ ಜೊತೇಲಿ ಆನಂದವಾಗಿ ಕಾಲ ಕಳೆದ. ಆ ಮೇಲೆ ತಾನು ಬಂದ ಕಾರ್ಯ ತಿಳಿಸಿದ. ಅವಳು "ಮದುವೆಯಾಗಿ ನೆಟ್ಟಗೆ ನಾಕು ದಿನ ಕಳೆದಿಲ್ಲ. ಯಾಲೇ ಹೋಯ್ತೀನಿ ಅಂತೀರಿ. ಅದಲ್ದೆ ಆ ಹಣ್ಣ ಮನುಷ ಮಾತ್ರದೋರು ತರಕಾದಾತಾ? ಇದೇನು ಹುಡುಗಾಟವಾ? ಅಲ್ಲಿಗೆ ಹೋದೋರು ಹಿಂತಿರುಗಿ ಬರೋದುಂಟಾ? ಹುಚ್ಚಾಟ ಆಡಬ್ಯಾಡಿ. ಸುಮ್ನೆ ಹಾಯಾಗಿ ಇರಿ" ಅಂದಳು. ಅವನು ಎಷ್ಟು ಹೇಳಿದರೂ ಕೇಳಲಿಲ್ಲ. "ಅದೇನೇ ಆಗ್ಲಿ ನಾನು ಹೋಗಲೇ ಬೇಕು. ಹುಟ್ಟೋದು ಒಂದ್ ದಿನ, ಸಾಯೋದು ಒಂದ್ ದಿನ. ಕೊಟ್ ಮಾತು ತಪ್ಪಿದ ಮೇಲೆ ಬದಿಕೇನು ಫಲ. ನಾನು ಹೋಯ್ತೀನಿ. ನೀನು ತಡೀಬ್ಯಾಡ" ಅಂತ ಪಟ್ಟು ಹಿಡಿದ.

"ನಿಮ್ಗೆ ಏನಾರೂ ತೊಂದ್ರೆ ಪಂದ್ರೆ ಆದರೆ ನನಗೆ ಗೊತ್ತಾಗೋದು ಹ್ಯಂಗೆ?" ಅಂತ ಕೇಳಿದಳು.

"ಒಂದು ಗುಲಾಬಿ ಗಿಡ ನೆಟ್ಕೊ. ಅದ್ಕೆ ದಿನಾ ತಪ್ಪದಂಗೆ ನೀರು ಹುಯ್ಯಿ, ಅದೇನಾರೂ ಒಣಗಿ ಸತ್ ಹೋದ್ರೆ ನಾನೂ ಸತ್ತೆ ಅಂತ ತಿಳ್ಕೋ" ಅಂದ.

ಅವಳು ಇನಿಮಾವಿನ ಮರದ ದಾರಿ ತೋರಿದಳು. ಅವನು ಕುದುರೆ ಮೇಲೆ ಕೂತುಕೊಂಡು ಹೋದ, ಹೋದ, ಅಷ್ಟು ದೂರ ಹೋದ. ಅಲ್ಲೊಂದು ಮಹಾಂತಕಾಡು. ಮರಗಿಡಗಳೆಲ್ಲ ಹತ್ತಿಪ್ಪತ್ತು ಆಳುದ್ದಕ್ಕೆ ಬೆಳೆದಿದ್ವೊ. ನರಪಿಳ್ಳೆ ಸುಳಿವಿಲ್ಲ. ಅದರೊಳಗೆ ಹೋದ. ಇನಿಮಾವಿನ ಮರ ಸಿಕ್ತು. ಅದರ ಬೊಡ್ಡೆಗೆ ಕುದುರೆ ಕಟ್ಟಿಹಾಕಿದ. ಆ ಮರದ ತುದಿ ಕೈಲಾಸಕ್ಕೆ ಹೊಂಟೋಗಿತ್ತು. ಅದರ ಬೊಡ್ಡೆ ಸಣ್ಮಾಡಿಕೊಂಡು ಹತ್ತಕ್ಕೆ ಸುರುಮಾಡಿದ. ಹತ್ತಿದ ಹತ್ತಿದ, ಒಂದೆಂಟು ದಿನ ಹತ್ತಿದ. ಆದ್ರೂ ತುದಿ ಸಿಕ್ಕಲಿಲ್ಲ. ಎಂಟು ದಿನ ಆದ ಮೇಲೆ ಕೆಳಕ್ಕೆ ನೋಡಿದ. ಭೂಮಿ ಕಾಣ್ನೇ ಇಲ್ಲ. ಕಣ್ಣಿಗೆ ಕತ್ತಲೆ ಕವಕೊಂಡು ಬುಡ್ತು. ಒಂದೆಂಟು ದಿನದಿಂದ್ಲೂ ಹೊಟ್ಗೇ ಇಲ್ದೆ ಮೈ ಬಳ್ಳಿಕೊತ್ತಿತ್ತು. ತಲೆ ಗರ್ರ್ ಅಂತ ತಿರುಗಾಕೆ ಸುರುವಾಯ್ತು. ಕೈ ಬುಟ್‌ಬುಟ್ಟ. ಶರೀರ ಆ ಮುಳ್ಳಿಗೆ ಸಿಕ್ಕಿ ಹಾಕ್ಕೊಂಡು ಗೋಜಿಹೋಯ್ತು. ಒಂದು ತೊಟ್ಟು ರಕ್ತವೂ ಕೆಳಕ್ಕೆ ಬೀಳಲಿಲ್ಲ.

ಇತ್ತಲಾಗಿ ಹೆಡತೀರ ಮನೇಲೆ ಮಲ್ಲಿಗೆ ಗಿಡ, ತೊಳಸಿ ಗಿಡ, ಗುಲಾಬಿ ಗಿಡ ಎಲ್ಲಾ ಒಣಗಿಹೋದೊ. ಅವರು ಮೂರು ಜನವೂ ಕುದುರೆ ಹತ್ತಿಕೊಂಡು ಚಂದ್ರಾಯುಧ ಹಿಡಕೊಂಡು ಇನಿಮಾವಿನ ಮರದ ಹತ್ರಕ್ಕೆ ಬಂದರು. ಅಲ್ಲಿ ಕುದುರೆ ಕಟ್ಟಿತ್ತು. ರಕ್ತ ಮಾಂಸ ಯಾವುದೂ ಒಂದು ಚೂರು ಕೆಳಕ್ಕೆ ಬಿದ್ದಿರಲಿಲ್ಲ. ಸರಿ, ಮೂರು ಜನವೂ ಸೊಂಟಕ್ಕೆ ಸೆರಗು ಕಟ್ಟಿಗೊಂಡು ಚಂದ್ರಾಯುಧದಿಂದ ಆ ಮರ ಕಡಿಯಾಕೆ ಸುರುಮಾಡಿದರು. ಕಡಿದರು ಕಡಿದರು, ಒಂದು ವಾರಗಂಟ ಕಡಿದರು. ಮರ ಸಣ್ಣಗಾಗಿ ಮುರಕೊಂಡು ದುಪ್ಪನೆ ಬೀಳ್ತು. ಅದರಲ್ಲಿ ಒಂದೇ ಒಂದು ಹಣ್ಣಿತ್ತು. ಅದ ಜೀವ ರಾಕ್ಷಸಿ ಪಟ್ಟಣದ ಹೆಡತಿ ತಕ್ಕೊಂಡಳು. ಖಂಡ್ರಾಕ್ಷಸಿ ಪಟ್ಟಣದವಳು ಖಂಡ ಆದಳು; ಮೂಳ ರಾಕ್ಷಸಿ ಪಟ್ಟಣದವಳು ಮೂಳೆ ಆದಳು. ಎಲ್ಲಾನೂ ಕೂಡಿಸಿದರು. ಜೀವರಾಕ್ಷಸಿ ಪಟ್ಟಣದವಳು ಜೀವ ಕೂಡಿಸಿದಳು. ಆಗ ಅವನ ಹಿಂದಿನ ಕುಂಟುಗಿಂಟು ಎಲ್ಲಾ ಹೊಂಟೋಯ್ತು. ಒಳ್ಳೇ ಸೂಲೀಂದ್ರನಂಗೆ ರವರವನೆ ಉರೀತಾ ಎದ್ದು ಕೂತುಗೊಂಡ. ಮೂರು ಜನ ಹೆಡತೀರ್ನೂ ಕರಕೊಂಡು ಮಾವದೀರ ಮನೆಗೆ ಹೊರಟ.

ಮೂರು ಜನ ರಾಕ್ಷಸರೂ ಅಳಿಯನನ್ನೂ ಮಕ್ಕಳನ್ನೂ ಸಂಭ್ರಮದಿಂದ ಬರಮಾಡಿಕೊಂಡರು. ಊರಲ್ಲೆಲ್ಲಾ ಸಬಗಸ್ತು ಮಾಡಿಸಿದರು. ಒಬ್ಬೊಬ್ರು ಅರ್ಧರ್ಧ ರಾಜ್ಯ ದಂಡು ದಾಳಿ ಮಂದಿ ಮಾರ್ಬಲ ಮುತ್ತು ರತ್ನ ಎಲ್ಲಾನೂ ಉಡುಗೊರೆ ಕೊಟ್ರು. ಈ ಮೂರು ದಂಡನ್ನೂ ತಕ್ಕೊಂಡು ಮೂರು ಜನ ಹೆಡತೀರ್ನೂ ಕರಕೊಂಡು ಪಟ್ಟಣದ ಹತ್ರಕ್ಕೆ ಬಂದು ಸುದ್ದಿಕೊಟ್ಟ. "ನಾನು ದಂಡು ದಾಳಿಸಮೇತ ಬಂದಿವ್ನಿ ಅಂತ, ನಿಮ್ಮೇಲೆ ಯುದ್ಧಕ್ಕೆ ಬಂದವ್ನೆ ಅಂತ ತಿಳ್ಕೋಬ್ಯಾಡಿ. ಇನಿಮಾವಿನ ಹಣ್ಣು ತಕ್ಕೊಂಡು ಬಂದಿವ್ನಿ" ಅಂತ ಹೇಳಿಕಳಿಸಿದ.

ರಾಜನಿಗೆ ದೊಡ್ಡ ಜೀವವೇ ಹೋದಂಗಾಯ್ತು. 'ಇಂಥಾ ಸೂರ ನಮ್ಮ ಜೀವಸಹಿತ ಬುಡೋದು ನಿಜವಾ? ನಾನೇನು ಹುನಾರು ಹೂಡಿದರೂ ಇವನು ಅದ ಗೆದ್ದು ಕೊಂಡೇ ಬತ್ತಾ ಅವ್ನಲ್ಲ. ಇವನ ಅದೃಷ್ಟ ಗಟ್ಟಿಯಾಗ್ಯದೆ ಅಂತ ಕಾಣ್ತದೆ. ಇವನ್ನ ಏನಾರೂ ಮಾಡಿ ಈ ಸತಿ ತಗದುಬುಡಬೇಕು" ಅಂತ ಮನಸಿನಲ್ಲಿ ನಿರ್ಧಾರ ಮಾಡಿಕೊಂಡ. ಮಂತ್ರೀನೂ ಅವನೂ ಸೇರಿ ಏನೇನೋ ಅಳದು ಸುರುದು ಯೋಚನೆ ಮಾಡಿದರು. ಕಡೆಗೆ

ಒಂದುಪಾಯ ಮಾಡಿಕೊಂಡರು. ನಗ್‌ನಗ್ತಾ ಹೋಗಿ ಅವನ್ನ ಎದುರುಗೊಂಡು ಪಟ್ಟಣದ ವಳಕ್ಕೆ ಕರಕೊಂಡು ಬಂದರು.



೫

ಕುಂಟಣ್ಣ ಅರಮನೆಗೆ ಹೋದ. ರಾಜ್ಯನಿಗೆ ಇನಿಮಾವಿನ ಹಣ್ಣುಕೊಟ್ಟ. "ನಿಮ್ಮದಯದಿಂದ ನಾನು ಬದುಕಿ ಬಂದೆ" ಅಂತ ಕೈಮುಗಿದ. ಮಂತ್ರಿ ರಾಜ ಇಬ್ರೂ ಅವನ್ನ ಕೈಹಿಡಿದು ಎಳದು ಮಧ್ಯಕ್ಕೆ ಕುಂಡಿರಿಸಿಕೊಂಡರು. ಬೇಕಾದಷ್ಟು ಹೊಗಳಿ ಹೊಗಳಿ ಅವನ್ನ ಅಟ್ಟಕ್ಕೇರಿಸಿಬುಟ್ಟರು. ಆಮೇಲೆ ರಾಜ ಮೆತ್ತಗೆ ಹೇಳಿದ :

"ಇಲ್ಲಿಗಂಟ ನಾನು ಹೇಳಿದ ಕೆಲಸಾನೆಲ್ಲ ಹುಲ್ಲುಕಡ್ಡೀಹಂಗೆ ಹಗುರವಾಗಿ ಮಾಡಿಕೊಂಡು ಬಂದೆ, ಇನ್ನೊಂದೇ ಒಂದು ಕೆಲಸ ಅದೆ. ಇದೇ ಕೊನೇ ಕೆಲಸ. ನಿನಗೆ ಇನ್ನೇನೂ ಹೇಳೋದಿಲ್ಲ. ಇದೊಂದ್ ಮಾಡಿಕೊಟ್ಟುಬುಡು"

"ಏನು ಹೇಳಿ"

"ಏನೂ ಇಲ್ಲ. ಯಮಲೋಕಕ್ಕೆ ಹೋಗಿ ನಮ್ಮ ಅಜ್ಜಮುಜ್ಜರು ಹ್ಯಂಗವರೆ ಅಂತ ಒಂದು ಸತಿ ನೋಡ್ಗೊಂಡ್ ಬಂದ್ಬುಡು. ಅಷ್ಟೇಯ."

"ಆಗಲಿ, ತಮ್ಮದಯದಿಂದ ಅದೂ ಒಂದ್ ನೋಡಿಬುಡ್ತೀನಿ. ಆದರೆ ಅಲ್ಲಿಗೆ ಹೋಗೋದು ಹ್ಯಂಗೆ?" ಅಂತ ಕೇಳಿದ.

"ಅದೇನೂ ಕಷ್ಟವಿಲ್ಲ. ಶ್ರೀಗಂಧದ ಕೊಂಟಿನ ಹಗ್ಗಿ ಹಾಕಿಸ್ತೀನಿ. ಅದರ ಮಧ್ಯೆ ನುಗ್ಗಿಹೋದರೆ ಸೀದ ಯಮಲೋಕಕ್ಕೆ ಹೋಗಬಹುದು" ಅಂದ ರಾಜ.

"ಆಗಲಿ," ಅಂತ ಹೇಳಿ ಒಂದು ತಿಂಗಳು ವಾಯಿದೆ ತಕ್ಕೊಂಡು ತನ್ನ ಮನೆಗೆ ಬಂದ.

ಉಣ್ಣಾಕೆ ಅಗಲಮುಂದೆ ಕೂತುಗೊಂಡ. ತುತ್ತ ಕೈಲಿ ಹಿಡಕೊಂಡು ಯೋಚನೆ ಮಾಡ್ತಾಕೂತ್ಕೊಂಡ.

"ಯಾಕ್ ಹಿಂಗೆ ಯೇಚ್ನೆ ಮಾಡ್ತಾ ಇದ್ದೀರಿ. ಇನ್ನೂ ನಿಮ್ಮ ಸಿಂತೆ ತೀರನಿಲ್ವಾ?" ಅಂತ ಕೇಳಿದರು ಹೆಡತೀರು. ಅವನು ರಾಜ ಹೇಳಿದ್ದೆಲ್ಲಾನೂ ಅವರಿಗೆ ಹೇಳಿದ. ಆಗ ಅವರು ಒಂದು ಗಳಿಗೆ ಹಂಗೇ ಯೋಚನೆಮಾಡಿ ಹೇಳಿದರು:

"ನಿಮ್ಮ ರಾಜ ನಿಮ್ಮ ತಗೀಬೇಕೂ ಅಂತ ಈ ಸಂದು ಹುಡುಕ್ಯವನೆ. ಈ ಸತಿ ಅವನಿಗೆ ಸರಿಯಾಗಿ ಬುದ್ಧಿಕಲಿಸಾವೆ ಸುಮ್ನಿರಿ."

ಗೋಧಿ ಹಿಟ್ಟಿನಲ್ಲಿ ಕುಂಟನಂಗೇ ಅವನ ಉದ್ದಕ್ಕೇ ಗಾತ್ರಕ್ಕೇ ಒಂದು ಗೊಂಬೆ ತಿದ್ದಿದರು. ಅದಕ್ಕೆ ಜೀವ ಕೂಡಿದರು. ನಿಜವಾದ ಕುಂಟನನ್ನ ಮನೇಲಿ ಅವಿಸಿಟ್ಟರು. ನಿಗದಿಯಾದ ದಿನ ರಾಜ ಒಂದು ನೂರು ಗಾಡಿ ಶ್ರೀಗಂಧದ

ಕೊಂಟು ತರಿಸಿ ರಾಶಿ ಹಾಕಿಸಿ ಹಗ್ಗಿ ಹತ್ತಿಸಿದ. ಈ ಚೋಜಿಗ ನೋಡಾಕೆ ಅಂತ ಊರೆಲ್ಲಾ ಜಗನ್ ಜಾತ್ರೆಯಾಗಿ ಕೊಂಡದ ತಾವು ಸೇರಿಬುಟ್ಟಿತ್ತು. ಹಿರೀ ಹೆಡ್ತೀನೂ ಕುಂಟಣ್ಣನ್ನೂ ಮನೇಲಿ ಬುಟ್ಟು, ಉಳಿದ ಆರು ಜನ ಹೆಡ್ತೀರು ಮಧ್ಯದಲ್ಲಿ ಗೊಂಬೆ ನಿಲ್ಲಿಸಿಕೊಂಡು ಅಲ್ಲಿಗೆ ಕರಕೊಂಡು ಹೋದ್ರು. ಅವರ ರೂಪು ನೋಡಲಾರದ ಜನಾದ್ ಜನವೆಲ್ಲ ಕಣ್ಮುಚ್ಚಿಕೊಂಡ್ ಬುಟ್ಟರು. ಶ್ರೀಗಂಧದ ಕೊಂಟು ಧಿಗಿಧಿಗಿ ಅಂತ ಭೂಮಿ ಆಕಾಸ್ಕೂ ಒಂದೇ ಸಮನಾಗಿ ಉರೀತಿತ್ತು. ಜನ ನೋಡ್ತಿದ್ದ ಹಂಗೇ ಆ ಗೊಂಬೆ ಕರಕೊಂಡು ಹೋಗಿ ಆ ಉರೀವಳಿಕ್ಕೆ ನೂಕಿಬಿಟ್ಟರು. ಜನೆಲ್ಲಾ "ಶಿವಾ ಶಿವಾ... ಹಿಂಗೂ ಉಂಟಾ" ಅಂದು ಕೊಂಡರು. ಆರು ಜನ ಹೆಡತೀರೂ ತಲೆ ತಗ್ಗಿಸಿಕೊಂಡು ಮನೆಗೆ ಹಿಂದಿರುಗಿದರು. ರಾಜ 'ಈ ಸತಿ ಕುಂಟ ಖಂಡಿತವಾಗಿ ನೆಗೆದು ಬಿದ್ದ. ಈ ಉರೀವಳಗಿಂದ ಬದುಕಿ ಬರೋದುಂಟಾ? ನನ್ನ ಕಂಟಕ ಕಳೀತು', ಅಂದುಕೊಂಡು ಬಾಳ ಖುಷಿ ಪಟ್ಕೊಂಡ.

ಒಂದು ತಿಂಗಳ ವಾಯಿದೆ ಕಳೀತು. ಅವತ್ತು ಮೊದಲಕೋಳಿ ಕೂಗುತ್ತಿದ್ದ ಹಂಗೇ ನಿಜವಾದ ಕುಂಟಣ್ಣನ್ನ ಕರಕೊಂಡು ಹೋಗಿ ಅವನ ಹೆಡತೀರು ಆ ಕೊಂಡದ ಬೂದಿವಳಕ್ಕೆ ಕುಂಡಿರಿಸಿ ಬಂದರು. ಆವತ್ತು ವಾಯಿದೆ ದಿನ. ಮಸುವಿಗೇ ಜನೆಲ್ಲಾ ಎಂದಿನಂಗೇ ಎಳ್ಳಿಟ್ರೆ ಎಳ್ಳುಕೆಳಕ್ಕೆ ಬೀಳದಂಗೆ ಕೊಂಡದ ತಾವು ಸೇರಿ ಬುಡ್ತು. ಅವರೆಲ್ಲ ನೋಡುತಿದ್ದಂಗೇ ಅವರ ಎದುರಿಗೇ ಕುಂಟಣ್ಣ ಬುದುಕ್ದೆ ಅಂತ ಬೂದಿವಳಗಿನಿಂದ ಎದ್ದು ನಿಂತಕೊಂಡ. ಜನೆಲ್ಲಾ "ಹೋ" ಅಂತ ಕೂಗಿಕೊಂಡರು. ಅವನು ಎದ್ದದ್ದೇ ನೇರವಾಗಿ ಅರಮನೆಗೆ ಹೋದ. ಇವನ್ನ ಕಂಡ ತಕ್ಷಣ ರಾಜನಿಗೆ ಸಳಿ ಜರ ಎಲ್ಲಾ ಒಟ್ಗೇ ಬಂದೊ. ಕೊದ್ಲ್‌ಸ್ತಾ ಕೊದ್ಲ್‌ಸ್ತಾ,

"ನೀನು ಹೋಗಿಬಂದು ಬುಟ್ಯಾ? ನಮ್ಮಪ್ಪ ಅಜ್ಜ ಎಲ್ಲಾ ಚಂದಾಗವರಾ"? ಅಂತ ಕೇಳಿದ.

"ಓಹೋ ಚಂದಾಗ್ಯವರೆ. ಆ ಲೋಕದಲ್ಲಿ ಅವರ ಐಭೋಗ ಏನಹೇಳ್ಲಿ. ಅದರ ಮುಂದೆ ನಮ್ಮ ಭೂಮಿ ಒಂದು ರೇಣುತೂಕದ ಬರಾಬರಿ ಬರೋದಿಲ್ಲ. ಬಂದ್‌ಬುಟ್ಟೆ. ತಕ್ಕೊಳ್ಳಿ, ನಿಮ್ಮಪ್ಪ ಒಂದು ಕಾಗದ ಕೊಟ್ಟು ಕಳಿಸ್ಯವ್ರೆ" ಅಂತ ಹೇಳಿ ಜೇಬಿಂದ ಒಂದು ಲಕೋಟೆ ತಗದುಕೊಟ್ಟ. "ನಾನಿಪಟು ಹೋಯ್ತೀನಿ, ಆಮೇಲೆ ಬತ್ತೀನಿ" ಅಂದುಬುಟ್ಟು ಮನೆಗೆ ಬಂದ.

ರಾಜ ಕುಂಟಣ್ಣ ಹೋದ ಮೇಲೆ ಲಕೋಟೆ ಒಡದು ನೋಡಿದ. ಅದರಲ್ಲಿ "ನಾವೆಲ್ಲಾ ಕ್ಷೇಮ. ನಿಮ್ಮನ್ನೆಲ್ಲಾ ನೋಡಬೇಕು ಅಂತ ಬಾಳ ಮನಸ್ಸಾಗದೆ.



ಮಕ್ಕಳು ಮರಿ ಕುನ್ನಕುಟಕ ಎಲ್ಲಾ ಒಂದು ಸತಿ ಬಂದುಹೋಗಿ. ಏನೂ ಭಯ ಪಡಬೇಕಾಗಿಲ್ಲ." ಅಂತ ಬರದಿತ್ತು. ಅದು ನಿಜವೇ ನಿಜ ಅಂತ ರಾಜ ನಂಬಿಕೊಂಡು ಬುಟ್ಟ. ಕುಂಟಣ್ಣ ಮೊದಲಿಂದ್ಲೂ ತಾನು ಹೇಳಿದ ಎಲ್ಲಾ ಕೆಲಸಾನೂ ನೆರವೇರಿಸಿಕೊಂಡು ಬಂದಿದ್ರಿಂದ ಅವನ ಮೇಲೆ ಒಂದು ರವಷ್ಟೂ ಅನುಮಾನ ಪಡ್ನಿಲ್ಲ. 'ಹೋಗಿ ಒಂದು ಸತಿ ನೋಡಿಕೊಂಡೇ ಬಂದ್ ಬುಡಾನೆ' ಅಂತ ನಿರ್ಧಾರ ಮಾಡಿಬುಟ್ಟ.

ಸರಿ, ಎಂದಿನಂಗೇ ದೊಡ್ಡಕೊಂಡ ಹಾಕಿಸಿದ. ಕುಂಟಣ್ಣನೇ ಮುಂದೆ ನಿಂತ್ಕೊಂಡು ಎಲ್ಲರಿಗೂ ಹೆದರಿಕೊಳ್ಳದಂಗೆ ಕಣ್ಣಿಗೆ ಬಟ್ಟೆಕಟ್ಟಿದ. ಒಬ್ಬೊಬ್ಬರ್‍ನಾಗಿ ಆ ಹಗ್ಗಿಗೆ ನೂಕಿಬುಟ್ಟ.

ಒಂದು ವಾರ ಆಯ್ತು. ಎರಡು ವಾರ ಆಯ್ತು. ಒಂದು ತಿಂಗಳಾಯ್ತು, ಎರಡು ತಿಂಗಳಾಯ್ತು. ಯಾರೂ ಹಿಂತಿರುಗಿ ಬರಲಿಲ್ಲ. 'ಅವರ ಪಾಪಕ್ಕೆ ಅವರು ಸತ್ತೋದ್ರು' ಅಂತ ಜನ ಆಡಿಕೊಂಡರು. ಕುಂಟಣ್ಣನ ಮನೇತಾಕೆ ಬಂದು "ನೀವೇ ನಮ್ಮ ರಾಜರಾಗಬೇಕು" ಅಂತ ಕೇಳಿಕೊಂಡರು. ಕುಂಟಣ್ಣ ಐಭೋಗದಿಂದ ಪಟ್ಟ ಕಟ್ಟಿಸಿಕೊಂಡು ರಾಜನಾದ.

ಇತ್ತಲಾಗಿ ಕುಂಟಣ್ಣನ ಹಿರೀ ಅಣ್ಣದೀರು ತೀರ ಬಡವರಾದರು. ಅದೇ ಪಟ್ಟಣಕ್ಕೆ ಸೌದೆ ಹೊತ್ಕೊಂಡು ಬಂದು ಮಾರಿ ಜೀವನ ಸಾಕ್ತಿದ್ರು. ಕುಂಟಣ್ಣನಿಗೆ ಇದು ಗೊತ್ತಾಯಿತು. ಆ ಸೌದೇನೆಲ್ಲ ತಾನೇ ಕೊಂಡುಕೊಂಡು ಅವರಿಗೆ ಬೇಕಾದೋಟು ದುಡ್ಡು ಕೊಟ್ಟ. ವಸೀ ದಿನ ಹಂಗೇ ನಡೀತು. ಅವರ ಗೋಳು ನೋಡಲಾರದೇ ಹೋದ. ಒಂದು ದಿನ ಅಣ್ಣದೀರು, ಅತ್ತಿಗೇರು, ಅವ್ವ ಎಲ್ಲಾರ್‍ನೂ ಅರಮನೆಗೆ ಕರೆಸಿದ. ಹಬ್ಬ ಮಾಡಿಸಿದ. ಅವರಿಗೆಲ್ಲಾ ಸೋಗಸಾದಂತ ಬಟ್ಟೆಬರೆ ಎಲ್ಲಾನೂ ತಗಿಸಿಕೊಟ್ಟ. ಅವರೆಲ್ಲಾ ಉಂಡು ಉಟ್ಟು ಆದ ಮೇಲೆ ಎಲಡಕೆ ಹಾಕ್ಕೊತಾ ಕೂತುಗೊಂಡರು. ಮುದುಕಿ ಕುಟ್ಟಣದಲ್ಲಿ ಎಲೆ ಅಡಕೆ ಕುಟ್ತಾ ಕೂತು ಗೊಂಡಳು. ಕುಂಟಣ್ಣ ಅವಳ ಮುಂದಾರಕೆ ಹೋಗಿ ಕೂತುಗೊಂಡ. ರಾಜ ಮುಂದೆ ಬಂದು ಕೂತುಗೊಂಡ್ನಲ್ಲಾ ಅಂತ ಅವಳಿಗೆ ದಿಗ್‌ಭ್ರಮೆ ಬಂದಂತಾಯಿತು. ಕಣ್ ಕಣ್ ಬುಟ್ಟಳು. "ನಾನು ಯಾರು ಗೊತ್ತಾ ?" ಅಂತ ಕೇಳಿದ. "ನಂಗೊತ್ತಿಲ್ಲ ಕನ್ಬುದ್ದಿ, ನೀವು ನಮ್ಮ ಹೊಸ ದೊರೆಗಳು. ಅಷ್ಟು ನಂಗೊತ್ತು" ಅಂದಳು ಮುದುಕಿ. "ನಾನು ನಿನ್ನ ಕಿರೀ ಮಗ ಕುಂಟ ಅಲ್ವಾ?" ಅಂದ, ಅವಳಿಗೆ ಸೋಜಿಗವಾಯಿತು. ಕಕಮಕರು ಬಂದಂಗಾಯಿತು. ಅವಳಿಗೆ ನಂಬಿಕೆ ಬರಲಿಲ್ಲ. ಅವನ ಕಾಲಕಡೆ ನೋಡಿದಳು. ಆಗ ಕುಂಟಣ್ಣ ತನ್ನ ಹಿರೀ

ಹೆಡತಿ ಕರೆಸಿದ. ಅವಳು ಅತ್ತಲಿಂದ ಬತ್ತಿದ್ದಹಂಗೇ "ಅತ್ಯಮ್ಮಾ" ಅಂತ ಬಂದು ಕಾಲಿಗೆ ಬಿದ್ದಳು. ಆಗ ಮುದುಕಮ್ಮನಿಗೆ ನಂಬಿಕೆ ಬತ್ತು. ಕುಂಟಣ್ಣ ಕೂತುಗೊಂಡು ನಡದ ಸಂಗತೀನೆಲ್ಲಾ ಹೇಳಿದ. ಎಲ್ಲಾ ಹೆಡತೀರ್ನೂ ತೋರಿಸಿದ. ಅವರೆಲ್ಲಾ ಬಂದು ಅತ್ತೆ ಕಾಲಿಗೆ ಸಣ್ಮಾಡಿಕೊಂಡರು. ಅಣ್ಮದೀರು ಅತ್ತಿಗೇರು ಅವ್ವ ತಾವು ಎಲ್ಲಾ ಒಂದು ಕಡೆ ಸೇರಿ ಸುಖವಾಗಿ ಬದುಕಿಕೊಂಡರು.

* * * *



## ಕಂಚಿನ ಕೊಳ*

ಒಬ್ಬ ಪಾಪಿ ದೊರೆ. ಅವನಿಗೆ ಕುಬೇರ ಸಂಪತ್ತು. ಅರಮನೆಯ ಯಾವ ಮೂಲೇಲಿ ನೋಡಿದರೂ ಚಿನ್ನ ವಜ್ರ ವೈಢೂರ್ಯಗಳ ರಾಶಿ ತುಂಬಿ ಗಿಟಿ ಗಿಟಿ ಅನ್ನುತ್ತಿತ್ತು. ಅವನು ತನ್ನ ಹೆಸರಾಗಿ ಯಾವುದಾದರೂ ಒಂದು 'ಶಾಸೀನ'ವಾದ ಕೆಲಸ ಮಾಡಬೇಕೆಂದು ಆಲೋಚಿಸಿದ. ಕೊನೆಗೆ ದನಕರುಗಳು ಹಕ್ಕಿ ಪಕ್ಷಿಗಳೂ ನೀರು ಕುಡಿದು ಹೊಟ್ಟೆ ತಣ್ಣಗೆ ಮಾಡಿಕೊಂಡರೆ ತನಗೆ ಪುಣ್ಯ ಬರುತ್ತದೆ ಎಂದು ಕೊಂಡ. ಆದ್ದರಿಂದ ಅಪಾರ ಹಣ ಕರ್ಚು ಮಾಡಿ ಒಂದು ಕಂಚಿನ ಕೊಳ ಕಟ್ಟಿಸಿದ. ಬಾಳ 'ಸುಂದರ'ವಾದ ಕೊಣ ಅದು. ನೋಡಾಕೆ ಎರಡು ಕಣ್ಣೂ ಸಾಲದು. ಅಂಥ 'ದಿವನಾದ' ಕೊಣ ಕಟ್ಟಿಸಿದರೂ, ಅದಕ್ಕಾಗಿ ನೀರಿನಂತೆ ಹೊನ್ನು ಖರ್ಚು ಮಾಡಿದರೂ ಅದರಲ್ಲಿ ಹಕ್ಕಿ ಸೀಪಕ್ಕೂ ಒಂದು ತೊಟ್ಟು ನೀರು ಬರಲಿಲ್ಲ. 'ಇಷ್ಟು ಮಾಡಿದ್ದೂ ಯತಾರ್ಥ ಆಗಿ ಹೋಯ್ತಲ್ಲ, ಒಂದು ಹನಿ ನೀರೂ ಕಾಣನಿಲ್ಲವಲ್ಲ. ನಾನು ಎಂಥಾ ಪಾಪ ಮಾಡಿದ್ದೆ ಹಿಂದಿನ ಜಲ್ಮದಲ್ಲಿ' ಅಂದುಕೊಂಡು ದೊರೆ ಕೊರಗಿ ಕೊರಗಿ ಕಡ್ಡಿಯಾದ. ಕೂತಾಗ ನಿಂತಾಗ ಅವನಿಗೆ ಅದೇ 'ಯಥೆ' ಆಯಿತು. ಯಾರ್‍ಯಾರೋ ಮಂತ್ರಗಾರ್‍ರು ಮಾಟಗಾರ್‍ರು ದೋಸರಿಗಳು ಎಲ್ಲಾರ್‍ನೂ ಕರೆಸಿ ಜನದ ಕಣ್ಣಿಗೆ ಅಡ್ಡವಾಗಿರೋ ಭೂತಕ್ಕೆ ಏನೇನೋ ಮಾಡಿಸಿದ. ಊಹು, ಏನಾದರೂ ನೀರಿನ ಮೊಖವೇ ಕಾಣಲಿಲ್ಲ. ಕೊಣ ಪಾಳು ಬಿದ್ದಿತು.

ಒಂದು ದಿನ ಪಾರ್ವತೀ ಪರಮೇಶ್ವರರು ನಂದೀ ಮೇಲೆ ಕೂತುಕೊಂಡು ದೇಶ ಸಂಚಾರ ಹೊರಟಿದ್ದರು, 'ದಗನ' ಮಾರ್ಗವಾಗಿ. ಹೋಯ್ತಾ ಹೋಯ್ತಾ ಇರುವಾಗ ಈ ಕಂಚಿನ ಕೊಣ ಪಾರ್ವತಿಯ ಕಣ್ಣಿಗೆ ಕಾಣಿಸಿತು. ಅವಳಿಗೆ ಅಪರಿಮಿತ 'ಅಚರ್ಯ'ವಾಯಿತು. ಅವಳು ಪರಮೇಶ್ವರನನ್ನು ಕೇಳಿದಳು : "ಶಿವರಾಯ ಶಿವರಾಯ, ಈ ಕೊಣ ನೋಡಿದರೆ ಈಟೊಂದು ಚಂದಾಗ್ಯದೆ. ಯಾವೋನೋ ಮಾರಾಯ ಕಲ್ಲಿನಲಿ ಕಟ್ಟೋ ಕೊಣಾವ ಕಂಚಿನಲ್ಲಿ ಕಟ್ಟಿಸ್ಯವನೆ.

* ಹೇಳಿದವರು: ಅಂಗಡಿ ಬೋರೇ ಗೌಡ, ಬಡಗನಕೊಪ್ಪಲು, ಕೃಷ್ಣರಾಜನಗರ.

ಆದರೆ ಇದರಲ್ಲಿ ಹಕ್ಕಿ ಸೀಪಾಕೂ ಒಂದು ಗುಟುಕು ನೀರಿಲ್ಲ, ಇದಕ್ಕೆ ಏನು ಕಾರಣ?". ಪರಮೇಶ್ವರ "ಅಯ್ಯೋ ಪಾರ್ವತಿ, ಈ ಸುದ್ದಿ ನಿನಗೆ ಬ್ಯಾಡ. ನಮ್ಮ ಚಂಚಾರ ಮುಗಿಸಿಕೊಂಡು ನಮ್ಮ ಗೋಟಿಗೆ ನಾವು ಹೊಗಾನೆ ಬಾ. ಆ ಈ ಸುದ್ದೀನೆಲ್ಲ ಕಟ್ಕೊಂಡು ನಮಗೇನು?" ಅಂದ. ಆದರೆ ಪಾರ್ವತಿ ಹಿಡಿದ ಹಟ ಬಿಡಲಿಲ್ಲ. "ಏನೇ ಆಗಲಿ ಶಿವರಾಯ. ಇದಕ್ಕೇನು ಕಾರಣ ನೀನು ಹೇಳಲೇ ಬೇಕು. ನೀನು ಹೇಳದೆ ಇದ್ದರೆ ನಾನು ಮುಂದಕ್ಕೆ ಮೂರ್ಹೆಜ್ಜೆ ಬರೋದಿಲ್ಲ" ಅಂದಳು. ಶಿವನಿಗೆ 'ಉಬೇ ಸಂಕಟ'ವಾಯಿತು. "ಈ ಕೊಣ ಕಟ್ಟಿಸಿರೋನು ಒಬ್ಬ ದೊರೆ. ಅವನು ಹಿಂದಿನ ಜಲ್ಮದಲ್ಲಿ ಬಾಳ ಪಾಪ ಮಾಡದೋನು. ಅದರಿಂದ ಇವನು ಏನು ಮಾಡಿದರೂ ಈ ಕೊಣದಲ್ಲಿ ನೀರು ಬಂದಿಲ್ಲ" ಅಂದ ಶಿವ. "ಅಯ್ಯೋ ಪಾಪ" ಅಂದುಕೊಂಡಳು ಪಾರ್ವತಿ, "ಶಿವರಾಯ, ಹಂಗಾದರೆ ನಾನು ಈ ಕೊಣದಲ್ಲಿ ನೀರು ಬರಿಸ್ನೇಬೇಕು. ಅಲ್ಲೀಗಂಟ ನಾನು ಮುಂದಕ್ಕೆ ಬರೋದಿಲ್ಲ" ಅಂತ ಹಟ ಹಿಡಿದಳು. ಶಿವ 'ಬ್ಯಾಡ ಬ್ಯಾಡ' ಅಂತ ಬೇಕಾದಷ್ಟು ಹೇಳಿದ. ಆದರೂ ಪಾರ್ವತಿ ಹಿಡಿದ ಹಟ ಬಿಡಲಿಲ್ಲ, ಮುಂದಕ್ಕೆ ಹೆಜ್ಜೆ ಹಾಕಲಿಲ್ಲ. ಸರಿ, ಶಿವ ಪಾರ್ವತಿ ಇಬ್ಬರೂ ಜಂಗಮ ಜಂಗಮತಿಯರಾಗಿ ಕೊಣದ ಹತ್ತಿರ ಬಂದರು. ಕೊಣದ ನಾಕು ಮೂಲೇನೂ ಒಂದು ಸತಿ ಬಳಸಿದರು. ಆ ಮೇಲೆ ನಾಕು ಮೂಲೆಗೂ ನಾಕು 'ಈಬೂತಿ'ಗಟ್ಟಿ ಇಟ್ಟು ಜಲದ ಕಣ್ಣಿಗೆ ಅಡ್ಡವಾಗಿದ್ದ ಜಲಭೂತ ಬಿಡಿಸಿದರು. ಕಣ್ಣು ಮುಚ್ಚಿ ಕಣ್ಣು ಬುಡೋ ಅಷ್ಟರಲ್ಲಿ ನೀರು ಎಕ್ಕಾಸವಾಗಿ ತುಂಬಿ ಉಕ್ಕಂದವಾಗಿ ಹರೀತು. ಶಿವ ಪಾರ್ವತಿ ಇಬ್ಬರೂ ಮೂರು ಮೂರು ಬಗಸೆ ನೀರು ಕುಡಿದರು. ಅವರಿಗೆ ದೇವಲೋಕದ 'ಅಮೂರ್ತ' ಕುಡಿದಷ್ಟು 'ನಿಪ್ಪಣ' ವಾಯಿತು. ಅಷ್ಟರಲ್ಲಿ ಸುತ್ತಮುತ್ತ ದನಕಾಯುತಿದ್ದ ಹಕ್ಕಳು ಓಡೋಡಿ ಬಂದರು. ಒಬ್ಬ ಕೊಣಕ್ಕೆ ನೀರು ಬಂದ ಸುದ್ದಿ ತಿಳಿಸಲು ದೊರೆಯ ಹತ್ತಿರಕ್ಕೆ ಹೋದ. ಶಿವ ಪಾರ್ವತಿ ಇಬ್ಬರೂ ತಾವು ಮಡಗಿದ್ದ 'ಈಬೂತಿ' ಗಟ್ಟಿಗಳನ್ನು ತೆಗೆದುಕೊಂಡು ಮಾಯವಾಗಿ ಹೋದರು. ಸುತ್ತ ಮುತ್ತ ನಿಂತಿದ್ದ ಹಕ್ಕಳು ಸುಮ್ಮನೆ ಕಣ್ಣು ಕಣ್ಣು ಬಿಟ್ಟರು. ಅಷ್ಟು ಹೊತ್ತಿಗೆ ದೊರೆ ಕೊಣದ ಹತ್ತಿರ ಬಂದ. ಅವನು ಬರುವ ಹೊತ್ತಿಗೆ ನೀರು ಬತ್ತಿತ್ತು. ಅವನ ಆಸೆಯೆಲ್ಲಾ ನಿರಾಸೆ ಆಯಿತು. ಅಲ್ಲಿದ್ದ ಹಕ್ಕಳು ಹೇಳಿದರು:

"ಆ ಜಂಗಮಯ್ಯ ಮತ್ತೆ ಅವನ ಹೆಡ್ತಿ ಇಬ್ರೂವೆ ನಾವು ನೋಡ್ತಿದ್ದ ಹಂಗೇ ಕೊಣಕೆ ಇಳಿದು ಮೂರು ಮೂರು ಬಗಸೆ ನೀರು ಕುಡಿದರು. ಆಮೇಲೆ ಮೇಲಕ್ಕೆ ಹತ್ತಿ ನಾಕು ಮೂಲೇಲೂ ಮಡಗಿದ್ದ ಈಬೂತಿ ಗಟ್ಟಿ



ಎತ್ಕೊಂಡ್ರು. ನಾವು ಕಣ್‌ಬುಟ್ಕೊಂಡಿದ್ದ ಹಂಗೇ ಒಂದೇ ಅರೆಕ್ಷಣದಲ್ಲಿ ಮಾಯವಾಗ್ಬುಟ್ರು. ಅವರು ಮಾಯವಾದ ಕೂಟ್ಲೆ ನೀರು ಜರ್ರನೆ ಇಳಿದು ಹೋಯ್ತು."

ದೊರೆ ಹಣೆ ಹಣೆ ಚಚ್ಚಿಕೊಂಡ 'ನಾನು ಯಾವ ಪಾಪ ಮಾಡಿದ್ಯ್ನಪ್ಪಾ ಭಗವಂತಾ' ಅಂದುಕೊಂಡ. ಸುಮ್ಮನೆ ಹುಚ್ಚು ಬಂದಂತೆ ಆ ಕಾಡಿನ ದಾರಿಯಲ್ಲಿ ಓಡಿದ. ಹುಲಿ ಸಿಂಹ ಆನೆ ಮೊದಲಾದ 'ಕೂರ ಪರಾಣಿ'ಗಳು ತುಂಬಿದ್ದ ಆ ಮಹಾಂತ ಅಡವಿಯಲ್ಲಿ ದೊರೆ ಓಡಿದ ಓಡಿದ ಓಡಿದ. ಮುಂದೆ ಶಿವ ಪಾರ್ವತಿ ಹೋಗುತ್ತಿದ್ದರು. ದೊರೆ ಬಿದ್ದಂಬೀಳ ಬಂದು ಅವರ ಎದುರಿಗೆ ನಿಂತುಕೊಂಡ.

"ದೇವರೇ ನನ್ನ ಯಾವ ಪಾಪಕ್ಕೆ ಈ ಸೀಕ್ಸೆ ಕೊಟ್ಟಿದ್ದೀರಿ. ನಾನು ಅಷ್ಟೊಂತ್ವಾರ ದುಡ್ಡು ಖರ್ಚು ಮಾಡಿ ಕೊಣ ಕಟ್ಟಿಸಿದೆ. ಬೆಳ್ಳಲಿ ಮುಟ್ಟಾಕೂ ಒಂದು ತೊಟ್ಟು ನೀರು ಅದರಲ್ಲಿ ಬರಲಿಲ್ಲ. ಇದಕ್ಕೇನು ಮಾಡ್ಬೇಕು ಹೇಳಿ. ಇಲ್ಲೇ ಇದ್ರೆ ತಮ್ ಪಾದದ ಮೇಲೆ ನನ್ನ ಪರಾಣ ಬುಟ್ ಬುಡ್ತೀನಿ" ಅಂತ ದೊರೆ ಅಂಗಲಾಚಿ ಕೇಳಿದ. ಪಾರ್ವತಿ ಪರಮೇಶ್ವರರು ಹೇಳಿದರು :

"ನೋಡು ಈ ಜಲ್ಮದಲ್ಲಿ ನೀರು ನಿನ್ನ ಕೊಣಕೆ ಬರೋದಿಲ್ಲ. ಬಂದೇ ಬರಬೇಕು ಅಂತ ನಿನಗೆ ಮನಸಿದ್ರೆ ನಿನ್ನ ಇರೋನ ಒಬ್ಬ ಮಗನ ಬಸಿರಿ ಹೆಡ್ತೀ ತಂದು ಕೊಣಕ್ಕೆ ಅವುತಿ ಕೊಡಬೇಕು. ಹಂಗಾದ್ರೆ ನೀರು ಸಮುದ್ರವಾಗಿ ಬತ್ತದೆ."

ಇಷ್ಟು ಹೇಳಿ ಅವರು ಮಾಯವಾದರು. ದೊರೆ ಜೋಲು ಮೋರೆ ಹಾಕಿಕೊಂಡು ಅರಮನೆಗೆ ಬಂದ. ಅವನಿಗೆ ಊಟ ತಾನ ಮಡಿ ರಾಜ್ಯಕೋಶ ದೇವರು ದಿಂಡರು ಏನೂ ಬೇಕಾಗಲಿಲ್ಲ. ಮಂಚದ ಮೇಲೆ ಮುಸುಗು ಹಾಕಿಕೊಂಡು ಮಲಗಿ ಬಿಟ್ಟ. ಯಾರು ಏಳಿಸಿದರೂ ಏಳಲಿಲ್ಲ. ಮೊಖಾನೂ ತೊಳಿಯಲಿಲ್ಲ. ಬಸಿರಿಯಾಗಿದ್ದ ಸೊಸೆ ಮಾವನಿಗೆ ನೀರು ಕೊಡಲು ಹೋದಳು. "ಊಟಕ್ಕೆ ನೀರು ತಕ್ಕೊಳ್ಳಿ ಮಾವಯ್ಯ" ಅಂದಳು

"ಅಯ್ಯೋ ನಿನ್ನೂಟ ಯಾರಿಗೆ ಬೇಕು ತಾಯಿ? ಈ ಜಲ್ಮ ಇದ್ರೇನು, ಸತ್ರೇನು? ಈ ಪಾಪಿ ದೇಹ ಹೊತ್ಕೊಂಡು ಭೂಮಿಗೆ ಭಾರವಾಗಿ ಬದ್ಕಿರೋದ್ಕಿಂತ ಸಾಯೋದೇ ಲೇಸು" ಅಂದ ರಾಜ.

"ಯಾಕ್ ಮಾವಯ್ಯ ಹಂಗಂತೀರಿ, ನಿಮಗೆ ಏನು ಅಂತಾ ಯೇಚ್ನೆ? ನನ್ನಿಂದೇನಾರೂ ತಪ್ಪಾಗಿದ್ದಾದಾ?" ಅಂತ ಕೇಳಿದಳು ಸೊಸೆ.

"ಇಲ್ಲಾ ತಾಯಿ, ನಿಂದೇನೂ ತಪ್ಪಿಲ್ಲ. ಎಲ್ಲಾ ನನ್ನ ಕರ್ಮ"

"ಈಗ ಏನಾಯ್ತು ಹೇಳಿ ಮಾವಯ್ಯ"

"ಸುಮ್ಮನೆ ಕಲ್ಲುಸುರಿದ್ದಂಗೆ ದುಡ್ಡು ಸುರಿದು ಕೊಣ ಕಟ್ಟಿಸಿದೆ. ಒಂದು ತೊಟ್ಟೂ ನೀರು ಬರಲಿಲ್ಲ. ಅದನ್ನ ನೋಡಿದರೆ ನನ್ನ ಹೊಟ್ಟೆ ಸುಣ್ಣ ಹೂದಂಗೆ ಆಯ್ತದೆ. ಜನೆಲ್ಲಾ ನಾನು ಪಾಪಿ ಅಂತ ಕುಂಡಿ ಬಡಕೊಂಡು ನಗ್ತಾರೆ. ನಾನು ಬದುಕಿದ್ದೂ ಸತ್ತಂಗಾಗಿವ್ನಿ"

"ಯಾರ್ನಾದ್ರೂ ಬಲ್ಲೋರ ಕೇಳಿ ಮಾವಯ್ಯಾ, ನೀರು ಬರಾಕೆ ಏನ್ಮಾಡ್ಬೇಕೂ ಅಂತ"

"ಎಲ್ಲಾ ಕೇಳಿದ್ದಾಯಿತು ತಾಯಿ. ಆದರೆ ಅದು ಆಗೋದಲ್ಲ, ಹೋಗೋದಲ್ಲ."

"ಏನಂದ್ರು ಹೇಳಿ ಮಾವಯ್ಯ" ಅಂತ ಸೊಸೆ ಮತ್ತೆ ಮತ್ತೆ ಪೀಡಿಸಿದಳು. ದೊರೆ ಪಾರ್ವತಿ ಪರಮೇಶ್ವರರು ಹೇಳಿದ್ದನ್ನು ಸೊಸೆಗೆ ತಿಳಿಸಿದ. ಅವಳು ಒಂದಿಷ್ಟೂ ಹಿಂದೆ ಮುಂದೆ ನೋಡಲಿಲ್ಲ. ದಿಟ್ಟವಾಗಿ ಹೆದರಿಕೆ ಬಯ ಒಂದು ಚೂರೂ ಇಲ್ಲದೆ ಹೇಳಿದಳು :

"ಇದಕ್ಕೆ ಯಾಕೆ ಯೋಚನೆ ಮಾಡ್ತೀರಿ ಮಾವಯ್ಯ. ನಿಮ್ಮ ಮನೇಮರ್ಯಾದೆಗಿಂತ ನನ್ನ ಪರಾಣ ದೊಡ್ದಾ? ನಾನೊಬ್ಬಳು ಸತ್ತರೆ ನನ್ನಂತೋರ ಸಾವರ ಜನ ಬೇಕಾದ್ರೂ ತಂದು ನಿಮ್ಮಗನಿಗೆ ಮದುವೆ ಮಾಡ್ತೀರಿ. ಏಳಿ ಏಳಿ ಊಟಾ ಮಾಡಿ. ನನ್ನ ತಕ್ಕೊಂಡು ಹೋಗಿ ಕೊಣಕ್ಕೆ ಬಲಿ ಕೊಡಿ. ನೀರು ತುಂಬಿ ಜನ ದನ ಕುಡಿದರೆ ಏಳೇಳು ಜಲ್ಮದ ಪುಣ್ಯ ನಂಗೆ ಬತ್ತದೆ."

ಸೊಸೆಯ ಮಾತು ಕೇಳಿ ದೊರೆಗೆ ಆನಂದವಾಯಿತು. "ನನ್ನ ಮನೇ ಮಾನ ಉಳಿಸಿದ ಭಾಗ್ಯದ ದೇವತೆ ಕಣವ್ವ ನೀನು" ಅಂದು ಕೈತೊಳೆದು ಊಟ ಮಾಡಿದ.

ಹೊತ್ತಾರೆ ಹೊತ್ತಿಗೆ ದಂಡೆತ್ತಿ ಹೋಗಿದ್ದ ದೊರೆಯ ಮಗ ಜಯ ಪಡಕೊಂಡು ಬಂದ. ಅರಮನೆಯ ಮುತ್ತೈದೆಯರೆಲ್ಲ ಕಳಸ ಕನ್ನಡಿ ಹಿಡಕೊಂಡು ಹೆಬ್ಬಾಗಿಲಿಗೆ ಬಂದು ಅವನನ್ನ ಎದುರುಗೊಂಡರು. ಮೇಲೆ ಹೂವು ಚೆಲ್ಲಿದರು. ಆರತಿ ಹಿಡಿದರು, ರತನೀರು ಮಾಡಿ ಸುತ್ತ ಚೆಲ್ಲಿದರು. ದೊರೆ ಮಗ ಸುತ್ತ ಮುತ್ತ ನೋಡಿದ. ಆ ಮುತ್ತೈದೆಯರ ಗುಂಪಿನಲ್ಲಿ ತನ್ನ ಹೆಡ್ತಿ ಕಾಣಲಿಲ್ಲ, ಅವನ ಮೊಖ ಮಂಕಾಯಿತು, ಮನಸ್ಸಿಗೆ ಬಾಳ ಸಿಂತೆ ಆಯಿತು. ಬಿರಬಿರನೆ ಅರಮನೆಗೆ ಬಂದ. ಹೆಡ್ತಿ ವಳಗೆ ಇದ್ದಳು. ಅವಳ ಮೊಖ ನೋಡಿದ ಮೇಲೆ ಅವನಿಗೆ ಒಂದೀಟು ಸಮಾಧಾನ ಆಯಿತು.

"ನೀನು ಏನು ಕಾರಣ ಆರತಿ ಹಿಡಿಯಾಕೆ ಬರಲಿಲ್ಲ" ಅಂತ ಕೇಳಿದ.



"ಆಯಸ್ಸು ಇಲ್ದೋರು, ಬಾಳೋರು ಬದುಕೋರಿಗೆ ಆರತಿ ಹಿಡೀಬಾರ್ದು" ಅಂದಳು.

'ಹಂಗಂದರೆ ! ನಿನಗೇನು ಆಯಸ್ಸಿಲ್ವಾ? ನೀನೇನು ಮುದುಕಿಯಾ? ಯಾರು ಹಂಗಂದರು" – ದೊರೆ ಮಗ ಆತುರಾತುರವಾಗಿ ಕೇಳಿದ,

"ನಾಳೆ ಇಷ್ಟು ಹೊತ್ತಿಗೆ ನನಗೆ ನಿಮ್ಮ ಕೈಲಿ ಮರಣ!" ಅಂದಳು.

ದೊರೆಮಗನಿಗ ಇದರ ತಲೆ ಬುಡ ಒಂದೂ ತಿಳಿಯಲಿಲ್ಲ. ಅವನಿಗೆ ಕಕಮಕರು ಬಂದಂತಾಯಿತು.

"ಯಾಕೆ ಹಿಂಗೆಲ್ಲಾ ಮಾತಾಡ್ತೀಯಾ? ಏನಾಯ್ತು ಹೇಳು" ಅಂದ.

"ಆಮ್ಯಾಲೆ ಹೇಳ್ತೀನಿ, ಈಗ ಸುಮ್ಮನಿರಿ" – ಅಂದಳು.

ರಾತ್ರೆ ಸಜ್ಜೆ ಮನೆಯಲ್ಲಿ ಬಾಳ ಹಿಂಸೆ ಮಾಡಿ ಹೆಡ್ತಿಯನ್ನು ಕೇಳಿದ. ಅವಳು ನಡೆದ ಸಮಾಚಾರವನ್ನು ಒಂದೀಟೂ ಮರೆಮಾಚದೆ ಗಂಡನಿಗೆ ವರದಿ ಒಪ್ಪಿಸಿದಳು. ಅವನಿಗೆ ಎಲ್ಲೂ ಇಲ್ಲದ ದುಃಖವೇ ಬಂದು ಬುಡ್ತು. 'ಇಂಥ ಚಿನ್ನದಂಥ ಹೆಡತೀಯ ನನ್ನ ಕೈಯಾರೆ ಹ್ಯಂಗೆ ಕಡಿಯೋದು?' ಅಂತ ಬಾಳ ಯೋಚನೆ ಮಾಡಿದ. 'ಅಪ್ಪ ಹೇಳಿದಂತೆ ಹೆಡತಿ ತಲೇ ಕಡೀದೇ ಇದ್ದರೆ ಇವನೆಂಥ ಮಗ ಅಂತ ಜನ ಆಡ್ಕೋತ್ತಾರೆ. ಕಡಿದರೆ ನಂಗೆ ಹೆಂಗಸು ಕೊಂದ ಪಾಪ ಸುತ್ತಿಕೊತ್ತದೆ. ಅದೂ ಅಲ್ದೆ ಇಂಥ ರತ್ನದಂಥ ಹೆಡತಿ ನನಗೆ ಇನ್ನೆಲ್ಲಿ ಸಿಕ್ತಾಳೆ. ಅದಲ್ದೆ ಈಗ ಅವಳು ಎರಡು ಜೀವದೋಳು' ಅಂತ ಯೋಚನೆ ಮಾಡಿದ. ಕೊನೆಗೆ "ಈ ದೇಸದಲ್ಲಿ ಇರೋದೂ ಬ್ಯಾಡ, ಹೆಡತಿ ಕಡಿಯೋದೂ ಬ್ಯಾಡ, ಪಾಪ ಕಟ್ಕೊಳೋದೂ ಬ್ಯಾಡ. ಎಲ್ಲಾದರೂ ಯಾರೂ ಕಾಣದ ಹಂಗೆ ದೂರಕ್ಕೆ ಹೋಗಿಬುಡಬೇಕು" ಅಂತ ತೀರ್ಮಾನ ಮಾಡಿಕೊಂಡ. ಇನ್ನೂ ಬೆಳಕು ಹರಿಯೋಕಿಂತ ಮುಂಚೆ ಎದ್ದು ಹೆಡತೀನೂ ಕರಕೊಂಡು ಅರಮನೆ ಬುಟ್ಟು ಹೊಂಟೇ ಬುಟ್ಟ.

ಹೋದರು ಹೋದರು ಹೋದರು, ಸೂರ್ಯನ ಕಿರಣವೇ ಬೀಳದಂಥ ಕಗ್ಗಾಡಿಗೆ ಹೋಗಿ ಬಿಟ್ಟರು. 'ಗವ್' ಅನ್ನೋ ಕತ್ತಲೆ. ಕಲ್ಲು ಮುಳ್ಳು. ಅದರಲ್ಲೇ ಹ್ಯಂಗೋ ಎಡವುತ್ತಾ ಮುಗ್ಗರಿಸುತ್ತಾ ಮುಂದು ಮುಂದಕ್ಕೆ ಹೋದರು. ಹೊತ್ತು ನೆತ್ತಿಗೆ ಬರೋಗಂಟ್ಲು ನಡೆದರು. ಆಗ ಕಾಡಿನಲ್ಲಿ ಒಂದಿಷ್ಟು ಬೆಳಕಾಯಿತು. ಹೆಡತೀಗೆ ಆಗಲೇ ಒಂಬತ್ತು ತಿಂಗಳು. ಒಂದೇ ಸಮನೆ ನಡೆದೂ ನಡೆದೂ ಬಾಳ ಆಯಾಸವಾಯಿತು. ಹೊತ್ತಾರೆಯಿಂದ ಮೊಖಾನೂ ತೊಳೆದಿರಲಿಲ್ಲ. ಕಾಲು ಬರದೇ ಹೋದವು. "ಅಸ್ ..... ನಂಗಿನ್ನು ನಡಯಕಾಗಾಕಿಲ್ಲ" ಅಂತ

ಕೆಳಕ್ಕೆ ಕೂತೇ ಬಿಟ್ಟಳು.

"ನಂಗೆ ಬಾಯಾರಿ ಜೀವ ಹೋಯ್ತಾ ಅದೆ. ಎಲ್ಯಾರು ಒಂದಿಷ್ಟು ನೀರು ತಂದುಕೊಡಿ" ಅಂದಳು. ದೊರೆ ಮಗ ಸುತ್ತ ಮುತ್ತ ದಪ್ಪ ದಪ್ಪ ಕಡ್ಡೀ ಮುರಿದು ಸೊಪ್ಪು ತಂದು ಒಂದು ಗುಡ್ಲು ಹಾಕಿದ. ಅದರಲ್ಲಿ ಒಂದಿಷ್ಟು ಹೊಂಗೆ ಗಿಂಗೆ ಸೊಪ್ಪು ಮುರಿದು ಹಾಕಿ ಹಾಸಿಗೆ ಮಾಡಿದ. ಅವಳನ್ನು ಅದರಲ್ಲಿ ಕೂರಿಸಿ ತಾನು ಒಂದು ಮರ ಹತ್ತಿ ನೋಡಿದ. ದೂರದಲ್ಲಿ ಎಲ್ಲೋ ಒಂದು ಸೂಜಿ ಗಾತ್ರ ಹೊಗೆ ಕಡೀತಾ ಇತ್ತು. ಕೆಳಕ್ಕೆ ಇಳಿದು ಆ ಹೊಗೆ ಕಂಡ ದಿಕ್ಕಿನಲ್ಲಿ ಹೊರಟ. ದಾರಿ ಗುರುತಿಗೆ ಸೊಪ್ಪು ಮುರಿ ಮುರಿದು ಹಾಕುತ್ತಾ ಹೋದ. ಎಷ್ಟೋ ದೂರ ಹೋದ ಮೇಲೆ ಒಂದು ಪಟ್ಟಣ ಸಿಕ್ಕಿತು. ಆ ಊರಲ್ಲಿ ಒಂದು ನರಪಿಳ್ಳೆಯೂ ಇರಲಿಲ್ಲ. ಒಂದು ಬೊಮ್ಮ ರಾಕ್ಷಸ ಆ ಜನಾನೆಲ್ಲ ತಿಂದು ಹಾಕಿತ್ತು. ಆ ಊರ ಹೆಬ್ಬಾಗಿಲಲ್ಲಿ ಒಂದು ಬಾವಿ ಇತ್ತು. ಬಾವಿಗೆ ಹಗ್ಗವೂ ಇತ್ತು. ಒಂದು ದಪ್ಪ ಗಿಂಡೀನೂ ಇತ್ತು. ಸರಿ, ಗಿಂಡಿಗೆ ಹಗ್ಗ ಕಟ್ಟಿ ದೊರೆ ಮಗ ಬಾವಿಗೆ ಬಿಟ್ಟ. ಅಲ್ಲೊಂದು ಹಡಿಕಾಗೆ ಕೂತಿತ್ತು. ಅದು ರಾಕ್ಷಸಿಯ ಕಾಗೆ, 'ಯಾರಾದರೂ ನರಮನುಷ್ಯರು ಬಂದರೆ ಸುದ್ದಿ ಮುಟ್ಟಿಸು' ಅಂತ ರಾಕ್ಷಸಿ ಅದನ್ನು ಬಾವಿ ಕಾವಲಿಗೆ ಹಾಕಿತ್ತು. ಅದು ಈಗ ಒಂದೇ ಸಮನೆ 'ಕಾ ಕಾ, ಕಾ ಕಾ, ಕಾ ಕಾ' ಅಂತ ಬಡುಕೊಂಡಿತು. ದೊರೆ ಮಗ ನೀರು ಸೇದಿ ಬಾವಿ ಕಟ್ಟೇ ಮೇಲೆ ಮಡಗಿದ. ಬಾಯಿಬುಟ್ಟುಕೊಂಡು ರಾಕ್ಷಸ ಬಂದೇ ಬಿಟ್ಟಿತು. ಇವನನ್ನ ಒಂದೇ ಸತಿಗೆ ಬಾಯಿಗೆ ಹಾಕಿಕೊಂಡೇ ಬಿಟ್ಟಿತು. ಗಿಂಡಿ ಹಗ್ಗ ಮಾತ್ರ ಹಂಗೇ ಉಳಿಯಿತು.

೨

ಬಾಯಾರಿ ಗಂಟಲೊಣಗಿ ಹೆಂಡತಿ ಗಂಡ ಈಗ ಬರುತ್ತಾನೆ. ಆಗ ಬರುತ್ತಾನೆ, ಇನ್ನೊಂದುಗಳಿಗೆಗೆ ಬರುತ್ತಾನೆ ಅಂತ ಕಾದಳು ಕಾದಳು. ಅವನ ತಲೆ ಕಾಣಲಿಲ್ಲ. 'ಸುಖವಾಗಿ ಒಂದೇ ಏಟಿಗೆ ಕೊಣಕೆ ಬಲಿಯಾಗೋಳನ್ನು ಕರಕೊಂಡು ಬಂದು ಇಲ್ಲಿ ಕಾಡು ಹೆಣ ಮಾಡಿದರಲ್ಲಾ' ಅಂತ ಗೋಳಾಡಿದಳು, ಅತ್ತಳು, ಕರೆದಳು. ಅವಳ ವಾಂಕಾರ ಶಿವನಿಗೇ ಪ್ರೀತಿ.

ಸಮ ಸಮ ಹೊತ್ತು. ಸುತ್ತ ಮುತ್ತ ಎಲ್ಲೆಲ್ಲೋ ಹುಲಿ ಗಟರು, ಎಂಥದ್ದೋ ಶಬ್ಧ. ಬಾಳ ಭಯವಾಯಿತು. ಹೆರಿಗೆ ಸಮಯ. ಆ ನೋವು ತಡೀಲಾರದೆ ಪಡಬಾರದ ಕಷ್ಟಪಟ್ಟಳು. ಅಷ್ಟು ಹೊತ್ತನಲ್ಲಿ ಅಲ್ಲೇ ಎಲ್ಲೋ ಇದ್ದ ಒಂದು ಕೊಣಕ್ಕೆ ದೇವಗನ್ನೇರು ಜಲಕ್ರೀಡೆಗೆ ಬಂದಿದ್ದರು. ಅವರು ನೀರಾಟ ಆಡುತ್ತಿದ್ದಾಗ ಅಳೋದು ಕೇಳಿಸಿತು. 'ಯಾರೋ ನರಮನುಷ್ಯರು ಅಳೋದು ಕೇಳಿಸ್ತದೆ



ಪಾಪ, ಏನು ಕಷ್ಟವೋ ಏನೋ ನೋಡಿಕೊಂಡು ಬರಾನೆ' ಅಂತ ಆ ಏಳು ಜನ ಅಕ್ಕತಂಗೇರೂವೆ ಮಾತಾಡಿಕೊಂಡು ಈ ಸೊಪ್ಪಿನ ಗುಡ್ಲಿಗೆ ಬಂದರು. ಹೊಟ್ಟೆನೋವು ಬಂದು ಅವಳು ಮಿಲಿ ಮಿಲಿ ವದ್ದಾಡುತ್ತಿದ್ದಳು. ಅವರು ಮಂತ್ರದ ನೀರನ್ನ ಅವಳ ಮೇಲೆ ಚಿಮುಕಿಸಿದರು ಆಗ ವದ್ದಾಡೋದನ್ನ ನಿಲ್ಲಿಸಿದಳು. ಸುಖವಾಗಿ ಮೈಯ್ಯಾರಿಂಗಿದಳು. ಆಗ 'ಏನು ವಿಷಯ?' ಅಂತ ದೇವಗನ್ನೇರು ಕೇಳಿದರು. ಅವಳು ನಡೆದದ್ದನ್ನೆಲ್ಲಾ ಹೇಳಿದಳು. ಆಗ ಅವರಿಗೆ ಬಾಳ ಕನಿಕರ ಬತ್ತು. "ನೀನೇನೂ ಯೋಚನೆ ಮಾಡಬ್ಯಾಡ. ನಾವು ಮಂತ್ರದಿಂದ ಹಾಲುಗೊಣ ನೀರುಗೊಣ ಮಾಡ್ತೀವಿ. ಸುತ್ತ ಮುತ್ತ ಬೇಕಾದಷ್ಟು ಹಣ್ಣು ಹಂಪಲು ಅವೆ. ತಿಂದು ಕೊಂಡು ಸುಖವಾಗಿರು. ನಿನಗೇನಾದ್ರೂ ಕಷ್ಟ ಬಂದ್ರೆ ನಮ್ಮ ನೆನಕೋ. ಬಂದು ಸಾಯಾ ಮಾಡ್ತೀವಿ" ಅಂತ ಅವಳಿಗೆ ಅಭಯ ಕೊಟ್ಟರು. ಅವರ ಲೋಕಕ್ಕೆ ಅವರು ಹೊಂಟು ಹೋದರು.

ಅವಳು ಮಗುವನ್ನ ಕಷ್ಟಪಟ್ಟು ಸಾಕಿದಳು. ನೀರುಗೊಣದಲ್ಲಿ ತಾನ, ಹಾಲು ಗೊಣದ ಹಾಲು ಕುಡುಯೋದು, ಕಾಡಿನ ಹಣ್ಣು ಹಂಪಲು ತಿನ್ನೋದು, ಹಿಂಗೇ ಕಾಲ ಕಳೆದರು. ಹುಡುಗ ಸ್ವಲ್ಪ ದೊಡ್ಡವನಾದ. ಅವನ ರೂಪು ನೋಡಾಕೆ ಎರಡು ಕಣ್ಣೂ ಸಾಲದು. ಸೂಲೀಂದ್ರನಂಗೆ ಉರೀತಿದ್ದ. ಅವನಿಗೆ ಅರಸುಗೋಳ ವಿದ್ಯೆಯಲ್ಲಿ ತುಂಬಾ ಮನ್ನಸ್ಸು. 'ಬಿಲ್ಲು ಬಾಣ ಕೊಡು' ಅಂತ ಅವ್ವನನ್ನ ಪೀಡಿಸುತ್ತಿದ್ದ. ಅವನ ಹಿಂಸೆ ತಡೀಲಾರದೆ ಅವ್ವ ದೇವಗನ್ನೇರನ್ನ ನೆನೆದಳು. ಅವರು ಕೂಡಲೇ ಪ್ರತ್ಯಕ್ಷವಾಗಿ "ನಮ್ಮಿಂದ ಏನಾಗಬೇಕು?" ಅಂತ ಕೇಳಿದರು. "ನನ್ನ ಮಗನಿಗೆ ಬಿಲ್ಲು ವಿದ್ಯೆ ಕಲೀಬೇಕೂಂತ ಆಸೆ. ಅವನಿಗೆ ಬಿಲ್ಲುಬಾಣಕೊಡಿ" ಅಂತ ಕೇಳಿದಳು. ಅವರು "ಆಗಲಿ" ಅಂತ ಹೇಳಿ ತಪಸ್ಸು ಮಾಡಿ ರಾಮನ ಬಿಲ್ಲನ್ನು ಪಡೆದು ಆ ಹುಡುಗನಿಗೆ ಕೊಟ್ಟರು. ತಾವೆಲ್ಲರೂ ಬೆಳ್ಳಕ್ಕಿಯಾಗಿ ಒಂದು ಮರದ ಕೊಂಬೇ ಮೇಲೆ ಕೂತುಕೊಂಡು "ನಮಗೆ ಹೊಡಿ ನೋಡಾನೆ" ಅಂದರು. ಅವನು ಶಿಸ್ತಾಗಿ ಗುರಿಹಿಡಿದು ಹೊಡೆದ. ಅವರೆಲ್ಲಾ ಕೆಳಕ್ಕೆ ಬಿದ್ದರು. ಅವರಿಗೆ ತುಂಬಾ ಸಂತೋಷವಾಯಿತು.

"ಈ ಬಿಲ್ಲನ್ನ ನೆಲಕ್ಕೆ ಮಡಗ ಕೂಡದು, ಬೇರೆಯವರ ಕೈಲಿ ಕೊಡಕೂಡದು" ಅಂತ ಹೇಳಿ ತಮ್ಮ ಲೋಕಕ್ಕೆ ಹೋದರು.

ಹುಡುಗ ಇನ್ನೂ ಸ್ವಲ್ಪ ದೊಡ್ಡವನಾದ. ಕಾಡು ಅವನಿಗೆ ಬೇಜಾರಾಯಿತು. "ಯಾವುದುರಾದರೂ ಪಟ್ಟಣಕ್ಕೆ ಹೋಗಿ ಸೇರಿಕೊಳ್ಳಾನೆ ನಡಿಯಮ್ಮ" ಅಂದ. ಅಪ್ಪ ಸೊಪ್ಪು ಮುರಿದು ಹಾಕಿಕೊಂಡು ಹೋಗಿದ್ದ ದಾರಿಯಲ್ಲೆ ನೆಟ್ಟಗೆ ಹೋದರು.

ರಾಕ್ಷಸ ಪಟ್ಟಣಕ್ಕೆ ಬಂದರು. ಬಾಯಾರಿಕೆಯಾಯಿತು. ನೀರು ಕುಡಿಂನೋಕೆ ಬಾವಿ ಹತ್ತಿರ ಬಂದ. ಅಲ್ಲೇ ಕಾದು ಕೂತಿದ್ದ ಕಾಗೆ ದನಿ ಕೇಳಿದ್ದೇ ತಡ, 'ಆಹಾ' ಅಂತ ಊರಗಲಕ್ಕೆ ಬಾಯಿ ಕಿಸಕೊಂಡು ರಾಕ್ಷಸ ಒಂದೇ ದಾಪಿಗೆ ರಾಜಕುಮಾರನ ಹತ್ತಿರ ಬತ್ತು. ತಕ್ಷಣವೇ ರಾಜಕುಮಾರ ಬಿಲ್ಲಿಗೆ ಬಾಣ ಹೂಡಿ ಗುರಿ ಹಿಡಿದು ರಾಕ್ಷಸನಿಗೆ ಹೊಡೆದ. ಅದು ಬೊಯ್ ಅಂತ ಹೋಗಿ ರಾಕ್ಷಸನ ತೊಡೆ ಬುಡಿಯಿತು. ಚುರುಕು ಮುಟ್ಟಿದಾಗ "ಅಯ್ಯೋ ನನ್ನ ಸಾಯಿಸ್ಬೇಡ, ಸಾಯಿಸ್ಬೇಡ ನಿನ್ನ ದಮ್ಮಯ್ಯ ಅಂತೀನಿ, ನೀನು ಹೇಳಿದಂಗೆ ಕೇಳ್ತೀನಿ. ನನ್ನ ಪರಾಣ ಉಳಿಸೋ ನಮ್ಮಪ್ಪ" ಅಂತ ರಾಕ್ಷಸ ಬಡಕೊಂಡಿತು. ರಾಜಕುಮಾರ ಸುಮ್ಮನಾಗಿ "ನಾನು ಹೇಳಿದಂಗೆ ಕೇಳಿದರೆ ದೊಕ್ಕೇಲಿ ಪರಾಣ ಬುಡ್ತೀನಿ, ಇಲ್ಲದಿದ್ರೆ ಬಾಣದಲ್ಲಿ ನಿನ್ನ ಸುಟ್ಟು ಭುಗಂತರ ಮಾಡ್ ಬುಡ್ತೀನಿ" ಅಂದ. "ಕೇಳ್ತೀನಿ" ಅಂತು ರಾಕ್ಷಸ. "ನಡೀ ನಿನ್ನ ಪಟ್ಟಣ ನೋಡಾನೆ" ಅಂದ ರಜಕುಮಾರ. ರಾಕ್ಷಸ ಮುಂದೆ ಮುಂದೆ ಹೋಯಿತು. ಇವನು ಹಿಂದಗುಟ್ಟೇ ಹೋದ. ರಾಕ್ಷಸ ಪಟ್ಟಣದ ಬೀಗದ ಎಸಳು ಕೊಟ್ಟಿತು. ತೆಗೆದು ನೋಡಿದ. ಅಲ್ಲಿ ಒಂದು ನರಪಿಳ್ಳೆಯೂ ಇಲ್ಲ. ಎಲ್ಲಾ ಪಾಳು ಬಿದ್ದಿತ್ತು. ಯಾವ ಮನೆಗೆ ಹೋಗಿ ನೋಡಿದರೂ ಸಾಮಾನು ತುಂಬಿ ತೂನಮಾನವಾಗಿತ್ತು. ಆ ಮನೆಗಳೋ ಒಂದಕಿಂತ ಒಂದು ಚಂದ. ನೋಡಾಕೆ ಎರಡು ಕಣ್ಣೂ ಸಾಲದು. ಹೀಗೇ ನೋಡ್ತಾ ನೋಡ್ತಾ ಕೊನೇಲಿ ಒಂದು ದೊಡ್ಡ ಉಪ್ಪರಿಗೆ ಮನೇಗೆ ಹೋದರು. ರಾಕ್ಷಸ ಒಳಕ್ಕೆ ಹೋದ ಕೂಡಲೇ ರಾದಕುಮಾರ ಗುಡಕ್ಕನೆ ಈಚೆಗೆ ಬಂದು ಬಾಗಲು ಹೊಚ್ಚಿ ಬೀಗ ಜಡಿದ. 'ಇಲ್ಲಿ ಬಿದ್ದಿರು' ಅಂದುಕೊಂಡು ತಾಯ ಹತ್ತಿರಕ್ಕೆ ಬಂದ. ಬಾವಿಯಿಂದ ಆಗೋವಷ್ಟು ನೀರು ಸೇದಿ ಕುಡಿದರು. ಆ ಮೇಲೆ ತಾಯೀನೂ ಕರಕೊಂಡು ಪಟ್ಟಣಕ್ಕೆ ಬಂದ. ಬೇಕಾದ್ದಂಗೆ ಅಟ್ಟುಕೊಂಡು ಉಣಕೊಂಡು ಸುಖವಾಗಿ ಇದ್ದರು. ರಾಜಕುಮಾರ ಇಳ್ಪೊತ್ತು ಪಟ್ಟಣದಲ್ಲೇ ತಾಯಿ ಜೊತೇಲಿ ಇರುತ್ತಿದ್ದ. ಹಗಲು ಹೊತ್ತು ಸುತ್ತಮುತ್ತ ಸಂಚಾರ ಮಾಡಿಕೊಂಡು ಬರಾಕೆ ಹೋಗುತ್ತಾ ಇದ್ದ. ಹೋಗುವಾಗ ತಾಯಿಗೆ ಬೀಗದೆಸಳು ಕೊಟ್ಟು "ಅವ್ವಾ ನೀನು ಈ ಪಟ್ಟಣದಲ್ಲಿ ಯಾವ ಮನೆಗೆ ಬೇಕಾದರೂ ಹೋಗು. ಆದರೆ ಆ ಕಡೇಲಿರೋ ಉಪ್ಪರಿಗೆ ಮನೆ ಬೀಗಮಾತ್ರ ತಗೀಬ್ಯಾಡ" ಅಂತ ಹೇಳುತ್ತಿದ್ದ.

ಒಂದು ದಿನ ಮಗ ಹೊರಕ್ಕೆ ಹೋಗಿದ್ದಾಗ ತಾಯಿಗೆ ತುಂಬಾ ಬೇಜಾರಾಯಿತು. ಮೊದಲೇ ಸ್ತ್ರೀ ಬುದ್ಧಿ ಚಂಚಲ. 'ನನ್ನ ಮಗ ಯಾವುದಕ್ಕೂ ಅಡ್ಡಿಮಾಡಿಲ್ಲ. ಆದರೆ ಆ ಕೊನೇ ಮನೆಗೆ ಮ್ಯಾತ್ರ ಹೋಗಬ್ಯಾಡ ಅಂದವನೆ.



ಅಲ್ಲಿ ಏನಿರಬಹುದು? ಇವತ್ತು ಏನಾದರೂ ಆಗಲಿ. ನೋಡೇ ಬುಡಬೇಕು' ಅಂದುಕೊಂಡು ಹೋಗಿ ಆ ಉಪ್ಪರಿಗೆ ಬಾಗಲು ತೆಗೆದಳು. ಒಳಗಿದ್ದ ರಾಕ್ಷಸ 'ಹಾ' ಅಂತ ಬಾಯಿ ಕಿಸಕೊಂಡು ಬತ್ತು. ಅವಳ ಮೈಲಿ ಜಲಜಲ ಅಂತ ರಟ್ಟೆಗಾತ್ರ ಬೆವರು ಕಿತ್ತುಕೊಂಡಿತು. "ಅಯ್ಯೋ ಅಯ್ಯೋ ರಾಕ್ಷಸಪ್ಪಾ, ನನ್ನ ನುಂಗಬ್ಯಾಡ. ನಿನ್ನ ದಮ್ಮಯ್ಯಾ ಅಂತೀನಿ, ನೀನು ಹೇಳಿದ್ದಂಗೆ ಕೇಳ್ತೀನಿ" ಅಂತ ಅಂಗಲಾಚಿದಳು. ರಾಕ್ಷಸ ಒಂದು ಸಲ ಅವಳನ್ನ ಕಾಲಿನಿಂದ ತಲೇಗಂಟ ದುರುದುರನೆ ನೋಡಿತು.

"ನಾನು ಹೇಳಿದ್ದಂಗೆ ಕೇಳ್ತೀಯೋ?" ಅಂತು.

"ಹ್ಞೂ."

"ತಪ್ಪಿದರೆ?"

"ಇಲ್ಲ, ಪರ್ಮಾಣವಾಗ್ಲೂ ಮಾತಿಗೆ ತಪ್ಪಾಕಿಲ್ಲ"

"ಸರಿ, ಹಾಗಾದರೆ ನೀನು ನನ್ನ ಹೆಂಡತಿಯಾಗಬೇಕು"

ಅವಳು ಒಂದು ಚಣಹೊತ್ತು ಹಿಂದೆಮುಂದೆ ನೋಡಿದಳು. ಆಗ ರಾಕ್ಷಸ "ಹಾ" ಅಂತ ಬಾಯಿ ತಗೀತು. "ಅಯ್ಯೋ ಬ್ಯಾಡ, ಬ್ಯಾಡ ನೀನು ಹೇಳಿದಂಗೇ ಆಗಲಿ" ಅಂತ ಒಪ್ಪಿದಳು. ಒಬ್ಬರಿಗೊಬ್ಬರು ಭಾಷೆಮಾಡಿಕೊಂಡರು; ಗಂಡ ಹೆಂಡತಿಯಾದರು.

## ೩

'ಏನಾದರೂ ಮಾಡಿ ರಾಜಕುಮಾರನನ್ನು ಕೊಂದು ಹಾಕಬೇಕು' ಅಂತ ರಾಕ್ಷಸ ಹುನಾರು ಮಾಡಿತು. ಒಂದು ದಿನ ರಾಜಕುಮಾರವ ತಾಯಿಯ ಜೊತೆಯಲ್ಲಿ ಎಲಡಕೆ ಹಾಕಿಕೊಳ್ಳುತ್ತಾ ರಾಕ್ಷಸ ಹೇಳಿತು :

"ನೋಡು, ನಮ್ಮ ಈ ಗುಟ್ಟು ಬಾಳ ದಿನ ಉಳಿಯೋಹಂಗಿಲ್ಲ. ನಿನ್ನ ಮಗ ಕಂಡರೆ ನಮ್ಮಿಬ್ಬರ್ನೂ ಜೀವಸಹಿತ ಉಳಿಸೋದಿಲ್ಲ. ಏನಾದ್ರೂ ಮಾಡಿ ಅವನ್ನ ತಗೀಬೇಕು. ಏನಂತೀಯಾ?"

'ಏನ್ ಮಾಡ್ಬೇಕೂ ನೀನೇ ಹೇಳು" ಅಂದಳು ಅವಳು.

"ನೀನು ಇವತ್ತು ನಿನ್ನ ಮಗ ಬರೋಹೊತ್ಗೆ ತಲೇನೋವೂ ಅಂತ ನರಳ್ತಾ ಮನಿಕೊ. ಅವನು ಬಂದು ಕೇಳಿದಾಗ 'ಹುಲಿ ಹಾಲು ಮೊಲದ ಗಿಣ್ಣು ತಂದುಕೊಟ್ರೆ ತಲೆನೋವು ಹುಶಾರಾಯ್ತದೆ' ಅಂತ ಹೇಳು. ಅವನು ತರಾಕೆ ಅಂತ ಹೋಗಿ ಹುಲಿಕೈಲಿ ಸಾಯ್ತಾನೆ. ಆ ಮ್ಯಾಲೆ ನಾವು ಆನಂದವಾಗಿರಬಹುದು!" ಅಂತು ರಾಕ್ಷಸ.

ಸರಿ, ರಾಜಕುಮಾರ ಬರುವ ಹೊತ್ತಿಗೆ ಇವಳು ಜೋರಾಗಿ ನಳ್ತಾ ಮನಗಿ ಕೊಂಡಿದ್ದಳು.

ಅವನು ಗಾಬರಿಯಾಗಿ ಬಂದು, "ಯಾಕವ್ವಾ? ಏನು ಕಾಯಿಲೆ?" ಅಂದ.

"ಅಯ್ಯಯ್ಯೋ, ಇದು ನನ್ನ ಕುಂಡ್ಡೋಗಕೆ ಬಂದದೆ ಕನಪ್ಪಾ. ತಲೆ ಸಿಡಿದು ಹೋಗೋಹಂಗೆ ಒಂದೇ ಸಮನೆ ನೋಯ್ತಾ ಅದೆ. ಕೊಡ್ಲೀಲಿ ಸೀಳಿದಂಗೆ ಆಯ್ತಾ ಅದೆ.. ನೀನು ಹುಟ್ಟೋಕ್ಮುಂಚೆ ಒಂದು ಸತಿ ಇದೇ ಥರಾ ಆಗಿತ್ತು."

"ಆಗ ಏನ್ ಔಸ್ತಿ ಮಾಡ್ಕೊಂಡಿದ್ಯವ್ವ?"

"ಅಯ್ಯೋ .... ನಿಮ್ಮಪ್ಪ ಹುಲೀ ಹಾಲ್ನೂ ಮೊಲದ ಗಿಣ್ಣೂ ತಂದ್ಕೊಟ್ಟಿದ್ರು."

ಆಗ ಒಂದು ಅರಕ್ಷಣಕೆ ಕಾಡಿಗೆ ಹೋದ. ಕಾಡಿನ ನಡೂ ಮಧ್ಯದಲ್ಲಿ ಒಂದು ದೊಡ್ಡ ಪೊದೆ. ಅಲ್ಲಿ ಹುಲಿ ಮರಿ ಹಾಕಿ ಆಹಾರ ತರಾಕೆ ಅಂತ ಎಲ್ಲೋ ಹೋಗಿತ್ತು. ಇವನು ಕಾದು ಕೂತುಗೊಂಡ. ಸ್ವಲ್ಪ ಹೊತ್ತಾದಮ್ಯಾಲೆ ಒಂದು ಸಿಂಹ ಬಂದು ಹುಲೀಮರಿ ತಿನ್ನಾಕೆ ಅಂತ ಅವುಗಳ ಮೇಲೆ ನೆಗೀತು. ರಾಜಕುಮಾರ ಬಿಲ್ಲಿಗೆ ಬಾಣ ಹೂಡಿದ್ದೇ ತಡ, ಒಂದೇ ಏಟಿಗೆ ಅದನ್ನ ಕೊಂದು ಶಿವನಪಾದ ಸೇರಿಸಿದ. ಅಷ್ಟು ಹೊತ್ತಿಗೆ ಆಹಾರ ತಕ್ಕೊಂಡು ಹುಲಿ ಬಂತು. ಮರಿಗಳು ಆಹಾರ ಮುಟ್ಟಲಿಲ್ಲ. "ನೋಡವ್ವ ನಮ್ಮ ಪರಾಣ ಉಳಿಸಿದಾತ ಅಲ್ಲವನೆ. ಅವನು ಬಂದ ಕಾರ್ಯ ನೆರವೇರಿಸಿಕೊಡು. ಆಮ್ಯಾಲೆ ಉಣ್ಣೋದು ಗಿಣ್ಣೋದು ಆಗಲಿ" ಅಂದವು. ಹುಲಿ "ನಿನಗೇನು ಬೇಕಾಪ್ಪಾ?" ಅಂತ ಕೇಳಿತು. ರಾಜಕುಮಾರ ತಾನು ಬಂದ ಕೆಲಸ ಹೇಳಿದ. "ಇಷ್ಟೇ ತಾನೆ?" ಅಂತ ಹೇಳಿ ಅದು ಎಲ್ಲಿಯೋ ಹೋಯಿತು. ಒಂದು ಗಳಿಗೆ ಬುಟ್ಟುಕೊಂಡು ಮತ್ತೆ ಬಂದು ಮೊಲದ ಗಿಣ್ಣು ಕೊಟ್ಟಿತು ; ತನ್ನ ಹಾಲು ಕರೆದುಕೊಟ್ಟಿತು. ಮರಿಗಳು "ಅವ್ವಾ ಇಲ್ಲೀಗಂಟ ನೀನು ನಮಗೆ ತಾಯಿಗಿದ್ದೆ. ಈಗ ಅವನು ನಮ್ಮ ಪರಾಣ ಉಳಿಸ್ಯವನೆ. ಆದ್ರಿಂದ ಈಗ ಅವನೇ ನಮಗೆ ತಾಯಿ. ನಾವೂ ಇವನ ಹಿಂದುಗುಟ್ಟೆ ಹೋಯ್ತೀವಿ. ನೀನು ಏನೂ ಯೋಚನೆ ಸಿಂತೆ ಮಾಡಬ್ಯಾಡ. ನಮ್ಮ ಋಣ ಕಳೀತು" ಅಂತ ಹೇಳಿ ರಾಜಕುಮಾರನ ಜೊತೇಲಿ ಬಂದವು.

ರಾಕ್ಷಸ ಮತ್ತೆ ಅವನ ತಾಯಿ ಇದನ್ನ ನೋಡಿ ಬೆಕ್ಕಸಬೆರಗಾದರು. ಅವರ ಜೀವ ಹೆದರಿ ಪುದರುಗುಟ್ಟಿತು. ಅವನು ಹುಲೀ ಹಾಲ್ನೂ ಮೊಲದ ಗಿಣ್ಣೂ ತಂದು ಕೊಟ್ಟ. ತಿಂದಳು, ಸುಮ್ಮನಾದಳು. ಇನ್ನೊಂದು ವಸಿ ದಿವಸ ಕಳೆದ ಮೇಲೆ ಮತ್ತೊಂದು ಉಪಾಯ ಮಾಡಿದರು. ಆ ಹೊತ್ತು ಎಂದಿಗಿಂತ



ಹೆಚ್ಚಾಗಿ ಅವ್ವ ನಳ್ತಾ ನೆಲದ ಮೇಲೆ ಬುಡಬುಡನೆ ಉಳ್ಳಾಡ್ತಾ ಇದ್ದಳು. ಮಗ ಬಂದು ಕೇಳದ :

"ತಿರಗ ಏನಾಯ್ತವ್ವ?"

"ಅಯ್ಯೋ ಏನ್ ಹೇಳ್ಲಿ ಮಗನೇ. ನನ್ನಿಂದ ನಿನಗೆ ಏಟಪ್ಪಾ ಕಷ್ಟ" ಅಂದಳು.

"ಅದೇನ್ ಹೇಳವ್ವಾ ಪರವಾಗಿಲ್ಲ"

"ಮತ್ತೆ ಯಾಕೋ ತಲೇ ನೋವು ಬಂದು ಬುಟ್ಟಾದೆ ಕನಪ್ಪಾ !"

"ಅದಕ್ಕೆ ಏನ್ಮಾಡಬೇಕು ಹೇಳವ್ವ, ಮಾಡ್ತೀನಿ. ನಿನಗಿಂತ ಯಾವುದು ಹೆಚ್ಚು?"

"ಅಯ್ಯೋ ..... ಏಳು ಸಮುದ್ರದಿಂದಾಚೆ ಒಂದು ಎಡಕುತ್ತಿ. ಅದರೊಳಗೆ ಒಂದು ಹೆಣ್ಣು ಭೇರುಂಡ, ಗಂಡು ಭೇರುಂಡ ಮನೇ ಮಾಡ್ಕೊಂಡವೆ. ಅದರ ಹತ್ರ ಒಂದು ಅಮೃತದ ಹಣ್ಣದೆ. ಅದ ತಂದು ಕೊಟ್ಟರೆ ನನ್ನ ತಲೇನೋವು ವಾಸ್ಯಾಯ್ತದೆ."

"ಆಗ್ಲಿ ಬುಡವ್ವ, ಇದೇನು ಮಾ ಕೆಲಸ. ಅದ ತಕ್ಕೊಂಡೇ ಬತ್ತೀನಿ" ಅಂತ ಹೇಳಿ ಹುಡೀಕೊಂಡು ಹೊಂಟ. ಹುಲೀ ಮರಿಗಳೂ ಅವನ ಹಿಂದುಗಡೆಯೇ ಹೋದವು.

ಅಲ್ಲೊಂದು ಪಟ್ಟಣ. ಆ ದೊರೆಗೆ ಒಬ್ಬಳೇ ಒಬ್ಬಳು ಮಗಳು. ಅವಳು ಋತುವಾಗಿ ಹನ್ನೆರಡು ವರ್ಷ ಆಗಿತ್ತು. ಅವಳು ಮೀಯೋದು ದಿನಕ್ಕೆ ಹನ್ನೆರಡು ಕೊಳಗ ನೀರು, ಅದು ಆ ಪಟ್ಟಣದ ಮುಂದೆ ಹೊಳೆಯಾಗಿ ಹರೀತಿತ್ತು. 'ಆ ನೀರು ಸೋಕದೆ ಅದನ್ನು ದಾಟಿಕೊಯ ಬಂದೋರಿಗೆ ನಾನು ಮಾಲೆ ಹಾಕ್ತೀನಿ' ಅಂತ ಅವಳು ಪಂಥ ಮಾಡಿಕೊಂಡು ಅದಕ್ಕಾಗಿ ಹನ್ನೆರಡು ವರ್ಷದಿಂದ ತಪಿಸಿದ್ದಳು. ರಾಜಕುಮಾರ ದೇವಗನ್ನೇರ ನೆನಕೊಂಡ. ಅವರ ವರದಿಂದ ಒಂದು ತೊಟ್ಟೂ ನೀರು ಸೋಕದಂತೆ ಹುಲೀಮರಿ ಸೈತ ಆ ಹೊಳೆ ದಾಟಿದ. ಇದನ್ನೇ ಉಪ್ಪರಿಗೇಲಿ ನಿಂತುಕೊಂಡು ನೋಡ್ತಾ ಇದ್ದ ರಾಜನ ಮಗಳು ತಕ್ಷಣ ಅರಮನೆಗೆ ಇವನನ್ನು ಕರೆಸಿದಳು. ರಾಜ ಕೊಟ್ಟಣ ಕುಟ್ಟಿ ಪಟ್ಟಣ ಸಾರಿಸಿದ. ದೇವೇಂದ್ರಾಯನ ವೈಭೋಗದಿಂದ ಇವರಿಗೆ ಮದುವೆ ಮಾಡಿದ.

ಮೂರು ದಿನ ಕಳೆದ ಮೇಲೆ ಹೆಂಡತಿಗೆ ತಾನು ಬಂದ ಕಾರ್ಯ ತಿಳಿಸಿ 'ತಾನು ಮುಂದಕ್ಕೆ ಹೋಯ್ತೀನಿ' ಅಂದ. "ಅಯ್ಯಯ್ಯೋ ಅದೆಷ್ಟು ದೂರವೋ ಏನೋ. ದೂರ ದೇಶದಲ್ಲಿ ನಿಮಗೇನಾದರೂ ಆದ್ರೆ ನಮಗೆ ಗೊತ್ತಾಗೋದು

ಹ್ಯಂಗೆ" ಅಂತ ಹೆಂಡತಿ ಕೇಳಿದಳು. "ನೋಡು, ನಿನ್ನ ಕೋಣೆ ಮುಂದೆ ಒಂದು ತೊಳಸಿ ಗಿಡ ನೆಡು. ಅದಕ್ಕೆ ದಿನಾ ನೀರು ಹಾಕು. ಅದೇನಾದ್ರೂ ಬಾಡಿಹೋದ್ರೆ ನಾನು ಸತ್ತಿವ್ನಿ ಅಂತ ತಿಳಿಕೋ" ಅಂತ ಹೇಳಿ ಹುಲೀಮರೀನ ಹೆಂಡತಿ ಹತ್ತಿರ ಬುಟ್ಟು ಮುಂದಕ್ಕೆ ಹೋದ. ಹೋದ ಹೋದ ಹೋದಾ, ಬೇಕಾದಷ್ಟು ದೂರ ಹೋದ. ಏಳು ಸಮುದ್ರದ ದಡಕ್ಕೆ ಬಂದ. ದೇವಗನ್ನೇರನ್ನ ನೆನಕೊಂಡ. ಅವರು ಒಂದು ರಥ ಕೊಟ್ಟರು. ಅದರ ಮೇಲೆ ಕೂತು ಸಮುದ್ರ ದಾಟಿದ. ಅಲ್ಲಿಂದ ಏಟೋ ಗಾವುದ ಹೋದ ಮೇಲೆ ಎಡಗುತ್ತಿ ಸಿಕ್ತು. ಅದು ಭೂಮ್ಗೂ ಆಕಾಶಕ್ಕೂ ಒಂದೇ ಸಮನಾಗಿ ಬೆಳೆದಿತ್ತು. ಆಗ ಭೇರುಂಡಗಳು ತಮ್ಮ ಮರಿಗೆ ಆಹಾರ ತರೋದಕ್ಕೆ ಇಂದ್ರಲೋಕಕ್ಕೆ ಹೋಗಿದ್ದವು. ರಾಜಕುಮಾರ ಅವು ಬರೋದನ್ನ ಕಾದು ಕೂತ. ಹಂಗೇ ನೋಡ್ತಾ ಕೂತಿರುವಾಗ ಒಂದು ಏಳ್ಹೆಡೆ ಸರ್ಪ ಭೇರುಂಡದ ಮರೀ ತಿನ್ನಾಕೆ ಗುತ್ತೀಮ್ಯಾಲೆ ಸರಸರನೇ ಹತ್ತುತಿತ್ತು. ತಕ್ಷಣವೇ ರಾಜಕುಮಾರ ಅದನ್ನ ಚಂದ್ರಾಯುದಿಂದ ಎರಡು ತುಂಡಿಗೆ ಕಡಿದುಬುಟ್ಟ. ಆ ರುಂಡ ಹಾರಿ ಬಂದು ಇವನನ್ನ ಕಚ್ಚಿತು. ಜೀವ ಕಳಸ ಹಾರಿ ಹೊಂಟ್ಹೋಯ್ತು.

ಏಟೋ ಹೊತ್ತಾದ ಮೇಲೆ ಭೇರುಂಡಗಳು ಆಹಾರ ತಕ್ಕೊಂಡು ದೇವ ಲೋಕದಿಂದ ಬಂದವು. ಮರಿಗಳು ಜೀವ ಸಹಿತ ಇರೋದು ನೋಡಿ ಅವಕ್ಕೆ ಪರಮಾನಂದವಾಯಿತು. ಮರಿಗಳು ಆಹಾರ ಮುಟ್ಟಲಿಲ್ಲ. "ನೋಡವ್ವಾ, ನಾವು ಉಣ್ಣೋದು ಇರಲಿ, ನಮ್ಮ ಪರಾಣ ಉಳಿಸಿದ ಮಾನುಭಾವ ಇಲ್ವನ್ನೆ ನೋಡು. ಅವನ್ನ ಮೊದಲು ಜೀವ ಮಾಡು" ಅಂತ ಹೇಳಿ ನಡೆದ ಸಂಗತೀನೆಲ್ಲಾ ತಾಯಿಗೆ ಇವರಿಸಿದವು. ಭೇರುಂಡಗಳು ಅವನ ಬಾಯಿಗೆ ಅಮೃತ ಬುಟ್ಟವು. ಜೀವ ಅಡೋಕೆ ಶುರುವಾಯಿತು. ನಿದ್ದೆ ಮಾಡುತಿದ್ದು ಎದ್ದೋನ ಹಂಗೆ 'ಅಸ್' ಅಂತ ಎದ್ದು ಕೂತುಗೊಂಡ. "ನೀನು ಬಂದ ಕಾರ್ಯ ಏನಪ್ಪಾ?" ಅಂತ ಭೇರುಂಡಗಳು ಕೇಳಿದವು. ಅವನು ಹಿಗ್ಗಿಂಗೆ ಅಂತ ತಾನು ಬಂದ ಕೆಲಸ ಹೇಳಿದ. ಅವು ಎರಡು ಹಣ್ಣು ಕೊಟ್ಟು "ಒಂದನ್ನ ನೀನು ಮಡಗಿಕೊ; ಇನ್ನೊಂದನ್ನ ನಿಮ್ಮ ಅವ್ವನಿಗೆ ಕೊಡು" ಅಂದವು.

ಭೇರುಂಡದ ಮರಿಗಳು ನಿಲ್ಲಲಿಲ್ಲ. "ನಮಗೆ ಜೀವ ಕೊಟ್ಟೋನು ತಂದೆ ಸಮಾನ. ಅವನ ಜೊತೆಯಲ್ಲೇ ನಾವೂ ಹೋಯ್ತೀವಿ" ಅಂದೊ. ಎಷ್ಟು ಹೇಳಿದರೂ ಕೇಳದೆ ಅವನ ಜೊತೆಯಲ್ಲೇ ಹೊಂಟವು. ಅವುಗಳನ್ನೂ ಕರೆದು ಕೊಂಡು ಹೆಂಡತಿಯ ಮನೆಗೆ ಬಂದ. ಅವಳಿಗೆ ಒಂದು ಹಣ್ಣು ಕೊಟ್ಟು, ಸ್ವಲ್ಪ ದಿನ ಆದ ಮೇಲೆ "ನಾನು ಊರಿಗೆ ಹೇಗಿ ಬತ್ತೀನಿ. ಬಾಳ ದಿನ ಆಯ್ತು, ನಾನು



ಇಷ್ಟು ದಿನ ಇಲ್ಲಿ ಉಳಿದಿದ್ದೇ ತಪ್ಪು. ಅವ್ವ ಎಷ್ಟು ನಳ್ತಾ ಅವಳೋ ಏನೋ" ಅಂತ ಹೆಂಡ್ತಿಗೆ ಹೇಳಿ ಹುಲೀಮರಿ, ಭೇರುಂಡದ ಮರಿ ಎಲ್ಲಾನೂ ಕರಕೊಂಡು ಊರಿಗೆ ಬಂದ. ತಾಯಿ ಇವನು ಬರೋದು ಕಂಡು ಹಾಸಿಗೇಲಿ ಜೋರಾಗಿ ನಳ್ತಾ ಬಿದ್ದುಕೊಂಡಳು. ಅವನು ಒಂದು ಹಣ್ಣು ಕೊಟ್ಟ. ತಿಂದೋಳ ಹಂಗೆ ಮಾಡಿ ಅದನ್ನು ಎತ್ತಲಾಗೋ ಎಸೆದುಬಿಟ್ಟಳು.

೪

'ಇವನು ಏನು ಮಾಡಿದರೂ ಸಾಯೋದಿಲ್ವಲ್ಲ? ಏನ್ ಮಾಡೋದು? ಹಿಂಗೇ ಆದ್ರೆ ಒಂದಲ್ಲ ಒಂದು ದಿನ ನಮ್ಮ ಗುದ್ಲೀಪುರಕ್ಕೆ ಕಳಿಸಿಬುಡ್ತಾನೆ. ಇವನೇನು ಸಾಮಾನ್ಯದೋನಲ್ಲ' ಅಂತ ರಾಕ್ಷಸ ಮತ್ತೆ ರಾಜಕುಮಾರನ ಅವ್ವ ಇಬ್ರೂ ಯೋಚನೆ ಮಾಡಿದರು. ದಿನದಿಂದ ದಿನಕ್ಕೆ ಅವರಿಗೆ ಹೆದರಿಕೆ ಭಯ ಜಾಸ್ತಿಯಾಯಿತು. ಇಬ್ರೂ ಅಳದೂ ಸುರುದೂ ಒಂದು ತಂತು ಮಾಡಿದರು.

ಒಂದು ದಿನ ಮನಸ್ಸಿಗೆ ಬೇಕಾದ ಅಡಿಗೇನೆಲ್ಲಾ ತಾಯಿ ಮಾಡಿದಳು. ಅವ್ವ ಮಗ ಇಬ್ರೂ ಒಂದೇ ಗಂಗಳದಲ್ಲಿ ಉಂಡರು. ಉಂಡು ನಿಪ್ಪಣ ಆಯ್ತು. ಆದಮೇಲೆ ತಾಯಿ ಹೇಳಿದಳು :

"ಮೊಗಾ, ಒಂದಾಟ ಪಗಡೇ ಆಡಾನೆ ಕನೋ. ಯಾಕೋ ಬಾಳ ದಿನದ ಮೇಲೆ ಮನಸಾಗ್ಯದೆ. ನಿಮ್ಮಪ್ಪ ಇದ್ದಾಗ ಆಡಿದ್ದು."

"ಅಯ್ಯಯ್ಯೋ ಬ್ಯಾಡಕನವ್ವಾ, ಪಗಡೆ ಜೂಜು ಆಡಿ ಬದುಕಿದೋರುಂಟಾ? ಬ್ಯಾಡ ಬ್ಯಾಡ" ಅಂದ ಮಗ. ತಾಯಿ ಬಿಡಲಿಲ್ಲ. ಹಿಂಸೆ ಮಾಡಿದಳು, ಕೊನೆಗೆ ಅವಳ ಒತ್ತಾಯ ತಡೀಲಾರ್ದೆ ಒಪ್ಪಿಕೊಂಡು ಆಡೋದಕ್ಕೆ ಕೂತ.

"ಪಂಥ ಏನೊಡ್ಡೋದು?" ಅಂದ್ಲು ಅವ್ವ.

"ಏನೂ ಒಡ್ಡೋದು ಬ್ಯಡ. ಗೆದ್ದೋರು ಸೋತೋರ್ನ ಚೂರೀಲಿ ತಿವಿಯೋದು. ಏನ್ ಹೇಳ್ತೀ"

"ಸುಮ್ನೆ ಹೈಲಾಟಕ್ಕೆ ಕನೋ. ಇರಲಿ ಒಪ್ಕೋ" ಅಂದಳು.

ಸರಿ. ಆಟ ಶುರುವಾಯಿತು. ಮಗ ಬೇಕೂ ಬೇಕೂಂತ್ಲೆ ತಾಯಿಗೆ ಸೋತುಬುಟ್ಟ. ತಾಯಿ ಒಂದಿಷ್ಟೂ ಹಿಂದು ಮುಂದೆ ನೋಡದೆ ಮೊಖ ಕೊಕ್ಕರಿಸದೆ ಮಗನನ್ನು ಚೂರಿಯಿಂದ ತಿವಿದಳು. ಅವನು ಸತ್ತು ಹೋದ. ರಾಕ್ಷಸನೂ ಅವ್ಳೂಳ ಸೇರಿಕೊಂಡು "ಹಯ್, ಈವೊತ್ತು ನಮ್ಮ ಭಾಗದ ಶನಿ ತೊಲಗ್ತು" ಅಂದುಕೊಂಡು ಅವನನ್ನು ಕತ್ತರಿಸಿ ತುಂಡು ತುಂಡು ಮಾಡಿ ಪಿಂಡಿಕಟ್ಟಿ ಹೊಳೆಗೆ ಎಸೆದರು.

ಸಬ ಹೊಳೆಯಲ್ಲಿ ತೇಲಿಕೊಂಡು ಹೋಯಿತು. ಹುಲೀಮರಿ ಮತ್ತೆ ಭೇರುಂಡದ ಮರಿಗಳು ಅದರ ಜೊತೆಯಲ್ಲೇ ಈಜಿಕೊಂಡು ಹೊರಟವು. ಆ ಹೊಳೆ ರಾಜಕುಮಾರನ ಹೆಂಡತಿಯ ಊರಿನ ಹತ್ತಿರ ಹರಿಯುತ್ತಿತ್ತು. ಅವಳು ಆಗತಾನೇ ತಾನ ಮಾಡಿ ತಲೆ ಒದರುತ್ತಾ ಉಪ್ಪರಿಗೆಯಲ್ಲಿ ನಿಂತಿದ್ದಳು. ಏನೋ ಹೊಳೆಯಲ್ಲಿ ತೇಲಿ ಬರುತ್ತಿರುವುದು ಕಾಣಿಸಿತು. ಹಂಗೇ ನೋಡುತ್ತಾ ಇರುವಾಗ ಹುಲೀಮರಿ ಭೇರುಂಡದ ಮರಿಗಳು ಕಂಡವು. ಅವಳಿಗೆ ಅನುಮಾನವಾಯಿತು. ಆಳುಗಳನ್ನ ಕರೆದು 'ಆ ಪಿಂಡಿ ತಕ್ಕೊಂಡು ಬನ್ನಿ' ಅಂತ ಹೇಳಿ ಕಳಿಸಿದ್ಳು. ಅವರು ತಂದರು. ಜೊತೆಯಲ್ಲಿ ಮರಿಗಳಿದ್ದದ್ದರಿಂದ ಆ ಸಬ ತನ್ನ ಗಂಡನದೇ ಅಂತ ಅವಳಿಗೆ ಖಚಿತವಾಯಿತು. ಅದನ್ನು ಮುಂದುಗಡೆ ಮಡಿಗೊಂಡು ಹಾಡಿಕೊಂಡು ಗುಡಿಸಿಕೊಂಡು ಅಳಾಕೆ ಸುರು ಮಾಡಿದಳು. ಅವಳ ದುಃಖ ನೋಡಬಾರದು. ಕಳ್ಳು ಕಿತ್ತು ಬರೋ ಹಂಗೆ ಸೋಕ ಮಾಡಿದಳು. ಆ ಹೊತ್ತಿನಲ್ಲಿ ಶಿವ ದಾಸಯ್ಯನ 'ಯಾಸ್ತಾರಿ' ಹಾಕ್ಕೊಂಡು ಅರಮನೆ ಮುಂದುಗಡೆಗೆ ಬಂದು 'ಭೋಂ ಭೋಂ ಭೋಂ' ಅಂತ ಶಂಖ ಊದಿದ. ಅರಮನೇಲಿ ಯಾರ ಮುಖದ ಮೇಲೂ ಒಂದು ಅರೆಕಾಸಿನಷ್ಟೂ ಕಳೇವಿಲ್ಲ, ಕಲಿಯಿಲ್ಲ. "ಅಯ್ಯೋ ನೀನೊಬ್ಬ. ನಮ್ಮ ಕಷ್ಟ ನಮಗೆ, ಮುಂದಕ್ಕೆ ಹೋಗು" ಅಂದರು. "ಎಲ್ಲಾ ಯಾಕ್ ಹಿಂಗೆ ಸಪ್ಪಗೆ ಇದ್ದೀರಿ? ಅದೇನ್ ಕಷ್ಟ ಹೇಳಿ" ಅಂದ.

"ಅಯ್ಯೋ, ಹೇಳಿದರೆ ನೀನೇನು ಹಾರಿಸೀಯೋ ತೀರಿಸಿಯೋ?" ಅಂದರು.

"ಹಾರಿಸೋದಾದ್ರೆ ಹಾರಿಸ್ತೀನಿ, ತೀರಿಸೋದಾದ್ರೆ ತೀರಿಸ್ತೀನಿ ಹೇಳಿ" ಅಂದ.

"ನಮ್ಮ ದೊರೇ ಮಗಳ ಗಂಡನ್ನ ಯಾರೋ ಕಡಿದು ತುಂಡು ತುಂಡು ಮಾಡ್ಯವರೆ. ಅವಳ ವಾಂಕಾರ ಅವಳ ಗ್ವಾಬೆ ನೋಡಬಾರದು"

"ಇಷ್ಟೇ ತಾನೇ? ನಾನು ಜೀವ ಮಾಡ್ತೀನಿ, ನಡೀರಿ ನೋಡಾನೆ,"

ಉಪ್ಪರಿಗೆಗೆ ಅವನನ್ನು ಕರೆದುಕೊಂಡು ಹೋದರು ದಾಸಯ್ಯ ಪಿಂಡಿ ಬಿಚ್ಚಿದ. ತುಂಡುಗಳನ್ನೆಲ್ಲ ಜೋಡಿಸಿದ. "ನೋಡಮ್ಮ ನಿನ್ನ ಗಂಡ ಒಂದು ಹಣ್ಣು ತಂದು ನಿನ್ನ ಕೈಲಿ ಕೊಟ್ಟಿದ್ನಲ್ಲಾ ಆದ ತಕ್ಕೊಂಬಾ" ಅಂದ. "ಅಯ್ಯಯ್ಯೋ ಇದ್ಯಾಕೆಬೇಕೂ ಅಂತ ಅದ ಎಲ್ಲೋ ಹಾಕ್ಬುಟ್ಟೆ. ಅದು ಈಗೆಲ್ಲಿ ಸಿಕ್ಕಾತು?" ಅಂದಳು.

"ಒಂದಿಷ್ಟು ಹುಡುಕಿನೋಡು ಸಿಕ್ತದೆ. ಸರಸತಿ ಗೂಡಿಗೆ ಕೈಹಾಕು



ಅಲ್ಲಿರಬಹುದು" ಅಂದ. ಸರಿ, ಅವನು ಹೇಳಿದಂತೆ ಸರಸತಿ ಗೂಡಿಗೆ ರಾಜಕುಮಾರಿ ಕೈಹಾಕಿದಳು. ಹಣ್ಣು ಅಲ್ಲೇ ಇತ್ತು. ತಂದುಕೊಟ್ಟಳು. ದಾಸಯ್ಯ ಆ ಹಣ್ಣು ಕೂದು ಆ ಸಬದ ಮೇಲೆ ರಸ ಹಿಂಡಿದ. ಕೂಡಲೇ ರಾಜಕುಮಾರ "ಅಮ್ಮಾ ...." ಅಂತ ಎದ್ದು ಕೂತುಗೊಂಡ. ದಾಸಯ್ಯ ಮಾಯವಾಗಿ ಹೋದ.

"ನಾನಿಲ್ಲಿಗೆ ಹ್ಯಂಗೆ ಬಂದೆ?" ಅಂತ ಕೇಳಿದ ರಾಜಕುಮಾರ. ಹೆಂಡತಿ ನಡೆದ ಸಂಗತಿ ತಿಳಿಸಿದಳು. ಊರಲ್ಲಿ ನಡೆದ ಸಂಗತಿ ತಾನೂ ತಿಳಿಸಿದ. ಒಂದು ನಾಕು ದಿನ ಇದ್ದು ಮಾವನಿಗೆ ಹೇಳಿ ಹೆಂಡತೀನೂ ಕರಕೊಂಡು ಹುಲೀಮರಿ ಭೇರುಂಡದ ಮರಿಗಳ್ನೂ ಕರಕೊಂಡು ತನ್ನ ಪಟ್ಟಣಕ್ಕೆ ಹೊರಟ. ಬಂದು, ಪಟ್ಟಣದ ಹೊರಗಡೆ ಗುಡಾರ ಹೋಡೆದು ನಿಂತು. 'ಆರತಿ ತಕ್ಕೊಂಬರಬೇಕು" ಅಂತ ತಾಯಿಗೆ ಹೇಳಿ ಕಳಿಸಿದ. 'ರಾಜಕುಮಾರ ಇನ್ನು ಸತ್ತ' ಅಂದುಕೊಂಡು ರಾಕ್ಷಸ ಮತ್ತೆ ಅವಳು ಇಬ್ಬರೂ ನಿರುಂಬಳವಾಗಿ ಸುಖವಾಗಿ ಗಂಡಹೆಂಡತೀರಾಗಿ ಸಂಸಾರ ಮಾಡಿ ಕೊಂಡಿದ್ದರು. ಮತ್ತೆ ಅವನು ಬಂದ ಸುದ್ದಿಕೇಳಿ ಅವರಿಗೆ ಸಿಡಿಲು ಬಡಿದ್ಹಂಗಾಯಿತು: ಕೂತಿದ್ದ ನೆಲ ಬಾಯಿ ಬುಟ್ಟಂಗಾಯಿತು. ರಾಕ್ಷಸ ಗುಡಕ್ಕನೆ ಓಡಿಹೋಗಿ ಉಪ್ಪರಿಗೆ ಮನೆ ಹೊಕ್ಕೊಂಡ. ಅವ್ವ ವಿಧಿಯಿಲ್ಲದೆ ಆರತಿ ತಕ್ಕೊಂಡು ಬಂದಳು. ಆರತಿ ಹಿಡಿದು ಮಗ ಸೊಸೇನ ವಳಕ್ಕೆ ಕರಕೊಂಡು ಹೋದಳು.

ಒಂದೆಂಟು ದಿನ ಹಿಂಗೇ ಕಳೀತು. ರಾಜಕುಮಾರನ ಹೆಂಡತಿ ತುಂಬಾ ಕಿಲಾಡಿ. ಹೆಂಗೋ ತಮ್ಮ ಅತ್ತೆ ಮತ್ತೆ ರಾಕ್ಷಸನ ಸಂಬಂಧ ಕಂಡುಕೊಂಡು ಬುಟ್ಟಳು. 'ಇದರಿಂದಲೇ ತನ್ನ ಗಂಡನಿಗೆ ಇಷ್ಟೆಲ್ಲಾ ಕಷ್ಟಕಿರುಕುಳ ಬಂದಿದ್ದು' ಅಂತ ತೀರ್ಮಾನ ಮಾಡಿಕೊಂಡಳು. ಒಂದು ದಿನ ಬೇಕು ಬೇಕಾದಂಥ ತಿಂಡಿ ಅಡಿಗೆ ಮಾಡಿದಳು. ಅತ್ತೆ ಕುಂಡ್ರಿಸಿ ಅವಳು 'ಸಾಕು ಸಾಕು' ಅನ್ನೋ ಗಂಟ ಇಕ್ಕಿದಳು. ಯಾವ ಕಾಲದಲ್ಲೂ ಉಂಡಿರದಂಥ ಊಟ ಅವತ್ತು ಅತ್ತೆ ಉಂಡು 'ಡರ್' ಅಂತ ತೇಗಿದಳು. ಸೊಸೆ ಅತ್ತೆ ಕೈಗೆ ನೀರು ಕೊಟ್ಟಳು. ನವರತ್ನದ ಮಂಚಲಿಗೆ ಹಾಸಿದಳು ಎಲಡಕೆ ತಟ್ಟೆ ಮುಂದಿಟ್ಟಳು. ಅವಳು ಒಂದಡಕೆ ಕಡದು ಎಲೆ ಮಡಿಚಿ ಬಾಯಿಗೆ ಹಾಕಿಕೊಂಡಳು. ಆ ಕೂಡಲೇ ಸೊಸೆ ಸೊಂಟದಿಂದ ಚೂರಿ ತೆಗದು ಅತ್ತೆ ಎದೇಗೆ ಇರಿದಳು. ಅವಳು ಒಂದು ಏಟಿಗೆ ಹರಹರಾ ಅಂದ್ಳು. ಅಷ್ಟು ಹೊತ್ತಿಗೆ ಗಂಡ ಬಂದ. "ಇದ್ಯಾಕೆ ಹಿಂಗ್ ಮಾಡಿದೆ?" ಅಂತ ಕೇಳಿದ. ಅವಳು ಎಲ್ಲಾನೂ ಬುಡಿಸಿ ಹೇಳಿದಳು. ರಾಜಕುಮಾರ ಚಂದ್ರಾಯ ತಕ್ಕೊಂಡು ಉಪ್ಪರಿಗೆ ಮನೇಗೆ ಹೋಗಿ ಬಾಗಿಲು ತೆಗೆದ. ರಾಕ್ಷಸ ಬುಡುಕ್

ಅಂತ ಈಚೆಗೆ ಬತ್ತು. ಒಂದೇ ಏಟಿಗೆ ಚಂದ್ರಾಯುದಿಂದ ಅದರ ತಲೆ ಕಡದ. ಹೊಟ್ಟೆ ಸೀಳಿದ. ಅಲ್ಲಿ ತಮ್ಮ ಅಪ್ಪನ ಹಸ್ತ ಸಿಕ್ತು. ಆ ಹಸ್ತಾನೂ ಅವ್ವನ್ನೂ ಒಂದು ಕಡೆ ಸುಡಿಸಿದ. ಆ ಬೂದೀನೂ ತಕ್ಕೊಂಡು ಹೆಂಡತಿ ಹುಲೀಮರಿ ಭೇರುಂಡದ ಮರಿ ಎಲ್ಲಾರ್ನೂ ಜೊತೇಲಿ ಕರಕೊಂಡು ಅಲ್ಲಿದ್ದ ವಜ್ರ ವೈಡೂರ್ಯ ಎಲ್ಲಾನೂ ಹೇರಿಕೊಂಡು ಅಜ್ಜನ ಪಟ್ಟಣಕ್ಕೆ ಬಂದ. ಅಷ್ಟು ಹೊತ್ತಿಗೆ ಅಜ್ಜ ಹಣ್ಣುಹಣ್ಣು ಮುದುಕನಾಗಿ ತಲೆ ಹಂಜಿಕುಕ್ಕೆಯಾಗಿತ್ತು. ರಾಜಕುಮಾರ ಹೋಗಿ ಅಜ್ಜ ಅಜ್ಜಿ ಪಾದಕ್ಕೆ ಸಣ್ಮಾಡಿಕೊಂಡು ಹೇಳಿದ. "ಅಜ್ಜಾ, ನಾನು ನಿಮ್ಮ ಮೊಮ್ಮಗ. ರಾತ್ರೆ ಹೊತ್ತು ಮನೆ ಬುಟ್ಟು ಹೊಂಟೋದ್ರಲ್ಲಾ ನಿಮ್ಮ ಮಗ್ನೂಸೊಸೂವೆ, ಅವರ ಮಗ ನಾನು. ಅವರಿಬ್ರೂ ತೀರಿಹೋದ್ರು. ನಾನೀಗ ನಿಮ್ಮ ಹುಡೀಕೊಂಡು ಬಂದಿವ್ನಿ" ಂದ.

ಅವರು ನಂಬಲಿಲ್ಲ. "ಇಪ್ಪತ್ತು ಮೂವತ್ತು ವರ್ಷ ಆಯ್ತು ಅವರು ಹೋಗಿ. ನೀನು ಮೊಮ್ಮಗ ಅಂತ ನಾನು ಹ್ಯಂಗೆ ನಂಬಲಿ?" ಅಂದ ಮುದುಕ ದೊರೆ. ಒಳ್ಳೆ ಪೀಕಲಾಟಕ್ಕೆ ಬತ್ತು. ಆಗ ಮಂತ್ರಿ ಒಂದು ಉಪಾಯ ಹೇಳಿದ, ಏಳು ತೆರೆ ಹಿಡಿಸಿದರು. ಆಚೆ ಕಡೆ ಅಜ್ಜಿ ನಿಲ್ಲಿಸಿದರು. ಈಚೆ ಕಡೆ ಮೊಮ್ಮಗನ್ನ ನಿಲ್ಲಿಸಿದರು. ಆಚೆ ಕಡಿಂದ ಅಜ್ಜಿ ಎದೆಹಾಲು ಕರೆದಳು. ಅದು ಏಳು ತೆರೇನೂ ದಾಟಿ ಕೊಂಡು ಬಂದು ಮೊಮ್ಮಗನ ಬಾಯಿಗೆ ಬಿತ್ತು. ಆಗ ಇವನು ನಿಜವಾಗಿಯೂ ತಮ್ಮ ಮೊಮ್ಮಗನೇ ಅಂತ ಒಪ್ಪಿಕೊಂಡು ತಬ್ಬಿಕೊಂಡು ಕಣ್ಣೀರು ಸುರಿಸಿದರು. ಆ ಮೇಲೆ ಎಲ್ಲರೂ ಕಂಚಿನ ಕೊಣದ ಹತ್ರ ಹೋದರು. ರಾಜಕುಮಾರ ದೇವಗನ್ನೇರ ನೆನಕೊಂಡು ಆ ಕೊಣಕ್ಕೆ ಅಪ್ಪ ಅವ್ವನ ಬೂದಿ ಬುಟ್ಟ. ನೀರು ಉಕ್ಕುಕ್ಕಿ ಬಂದು ತುಂಬಿ ಉಕ್ಕಂಡವಾಗಿ ಹರೀತು. ಎಲ್ರೂ ಪಟ್ಟಣಕ್ಕೆ ಹೋಗಿ ಸುಖವಾಗಿ ಬದುಕಿಕೊಂಡರು.

* * * *



# ಮರಗುದುರೆ*

ಒಬ್ಬ ಆಚಾರಿ. ಅವನು ಬಾಳ ಸಿರಿವಂತ. ಅವನ ಮನೇಲಿ ಲಕ್ಷ್ಮಿ ಕಾಲು ಮಡೇ ಹಾಕ್ಕೊಂಡು ಮಲಗಿದ್ದಳು. ಅವನಿಗೆ ಇಬ್ಬರು ಮಕ್ಕಳು. ಬೇಕಾದಷ್ಟು ಖರ್ಚು ಮಾಡಿ ಇಬ್ಬರ್ನೂ ತುಂಬಾ ವಿದ್ಯಾವಂತರಾಗಿ ಮಾಡಿದ. ಎಷ್ಟೋ ದಿವಸಗಳ ಮೇಲೆ ತೀರಿಹೋದ. ಮನೇಲಿ ಯಾವಾಗ ಮೇಟಿ ಇಲ್ಲದೇ ಹೋದನೋ ಓರಗಿತ್ತೀರು ಒಬ್ಬರಿಗೊಬ್ಬರು ಕಾಲುಕೆರೆದು ಜಗಳ ಆಡಾಕೆ ಶುರು ಮಾಡಿದರು. ಇಲ್ಲದ ಸಲ್ಲದ ಚಾಡಿ ಛಿದ್ರ ಗಂಡದೀರಿಗೆ ಹೇಳಿದರು. ಮನೇಲಿ ಮೂರು ಹೊತ್ತೂ ಕದನ ಕಲಾವಲಿ. ಸರಿ, ಒಂದು ಮನೆ ಎರಡಾಯಿತು. ಮುತ್ತು ರತ್ನ ಬಳ್ಳ ಬಳ್ಳದಲ್ಲೇ ಅಳೆದುಕೊಂಡರು. ಎರಡು ಒಲೆ ಹತ್ತಿಸಿದರು.

ಪಾಲಾದ ಮೇಲೆ ಅವರ ಅದ್ದೂರಿ ಹೇಳೋಕೇ ತೀರದ ಹಂಗಾಯಿತು. ಅವರನ್ನ ಹಿಡಿಯೋರೇ ಇಲ್ಲದ್ಹಂಗಾಯಿತು. ಒಬ್ಬರೂ ಆಚೆ ಕಡ್ಡೀ ತಗದು ಈಚೆಗೆ ಹಾಕಲಿಲ್ಲ. ಹಣ ನೀರಿನಂತೆ ಖರ್ಚು ಮಾಡಿ ಮಜಾ ಉಡಾಯಿಸಿದರು. ಕೂತುಣ್ಣೋನಿಗೆ ಕುಡಕೆ ಹೊನ್ನು ಸಾಲದು ಅಂತ ಬರ್ತಾ ಬರ್ತಾ ಅವರ ಐಶ್ವರ್ಯವೆಲ್ಲಾ ಮಂಜಿನ ಹಂಗೆ ಕರಗಿ ಹೋಯಿತು. ಮನೇಲಿ ಎಕ್ಕಾಸವಾಗಿ ತುಂಬಿ ತುಳುಕಾಡುತ್ತಿದ್ದ ಲಕ್ಷ್ಮಿ ಮಾಯವಾದಳು. ತೀರ ಬಡವರಾದರು. ಕೊನೆಕೊನೆಗೆ ಒಂದು ಹೊತ್ತಿನ ಕೂಳಿಗೂ ಗತಿಯಿಲ್ಲದಂಗಾಯಿತು. ಹಾಲು ತುಪ್ಪದಲ್ಲಿ ಕೈ ತೊಳೀತಿದ್ದೋರು ಹೆಂಗಸರಿಗೆ ಬಡತನ ನೀಸಿ ನೀಸಿ ಸಾಕಾಯಿತು. ತಡೆಯಲಾರದೆ ಒಂದು ದಿನ ಹಿರಿಯವನ ಹೆಂಡತಿ ಗಂಡನನ್ನ ಹಂಗಿಸಿದಳು.

"ಯಾವತ್ತೂ ಹೆಂಡ್ತಿ ಹಿಂಗೆ ಮಾತಾಡಿದೋಳಲ್ಲಾ, ಇವತ್ತು ಹಿಂಗಂದು ಬುಟ್ಳಲ್ಲಾ' ಅಂತ ಅವನಿಗೆ ಬಾಳ ನಾಚಿಕೆ ಆಯ್ತು. ಎದ್ದವನೇ ಅಂಗಡಿಗೆ ಹೋದ.

ಅವನಿಗೆ ಏನೇನೋ ಹೇಳಿ ದಮ್ಮಯ್ಯನ ಗುಡ್ಡೆ ಹಾಕಿ ಒಂದು ಎಂಟು ದಿನಕಾಗೋವಷ್ಟು ದವಸ ಸಾಮಾನು ತಂದು ಮನೆಗೆ ಹಾಕಿದ. ಅವನು ಕಿತ್ಲಿಗೊಂಬೆ

---

* ಹೇಳಿದವರು; ಅಂಗಡಿ ಬೋರೇ ಗೌಡರು, ಬಡಗನ ಕೊಪ್ಪಲು, ಕೃಷ್ಣ ರಾಜನಗರ ತಾಲ್ಲೂಕು.

ಆಟದಲ್ಲಿ ಬಾಳ ನಿಪುಣ. ಗೊಂಬೆ ತಕ್ಕೊಂಡು ಪಟ್ಟಣಕ್ಕೆ ಹೋದ. ಅಲ್ಲಿ ಇಲ್ಲಿ ಗೊಂಬೆ ಆಟ ಆಡಿದ. ಹಣ ಮಳೆ ಸುರಿಯೋ ಹಂಗೆ ಸುರೀತು. 'ಬಾಳ ವೈನಾಗಿ ಗೊಂಬೆ ಆಡಿಸ್ತಾನೆ. ಅವನಂಗೆ ಗೊಂಬೆ ಆಡ್ಸೋರು ನಮ್ಮ ದೇಶದಲ್ಲೇ ಇಲ್ಲ. ಆ ಆಟ ನೋಡದೆ ಇದ್ರೆ ಕಣ್ಣಿದ್ರೂ ಯರ್ಥ' – ಹಿಂಗೆ ಸುದ್ದಿ ರಾಜನ ಕಿವಿಗೆ ಬಿದ್ದಿತು. ರಾಜ ದೂತರ ಕಳಿಸಿ ಇವನ್ನ ಬರಮಾಡಿಕೊಂಡ. 'ಗೊಂಬೆ ಆಡ್ಸು' ಅಂದ. ಆಡಿಸಿದ. ರಾಜನಿಗೆ ಈ ಆಟ ನೋಡಿ ಬೋ ಆನಂದವಾಯಿತು. ಬೊಗಸೆಗಟ್ಲೆ ಹೊನ್ನುಕೊಟ್ಟು ಕಳಿಸಿದ. ಅದನ್ನೆಲ್ಲಾ ಹೊತ್ತುಗೊಂಡು ಬೇಕುಬೇಕಾದ ಸಾಮಾನುತಕ್ಕೊಂಡು ಊರಿಗೆ ಬಂದ.

ಓರಗಿತ್ತಿಯು ಸಡಗರ ಕಂಡು ಕಿರಿಮಗನ ಹೆಂಡತಿಗೆ ಏನೋ ಅನುಮಾನವಾಯ್ತು. ಆ ಮೇಲೆ, ಅವಳ ಗಂಡ ಹಣ ಸಂಪಾದನೆ ಮಾಡ್ಕೊಂಡು ಬಂದಿದ್ದು ಗೊತ್ತಾಯಿತು. ಅವಳಿಗೆ ಹೊಟ್ಟೇಕಿಚ್ಚು ಬಂತು. ಅವಳು ಗಂಡನನ್ನ ಹಂಗಿಸಿದಳು :

"ನೀವೂ ಇದ್ದೀರಿ ಗಂಡಸರೂ ಅಂತ, ಮೊಖದ ಮೇಲೆ ರಟ್ಟೇಗಾತ್ರ ಮೀಸೆ ಹೊತ್ಗಂಡು. ಕೂಟಲೋರು ಹೋಗಿ ಹಣಸಂಪಾದನೆ ಮಾಡ್ಕೊಂಡು ಬಂದು ಅದ್ದೂರಿಯಾಗಿ ಬದುಕ್ತಾರೆ. ಮೂದೇವಿ ಮೋರೆ ನೋಡು. ಈರುಳ್ಳಿ ಕಾರ ನೋಡು ಅಂತ ಮೂರ್‍ಹೊತ್ತೂ ಮೊಖಾನೂ ಜೋಲೋ ಅಂತ ಇಳೇ ಬುಟ್ಕೊಂಡು ಮನೇಲಿ ಕೂತಿದ್ದೀರಿ. ಕೂತುಗೊಂಡು ಉಣ್ಣೋಗ್ಗೆ ಕುಡ್ಕೆ ಬೋನ ಸಾಲ್ದೂ ಅಂತ ಮನೇಲಿ ಇದ್ದ ಬದ್ದದ್ನೆಲ್ಲಾ ಮುಗಿಸಿ ಅದ್ರೂ ಇನ್ನೂ ನಿಮ್ಗೆ ಬುದ್ಧಿ ಬರ್‍ನಿಲ್ಲ. ಎಲ್ಲಾ ನನ್ನ ಕರ್ಮ, ನೀವೇನು ಮಾಡೀರಿ" ಅಂತ ಅಳೋಕೆ ಶುರುಮಾಡಿದಳು. ಅವನಿಗೂ ಅವಮಾನವಾಯಿತು. ಎದ್ದುಹೋಗಿ ಅಂಗಡೀಲಿ ಕಾಡಿ ಬೇಡಿ ಒಂದೆಂಟು ದಿನ ಕಾಗೋವಷ್ಟು ದವಸ ಧಾನ್ಯ ತಂದು ಹಾಕಿದ. ಮನೆ ಬುಟ್ಟು ಹೊಂಟ. ಅವನು ಮರಗುದುರೆ ಆಟದಲ್ಲಿ ಬಾಳ ನಿಪುಣ. ಮರಗುದುರೆಗೆ ಜೀವಾಳ ಕೂಡಿಕೊಂಡು ಪಟ್ಟಣಕ್ಕೆ ಹೋದ. ಅದರ ಅಂದ ಚಂದ ನೋಡಿ ಜನ ಮುತ್ತಿಕೊಂಡರು. ಹಂಗೇ ಅರಮನೆ ಹತ್ರಕ್ಕೆ ಹೋದ. 'ಆಪಿದ್ದೋರು ಯಾರು ಬೇಕಾದ್ರೂ ನನ್ನ ಕುದುರೆ ಸವಾರಿ ಮಾಡಬಹುದು' ಅಂತ ಜೋರಾಗಿ ಸಾರಿದ. ಜನ ಒಬ್ಬರಿಗೊಬ್ಬರು ಮೊಖನೋಡಿದರು. ಯಾರೋ ಓಡ್ಹೋಗಿ ಮಹಾರಾಜರಿಗೆ ಈ ಸುದ್ದಿ ತಿಳಿಸಿದರು. ಮಹಾರಾಜ ಮಂತ್ರಿ ಸೇನಾಪತಿ ಯುವರಾಜ ಎಲ್ಲಾ ಬಂದರು. ಅವರನ್ನ ನೋಡಿ ಮತ್ತೆ 'ಆಪಿದ್ದೋರು ಯಾರು ಬೇಕಾದ್ರೂ ನನ್ನ ಕುದುರೆ ಸವಾರಿ ಮಾಡಬಹುದು' ಅಂತ ಆಚಾರಿ ಮಗ



ಸಾರಿದ. 'ಮರಗುದುರೆ ಮೇಲೆ ಯಾರಾದ್ರೂ ಸವಾರಿ ಮಾಡೋರುಂಟಾ? ಇದೇನು ಚೋಜಿಗ'? ಅಂದುಕೊಂಡು ಎಲ್ಲಾ ಮೂಗಿನ ಮೇಲೆ ಬೆರಳಿಟ್ಟುಕೊಂಡರು. ಆಚಾರಿ ಮಗ ಮತ್ತೆ ಕೂಗಿದ. ಆಗ ಯುವರಾಜ ಮುಂದಕೆ ಬಂದು.

"ಕೊಡು ನೋಡಾನೆ ನಿನ್ನ ಕುದ್ರೇಯಾ?" ಅಂದ.

"ಊಹುಂ. ಹಂಗೆಲ್ಲಾ ಕೊಡಕಿಲ್ಲ. ಮೊದ್ಲು ಕರಾಯ. ಆಮ್ಯಾಲೆ ಸವಾರಿ" ಅಂದ ಆಚಾರಿ ಮಗ.

"ಏಟ್ಹೇಳು ಬೆಲೇಯಾ"

"ಲಕ್ಷ ಚಿನ್ನದ ವರಾ ಕೊಡಬೇಕು"

"ಆಗಲಿ ಕೊಡ್ತೀನಿ. ಆದ್ರೆ ನಿನ್ನ ಕುದ್ರೆ ನಾನು ಹೇಳಿದ ಜಾಗಕ್ಕೆ ಹೋಗದೆ ಹೋದ್ರೆ ನಿನ್ನ ಸಿಗಿದು ಕೋಟೆ ಬಾಗಿಲಿಗೆ ತೋರಣ ಕಟ್ಟಿಸ್ತೀನಿ. ಜ್ವಾಕೆ" ಅಂದು ಒಂದು ಲಕ್ಷ ವರಹ ಕೊಡೋಹಂಗೆ ಮಂತ್ರಿಗೆ ಹೇಳಿದ. ಅವನು ತರಿಸಿಕೊಟ್ಟ.

"ಸರಿ, ಈಗ ನಿನ್ನ ಕುದುರೆ ಸವಾರಿ ಮಾಡೋ ಗುಟ್ಟು ಹ್ಯಂಗೆ ?"ಅಂತ ಕೇಳಿದ ಯುವರಾಜ.

"ಅದರ ಮ್ಯಾಲೆ ಕೂತುಕೊಂಡು ನೀವು ಹೋಗಬೇಕಾದ ಜಾಗಕ್ಕೆ ಹೋಗು ಅನ್ನು, ಹೋಯ್ತದೆ. ಇಳೀ ಬೇಕಾದ್ರೆ 'ಇಳಿಂಬಿ' ಅನ್ನಿ, ಇಳೀತದೆ".

ಸರಿ, ರಾಜಕುಮಾರ ಮರಗುದುರೆ ಬೆನ್ನಿನ ಮೇಲೆಕೂತ. ಬೆನ್ನು ತಟ್ಟಿ "ದಗನಕ್ಕೆ ಹಾರು" ಅಂದ. ಅದು ಸೊಯ್ ಅಂತ ಒಂದೇ ಸಮನೆ ದಗನಮಾರ್ಗದಲ್ಲಿ ಹಾರಿ ಹೊಂಟೋಯಿತು. ಹಾರಿ ಹಾರಿ ಹಾರಿ ಇಂದ್ರನ ಪಟ್ಟಣಕ್ಕೆ ತಂದು ರಾಜಕುಮಾರನನ್ನು ಬಿಸಾಕಿತು. ಆ ದೇವಲೋಕದ ಹೆಂಗಸರು ಗಂಡಸರೆಲ್ಲಾ ಇವನಿಗೆ ಮುತ್ತಿಕೊಂಡರು. "ನರಮನುಷ್ಯ, ನಮ್ಮ ಲೋಕಕ್ಕೆ ಬರೋದು ಅಂದ್ರೇನು? ಎಷ್ಟು ಜೋಕು ಇವನಿಗೆ?" ಅಂತ ತಾರಿಗೆ ಮಾರಿಗೆ ಎಲ್ಲಾ ಬೋದರು. ಅವನಿಗೆ ಚಿತ್ರಹಿಂಸೆ ಕೊಟ್ಟರು.

"ಅಯ್ಯೋ ನಂದು ತೆಪ್ಪಾಯ್ತು. ದಾರಿ ತಪ್ಪಿ ಬಂದ್ಬುಟ್ಟೆ. ಇದು ದೇವಲೋಕ ಅಂತ ನಂಗೊತ್ತಾಗ್ನಿಲ್ಲ. ಇದೊಂದು ಸತಿಗೆ ಬುಟ್ಬುಡಿ. ನಿಮ್ಮ ದಮ್ಮಯ್ಯ ಅಂತೀನಿ" ಅಂತ ರಾಜಕುಮಾರ ಎಲ್ಲಾರಿಗೂ ಕೈ ಕೈ ಮುಗಿದ. ಕಾಲಿಗೆ ಬಿದ್ದ. ಕಡೆಗೆ ಅವರಿಗೆ ಕನಿಕರ ಬಂತು. ಒಂದು ಮುತ್ತಿನ ಶಲ್ಯಕೊಟ್ಟು "ಹೋಗು ಬದೀಕೊ ಹೋಗು. ಇನ್ನು ಹಿಂಗೆಲ್ಲಾ ಬರಬ್ಯಾಡ" ಅಂತ ಹೇಳಿ ಅವನ್ನ ಕಳಿಸಿದರು. ಮತ್ತೆ ರಾಜಕುಮಾರ ಮರಗುದುರೆ ಮೇಲೆ ಕೂತು 'ಇಳಿಂಬಿ' ಅಂದ. ಅದು

ಯಾವುದೋ ಒಂದು ಪಟ್ಟಣಕ್ಕೆ ತಂದು ಇಳಿಸಿತು.

ಆ ಪಟ್ಟಣದಲ್ಲಿ ಒಂದು ಕುಂಬಾರ ಬೀದಿ. ಆ ಬೀದೀಲಿ ರಾಜಕುಮಾರ ಕುದುರೇನೂ ಹಿಡಕೊಂಡು ಹೋಯ್ತಾ ಇದ್ದ. ಒಂದು ದೊಡ್ಡ ಹಳೇ ಮನೆ. ಅದರ ಜಗಲಿ ಮ್ಯಾಲೆ ಒಬ್ಬ ಮುದುಕಪ್ಪ ಕುಟ್ಟಣದಲ್ಲಿ ಎಲೆ ಕುಟ್ತಾ ಕೂತಿದ್ದ. ರಾಜಕುಮಾರ ಅವನ ಹತ್ರಕ್ಕೆ ಹೋಗಿ, "ಅಜ್ಜಯ್ಯ ಅಜ್ಜಯ್ಯ, ನಾನು ದಾರಿತಪ್ಪಿ ಬಂದಿವ್ನಿ, ಒಂದೆಂಟು ದಿನ ನಿನ್ನ ಮನೇಲಿ ನಂಗೆ ಉಳ್ಕೋಳಾಕೆ ಜಾಗ ಕೊಡು" ಅಂದ.

"ನೀನು ಯಾವೂರಪ್ಪ?" ಅಂತ ಕೇಳಿದ ಮುದುಕಪ್ಪ.

"ಅಯ್ಯೋ ನಂದೊಂದು ಊರು ಕೇರಿ. ನಾನೊಬ್ಬ ಪರದೇಸಿ" ಅಂದ.

"ಹ್ಯಂಗೋ. ನಿಂಗೇಟು ದಿನ ಬೇಕೋ ಅಷ್ಟು ದಿನಗಂಟ ಇರಪ್ಪ, ಅದ್ಕೇನು" ಅಂತಂದ ಮುದುಕ. ರಾಜಕುಮಾರ ಸೊಂಟದಿಂದ ಒಂದು ಹಿಡಿತುಂಬ ಹೊನ್ನು ತೆಗೆದು ಮುದುಕನಿಗೆ ಕೊಟ್ಟ. ಅವನಿಗೆ ಕೈಲಾಸವೇ ಇಳಿದಂತಾಯಿತು. ಸರಿ, ಅವನ ಮನೇಲಿ ರಾಜಕುಮಾರ ಉಳಿದುಕೊಂಡ.

೨

ಆ ಪಟ್ಟಣದಲ್ಲಿ ಒಬ್ಬ ರಾಜ. ಅವನಿಗೆ ಒಬ್ಬಳು ರತಿದೇವಿಯಂಥ ಮಗಳು. ಕತ್ತಲೆ ಮನೆಗೆ ದೀಪಹತ್ತಿಸೋಹಂಗೇ ಇಲ್ಲ ಅವಳಿದ್ದರೆ, ಹಂಗಿದ್ದಳು ಅವಳು. ಅವಳು ಋತುವಾಗಿ ಹನ್ನೆರಡು ವರ್ಷವಾಗಿತ್ತು. "ದೇವಲೋಕದಿಂದ ಮುತ್ತಿನ ಶಲ್ಯ ತಂದೋರಿಗೆ ನಾನು ಮದುವೆಯಾಗ್ತೀನಿ" ಅಂತ ಅವಳು ಪಣತೊಟ್ಟಿದ್ದಳು. ಅದಕೆ ಸಲುವಾಗಿಯೇ ಹನ್ನೆರಡು ವರ್ಷದಿಂದ ಕಾದು ತಪಸಿದ್ದಳು. ಅವಳು ಏಳು ಮಲ್ಲಿಗೆ ಹೂವಿನ ತೂಕದ ಹೆಣ್ಣು. ದಿನಾ ಹೊತ್ತಾರೆ ಎದ್ದು ಮಗಳ ಉಪ್ಪರಿಗೆಗೆ ಬಂದು ರಾಜ ಅವಳನ್ನು ತೂಕಕ್ಕೆ ಹಾಕುತ್ತಿದ್ದ. ರಾಜಕುಮಾರನಿಗೆ ಇದೆಲ್ಲಾ ಕುಂಬಾರನಿಂದ ತಿಳಿಯಿತು.

ರಾಜಕುಮಾರಿ ಏಳುಪ್ಪರಿಗೆ ಮೇಲೆ ವಾಸಮಾಡುತ್ತಿದ್ದಳು. ಸುತ್ತಮುತ್ತ ಪಾರ. ಒಂದು ಗಂಡು ನೊಣವೂ ಅಲ್ಲಿ ಸುಳಿಯೋ ಹಂಗಿರಲಿಲ್ಲ. ಸಮ ಸಮ ರಾತ್ರೆ ಹೊತ್ತು. ಎಲ್ಲಾರಿಗೂ ಮಾ ನಿದ್ರೆ ಹೊತ್ತು. ರಾಜಕುಮಾರ ಮರಗುದುರೆ ಹತ್ತಿ ಭರ್ರ್ ಅಂತ ನೆಟ್ಟಗೆ ಉಪ್ಪರಿಗೆ ವಳಕ್ಕೆ ಹೋಗಿಬುಟ್ಟ. ಮಲ್ಲಿಗೆ ಹೂವಿನ ಹಾಸಿಗೆ ಮೇಲೆ ರಾಜಕುಮಾರಿ ಮಲಗಿದ್ದಳು. ಅವಳ ರೂಪ ನೋಡಿ ರಾಜಕುಮಾರನ ಕಣ್ಣಿಗೆ ರಂಜನೆ ಹೊಡೆದಂಗಾಯಿತು. ದಡಕ್ ಅಂದ ಶಬ್ದ ಕೇಳಿ ಅವಳು ಸರಕ್ಕನೆ ಎಚ್ಚರವಾಗಿ ಹಾಸಿಗೆ ಮೇಲೆ ಎದ್ದು ಕೂತಳು. ಕಣ್ಣುಬುಟ್ಟು



ಸುತ್ತ ಮುತ್ತ ನೋಡಿದಳು. ರಾಜಕುಮಾರ ನಗ್ತಾ ನಿಂತಿದ್ದ.

"ನೀನು ಯಾರು ? ಇಲ್ಲಿಗೆ ಹ್ಯಂಗೆ ಬಂದೆ ? ಇಷ್ಟು ಹೊತ್ತಿನಲ್ಲಿ ಹ್ಯಂಗೆ ಬಂದೆ?" ಅಂದಳು.

"ನನ್ನ ಸುದ್ದಿ ಇರಲಿ. ಆ ಮೇಲೆ ಹೇಳ್ತೀನಿ. ನಿನ್ನ ಸುದ್ದಿ ಹೇಳು. ಇಷ್ಟೊಂದು ದೇವಸುಂದರಿ ಹಂಗೆ ಇದ್ದಕೊಂಡು ಇನ್ನೂ ಯಾಕೆ ನೀನು ಮದುವೆಯಾಗಿಲ್ಲ?" ಅಂದ ರಾಜಕುಮಾರ.

"ದೇವಲೋಕದಿಂದ ಮುತ್ತಿನ ಶಲ್ಯ ತಂದು ನನ್ನ ಮದುವೆಯಾಗೋ ಅಂಥ ಧೀರಗಂಡು ಇನ್ನೂ ಯಾರೂ ಬರಲಿಲ್ಲ."

"ಅದ ತಂದುಕೊಟ್ಟರೆ ಮದುವೆಯಾಗ್ತೀಯೋ?"

"ಹೂಂ".

"ಹಂಗಾರೆ ಇಲ್ಲಿ ನೋಡು" ಅಂತ ಹೇಳಿ ಮುತ್ತಿನ ಶಲ್ಯ ತೋರಿಸಿದ. ಅವಳಿಗೆ ಪರಮಾನಂದವಾಯಿತು. "ಇಷ್ಟು ದಿನ ಕಾದದ್ಕೂ ಫಲ ಸಿಕ್ತು" ಅಂದುಕೊಂಡು ಸಡಗರದಿದ ಎದ್ದು ಅವನ ಕಾಲಿಗೆ ಸಣ್ಮಾಡಿಕೊಂಡಳು. ಅವನ ಕೊಳ್ಳಿಗೆ ಹಾರ ಹಾಕಿದಳು. ಇಬ್ರೂ ಗಂಡ ಹೆಂಡತಿ ಆದರು. ಹಿಂಗೇ ಗುಟ್ಟಾಗಿ ಇದ್ದುಬಟ್ರು. ಏಟೋ ತಿಂಗಳು ಆಯ್ತು. ಒಂದು ದಿನ ಹೊತ್ತಾರೆ ರಾಜ ಬಂದ; ಮಗಳನ್ನ ತೂಕಕ್ಕೆ ಹಾಕಿದ. ಏಳು ಮಲ್ಲಿಗೆ ಹೂವಲ್ಲ, ಎಷ್ಟು ಮಲ್ಲಿಗೆ ಹೂವು ಹಾಕಿದರೂ ತೂಕ ಏಳಲೇ ಇಲ್ಲ. ಅವನಿಗೆ ಅನುಮಾನವಾಯಿತು. ಹುಚ್ಚು ಕೋಪ ಬಂತು. "ಇದ್ಕೇನು ಕಾರಣ ಹೇಳು. ಯಾರು ಬಂದಿದ್ರು?" ಅಂದ. ಅವಳು ಮಾತಾಡಲೇ ಇಲ್ಲ. ಬಗ್ಗಿಸಿದ ತಲೆ ಮೇಲಕ್ಕೆ ಎತ್ತಲೇ ಇಲ್ಲ. ರಾಜ ಗೌಡಿಯರಿಗೆಲ್ಲಾ ಆಜ್ಞೆ ಮಾಡಿದ :

"ಯಾರೂ ಅವಳ ಸೇವೆ ಮಾಡಬ್ಯಾಡಿ. ಹಂಗೇ ಬಿದ್ದಿರ್ಲಿ ಕುಲಗೆಟ್ಟೋಳು"

ಸರಿ, ಯಾರೂ ರಾಜಕುಮಾರಿಯ ಬಟ್ಟೆ ಒಗೆಯಲಿಲ್ಲ. ಮನೆ ಕಸ ಗುಡಿಸಲಿಲ್ಲ, ಅವಳಿಗೆ ಉಣ್ಣಾಕೆ ಇಕ್ಕಲಿಲ್ಲ. ಕೊಳೆ ಬಟ್ಟೆ ರಾಶಿಯಾಗಿ ಬೀಳ್ತು. ಆವತ್ತೂ ಸಮಸಮ ರಾತ್ರಿ. ರಾಜಕುಮಾರ ಬಂದ, ರಾಜಕುಮಾರಿ ನಡೆದ ಸಂಗತೀನೆಲ್ಲ ತಿಳಿಸಿದಳು. ರಾಜಕುಮಾರ ಆ ಬಟ್ಟೇನೆಲ್ಲ ಮರಗುದುರೆ ಮ್ಯಾಲೆ ಹೇರಿಕೊಂಡು ಕುಂಬಾರನ ಮನೆಗೆ ಬಂದ. ಅವನನ್ನು ಕರೆದು ಹೇಳಿದ:

"ನೋಡಜ್ಜಾ, ಗುಟ್ಟಾಗಿ ಯಾರಿಗೂ – ಒಂದು ನರಪಿಳ್ಳೆಗೂ ತಿಳೀದಂಗೆ ಈ ಬಟ್ಟೆ ಒಗೆಸಿಕೊಡಬೇಕು. ದುಡ್ಡು ಏಟಾದ್ರೂ ನಾನು ಕೊಡ್ತೀನಿ. ನಿನಗೆ ಯಾರಾದ್ರೂ ಒಬ್ಬ ನಂಬಿಗಸ್ತನಾದ ಅಗಸ ಗೊತ್ತಿದ್ರೆ ಹೇಳು"

ಮುದುಕ ಒಪ್ಪಿ ತನಗೆ ಪರಿಚಯವಿದ್ದ ಒಬ್ಬ ಮಡಿವಾಳರೋನಿಗೆ ಯಾರಿಗೂ ಕಾಣದಂಕೆ ಬಟ್ಟೆ ಒಗೆಯೋ ಹಂಗೆ ತಾಬೀಲು ಮಾಡಿದ.

ಹೊತಾರೆ ಗೌಡೀರು ರಾಜಕುಮಾರಿಯ ಉಪ್ಪರಿಗೆಗೆ ಬಂದರು, ನೋಡಿದರು. ಅಲ್ಲಿ ಒಂದು ತುಂಡೂ ಕೊಳೆ ಬಟ್ಟೆ ಇರಲಿಲ್ಲ. ಗೌಡೀರು ರಾಜನಿಗೆ ಈ ಸುದ್ದಿ ತಿಳಿಸಿದರು. ತಕ್ಷಣವೇ ರಾಜ ಬಟ್ಟೆಕಳ್ಳನ್ನ ಹಿಡಿಯೋಕೆ ಭಟರನ್ನ ಕಳಿಸಿದ. ಊರಲ್ಲೆಲ್ಲಾ ಡಂಗುರ ಸಾರಿಸಿದ – 'ಬಟ್ಟೆ ಕಳ್ಳನ್ನ ಹಿಡಿದು ಕೊಟ್ಟೋರಿಗೆ ಸಾವಿರ ವರ ಬೋಮಾನ' ಅಂತ.

ಅಗಸ ಬಟ್ಟೆ ತಕ್ಕೊಂಡು ಪಟ್ಟಣದ ಹೊರಗಿದ್ದ ಒಂದು ಕಾಡಿನ ಮಧ್ಯಕ್ಕೆ ಹೋದ. ಅಲ್ಲೊಂದು ಹಳ್ಳ ಇತ್ತು. ಅಲ್ಲಿ ಯಾವಾಗಲೂ ಜನದ ಸಂಚಾರ ಇತ್ತಿಲ್ಲ. ಆದ್ರಿಂದ ಧೈರ್ಯವಾಗಿ ಅಗಸ ಬಟ್ಟೇನೆಲ್ಲಾ ಒಗೆದು ಹಂಡಿದ. ರಾಜ ಅರಮನೆ ಮಾಡಿ ಮೇಲೆ ನಿಂತು ಸುತ್ತಾ ನೋಡ್ತಾ ಇರುವಾಗ ದೂರದಲ್ಲಿ ಗಾಳಿಗೆ ಬಟ್ಟೆಗಳು ಹಾರಾಡೋದು ಕಾಣಿಸ್ತು. ಆ ಕೂಡಲೇ ಭಟರನ್ನ ಕಳಿಸಿದ. ಅವರು ಹೋಗಿ ಅಗಸನನ್ನ ಹಿಂಗಟ್ಟು ಮುಂಗಟ್ಟು ಕಟ್ಟಿ ಬಟ್ಟೆ ಸಮೇತ ಎಳಕೊಂಡು ಬಂದರು. "ಇವನ್ನ ಊರುಸುತ್ತ ಕತ್ತೆಮೇಲೆ ಕೂರಿಸಿ ಮೆರವಣಿಗೆ ಮಾಡಿಸಿ ಗಲ್ಲಿಗೆ ಹಾಕಿಬಿಡಿ" ಅಂತ ರಾಜ ಅಪ್ಪಣೆ ಮಾಡಿದ. ಸರಿ, ಅಗಸನ್ನ ಕತ್ತೆ ಮೇಲೆ ಹಿಂದುಮುಂದಾಗಿ ಕುಂಡಿರಿಸಿ ಕಟ್ಟಿದರು. ತಲೆ ಮೇಲೆ ಮೂರು ಪಟ್ಟೆ ಬೋಳಿಸಿದರು. ಹಣೆಗೆ ಎಳೆ ಬರೆದರು. ಸುತ್ತಮುತ್ತ ವಾದ್ಯ ಬಾರಿಸಿಕೊಂಡು "ಬಟ್ಟೆಕಳ್ಳ ಬಟ್ಟೆಕಳ್ಳ" ಅಂತ ಕೂಗ್ತಾ ಊರುಸುತ್ತಾ ಸುತ್ತಿಸಿದರು. ಮೆರವಣಿಗೆ ಕುಂಬಾರ ಬೀದಿಗೆ ಬತ್ತು. ಕುಂಬಾರ ಅಗಸನ ಮೊಖ ನೋಡಿದ. ಅವನಿಗೆ ತುಂಬಾ ಹೊಟ್ಟೆ ಉರಿ ಬತ್ತು. ಒಳಕ್ಕೆ ಹೋಗಿ ರಾಜಕುಮಾರನಿಗೆ ಹೇಳಿದ:

"ನೋಡಪ್ಪ, ನಿನಗೆ ಸಲುವಾಗಿ ಈ ಅಗಸ ಬಟ್ಟೆ ಒಗೆಯಾಕೆ ಒಪ್ಕೊಂಡ. ಈಗ ಅವನ ಪರಾಣಕ್ಕೇ ಮಿತ್ತು ಬಂದದೆ. ಪಾಪ ಬಡವ, ಮಕ್ಕಳೊಂದಿಗ, ಹ್ಯಂಗಾರ ಮಾಡಿ ಅವನ್ನ ಉಳ್ಸು".

ರಾಜಕುಮಾರ ಹೊರಗೆ ಬಂದು ಮೆರವಣಿಗೆಯ ಹತ್ತಿರ ಹೋದ. ಅಗಸನ್ನ ಕರಕೊಂಡು ಹೋಗುತ್ತಿದ್ದೋರನ್ನ ನಿಲ್ಲಿಸಿ "ಇದೇನನ್ಯಾಯ? ಈ ಅಗಸ ಎಲ್ಲಾರೂ ಅರಮನೆ ವಳೀಕೆ ಹೋಗಾಕಾದಾತಾ? ಅದ್ರಲ್ಲೂ ರಾಜಕುಮಾರಿ ಇರೋ ಉಪ್ಪರಿಗ್ಗೆ ಒಂದು ಗಂಡು ನೊಣಾನೂ ಹೋಗದಂಗೆ ಪಾರಾ ಹಾಕ್ಯವ್ರೆ. ಅಂತಾದ್ರಲ್ಲಿ ಈ ಬಡವ ನುಗ್ಗಾಕಾದಾತಾ? ಬಟ್ಟೆ ತಂದು ಕೊಟ್ಟೋರ ಹಿಡಕೊಂಡು ಹೋಗೋದು ಬುಟ್ಟು, ಪಾಪಾ ಈ ಬಡ ಪರಾಣಿ ಹಿಡಕೊಂಡು ಹೋಯ್ತಾ



ಇದ್ದೀರಲ್ಲ. ನಿಮಗೇನು ಬುದ್ಧಿ ಇಲ್ವ? ನಿಮ್ಮ ರಾಜನಿಗೆ ಬುದ್ಧಿ ಇಲ್ವ ?" ಅಂದ. ಅವರಿಗೆ ರೇಗಿತು. "ಏನಯ್ಯಾ ನಮ್ಮ ದೊರೆಗಳ್ನೇ ಹಿಂಗಂತೀಯ. ನಿಂಗೇನು ಗತಿಕಾಲ ವಕ್ರಿಸಿ ಬಂದದೆ ಅಂತ ಕಾಣ್ತದೆ." ಅಂದು ಪಕ್ಕದಲ್ಲಿದ್ದೋನಿಗೆ ಮುಖಂಡ ಹೇಳಿದ: "ಬಾಳ ಜೋರು ಮಾಡ್ತಾನೆ ಇವನ್ನೇ ಹಿಡಕೊಳ್ರೊ. ಹಂಗಾರೆ ಇವನೇ ಬಟ್ಟೇಕಳ್ಳ ಇರಬೇಕು. ಆ ಆಗಸನ್ನ ಬಟ್ಟು ಬುಡಿ". ಸರಿ, ಅವರು ಅಗಸನ್ನ ಬುಟ್ಟು ಇವನನ್ನ ಹಿಡಿದುಕೊಂಡರು. ಅವನು ಹೆದರಲಿಲ್ಲ. "ಪರವಾಯಿಲ್ಲ, ನನ್ನೇ ಹಿಡಕೊಂಡು ನಡೀರಿ. ಆದ್ರೆ ನಂದೊಂದು ಬದುಕದೆ, ವಳೀಕೆ ಹೋಗಿ ತತ್ತೀನಿ ತಡೀರಿ" ಅಂತ ಹೇಳಿ ಕುಂಬಾರನ ಮನೇವಳಕ್ಕೆ ಹೋದ. ಮರಗುದುರೆ ತಕ್ಕೊಂಡು ಬಂದ. ಅದನ್ನ ನೋಡಿ ಅವರೆಲ್ಲ ಗೊಳ್ ಅಂತ ನಗಾಡಿದರು. ಇವನು ಮಾತಾಡಲಿಲ್ಲ. ಸೂಲದ ಮರದ ಹತ್ರಕ್ಕೆ ಕರಕೊಂಡು ಹೋದರು. ಇನ್ನೇನು ಸೂಲಕ್ಕೆ ಏರಿಸಬೇಕು. ಆಗ "ಒಂದು ಗಳಿಗೆ ತಡೀರಿ. ನನ್ನ ಕುದುರೆ ಮೇಲೆ ಕೂತ್ಕೋತೀನಿ, ಆ ಮ್ಯಾಲೆ ಏರಿಸಿ" ಅಂದ ರಾಜಕುಮಾರ. ಮರಗುದುರೆ ಮೇಲೆ ಏರಿದ. ಅವರೆಲ್ಲ ಸುತ್ತ ನೋಡ್ತಾ ನಿಂತಿದ್ದರು. "ಹುಂ" ಅಂದ. ಕುದುರೆ 'ಭರ್ರ್' ಅಂತ ಆಕಾಶಕ್ಕೆ ನೆಗೆಯಿತು. ಅವರೆಲ್ಲಾ ಕಣ್ಣು ಕಣ್ಣು ಬುಡುತ್ತಾ ನಿಂತುಕೊಂಡರು.

ರಾಜಕುಮಾರ ಕುದುರೇನೂ ಹಾರಿಸಿಕೊಂಡು ನೆಟ್ಟಗೆ ರಾಜಕುಮಾರಿಯ ಉಪ್ಪರಿಗೆಗೆ ಇಳಿದ. "ಬಿರ್‍ರನೆ ಬಾ ಈಗ ಹೋಗಾನೆ" ಅಂದ. ಬಂದಳು. ಎತ್ತಿ ಅವಳನ್ನು ಕುದುರೆ ಮೇಲೆ ಮುಂದುಗಡೆ ಕೂರಿಸಿಕೊಂಡು ದಗನ ಮಾರ್ಗದಲ್ಲಿ ಹೊಂಟೋದ. ಕುದುರೆ ಹಾರಿಸಿದ, ಹಾರಿಸಿದ, ಹಾರಿಸಿದ, ಹಂಗೆ ಹಾರಿಸಿದ. ರಾಜಕುಮಾರಿ ಆಗಲೇ ಬಿಮ್ಮನಸೆ ಆಗಿದ್ದಳು. ಕುಲುಕಿ ಕುಲುಕಿ ಹೊಟ್ಟೆ ನೋವು ಬಂತು ಅವಳಿಗೆ ವಿಪರೀತ ಆಯಾಸವಾಯಿತು. "ನಿಮ್ಮ ದಮ್ಮಯ್ಯ ಅಂತೀನಿ, ಕುದುರೆ ಇಳಿಸಿ" ಅಂತ ಗಂಡನನ್ನು ಅಂಗಲಾಚಿದಳು. ಅವನು "ಇಳಿಂಬಿ" ಅಂದ. ಕುದುರೆ ಒಂದು ಪಟ್ಟಣದ ವತ್ತಿನಲ್ಲಿ ಇವರನ್ನು ತಂದು ಇಳಿಸಿತು. ರಾಜಕುಮಾರಿಗೆ ಸಾಕೋ ಸಾಕಾಗಿತ್ತು. ಬಾಯಾರಿ ಗಂಟಲು ಒಣಗಿಹೋಯಿತು. "ಬಾಯಾರ್ತದೆ, ಏನಾದರೂ ತಂದುಕೊಡಿ" ಅಂದಳು. ಒಬ್ಬಳನ್ನೇ ಬುಟ್ಟು ಹೋಗುವುದು ಹ್ಯಂಗೆ? ಸರಿ, ಅವರ ಅದೃಷ್ಟಕ್ಕೆ ಸರಿಯಾಗಿ ಅಲ್ಲಿ ಯಾವಳೊ ಒಬ್ಬಳು ಹೆಂಗಸು ಬತ್ತಿದ್ದಳು. ಅವಳು ಗಂಡನ ಹತ್ರ ಜಗಳಾಡಿಕೊಂಡು ತೌರು ಮನೆಗೆ ಹೋಯ್ತಾ ಇದ್ದಳು. ರಾಜಕುಮಾರ ಅವಳನ್ನು ಕರೆದು, "ಅಮ್ಮಾ ಅಮ್ಮಾ ಒಂದು ಸ್ವಲ್ಪಹೊತ್ತು ಇವಳ ಜೊತೇಲಿರು. ಇವಳು ಒಬ್ಬಳೇ ಹೆದರಿಕೊತ್ತಾಳೆ.

ನಿಂಗೆ ಬೇಕಾದೋಟು ದುಡ್ಡು ಕೊಟ್ಟೇನು" ಅಂದ. ಅವಳು ಸಂತೋಷದಿಂದ ಒಪ್ಪಿದಳು. ರಾಜಕುಮಾರ ಅವರಿಬ್ಬರನ್ನೂ ಕೂರಿಸಿ ಕುದುರೆ ಹತ್ತಿ "ಏನಾದ್ರೂ ಹಣ್ಣುಹಂಪಲು ಇದ್ದರೆ ತತ್ತೀನಿ" ಅಂತ ಅಂಗಡಿಗೆ ಹೋದ. ಅಲ್ಲಿ ತನಗೆ ಬೇಕಾದಷ್ಟು ಹಣ್ಣು ಪಣ್ಣು ಕೊಂಡುಕೊಂಡ. ಒಂದು ಚುಟ್ಟ ತಕ್ಕೊಂಡು ಹತ್ತಿಸಿಕೊಂಡ. ಕುದುರೆ ಮೇಲೆ ಕೂತುಕೊಂಡು ಬತ್ತಾ ಇದ್ದ. ಸೇದುವಾಗ ಚುಟ್ಟದ ಬೆಂಕಿ ಕಿಡಿ ಕುದುರೆ ಮೈಮೇಲೆ ಬಿತ್ತು. ತಕ್ಷಣವೇ ಅದು ಛಂಗನೆ ನೆಗೆದು ಹುಚ್ಚು ಬಂದಂಗೆ ಹಾರಿತು. ಹಾರಿ ಹಾರಿ ಏಳು ಸಮುದ್ರದಿಂದ ಆಚೆಗೆ ಅವನ್ನ ಎಸೆದು ತಾನೂ ಸಮುದ್ರಕ್ಕೆ ಬಿದ್ದುಬಿಟ್ಟಿತು.

೩

ರಾಜಕುಮಾರಿ ಮತ್ತೆ ಆ ಹೆಂಗಸು ಇಬ್ಬರೂ ಹಂಗೂ ನೋಡಿದರು. ಹಿಂಗೂ ನೋಡಿದರು. ರಾಜಕುಮಾರ ಬರಲೇ ಇಲ್ಲ. ಕತ್ತಲಾಯ್ತು ಬಂತು, ಬರಲೇ ಇಲ್ಲ. ಜೊತೇಲಿದ್ದ ಹೆಂಗಸು, "ನಾನು ಇನ್ನೇಟು ಹೊತ್ಗಂಟ ಕಾಯ್ಕೊಂಡು ಕೂತ್ಕೊಳ್ಳಿ ನಾನು ಹೋಯ್ತೀನಿ. ಆವಯ್ಯ ಎಂಥೋನು – ಏಕಾಂಗಿ ಹೆಂಗಸನ್ನು – ಅದೂ ತುಂಬಿದ ಬಸರಿಯ – ಹಿಂಗೆ ಬುಟ್ಟುಟ್ಟು ಹೊಂಟೋದ್ನಲ್ಲ. ಅವನೇನು ಮನುಷ್ನ ನಾ....." ಅಂದು ಹೊಂಟೇ ಹೋದಳು.

ರಾಜಕುಮಾರಿಗೆ ಇಪರೀತ ಭಯ ಆಯಿತು; ಹೊಟ್ಟೆ ನೋವು ಬೇರೆ ಷುರುವಾಯಿತು. ಎಡಗೈಲಿ ಜೀವ ಹಿಡಕೊಂಡು ಪಟ್‌ಪಿಟ್ ಅನ್ನದೆ ಮುದುರಿಕೊಂಡು ಕೂತುಕೊಂಡಳು. ಮಧ್ಯ ಮಧ್ಯ ರಾತ್ರೆ ಸಮಯ. ಅಲ್ಲೇ ಒಂದು ಗಂಡು ಮಗು ಹೆತ್ತಳು. ತಾನು ಉಟ್ಟಿದ್ದ ಸೀರೇನೆ ಅರ್ಧ ಹರಿದು ಅದಕ್ಕೆ ಸುತ್ತಿಕೊಂಡಳು. ಹಂಗೂ ಹಿಂಗೂ ಬೆಳಕು ಹರಿಸಿದಳು. ಹೊತ್ತಾರೆ ಎದ್ದು ಮಗು ಎತ್ಕೊಂಡು ಪಟ್ಟಣಕ್ಕೆ ಹೋದಳು. ಅಲ್ಲೊಂದು ಸೂಳೇರ ಬೀದಿ. ಅಲ್ಲೊಂದು ಮನೆ ಜಗಲಿ ಮೇಲೆ ಒಬ್ಬಳು ಮುದಿ ಸೂಳೆ ಕೂತಿದ್ದಳು. ಅರ್ಧ ಸೀರೆ ಉಟ್ಕೊಂಡು, ಒಂದು ಮೊಗಾನು ಎತ್ಕೊಂಡು ಹೋಯ್ತಾ ಇರೋ ಈ ರತಿಯಂಥ ಹೆಂಗಸಿನ ಮೇಲೆ ಅವಳ ಕಣ್ಣು ಬಿತ್ತು. ಮುಂದಕೆ ಓಡಿ ಬಂದು ಕೂಗಿದಳು:

"ಯಾರವ್ವಾ ನೀನು ಹಿಂಗೆ ಹೋಯ್ತಾ ಇದ್ದಿ? ಅಯ್ಯಯ್ಯೋ ಎಳೆ ಬೊಮಟೆ ಹೊತ್ಕೊಂಡು ಹೋಯ್ತಾ ಇದ್ದೀಯಲ್ಲವ್ವಾ .... ಬಾಯಿಲ್ಲಿ .... ಬಾರವ್ವಾ ಇಲ್ಲಿ"



ರಾಜಕುಮಾರಿ ಅವಳ ಮನೆಹತ್ರ ಬಂದಳು. ಮುದುಕಿ "ನೀನ್ಯಾರವ್ವಾ?" ಅಂದಳು ಮತ್ತೆ.

"ನಾನೊಬ್ಬಳು ಪರದೇಶಿ"

"ಹಂಗಾದರೆ ನಮ್ಮನೇಲಿ ಇದ್ಬುಡವ್ವ ... ನನ್ನ ಮಗಳಂಗೆ ಸಾಕ್ಕೊತ್ತೀನಿ. ಮೊಗ ಏಟೋಂದು ಚಂದಾಗ್ಯದೆ – ಒಳ್ಳೆ ರವಿಚಂದ್ರನಂಗೆ ಉರೀತದೆ. ಹೀಗೆ ಹೊತ್ಕೊಂಡೋದ್ರ ಈ ಕಿಸಲೆ ಬದುಕ್ತದಾ ? ಬಾ ಬಾ" ಅಂದಳು ಮುದುಕಿ. ರಾಜಕುಮಾರಿ ಒಂದು ಗಳಿಗೆ ಯೋಚನೆ ಮಾಡಿದಳು. 'ಮುಂದಕ್ಕೆ ಹೆಜ್ಜೆ ಮಡಗಾಕೆ ಆಯ್ತಾ ಇಲ್ಲ. ಬಟ್ಟೆಯಲ್ಲಾ ಗವಲು ಹೊಡೀತವೆ. ಹೂಂ ಆದದ್ದಾಗಲಿ' ಅಂದುಕೊಂಡು ಅವಳ ಮನೇಲಿ ಇರಾಕೆ ಒಪ್ಪಿಕೊಂಡಳು.

ಮುದುಕಿ ಸೂಳೆ ರಾಜಕುಮಾರಿಯನ್ನು ಚೆನ್ನಾಗೇ ನೋಡಿಕೊಂಡಳು. ಆ ಮಗೂನ ಮೇಲೆ ಅವಳಿಗೆ ಬಾಳ ಪಿರೀತಿ. ರಾಜಕುಮಾರಿಯಂತೂ ತನ್ನ ಮಗನ್ನ ಬುಟ್ಟು ಅತ್ತಿತ್ತ ಅಳ್ಳಾಡುತ್ತಿರಲಿಲ್ಲ. ಹಿಂಗೇ ಹನ್ನೆರಡು ದಿನ ಕಳೀತು. ಆ ಪಟ್ಟಣದ ರಾಜನಿಗೆ ಬೋಕಾಲದಿಂದಲೂ ಮಕ್ಕಳಿರಲಿಲ್ಲ. ಈಗ ಒಂದು ಗಂಡು ಮೊಗ ಆಗಿತ್ತು. ಆದರೆ ಅದಕೆ ಏಳ್ತಾ ಏಳುರೋಗ, ಏನು ಮಾಡಿದ್ರೂ ರುಜುಬಲವೇ ಆಗಲಿಲ್ಲ. ರಾಣಿಗೆ ಅಪರೂಪಕ್ಕೆ ಹುಟ್ಟಿದ ಮೊಗ ಹಿಂಗಾಯ್ತಲ್ಲ ಅಂತ ಕೊರಗು ಕುಟ್ಟೇಹುಳದಂಗೆ ಕೊರೀತಿತ್ತು. ಆ ಅರಮನೆಗೆ ಈ ಮುದಿಸೂಳೆ ಹೋಯ್ತಾ ಬತ್ತಾ ಇದ್ದಳು. ರಾಣಿ 'ತನ್ನ ಮೊಗ ಬತ್ತಾ ಬತ್ತಾ ಸಾಯ್ತಾ ಅದೆ, ಇವತ್ತೋ ನಾಲಿಕ್ಕೋ ಗೊಟಕ್ ಅಂತದೆ, ಏನ್ಮಾಡೋದೂ' ಅಂತ ಇವಳ ಮುಂದೆ ಕಣ್ಣೀರು ಸುರಿಸಿದಳು. ಮುದುಕಿ ಅವಳಿಗೆ ಸಮಾಧಾನ ಹೇಳಿದಳು.

"ಇದೇನೋ ನಿಮ್ಮ ಕೈವಸ ಆಗ್ನಿಲ್ಲ ಕನ್ರವ್ವ. ಇನ್ನೊಂದೆರಡು ದಿನ ಶಿವ ಶಿವಾ ಅಂತ ಬದುಕಿದ್ರೆ ಅದೇ ಹೆಚ್ಚು. ಆದರೆ ನೀವೇನೂ ಯೋಚನೆ ಸಿಂತೆ ಮಾಡಬ್ಯಾಡ. ಸೂರಚಂದ್ರನಂಗೆ ಉರಿಯೋ ಒಂದು ಮೊಗ ನಿಮಗೆ ತಂದುಕೊಡ್ತೀನಿ, ನನ್ನ 'ಕಿರಿಯಾ'ನಾರೂ ನೋಡಿವ್ರಿ. ನಿಮ್ಮನೆ ಉಪ್ಪು ತಿಂದಿದ್ಕೆ ಇದೊಂದಿಷ್ಟು ಋಣಾನಾರೂ ತೀರಿಸ್ತೀನಿ"

ಮುದುಕಿ ಮನೆಗೆ ಬಂದಳು. ರಾಜಕುಮಾರಿಯ ತಲೆದೆಸೆ ಕೂತುಕೊಂಡು ಎಂದೂ ಇಲ್ಲದ ಅಕ್ಕರೆಯಿಂದ ಅವಳ ತಲೆ ಮೇಲೆ ಕೈಯಾಡಿಸಿದಳು. ಮಗೂನ ಮೊಖಕ್ಕೆ ತನ್ನ ಎರಡು ಕೈನೂ ನೀವಳಿಸಿ ನಟಿಕೆ ತೆಗೆದಳು. ಆ ಮೇಲೆ ಮೆಲ್ಲಗೆ ಹೇಳಿದಳು:

"ನೋಡವ್ವ, ಮಗೀಗೆ ಹನ್ನೆರಡು ದಿನ ತುಂಬೋಯ್ತು. ಹನ್ನೆರಡು ದಿನ

ಆದ ಮೇಲೆ ಬಾಣತಿ ಹೋಗಿ ಗಂಗಾಸ್ಥಾನದಲ್ಲಿ ತಾನ ಮಡಿ ಮಾಡಿಕೊಂಡು ಬರಬೇಕು, ಇದು ನಮ್ಮ ಕುಲದ ಪದ್ಧತಿ. ಹಂಗಾದ್ರೇ ಹೆತ್ತ ಸೂತಕ ಕಳಿಯೋದು. ಇಲ್ದೆ ಇದ್ರೆ ದಟ್ಟ ದರಿದ್ರ ಬಂದು ಬುಡ್ತದೆ. ಹೋಗ್ಬುಟ್ಟು ಬರ್ಹೋಗವ್ವ."

ರಾಜಕುಮಾರಿ ಭಯದಿಂದ "ಅಯ್ಯಯ್ಯೋ ನಂಗೆ ಕೈಕಾಲೇ ನೆಟ್ಟಗೆ ನಿಲ್ಲಾಕಿಲ್ಲ. ಬಾಳ ನಿತ್ರಾಣ ಆಗೋಗ್ಯದೆ. ನಾನ್ಹೆಂಗೆ ಗಂಗಾಸ್ಥಾನಗಂಟ ನಡೀಲಿ? ಅದಲ್ದೆ ಈ ಹಸುಮೊಗ ಹ್ಯಂಗೆ ಬುಟ್ಟುಹೋಗಲಿ?" ಅಂದಳು.

"ನೀನೇನೂ ಹೆದರಿಕೋಬ್ಯಾಡ ಕನವ್ವಾ ನಾನಿವ್ನಿ. ನಾನೇನು ಮಕ್ಳುಮರಿಹೆತ್ತೋಳಲ್ವಾ? ನಿನ್ನ ಜೊತೆಗೆ ನಮ್ಮನೇಲಿರೋ ಹೆಂಗಸರ್ನ ಯಾರ್ನಾರೂ ಕಳಿಸ್ಕೊಡ್ತೀನಿ" ಅಂತ ಹೇಳಿ ಅವಳ್ನ ಜಿಂಜಿನ್‌ಜಿರಿ ಹತ್ಸಿ ಜೀವಕೆ ಜೀರಿಗೆ ಅರದು ಹ್ಯಂಗೋ ಒಪ್ಪಿಸಿ ಕಳಿಸಿ ಬುಟ್ಟಳು, ಮುದುಕಿ.

ಸರಿ, ರಾಜಕುಮಾರಿ ಮನಸಿಲ್ದ ಮನಸ್ಸಿನಿಂದ ಆಕಡೆ ಹೋದಳು. ಈಕಡೆ ಅವಳ ಮೊಗ ತಕ್ಕೊಂಡು ಹೋಗಿ ರಾಣಿ ಹತ್ರ ಮನಗಿಸಿ, ಆ ರೋಗದ ಮೊಗತಂದು ಇಲ್ಲಿ ಮನಗಿಸಿದಳು, ಮುದಿಸೂಳೆ. ರಾಜಕುಮಾರಿ ಗಂಗೆಯಿಂದ ಬಂದು ನೋಡಿದಾಗ ಮೊಗ ಕಜೆ ತೆಗೆದಿತ್ತು. ಎತ್ತಿಕೊಂಡು ಮೊಖ ನೋಡಿದಾಗ ಅವಳಿಗೆ ದೊಡ್ಡ ಜೀವವೇ ಹೋದಂತಾಯಿತು: "ಅಯ್ಯೋ, ಇದು ನನ್ಮೊಗ ಅಲ್ಲ. ನನ್ಮೊಗ ಅಲ್ಲ. ನನ್ಮೊಗ ಏನಾಯ್ತು? ಕೊಡಿ ಕೊಡಿ" ಅಂತ ಗೋಗರೆದು ಅತ್ತಳು. ಎದೆ ಎದೆ ಬಡಕೊಂಡಳು. ಆದರೆ ಏನೂ ಫಲವಾಗಲಿಲ್ಲ. ಮುದಿಸೂಳೆ ಬಂದು "ನಿಂಗೆಲ್ಲೋ ಹುಚ್ಚು ಕನವ್ವ. ಇದು ನಿನ್ಮೊಗಲ್ದೆ ಇನ್ಯಾರ ಮೊಗ ಆದಾತು ! ಬಿಸಿಲಿನಲ್ಲಿ ಬರೊ ಹೊತ್ಗೆ ನಿನ್ನ ಕಣ್ಣು ಮಂಜಾಗಿರಬೇಕು. ಅದ್ಕೆ ಹಂಗೆ ಕಾಣ್ತದೆ" ಅಂದಳು. ರಾಜಕುಮಾರಿ ಇನ್ನೇನು ಮಾಡಿಯಾಳು ? ತನ್ನ ದುರಾದೃಷ್ಟವನ್ನು ಬೈದುಕೊಂಡು ಎದೆ ಕಲ್ಲು ಮಾಡಿಕೊಂಡಳು. ಆ ಮೊಗಾನೇ ಅಚ್ಚುಕಟ್ಟಾಗಿ ನೋಡಿಕೊಂಡಳು. ಅದು ತೆಗೆದ ಬಾಯಿ ಮುಚ್ಚಿರಲಿಲ್ಲ. ಹಂಗೂ ಹಿಂಗೂ ನಾಕೈದು ದಿನ ಇದ್ದು ಆ ರೋತೆಮೊಗ ಕಣ್ಮುಚ್ಚಿತು.

೪

ರಾಜನ ಮಗ ಬೆಳೆದ ಬೆಳೆದ, ಹೊತ್ತಿಗೆ ಬೆಳಿ ಅಂದರೆ ಜಾವಕ್ಕೆ ಬೆಳೆದ. ಹನ್ನೆರಡು ವರ್ಷಕ್ಕೆ ಇಪ್ಪತ್ತು ವರ್ಷದೋನಂಗೆ ಬೆಳದ. ಅವನಿಗೆ ಪಟ್ಟ ಕಟ್ಟಾಕೆ ಏಕಾನ ಮಾಡಿದರು. ಎಲ್ಲಾ ಸಿದ್ಧವಾಯಿತು. ಸೂಳೇರ ಮೇಳಕ್ಕೆ ಅರಮನೆಯವರು ಮುದಿ ಸೂಳೆಯನ್ನು ಕೇಳಿದರು. ಅವಳು ತಮ್ಮ ವಠಾರದೋರೆಲ್ಲಾರ್ನೂ ಕರಕೊಂಡಳು. ರಾಜಕುಮಾರೀನ "ನೀನು ಬಾವ್ವ" ಅಂದಳು. "ನಾನೆಲ್ಲೊ



ಮನೆ ಬುಟ್ಟು ಬರಾಕಿಲ್ಲಕನವ್ವ, ನಿನ್ನ ದಮ್ಮಯ್ಯ ಅಂತೀನಿ ನನ್ನ ಹಿಂಸೆ ಮಾಡಬ್ಯಾಡ" ಅಂದಳು. ಯಾವಾಗಲೋ ಒಂದು ಸತಿ ನಡೆಯೋ ಸಂರಂಭ ಇದು. ಹ್ಯಂಗಿರ್ತದೆ ಅಂತ, ನೋಡಾಕೆ ಎರಡು ಕಣ್ಣೂ ಸಾಲ್ದು, ಅದಲ್ದೆ ಹೋದೋರ್ಗೆಲ್ಲಾ ಬೊಗಸೆ ಬೊಗಸೇನೇ ಮುತ್ತು ರತ್ನ ತುಂಬಿಕೊಡ್ತಾರೆ. ಇಂಥ ಸಮಯ ಬುಟ್ಟೋರುಂಟ, ಬಾ" ಅಂತ ನರಕ ಹಿಂಸೆ ಮಾಡಿದಳು. ನಿರ್ವಾಹವಿಲ್ಲದೆ ಒಪ್ಪಿಕೊಂಡಳು. ಅರಮನೇಲಿ ಮಗನ ಎದುರಿಗೇ ಕೂತುಕೊಂಡಳು. ಮಗ ಅಂತ ಇವಳಿಗೆ ಗೊತ್ತಿಲ್ಲ. ಅವ್ವ ಅಂತ ಅವನಿಗೆ ಗೊತ್ತಿಲ್ಲ. ಮಗ ಎದುರಿಗೆ ಕೂತಿದ್ದ ತುಂಬು ಸುಂದರಿಯಾದ ತಾಯಿಯನ್ನು ನೋಡಿದ. ಅವನಿಗೆ ಅವಳ ಮೇಲೆ ಬಾಳ ಮನಸ್ಸು ನೆಟ್ಟುಬುಟ್ಟಿತು.

ಪಟ್ಟ ಆದ ಮೇಲೆ ಸಾಯಂಕಾಲ ಹುಡುಗ ಮುದುಕಿಯನ್ನು ಕರೆಸಿ ಹೇಳಿದ: "ನನ್ನೆದುರಿಗೆ ಕೂತಿದ್ದಲ್ಲಾ, ಅವಳ್ಯಾರಮ್ಮ?". ಮುದುಕಿಗೆ ಬಾಳ ಸಂತೋಷವಾಯಿತು. ತನಗೆ ಭಾಗ್ಯದ ನಿಧಿಯೇ ಸಿಕ್ಕುತ್ತದೆ ಅಂತ ಮನಸ್ಸಿನಲ್ಲೇ ಗುಣಾಕಾರ ಹಾಕಿಕೊಂಡು ಹೇಳಿದಳು : "ಅವಳು ನನ್ನ ಮೊಮ್ಮಗಳು ಬುದ್ಧಿ, ಅವಳಂಥ ರೂಪವಂತೇರು ನಮ್ಮ ಕುಲದಲ್ಲೇ ಇಲ್ಲಗಂಟ ಯಾರೂ ಹುಟ್ನಿರಿಲ್ಲ. ಏನೋ ನನ್ನ ಮಗಳ ಅದೃಷ್ಟ, ಇವಳು ಹುಟ್ಟವಳೆ." ಅವನಿಗೆ ಪರಮಾನಂದವಾಯಿತು. "ಇವತ್ತು ಸಂದೇಲಿ ನಿಮ್ಮನಿಗೆ ಬತ್ತೀನಿ ಹಂಗಾದರೆ, ತಕೋ" ಅಂತ ಹೇಳಿ ಒಂದು ಹಿಡಿ ಚಿನ್ನದ ವರಕೊಟ್ಟ. ಅವಳು ಸಂಭ್ರಮದಿಂದ ಮನೆಗೆ ಬಂದಳು.

ರಾತ್ರೆ ಚಂದಾಗಿ ಉಡುಪು ತೊಟ್ಕೊಂಡು ಅಲಂಕಾರ ಮಾಡಿಕೊಂಡು ಸೂಳೆ ಮನೆಗೆ ಹೊಂಟ ರಾಜಕುಮಾರ, ಬಾಗಿಲಿಗೆ ಬಂದ. ನಿಲಕ್ಕೆ ತಗಲಿ ಅವನ ಪೇಟ ಕೆಳಕ್ಕೆ ಬಿತ್ತು "ಯಾಕೋ ಅಪಶಕುನ ಆಯ್ತಲ್ಲ" ಅಂದುಕೊಂಡು ಹಿಂದಕ್ಕೆ ಹೋದ. ಎರಡನೇ ದಿನ ಹೊಂಟಾಗ ಎರಡು ಕೊತ್ತಿ ಕಡಿದಾಡಿಕೊಂಡು ಇವನಿಗೆ ಅಡ್ಡಲಾಗಿ ಬಂದವು. "ಈವತ್ತೂ ಹಿಂಗಾಯ್ತಲ್ಲ ಏನು ಕಾರಣ?" ಅಂತ ಯೋಚನೆ ಮಾಡ್ತಾ ಮತ್ತೆ ವಾಪಸ್ ಹೋದ. ಮೂರನೆ ದಿನ ಮತ್ತೆ ಶೃಂಗಾರ ಮಾಡಿಕೊಂಡು ಹೋದ. ಬಾಗಿಲ ಹತ್ತಿರ ಹಸುಕರು ಮಲಗಿದ್ದವು, ಕಾಣದೆ ಕರುವಿನ ಬಾಲ ತುಳಿದ. ಅದು ಅಮ್ಮನಿಗೆ ಹೇಳಿತು; "ಅಮ್ಮಾ, ಅಮ್ಮಾ, ಇವನಿಗೆ ಎಷ್ಟು ಸೊಕ್ಕು ನೋಡಮ್ಮ ನನ್ನ ಬಾಲ ತುಳೀತಾನಲ್ಲ, ಇವನಿಗೇನು ಕಣ್ಣೇ ಕಾಣಾಕಿಲ್ವ?". ಹಸು "ಅಯ್ಯೋ ಹೆತ್ತವ್ವನ ಹತ್ರಕ್ಕೇ ಹೋಗೋನಿಗೆ ಕಣ್ಣು ಕಾಣೋದು ನಿಜವಾ, ಸುಮ್ನಿರು" ಅಂತ ಹೇಳಿತು. ಅದನ್ನು ಕೇಳಿದ ತಕ್ಷಣ

ಅವನಿಗೆ ಎದೆ ಒಡೆದು ಹೋದಂಗಾಯ್ತು: ದೊಡ್ಡ ಜೀವವೇ ಹೋದಂಗಾಯ್ತು. ಕೂಡಲೇ ಅದೇ ಮೊಖಕ್ಕೆ ಹಿಂತಿರುಗಿ ಅರಮನೆಗೆ ಬಂದುಬಿಟ್ಟ. ಅವನ ಮೊಖ ಸೋರಿಹಾಕಿದಂಗೆ ಆಗೋಯ್ತು. ಹೋಗಿ ಮಂಚದ ಮೇಲೆ ಮೊಖಾಡೆ ಮಲಗಿಬಿಟ್ಟ. ಊಟ ತಿಂಡಿಗೆ ಯಾತಕ್ಕೂ ಏಳಲಿಲ್ಲ. ಮೊಖ ತೊಳೀನಿಲ್ಲ. ರಾಣಿ ಬಂದು ಮಗನ ಹತ್ತಿರ ನಿಂತು "ಯಾಕಪ್ಪಾ ಹಿಂಗೆ ಮಲಗಿದ್ದಿ? ನಿಂಗೇನು ಅಂಥ ಯೋಚನೆ? ಏಳು ಊಟಾಮಾಡು" ಅಂದಳು. "ನಾನೊಂದು ಮಾತು ಕೇಳ್ತೀನಿ, ನೀನು ಸತ್ಯವಾಗಿ ಹೇಳಿದ್ರೆ ನಾನು ಊಟ ಮಾಡ್ತೀನಿ. ಇಲ್ದಿದ್ರೆ ಹಿಂಗೇ ಸಾಯ್ತೀನಿ" ಅಂದ ಮಗ. "ಅದೇನು ಕೇಳಪ್ಪಾ, ಹೇಳ್ತೀನಿ" ಅಂದಳು ರಾಣಿ.

"ನಿಜವಾಗಿ ಹೇಳು, ನಾನು ಯಾರ ಮಗ?"

ರಾಣಿಯ ಮೊಖ ಚಿಕ್ಕದಾಯಿತು. ಆದರೂ ಸಾವರಿಸಿಕೊಂಡು ಹೇಳಿದಳು:

"ನೀನು ನನ್ಮಗನೇಯಕನಪ್ಪಾ, ಯಾಕ್ ಹಿಂಗೆ ಕೇಳ್ತೀ?"

"ನಿನ್ನ ಮಾಂಗಲ್ಯದ ಆಣೆಗೂ ಸತ್ಯ ಹೇಳಿದೀಯಾ ಅಮ್ಮ?"

ರಾಣಿ ಆಗ ತಡವರಿಸಿದಳು. ಕಣ್ಣಿನಲ್ಲಿ ನೀರು ಬುಳಬುಳನೆ ಸುರಿಯಿತು. ಮಗನ ಕೈ ಹಿಡಕೊಂಡು ನಡೆದ ಸಮಾಚಾರವನ್ನೆಲ್ಲಾ ತಿಳಿಸಿದಳು. ಆ ಕ್ಷಣವೇ ಮುದಿ ಸೂಳೆಯನ್ನ ಕರೆಸಿದ. ಅವನ ರೌದ್ರಾವತಾರದ ಮೊಖ ನೋಡ್ತಿದ್ದ ಹಂಗೇ ಅವಳಿಗೆ ಸಳಿ ಜರ ಎಲ್ಲಾ ಬಂದು ಹಿಂದೆ ಮುಂದೆ ಎಲ್ಲಾ ಆಗೋಯ್ತು. ರಾಜಕುಮಾರ ಹಲ್ಲು ಕಡಿತಾ,

"ಶನಿ ಮುಂಡೇ, ನಾನು ಯಾರ ಮಗ ನಿಜ ಹೇಳು" ಅಂತ ಅಬ್ಬರಿಸಿದ. ಅವಳು ಹೆದರಿ ನಡಗ್ತಾ ಬಿಕ್ ಬಿಕ್ಕಳಿಸಿಕೊಂಡು ನಡೆದ ಸಂಗತಿ ತಿಳಿಸಿದಳು.

"ನಾನು ಅವಳ ಮಗ ಅಂತ ಗೊತ್ತಿದ್ರೂ ಹಿಂಗ್ ಮಾಡಿದ್ಯಾ" ಅಂತ ಹೇಳಿ ತಕ್ಷಣವೇ ಕಟುಕರನ್ನ ಕರೆಸಿ ಅವಳನ್ನ ಸೀಳಿಸಿ ತೋರಣ ಕಟ್ಟಿಸಿದ. ಕೂಡಲೇ ತಾಯಿ ಇದ್ದ ಮನೆಗೆ ಹೋಗಿ ಹಾಸನರಿ ಅವಳ ಕಾಲಿಗೆ ಬಿದ್ದು, "ನಾನು ನಿನ್ನ ಮಗಕನಮ್ಮಾ, ಪಾಪಿ" ಅಂತ ನಡದ ಸುದ್ದಿ ತಿಳಿಸಿದ. ಅವಳು ಮಗನನ್ನ ತಬ್ಬಿಕೊಂಡಳು. ಆ ಮೇಲೆ ನಿಧಾನವಾಗಿ ತನ್ನ ಮತ್ತೆ ತನ್ನ ಅಪ್ಪನ ಸಮಾಚಾರವೆಲ್ಲ ಬಿಡಿ ಬಿಡಿಸಿ ಕೇಳಿ ತಿಳುಕೊಂಡ. "ನೀನೇನೂ ಸಿಂತೆ ಮಾಡಬ್ಯಾಡ ಅಮ್ಮ, ನಾನು ಅಪ್ಪ ಎಲ್ಲಿದ್ರೂ ಹುಡೀಕೊಂಡು ಬತ್ತೀನಿ. ಅಲ್ಲೀಗಂಟ ಧೈರ್ಯವಾಗಿ ಇಲ್ಲೇ ಇರು" ಅಂತ ಸಮಾಧಾನ ಮಾಡಿ ಅಪ್ಪನ್ನ ಹುಡುಕಾಕೆ ಹೊಂಟ.

ತಿರುಗಿ, ತಿರುಗಿದ ತಿರುಗಿದ, ದೇಶಕೋಶ ಎಲ್ಲಾನೂ ತಿರುಗಿದ. ಏಳು ಸಮುದ್ರದಿಂದಾಚೆ ಒಂದು ಪಟ್ಟಣದ ದಡದಲ್ಲಿ ಅಪ್ಪ ಹಡಗು ನಡೆಸಾಕೆ



ಸೇರಿಕೊಂಡಿದ್ದ. ಅದೇ ಹಡಗಿನಲ್ಲಿ ಮಗ ಕೂತ. ಅಪ್ಪ ಗಡ್ಡ ಮೀಸೆ ಎಲ್ಲಾನು ಬುಟ್ಟು ಕೊಂಡು ವಿಕಾರವಾಗಿದ್ದ. ಈ ಹುಡುಗನ ಅಂದಚೆಂದ ನೋಡಿ ಅವನ ಮನಸಿಗೆ ಹ್ಯಾಂಗಂಗೋ ಆಯಿತು. ಕಣ್ಣಲ್ಲಿ ನೀರು ಬತ್ತು. "ಯಾಕಯ್ಯಾ ಅಳ್ತಿ?" ಅಂದ ಮಗ. "ಯಾಕೂ ಇಲ್ಲಪ್ಪ, ಒಂಬತ್ತು ತಿಂಗಳು ತುಂಬಿದ ಬಸಿರಿ ಹೆಂಡತೀನಾ ನಾನು ಬುಟ್ಟು ಬಂದ್ಬುಟ್ಟೆ. ಅವಳು ಸುಖವಾಗಿ ಹೆತ್ತಿದ್ರೆ ಆ ಮಗ ಇಷ್ಟೊತ್ತಿಗೆ ನಿನ್ನಂಗಿರ್‍ತಿದ್ದ. ನಿನ್ನ ನೋಡಿ ಅದು ನೆಪ್ಪಿಗೆ ಬಿತ್ತು. ಅದ್ಕೆ ಕಣ್ಣೀರು ಬತ್ತು" ಅಂದ ಅಪ್ಪ. ಮಗನಿಗೆ ಕುತೂಹಲವಾಯ್ತು. "ನೀನ್ಯಾಕೆ ನಿನ್ನ ಹೆಂಡ್ತಿ ಬುಟ್ಟು ಬಂದು ಬುಟ್ಟೆ?" ಅಂತ ಕೇಳಿದ. "ಅಯ್ಯೋ, ಅದೊಂದು ದೊಡ್ಡ ಕತೆ" ಅಂತ ಹೇಳಿ ಅಲ್ಲಿಂದ ಇಲ್ಲಿಗಂಟ ನಡೆದ ಸಂಗತೀನೆಲ್ಲ ಹೇಳಿದ. ಆಗ 'ಇವನೇ ನಮ್ಮಪ್ಪ' ಅನ್ನೋದು ಅವನಿಗೆ ಖಾತ್ರಿಯಾಯ್ತು. ಆಗ ತಾನೂ ತನ್ನ ಕಥೆ ಹೇಳಿದ. ಇಬ್ಬರಿಗೂ ಆನಂದವಾಯಿತು. ಅಪ್ಪ ಮಗ ಒಬ್ಬರನ್ನೊಬ್ಬರು ತಬ್ಬಿಕೊಂಡರು. ಊರಿಗೆ ಹೋಗಬೇಕೂ ಅಂತ ಮಾತಾಡಿಕೊಂಡರು. ಇಬ್ಬರು ಹಡಗಿನ ಸೆಟ್ಟರ ಹತ್ತಿರಕ್ಕೆ ಹೋದರು "ನಾವು ಊರಿಗೆ ಹೋಗಬೇಕು, ಕಳಿಸಿಕೊಡಿ" ಅಂದರು. ಅವನು "ಆಗೋದಿಲ್ಲ" ಅಂದ. ಆಗ ಮಗ ತನ್ನ ಜೇಬಿನಲ್ಲಿದ್ದ ಕಾಗದ ತೆಗೆದು ಓದಿದ. ಅದರಲ್ಲಿ ಅವರಪ್ಪ ಒಬ್ಬ ದೊಡ್ಡ ದೊರೆ ಮಗ ಅನ್ನೋದು ಮೊದಲುಗೊಂಡು ಎಲ್ಲಾ ಸಂಗತೀನೂ ಬರೆದಿತ್ತು. ಅದಲ್ಲದೆ ಯಾರಾದರೂ ಅವನನ್ನು ಇಟ್ಟುಕೊಂಡಿದ್ದರೆ ಕೂಡಲೇ ಬಿಡುಗಡೆ ಮಾಡಬೇಕು ಅಂತ ಆ ಹುಡುಗನ ಸಾಕುರಾಜ ಆಜ್ಞೆ ಮಾಡಿದ್ದ. ಅಲ್ಲಿದ್ದ ನ್ಯಾಯಸ್ಥರೂ ಸಹ "ನೀನು ಅಪ್ಪನ್ನೂ ಮಗನ್ನೂ ಕೂಡಲೇ ಕಳಿಸಿಕೊಡು, ಇಲ್ದೆಇದ್ರೆ ನಿನ್ನ ಪರ್ಣಾಮ ನೆಟ್ಟಗಾಗೋದಿಲ್ಲ" ಅಂತ ಎಚ್ಚರಿಸಿದರು. ಆಗ ವಿಧಿಯಿಲ್ಲದೆ ಸೆಟ್ಟಿ ಅವರಿಬ್ಬರನ್ನೂ ಕಳಿಸಿಕೊಟ್ಟ. ಅಪ್ಪನನ್ನು ಕರೆದುಕೊಂಡು ಮಗ ಊರಿಗೆ ಹಿಂತಿರುಗಿದ. ಅಪ್ಪ ಅವ್ವನನ್ನು ಮತ್ತೆ ಬಾಳ ವೈಭೋಗದಿಂದ ಮದುವೆ ಮಾಡಿ ಪಟ್ಟಣದಲ್ಲೆಲ್ಲಾ ಸಬಗಸ್ತು ಮಾಡಿಸಿದ. ಎಲ್ಲರಿಗೂ ಸಂತೋಷವಾಯಿತು. ಅಲ್ಲಿಂದ ದೊಡ್ಡ ರಾಜಕುಮಾರ ಹೆಂಡತಿ ಮತ್ತೆ ಮಗ ಎಲ್ಲಾರ್ರೂ ಕರಕೊಂಡು ಮಾವನ ಮನೆಗೆ ಹೋಗಿ ಅಲ್ಲೀವರೆಗಿನ ತನ್ನ 'ಯಿದ್ಯಮಾನ' ಎಲ್ಲಾನೂ ತಿಳಿಸಿದ. ಮತ್ತೆ ಅಲ್ಲಿಂದ ತನ್ನ ತಂದೆ ಪಟ್ಟಣಕ್ಕೆ ಕರೆದುಕೊಂಡು ಹೋದ. ಅವರೆಲ್ಲರಿಗೂ ಹೋದ ಜೀವ ಬಂದಂಗಾಯಿತು. ಎಲ್ಲರೂ ಸಂತೋಷದಿಂದ ಸುಖವಾಗಿ ಬದುಕಿಕೊಂಡರು.

* * * *

# ನಳ್ಳಿಗೊಮಾರ*

ಒಂದು ಪಟ್ಟಣ. ಅಲ್ಲೊಬ್ಬ ಸತ್ಯವಂತ ರಾಜ. ಅವನಿಗೊಬ್ಬಳು ರಾಣಿ. ಅವಳೂ ತುಂಬಾ ಒಳ್ಳೆಯವಳು. ರಾಜ್ಯದ ಜನಾನೆಲ್ಲ ಮಕ್ಕಳಿಗಿಂತ ಹೆಚ್ಚಾಗಿ ಅವರು ಪ್ರೀತಿಯಿಂದ ಸಾಕ್ಕೊಂಡಿದ್ದರು. ಆದರೆ ರಾಣಿ ಹೊಟ್ಟೇಲಿ ಒಂದು ಬತ್ತಿಗಾತ್ರ ಕುಡಿ ಆಗ್ಲಿಲ್ಲ. ಅವಳೂ ಗಿರಿಹತ್ತಿ ವರಬೇಡಿ ಹಲುಬಿ ಹಂಬಲಿಸಿದ್ರೂ ಮಕ್ಕಳಾಗ್ಲೇ ಇಲ್ಲ. ಅವಳಿಗೆ ಇದೇ ಚಿಂತೆ ಮನಸಿನಲ್ಲಿ ಕೊರೆಯಾಕೆ ಸುರುಮಾಡ್ತು. ದಿನಾಲೂ ಅರಮನೆ ಮಾಡಿ ಮೇಲೆ ನಿಂತುಕೊಂಡು ಹಾದೀಲಿ ಬೀದೀಲಿ ಹೋಗಿ ಬರೋ ಮಕ್ಕಳ್ನೆಲ್ಲಾ ನೋಡೋದೇ ಅವಳಿಗೊಂದು ಕೆಲಸ ಆಗಿತ್ತು. ಆ ಮಕ್ಕಳ ನೋಡ್ತಾ ನಿಂತು ಕೊಂಡರೆ ಅವಳಿಗೆ ಊಟ ತಿಂಡಿ ಏನೂ ಬೇಕಾಗ್ತಿರಲಿಲ್ಲ. ಊರಿನ ಹೆಂಗಸರೆಲ್ಲಾ ಚೌರಿಗೆ ಹೊತ್ತುಕೊಂಡು ಸಾಲಾಗಿ ನೀರಿಗೆ ಹೋಯ್ತಾ ಇದ್ರೆ ಅವಳಿಗೆ ತಾನೂ ಹಂಗೆ ಹೋಗ್ಬೇಕು ಅನ್ನಿಸ್ತಾ ಇತ್ತು. ಆದರೆ ರಾಜ "ರಾಣೀರು ಹಂಗೆ ಬೇರೆ ಜನರ ಜೊತೇಲಿ ನೀರಿಗೆ ಹೋಗೋದು ನಮ್ಮ ಮಾನಕ್ಕೆ ಕಡಮೆ. ಬ್ಯಾಡ" ಅಂದುಬುಟ್ಟ. ಆದರೆ ರಾಣಿ ಪ್ರತಿನಿತ್ಯಾ ರಾಜನ್ನ ಹಿಂಸೆ ಮಾಡಿದಳು. ಕೊನೆಗೆ "ಹೋಗಲಿ, ಹೋಗು" ಅಂದ.

ರಾಣಿ ಚೌರಿಗೆ ಹೊತ್ಕೊಂಡು ಕೆರೆಗೆ ನೀರಿಗೆ ಹೋದಳು. ದಡದಲಿ ಕೂತುಗೊಂಡಳು, ಬಾಳ ಹೊತ್ತಿನವರೆಗೂ. ನೀರಿಗೆ ಬಂದೋರೆಲ್ಲ ಹೊಂಟೋದ್ರು. ಆ ಮೇಲೆ ಇವಳು ನೀರು ಮೊಗೆಯಾಕೆ ಹೋದಳು. ಒಂದು ನಳ್ಳಿ ತನ್ನ ಹಿಂಡು ಮರಿಗಳ ಕಟ್ಕೊಂಡು ಮೇಯ್ತಾ ಇತ್ತು. ಅದನ್ನ ನೋಡಿ "ಅಯ್ಯೋ ಇಂಥ ಸಣ್ಣ ಪ್ರಾಣಿ ಪಕ್ಷಿಗಳಿಗೆಲ್ಲ ಇಷ್ಟೊಂದು ಮಕ್ಕಳ ಕೊಟ್ಟವ್ನೆ ಭಗವಂತ, ನಂಗೊಂದು ಬತ್ತಿಗಾತ್ರ ಕೊಟ್ಟಿದ್ರೇನಾಯ್ತಿತ್ತು. ನಾನೇನು ಅಷ್ಟು ಪಾಪ ಮಾಡಿವ್ನಿ" ಅಂದುಕೊಂಡು ನೀರು ತುಂಬಿಕೊಂಡಳು. ಅವಳಿಗೆ ಗೊತ್ತಿಲ್ದಹಂಗೆ ಒಂದು ನಳ್ಳಿ ಮರಿ ಚೌರಿಗೆ ವಳಕ್ಕೆ ನೀರಿನ ಜೊತೆ ಬಂದು ಬುಡ್ತು. ಸರಿ, ನೀರು ಹೊತ್ಕೊಂಡು ಮನೆಗೆ ಹೋದಳು. ಹಂಡೆಗೆ ನೀರು ಹುಯ್ಯವಾಗ ನಳ್ಳಿ ಕಾಣಿಸ್ತು.

---

* ಕಥೆ ಹೇಳಿದವರು : ನನ್ನ ಸೌಭಾಗ್ಯವತಿ ಕಮಲ.



"ಥೂ, ಹಾಳು ನಳ್ಳಿ ಚೌರಿಗೆ ವಳಕ್ಕೆ ಬಂದದಲ್ಲ" ಅಂದುಕೊಂಡು ಅದನ್ನ ಬಚ್ಚಲಿಗೆ ಹೂದಳು. ಅದು ಕಂಡೀಲಿ ಸೇರಿಕೊಂಡು ಬುಡ್ತು.

ನಳ್ಳಿ ಆ ಬಚ್ಚಲ ಕಂಡೀಲೇ ಬೆಳೀತಾ ಬತ್ತು. ಅಷ್ಟಾಯಿತು ಇಷ್ಟಾಯಿತು ದೊಡ್ಡದಾಗಿ ಬೆಳೀತು. ದಿನ ನಿತ್ಯ 'ಬಿಟ್ಟಿ' ಅನ್ನೋ ಹೆಂಗಸು ಬಚ್ಚಲು ತೊಳಿಯಾಕೆ ಬತ್ತಿದ್ಲು. ಒಂದು ದಿನ ಅವಳು ತೊಳೀತಾ ಇರುವಾಗ ನಳ್ಳಿ ಮಾತಾಡಿತು:

"ಬಿಟ್ಟೀ ಬಿಟ್ಟೀ ... ನಂಗೆ ಮದುವೆ ಮಾಡ್ತಾರೋ ಇಲ್ವೋ ರಾಣಿಗೂ ರಾಜನಿಗೂ ಹೇಳು."

"ಅಯ್ಯೋ ಇದರ ಮನೆ ಹಾಳಾಗ, ಅದೇನು ಹಿಂಗೆ ಮಾತಾಡ್ತದೆ!" ಅಂತ ನೋಡ್ತಾಳೆ, ಕಂಡೀಲಿ ನಳ್ಳಿ ಕೂತದೆ !

"ಏನೆಂದೆ ?" ಅಂದಳು

"ಅಲ್ಲ, ನನಗೆ ಮದುವೆ ಮಾಡಾತರೋ ಇಲ್ವೋ ಕೇಳೂ ಅಂದೆ" ಅಂತು ನಳ್ಳಿ.

"ನಿಂಗೆ ಮದುವೆ!" ಬಿಟ್ಟಿ ಗೊಳ್ ಅಂತ ನಕ್ಕು ಬುಟ್ಟಳು.

"ಯಾಕ್ ನಗ್ತೀ?"

"ಮತ್ತೆ, ಎಂಥೆಂಥೋರಿಗೋ ಹೆಣ್ಣು ಕೊಡೋದು ಕಷ್ಟ. ಅಂಥಾದ್ರಲ್ಲಿ ನಳ್ಳಿಗೆ ಯಾರೂ ಹೆಣ್ಣು ಕೊಟ್ಟಾರು?"

"ಅವೆಲ್ಲಾ ಪಂಚಾಯಿತಿ ನಿನಗ್ಯಾಕೆ ? ನೀನು ಕೇಳೋದೊಂದ್ ಕೇಳು" ಅಂತು ನಳ್ಳಿ.

"ಆಗ್ಲಿ ಕೇಳ್ತೀನಿ" ಅಂತ ಹೇಳಿ ಬಿಟ್ಟಿ ರಾಣಿ ಹತ್ರಕ್ಕೆ ಹೋಗಿ ಹೇಳಿದಳು:

"ಅವ್ವಾ ಅವ್ವಾ, ನಮ್ಮ ಬಚ್ಚಲಲ್ಲಿ ಒಂದು ದಾಂಡಿಗ ನಳ್ಳಿ ಅದೆ ಅದು 'ನನ್ನ ಮದುವೆ ಮಾಡ್ತಾರೋ ಇಲ್ಲೋ ಕೇಳು' ಅಂತ ಹೇಳ್ತದೆ ಕನವ್ವಾ"

ರಾಣಿಗೆ ತಾನು ಕೆರೆಯಿಂದ ನೀರು ತಂದಾಗ ಬಂದಿದ್ದ ನಳ್ಳಿಯ ನೆನಪಾಯಿತು. 'ಎಲಾ ಇದ, ನಳ್ಳಿ ಮನುಷ್ಯರ ಹಂಗೆ ಮಾತಾಡೋದುಂಟಾ' ಅಂದು ಕೊಂಡಳು. ಆಮೇಲೆ,

"ನಳ್ಳೀಗೆ ಯಾರು ಹೆಣ್ಣು ಕೊಡ್ತಾರೆ, ಬಿಟ್ಟಿ ? ಅದಾಡೋದು ಬರೀ ಹುಚ್ಚಾಟ ಅಷ್ಟೆ. ಹೋಗ್ ಹೋಗು" ಅಂದಳು. ಬಿಟ್ಟೀ ಹೋಗಿ ಹಂಗೇ ಹೇಳಿದಳು. ಅದು ಕೋಪದಿಂದ ಬುಸುಗುಟ್ತಾ.

"ಹುಡುಗಾಟ ಅಂತ ತಿಳುಕೊಂಡವರೇನೋ, ಹೆಣ್ಣು ಕೇಳಾಗಕೆ ಹೋದ್ರೆ ಯಾರಾರೂ ಕೊಡ್ತಾರೆ. ಸುಮ್ ಸುಮ್ನೆ ಇದ್ರೇ ಯಾರ್ ಕೊಡ್ತಾರೆ ಬಿಟ್ಟೀ.

ಹೋಗಿ ಹೇಳು ನಿಮ್ಮ ರಾಣಿಗೆ. ಮದುವೆ ಮಾಡಿದ್ರೆ ಸರಿ, ಇಲ್ಲೇ ಇದ್ರೆ ರಾಜ್ಯಾನೆಲ್ಲ ಧ್ವಂಸಮಾಡಿ ಬುಡ್ತೀನಿ. ಹಂಗಂತ ಹೇಳು ಹೋಗು" ಅಂತು. ಅವಳು ಬಂದು ರಾಣಿಗೆ ಹಂಗೇ ವರದಿ ಮಾಡಿದಳು.

ರಾಣಿಗೆ ವಳ್ಳೇ ಪೀಕಲಾಟಕ್ಕೆ ಬತ್ತು. ರಾಜನಿಗೆ ಹೇಳಿದಳು. "ನಿನಗೇನು ಹುಚ್ಚ, ಹೋಗು" ಅಂತ ಅವನು ನಕ್ಕುಬುಟ್ಟ. ನಳ್ಳಿ ದಿನಾ ಬಿಟ್ಟಿ ಜೊತೇಲಿ ಹೇಳಿ ಕಳಿಸ್ತಾನೇ ಇತ್ತು. ರಾಣಿಗೆ ಅದರ ಕಾಟ ತಡಿಯಾಕೆ ಆಗ್ಲಿಲ್ಲ. ಮೊದಲು ಅದಕೊಂದು ಕೋಣೆ ಕಟ್ಟಿಸಿ ಅದರೊಳಗೊಂದು ಗುಂಡಿ ಮಾಡಿ ಅದಕ್ಕೆ ನೀರು ತುಂಬಿದರು. ಆ ಮೇಲೆ ಬಚ್ಚಲು ಕಂಡಿ ಮೀಟಿಸಿ ನಳ್ಳಿ ತಂದು ಆ ಗುಂಡಿಗೆ ಬುಟ್ಟರು.

ರಾಜ "ನಳ್ಳೀಗೆ ಹೆಣ್ಣು ಕೊಡಿ ಅಂತ ಹೋದ್ರೆ ಯಾರಾರೂ ನಗೋದಿಲ್ವ?" ಅಂದ.

"ಇಲ್ಲ, ನೀವು ಹೋಗಲೇ ಬೇಕು. ಏನಾದ್ರೂ ಪ್ರಯತ್ನ ಮಾಡ್ಲೇಬೇಕು" ಅಂತ ರಾಣಿ ಒತ್ತಾಯ ಮಾಡಿದಳು.

"ಸರಿ," ಅಂದುಕೊಂಡು, ಆನೆ ಕುದುರೆ ಮೇಲೆ ಹಣ ಹೇರಿಕೊಂಡು ಮಂತ್ರೀನೂ ಕರಕೊಂಡು ರಾಜ ಹೆಣ್ಣು ಹುಡುಕಾಕೆ ಹೋದ. ಊರೂರು ಕೇರಿ ಕೇರಿ ಎಲ್ಲಾನೂ ಸುತ್ತಿದರು. "ಹೊನ್ನು ಕೊಡ್ತೀವಿ ಹೆಣ್ಣು ಕೊಡೀ, ಹೊನ್ನು ಕೊಡ್ತೀವಿ ಹೆಣ್ಣು ಕೊಡೀ, ಹೊನ್ನು ಕೊಡ್ತೀವಿ ಹೆಣ್ಣು ಕೊಡೀ" ಅಂತ ಸಾರಿಕೊಂಡು. ಎಲ್ಲೂ ಹೆಣ್ಣು ಸಿಕ್ಕಲಿಲ್ಲ, ಯಾರೂ ಹೊನ್ನಿಗೆ ಹೆಣ್ಣು ಕೊಡ್ತೀವಿ ಅನ್ನಲಿಲ್ಲ. ಕಡೆಗೆ ಇನ್ನೊಂದೂರಿಗೆ ಬಂದರು. ಅಲ್ಲಿ ಒಬ್ಬಳು ಗಂಡ ಸತ್ತ ಹೆಂಗಸು. ಅವಳ ಸವತಿ ಸತ್ತೋಗಿದ್ಲು. ಅವಳಿಗೆ ಎರಡು ಹೆಣ್ಣುಮಕ್ಕಳಿದ್ದರು. ಇವಳಿಗೆ ಎರಡು ಹೆಣ್ಮಕ್ಕಳಿದ್ದರು, ನಾಕು ಜನಾನೂ ಇವಳೇ ಸಾಕಿ ಸಲಬುತಾ ಇದ್ದಳು. ಆದ್ರೆ ಸವತಿ ಮಕ್ಕಳು ತುಂಬಾ ರೂಪಸ್ಥೇರು. ಇವಳ ಹೆಣ್ಮಕ್ಳು ಒಬ್ಬಳು ಕುರುಡಿ, ಒಬ್ಬಳು ಕುಂಟಿ, ಆದ್ರಿಂದ ಸವತೀ ಹೆಣ್ಮಕ್ಕಳ ಕಂಡರೆ ಅವಳಿಗೆ ಆಗ್ತಾ ಇರಲಿಲ್ಲ. ಮಂತ್ರೀನೂ ರಾಜನೂ "ಹೊನ್ನು ಕೊಡ್ತೀವಿ ಹೆಣ್ಣು ಕೊಡ್ತೀರಾ?" ಅಂತ ಸಾರಿ ಕೊಂಡು ಅವಳಿದ್ದ ಬೀದಿಗೆ ಬಂದರು. ಅವಳು ಆ ಸೊಲ್ಲು ಕೇಳ್ತಿದ್ದ ಹಂಗೇ ಓಡಿ ಹೋಗಿ "ನಾನು ಕೊಡ್ತೀನಿ ಬನ್ನೀ" ಅಂದಳು.

ರಾಜನೂ ಮಂತ್ರಿಯೂ ಆನೆ ಮೇಲಿಂದ ಇಳಿದು ಅವಳ ಮನೆಗೆ ಹೋದರು. ರಾಜ ಒಂದು ಚೀಲದ ತುಂಬಾ ಹೊನ್ನು ಕೊಟ್ಟ. ಅವಳು ಬಾಳ ಆನಂದದಿಂದ ಆ ಚೀಲ ತಕ್ಕೊಂಡು ಹೋಗಿ ಪೆಟ್ಟಿಗೆಗೆ ಹಾಕ್ಕೊಂಡು ಬೀಗ



ಜಡಾಯಿಸಿದಳು. ರಾಜನಿಗೂ ಮಂತ್ರೀಗೂ ಅಡಿಗೆ ಮಾಡಿ ಬಿಸಿ ಊಟಾ ಹಾಕಿದಳು. ತನ್ನ ಸವತೀ ಹಿರೀಮಗಳ ತಲೆ ಬಾಚಿ ಹೂ ಮುಡಿದು ಸೀರೆ ಉಡಿಸಿ ಅವರ ಜೊತೆ ಕಳಿಸಿಕೊಟ್ಟಳು – "ಹೋಗವ್ವ ಚಂದಾಗಿ ಬದುಕು" ಅಂತ.

ರಾಜನೂ ಮಂತ್ರೀನೂ ಆ ಹುಡುಗಿ ಕರಕೊಂಡು ಅರಮನೆಗೆ ಬಂದರು. ಅವಳನ್ನ ನೋಡ್ತಿದ್ದಹಂಗೇ ರಾಣಿಗೆ ದುಃಖ ಉಕ್ಕಿ ಬಂತು. "ಈ ಹುಡುಗಿ ಒಳ್ಳೇ ಚಿನ್ನದ ಗೊಂಬೆ ಹಂಗದೆ. ಯಾವ ಮಾತಾಯಿ ಮಗಳೋ ಏನೋ, ಯಾರನಾದ್ರೂ ಸೇರಿ ಬಾಳೋ ಬದುಕೋ ಹುಡಿಗೀಯ ಹಿಂಗೆ ತಂದು ನಳ್ಳಿಗೆ ಮದುವೆ ಮಾಡ್ಬೇಕಲ್ಲ. ಮಂಗನ ಕೈಗೆ ಮಾಣಿಕ್ಯ ಕೊಟ್ಟ ಹಂಗೆ" ಅಂತ ಬಾಳ ಚಿಂತೆ ಮಾಡಿದಳು. 'ಈ ನಳ್ಳಿ ಇಂಥಾ ಬಾಳೆಸುಳಿಯಂಥಾ ಹುಡುಗೀನ ಏನ್ಮಾಡಿಬುಡ್ತದೋ ಏನೋ' ಅಂತ ಕೊರಗಿದಳು. ಅವಳಿಗೆ ಬೇಕ್ ಬೇಕಾದ ಹಂಗೆ ಅಡಿಗೆ ಮಾಡಿ ಇಕ್ಕಿದಳು. ಪಟ್ಟೆ ಪೀತಾಂಬರ ಉಟ್ಕೋಳಾಕೆ ಕೊಟ್ಟಳು. ಮೈ ಜಗಿಯೋ ಹಂಗೆ ಒಡವೆ ಹಾಕಿದಳು. ಒಂದೇಳೆಂಟು ದಿನ ಹಿಂಗೆ ಅವಳಿಗೆ ಶೃಂಗಾರ ಮಾಡಿ ಕಣ್ತುಂಬ ನೋಡಿ ಸಂತೋಷ ಪಟ್ಟಳು. ಆ ಮೇಲೆ ಒಂದು ಒಳ್ಳೇ ದಿನ ನೋಡಿ ಆ ಹುಡುಗಿಗೆ ಹೊಸ ಹೊಸ ಬಟ್ಟೆ ಉಡಿಸಿ ಹಾಲು ಹೋಳಿಗೆ ಉಣ್ಣಾಕ್ಕಿ ತಲೆತುಂಬ ಹೂ ಮುಡಿದು ಹಾಲು ಹಣ್ಣು ತಟ್ಟೇಲಿಟ್ಟು ನಳ್ಳಿಯಿದ್ದ ಕೋಣೆಗೆ ಕಳಿಸಿದಳು, ಬಿಟ್ಟೀ ಜೊತೇಲಿ. ಬಿಟ್ಟಿ ಆ ಹುಡುಗಿ ಕರಕೊಂಡು ಹೋಗಿ ನಳ್ಳಿ ಕೋಣೆಗೆ ಕಳಿಸಿ ಬಾಗಿಲು ಹಾಕ್ಕೊಂಡು ಬಂದಳು.

ಆ ಹುಡುಗಿ ಹೋಗಿ ಹೆದರಿಕೊಂಡು ಗಡಗಡನೆ ನಡುಗ್ತಾ ಮೂಲೇಲಿ ನಿಂತುಕೊಂಡಳು. ನಳ್ಳಿ ಅವಳನ್ನ ನೋಡಿದ್ದೇ ತಡ, ಬಾವಿಯಿಂದ ಈಚೆಗೆ ನೆಗೀತು. ಅಲ್ಲಿಂದ ಒಂದೇ ಹಾರತಕ್ಕೆ ಅವಳ ಹತ್ರ ಹೋಗಿ ಒಂದೇ ಏಟಿಗೆ ಎರಡು ತುಂಡು ಮಾಡಿ ಮತ್ತೆ ಬಾವಿ ವಳಕ್ಕೆ ಹೊರಟು ಹೋಯ್ತು.

ಬೆಳಗಾಯಿತು. ರಾತ್ರಿಯೆಲ್ಲಾ ರಾಣಿ ನಿದ್ದೇನೇ ಮಾಡ್ಲಿಲ್ಲ. 'ನನಗೆ ದೇವ್ರು ಹೊಟ್ಟೇಲೊಂದು ಶಿಶು ಕೊಡ್ಲಿಲ್ಲ. ಬೇರೇರ ಮಕ್ಳ ತಂದು ಹಿಂಗೆ ಪಾಡುಪಡಿಸೋ ಹಂಗಾಯ್ತಲ್ಲ. ಇವತ್ತು ನಳ್ಳಿ ಆ ಹುಡುಗೀಯ ಏನ್ಮಾಡಿಬುಟ್ಟದೋ ಕಾಣೆ' ಅಂದುಕೊಂಡು ಹಾಸಿಗೇಲಿ ಅತ್ತಿಂದಿತ್ತ ಹೊರಳಾಡಿದಳು. ಬೆಳಕು ಹರಿದ ತಕ್ಷಣ ಬಿಟ್ಟೀ ಕರೆದು "ಬಿಟ್ಟೀ, ರಾತ್ರೆ ಆ ಹೆಣ್ಮೊಗ ಕಳಿಸಿದೊ. ಆ ನಳ್ಳಿ ಏನ್ಮಾಡ್ಯದೋ ಏನೋ. ನೋಡಿಕೊಂಡು ಅದಕ್ಕೆ ಅನ್ನ ಸುರಿದುಬುಟ್ಟು ಬಾ" ಅಂತ ಹೇಳಿ ಕಳಿಸಿದಳು. ಬಿಟ್ಟಿ ಬಂದು ಬಾಗಿಲು ತಗದು ನೋಡ್ತಾಳೆ, ಆ

ಹುಡುಗಿ ಎರಡು ತುಂಡಾಗಿ ಮುಂಡ ಒಂದುಕಡೆ ರುಂಡ ಒಂದುಕಡೆ ಬಿದ್ದದೆ. 'ಅಯ್ಯೋ' ಅಂತ ಹಣೆ ಹಣೆ ಚಚ್ಚಿಕೊಂಡು ಹೋಗಿ ರಾಣಿಗೆ ಸುದ್ದಿ ತಿಳಿಸಿದಳು. ರಾಣಿ ಗೊಳೋ ಅಂತ ಅತ್ತು ಬುಟ್ಟಳು. ಮೂರು ರಾತ್ರೆ ಮೂರು ಹಗಲು ಅನ್ನ ನೀರು ಮುಟ್ಟಲಿಲ್ಲ. 'ಯಾವ ಪಾಪಕ್ಕೆ ನಂಗೆ ಇಂಥ ಶಿಕ್ಷೆ ಕೊಟ್ಯೋ ಭಗವಂತಾ' ಅಂತ ಕೊರಗಿದಳು.

೨

ಸುಮಾರು ದಿವಸ ಕಳೀತು. ಮತ್ತೆ ಒಂದು ದಿವಸ ಬಿಟ್ಟಿ ಅನ್ನ ಸುರಿಯಾಕೆ ಹೋದಾಗ ನಳ್ಳಿ ಹೇಳ್ತು:

"ಬಿಟ್ಟಿ ನನಗೆ ಮದುವೆ ಮಾಡ್ತಾರೋ ಇಲ್ವೋ ಕೇಳು"

"ಮದುವೆ! ನಿಂಗಾಗಲೆ ಮದುವೆ ಮಾಡಿದ್ದಾಯ್ತಲ್ವಾ?" ಅಂದಳು ಬಿಟ್ಟಿ.

"ಆ ಮದುವೆ ಆಯ್ತು, ಇನ್ನೊಂದು ಮದುವೆ ಮಾಡ್ತಾರೋ ಇಲ್ವೋ ಕೇಳು" ಅಂತ ಜಬರುದಸ್ತು ಮಾಡ್ತು.

"ಒಂದು ಮದುವೆ ಮಾಡಾಕೇ ಅಷ್ಟು ಕಷ್ಟ ಆಯ್ತು. ಇನ್ನೊಂದು ಮಾಡಾಕೆ ಯಾರು ಹೆಣ್ಣು ಕೊಡ್ತಾರೆ?" ಅಂದ್ಲು ಬಿಟ್ಟಿ.

"ನಿಂಗ್ಯಾಕೆ ಅದೆಲ್ಲಾ ಪುರಾಣ? ನಾನು ಹೇಳಿದಂಗೆ ಹೋಗಿ ಹೇಳು" ಅಂತ ರೇಗ್ತು.

"ಸರಿ, ನಂಗೇನಂತೆ ಮದುವೆ ಮಾಡೋರುಂಟು, ಆಗೋರುಂಟು" ಅಂದ್ಕೊಂಡು ಬಿಟ್ಟಿ ರಾಣಿ ಹತ್ರ ಹೋಗಿ ನಳ್ಳಿ ಹೇಳಿದ್ದೆಲ್ಲಾನೂ ಹೇಳಿದಳು. ಅವಳಿಗೆ ತುಂಬಾ ಸಿಟ್ಟು ಬಂತು. "ಮದುವೆ ಮಾಡಿಕೊಂಡು ಬಂದೋರ್ನೆಲ್ಲಾ ಕಬ್ಬು ಕಡಿಯೋ ಹಂಗೆ ಕಡಿದು ಹಾಕ್ಲಿ. ನಾವೆಲ್ಲಿ ಹೆಣ್ತರಾನೆ. ಇದರ ತೀರ್ ನೋಡಿದ್ರೆ ನಳ್ಳಿ, ಇದ್ಕೆ ಮದುವೆ ಬೇರೆ ಕೇಡು. ಇದಕ್ಕೆ ಕೊಡಾನೆ ಅಂತ ಯಾರು ಹೆತ್ಕೊಂಡು ಕೂತವರೆ? ಹೋಗ್ ಹೋಗು, ಆಗೋದಿಲ್ಲ ಅಂತ ಹೇಳ್ ಹೋಗು" ಅಂದಳು.

ಬಿಟ್ಟಿ ಮಾರನೇ ದಿನ ಅನ್ನ ಸುರಿಯಾಕೆ ಬಂದಾಗ ರಾಣಿ ಹೇಳಿದ್ದೇಲ್ಲಾನೂ ನಳ್ಳಿಗೆ ವರದಿಮಾಡಿದಳು. ಅದಕ್ಕೆ ಹುಚ್ಚುಕೋಪ ಬಂದುಬುಡ್ತು.

"ಒಳ್ಳೇ ಮಾತ್ನಲ್ಲಿ ಮದುವೆ ಮಾಡಿದರೆ ಸರಿ, ಇಲ್ಲೇ ಇದ್ರೆ ಇವರ ರಾಜ್ಯಾನೆಲ್ಲ ಧ್ವಂಸಮಾಡಿ ಹಾಕ್‌ಬುಡ್ತೀನಿ. ಹಂಗಂತ ಹೇಳ್ ಹೋಗು" ಅಂತು ನಳ್ಳಿ.



ಬಿಟ್ಟಿ ಬಂದ ರಾಣಿಗೆ ತಿಳಿಸಿದಳು. ಅವಳಿಗೆ ಉಭಯಸಂಕಟವಾಯಿತು. 'ಇದೊಳ್ಳೇ ಗ್ರಹಚಾರ ಆಯ್ತಲ್ಲಾ' ಅಂದುಕೊಂಡು ರಾಜನಿಗೆ ಬಂದು ಹೇಳಿದಳು. ಅವನಿಗೂ ಸಿಟ್ಟು ಬಂದ್‌ಬುಡ್ತು.

"ಇದೇನ್ ಮಕ್ಕಳಾಟ ಕೆಟ್ಟೋಯ್ತು? ಕಂಡೋರ ಮಕ್ಕಳ ತಂದು ತಂದು ಹಿಂಗೆ ಅನ್ಯಾಯವಾಗಿ ಅದಕ್ಕೆ ಬಲಿಕೊಟ್ಟರೆ ನಾವೇನು ಮನುಷ್ಯರಾದೇವಾ?" ಅಂದ.

"ಹ್ಯಂಗೊ. ಇದೊಂದು ಸಾರಿ ನಿಮ್ಮ ದಮ್ಮಯ್ಯ ಅಂತೀನಿ, ಹೋಗಿ ಹೆಣ್ಣು ನೋಡ್ಕೊಂಡು ಬನ್ನಿ. ಆಮ್ಯಾಲೆ ಹ್ಯಂಗಾರೂ ಆಗ್ಲಿ" ಅಂದಳು ರಾಣಿ. "ಇದೊಳ್ಳೆ ಕರ್ಮ" ಅದ್ಕೊಂಡು 'ಆಗಲಿ' ಅಂತ ಒಪ್ಪಿಕೊಂಡ.

ಸರಿ, ಎಂದಿನಂಗೇ ರಾಜ ಮಂತ್ರಿ ಇಬ್ರೂ ಆನೆಮೇಲೆ ಹೊನ್ನಿನ ಚೀಲ ಹೇರಿಕೊಂಡು ಹೆಣ್ಣು ಹುಡುಕಾಕೆ ಹೋದರು. ಅಲ್ಲಿ ಇಲ್ಲಿ ಊರೂರು ಕೇರಿ ಕೇರಿ ಎಲ್ಲಾನೂ ಸುತ್ತಿಕೊಂಡು ಎಲ್ಲೂ ಸಿಕ್ಕದೆ ಕಡೆಗೆ ಮೊದಲು ಹೆಣ್ಣುತಂದ ಊರಿಗೆ ಹೋದರು. "ಹೊನ್ನು ಕೊಡ್ತೀವಿ ಹೆಣ್ಕೊಡಿ, ಹೊನ್ನು ಕೊಡ್ತೀವಿ ಹೆಣ್ಕೊಡಿ" ಅಂತ ಸಾರಿಕೊಂಡು ಬಂದರು. ಮೊದಲು ತಕ್ಕೊಂಡು ಹೋಗಿದ್ದ ಹುಡುಗಿಯ ತಂಗಿಗೆ ಈ ದನಿ ಕೇಳಿಸ್ತು. ಅವಳು ಚೌರಿಗೆ ತಕ್ಕೊಂಡು ನೀರಿಗೆ ಹೋದಳು.

"ಹೊನ್ನು ಕೊಡ್ತೀವಿ, ಹೆಣ್ಣು ಕೊಡೀ" ಅನ್ನೊ ದನಿ ಕೇಳಿದ್ದೇ ತಡ ಆವಮ್ಮ ಓಡೋಡಿ ಬಂದಳು. "ನಾನು ಕೊಡ್ತೇನಿ ಬನ್ರಪ್ಪಾ" ಅಂತ ಹೇಳಿ ಒಂದೇ ಉಸುರಿಗೆ ಅವರ್ನ ಕರಕೊಂಡು ಮನೆಗೆ ಹೋದಳು.

ಈ ಹುಡುಗಿಗೆ ಬರಬಾರದ ದುಃಖವೇ ಬಂದ್‌ಬುಡ್ತು, ಕೆರೆ ದಡದಲ್ಲಿ ಕೂತುಗೊಂಡು "ಅಯ್ಯೋ, ಆಸಾರಿ ನಮ್ಮಕ್ಕನ್ನ ತಕ್ಕೊಂಡು ಹೋದ್ರು, ಅವಳೇನಾದಳೋ ಎಂಥಾದಳೋ ಇಲ್ಲೀವರೆಗೆ ಒಂದೂ ಸುದ್ದಿ ಗೊತ್ತಿಲ್ಲ. ಈಗ ಮತ್ತೆ ಬಂದವರೆ, ಈಸಾರಿ ನಮ್ಮ ಚಿಕ್ಕವ್ವ ನನ್ನೂ ಕೊಟ್‌ಬುಡ್ತಾಳೋ ಏನೋ. ಅಯ್ಯೋ ದೇವರೆ, ನಮ್ಮವ್ವ ಸತ್ತಾಗಲೇ ನಾವೂ ಸತ್ತೋಗಿದ್ರೆ ಈ ಕಷ್ಟವೇ ನಮಗೆ ಬರ್ತಿರಲಿಲ್ಲ. ಏನು ಕಷ್ಟ ಕೊಟ್ಟಪ್ಪಾ ಭಗವಂತ" ಅಂತ ಯೋಚನೆ ಮಾಡ್ತಾ ಅಳ್ತಾ ಇತ್ತು. ಅದೇ ಸಮಯದಲ್ಲಿ ಅದೇ ಮಾರ್ಗದಲ್ಲಿ ಪಾರ್ವತಿ ಪರಮೇಶ್ವರರು ಹೋಗ್ತಾ ಇದ್ದರು. ಅವರಿಗೆ ಈ ಹುಡುಗಿ ಅಳೋದು ಕೇಳಿಸ್ತು "ಅದ್ಯಾರೋ ಪಾಪ ಅಳ್ತಾ ಅವರೆ, ಯಾರೋ ಹೆಂಗಸು ಅಂತ ಕಾಣ್ತದೆ ಹೋಗಿ ವಿಚಾರಿಸಿಕೊಂಡು ಬರಾನೆ ಬನ್ನಿ" ಅಂದಳು ಪಾರ್ವತಿ.

"ನಿನಗೆ ಬೇರೆ ಕೆಲಸ ಇಲ್ಲ. ಅದೇನು ದೆವ್ವವೋ ಪೀಡೆಯೋ ಪಿಶಾಚಿಯೋ. ಸುಮ್ಮನೆ ನಮ್ಮ ದಾರೀಲಿ ನಾವು ಹೋಗಾನೆ ಬಾ" ಅಂದ ಪರಮೇಶ್ವರ.

"ಇಲ್ಲ ಇಲ್ಲ, ನಾನು ಹೋಗ್ಲೇ ಬೇಕು. ನೀವು ಬಂದ್ರೆ ಬನ್ನಿ, ಬರದೆ ಇದ್ರೆ ಬುಡಿ" ಅಂದಳು ಪಾರ್ವತಿ.

"ಸರಿ, ಹೆಂಗಸರು ಹಿಡಿದ ಹಠ ಎಲ್ಲಿ ಬುಡ್ತೀರಿ? ನಡಿ ಹೋಗಾನೆ" ಅಂತ ಹೇಳಿ ಇಬ್ರೂ ಕೆರೆ ದಡಕ್ಕೆ ಬಂದ್ರು. ಆ ಹುಡುಗಿ ಹಾಡಿಕೊಂಡು ಗುಡಿಸಿಗೊಂಡು ಅಳ್ತಾ ಇತ್ತು. "ಏನಮ್ಮಾ ನಿನ್ನ ಕಷ್ಟ?" ಅಂದರು ಪಾರ್ವತಿ–ಪರಮೇಶ್ವರ ಇಬ್ರೂವೆ. ಆ ಹುಡಿಗೆ ನಡೆದ ಸಂಗತೀನೆಲ್ಲಾ ಹೇಳ್ತು. ಪಾರ್ವತಿಗೆ ಕಣ್ಣೀರೆ ಬಂದುಬುಡ್ತು. ಮೂರು ಮಂತ್ರದ ಗುಳಿಗೆ ಅವಳ ಕೈಲಿ ಕೊಟ್ಟು ಮೆತ್ತಗೆ ಕಿವೀಲಿ ಅವನ್ನು ಉಪಯೋಗಿಸೋ ವಿಧಾನ ಹೇಳಿಕೊಟ್ಟಳು ಪಾರ್ವತಿ. ಆಮೇಲೆ "ನಾನು ಹೇಳಿದಂಗೆ ಮಾಡು. ನಿನ್ನ ಕಷ್ಟವೆಲ್ಲಾ ಪರಿಹಾರ ಆಗ್ತದೆ" ಅಂತ ಹೇಳಿ ಇಬ್ರೂ ಕೈಲಾಸಕ್ಕೆ ಹೊರಟುಹೋದರು.

ಹುಡುಗಿ ನೀರು ಹೊತ್ತುಕೊಂಡು ಮನೆಗೆ ಬಂದಳು. ಅಷ್ಟು ಹೊತ್ತಿಗಾಗಲೇ ಅವರದೆಲ್ಲಾ ಊಟ ಉಪಚಾರ ಎಲ್ಲಾ ಆಗಿಹೋಗಿತ್ತು. ಅವರ ಚಿಕ್ಕವ್ವ ದಡಬಡನೆ ಅವಳಿಗೆ ಊಟಕ್ಕೆ ಹಾಕಿ ತಲೆ ಬಾಚಿ ಹೂವು ಮುಡಿದು ಒಂದು ಮಡಿಸೀರೆ ಉಡಿಸಿ "ನಿನ್ನ ಪುಣ್ಯ ಚೆನ್ನಾಗ್ಯದೆ. ರಾಜರ ಮನೆಗೆ ಸೇರ್ತಿಯ. ಹೋಗು" ಅಂತ ಹೇಳಿ ಅವರ ಜೊತೆ ಕಳಿಸಿಕೊಟ್ಟಳು.

ಈ ಹುಡಿಗಿ ನೋಡಿ ರಾಣಿಗೆ ಇದ್ದದ್ದೂ ದುಃಖ ಜಾಸ್ತಿಯಾಯ್ತು. 'ಪರಂಗಿಹಣ್ಣು ಭಾಗಮಾಡಿದಂಗೆ ತಿದ್ದಿದ್ದ ಗೊಂಬೇಹಂಗೆ ಇರೋ ಈ ಮುತ್ತಿನಂಥ ಹೆಣ್ಣನ್ನ ಈ ಕಟುಕ ನಳ್ಳೀ ಪಾಲುಮಾಡಬೇಕಲ್ಲಾ' ಅಂತ ಗೋಳಾಡಿದಳು. ಹುಡುಗಿ "ಅಳಬ್ಯಾಡಿ ಅತ್ಯಮ್ಮಾ, ನನ್ನ ಹಣೇಲಿ ಬರದಂಗೆ ಆಗ್ತದೆ. ನಿಮ್ಮ ಹರಕೆ ನನ್ನ ಮೇಲಿದ್ರೆ ಎಲ್ಲಾ ಕಷ್ಟಾನೂ ಕಳೀತದೆ" ಅಂದಳು. ರಾಣಿಗೆ ಇನ್ನೂ ದುಃಖವಾಯ್ತು. ಒಂದೆಂಟು ದಿನ ಅವಳಿಗೆ ಮನಸು ತೃಪ್ತಿಯಾಗೋಹಂಗೆ ಆ ಹುಡುಗಿಗೆ ಎಲ್ಲಾ ಶೃಂಗಾರಾನೂ ಮಾಡಿ ನೋಡಿಕೊಂಡಳು. ಆಮೇಲೆ ಒಂದು ಒಳ್ಳೇ ದಿನ ಕೇಳಿಕೊಂಡು ಅವಳಿಗೆ ಅಲಂಕಾರ ಮಾಡಿ ಬೇಕ್ ಬೇಕಾದಂಥ ಅಡಿಗೆ ಮಾಡಿಸಿ ಇಕ್ಕಿ ಬಿಟ್ಟೀ ಜೊತೇಲಿ ಕಳಿಸಿದಳು. ಬಿಟ್ಟಿ ನಳ್ಳಿಯ ಕೋಣೆಯೊಳಕ್ಕೆ ಅವಳನ್ನು ಬುಟ್ಟು ಬಾಗಿಲು ಹಾಕ್ಕೊಂಡಳು.

ಹುಡುಗಿ ಧೈರ್ಯವಾಗಿ ಬಂದು ಮೂಲೇಲಿ ನಿಂತುಕೊಂಡಳು. ಅವಳನ್ನು ನೋಡಿದ್ದೇ ತಡ ಒಂದೇ ಹಾರತಕ್ಕೆ ನಳ್ಳಿ ನೆಗೆದು ಬಂತು. ಆ ಹುಡುಗಿ ಒಂದು ಗುಳಿಗೆ ಎಸೆದಳು. ನಳ್ಳಿಯ ಕೊಂಡಿ ಕಳಚಿಬಿತ್ತು. ಹಂಗೂ ಮುಂದಕ್ಕೆ ತೆವಳಿಕೊಂಡು ಬರ್ತಾ ಇತ್ತು. ಹುಡುಗಿ ಇನ್ನೊಂದು ಗುಳಿಗೆ ಎಸೆದಳು. ಅದರ ಚಿಪ್ಪೇ ಕಳಚಿಕೊಂಡು ಬೀಳ್ತು. ಹಂಗೂ ಸ್ವಲ್ಪ ಮುಂದಕ್ಕೆ ಬಂತು. ಇನ್ನೊಂದು ಗುಳಿಗೆ ಎಸೆದಳು. ಕೋಣೆಯೆಲ್ಲಾ ಧಿಗ್ ಅಂತ ಹತ್ತಿಗೊಂಡಂತೆ ಆಯ್ತು. ಆ ಬೆಳಕಿನಲ್ಲಿ ನೋಡ್ತಾಳೆ : ರವರವನೆ ಉರಿಯುವ ಸುಂದರ ರಾಜಕುಮಾರ ನಿಂತವನೆ ! ಅವಳಿಗೆ ಪರಮಾನಂದವಾಯಿತು. ತಕ್ಷಣ ಅವನ ಪಾದದ ಮೇಲೆ ಬಿದ್ದಳು. ರಾಜಕುಮಾರ ಅವಳನ್ನ "ಏಳು" ಅಂತ ಮೇಲಕ್ಕೆ ಹಿಡಿದು ಏಳಿಸಿದ.

ಹಿಂದಿನಂತೇ ರಾಣಿಗೆ ರಾತ್ರಿಯೆಲ್ಲಾ ನಿದ್ರೆ ಬಂದಿರಲಿಲ್ಲ. ಬೆಳಕಾದದ್ದೇ ತಡ, 'ಪಾಪ ಆ ಹುಡುಗಿ ಏನಾಗ್ಯದೋ ನೋಡಿಕೊಂಡ್ ಬಾ" ಅಂತ ಬಿಟ್ಟೀನ ಕಳಿಸಿದಳು. ಇವಳು ಹೋಗಿ ಹೊರ ಚಿಲಕ ತಗದು ಬಾಗಿಲು ನೂಕ್ತಾಳೆ, ಏನಾದ್ರೂ ಬರಲೇ ಇಲ್ಲ. ಅವಳು ಓಡಿಬಂದು "ಅಮ್ಮ ಅಮ್ಮ ಬಾಗಲು ಬರಲೇವಲ್ಲದು" ಅಂತ ರಾಣಿಗೆ ಹೇಳಿದಳು. ಆಗ ರಾಜ ರಾಣಿ ಇಬ್ರೂ ಹೋಗಿ ಹಾರೆ ಹಾಕಿ ಬಾಗಿಲು ಮೀಟಿಸಿದರು. ಕತ್ತಲೆ ಮನೆಗೆ ದೀಪ ಹತ್ತಿಸಿದಂಗೆ ರಾಜಕುಮಾರ ಬುಂಡುಬುಂಡಗೇ ಹುಟ್ಟಿದ ನಿರ್ವಾಣ ನಿಂದವ್ನೆ. ಆಗ ದಡಬಡನೆ ಅವನಿಗೆ ಬಟ್ಟೆ ಕೊಟ್ಟರು. ಎಲ್ಲರಿಗೂ ಆಶ್ಚರ್ಯವೊ ಆಶ್ಚರ್ಯ. ಆಗ ಕೊಟ್ಟಕುಟ್ಸಿ ಪಟ್ಟಣ ಸಾರ್ಸಿ ನಳ್ಳಿಗೊಮಾರನಿಗೂ ಆ ಹುಡುಗಿಗೂ ದೇವೇಂದ್ರನ ವೈಭೋಗದಿಂದ ಲಗ್ನಮಾಡಿದರು.



## ೩

ಹಂಗೂ ಹಿಂಗೂ ಒಂದು ವರ್ಷ ಕಳೀತು. ಹುಡುಗಿ ಗರ್ಭಿಣಿಯಾದಳು. ಅತ್ತೆಗಂತೂ ಕೈಲಾಸವೇ ಭೂಮಿಗೆ ಇಳಿದಷ್ಟು ಸಂತೋಷ. ಸೀಮಂತ ಗೀಮಂತ ಎಲ್ಲಾ ಆಯ್ತು ಅದ್ದೂರಿಯಾಗಿ. ಈ ಸುದ್ದಿ ಅವರ ಚಿಕ್ಕವ್ವನಿಗೆ ತಿಳೀತು. ಅವಳಿಗೆ ಎಲ್ಲೂ ಇಲ್ಲದ ಹೊಟ್ಟೇ ಕಿಚ್ಚೇ ಬಂದು ಬುಡ್ತು. 'ಇರಲಿ' ಅಂದ್ಕೊಂಡು ಮಗಳ ಮನೆಗೆ ಬಂದಳು. ಬೀಗಿತಿ ಬಂದಳು ಅಂತ ರಾಣಿ ಬೇಕು ಬೇಕಾದ ಅಡಿಗೇನೆಲ್ಲಾ ಮಾಡಿಸಿ ಇಕ್ಕಿದಳು. ಆ ಮೇಲೆ "ಹೆರಿಗ್ಗೆ ಮಗಳ್ನ ಊರಿಗೆ ಕರಕೊಂಡು ಹೋಯ್ತೀನಿ ಕಳಿಸ್ಕೊಡಿ" ಅಂದಳು ರಾಣಿಗೆ. ರಾಣಿಗೆ ಬೇಜಾರೇ ಆಯಿತು. "ಅವಳಿಗೆ ಇಲ್ಲೇನು ಕಡಿಮೆಯಾಗ್ಯದೆ? ನನಗೆ ಮಗಳೂ ಅವಳೇ, ಸೊಸೇನೂ ಅವಳೇ. ಇಲ್ಲೇ ಇರ್ಲಿ ಹೋಗಿ" ಅಂದಳು.

"ಯಾಕೆ, ನಾವು ಬಡವರು ಅಂತ್ಲಾ. ಇಲ್ಲಿ ನಿದ್ನಾನೆ ಉಂಡ್ರೂ ತಿಂದ್ರೂ

ಹೆಣ್ಮಕ್ಕಳಿಗೆ ತೌರೂ ಅಂದ್ರೆ ಆಸೆ. ಅದಲ್ದೆ ಇದೇ ಚೊಚ್ಚಲು. ಇದಕ್ಕೆ ಕರೀದೇ ಹೋದ್ರೆ 'ಸವತಿ ಮಗಳು ಅಂತ ಕರೀದೇ ಹೋದ್ಲು' ಅಂತ ಜನ ದೂರ್ತಾರೆ. ನೀವು ಕಳಿಸ್ಲೇ ಬೇಕು" ಅಂತ ಒತ್ತಾಯ ಮಾಡಿದಳು.

ಆದರೆ ನಳ್ಳಿಗೊಮಾರ 'ಏನಾದ್ರೂ ಕಳಿಸ್ಬ್ಯಾಡ' ಅಂತ ಕಡ್ಡಿ ತುಂಡು ಮಾಡಿದಂಗೆ ಅವ್ವನಿಗೆ ಹೇಳಿದ. ಆದರೆ ರಾಣಿ ಅವನ ಮಾತ್ನೂ ಮೀರಿ ಕಳಿಸೋದ್ಕೆ ಒಪ್ಪಿಕೊಂಡಳು. ತಾನೇ ಸೊಸೇನ ಮುಂದೆ ಕೂರಿಸಿಕೊಂಡು ಚಿನ್ನದ ಸೀರಣಿಗೆ ರನ್ನದ ಬಾಚಣಿಗೆ ಬೆಳ್ಳಿ ಸಿಕ್ಕಾಟಿಗೇಲಿ ತಲೆ ಬಾಚಿ ಹೂ ಮುಡಿದಳು. ಆ ಮೇಲೆ "ಇವನ್ನ ಎಲ್ಲಿಯಾದ್ರೂ ನಿನ್ನ ಗುರುತಿಗೆ ಇಡಮ್ಮ" ಅಂತ ಹೇಳಿ ಅವಳ ಕೈಲೇ ಕೊಟ್ಟಳು. ಆ ಮೇಲೆ ಅವಳಿಗೆ ಹೊಸಾ ಹೊಸ ಒಡವೆ ವಸ್ತ್ರ ಎಲ್ಲಾನೂ ಉಡಿಸಿ ತೊಡಿಸಿ ಅಲಂಕಾರ ಮಾಡಿ ಮಡಲು ತುಂಬಿ ಬೀಗಿತಿ ಜೊತೇಲಿ ಕಳಿಸಿಕೊಟ್ಟಳು. ಆ ಹುಡುಗಿಗೆ ಹೋಗಬೇಕು ಅಂತ ಸುತರಾಂ ಮನಸಿಲ್ದೇ ಇದ್ರೂ ಅತ್ತೆ ಏನಂದ್ ಕೊತ್ತಾರೋ ಅಂದುಕೊಂಡು ಸುಮ್ಮನಾದಳು. ಅತ್ತೆ ಮಾವ ಗಂಡ ಎಲ್ಲಾರ ಕಾಲಿಗೂ ನಮಸ್ಕಾರ ಮಾಡಿ ಚಿಕ್ಕವ್ವನ ಜೊತೆ ಪಲ್ಲಕ್ಕೀಲಿ ಕೂತುಗೊಂಡು ಊರಿಗೆ ಹೋದಳು.

ಆ ಚಿಕ್ಕವ್ವನ ಹಿರೀಮಗಳು ಕುರುಡಿ. ಅವಳೂ ಗರ್ಭಿಣಿಯಾಗಿ ಏಳು ತಿಂಗಳಿಗೆ ಅವ್ವನ ಮನೆಗೆ ಬಂದಿದ್ದಳು. 'ಏನಾದ್ರೂ ಮಾಡಿ ಇವಳ್ನ ಸಾಯಿಸಿ ಬುಟ್ಟು ನನ್ನಮಗಳ್ನ ರಾಜನ ಮನೆಗೆ ಕಳಿಸಿಬುಡಬೇಕು' ಅಂತ ಚಿಕ್ಕವ್ವ ಯೋಚನೆ ಮಾಡಿಕೊಂಡಳು. ಒಂದು ದಿನ ರಾತ್ರೆ ಹೊತ್ತು ಆ ಹುಡುಗಿ "ಚಿಕ್ಕವ್ವಾ ಚಿಕ್ಕವ್ವಾ ಬೈಲು ಕಡೆಗೆ ಹೋಗಬೇಕು" ಅಂದಳು. ಚಿಕ್ಕವ್ವ ಅವಳ್ನ ಕರಕೊಂಡು ಮನೆಗೆ ಸುಮಾರು ದೂರಕೆ ಹೋದಳು. ಅಲ್ಲೊಂದು ಹನ್ನೆರಡಾಳುದ್ದದ ಹಾಳುಬಾವಿ. ಅದರ ಹತ್ರ ಅವಳ್ನ ಕೂರಿಸಿದಳು. ಆ ಮೇಲೆ ಇದೇ ಸಮಯ ಅಂದುಕೊಂಡು ಆ ಹುಡುಗೀನ ಹಿಂದಕ್ಕೆ ನೂಕಿಬುಟ್ಲು. ಅದು ಆ ಹನ್ನೆರಡಾಳುದ್ದದ ಬಾವಿಗೆ ಬಿದ್ದು ಬುಡ್ತು. ಚಿಕ್ಕವ್ವ ಸಂತೋಷದಿಂದ ಮನೆಗೆ ಬಂದಳು.

ಸ್ವಲ್ಪ ದಿವಸ ಕಳೆದ ಮೇಲೆ ಮಗಳು ಮಯ್ಯಾರಿಂಗಿದಳು. ಹೆಣ್ಣು ಮಗು. ಈ ಸುದ್ದಿ ಬೀಗರ ಮನೆಗೆ ಹೇಳಿ ಕಳಿಸಿದಳು. ರಾಣಿ ಹಿಂಸೆ ಮಾಡಿ ನಳ್ಳಿಗೋಮಾರನ್ನ "ನಿನ್ನ ಹೆಂಡತಿ ನೋಡ್ಕೊಂಡು ಬಾ ಹೋಗು" ಅಂತ ಕಳಿಸಿದಳು. ಅವನು ಅತ್ತೆ ಮನೆಗೆ ಬಂದ. ಕುರುಡಿ ತೆರೆಮರೇಲಿ ಕತ್ತಲೇಲಿ ಕೂತಿದ್ದಳು. ನೋಡಿದ. ಅವನಿಗೆ ಜೀವ ಧಢ್ ಅಂತು. ಇವಳು ತನ್ನ ಹೆಂಡತಿ ಅಲ್ಲ. ಏನೋ ಮೋಸ ನಡೆದಿದೆ ಅಂತ ಅವನಿಗೆ ನಿರ್ಧಾರವಾಯ್ತು. ಮತ್ತೆ



ಅವಳ್ನ ಮಾತಾಡಿಸ್ಲೂ ಇಲ್ಲ. ಅದೇ ಮೊಖಕ್ಕೆ ಬಂದ ದಾರೀಲಿ ಹಿಂತಿರುಗಿ ಹೋಗೇಬುಟ್ಟ.

ರಾಣಿ ಅರಮನೇಲಿ ಸೊಸೇ ಯೋಚನೇನೆ ಮಾಡ್ತಾ ಕೂತಿದ್ದಳು. ಅಷ್ಟು ಹೊತ್ತಿಗೆ ಮಗನೇ ಹಿಂದಿರುಗಿ ಬಂದ. ಅವಳಿಗೆ ಬಾಳ ಆಶ್ಚರ್ಯವಾಯಿತು. "ಯಾಕಪ್ಪಾ ಬೆಳಿಗ್ಗೆ ಹೋದೋನು ಸಂಜೆ ಹಿಂತಿರುಗಿ ಬಂದೆ?' ಅಂತ ಕೇಳಿದಳು. ಅವನ ಮುಖ ಒಂದುಕಾಸಿನಗಲ ಆಗಿತ್ತು. ಕಣ್ಣಲ್ಲಿ ನೀರು ತುಂಬಿ ಕೊಂಡು "ನಾನು ಕಳಿಸಬೇಡ ಅಂದ್ರೂ ಕಳಿಸಿದೆ. ಈಗ ನನ್ನ ಹೆಂಡ್ತೀನೇ ಅಲ್ಲಿಲ್ಲ. ಅವಳನ್ನು ಏನು ಮಾಡಿದಳೋ ಏನೋ ಅವಳ ಚಿಕ್ಕವ್ವ. ಈಗಿರೋಳು ನನ್ನ ಹೆಂಡ್ತಿ ಅಲ್ಲವೇ ಅಲ್ಲ. ಅದಕ್ಕೆ ನಾನು ವಾಪಸ್ ಬಂದೆ" ಅಂದ. ರಾಣಿಗೂ ಕರುಳು ಯಾಕೋ ಚುರ್ ಅಂತು. "ನಿನಗೊಂದು ಹುಚ್ಚು. ಅವಳು ಅಲ್ಲಿಲ್ದೆ ಇನ್ನೆಲ್ಲಿಗೆ ಹೋಯ್ತಾಳೆ? ನಾನೇ ಹೋಗಿ ನೋಡಿಕೊಂಡು ಕರಕೊಂಡು ಬರ್ತೀನಿ ಸುಮ್ನಿರು" ಅಂತ ಮಗನ್ನ ಸಮಾಧಾನ ಮಾಡಿದಳು.

ಹಿಂಗೇ ಒಂದೆರಡು ತಿಂಗಳು ಕಳೀತು. ರಾಣಿ ಹೋಗಿ ಸೊಸೆ ಕರಕೊಂಡು ಬಂದಳು. ಆದರೆ ಅವಳು ತನ್ನ ಸೊಸೆಯಲ್ಲ ಅನ್ನೋದು ಅವಳಿಗೆ ಗೊತ್ತಾಗಿಹೋಯ್ತು. "ಬಾಣಂತಿಯಾಗಿರೋದ್ರಿಂದ ಇಳಿದು ಹೋಗ್ಯವಳೆ. ಅವಳ ರೂಪೇಮಾಸಿ ಹೋಗ್ಯದೆ. ಹೆತ್ತ ಮೇಲೆ ಇದ್ದಕ್ಕಿದ್ದಂಗೆ ಅವಳ ಗ್ರಹಚಾರಕ್ಕೆ ಕಣ್ಣು ಬೇರೆ ಹೊರಟು ಹೋಯ್ತು" ಅಂತ ಅದು ಇದು ಹೇಳಿ ಬೀಗಿತಿ ಕಣ್ಣೀರು ಸುರಿಸಿದಳು. ಮತ್ತೆ ಇನ್ನೇನು ಹಗರಣವಾದೀತೋ ಅಂತ ರಾಣಿ ಅವಳನ್ನೇ ಕರಕೊಂಡು ಬಂದಳು. ಆದರೆ ನಳ್ಳಿಗೊಮಾರ ಅವಳನ್ನು ಮಾತಾಡಿಸಲಿಲ್ಲ. ಅವಳ ಮುಖಾನೂ ನೋಡಲಿಲ್ಲ. ತನ್ನ ಚಿನ್ನದಂಥ ಹೆಂಡತಿ ಏನಾದಳೋ ಅಂತ ಅವನಿಗೆ ಬರಬಾರದ ಚಿಂತೇನೇ ಬಂದ್‌ಬುಡ್ತು. ಊಟ ತಿಂಡಿ ಎಲ್ಲಾನು ಬುಟ್ಟು ಕೊರಗ್ತಾ ಮಂಚದ ಮೇಲೆ ಮೊಖಾಡೆ ಮಲಗಿಬಿಟ್ಟ.

* * * * *

ಇತ್ಲಾಗಿ ಆ ಹುಡುಗಿ ಹನ್ನೆರಡಾಳುದ್ದ ಬಾವಿಗೆ ಬಿದ್ದುಬುಟ್ಟಳು. ಅಲ್ಲೊಂದು ನಾಗರಾಜ ಕಪಾಲ – ಗುರ ಎದ್ದು ಹನ್ನೆರಡು ವರ್ಷದಿಂದ ನರಳ್ತಾ ಮಲಗಿದ್ದ. ಹುಡುಗಿ ಬಿದ್ದ ತಕ್ಷಣ ಅದರ ಕುರ ಒಡೆದುಹೋಯ್ತು. ಅದಕ್ಕೆ ಬಾಳ ಆನಂದವಾಯಿತು. "ಯಾವ ಮಹಾತಾಯಪ್ಪ ನನ್ನ ಕುರ ಒಡೆದು ನನ್ನ ನೋವು ತಪ್ಪಿಸಿದೋಳು" ಅಂದುಕೊಂಡು ನೋಡ್ತಾನೆ. ಬಸಿರಿ ಹೆಣ್ಣು. "ನೀನು ಯಾರವ್ವ?" ಅಂತ ನಾಗರಾಜ ಕೇಳಿದ. ಹುಡುಗಿ ನಡೆದ ಸಂಗತೀನೆಲ್ಲಾ ಹೇಳಿದಳು. ಅವನಿಗೂ

ಹೊಟ್ಟೆ ಉರಿದುಹೋಯ್ತು. "ಅವ್ವ ನನಗೂ ಯಾರು ಮಕ್ಕಳಿಲ್ಲ. ನೀನೇ ನನ್ನ ಮಗಳು ಅಂತ ಸಾಕ್ಕೊಳ್ತೀನಿ. ನಿನ್ನ ಗಂಡ ನಿನ್ನ ಹುಡೀಕೊಂಡು ಬಂದು ಕರಕೊಂಡು ಹೋಗೋವರೆಗೂ ನನ್ನ ಮನೇಲಿರು" ಅಂತ ಹೇಳಿದ. ಆ ಮೇಲೆ ಅವಳನ್ನು ಕರಕೊಂಡು ಒಂದು ಮಹಾಂತ ಕಾಡಿಗೆ ಹೊರಟುಹೋದ. ಆ ಕಾಡಿನ ಮಧ್ಯದಲ್ಲಿ ಒಂದು ಸೊಗಸಾದ ಮನೆ ಕಟ್ಟಿಸಿದ. ಆ ಮಗಳನ್ನು ಅದರಲ್ಲಿ ಇರಿಸಿದ. ಮುತ್ತು ರತ್ನ ವಜ್ರ ವೈಡೂರ್ಯ–ಅವಳಿಗೆ ಬೇಕು ಬೇಕಾದನ್ನೆಲ್ಲಾ ತಂದುಕೊಟ್ಟ. ಹುಡುಗಿ ಅಲ್ಲೇ ಮಯ್ಯಾರಿಂಗಿದಳು. ಮುತ್ತಿನಂಥ ಗಂಡು ಮಗು, ಒಳ್ಳೇ ಬಾಲಸೂರ್ಯನಂಗೆ ಹೊಳೀತಿತ್ತು. ನಾಗರಾಜ ಆ ಮೊಮ್ಮಗನ್ನ ಆಡಿಸಿಕೊಂಡು ಮಗಳಿಗೆ ಸಮಾಧಾನ ಮಾಡಿಕೊಂಡು ಇದ್ದ. ಹಿಂಗೇ ಎರಡು ವರ್ಷ ಕಳೀತು.

* * * * *

ಇತ್ತಲಾಗಿ ರಾಜಕುಮಾರ ಹೆಂಡತಿ ಚಿಂತೇಲಿ ಕೊರಗಿ ಕೊರಗಿ ಕಡ್ಡಿಯಾಗ್ತಾ ಬಂದ. ಇದನ್ನು ನೋಡಲಾರದೆ ಮಂತ್ರಿ ಬಂದು ಹೇಳಿದ: "ನೀವು ಅನ್ನ ಸೊಪ್ಪು ಎಲ್ಲಾನೂ ಬುಟ್ಟು ಹಿಂಗೆ ಕೊರಗ್ತಾ ಮಲಗಿಕೊಂಡರೆ ನಿಮಗೆ ನಿಮ್ಮ ಹೆಂಡತಿ ಕೈ ಸೇರ್ತಾರಾ? ಏನಾದ್ರೂ ಉಪಾಯ ಮಾಡಿ ತಿರುಗಿ ಅವರು ಎಲ್ಲಿದಾರೆ ಅಂತ ಕಂಡು ಹಿಡಿಯಬೇಕು" ಅಂತ.

'ಅದೂ ಸರಿ' ಅಂದುಕೊಂಡು ನಳ್ಳಿಗೊಮಾರ ಎದ್ದ. ತನ್ನ ವೇಷ ಮರಸಿಗೊಂಡ. ಬಳೆಗಾರನ ವೇಷ ಹಾಕ್ಕೊಂಡ. ಬೇಕಾದಷ್ಟು ಬಳೆ ಹೊತ್ಕೊಂಡು ದೇಶ ತಿರುಗಾಕೆ ಹೊರಟ. ಅವನೂ ತಿರುಗಿದ ತಿರುಗಿದ, ದೇಶಾನೆಲ್ಲ ತಿರುಗಿದ. ಆದರೆ ಅವನ ಹೆಂಡ್ತೀ ಎಲ್ಲೂ ಅವನ ಕಣ್ಣಿಗೆ ಸಂಧಿಸಲಿಲ್ಲ. ಹಿಂಗೇ ಬರ್ತಾ ಇರುವಾಗ ಒಂದು ಮಹಾಂತ ಕಾಡು ಸಿಕ್ತು. ಅದರೊಳಗೇ ನಡಕೊಂಡು ಬರುವಾಗ ನಾಗರಾಜನ ಅರಮನೆ ಸಿಕ್ತು. "ಇದೇನಪ್ಪ ಇಂಥ ಕಾಡಿನಲ್ಲಿ ಒಂದೇ ಒಂದು ಅರಮನೆ ಇದೆಯಲ್ಲ" ಅಂದುಕೊಂಡು ಮನೇ ಮುಂದಕ್ಕೆ ಹೋಗಿ "ಬಳೆ ಬಳೆ ಬೆಂಗಳೂರು ಬಳೆ, ಬೊಂಬಾಯಿ ಬಳೆ, ಮುತ್ತಿನಂತ ಮೈಸೂರು ಬಳೆ" ಅಂತ ಕೂಗಿದ. ಈ ಕೂಗು ಆ ಹುಡುಗಿಗೆ ಕೇಳಿಸ್ತು. ಅವಳಿಗೆ ಬಳೆ ತೊಟ್ಟುಕೋಬೇಕೂ ಅಂತ ಆಸೆ ಆಯಿತು. ನಾಗರಾಜನ ಹತ್ರಕ್ಕೆ ಹೋಗಿ "ಅಪ್ಪಾ ಅಪ್ಪಾ ಬಳೆ ಬಂದವೆ, ಬಳೆ ತೊಟ್ಕೋಬೇಕು" ಅಂದಳು. "ಅದ್ಕೇನಂತೆ ತೊಟ್ಕೋ ಹೋಗವ್ವ. ಒಂದೆರಡು ಮೊರ ಮುತ್ತು ರತ್ನ ಕೊಟ್ಟು" ಅಂದ ನಾಗರಾಜ. ಸರಿ, ಬಂದು ಬಳೇಯವನ್ನ ನೋಡಿದಳು. ಬಳೆತೊಡಿಸಿಕೊಳ್ಳೋದಕ್ಕೆ



ಕೂತುಕೊಂಡ್ಲು. ಆಗ ಅವಳ ಎರಡು ವರ್ಷದ ಕುಮಾರ ಬಂದು ಆ ಬಳೆಗಾರನ ತೊಡೇ ಮೇಲೆ ಕೂತ್ಗೊಂತು. ಗಂಡ ಹೆಂಡತಿ ಇಬ್ಬರಿಗೂ ಒಬ್ಬರಿಗೆ ಇನ್ನೊಬ್ಬರ ಗುರುತು ತಿಳೀಲಿಲ್ಲ. ಆಗ ಅವಳ ಎರಡು ವರ್ಷದ ಕುಮಾರ ಬಂದು ಆ ಬಳೆಗಾರನ ತೊಡೇ ಮೇಲೆ ಕೂತ್ಗೊಂಡು "ಅಪ್ಪ ಅಪ್ಪ" ಅಂತು. "ಅಯ್ಯೋ ನಾನು ನಿಮ್ಮಪ್ಪ ಅಲ್ಲಾ ಕಣಪ್ಪ., ಒಳಕ್ಕೆ ಹೋಗಪ್ಪ" ಅಂತ ಮಗೂನ ಎತ್ಗೊಂಡು ಮುದ್ದಾಡಿದ. ಅದು ಒಳಕ್ಕೆ ಹೋಗ್ಲೇ ಇಲ್ಲ. ಅವರ ಅವ್ವನೂ ಕರೆದಳು. "ಬಾರಪ್ಪ, ಹೋಗಾನೆ" ಅಂತ. "ಉಹು, ನಾನು ಬರೋದಿಲ್ಲ. ನಾನು ನಮ್ಮಪ್ಪನ ತಾವೇ ಇರ್ತೀನಿ" ಅಂತು. ಅವಳಿಗೇ ಒಳ್ಳೇ ಪೀಕಲಾಟಕ್ಕೆ ಬಂತು. ಹೋಗಿ ನಾಗರಾಜನಿಗೆ ತಿಳಿಸಿದಳು. ಅವನು ಬಂದು ಒಂದುಪಾಯ ಹೇಳಿದ: "ಇವನು ಮಗು ಎತ್ಕೊಂಡು ನಿಂತ್ಕೊಳ್ಳಿ– ಮಧ್ಯೆ ಏಳು ತೆರೆ ಹಾಕ್‌ಸಾನೆ. ಏಳು ತೆರೆಯಿಂದ ಆಚೆ ನೀನು ನಿಂತ್ಕೊಂಡು ಎದೆ ಹಾಲು ಕರಿ. ಆ ಹಾಲು ಬಂದು ಮಗುವಿನ ಬಾಯಿಗೆ ಬಿದ್ರೆ ಇವನೇ ನಿನ್ನ ಗಂಡ, ನೀನೇ ಅವನ ಹೆಂಡತಿ."

ಸರಿ, ಮಧ್ಯೆ ಏಳು ತೆರೆ ಹಾಕಿಸಿದರು. ಆಚೆಕಡೆ ಅವಳು ನಿಂತುಕೊಂಡಳು. ಈಚೆಕಡೆ ಇವನು ಮಗು ಎತ್ಕೊಂಡು ನಿಂತುಕೊಂಡ. ಅವಳು ಆ ಕಡೆಯಿಂದ ಎದೆಹಾಲು ಕರೆದಳು. ಅದು ಚಿಕಂ ಅಂತ ಏಳು ತೆರೆ ದಾಟಿಕೊಂಡು ಈಚೆಗೆ ಬಂದು ಮಗುವಿನ ಬಾಯಿಗೆ ಬಿತ್ತು. ಆಗ ಅವರಿಬ್ರೂ ಗಂಡಹೆಂಡತೀರೂ ಅಂತ ನಿರ್ಧಾರವಾಯಿತು. ಆಗ ಇಬ್ರೂ ತಮ್ಮ ತಮ್ಮ ಸಂಗತಿ ಹೇಳಿದ್ರು. ಆಗ ಇಬ್ಬರಿಗೂ ತಿಳೀತು ಅವರ ಚಿಕ್ಕವ್ವ ಮಾಡಿದ ಉಪಾಯ. ನಾಗರಾಜನಿಗೆ ತುಂಬಾ ಸಂತೋಷವಾಯಿತು.

ನಾಗರಾಜ ಮಗಳಿಗೆ ಹೇಳಿದ : "ನಿನಗೆ ಏನೇನು ಬೇಕೊ–ಮುತ್ತು ರತ್ನ ವಜ್ರ ವೈಢೂರ್ಯ ಎಷ್ಟೆಷ್ಟು ಬೇಕೋ ಎಲ್ಲಾನೂ ತಕ್ಕೊಂಡು ಹೋಗು. ನೀನು ನಿನ್ನ ಗಂಡನ್ನ ಸೇರಿಕೊಂಡದ್ದು ನನಗೆ ತುಂಬಾ ನೆಮ್ಮದಿಯಾಯಿತು. ಇಲ್ಲೀವರೆಗೆ ಹೊಟ್ಟೇಲಿ ಹುಟ್ಟಿದ ಮಗಳಿಗಿಂತ ಹೆಚ್ಚಾಗಿ ಆರೈಕೆ ಮಾಡಿದೆ. ಇನ್ನೇನು ನನ್ನ ವಾಯಿದೇನೂ ಮುಗಿತಾ ಬಂತು. ನೀನು ಹೋಗು. ಗಂಡ ಮಗನ ಜೊತೆ ಸುಖವಾಗಿ ಬದೀಕೋ" ಇಷ್ಟು ಹೇಳಿ ಬೇಕ್‌ಬೇಕಾದ್ದೆಲ್ಲಾನೂ ಗಂಟುಕಟ್ಟಿ ಕುದುರೆಗಳ ಮೇಲೆ ಹೇರ್‍ತು. ಆಮೇಲೆ "ಈ ದಾರೀಲಿ ಹೋಗವ್ವ ಮಗಳೆ. ಆದರೆ ಹೋಗುವಾಗ ಹಿಂದಕ್ಕೆ ತಿರುಗಿ ನೋಡಬೇಡ" ಅಂತ ಹೇಳಿ ಕಣ್ಣಲ್ಲಿ ನೀರು ತುಂಬಿಕೊಂಡ. ಮೊಮ್ಮಗನ್ನ ಮುತ್ತಿಟ್ಟು ಮುದ್ದಾಡಿ ಮಗಳಕೈಲಿ ಕೊಟ್ಟ. ಆ ಹುಡಗೀನು ಹೋಗಲಾರದೆ ಇರಲಾರದೆ ಅಪ್ಪನಿಗೆ ನಮಸ್ಕಾರ ಮಾಡಿ

ಅಳ್ತಾ ಅಳ್ತಾ ಹೋದಳು. ಎಷ್ಟೋ ದೂರ ಹೋದಮೇಲೇ ಗಂಡ ಹೆಂಡತಿ ಹಿಂದಕ್ಕೆ ತಿರುಗಿನೋಡಿದರು. ನಾಗರಾಜನ ಅರಮನೆ ಭಗ್ ಅಂತ ಹತ್ತಿಕೊಂಡು ಉರೀತಾ ಇತ್ತು.

ಗಂಡ ಹೆಂಡತಿ ಮಗು ಮೂರು ಜನಾನೂ ಅರಮನೆಗೆ ಹೋದರು. ಅಷ್ಟು ಹೊತ್ತಿಗೆ ಚಿಕ್ಕವ್ವನೂ ಬಂದಿದ್ದಳು. ಇವಳನ್ನ ನೋಡಿ ಅವಳಿಗೆ ದೊಡ್ಡ ಜೀವವೇ ಹೋದಂತಾಯ್ತು. ಆಗ ರಾಣಿ ಕುರುಡಿಗೆ ಹೇಳಿದಳು: "ನೀನು ನಿಮ್ಮೂರಿಗೆ ಹೋಗುವಾಗ ಚಿನ್ನದ ಸೀರಣಿಗೆ, ರನ್ನದ ಬಾಚಣಿಗೆ, ಬೆಳ್ಳಿಸಿಕ್ಕಾಟಿಗೆ ಕೊಟ್ಟಿದ್ನಲ್ಲಾ ಅವನ್ನ ತಕ್ಕೊಂಡ್ ಬಾ". ಆ ಕುರುಡಿಗೇನು ಗೊತ್ತು. "ನಂಗೇನು ಗೊತ್ತು? ನನ್ನ ಕೈಲಿ ಎಲ್ಲಿ ಕೊಟ್ಟಿದ್ರಿ?" ಅಂತ ಅವಳು ಅಂಕಬಿಂಕ ಹೊಡೆದಳು. ಆಗ ರಾಣಿ ನಿಜವಾದ ಸೊಸೆಗೆ ಹೇಳಿದಳು. ಅವಳು ಸರಕ್ ಅಂತ ತಂದುಕೊಟ್ಟಳು. ಆಗ ಎಲ್ಲರಿಗೂ ನಿಜ ಗೊತ್ತಾಗಿಹೋಯ್ತು. ಅವ್ವಮಕ್ಕಳಿಗೆ ಚಳಿಜ್ವರ ಎಲ್ಲಾ ಒಟ್ಟಿಗೇ ಬಂದುಬುಟ್ವೊ. ಆಗ ನಳ್ಳಿಗೊಮಾರ ಅವರಿಬ್ಬರ್ನೂ ಸಿಗಿಸಿ ಕೋಟೆಬಾಗಿಲಿಗೆ ತೋರಣ ಕಟ್ಟಿಸಿದ. ಆಮೇಲೆ ಎಲ್ಲಾ ಸುಖವಾಗಿ ಬದುಕಿಕೊಂಡರು.

* * * *



## ಬುದ್ದಿಯ ಬಲ*

ಒಂದೂರಿನಲ್ಲಿ ಒಬ್ಬ ರಾಜ. ಅವನಿಗೆ ಒಬ್ಬಾನೊಬ್ಬನೇ ಮಗ. ಅವನ್ನ ಬಾಳ ಮುದ್ದಿನಿಂದ ಅಪ್ಪ ಅವ್ವ ಸಾಕಿದ್ದರು. ಅವನು ಕೇಳಿದ್ದ ಇಲ್ಲಾ ಅಂತಿರಲಿಲ್ಲ. ಅವನ ಬಾಯಲ್ಲಿ ಬಂದದ್ದು ಹುಸಿಯಾಯ್ತಿರಲಿಲ್ಲ. ಅವನು ಬೆಳದ ಬೆಳದ, ಹೊತ್ತಿಗೆ ಬೆಳಿ ಅಂದರೆ ಜಾವಕ್ಕೆ ಬೆಳದ; ಹದಿನಾರು ವರ್ಷದ ಕದರು ಹುಡುಗ ಆದ. ಒಳ್ಳೇ ಕಳ್ಳೇ ಕುಡಿಹಂಗೆ ಬಾಳೆಮೋತೆಹಂಗೆ ತಮ್ಮ ಹಣೆಮಟ್ಟಕ್ಕೆ ಬೆಳೆದುನಿಂತ ಮಗನಿಗೆ ಮದುವೆಮಾಡಿ ಬಿರ್ರನೆ ಮೊಮ್ಮಗನ್ನ ಕಣ್ಣಲ್ಲಿ ನೋಡಬೇಕೂಂತ ಅವರಿಗೆ ಆಸೆ ಆಯಿತು. ರಾಜ ಮಂತ್ರಿ ಕರದು ಹೇಳಿದ:

"ನೋಡು ನನ್ನ ಮಗನಿಗೆ ಒಪ್ಪೋ ಅಂತ ಹೆಣ್ಣು ನೋಡಿಕೊಂಡು ಬರೋ ಜವಾಬ್ದಾರಿ ನಿಂದು. ಹದಿನಾಲ್ಕು ಆನೆಮ್ಯಾಲೆ ಹಣಹೇರಿಕೊಂಡು ಹೋಗು. ಏಳು ಆನೆಗಳು ಹೊರೋವಷ್ಟು ಹಣ ಖರ್ಚಾಗೋಗಂಡ್ಲೂ ಹೆಣ್ಣು ಹುಡುಕ್ತಾ ಹೋಗು. ಶಿವನ ಕ್ಯಾತಾರದಲ್ಲಿದ್ರೂ ಬುಡಬ್ಯಾಡ. ಏಳಾನೆ ಹಣ ಪುಟ್ಟಗೆ ಖರ್ಚಾಗೋದ್ಮೇಲೆ ಹಿಂತಿರುಗಿ ಬಂದ್ಬುಡು"

ಮಂತ್ರಿ 'ಆಗಲಿ' ಅಂತ ಒಪ್ಕೊಂಡು ರಾಜಕುಮಾರನ ಹತ್ರಕ್ಕೆ ಬಂದ. "ಹೆಣ್ಣು ನೋಡಾಕ್ ಹೋಯ್ತೀವಿ. ನೀವು ಏನಾರೂ ಹೇಳೋದಿದ್ರೆ ಹೇಳಿ" ಅಂತ ಕೇಳಿದ.

"ಏನೂ ಇಲ್ಲ. ಅತ್ತರೆ ಮುತ್ತು ಸುರೀಬೇಕು, ನಕ್ಕರೆ ರತ್ನ ಸುರೀಬೇಕು. ಎಡವಿದರೆ ಮೂಗಲ್ಲಿ ರಕ್ತ ಬರಬೇಕು. ಅಂತ ಹೆಣ್ಣ ತಕ್ಕೊಂಡ್ ಬರಬೇಕು. ಇಲ್ದೇ ಇದ್ರೆ ನಾ ಮದುವೆಯಾಗೋದಿಲ್ಲ" ಅಂದ ರಾಜಕುಮಾರ.

"ಆಗಲಿ, ಅಂತ ಹೆಣ್ಣೇ ನೋಡಿಕೊಂಬತ್ತೀನಿ" ಅಂತ ಹೇಳಿ ಹದಿನಾಲ್ಕು ಆನೆಮ್ಯಾಲೆ ಹಣಹೇರಿಕೊಂಡು ದಂಡು ದಾಳಿ ಎಲ್ಲಾನೂ ತಕ್ಕೊಂಡು ಹೊಂಟುಬಿಟ್ಟ.

ಮಂತ್ರಿ ಹೋದ ಹೋದ ಹೋದ, ಬಾಳ ದೂರ ಹೋದ. ಅಲ್ಲಿ ಇಲ್ಲಿ

---

* ಹೇಳಿದವರು : ಕೃಷ್ಣರಾಜ ನಗರದ ತಾಲ್ಲೂಕು ಬಡಗನ ಕೊಪ್ಪಲ ಗ್ರಾಮದ ಶ್ರೀ ಬಿ.ಪಿ. ಮಲ್ಲೇಗೌಡ.

ದಿಲ್ಲಿ ದೀಪಾಂತರ ಎಲ್ಲಾನೂ ಒಂದು ಕಡೆಯಿಂದ ಸೋಸಿಬಿಟ್ಟ. ಎಂಥೆಂಥ ಕೈತೊಳಕೊಂಡು ಮುಟ್ಟೋ ಅಂಥ ಹೆಣ್ಣುಗಳೆಲ್ಲಾನೂ ನೋಡಿದ. ಆದರೆ ರಾಜಕುಮಾರ ಹೇಳಿದಂಥ ಕುರುಹಿನ ಹೆಣ್ಣು ಎಲ್ಲೂ ಅವನ ಕಣ್ಣಿಗೆ ಗೋಚರವಾಗಲಿಲ್ಲ. ಬರೀ ಕೈಲಿ ಹೋಗಬಾರ್ದು ಅಂತ ಅವನೂ ಬಾಳ ಸಾಸಪಟ್ಟು ಮೈಯೆಲ್ಲಾ ಕಣ್ಣಾಗಿ ಹುಡುಕಿದ. ಯಲ್ಲಾ ಯರ್ಥಆಗೋಯ್ತು. ಏಳಾನೆ ಹಣವೆಲ್ಲಾ ಖರ್ಚಾಗಿ ಹೋಯ್ತು. ಇನ್ನೆನ್ಮಾಡಾಕೂ ಹಾದಿಕಾಣದೆ ಹ್ಯಾಪ್‌ಮೊರೆ ಹಾಕ್ಕೊಂಡು ಊರಿಗೆ ಹಿಂತಿರುಗಿಬುಟ್ಟ. ಮಂತ್ರಿ. ತಾನು ಹೋದ ಕಾರ್ಯ ಜಯವಾಗಲಿಲ್ಲ ಅಂತ ರಾಜನಿಗೂ ರಾಜಕುಮಾರನಿಗೂ ಹೇಳಿದ.

ಆಮ್ಯಾಲೆ ರಾಜನೇ ರಾಜಕುಮಾರನ್ನ ಕರದು, “ನೋಡಪ್ಪಾ, ಇಲ್ಲೀಗಂಟ ಏಟು ಸಾಸಪಟ್ರೂ ನಿನಗೆ ಒಪ್ಪೋ ಅಂತ ಹೆಣ್ಣು ಸಿಕ್ನಿಲ್ಲ. ನೀನೇ ಹೋಗು. ಈ ಹದಿನಾಲ್ಕು ಆನೆವ್ಯಾಲೆ ಹಣ ಹೇರಿಕೊಂಡು ಅದ ಪೂರ್ತಾ ಖರ್ಚಾಗೋಗಂಟ್ಲೂ ಹುಡುಕ್ಕೊಂಡು ಪತ್ತೆಮಾಡ್‌ಕೊಂಡ್ಬಾ. ನಾನು ಮದುವೆ ಮಾಡ್ತೀನಿ” ಅಂತ ಹೇಳಿದ.

ಮಂತ್ರಿಗೆ ಒಬ್ಬ ಮಗ ಇದ್ದ. ಅವನು ಬಾಳ ಬುದ್ಧಿವಂತ. ಅವನೂ ದೊರೆಮಗನೂ ಕಿತ್ತರೆ ಬರದಂಥ ದೇಹ ಎರಡು, ಪ್ರಾಣ ಒಂದು ಅನ್ನೋ ಅಂಥ ಸ್ನೇಹಿತರು. ಆದ್ರಿಂದ ರಾಜಕುಮಾರ ಮಂತ್ರಿ ಕುಮಾರನ್ನೂ ಜೊತೇಲಿ ಕರಕೊಂಡು ಹದಿನಾಲ್ಕು ಆನೇಮ್ಯಾಲೆ ಹಣ ಹೇರ್‍ಕೊಂಡು ಹೆಣ್ಣು ಹುಡುಕಾಕೆ ಹೊಂಟುಬುಟ್ಟ. ಅವರೂ ಹುಡುಕಿದರು, ಹುಡುಕಿದರು, ದೇಶದ ಸಂದಿಗುಂದಿ ಮೂಲೆ ಮುಡುಕಲು ದಿಲ್ಲಿ ದೀಪಾಂತರ ಎಲ್ಲನೂ ಒಂದು ಕಡೆಯಿಂದ ಸೋಸಿಬುಟ್ಟರು. ಎಲ್ಲೂ ಅವರಿಗೆ ಬೇಕಾದಂಥ ಹೆಣ್ಣು ಕಣ್ಣಿಗೆ ಸಂದಿಸಲೇ ಇಲ್ಲ. ಅವರೂ ತಿರುಗಿ ತಿರುಗಿ ಬೆಪ್ಪಾದರು. ಏಳಾನೆಮ್ಯಾಲಿನ ಹಣವೂ ಮುಗೀತಾ ಬತ್ತು. ಒಂದು ಮಹಾಂತ ಕಾಡಿಗೆ ಬಂದರು. ಅಲ್ಲಿ ದಂಡುದಾಳಿ ಎಲ್ಲಾ ಬಿಡಾರ ಬುಟ್ಟರು. ಆಮ್ಯಾಲೆ ಮಂತ್ರಿಮಗ ರಾಜನ ಮಗ ಇಬ್ರೂವೇ ಕುದುರೆ ಮ್ಯಾಲೆ ಕೂತುಗೊಂಡು ಚಂದ್ರಾಯುಧ ಕೈಲಿ ಹಿಡಕೊಂಡು ಮುಂದಕ್ಕೆ ಹೊಂಟ್ರು. ಅಲ್ಲೊಂದು ಊರು. ಆ ಊರಿನ ಪಟೇಲ ಕರೀಗೌಡ ಅಂತ. ಇವರು ಊರು ಮುಂದಾರಕೆ ಹೋಗಿ ನಿಂತುಕೊಂಡರು. ಆ ಕರೀಗೌಡನ್ನ ಕರಸಿದರು. ಅವನು ಬಂದು ಕೈಮುಗಿದು ಅಡ್ಡಬಿದ್ದ. “ಮಾಸೋಮೇರು ಬಂದ ಕಾರ್ಯ ಹೇಳಬೇಕು” ಅಂತ ಬೇಡಿಕೊಂಡ. ಆಗ ಮಂತ್ರಿ ಮಗ ಹೇಳಿದ :

“ನಮ್ಮ ರಾಜಕುಮಾರರಿಗೆ ಒಂದು ಹೆಣ್ಣುಬೇಕು ಅದು ಗಂಧದ ಗೊಂಬೆ



ಹಂಗಿರಬೇಕು. ಅದು ಅತ್ತರೆ ಮುತ್ತು ಸುರೀಬೇಕು, ನಕ್ಕರೆ ರತ್ನ ಉದುರಬೇಕು. ಅಂಥ ಹೆಣ್ಣ ತೋರಿಸಿಕೊಟ್ರೆ ನೀನು ಕೇಳಿದ್ದು ಕೊಡ್ತೀವಿ”

ಆ ಪಟೇಲ ಒಪ್ಪೊತ್ತು ಹಂಗೇ ಯೋಚನೆ ಮಾಡಿದ. ಆಮ್ಯಾಲೆ ಅತ್ತಿತ್ತ ನೋಡಿ ಮೆತ್ತಗೆ ಹೇಳಿದ : “ನೋಡಿ ಮಾಸ್ವಾಮಿ, ನಮ್ಮೂರಲೇ ಒಂದು ಅಂಥ ಹೆಣ್ಣಿತ್ತು. ಸಮುದ್ರದ ಆಚೇಲಿರೋ ಪಟ್ಟಣದ ರಾಜಕುಮಾರ ಅವಳನ್ನ ಲಗ್ನ ಆಗಬೇಕು ಅಂತ ಎಲ್ಲ ಏರ್ಪಾಟೂ ಮಾಡಿಕೊಂಡಿದ್ದ. ಅಷ್ಟೊತ್ತಿಗೆ ಎಂಥ ಕೆಲಸ ಆಗೋಯ್ತು ಅಂತೀರಿ. ಆ ಹೆಣ್ಣು ರಾತ್ರೆ ಹೊತ್ತು ಮನಗಿದ್ದಾಗ ಒಂದು ಏಳೆಡೆಸರ್ಪ ಬಂದು ಅವಳನ್ನ ಹೊತ್ಕೊಂಡ್ ಹೋಗಿಬುಡ್ತು.”

“ಈಗ ಅದು ಅವಳನ್ನ ಎಲ್ಲಿ ಮಡೀಕೊಂಡದೆ? ಇಲ್ಲಾ ಸಾಯಿಸ್ಬುಡ್ತೋ?” ಅಂತ ಮಂತ್ರಿಮಗ ಕೇಳಿದ. “ಇಲ್ಲ ಸಾಯಿಸಿಲ್ಲ. ಅವಳನ್ನ ತಕ್ಕೊಂಡು ಹೋಗಿ ಸಮುದ್ರದ ಮಧ್ಯದಲ್ಲಿ ವಳಗೆ ಪಾತಾಳ ಲೋಕದಲ್ಲಿ ಮಡೀಕೊಂಡದೆ. ಅದು ರಾತ್ರಿ ಹೊತ್ತು ಮಾತ್ರ ಸಂಚಾರಕ್ಕೆ ಹೊರಕ್ಕೆ ಬತ್ತದೆ. ಅದರ ಹತ್ರ ಒಂದು ಚೂಡಾಮಣಿ ರತ್ನ ಅದೆ. ರಾತ್ರೆ ಹೊತ್ತು ಅದ ತಗದು ಈಚೆಗೆ ಎಸದುಬುಡ್ತದೆ. ಆಗ ಪಾತಾಳ ಲೋಕದ ಬಾಗಲು ತಕ್ಕೊಂಡುಬುಡ್ತದೆ: ಸಮುದ್ರ ಎರಡು ಭಾಗವಾಗಿಬುಡ್ತದೆ. ಆಗ ಸರ್ಪ ದಡಕ್ಕೆ ಬತ್ತದೆ. ಆ ಚೂಡಾಮಣೀಯ ಸಮುದ್ರದ ಬಾಗಲಿಗೆ ಮಡಗಿ ಬುಟ್ಟು ಅದರ ಬೆಳಕಲ್ಲಿ ಆಹಾರ ಹುಡುಕಾಕೆ ಹೊಂಟುಬುಡ್ತದೆ. ಮೊದಲ ಕೋಳಿ ಕೂಗೋ ಹೊತ್ಗಂಟ ಅಲ್ಲಿ ಇಲ್ಲಿ ಸುತ್ತಿಗೊಂಡು ಆಮ್ಯಾಲೆ ಆ ಚೂಡಾಮಣಿ ತಕ್ಕೊಂಡು ಸಮುದ್ರದ ವಳಕ್ಕೆ ಹೋಯ್ತದೆ. ಆಗ ಸಮುದ್ರ ಬಾಗಲು ಹಾಕ್ಕೊತ್ತದೆ, ಎಂದಿನಂಗೇ ತುಂಬಿಕೊತ್ತದೆ.”

ಸರಿ, ಇದೆಲ್ಲಾನೂ ಕೇಳಿಕೊಂಡರು. “ಏನಾದರೂ ಮಾಡಿ ಈ ಹುಡಿಗೀನ ಸರ್ಪದ ಕಾವಲಿನಿಂದ ಬುಡಿಸಿಕೊಂಡ್ ಹೋಗಿಬುಡಬೇಕು. ಇಲ್ದೇ ಇದ್ರೆ ನಾವು ಗಂಡಸರಾಗಿದ್ದೂ ಯರ್ಥ. ಬರೀ ಕೈಲಿ ಹೋಗಿ ಊರಲಿ ಹ್ಯಂಗೆ ಮೊಖ ತೋರಸೋದು?” ಅಂದ ರಾಜಕುಮಾರ. ಇಬ್ಬರೂ ಅಡವಿಗೆ ಹೋಗಿ ದಂಡುದಾಳಿ ಎಲ್ಲಾನೂ ಕರಕೊಂಡು ಬಂದು ಆ ಊರಲ್ಲೇ ಬಿಡಾರ ಮಾಡಿದರು.

* * * * *

ಸಮುದ್ರದ ಹತ್ರ ಒಂದು ಆಲದಮರ ಆಲಬ್ಬರವಾಗಿ ಬೆಳದಿತ್ತು. ರಾಜಕುಮಾರ ಮಂತ್ರಿಕುಮಾರ ಇಬ್ರೂ ಉಂಡು ಉಟ್ಟು ಆ ಆಲದ ಮರದ ಮ್ಯಾಕೆ ಹೋಗಿ ಯಾರಿಗೂ ಕಾಣದಂಗೆ ಎಲೇಮರೇಲಿ ಹದೀಕ್ಕೊಂಡು ಕೂತುಗೊಂಡರು. ಆ ಏಳೆಡೆ ಸರ್ಪ ಚೂಡಾಮಣಿ ರತ್ನ ಈಚೆಗೆ ಎಸೀತು.

ಆಗ ಒಂದು ಮೈಲಿ ಪಾಸಲೆಯೆಲ್ಲಾ ಹಗಲಾದಂಗಾಯಿತು. ಇಬ್ರೂ ಮ್ಯಾಲೆ ನೋಡ್ತಾ ನೋಡ್ತಾ ಅವ್ರೆ. ಸಮುದ್ರ ಎರಡು ಭಾಗವಾಗಿ ಹಿಸಕೊಂಡುಬುಡ್ತು. ಅದರೊಳಗಿನಿಂದ ಸರ್ಪ ಭೋರಾಡಿಕೊಂಡು ಈಚೆಗೆ ಬತ್ತು. ಅದರ ಬೆಳಕಿನಲ್ಲಿ ಆಹಾರ ಹುಡೀಕೊಂಡು ಹೊಂಟೋಯ್ತು. ಬಾಳ ಹೊತ್ತಾದ ಮ್ಯಾಲೆ ಕೋಳಿಕೂಗೋ ಸಮಂತ್ರದಲ್ಲಿ ಸರ್ಪ ಹಿಂದಿರುಗಿ ಬಂದು ಆ ಚೂಡಾಮಣಿ ತಕ್ಕೊತ್ತು. ಬಂದ ದಾರೀಲೆ ವಾಪಸ್ ಹೋಗಿ ವಳಕ್ಕೆ ಹೊಕ್ಕೊತ್ತು. ಮತ್ತೆ ಸಮುದ್ರ ಎಂದಿನಂಗೇ ಏಕವಾಗಿ ಬುಡ್ತು.

ಬೆಳಗಾದ ಮೇಲೆ ಇಬ್ರೂ ಮರದಿಂದ ಕೆಳಕ್ಕೆ ಇಳಿದು ಬಂದರು. ಮಂತ್ರಿ ಮಗ ಒಂದುಪಾಯ ಮಾಡಿದ. ಕರೀಗೌಡನ ಹತ್ರಕ್ಕೆ ಇಬ್ರೂ ಹೋದರು. "ನೋಡು ಕರೀಗೌಡ, ನಿಂಗ್ ಯಾರಾರೂ ಹಿತ್ತಾಳೆ ಕೆಲಸ ಮಾಡೋರು ಪರಿಚಯ ಅದ?" ಅಂತ ಕೇಳಿದ.

"ಹ್ಞೂ ಬುದ್ಧಿ. ಯಾಕೆ, ಏನಾಗ್ಬೇಕಿತ್ತು?"

"ಒಂದು ದೊಡ್ಡ ಹಿತ್ತಾಳೆಕೊಳಗ ಮಾಡಿಸಿಕೊಡು. ಅದರ ಹಿಂಭಾಗ ಕೈಮಡಗಿದರೆ ಕತ್ತರಿಸಿ ಹೋಗೋ ಹಂಗೆ ಚೂಪು ಅಂದ್ರೆ ಚೂಪಾಗಿರಬೇಕು." ಅಂದ ಮಂತ್ರಿ ಮಗ.

"ಆಗಲಿ ಮಾಡಿಸಿ ಕೊಡ್ತೀನಿ" ಅಂತ ಹೇಳಿದ ಕರೀಗೌಡ. ಎರಡು ದಿವಸ ಆದ ಮ್ಯಾಲೆ ಮಾಡಿಸಿಕೊಂಡು ಬಂದುಕೊಟ್ಟ.

ಆವತ್ತು ರಾತ್ರಿ ಮಂತ್ರಿ ಮಗ ರಾಜನ ಮಗ ಇಬ್ರೂ ಕೊಳಗ ತಕ್ಕೊಂಡು ಮರದ ಮ್ಯಾಕೆ ಹೋಗಿ ಅವಿತುಕೊಂಡು ಕೂತುಕೊಂಡರು. ಎಂದಿನಂಗೇ ಸರ್ಪಈಚೆಗೆ ಬಂದು ಚೂಡಾಮಣಿ ಬೆಳಕಲ್ಲಿ ಆಹಾರ ಹುಡುಕಾಕೆ ಹೊಂಟೋಯ್ತು. ಮಧ್ಯ ರಾತ್ರೆ ಸಮಯ ಆಯ್ತು. ಆಗ ಇಬ್ರೂ ಮರದಿಂದ ಕೆಳಕ್ಕೆ ಇಳಿದು ಮೆತ್ತಗೆ ಹೋಗಿ ಆ ಚೂಡಾಮಣಿ ಮ್ಯಾಲೆ ಕೊಳಗ ದಬ್ಬಾಕಿದರು. ಸುತ್ತಲೂ ಗವ್ ಅಂತ ಕತ್ತಲೆ ಕವಕೊತ್ತು. ಇಬ್ರೂ ಬಿರಬಿರನೆ ಮರಕ್ಕೆ ಹತ್ತಿಗೊಂಡರು. ಸರ್ಪಕ್ಕೆ ಕಣ್ಣು ಕಾಣಿಸದಂಗೆ ಆಗೋಯ್ತು. ಅದಕ್ಕೆ ಎಲ್ಲೂ ಇಲ್ಲದ ರೋಷವೇ ಬಂದುಬುಡ್ತು. ಭೋರಾಡಿಕೊಂಡು ಬಿರಬಿರನೆ ಬಂದು ಸೆಡೆ ಎತ್ತಿ ರಪ್ ಅಂತ ತನ್ನ ಶಕ್ತಿ ಎಲ್ಲಾನೂ ತಕ್ಕೊಂಟು ಹೊಡದುಬುಡ್ತು. ಸೆಡೆ ಎರಡು ತುಂಡಿಗೆ ಕತ್ತರಿಸಿ ಕೆಳಕ್ಕೆ ಬಿದ್ದೋಯ್ತು. ಆಗ ಇಬ್ರೂ ಸರಸರನೆ ಕೆಳಕ್ಕೆ ಇಳಿದರು. ಮುಚ್ಚಿದ್ದ ಕೊಳಗ ತಗದರು. ಆಗ ಮಂತ್ರಿ ಮಗ ಚೂಡಾಮಣಿ ತಗದು ರಾಜನ ಮಗನ ಕೈಗೆ ಕೊಟ್ಟು "ನೀನು ಪಾತಾಳಲೋಕಕ್ಕೆ ಹೋಗು. ಅಲ್ಲಿ ಒಂದು ಮೂರ್ನಾಕು ದಿನ



ಇರು. ಆಮ್ಯಾಲೆ ನಾನು ಪಲ್ಲಕ್ಕಿ ತಕ್ಕೊಂಡು ಬತ್ತೀನಿ. ಆಗ ಆ ಹುಡುಗೀನೂ ಕರಕೊಂಡು ಬಂದುಬುಡು. ಊರಿಗೆ ಹೊಂಟ್‌ಬುಡಾನೆ" ಅಂತ ಹೇಳಿದ. ರಾಜನ ಮಗ 'ಆಗಲಿ' ಅಂತ ಹೇಳಿ ಚೂಡಾಮಣಿ ಹಿಡಕೊಂಡು ಸಮುದ್ರದ ವಳಕ್ಕೆ ಹೋದ. ಮತ್ತೆ ಸಮುದ್ರ ಬಾಗಲು ಹಾಕ್ಕೊಂಡು ಎಂದಿನಂಗೇ ಏಕವಾಯಿತು. ಮಂತ್ರಿ ಮಗ ಹಿಂತಿರುಗಿ ಬಿಡಾರಕ್ಕೆ ಬಂದ.

೨

ಸರ್ಪ ಕತ್ತರಿಸಿ ತುಂಡಾಗಿ ಸತ್ತೋದ ಸುದ್ಧಿ ಸುತ್ತಮುತ್ತ ಹಬ್ಬಿತು. ಸಮುದ್ರದ ಆಚೇ ಪಟ್ಟಣದ ರಾಜಕುಮಾರನಿಗೂ ಈ ಸುದ್ದಿ ತಿಳೀತು. 'ಈ ಸತಿಲಾದ್ರೂ ಹ್ಯಂಗಾರೂ ಮಾಡಿ ಅವಳ್ನ ಹೊಡ್ಕೊಂಡ್ ಬಂದ್ ಬುಡಬೇಕಲ್ಲ. ಸಮುದ್ರದ ವಳಕ್ಕೆ ಹೋಗೋದು ಹ್ಯಂಗೆ' ಅಂತ ಯೋಚನೆಮಾಡ್ತಾ ಇದ್ದ. ಆ ಊರಲ್ಲಿ ಒಬ್ಬಳು ಕುಂಟಣಿ ಇದ್ಲು. ಅವಳಿಗೆ ಒಬ್ಬನೇ ಮಗ ಇದ್ದ. ಅವನು ಮನೆ ಬುಟ್ಟುಹೋಗಿ ಹನ್ನೆರಡು ವರ್ಷ ಆಗಿತ್ತು. ಅವಳು ರಾಜಕುಮಾರನ ಹತ್ರಕ್ಕೆ ಬಂದು "ಅವಳ್ನ ನಾನು ಕರಕೊಂಡು ಬಂದು ಕೊಡ್ತೀನಿ. ನಂಗೇನ್ ಕೊಡ್ತೀರಿ ಸ್ವಾಮಿ" ಅಂತ ಕೇಳಿದಳು.

"ಮುತ್ತು ರತ್ನ ಪಚ್ಚೆ ಪದಕ ನೀನು ಏನು ಕೇಳಿದರೆ ಅದು, ಎಷ್ಟು ಕೇಳಿದರೆ ಅಷ್ಟು ಕೊಡ್ತೀನಿ. ಅವಳ್ನ ಏನಾರೂ ಮಾಡಿ ಹೊಡಕೊಂಡ್ ಬಂದ್‌ಬುಡು" ಅಂದ ರಾಜಕುಮಾರ.

ಈ ಕುಂಟಣಿ ಸಮುದ್ರದ ದಡಕ್ಕೆ ಹೋದಳು. ಅಲ್ಲಿ ಕೂತುಗೊಂಡು ಎದೆ ಎದೆ ಬಡಕೊಂಡು "ಅಯ್ಯೋ ನನ್ಮಗಳೇ, ನೀನು ಹೋಗಿ ಹನ್ನೆರಡೊರ್ಷ ಆಯ್ತಲವ್ವಾ, ನಾನು ಇವತ್ತೋ ನಾಳ್ಯೋ ಸಾಯ್ತೀನಿ. ನಂಗೆ ಈಗ್ಲಾರೂ ಒಂದೀಟು ಮೊಖ ತೋರೋದಿಲ್ಲವೇನವ್ವಾ. ಬಾರೋ ನನ್ಮಗಳೇ, ಮೊಖ ತೋರೋ ನನ್ಮಗಳೇ" ಅಂತ ಹಾಡಿಕೊಂಡು ಗುಡಿಸ್ಕೊಂಡು ಅಳಾಕೆ ಸುರುಮಾಡಿದ್ಲು.

ಪಾತಾಳಲೋಕದಲ್ಲಿ ರಾಜಕುಮಾರನೂ ಆ ಹುಡುಗೀನೂ ಉಂಡು ಪಟ್ಟೆ ಮಂಚದ ಮ್ಯಾಲೆ ಪಗಡೆ ಆಡ್ತಾ ಕೂತುಗೊಂಡಿದ್ದರು. ಈ ಕುಂಟಣಿ ಅಳೋ ದನಿ ಅಲ್ಲಿಗೆ ಕೇಳಿಸ್ತು. ಬಾಳ ಹೊತ್ತು ಹಿಂಗೇ ಕೇಳಿಸಿದ ಮ್ಯಾಲೆ ಆ ಹುಡುಗಿ.

"ಅದ್ಯಾರೋ ಹೆಂಗಸು ಅಷ್ಟೊತ್ತಿಂದ ಬಡ್ಕೋತಾಳೆ. ಅವಳ ದನಿ ಕೇಳಿದರೆ ಯಾಕೋ ನಮ್ಮವ್ವನ ನೆಪ್ಪಾಯ್ತದೆ. ಹೋಗಿ ನೋಡ್ಕೊಂಡು ಒಂದ್ ಗಳಿಗೇವಳಗೆ ಬಂದ್ ಬುಡ್ತೀನಿ. ನೀವು ಇಲ್ಲೇ ಇರಿ" ಅಂದಳು.

“ಬ್ಯಾಡ ಬ್ಯಾಡ. ಅದೇನು ದೆವ್ವವೋ ಪೀಡೆಯೋ ಪಿಚಾಚಿಯೋ ರಾಕ್ಷಸನೋ ! ಆಮ್ಯಾಲೆ ನಿಂಗೇನಾದರೂ ಆದ್ರೆ ಏನ್ಮಾಡೋದು. ನೀನು ಹೋಗ್ಲೇಬೇಕೂ ಅಂದ್ರೆ ನಾನು ನಿನ್ನ ಜೊತೇಲಿ ಬತ್ತೀನಿ” ಅಂದ ರಾಜಕುಮಾರ.

“ಈಟ್ ಕೆಲಸಕ್ಕೆ ನೀವ್ಯಾಕೆ ಬತ್ತೀರಿ. ನಾನು ಹೋಗಿ ಅದೇನು ಅಂತ ಇಚಾರಿಸಿಕೊಂಡು ಒಂದೇ ಚಣ ಹೊತ್ತಿಗೆ ಬಂದ್‌ಬುಡ್ತೀನಿ. ನೀವೇನೂ ಯೋಚನೆ ಮಾಡಬ್ಯಾಡಿ” ಅಂದಳು.

ಚೂಡಾಮಣಿ ತಕ್ಕೊಂಡು ಮ್ಯಾಕೆ ಬಂದಳು. ಸಮುದ್ರ ಭಾಗವಾಯ್ತು. ದಡಕ್ಕೆ ಬಂದಳು. ಕುಂಟಣಿ ಅಳ್ತಾ ಕೂತಿದ್ದೋಳು “ಅಯ್ಯೋ ಬಂದ್ಯಾ ನನ್ಮಗಳೇ” ಅಂತ ಕೊಳ್ಳು ತಬ್ಬಿಕೊಂಡುಬುಟ್ಟಳು. ಅವಳಿಗೆ ಕಕಮಕರು ಬಂದಂಗಾಯ್ತು. “ನೀನ್ಯಾರು, ಯಾಕ್ ಅಳ್ತಿ?” ಅಂತ ಕೇಳಿದಳು.

“ಯಾಕವ್ವಾ ಮರತುಬುಟ್ಯಾ? ನಾನು ನಿಮ್ಮವ್ವಲ್ವಾ?” ಅಂದಳು. ಹುಡುಗಿ ಮೊದಮೊದಲು ನಂಬಲಿಲ್ಲ. ಕುಂಟಣಿ ಅವಳಿಗೆ ಏನೇನೋ ಮಂಕು ಬೂದಿ ಎರಚಿದಳು. ಚೂಡಾಮಣಿ ತಾನು ತಕ್ಕೊಂಡು ಅವಳ್ನ ಏನೇನೋ ಪೂಸಿ ಮಾಡಿ ಪಟ್ಟಣಕ್ಕೆ ಕರಕೊಂಡು ಹೋದಳು.

ನಾಕೈದು ದಿನ ಕಳೀತು. ಮಂತ್ರಿಮಗ ಪಲ್ಲಕ್ಕಿ ತಕ್ಕೊಂಡುಬಂದು ಸಮುದ್ರದ ದಡದಲ್ಲಿ ಕಾದ. ರಾಜಕುಮಾರ ಬರಲೇ ಇಲ್ಲ. ‘ಇದ್ಯಾಕೆ ಹಿಂಗ್ ಮಾಡಿದ’ ಅಂತ ಯೋಚನೆ ಮಾಡ್ತಾ ಕೂತುಗೊಂಡ. ಕಾದ ಕಾದ ಕಾದ, ಸಂದೆಯಾಗಿ ಹೊತ್ತು ಮುಳೀಕೊತ್ತು. ಹೋಗಿ ಆ ಆಲದ ಮರದ ಅಂಡೀಲಿ ಮಲಗಿಕೊಂಡ. ಒಂದು ಹೊತ್ತಿನಲ್ಲಿ ಎಚ್ಚರವಾಯಿತು. ಆ ಮರದ ಮೇಲೆ ಗಂಡುಭೇರುಂಡ ಹೆಣ್ಣು ಭೇರುಂಡ ಗೂಡು ಕಟ್ಕೊಂಡು ವಾಸಮಾಡ್ತಾ ಇದ್ವೊ. ಅವು ಒಂದು ಹೊತ್ತಿನಲ್ಲಿ ಮಾತಾಡ್ಕೊತ್ತಾ ಇದ್ವೊ. ಮಂತ್ರಿಮಗ ಮೈಯೆಲ್ಲಾನೂ ಕಿವಿ ಮಾಡ್ಕೊಂಡು ಕೇಳ್ತಾ ಕೂತುಗೊಂಡ.

ಗಂಡು ಭೇರುಂಡ ಹೇಳ್ತು : “ಈ ಹೆಂಗಸರ್ನ ನಂಬಬಾರ್ದು”

“ಯಾಕೆ ?” ಅಂತು ಹೆಣ್ಣು ಭೇರುಂಡ.

“ಇನ್ನೇನು, ಹೆಂಗಸಿನ ಮಾತು ಹೆಡತಲೆ ಮಿತ್ತು.”

“ಅದ್ನೇನು ಬುಡಿಸಿ ಹೇಳು.”

“ಅದೇನ್ ಹೇಳೋದು. ಆ ರಾಜಕುಮಾರ ಈ ಸಮುದ್ರದ ವಳಗೆ ನಾಕೈದು ದಿನದಿಂದ್ಲೂ ಅನ್ನಾಹಾರ ಒಂದೂ ಇಲ್ದೆ ಸಾಯ್ತಾ ಅವ್ನೆ. ನಾನೂ ಬತ್ತೀನಿ ಅಂತ ಹೇಳಿದರೂ ಕೇಳದೆ ಆ ಹುಡುಗಿ ಒಬ್ಬಳೇ ಹೋದ್ಲು. ಅವಳ್ನ ಕುಂಟಣಿ ಹಾರಿಸ್ಕೊಂಡು ಹೋದ್ಲು. ಅವನು ಅಲ್ಲಿ ಸಾಯ್ತಾ ಅವನೆ.”



“ಪಾಪ, ಈಗ ಅವನ ಗತಿ ಏನು?”

“ಆ ಚೂಡಾಮಣಿ ತಂದ್ರೆ ಈ ರಾಜಕುಮಾರನ್ನ ಮ್ಯಾಕೆ ತರಬಹುದು.”

“ಅದ್ ಹ್ಯಂಗೆ ತರಾಕಾಯ್ತದೆ. ಆ ಚೂಡಾಮಣಿ ಕುಂಟಣಿ ತಾವು ಅದಲ್ಲ?”

“ಬುದ್ದಿ ಉಪೇಗಿಸಿದರೆ ಆಯ್ತದೆ. ಆ ಕುಂಟಣಿಗೆ ಒಬ್ಬ ಮಗ ಇದ್ದ. ಅವು ಹೋಗಿ ಹನ್ನೆರಡು ವರ್ಷ ಆಯ್ತು. ಯಾರಾರೂ ಅವನಂಗೇ ವೇಷಹಾಕೊಂಡ್ ಹೋದ್ರೆ ಅವಳು ನಂಬಿ ಚೂಡಾಮಣಿ ಕೊಡ್ತಾಳೆ. ಅದನ್ನ ತಕ್ಕೊಂಡ್ ಬಂದು ರಾಜಕುಮಾರನ್ನ ಬುಡಿಸಬಹುದು.”

“ಆ ಮ್ಯಾಲೆ ಆ ಹುಡ್ಗೀ ಹ್ಯಂಗೆ ಕರಕೊಂಡು ಬರೋದು?”

“ಅವನಿರೋ ಪಾತಾಳ ಲೋಕದಲ್ಲಿ ನಾಗರಾಜ ಮನಗ್ತಾ ಇದ್ದ ಒಂದು ಜಮಖಾನ ಅದೆ. ಅದರ ಮ್ಯಾಲೆ ಕೂತುಗೊಂಡು ರಾಜನ ಅರಮನೆ ಮಾಡಿಮ್ಯಾಕೆ ಬುಡು ಅಂದರೆ ಅದು ತಕ್ಕೊಂಡ್ ಹೋಗಿ ಅಲ್ಲಿ ಬುಡ್ತದೆ. ಆ ಮ್ಯಾಡಿಮ್ಯಾಲೆ ಆ ಹುಡುಗಿ ದೇವರ ನೆನೀತಾ ಕೂತವಳೆ. ಅವಳ್ನ ಕುಂಡಿರಿಸಿಕೊಂಡು ಊರಿಗೆ ಹೋಗಬಹುದು. ಆದ್ರೆ ...” ಅಂತ ಹೇಳಿ ಗಂಡುಭೇರುಂಡ ಅರ್ಧಕ್ಕೇ ಮಾತುನಿಲ್ಲಿಸ್ತು.

“ಅದ್ಯಾಕೆ ಅಲ್ಲಿಗೇ ಸುಮ್ಮನಾದೆ. ಮುಂದಕ್ಕೆ ಹೇಳು” ಅಂತ ಹಿಂಸೆ ಮಾಡ್ತು ಹೆಣ್ಣು ಭೇರುಂಡ.

“ಅಯ್ಯೋ ಏನ್ ಹೇಳ್ಲಿ. ಅವನಿಗೆ ನಾಲ್ಕು ಕಂಟಕ ಅವೆ. ಅವು ಕಳದರೆ ಆಮ್ಯಾಲೆ ಅವನ ಸಮಾನ ಯಾರೂ ಇಲ್ಲ.”

“ಏನೇನು ಆ ಕಂಟಕ.”

“ಒಂದನೇದು, ಅವರು ಆ ಹುಡ್ಗೀ ಕರಕೊಂಡು ಹೋಗೋ ದಾರೀಲಿ ಒಂದು ಸೀಗೆ ಉಡುಬೆ ಅದೆ. ಅದರ ವಳಗೆ ಹೋದ್ರೆ ಅದು ಆಕಾಸ್ಕೂ ಭೂಮಿಗೂ ಒಂದೇ ಸಮನೆ ಬೆಳದು ಬುಡ್ತದೆ. ಆಮ್ಯಾಲೆ ಆಚೆಗೆ ಹೋಗಾಕ್ ಆಗೋದಿಲ್ಲ. ಎರಡನೇದು, ಹೇಗೋ ದಾರೀಲಿ ಒಂದು ಹಾಳುಗೋಟೆ ಸಿಕ್ತದೆ. ಅದರ ವಳಗೆ ಹೋದ್ರೆ ಅದು ಇವರಮ್ಯಾಲೆ ಕಸುಗೊಂಡು ಬಿದ್ದು ಬುಡ್ತದೆ. ಅದ್ನೂ ದಾಟಿ ಮುಂದಕ್ಕೆ ಹೋದ್ರೆ ಒಂದು ಆಲದ ಮರ ಆಡ್ಡಾಯ್ತದೆ. ಅದರ ಅಂಡೀಲಿ ಹೋದ್ರೆ ಮುರಕೊಂಡು ಮ್ಯಾಲೆ ಬೀಳ್ತದೆ. ಇವೆಲ್ಲಾನೂ ಕಳದರೆ ಗಂಡಹೆಡ್ತೀರು ಮನಗಿರುವಾಗ ಹಾವು ಮ್ಯಾಲೆ ಬಿದ್ದು ಸಾಯ್ತಾರೆ. ಅದರ

ಒಂದು ತೊಟ್ ರಕ್ತ ಮ್ಯಾಲೆ ಬಿದ್ದರೂ ಸಾಯ್ತಾರೆ."

"ಹ್ದೂ ಸರಿ. ಇಷ್ಟೆಲ್ಲಾ ಕಂಟಕಾನು ಕಳದು ಅವನು ಬದೀಕ್ಕೊಂಡಾಗ ಅದು ಆದಾಗ" ಅಂತ ಹೆಣ್ಣುಭೇರುಂಡ ನಿಟ್ಟುಸುರು ಬುಡ್ತು. ಅಲ್ಲಿಗೆ ಎರಡೂ ಸುಮ್ಮನಾದೊ.

ಮಂತ್ರಿಮಗ ಇದೆಲ್ಲಾನೂ ಒಂದು ಚೂರೂ ಬುಡದಂಗೆ ಕೇಳಿಕೊಂಡ. ಒಂದು ಕಾದಗದಲ್ಲಿ ಎಲ್ಲಾನೂ ಬರಕೊಂಡು ಜೋಬಿಗೆ ಹಾಕ್ಕೊಂಡ. ಮೊದ್ಲ ಕೋಳಿ ಕೂಗ್ತಿದ್ದಹಂಗೇ ಎದ್ದ. ಕುಂಟಣಿ ಮಗನ ವೇಷ ಹಾಕ್ಕೊಂಡು ಆ ಪಟ್ಟಣಕ್ಕೆ ಹೋದ. ಅಲ್ಲೊಂದು ಮಾರಿಗುಡಿ. ಅದರ ಜಗಲೀಮ್ಯಾಲೆ ಕೂತುಕೊಂಡ. ಜನ 'ಇದ್ಯಾರು ಈವಯ್ಯ' ಅಂದುಕೊಂಡು ಅತ್ಲಾಗಿ ಇತ್ಲಾಗಿ ತಿರುಗಾಡ್ತಾ ಇದ್ರು. ಸ್ವಲ್ಪ ಹೊತ್ತಾದಮ್ಯಾಲೆ ಯಾರೋ ಒಬ್ಬ ಹತ್ರಕ್ಕೆ ಬಂದು "ನೀನು ಯಾವೂರಪ್ಪ?" ಅಂತ ಕೇಳಿದ.

"ಓಹೋ, ಅದ್ಯಾಕೆ ನಾನು ಯಾರೂ ಅನ್ನೋದು ಗೊತ್ತಾಗ್ನಿಲ್ಲಾ?" ಅಂದ ಮಂತ್ರಿಮಗ.

"ಇಲ್ವಲ್ಲಾ. ಯಾರು ನೀನೇ ಹೇಳಪ್ಪಾ."

"ನಾನು ಈ ಊರ ಕುಂಟಣಿ ಮಗ. ಊರು ಬುಟ್ಟು ಹನ್ನೆರಡು ವರ್ಷ ಆಗಿತ್ತು. ಆ ದೇಶ ಈ ದೇಶ ಸುತ್ಕೊಂಡು ಈಗ ಬಂದೆ. ನಮ್ಮವ್ವ ಆಗ್ಲೇಮುದುಕಿಯಾಗಿದ್ಲು. ಈಗೇನು ಸತ್ತವಳೋ ಬದುಕ್ಯವಳೋ, ಅದ್ಕೇ ಇಲ್ಲಿ ಕೂತ್ಗೊಂಡೆ."

"ಅಯ್ಯೋ ಅಯ್ಯೋ ಅವಳ್ಯಾಕಪ್ಪಾ ಸಾಯ್ತಾಳೆ. ಈಗ ಅವಳ್ನ ಹಿಡಿದು ನಿಲ್ಸೋರೇ ಇಲ್ಲ. ರಾಜರು ಅವಳಿಗೆ ಬೇಕ ಬೇಕಾದಷ್ಟು ಐಸ್ವಿರಿ ಕೊಟ್ಟವರೆ. ಬೇಕಾದ್ರೆ ಬಾ, ಕರಕೊಂಡು ಹೋಯ್ತೀನಿ" ಅಂದ ಆವಯ್ಯ. 'ಅಯ್ಯೋ ಆವತ್ತೇ ಮನೆಬುಟ್ಟೋನು. ಇವತ್ತು ಆ ಮನೆ ಕಟ್ಕೊಂಡು ನನಗೇನು?" ಅಂದ ಮಂತ್ರಿ ಮಗ. ಅಷ್ಟು ಹೊತ್ತಿಗೆ ಯಾರೋ ಹೋಗಿ 'ನಿನ್ಮಗ ಬಂದವ್ನೆ' ಅಂತ ಕುಂಟಣಿಗೆ ಹೇಳಿದ್ರು. ಅವಳು ಬಿದ್ದಂಬೀಳ ಓಡಿಬಂದಳು. ಮಗನ್ನ ನೋಡಿದಳು. "ಅಯ್ಯೋ ಮಗನೆ, ಈಗಲಾದರೂ ಬಂದ್ಯಪ್ಪಾ" ಅಂತ ಅವನ್ನ ತಬ್ಬಿಕೊಂಡಳು, ತಲೆಸವರಿದಳು, ಮನೆಗೆ ಕರಕೊಂಡು ಹೋದಳು.

೩

ಕುಂಟಣಿ ನಾಕಾರು ದಿನ ಮಗನ್ನ ಇನ್ನಿಲ್ಲದಂಗೆ ಉಪಚಾರ ಮಾಡಿದಳು. ರಾಜಕುಮಾರ ಅವಳಿಗೆ ಬೇಕಾದಂಥ ಬೋಗಭಾಗ್ಯ ಎಲ್ಲಾನೂ ಕೊಟ್ಟಿದ್ದ.



ಒಂದು ದಿನ ಅದು ಇದೂ ಮಾತಾಡ್ತಾ "ಇಷ್ಟೆಲ್ಲಾ ಸಂಪತ್ತು ಹ್ಯಂಗ್ಬತ್ತಮ್ಮಾ ನಿಂಗೆ?" ಅಂತ ಕೇಳಿದ. ಅವಳು ಪೆಟ್ಟಿಗೇಲಿದ್ದ ಚೂಡಾಮಣಿ ತೆಗದು ತೋರಿಸಿ "ಎಲ್ಲಾ ಇದರಿಂದ" ಅಂತ ನಡೆದ ಸಂಗತಿ ತಿಳಿಸಿದಳು. ಆಗ ಮಂತ್ರಿಮಗ "ಅಮ್ಮಾ ಅಮ್ಮಾ ಇದು ನಂಗೆ ಕೊಡಮ್ಮಾ" ಅಂದ.

"ಅಯ್ಯೋ ನನ್ ಚಿನ್ನ. ನಿನಗಿಂತ್ಲೂ ಇದು ಹೆಚ್ಚಾ? ತಕೋ. ಉಂಗುರ ಮಾಡಿಸ್ಕೊಂಡು ಅದಕ್ಕೆ ಈ ಹರಳು ಮೆಟ್ಟಿಸ್ಕೋ. ಆದ್ರೆ ಇಲ್ಲೆಲ್ಲೂ ಬ್ಯಾಡ. ದೂರ ಹೋಗಿ ಯಾರ್‍ಯಾರೂ ಆಚಾರಿ ಹತ್ರ ಮಾಡಿಸ್ಕೊಂಡು ಬಾ" ಅಂತ ಹೇಳಿ ಚೂಡಾಮಣಿ ಅವನ ಕೈಗೆ ಕೊಟ್ಟಳು.

ಮಂತ್ರಿಮಗ ಚೂಡಾಮಣಿ ತಕ್ಕೊಂಡು ಸಮುದ್ರದತಾಕೆ ಹೋದ. ಅದು ಭಾಗ ಆಯ್ತು. ವಳಕ್ಕೆ ನುಗ್ಗಿ ಪಾತಾಳಲೋಕಕ್ಕೆ ಹೋದ. ಅಲ್ಲಿ ರಾಜಕುಮಾರ ಅನ್ನ ಸಂಕಟದಿಂದ ಬಳ್ಳಿಕೊಂಡು ಮಂಚದ ಮ್ಯಾಲೆ ಬಿದ್ದಿದ್ದ. ಅವನ ಮುಖಕ್ಕೆ ನೀರು ಚಿಮುಕಿಸಿ ಏಳಿಸಿ ತಿನ್ನಾಕೆ ಒಂದಿಷ್ಟು ಫಲಹಾರ ಕೊಟ್ಟ. ತಿಂದಾದ ಮೇಲೆ ಅವನಿಗೆ ಒಂದಿಷ್ಟು ಶಕ್ತಿ ಬತ್ತು. ಅವನು ತನ್ನ ಗೆಣೆಯನ್ನ ತಬ್ಬಿಕೊಂಡು ಕಣ್ಣೀರು ಸುರಿಸಿ "ನೀನಿಲ್ದೆ ಇದ್ರೆ ನಾನು ಇಲ್ಲೇ ಸತ್‌ಹೋಯ್ತಿದ್ದೆ" ಅಂದ. "ಅದಿರ್‍ಲಿ, ಈ ಜಮಖಾನೆ ಮ್ಯಾಲೆ ಕೂತ್ಕೋ" ಅಂದ ಮಂತ್ರಮಗ. ಇಬ್ರೂ ಕೂತುಗೊಂಡರು. "ರಾಜಕುಮಾರನ ಮನೆ ಮಾಡೀಮ್ಯಾಕೆ ಹೋಗು" ಅಂದ ಮಂತ್ರಿಮಗ. ಅದು ಸರ್ ಅಂತ ಅವರಿಬ್ಬರ್‍ನೂ ಹೊತ್ತುಗೊಂಡು ಮ್ಯಾಕೆ ಹೋಗಿ ಹೋಗಿ ಮಾಡೀವಳಕ್ಕೆ ಕರಕೊಂಡು ಹೋಯಿತು. ಅಲ್ಲಿ ಆ ಹುಡುಗಿ ದೇವರ ಮುಂದೆ ಕೂತುಗೊಂಡು ಬೇಡಿಕೊತ್ತಾ ಇದ್ದಳು. ಇವರ್‍ನ ನೋಡಿದ ತಕ್ಷಣ ಇವಳಿಗೆ ಆನಂದವಾಯಿತು. "ನನ್ನ ಪೂಜೆ ಫಲಿಸ್ತು" ಅಂತ ಹೇಳಿದಳು. ಮೂರು ಜನವೂ ಜಮಖಾನದ ಮ್ಯಾಲೆ ಕೂತುಗೊಂಡರು. "ನಮ್ಮ ಕೆಳಕ್ಕೆ ಇಳಿಸಿಬುಟ್ಟು ನಿನ್ನ ತಳಕೆ ನೀನು ಹೊಂಟೋಗು" ಅಂದ ಮಂತ್ರಿಮಗ. ಅದು ಸರ್ ಅಂತ ಹೋಗಿ ಪಾತಾಳಲೋಕ ಸೇರಿಕೊತ್ತು. ಇವರು ಎರಡು ಕುದುರೆ ಕೊಂಡುಕೊಂಡರು. ಒಂದು ಮೇಲೆ ಮಂತ್ರಿ ಮಗ ಕೂತುಗೊಂಡ. ಇನ್ನೊಂದರ ಮೇಲೆ ರಾಜನ ಮಗ ಆ ಹುಡುಗಿ ಕೂತುಗೊಂಡರು. ಭರ್‍ರ್ ಅಂತ ಕುದುರೆ ಓಡಿಸಿದರು. ಎಷ್ಟೋ ದೂರ ಹೋದ ಮ್ಯಾಲೆ ಒಂದು ಸೀಗೆ ಉಡುಬೆ ಕಾಣಿಸ್ತು. ಮಂತ್ರಿ ಮಗ "ಇದರೊಳಗೆ ಕುದ್ರೆ ನುಗ್ಗಿಸಬ್ಯಾಡ. ಒಂದೇ ಹಾರತಕ್ಕೆ ಮ್ಯಾಲೆ ನೆಗೆಸಿಬುಡು" ಅಂತ ರಾಜನ ಮಗನಿಗೆ ಹೇಳಿದ. ಸೀಗೆ ಉಡುಬೆ ಬತ್ತು. ಇಬ್ರೂ ಕುದ್ರೇನ ಒಂದೇ ಹಾರತಕ್ಕೆ ಅದರ ಮ್ಯಾಲೆ ನೆಗೆಸಿ ಆಚೆಗೆ

ಹೋದರು. ಹಿಂದಿರುಗಿ ನೋಡ್ತಾರೆ ! ಆ ಉಡುಬೆ ಬೂಮೂಗಾ ಆಕಾಸ್ಕೂ ಒಂದೇ ಸಮನಾಗಿ ಬೆಳದು ಬುಟ್ಟದೆ ! ಅಲ್ಲಿಂದ ಮುಂದಕ್ಕೆ ಹೋದರು. ಅಲ್ಲೊಂದು ಹಾಳುಗೋಟೆ ಸಿಕ್ತು. ಆಗ ಮಂತ್ರಿಮಗ ಕುದುರೆ ನಿಲ್ಲಿಸಿ "ಈ ಬಾಗಿಲಿನ ವಳಗೆ ಕುದುರೆ ನುಗ್ಗಿಸಬ್ಯಾಡ. ಮ್ಯಾಲೆ ಒಂದೇ ಹಾರತಕ್ಕೆ ನೆಗೆಸು" ಅಂದ. ಇಬ್ರೂ ಹಂಗೇ ಮಾಡಿದರು. ಅಷ್ಟು ದೂರ ಹೋದ ಮ್ಯಾಲೆ ಹಿಂತಿರುಗಿ ನೋಡ್ತಾರೆ. ಕೋಟೆ ಕಸುಗೊಂಡು ದಡೀರ್ ಅಂತ ಕೆಳಕ್ಕೆ ಬೀಳ್ತು ! 'ಅಯ್ಯೋ ಅದರೊಳಗೆ ಬಂದಿದ್ರೆ ಅಪ್ಪಚ್ಚಿ ಆಗಿ ಬುಡೋವಲ್ಲ' ಅಂದುಕೊಂಡು ಮುಂದಕ್ಕೆ ಹೋದರು. ಇನ್ನೊಂದು ಸ್ವಲ್ಪ ದೂರ ಹೋದ ಮ್ಯಾಲೆ ಒಂದು ದೊಡ್ಡ ಆಲದ ಮರ ದಾರಿಗೆ ಅಡ್ಡಲಾಗಿ ಬತ್ತು. ಮಂತ್ರಿ ಮಗ "ಇದರ ಅಂಡೀಲಿ ಕುದುರೆ ಬುಡಬ್ಯಾಡ. ಮ್ಯಾಲೆ ಒಂದೇ ಹಾರತಕ್ಕೆ ನೆಗಸು" ಅಂದ. ಇಬ್ಬರೂ ಹಂಗೇ ಕುದುರೆ ನೆಗೆಸಿದರು. ಮುಂದಕ್ಕೆ ಹೋಗಿ ಹಿಂದಕ್ಕೆ ತಿರುಗಿ ನೋಡ್ತಾರೆ, ಅಷ್ಟು ಗಾತ್ರದ ದಯ್ಯಾಲದ ಮರ ಮುರಕೊಂಡು ಧೊಪ್ ಅಂತ ಕೆಳಕ್ಕೆ ಬೀಳ್ತು ! 'ಸದ್ಯ ಮೂರು ಕಂಟಕ ಕಳದೊ' ಅಂದುಕೊಂಡು ಮಂತ್ರಿಮಗನಿಗೆ ಖುಷಿಯಾಯಿತು. ಮೂರು ಜನವೂ ಹೋಗಿ ಪಟ್ಟಣ ಸೇರಿದರು.

ಆ ಹುಡುಗಿ ಅತ್ತರೆ ಮುತ್ತು ಸುರೀತಿತ್ತು. ನಕ್ಕರೆ ರತ್ನ ಉದುರುತಿದ್ದೊ, ಎಡವಿದರೆ ಮೂಗಲ್ಲಿ ರಕ್ತ ಸುರೀತಿತ್ತು. 'ಸರಿ' ಅಂದುಕೊಂಡು ರಾಜ ಕೊಟ್ಣಕುಟ್ಸಿ ಪಟ್ಣ ಸಾರ್ಸಿ ಅವಳನ್ನ ಮಗನಿಗೆ ಮದುವೆ ಮಾಡಿದ ಬಾಳ ಅದ್ದೂರಿಯಾಗಿ.

ಪ್ರಸ್ತದ ದಿನ ಗಂಡ ಹೆಂಡತಿ ಇಬ್ರೂ ಆನಂದವಾಗಿ ಪಟ್ಟೆಮಂಚದ ಮ್ಯಾಲೆ ಪವಳಿಸಿದ್ರು. ಮಂತ್ರಿಮಗ ಯಾರಿಗೂ ಗೊತ್ತಾಗದ ಹಂಗೆ ಆ ಮಲಗೋಮನೆ ಸೇರಿಕೊಂಡು ಕಾಯ್ತಾ ಕೂತುಕೊಂಡ. ಮಧ್ಯಮಧ್ಯ ರಾತ್ರೆ ಸಮಯ ಗಂಡ ಹೆಂಡ್ತಿ ಇಬ್ರೂ ಮಾನಿದ್ದೇಲಿ ಮಲಗ್ಯವರೆ. ಸರ್ಪ ಮೇಗಲಿಂದ ಕೆಳೀಕೆ ಅವರ ಎದೇಮ್ಯಾಕೆ ಸರಿಯಾಗಿ ಇಳೀತಾ ಇದೆ. ಮಂತ್ರಿ ಮಗ ಕೂಡಲೇ ಚಂದ್ರಾಯುಧದಿಂದ ಅದ ಎರಡು ತುಂಡಿಗೆ ಕತ್ತರಿಸಿಬುಟ್ಟ. ಆದ್ರೆ ಒಂದು ತೊಟ್ಟು ರಕ್ತಮಾತ್ರ ಆ ಹುಡುಗಿ ಎದೆ ಮ್ಯಾಕೆ ಬಿದ್ದು ಬುಡ್ತು. 'ಅಯ್ಯಯ್ಯೋ ಎಂಥ ಕೆಲಸ ಆಯ್ತು' ಅಂದು ಕೊಂಡು ದಡಬಡನೆ ತನ್ನ ವಲ್ಲೀ ಸೆರಗಿನಿಂದ ಅವಳ ಎದೇಮ್ಯಾಗಿದ್ದ ರಕ್ತ ವರಸಿದ. ಆಗ ಅವಳಿಗೆ ಎಚ್ಚರ ಆಗೋಯ್ತು. ಕಣ್ಣು ಬುಟ್ಟು ನೋಡ್ತಾಳೆ, ಮಂತ್ರಿ ಮಗ ! ಅವಳಿಗೆ ಬರಬಾರದಂಥ ಕೋಪ ಬಂದು ಬುಡ್ತು. "ನೀನೆಂಥ ಕೆಟ್ಟ ಮನುಷ್ಯ. ಗಂಡಹೆಂಡತೀರು ಮಲಗೋ ಕೋಣೆಗೆ ನೀನ್ಯಾಕೆ ಬಂದೆ? ಹ್ಯಂಗೆ ಬಂದೆ? ನೀನಿಂಥಾ ಕೀಳು ಮನುಷ್ಯ ಅಂತ ಗೊತ್ತಿರಲಿಲ್ಲ"



ಅಂತ ಹಂಗೆ ಹಿಂಗೆ ಅಂಥ ಬೋದು ಭಂಗೇಳಿಸಿದಳು. ಅಷ್ಟು ಹೊತ್ತಿಗೆ ರಾಜಕುಮಾರ ಎದ್ದು ನೋಡ್ತಾನೆ, ಮಂತ್ರಿ ಮಗ ನಿಂತವ್ನೆ ! ಹೆಂಡ್ತಿ ಬಯ್ತಾ ಅವಳೆ ಹೀನಾಮಾನವಾಗಿ. ಅವನಿಗೆ ವಿಷಯ ಗೊತ್ತಾಗೋಯ್ತು. "ನೀನು ನನ್ನ ಸ್ನೇಹಿತನಾಗಿ ಇಂಥಾ ಕೆಟ್ಟ ಕೆಲಸ ಮಾಡ್‌ಬಹುದಾ? ನಿನ್ನಂಥೋನು ಧರೇಮ್ಯಾಲೆ ಇರಬಾರದು. ನೀನು ಕಲ್ಲಾಗಿ ಹೋಗು" ಅಂತ ಶಾಪ ಕಟ್ಬುಟ್ಟ. ಅವನು ಅಲ್ಲೇ ಕಲ್ಲಾಗಿ ಬುಟ್ಟ.

ಬೆಳಗಾಯಿತು. ಮೂಲೇಲಿ ಹಾವು ಕತ್ತರಿಸಿ ತುಂಡಾಗಿ ಬಿದ್ದಿರೋದು ಕಾಣಿಸ್ತು. ರಾಜಕುಮಾರನಿಗೆ ಜೀವ ದಡ್ ಅಂತು. 'ಅಯ್ಯೊಯ್ಯೋ ಈ ಹಾವು ಕತ್ತರಿಸಿ ಹಾಕಾಕೆ ಬಂದಿದ್ನೇನೊ ನನ್ನ ಸ್ನೇಹಿತ, ನಾನೆಂಥಾ ಕೆಲಸ ಮಾಡಿಬುಟ್ಟೆ' ಅಂದುಕೊಂಡ ರಾಜಕುಮಾರ. ಕಲ್ಯಾಗಿದ್ದ ಮಂತ್ರಿಮಗನ ಕಡೆಗೆ ನೋಡಿದ. ಅವನ ಜೋಬೇಲಿ ಎಂಥದೋ ಕಾಗದ ಕಾಣ್ತಿತ್ತು. ಕುತೂಹಲದಿಂದ ಹೋಗಿ ಆ ಕಾಗದ ತಕ್ಕೊಂಡ ನೋಡ್ತಾನೆ, ಅಲ್ಲಿ ಗಂಡುಭೇರುಂಡ ಹೆಣ್ಣು ಭೇರುಂಡ ಹೇಳಿದ್ದೆಲ್ಲಾ ಬರದಿತ್ತು. 'ಅಯ್ಯೋ ನನ್ನ ಪ್ರಾಣ ಉಳ್ಸಿ ಕಾಪಾಡಿದ ಸ್ನೇಹಿತನಿಗೆ ಈ ಪಾಡು ಮಾಡಿದ್ನಲ್ಲಾ' ಅಂತ ಅವನಿಗೆ ಬರಬಾರದ ದುಃಖವೇ ಬಂದು ಬುಡ್ತು. ಗಂಡ ಹೆಂಡ್ತಿ ಇಬ್ರೂ ಗುಡಿಗೆ ಹೋಗಿ ದೇವರ ವರ ಕೇಳಿದರು. ಅದು "ನೀವು ಗಂಡಹೆಂಡ್ತಿ ಇಬ್ರೂ ನಲವತ್ತೊಂದು ದಿನಗಂಟ ತಾನ ಮಡಿ ಪೂಜೆ ಉಪವಾಸ ಮಾಡ್ಕೊಂಡು ನನ್ನ ಸನ್ನಿಧೀಲೆ ತಪಸು ಮಾಡ್ತಾ ಕೂತುಗೊಂಡರೆ ಮಂತ್ರಿ ಮಗ ಬದುಕಿ ಬರ್ತಾನೆ" ಅಂತ ಹೇಳ್ತು. ದೇವರು ಹೇಳದಂಗೇ ಅವರು ಪೂಜೆ ಉಪವಾಸ ಮಾಡಿದ್ರು. ನಲವತ್ತೊಂದು ದಿನ ಕಳೆದ ಮೇಲೆ ಕಲ್ಲಾಗಿದ್ದ ಮಂತ್ರಿ ಮಗ ಮನುಷ್ಯನಾಗಿ ಎದ್ದುಬಂದ. ರಾಜನ ಮಗ ಆನಂದದಿಂದ ಅವನ ತಬ್ಬಿಕೊಂಡ.

ಒಂದು ಒಳ್ಳೇ ಹೆಣ್ಣು ನೋಡಿ ಮಂತ್ರಿ ಮಗನಿಗೂ ಮದುವೆಮಾಡಿದರು. ಎಲ್ಲಾ ಸಂತೋಷವಾಗಿ ಸುಖವಾಗಿ ಬದೀಕ್ಕೊಂಡರು.

* * * *

# ಚಿಕ್ಕಹೊನ್ನಿ – ದೊಡ್ಡಹೊನ್ನಿ*

## ೧

ಒಂದೂರಲ್ಲಿ ಗಂಡ–ಹೆಂಡತಿ ಇಬ್ಬರಿದ್ದರು. ಇಬ್ಬರೂ ಬಾಳ ಅನ್ಯೋನ್ಯವಾಗಿದ್ದರು. ಕಿತ್ತರೆ ಬರದಂಗೆ ಇದ್ದರು. ಆದರೆ ಅದ್ಯಾವ ಕೆಟ್ಟ ಗಳಿಗೇಲೋ ಅವನಿಗೆ ಇನ್ನೊಬ್ಬಳ ಮೇಲೆ ಮನಸ್ಸಾಯಿತು. ಅವಳೂ ಅವನೂ ಕೂಡಿಕೊಂಡರು. ಮೊದಲನೇ ಹೆಂಡತಿಗೆ ಚಿಕ್ಕಹೊನ್ನಿ, ದೊಡ್ಡಹೊನ್ನಿ ಅಂತ ಇಬ್ಬರು ಹೆಣ್ಣು ಮಕ್ಕಳು. ಅವನ್ನ, ಅವರವ್ವನ್ನ ಇಬ್ರನ್ನೂ ಕಂಡ್ರೆ ಆ ಮಿಂಡಗಾತಿಗೆ ಬಾಳ ಹೊಟ್ಟೇ ಉರಿ. ಅವನ್ನ ಹ್ಯಂಗಂಗೋ ಮಾಡಿ ಪೂರ್ತ ತನ್ನ ವಶ ಮಾಡಿಕೊಂಡು ತಾನು ಹೇಳಿದಂಗೆ ಕೇಳೋ ಹಂಗೆ ಮಾಡಿಕೊಂಡಳು. ಆಮೇಲೆ ಅವನ ಹಿರೀ ಹೆಂಡತೀನ ಏನಾರೂಮಾಡಿ ತಗಸಿ ಹಾಕಬುಡಬೇಕು ಅಂತ ಹುನ್ನಾರು ಮಾಡಿಕೊಂಡಳು. ಅವಳು ಹೇಳಿದ ಮಾತಿಗೆ ಅವನು ಕೋಲೇ ಬಸವನಂಗೆ ಕತ್ತು ಹಾಕಿದ.

ಒಂದು ಮುಳ್ಳು ಹೊಲ. ಅದಕ್ಕೆ ಜೋರಾಗಿ ಜೋಳ ಬಿತ್ತಿದರು. ಅದು ಒಳ್ಳೆ ಕಬ್ಬಿನಂಗೆ ಆಲಬ್ಬರವಾಗಿ ಬೆಳೀತು. ಅದರ ವಳಗೆ ಒಂದು ಆಳು ನಿಂತು ಕೊಂಡರೂ ಕಾಣ್ತಿರಲಿಲ್ಲ. ಇದರ ಮಧ್ಯ ಒಂದಾಳುದ್ದ ಬಾವಿ ತೆಗೆಸಿದರು. ಅದು ಕಾಣದಂತೆ ಅದರ ಮೇಲೆ ದಬ್ಬೆಗಿಬ್ಬೆ ಹಾಕಿ ಸೊಪ್ಪು ಸದೆ ಮುಚ್ಚಿದರು.ಸಂಜೆ ಒಂದಾಳುದ್ದದ ಹೊತ್ತಿನಲ್ಲಿ ಹೆಂಡ್ತೀಗೆ ಹೇಳಿದ:

“ನೋಡು ಜೋಳೆಲ್ಲಾ ಚೆಂದಾಗಿ ತೆನೆ ಆಗ್ಬುಟ್ಟದೆ. ಜನೆಲ್ಲಾ ಅದರ ಮೇಲೆ ಕಣ್ಣು ಹಾಕ್ತಾರೆ. ಯಾರಾರ ದೃಷ್ಟಿ ಹ್ಯಂಗಂಗದೋ ಏನೋ, ಹೋಗಿ ತುಂಬಿದ ಹೊಲ ಪೂಜೆ ಮಾಡಿ ಸುಂಕ ಕಳೆದು ಬರಾನೆ ಬಾ”

ಅವಳು ಸಂತೋಷದಿಂದ ‘ಹೆಚ್ಚಿಗೆ’ ಅಂತ ಮೀಸಲಕ್ಕಿ ಹಾಕಿದಳು, ಬೋನ ಮಾಡಿದಳು, ಅದಕ್ಕೆ ಕೆನೆಹಾಲು ಬುಟ್ಟುಕೊಂಡಳು. ಬೆಲ್ಲ ಹಾಕಿಕೊಂಡಳು. ಊದುಗಡ್ಡಿ, ಈಬೂತಿಗಟ್ಟಿ, ಕುಂಕುಮ, ಯೀಳೆದೆಲೆ ಅಡಕೆ ಎಲ್ಲಾನೂ ತಕ್ಕೊಂಡು

* ಕತೆ ಹೇಳಿದವರು : ಕೃಷ್ಣರಾಜನಗರದ ತಾಲ್ಲೂಕು ಬಡಗನಕೊಪ್ಪಲಲ್ಲಿರುವ ಹೊನ್ನನಳ್ಳಿ ದೊಡ್ಡೇಗೌಡ.



‘ಹೆಜ್ಜಿಗೆ’ಗೆ ಮಡಗಿಕೊಂಡಳು. ಗಂಡ ಸೊಗಸಾಗಿ ಹೊಸದಾಗಿ ‘ತೋಳಿಸಿ’ದ್ದ ಹಲ್ಲು ಗುಡಲು ತಕ್ಕೊಂಡು, “ಹೋಗಾನೆ” ಅಂದ. “ತಡೀರಿ, ಹಕ್ಕಳೆಲ್ಲೋ ಆಡಾಕೆ ಹೋಗ್ಯಾವೆ. ಅವ್ನೂ ಕರೀತೀನಿ. ‘ಹೆಚ್ಚು’ ಮಾಡೋದು ಅಂದ್ರೆ ಅವಕೆ ತುಂಬ ಆಸೆ” ಅಂದಳು. “ಅವು ಬ್ಯಾಡ ಬಾ. ಆಗಲೇ ಸಂದಾಗ್ಯದೆ. ನಾವು ಬಿರ್ನೆ ಬಂದು ಬುಡಾನೆ” ಅಂದ. ಸರಿ, ಇಬ್ಬರೂ ಜೋಳದ ಹೊಲಕ್ಕೆ ಹೋದರು. ಮಧ್ಯಕ್ಕೆ ಕರಕೊಂಡು ಹೋದ ಅಲ್ಲಿ ಎಲ್ಲಾ ಸಾಮಾನ್ನೂ ಮಡಗಿದರು. ಒಂದು ಕೈ ಜೋಳದ ಕಡ್ಡೀನೂ ಕೂದು ಮಡಗಿದ. ಸರಿ, ಕುಡ್ಲು ಜೋಳದ ತೆನೆ ಎಲ್ಲಾನೂ ತೊಳೆದು ಇಟ್ಟರು. ಈ ಭೂತಿ ಕುಂಕುಮ ಹಚ್ಚಿದಳು. ಸುತ್ತ ಇದ್ದ ಹುಚ್ಚೆಳ್ಳು ಹೂವು ಹಣ್ಣೆ ಹೂವು ಇಟ್ಟಳು. ಹಾಲು ಅನ್ನ ಎಡೆಮಾಡಿದಳು.

ಕಯ್ಯೆಣ್ಣೆ ದೀಪ ಹತ್ತಿಸಿದಳು. ಬಾಳೆ ಹಣ್ಣು ತೊಟ್ಟು ಮುರಿದು ಮಡಗಿ ತೆಂಗಿನಕಾಯಿ ಒಡೆದಳು. ಗಂಡ ಮೊದಲು ಧೂಪ ಹಾಕಿ ಅಡ್ಡ ಬಿದ್ದ. ಹೆಂಡತಿ ಆಮೇಲೆ ಧೂಪ ಹಾಕಿ ಅಡ್ಡಬೀಳುವಾಗ ಗಂಡ ಜೋಳದ ಕಡ್ಡಿ ಮಧ್ಯೆ ಮಡಗಿದ್ದ ಕಂದಲು ತಕ್ಕೊಂಡು ಹೆಕ್ಕತ್ತಗೆ ಸರಿಯಾಗಿ ಬುಟ್ಟ. ರುಂಡ ಒಂದು ಕಡೆ ಮುಂಡ ಒಂದು ಕಡೆ ಆಯಿತು. ಒಂದೇ ಏಟಿಗೆ ಅವಳ್ನ ಗುಂಡಿಗೆ ಹಾಕಿ ಮಣ್ಣು ಪಣ್ಣು ಮುಚ್ಚಿದ. ಮನೆಗೆ ಬಂದ. ಚಿಕ್ಕ ಹೊನ್ನಿ ದೊಡ್ಡ ಹೊನ್ನಿ ಇಬ್ರೂ “ಅಪ್ಪಾ ಅಪ್ಪಾ ಅವ್ವ ಎಲ್ಲೋದಳು” ಅಂತ ಕೇಳಿದರು. ಅವರಿಬ್ಬರ ತಲೇನೂ ಸವರಿ “ನಿಮ್ಮವ್ವ ನಿಮ್ಮ ಅಯ್ಯನ ಮನೆಗೆ ಹೋಗ್ಯವಳೆ. ಹೊತ್ತಾರೀಕೆ ಬತ್ತಾಳೆ, ಸುಮ್ನಿರಿ” ಅಂತ ಸಮಾಧಾನ ಹೇಳಿದ. ಅವು ದಿನಾ ಬೆಳಗಾಗ ಅದೇ ಪ್ರಶ್ನೆ ಕೇಳುತ್ತಿದ್ದವು, ಅವನು ಅದೇ ಉತ್ತರ ಹೇಳುತ್ತಿದ್ದ. ಒಂದು ದಿನ ಹಿಂಗೆ ಕೇಳಿದಾಗ ಅವನು ಕಣ್ಣೀರು ಬುಡುತ್ತಾ “ನಿಮ್ಮವ್ವ ವಾಂತಿಭೇದಿ ಬಂದು ಸತ್ತು ಹೋದ್ಲಂತೆ” ಅಂದ. ಅವೂ ಅತ್ತು ಕರದೂ ಗೋಳಾಡಿಕೊಂಡು ಸುಮ್ಮನಾದವು.

ದಿನನಿತ್ಯ ಈಗ ಆ ಹೆಣ್ಣು ಮಕ್ಕಳೇ ಹ್ಯಂಗೋ ಅಡಿಗೆ ಮಾಡುತ್ತಿದ್ದವು. ಅವರಪ್ಪನ ಮಿಂಡಗಾತಿ ದಿನಾರೋಜೀನು ಬೆಂಕಿಗೆ ಅವರ ಮನೆಗೇ ಬರುತ್ತಿದ್ದಳು. ಅವಳು ಬಂದಾಗ ಅವು ಪಡಸಾಲೇಲಿ ಗಜ್ಜುಗ ಗೋಲಿ ಆಡ್ತಾ ಇರುತ್ತಿದ್ದುವು. ಅವಳು ಬಂದು “ಒಂದೀಟು ಹಂಚಲ್ಲಿ ಬೆಂಕಿ ಕೊಡಬನ್ರೋ ಹೊನ್ನೀರ” ಅಂತಿದ್ದಳು. ಅವರು “ಅಯ್ಯೋ ನಾವು ಆಟ ಆಡಬೇಕು, ನೀನೇ ಹೋಗಿ ತಕ್ಕೋ” ಅಂತಿದ್ದಳು. ಅವಳು ಒಳಕ್ಕೆ ಬಂದು ಬೆಂಕಿ ತಕ್ಕೊಂಡು ಕಲ್ಲು ತಲೆಗೂದಲು ತಕ್ಕೊಂಡು ಅಡಿಗೆಗೆ ಹಾಕಿ ಹೋಗಿ ಬುಡುತ್ತಿದ್ದಳು. ಉಣ್ಣುವಾಗ ಅಪ್ಪ “ಒಂದಿಷ್ಟು ಚಂದಾಗಿ ಅಕ್ಕಿಗಿಕ್ಕಿ ಸೋಸಿಕೊಂಡು ಅಡ್ಗೆ ಮಾಡಾಕಾಗಾಕಿಲ್ವ? ನಿಮ್ಗೇನು ಬಂದದೆ

ಧಾಡಿ? ಇದೇನು ಅಡಿಗೆ ಕುಲವಾ? ಮನುಷ್ಯರಾದೋರು ಇದ ತಿನ್ಬಹುದಾ?" ಅಂತ ಬಯ್ತಾ ಇದ್ದ. "ಇಲ್ಲಕನಪ್ಪಾ ನಾವು ಚಂದಾಗೇ ಸೋಸಿ ಮಾಡ್ದೀವಿ. ಅದ್ಯಾಕೆ ಹಿಂಗಾಯ್ತದೋ ಕಾಣೆ" ಅಂತ ಆ ಹಕ್ಕಳು ಕಣ್ಣೀರು ಬುಟ್ಟವು. ಅವನು ಏನೋ ಯೋಚನೆಮಾಡಿ, "ಅದಿರ್ಲಿ ಮನೆಗೆ ಯಾರಾರೂ ಬತ್ತಾರಾ" ಅಂದ. "ಹೂಕನಪ್ಪ, ಆ ಮ್ಯಾಗಳ ಬೀದಿ ಬಸಕ್ಕ ದಿನಾ ಬೆಂಕಿಗೆ ಬತ್ತಾಳೆ."

"ಬೆಂಕಿ ನೀವೇ ಕೊಡ್ತೀರೋ, ಅವಳೇ ತಕ್ಕೊತ್ತಾಳೋ?"

"ನಾವು ಪಡಸಾಲೇಲಿ ಇರ್ತೀವಿ. ಅವಳೊಬ್ಬಳೇ ಕೋಣೆಗೆ ಹೋಗಿ ಬೆಂಕಿ ತಕ್ಕೊತ್ತಾಳೆ"

"ಸರಿ" ಅಂದುಕೊಂಡು ಸುಮ್ಮನಾದ.

ಮೂರನೆ ದಿನ ಅಟ್ಟ ಹತ್ತಿ ಕೂತುಕೊಂಡ. ಅವನ ಮಿಂಡಗಾತಿ ಎಂದಿನಂತೆ ಬಂದಳು. ಕೋಣೆಗೆ ಹೋಗಿ ಒಲೆಯಿಂದ ಬೆಂಕಿ ತಕ್ಕೊಂಡಳು. ಆ ಮೇಲೆ ಮಡಲು ಬಿಚ್ಚಿ ತಂದಿದ್ದ ನುಜರುಗಲ್ಲು ತಲೆಗೂದಲು ತೆಗೆದು ಅಡಿಗೇ ಮಡಕೆಗೆ ಹಾಕ್ತಾ ಇದ್ದಳು. ಆ ತಕ್ಷಣ ಅವನು ಅಟ್ಟದಿಂದ ಕೆಳಕ್ಕೆ ಕುಪ್ಪಿ ಅವಳ ಮುಂದಲೆ ಹಿಡಕೊಂಡ. ಅವಳಿಗೆ ಗಾಬರಿಯಾಯಿತು. ಆ ಮೇಲೆ ನೋಡಿದರೆ ಮಿಂಡನೇ. ಅವನು ಜಬರುದಸ್ತ್ ಮಾಡಿದ: "ನೀನು ಹಿಂಗೆ ದಿನಾ ಕಲ್ಲು ಅದು ಇದು ಮಾಡಿದ ಅಡುಗೇಗೆ ಹಾಕ್ತಾ ಇದ್ರೆ ನಾವು ಉಣ್ಣೋದು ಹ್ಯಂಗೆ? ನ್ಯಾಯವಾಗಿ ಇನ್ಮೇಲೆ ನೀನೇ ಅಡಿಗೆ ಮಾಡು". ಅವಳು ಒಪ್ಪಿಕೊಂಡಳು. ಸರಿ, ಇಬ್ಬರೂ ಗಂಡಹೆಂಡಿರಾದರು.

೨

ಈ ಬಲತಾಯಿ ಬಂದ ಮೇಲೆ ಚಿಕ್ಕ ಹೊನ್ನಿ – ದೊಡ್ಡ ಹೊನ್ನಿ ಇಬ್ಬರಿಗೂ ಅಂಕೆ ಅಟ್ಟುಳಿ ಜಾಸ್ತಿಯಾಯಿತು. ಮಾತಿಗೆ ಸಲ್ಲಿಗೆಲ್ಲಾ ಸೋಟೆ ಹಿಂಡೋದು, ವಳಸುಂಟಿ ಹಿಡಿಯೋದು, ಮುಂದಲೆ ಹಿಡಿದು ಚಲುವಾಡೋದು ಮಾಡುತ್ತಿದ್ದಳು. ಅವು ಕೂತ್ರೆ ಬೈಗಳ, ನಿಂತರೆ ಬೈಗಳ. ಅವು ಕಣ್ಣೀರ್ನೂ ಕೂಳ್ನೂ ಒಟ್ಟಿಗೆ ತಿನ್ನುತ್ತಿದ್ದವು. ಆದ್ರೂ ಹೊಟ್ಟೆ ತುಂಬಾ ಊಟ ಹಾಕ್ತಿರಲಿಲ್ಲ. ಉಳಿಕೆ ಬಳಿಕೆ ತಂಗಳು ಹಳಸಲು ಸೀಕುಪಾಕು ಹಾಕುತ್ತಿದ್ದಳು. ಅವು ಹ್ಯಂಗೋ ಹಾಳು ಹೊಟ್ಟೇ ಹೊರೀಲಾರದ್ದಕ್ಕೆ ಎಂತದೋ ತಿಂದುಕೊಂಡು ವಾಂಕಾರು ಹತ್ತುತ್ತಿದ್ದವು.

ಅವರವ್ವನನ್ನು ಕಡಿದು ಹಾಕಿದ ಗುದ್ದಿನ ಮೇಲೆ ಒಂದು ಮಿಣಿಕೆಗಿಡ ಹುಟ್ತು. ಅದು ದಿನಾ ಬೆಳಗಾಗೋದ್ರೊಳಗೆ ಒಂದು ಹೆಡಗೆ ಗಾತ್ರ ಹಣ್ಣು



ಬುಡುತ್ತಿತ್ತು. ಅಕ್ಕತಂಗೇರಿಬ್ರೂ ದಿನಾ ಹೊತ್ತಾರೆ ಹೊತ್ತು ಕೆಲಸಕ್ಕೆ ಹೋದಾಗ ಹೊಟ್ಟೆ ಬಿರಿಯ ಅದನ್ನು ತಿಂದು ಬರುತ್ತಿದ್ದವು. ಮನೇಲಿ ಅಷ್ಟೇನೂ ಊಟ ಬೇಕಾಗುತ್ತಿರಲಿಲ್ಲ. 'ಹೊಟ್ಟೆ ತುಂಬಾ ಹಾಕ್ದೇ ಇದ್ರೂ ಇವರು ಒಂದೀಟು ಸುಸ್ತು ಸಂಕಟ ಇಲ್ಲದೆ ದುಂಡುದುಂಡಾಗೆ ಒಡೆದು ಮೂಡಿದಂಗೆ ಬೇಳೀತಾ ಅವ್ರಲ್ಲ' ಅಂತ ಬಲವ್ವನಿಗೆ ಅನುಮಾನ ಹುಟ್ಟಿತು. ಅವಳಿಗೆ ಹಿರೀಗಂಡನಿಗಾಗಿದ್ದ ಒಬ್ಬ ಮಗಳಿದ್ದಳು. ಆವತ್ತು ಹೊತ್ತಾರೆ ಅವರು ಹೊಲಕ್ಕೆ ಹೋಗುವಾಗ ತನ್ನ ಮಗಳನ್ನ ಕರೆದು "ನೀನೂ ಅವರ ಜೊತೇಲಿ ಈವತ್ತೊಂದು ದಿನ ಹೋಗು. ಅವರು ಏನೇನು ಮಾಡ್ತಾರೆ, ಏನೇನು ತಿಂತಾರೆ ಎಲ್ಲಾನೂ ನೋಡ್ಕೊಂಡು ಬಂದು ಹೇಳು. ಅವರು ನಿಂಗೇನಾರೂ ತಿನ್ನಾಕೆ ಕೊಟ್ರೆ ಹಂಗೇ ತಕ್ಕೊಂಡ್ ಬಂದ್ಬುಡು" ಅಂತ ಹೇಳಿ ಕಳಿಸಿದಳು.

ಆ ಹೆಣ್ಣು ಹಕ್ಕಳು ಮೂರೂ ನೇರವಾಗಿ ಜೋಳದ ಹೊಲತಾಕೆ ಹೋದರು. ಅಕ್ಕ ತಂಗೇರು ಇಬ್ರೂ ನೆಟ್ಟಗೆ ಗುದ್ದಿನ ಹತ್ತ ಹೋದರು. ಮೂಡೆಗಾತ್ರ ಮಿಣಿಕೆ ಹಣ್ಣು ಬಿರದು ಉಳ್ಳಾಡುತ್ತಿತ್ತು. ಅದ ಮುರ್ಕೊಂಡ್ರು, ಪಾಲು ಮಾಡಿದ್ರು, ತಾವೂ ತಿಂದ್ರು, ಜೊತೇಲಿ ಬಂದಿದ್ದ ಚಿಕ್ಕವ್ವನ ಮಗಳಿಗೂ ಕೊಟ್ರು. ಆ ಹುಡುಗಿ ಅದ ತಿನ್ನದೆ ಹಂಗೇ ಮನೆಗೆ ತಕ್ಕೊಂಡು ಬಂದು ಅವ್ವನಿಗೆ ಕೊಟ್ಟಳು; ನಡೆದ ಸಂಗತಿ ಹೇಳಿದಳು.

ರಾತ್ರೆ ಗಂಡ ಬರೋ ಹೊತ್ತಿಗೆ ಕಂಬಳಿ ಮುಸುಗು ಹಾಕ್ಕೊಂಡು ಜೋರಾಗಿ ನಳ್ತಾ ಮಲಗಿಕೊಂಡಳು. ಅವನು ಬಂದು, "ಇದ್ಯಾಕೆ ಹಿಂಗೆ ಮನಗಿದ್ದೀ?" ಅಂದ.

"ಅಯ್ಯೋ ತಲೆ ಸಿಡಿದು ಹೋಯ್ತಾ ಅದೆ. ನಂಗೆ ತಡಿಯಾಕೆ ಆಗೋದಿಲ್ಲ; ನಾನು ಸತ್ತೋಯ್ತೀನಿ" ಅಂದಳು. "ಅದಕ್ಕೆ ಏನು ಔಸ್ತಿ ಮಾಡಬೇಕು, ಹೇಳು" ಅಂದ.

"ನಮ್ಮ ಮಳ್ಳು ಹೊಲದಲ್ಲಿ ಒಂದು ಮಿಣಕೆ ಗಿಡ ಅದೆ. ಅದರ ಬೇರು ತಂದು ತೇದು ಹಣೆಗೆ ಹಚ್ಚಿದರೆ ಹುಸಾರಾಯ್ತದೆ."

"ಸರಿ" ಅಂತ ಆ ಕತ್ತಲಲ್ಲೇ ಹೊಲತಾಕೆ ಹೋಗಿ ಮಿಣಕೆ ಗಿಡ ಕಿತ್ತು ಅದರ ಬೇರನ್ನು ಕತ್ತರಿಸಿಕೊಂಡು ಬಂದ. ಅದ ತೇದು ಹೆಂಡತಿ ಹಣೆಗೆ ಗಂಧಹಚ್ಚಿದ. "ಹುಸಾರಾಯಿತು." ಅಂತ ಎದ್ದು ಕೂತಳು.

೩

ಆ ಮುಳ್ಳು ಹೊಲದ ಹತ್ತಿರವೇ ಒಂದು ವಳುಕಲ್ಲು ಇತ್ತು. ಮಿಣಕೆ ಗಿಡ

ಕಿತ್ತು ಹಾಕಿದ ಮೇಲೆ ಆ ಚಿಕ್ಕಹೊನ್ನಿ – ದೊಡ್ಡ ಹೊನ್ನಿಯರ ಅವ್ವ ಕಾಡೆಮ್ಮೆಯಾಗಿ ಬಂದು ರಾತ್ರೆ ಹೊತ್ತು ಆ ವಳಕಲ್ಲು ತುಂಬಾ ಹಾಲು ಕರೆದು ಹೋಗುತ್ತಿದ್ದಳು. ಅದು ಬೆಳಗಾಗೋ ಹೊತ್ತಿಗೆ ಗೋರ್ಚಿ ಕಲ್ಲಿನಲ್ಲಿ ಕುಯ್ಯೋ ಹಂಗೆ ಹೆಪ್ಪಾಗಿಬಿಡುತಿತ್ತು. ಅವರಿಬ್ಬರೂ ಬಂದು ಆ ಮೊಸರು ಕಂಠಮುಟ್ಟ ಕುಡಿದು ಕೆಲಸಕ್ಕೆ ಹೋಯ್ತಾ ಇದ್ದರು. ಮತ್ತೆ ಬಲವ್ವನಿಗೆ ಇವರ ಮೇಲೆ ಅನುಮಾನವಾಯಿತು. ಎಂದಿನ ಹಂಗೆ ಇವರ ಜೊತೆ ತನ್ನ ಮಗಳನ್ನು ಗಳಿಸಿದಳು. ಅವಳು ಇವರ ಜೊತೆ ಬಂದು ಮೊಸರು ಕುಡಿಯೋದ ನೋಡಿ ತಾನೂ ವಷ್ಟು ತಕ್ಕೊಂಡು ಮನೆಗೆ ಹೋದಳು; ಅವ್ವನಿಗೆ ನಡೆದದ್ದೆಲ್ಲಾ ಬೆಸೆದಳು.

ಆ ದಿನ ಸಂದೆ ಯಥಾ ಪ್ರಕಾರ ಮುಸುಗು ಹಾಕಿಕೊಂಡು ಜೋರಾಗಿ ನಳ್ತಾ ಮಲಗಿದಳು. ಗಂಡ ಬಂದು "ಯಾಕೆ" ಅಂತ ಕೇಳಿದ.

"ಅಯ್ಯೋ ನಂಗೆ ಹೊಟ್ಟೆ ಉಬ್ಬರಿಸಿಕೊಂಡು ಬುಟ್ಟಾದೆ, ಊದಿ ಒಡೆಯೋ ಹಂಗೆ ಆಯ್ತಾಅದೆ" ಅಂದಳು.

"ಈ ಸರ್‍ಹೊತ್ತಿನಲ್ಲಿ ನಾನು ಏನ್ಮಾಡಾನೆ?"

"ಏನೂ ಮಾಡಬ್ಯಾಡಿ. ನಮ್ಮ ಮುಳ್ಳು ಹೊಲದ ಆಕಡೆ ಒಂದು ವಳಕಲ್ಲು ಅದೆ. ಅದ ಮೊಖಾಡೆ ಹಾಕಿ ಬನ್ನಿ."

ಅವನು ಆಗಲೇ ಹಾರೆ ತಕ್ಕೊಂಡು ಹೋಗಿ ಆ ವಳುಕಲ್ಲನ್ನ ಹೊರಳಿಸಿ ಮೊಖಾಡೆ ಹಾಕಿ ಬಂದ. "ಈಗ ನೋಡು ಹೊಟ್ಟೇ ಉಬ್ರ ಇಳೀತು" ಅಂದಳು.

ಈಗ ಆ ಮಕ್ಕಳಿಗೆ ಅವಳು ಕೊಟ್ಟದ್ದೇ ಊಟ. ಅದನ್ನೇ ತಿಂದುಕೊಂಡು ಹ್ಯಂಗೋ ಕಾಲ ಹಾಕ್ತಾ ಇದ್ದವು. ಆದರೂ ಬಲವ್ವನಿಗೆ ಸೈರಿಸಕಾಗಲಿಲ್ಲ. 'ಏನಾದರೂ ಮಾಡಿ ಇವರನ್ನ ತಗದೇಬುಡಬೇಕು' ಅಂತ ಮನಸ್ಸಿನಲ್ಲಿ ದಿಟ್ಟ ಮಾಡಿಕೊಂಡಳು. ಮತ್ತೆ ರೋಗ ಬಂದೋಳ ಹಂಗೆ ನಳ್ತಾ ಮಲಗಿದಳು. ಗಂಡ ಬಂದು 'ಯಾಕೆ?' ಅಂತ ಕೇಳಿದ.

"ನಂಗೆ ರಾವು ಬಡಿದುಬುಟ್ಟಾದೆ. ನಾನು ಈ ಸತಿ ಉಳಿಯೋದಿಲ್ಲ. ನನ್ನ ಮೇಲೆ ನಿಂಗೆ ಪಿರೀತಿ ಇದ್ರೆ ನಾನು ಹೇಳಿದಂಗೆ ಮಾಡು" ಅಂದಳು.

"ಅದೇನು ಹೇಳು, ಮಾಡ್ತೀನಿ"

"ನನ್ನ ಕೈಮೇಲೆ ಕೈಹಾಕಿ ಭಾಷೆಕೊಡು ಮತ್ತೆ" ಅಂತ ಕೈ ನೀಡಿದಳು. ಅವನು ಅವಳ ಕೈ ಮೇಲೆ ಕೈ ಹಾಕಿ "ಸತ್ಯವಾಗೂ ಮಾಡ್ತೀನಿ ಅದೇನು ಹೇಳು. ನಿನಗಿಂತ ಯಾವುದು ಹೆಚ್ಚು?" ಅಂದ.

"ನಿನ್ನ ಇಬ್ಬರು ಮಕ್ಕಳ್ನೂ ಕಡಿದು ರಕ್ತ ತಂದು ನನ್ನ ಹಣೆಗೆ ಹನಿಸ್ಬೇಕು. ಆಗ ನಂಗೆ ಹುಸಾರಾಯ್ತದೆ, ಇಲ್ದೆ ಇದ್ರೆ ನನ್ನಾಸೆ ಬುಟ್‌ಬುಡು"



ಒಂದು ರಾತ್ರೆ ಹೆಣ್ಣು ಮಕ್ಕಳಿಬ್ಬರ್‍ನೂ ಕರಕೊಂಡು ಒಂದು ಕಂದಲು ಹಿಡಕೊಂಡು ಕಾಡಿಗೆ ಹೋದ. ಎಷ್ಟೋ ದೂರ ಹೋದ ಮೇಲೆ ಒಂದು ಮರದ ಅಂಡೀಲಿ ಆ ಕಡೆ ಈ ಕಡೆ ಒಬ್ಬೊಬ್ಬರ್‍ನ ಮಲಗಿಸಿಕೊಂಡು ಮಧ್ಯೆ ತಾನು ಮಲಗಿ ಕೊಂಡ. ರಾತ್ರೆ ಒಂದು ಹೊತ್ತಿನಲ್ಲಿ ಎದ್ದ. ಮಕ್ಕಳಿಬ್ರೂ ಗೊರಕೆ ಹೊಡೀತಾ ಮಾನಿದ್ದೇಲಿ ಮಲಗಿದ್ದರು. ಎದ್ದು ಹೋಗಿ ಒಂದು ಕೊಂಟುತಂದ; ಮಧ್ಯಕ್ಕೆ ಮಲಗಿಸಿದ; ಅದರ ಮೇಲೆ ತಾನು ಹೊದ್ದಿದ್ದ ದುಪ್ಪಟಿ ಹೊದಿಸಿದ. ಅಷ್ಟು ದೂರಹೋದ. ಅಲ್ಲೊಂದು ಕಳ್ಳಿ ಮರ. ಅದರ ಹತ್ರ ನಿಂತ್ಕೊಂಡ. ಅದಕ್ಕೆ ಮೂರು ಬಳಸುಬಂದ. "ನನ್ನ ಮಕ್ಕಳು ಸತ್ಯವಂತರಾಗಿದ್ರೆ ಈ ಹಾಲು ಬರೋ ಮರದಲ್ಲಿ ರಕ್ತ ಬರಲಿ" ಅಂತ ಹೇಳಿ ಕಂದಲು ಎತ್ತಿ ಹೊಡೆದ. ಆ ಮರದಲ್ಲಿ ರಕ್ತ ಬಳಬಳನೇ ಸುರೀತು. ಅದ ತಕ್ಕೊಂಡು ಹೋಗಿ ಹೆಂಡತಿ ಹಣೇಗೆ ಹನಿಕಿಸಿದ. ಆಗ ಅವಳಿಗೆ ನಿರುಂಬಳವಾಯಿತು.

೪

ಹೊತ್ತಾರೆ ಬಿಸಿಲಿನ ಶಾಖಕ್ಕೆ ಆ ಹೆಣ್ಣುಮಕ್ಕಳು ಎದ್ದವು. ಮಧ್ಯದ ಕೊಂಟನ್ನು ನೋಡಿ 'ಅಪ್ಪಾ ಇನ್ನೂ ಎದ್ದೇ ಇಲ್ಲ' ಅಂದುಕೊಂಡು "ಏಳಪ್ಪಾ, ಅಪ್ಪಾ ಏಟೊತ್ತಾಗದೆ ನೋಡು. ಅಪ್ಪಾ .... ಅಪ್ಪಾ" ಅಂತ ಅಳ್ಳಾಡಿಸಿದವು. ಕೊಂಟು ಉಳ್ಳಾಡಿತು ಅನುಮಾನದಿಂದ ದುಪ್ಪಟಿ ತೆಗೆದು ನೋಡಿದವು. ಮರದ ಕೊಂಟು! ಅವಕ್ಕೆ ಬರಬಾರದ ದುಃಖ ಬತ್ತು. "ಅಪ್ಪಾ .... ಅಪ್ಪಾ" ಅಂತ ಗೋಳಾಡ್ತಾ ಕಾಡಿನಲ್ಲೆಲ್ಲಾ ಅಲೆದಾಡಿದವು. ಅಲ್ಲಿ ನೀನೇ ಅನ್ನೋರಿಲ್ಲ. ಊರಿಗೆ ಹೋಗಾನೆ ಅಂದ್ರೆ ದಾರಿಗೊತ್ತಿಲ್ಲ. ಅಳ್ತಾ ಅಳ್ತಾ ಒಂದು ಮರದಂಡಿ ಕೂತುಕೊಂಡವು. ಒಂದು ಗುಳ್ಳೇಲಕ್ಕ ಕುಂಟಿಗೊಂಡು ಕುಂಟಿಗೊಂಡು ಅಲ್ಲಿಗೆ ಬತ್ತು. "ಯಾಕ್ರವ್ವಾ ಹಿಂಗೆ ಅಳ್ತೀರಿ?" ಅಂತ ಕೇಳ್ತು. ಅವರು ನಡೆದ ಪರ್‍ಸಂಗ ಎಲ್ಲಾನು ಹೇಳಿದರು. ಅದಕ್ಕೆ ಹೊಟ್ಟೆ ಉರಿದ್ಹೋಯ್ತು. "ಬನ್ನಿ ನಂಗೂ ಯಾರೂ ಇಲ್ಲ. ನಾನೂ ಅನಾದ್ರಿ. ನನ್ನ ಮನೇಲೆ ನಂಗೂ ಒಂದು ತುತ್ತು ಬೇಸಿ ಹಾಕ್ಕೊಂಡು ಇರೀವ್ರಂತೆ ಬನ್ನಿ" ಅಂತ ಹೇಳಿತು. ಅಕ್ಕತಂಗೆಯರಿಬ್ಬರೂ ಅದರ ಹಿಂದೆ ಹೋದರು. ಕುಂಟ ಗುಳ್ಳೇಲಕ್ಕ ಕಲ್ಲಿನಲ್ಲಿ ಬಂದೋಬಸ್ತಾದ ಮನೆ ಕಟ್ಕೊಂಡಿತ್ತು. ಮುತ್ತು ರತ್ನ ವಜ್ರ ವೈಢೂರ್ಯ ಬೇಕುಬೇಕಾದಂಥ ಸಾಮಾನನ್ನೆಲ್ಲ ಅದು ಅಲ್ಲಿ ಕೂಡಿ ಹಾಕ್ಕೊಂಡಿತ್ತು. ಮನೆಗೆ ಹೋದಮೇಲೆ ಅದು ಹೇಳಿತು: "ಒಬ್ಬಳು ಮನೇಲೇ ಇದ್ದುಕೊಂಡು ಅಡಿಗೆಪಡಿಗೆ ಮಾಡಲಿ. ಇನ್ನೊಬ್ಬಳು ನನ್ನ ಜೊತೆ ಬರಲಿ–

ಬೇಕು ಬೇಕಾದ ದ್ರವ್ಯತರಾಕೆ". ಸರಿ, ಇಬ್ಬರೂ ಒಪ್ಪಿಕೊಂಡರು. ದೊಡ್ಡಹೊನ್ನ "ಅಡಿಗೆ ಮಾಡಿಕೊಂಡು ಮನೇಲೇ ಇರ್ತೀನಿ" ಅಂದಳು. ಚಿಕ್ಕಹೊನ್ನಿ "ನಾನು ನಿನ್ನ ಜೊತೆ ಬತ್ತೀನಿ" ಅಂದಳು.

ದೊಡ್ಡ ಹೊನ್ನಿ ತುಂಬ ಸತ್ಯವಂತೆ. ಚಾಲು ಚಮತ್ಕಾರಿ ಸುಳ್ಳು ತಟವಟ ಒಂದೂ ಅವಳಿಗೆ ಗೊತ್ತಿರಲಿಲ್ಲ. ತೆಪ್ಪಗೆ ಅಡಿಗೆಮಾಡಿಕೊಂಡು ಮನೇಲಿ ಇದ್ದಳು. ಆದರೆ ಚಿಕ್ಕ ಹೊನ್ನಿ ತುಂಬ ಕಿಲಾಡಿ, ತುಂಬ ಚುರುಕು. ಗುಳ್ಳೇಲಕ್ಕನ ಜೊತೇಲಿ ತಿರುಗ್ತಾ ಅದರ ಹತ್ರ ಪೂಸಿಮಾತಾಡ್ತಾ ಅದರ ತಲೆ ಸವರಿ ಬೇಕಾದಂಗೆ ಒಡವೆ ವಸ್ತ್ರದ ಪುಟ್ಟುಗಂಟು ಮಾಡಿಕೊಂಡಳು.

* * * * *

ಒಂದು ಪಟ್ಟಣದಲ್ಲಿ ಒಬ್ಬ ದೊರೆ ಮಗ. ಅವನಿಗೆ ಮದುವೆ ಮಾಡಬೇಕು ಅಂತ ಅವರ ಅಪ್ಪ ದೇಶಕೋಶ ಎಲ್ಲಾನೂ ಸುತ್ತಿದರು. ಎಂಥೆಂಥ ಹೆಣ್ಣು ನೋಡಿಕೊಂಡು ಬಂದರೂ ಅವನು ಒಪ್ಪಲಿಲ್ಲ. ಅವರಿಗೂ ಹುಡುಕಿ ಹುಡುಕಿ ಸಾಕಾಗಿ ಕಟ್ಟಕಡೆಗೆ "ನೀನೆ ಎಲ್ಲಾದ್ರೂ ನಿಂಗೊಪ್ಪೋ ಅಂತ ಹೆಣ್ಣು ನೋಡಿಕೊಂಡು ಬಾ, ನಾವು ಮದುವೆ ಮಾಡ್ತೀವಿ" ಅಂತ ಹೇಳಿ, ದಂಡು ದಾಳಿ ಮಂದಿ ಮಾರ್ಬಲ ಎಲ್ಲಾನೂ ಕೊಟ್ಟು ಮಗನ್ನ ಕಳಿಸಿದರು. ಅವನೂ ಆ ದೇಶ ಈ ದೇಶ ಎಲ್ಲಾನೂ ಸುತ್ತಿದ. ಹಿಂಗೇ ಕಾಡಿನೊಳಗೆ ಹೋಯ್ತಾ ಇರುವಾಗ ಸಾಕಾಗಿ ಒಂದು ಕಡೆ ಬೀಡು ಬಿಟ್ಟರು. ಯಾರಿಗೋ ಒಬ್ಬನಿಗೆ ಬೀಡಿ ತೆವಲು ಹತ್ತಿತು. ಅವರ ಯಾರ ಹತ್ರಾನೂ ಬೆಂಕಿ ಇರಲಿಲ್ಲ. ಸರಿ, ಬೆಂಕಿ ಹುಡುಕಿಕೊಂಡು ಹೊರಟರು. ಅಲ್ಲೆಲ್ಲೋ ಒಂದು ಚೂಜಿ ಗಾತ್ರ ಹೊಗೆ ಕಡೀತಾ ಇರೋದನ್ನ ಒಬ್ಬ ನೋಡಿದ. ಅದೇ ನೇರದಲ್ಲಿ ಹೋದ. ಅಲ್ಲಿಂದಲೇ ಆ ಹೊಗೆ ಕಡೀತಿತ್ತು. ಅವನು ಮುಂದುಗಡೆ ನಿಂತುಕೊಂಡು "ಯಾರು ಮನೇ ವಳಗೆ?" ಅಂದ. ದೊಡ್ಡ ಹೊನ್ನಿ ಆ ದನಿ ಕೇಳಿ ಈಚೆಗೆ ಬಂದಳು. ಅವಳ ಕಣ್ಣು ಕುಕ್ಕುವಂಥ ರೂಪ ನೋಡಿ ಅವನು ಮೂರ್ಛೆ ಹೋದ. ಎಷ್ಟೋ ಹೊತ್ತಾದ ಮೇಲೆ ಎದ್ದು ಬೆಂಕಿ ಗಿಂಕಿ ಏನೂ ಕೇಳದೆ ಒಂದೇ ಓಟಕ್ಕೆ ದೊರೆಮಗನ ಹತ್ತಿರಕ್ಕೆ ಬಂದ.

"ಯಾಕೋ, ಹಿಂಗೆ ಬಿದ್ದಂಬೀಳ ಓಡಿಬತ್ತಾ ಇದ್ದೀಯ" ಅಂದ ದೊರೆಮಗ.

"ಏನ್ ಹೇಳ್ಳೀ ಬುದ್ಧೀ ..... ನಾವ್ ಸುಮ್ ಸುಮ್ನೆ ಪರ್ಪಂಚಾನೆಲ್ಲ ಸುತ್ತಿದ್ರೋ, ಅಯ್ಯೋ ಅಯ್ಯೋ" ಅಂತ ಹಣೆ ಹಣೆ ಬಡಿದುಕೊಂಡ.

"ಯಾಕೋ ಏನಾಯ್ತೋ?"

"ಅಪ್ಪಪ್ಪಾ .... ಆ ರೂಪ ಕಣ್ಣಿಂದ ನೋಡಾಕಾಗೋದಿಲ್ಲ. ಉರಿಯೋ ಸೂರ್ಯನ್ನಾರೂ ನೋಡಬಹುದು, ಅವಳನ್ನ ನೋಡಾಕೋಗೋದಿಲ್ಲ."



"ಅಷ್ಟು ಚಂದಾಗ್ಯವಳ? ಅವಳು ಯಾರು? ಎಲ್ಲವಳೆ?"

"ನೀವೇ ಬನ್ನಿ ಬುದ್ಧಿ, ನೋಡಿ" ಅಂತ ಹೇಳಿ ಅವನು ದೊರೆಮಗನ್ನ ಕರಕೊಂಡು ಗುಳ್ಳೇಲಕ್ಕನ ಮನೆಗೆ ಬಂದ. ರಾಜಕುಮಾರ ಬಾಗಿಲ ಹತ್ರ ನಿಂತುಕೊಂಡು.

"ಯಾರಮ್ಮಾ ವಳಗೆ? ಒಂದು ಕೆಂಡ ಬೆಂಕಿ ಕೊಡಮ್ಮ" ಅಂದ.

ಅವಳು ಬೆಂಕಿ ಕೆಂಡ ತಂದು ವಳಬಾಗಿಲಲ್ಲೇ ನಿಂತುಕೊಂಡು ಕೊಟ್ಟಳು. ಅವಳ ಆ ರೂಪ ನೋಡಿ ರಾಜಕುಮಾರನಿಗೆ ಅಮೃತ ಕುಡಿದಂಗಾಯಿತು. 'ನನಗೆ ತಕ್ಕ ಹೆಣ್ಣು' ಅಂತ ಅವನು ಮನಸ್ಸಿನಲ್ಲೇ ನಿರ್ಧಾರ ಮಾಡಿಕೊಂಡು ಕೇಳಿದ : "ನೀನು ಯಾರಮ್ಮ? ಒಬ್ಬಳೇ ಯಾಕೆ ಕಾಡಿನಲ್ಲಿದ್ದೀಯೆ?' ಅವಳು ಒಳಗೆ ನಿಂತು ಉತ್ತರ ನೀಡಿದಳು : "ನಾನೊಬ್ಬಳು ಪರದೇಶಿ. ಅದೃಷ್ಟ ಕೆಟ್ಟೋರಿಗೆ ಕಾಡಾದ್ರೇನು ಊರಾದ್ರೇನು"

"ನನ್ನ ಜೊತೆ ಬತ್ತೀಯಾ? ನಿನ್ನನ್ನ ನನ್ನ ರಾಣಿಯಾಗಿ ಮಾಡ್ಕೊತ್ತೀನಿ"

ಅವಳಿಗೂ ಕಾಡಿನಲ್ಲಿ ಒಬ್ಬಳೇ ಇದ್ದೂ ಬೇಜಾರು ಬಂದಿತ್ತು. ದೊರೆಮಗನ ಅಂದ ಚಂದ ನೋಡಿ ಅವನ ಮೇಲೆ ಮನಸೂ ಆಯಿತು. ಹಿಂದೆ ಮುಂದೆ ಯೋಚನೆ ಮಾಡದೆ,

"ಬತ್ತೀನಿ" ಅಂದಳು.

"ಸರಿ, ಬಾ ಮತ್ತೆ" ಅಂತ ಹೇಳಿ ರಾಜಕುಮಾರ ಹೊರಟ. ದೊಡ್ಡಹೊನ್ನಿ ಕೊರಳಲ್ಲಿ ಎರಡು ಎಳೆ ಹವಳದ ಸರ ಇತ್ತು. ಅದನ್ನು ಕಿತ್ತು 'ತಂಗಿಗೆ ದಾರಿ ಗೊತ್ತಾಗಲಿ' ಅಂತ ತಾನು ಹೋಗೋ ದಾರಿಯುದ್ದಕ್ಕೂ ಹವಳ ಸಾಲುಹಾಕಿಕೊಂಡು ಹೋದಳು. ಅಲ್ಲಿ ರಾಜ ಕೊಟ್ಟಣ ಕುಟ್ಟಿಸಿ ಪಟ್ಟಣಸಾರಿಸಿ ಒಳ್ಳೆ ಮೂರ್ತದಲ್ಲಿ ದೊಡ್ಡಹೊನ್ನಿಯನ್ನ ತನ್ನ ಮಗನಿಗೆ ಮದುವೆ ಮಾಡಿದ.

ಚಿಕ್ಕಹೊನ್ನಿ ಮತ್ತೆ ಗುಳ್ಳೇಲಕ್ಕ ತಮ್ಮ ಮನೆಗೆ ಬಂದು ನೋಡಿದರು. ದೊಡ್ಡ ಹೊನ್ನಿ ಇರಲಿಲ್ಲ. ಅವಳಿಗೆ ತುಂಬಾ ದುಃಖ ಬಂದುಬುಡ್ತು. "ನನ್ನ ಬುಟ್ಟು ಎಲ್ಲಿಗೋದ್ಯೋ ಅಕ್ಕಾ" ಅಂತ ಅತ್ತು ಕರೆದು ಗೋಳಾಡಿದಳು. ತನ್ನ ವಡವೆ ವಸ್ತ್ರ ದುಡ್ಡು ಕಾಸು ಎಲ್ಲಾನೂ ಗಂಟುಕಟ್ಟಿಕೊಂಡಳು. "ಗುಳ್ಳೇಲಕ್ಕಣ್ಣಾ ನಾನು ನಮ್ಮಕ್ಕನ್ನ ಹುಡೀಕೊಂಡು ಹೋಯ್ತೀನಿ, ಅವಳು ಏನಾದಳೋ ಎಂಥಾದಳೊ ಯಾರು ಹೇಳೋರು. ಈಟ್‌ದಿನಗಂಟ ನಮಗೆ ಅನ್ನಕೊಟ್ಟು

ಕಾಪಾಡಿದೆ. ನಿನಗೆ ಒಳ್ಳೇದಾಗಲಿ. ನಾನು ಹೋಯ್ತೀನಿ" ಅಂತ ಹೇಳಿ ಹೊರಟುಬುಟ್ಟಳು. ದಾರೀಲಿ ಹವಳ ಚೆಲ್ಲಿದ್ದು ಕಾಣಿಸಿತು. ಅದೇ ಗುರುತು ಹಿಡಕೊಂಡು ಉದ್ದಕ್ಕೂ ಹವಳ ಆಯ್ದುಕೊಂಡು ಹೋದಳು. ಆ ದಾರಿ ಸೀದಾ ಅರಮನೆತಾಕೆ ಹೋಯಿತು. ಹೋಗಿ ಅರಮನೆ ಮುಂದಿನ ಜಗಲಿಮೇಲೆ ತನ್ನ ಗಂಟನ್ನು ಇರುಕಿಕೊಂಡು ಕೂತುಕೊಂಡಳು. ದೊರೆಮಗ ಈಚೆಗೆ ಬಂದು ಇವಳನ್ನ ನೋಡಿದ. "ನೀನು ಯಾರು?" ಅಂದ. "ಅಯ್ಯೋ ನಾನೊಬ್ಬಳು ಯಾರೂ ಇಲ್ಲದ ಬೇವಾರ್ಸಿ" ಅಂದಳು ಚಿಕ್ಕಹೊನ್ನಿ. ದೊರೆಮಗ ಸ್ವಲ್ಪ ಹೊತ್ತು ಯೋಚಿಸಿ ಹೇಳಿದ:

"ಹೋಗಲಿ, ನಮ್ಮ ಅರಮನೆ ದನ ಮೇಸಿಕೊಂಡಿರ್ತೀಯ?"

"ಹೂಂ" ಅಂತ ಒಪ್ಪಿಕೊಂಡಳು.

ಸರಿ, ದಿನಾ ಎಮ್ಮೆ ದನ ಎಲ್ಲಾನೂ ಹೊಡಕೊಂಡು ಬೋರೆಮೇಕೆ ಹೊಯ್ತಾ ಇದ್ದಳು. ಅಲ್ಲಿಗೆ ಹೋಗಿ ತನ್ನ ಗಂಟು ಬಿಚ್ಚಿ ತನಗೆ ಬೇಕಾಬೇಕಾದಂಥ ಕಣ್ಮೆಗೆ ಮೂಗಿಗೆ ಒತ್ತಿಕೊಳ್ಳೋ ಅಂಥ ವಡವೆ ವಸ್ತ್ರ ಧರಿಸಿಕೋತಿದ್ದಳು. ಆಲದ ಮರದ ಕೊಂಬೆಗೆ ಹಗ್ಗ ಹಾಕ್ಕೊಂಡು ಉಯ್ಯಾಲೆ ಆಡ್ತಾ ಇದ್ದಳು. ಹಿಂಗೆ ಉಯ್ಯಾಲೆ ಆಡುವಾಗ ದನ ಎಮ್ಮೆ ಎಲ್ಲಾ ಇವಳ ರೂಪಾನೇ ನೋಡ್ತಾ ತಲೆಯೆತ್ತಿ ನಿಂತಕೋತಿದ್ದವು. ಭೂಮಿಗೆ ದುಂಡು ಊರುತ್ತಿರಲಿಲ್ಲ. ಸರಿ, ಮೇವು ಇಲ್ಲದ್ದರಿಂದ ಮನೇಲಿ ಸರಿಯಾಗಿ ಹಾಲು ಕೊಡುತ್ತಿರಲಿಲ್ಲ. ಹಿಂಗೇ ಎಷ್ಟೋ ದಿನ ಕಳೀತು. ಎಲ್ಲರಿಗೂ 'ಆಚರ್ಯ'ವಾಯಿತು. ಎಲ್ಲಾ ಬಂದು ದೊರೆಮಗನಿಗೆ ಹೇಳಿದರು. 'ಇದೇನು ನಡೀತದೆ ಪರೀಕ್ಷೆ ಮಾಡೇಬುಡ್ಬೇಕು' ಅಂತ ಮಾತಾಡಿಕೊಂಡರು. ಚಿಕ್ಕಹೊನ್ನಿ ದನ ಎಮ್ಮೆ ಹೊಡಕೊಂಡು ಹೋದಮೇಲೆ ಎಲ್ಲರೂ ಮೆತ್ತಗೆ ಹಿಂದೆ ಹೋಗಿ ಮೆಳೆ ಮರದ ಸಂದಿಗಳಲ್ಲಿ ಅಡಗಿಕೊಂಡು ನೋಡಿದರು. ಅವಳು ಎಂದಿನಂತೆ ಗಂಟು ಬಿಚ್ಚಿ ಮಿರಿಮಿರಿ ಅನ್ನೋ ವಡೆವೆವಸ್ತ್ರ ತೊಟ್ಟುಕೊಂಡು ಆಲದಮರದಲ್ಲಿ ಉಯ್ಯಾಲೆ ಆಡೋಕೆ ಶುರುಮಾಡಿದಳು. ಅವಳ ಕಣ್ಮುಕೋರೈಸೋ ರೂಪಾನೋಡ್ತಾ ದನವೆಲ್ಲಾ ಮೇಲಕ್ಕೆ ಕತ್ತೆತ್ತಿ ನಿಂತುಕೊಂಡವು. ಇವು ಹಾಲುಕೊಡದೆ ಇದ್ದುದರ ಕಾರಣ ಎಲ್ಲರಿಗೂ ತಿಳಿಯಿತು.

ಚಿಕ್ಕಹೊನ್ನಿ ದನ ಎಮ್ಮೆ ಅಟ್ಟಿಕೊಂಡು ಮನೆಗೆ ಬರುವ ಹೊತ್ತಿಗೆ ಅವಳ ಮದುವೆಗೆ ರಾಜನ ಮಗ ಏರ್ಪಾಟುಮಾಡಿದ್ದ. ದೊಡ್ಡಹೊನ್ನಿ ಚಿಕ್ಕಹೊನ್ನಿ ಒಬ್ಬರನ್ನೊಬ್ಬರು ನೋಡಿರಲಿಲ್ಲ. ರಾಜಕುಮಾರ ದೊಡ್ಡಹೊನ್ನಿಗೆ ಹೇಳಿದ:

"ಅವಳು ಏಟೊಂದು ಚಂದಾಗ್ಯವಳೇ ಅಂತ. ಎಲ್ಲಾ ಥೇಟ್ ನಿನ್ನ



ತದ್ರೂಪೇ. ನಿನ್ನ ನೋಡಿದ ಮೇಲೆ ಅವಳನ್ನ ನೋಡೋ ಹಂಗೇ ಇಲ್ಲ. ಇವತ್ತು ಬಂದ ಮ್ಯಾಲೆ ತಾನಮಾಡು ಅಂತ ಗೌಡೀರ ಕೈಲಿ ಹಿಂಸೆ ಮಾಡಿಸು. ಅವಳು ತನ್ನ ಗಂಟು ಮಡಗಿ ನೀರು ಮೀಯಕೆ ಹೋದ್ಮೇಲೆ ನಾನು ಅದ ಹೊತ್ಕೊಂಡು ಬತ್ತೀನಿ. ಆಮೇಲೆ ನೋಡಾನೆ"

ಸಂದೆಯಾಯಿತು. ಚಿಕ್ಕ ಹೊನ್ನಿ ಬಂದಳು. ದನ ಎಮ್ಮೆ ಎಲ್ಲಾನೂ ಕೊಟ್ಟಿಗೆಗೆ ಕೂಡಿದಳು. ಹೋಗಿ ಎಂದಿನ ಹಂಗೆ ಜಗಲೀ ಮೇಲೆ ಕೂತುಗೊಂಡಳು. ಗೌಡೀರು ಬಂದು, "ನೀವು ಬಂದಾಗಿನಿಂದ ತಾನ ಮಾಡೇ ಇಲ್ಲ. ಅದಕ್ಕೆ ಇವತ್ತು ನೀವು ತಾನ ಮಾಡ್ನೇಬೇಕು ಅಂತ ಮಾರಾಣೀರು ಅಪ್ಪಣೆಕೊಡಿಸ್ಯವ್ರೆ. ಬನ್ರಮ್ಮ" ಅಂದರು. ಚಿಕ್ಕಹೊನ್ನಿ "ನಾನು ದನಕಾಯಕೆ ಹೋದಾಗ ತಣ್ಣೀರು ಮೀದು ಬತ್ತೀನಿ. ನಂಗೆ ಬಿಸಿನೀರು ಬ್ಯಾಡ" ಅಂದಳು. ಅವರು ಏನಾದರೂ ಬಿಡಲಿಲ್ಲ. ಅವಳನ್ನ ಜಿಂಜಿನ್‌ಜಿರಿ ಹತ್ತಿಸಿ ಒಪ್ಪಿಸಿದರು. ಅವರ ಹಿಡಿಬಿಟ್ಟೀ ಮೇಲೆ ಸ್ನಾನದ ಮನೆಗೆ ಹೋಗಿ ಒಕ್ಕಡೆ ಗಂಟು ಮಡಗಿ ನೀರು ಹುಯ್ಕೊಳ್ಳಾಕೆ ಕೂತುಕೊಂಡಳು. ರಾಜಕುಮಾರ ಮೆತ್ತಗೆ ಬಂದು ಗಂಟನ್ನು ಎಗರಿಸಿಕೊಂಡು ಹೋದ. ಚಿಕ್ಕಹೊನ್ನಿ ಬಡಕೊಂಡಳು: "ಅಯ್ಯೋ ನನ್ನ ಗಂಟುಕೊಡಿ, ಗಂಟುಕೊಡಿ, ನಿಮ್ಮ ದಮ್ಮಯ್ಯ ಅಂತೀನಿ". ರಾಜಕುಮಾರ ಒಳಗಡೆಯಿಂದ ಹೇಳಿದ: "ನನ್ನ ಮದುವೆಯಾಯ್ತೀನಿ ಅಂದರೆ ಕೊಡ್ತೀನಿ". "ಆಗಲಿ ಕೊಡಿ ನಿಮ್ಮ ದಮ್ಮಯ್ಯ" ಅಂದಳು ಚಿಕ್ಕಹೊನ್ನಿ. ಸರಿ, ಕೊಟ್ಟ. ಪನ್ನೀರಿನಲ್ಲಿ ತಾನಮಾಡಿ 'ಕುಲಕೆ ಚಿತ್ತಾರದ' ಬಟ್ಟೆ ಉಟ್ಟುಕೊಂಡಳು; ತಾನದ ಮನೆಯಿಂದ ಈಚೆಗೆ ಬಂದಳು. ಆಗ ಅವಳ ರೂಪು ನೋಡಿ ಗೌಡೀರ್ಗೆಲ್ಲಾ ಕಣ್ಣಿಗೆ ರಂಜನೆ ಹೊಡೆದ ಹಂಗಾಗಿ ಮೂರ್ಛೆ ಬಂದಂಗಾಯಿತು. ಆಗ ಹೊಸ ಸವತಿ ಯಾಗೋಳ್ನ ಅರಮನೆ ವಳಭಾಗಕ್ಕೆ ದೊಡ್ಡ ಹೊನ್ನಿ ಇದ್ದ ಜಾಗಕ್ಕೆ ಕರಕೊಂಡು ಹೋದರು. ದೊಡ್ಡ ಹೊನ್ನಿ 'ಬಾಳ ರೂಪವಂತೆ ಅಂತ ಹೇಳ್ತಾರಲ್ಲ, ಇವಳು ಹ್ಯಂಗವಳೆ ನೋಡಬೇಕು' ಅಂತ ಕುತೂಹಲದಿಂದ ಈಚೆಗೆ ಬಂದಳು. ಇಬ್ಬರೂ ಒಬ್ಬರನ್ನೊಬ್ಬರು ನೋಡಿದರು. ತಕ್ಷಣವೇ 'ಚಿಕ್ಕಹೊನ್ನೀ' ಅಂತ ದೊಡ್ಡಹೊನ್ನಿ ಮುಂದಕ್ಕೆ ಬಂದು ತಂಗಿಯನ್ನು ತಬ್ಬಿಕೊಂಡಳು.

ತಂಗಿಗೂ ಗಂಡನಿಗೂ ದೊಡ್ಡ ಹೊನ್ನಿ ಬಾಳ ಸಡಗರದಿಂದ ಹಿಂದೂ ಇಲ್ಲ ಮುಂದೂ ಇಲ್ಲ ಅನ್ನೋ ವೈಭೋಗದಿಂದ ಮದುವೆ ಮಾಡಿಸಿದಳು. ಎಲ್ಲರೂ ಸುಖವಾಗಿದ್ದರು.

* * * *

# ಪದ್ಮಾವತಿ*

## ೧

ಒಂದಾನೊಂದು ಕಾಲದಲ್ಲಿ ಒಂದು ಪಟ್ಟಣದಲ್ಲಿ ಒಬ್ಬ ರಾಜನಿದ್ದನು. ರಾಜನಿಗೊಬ್ಬ ಮಗ, ಮಂತ್ರಿಗೊಬ್ಬ ಮಗ. ರಾಜನ ಮಗ ಸ್ವಲ್ಪ ದಡ್ಡ, ಮಂತ್ರಿಯ ಮಗ ಮಹಾ ಬುದ್ಧಿವಂತ. ಇವರಿಬ್ಬರೂ ಒಂದು ದಿನ ಬೇಟೆಗಾಗಿ ಕಾಡಿಗೆ ಹೋದರು. ಆ ಆರಂದ ಅಡವಿಯಲ್ಲಿ ಇಬ್ಬರೂ ಬೇಟೆಯಾಡಿ 'ಕೂರ ಮಿಕ'ಗಳನ್ನು ರಾಶಿರಾಶಿಯಾಗಿ ಕೊಂದು ಕೆಡವಿದರು. ಉಟ್ಟುರು ಮಧ್ಯಾಹ್ನವಾಯಿತು. ಬಾಯೊಣಗಿತು. ಹೊಟ್ಟೆ ತಾಳ ಹಾಕಿತು. ಇಬ್ಬರೂ ನೀರನ್ನು ಹುಡುಕಿಕೊಂಡು ಹೊರಟರು. ಅಲ್ಲೊಂದು 'ಅಮುರ್ತಸಿಲೆ' ಕಲ್ಲಿನಲ್ಲಿ ಕಟ್ಟಿದ ಒಂದು ಚಂದುಳ್ಳಿಯ 'ಕೊಣ' ಕಾಣಿಸಿತು. ಅಲ್ಲಿ ಕುದುರೆಯಿಂದಿಳಿದು ನೀರು ಕುಡಿಸಿದರು. ಮುಟ್ಟಿದರೆ ಕೊರೆಯುವಂತಿದ್ದ ಆ 'ಅಮುರ್ತ'ದಂಥ ನೀರನ್ನು ಇಬ್ಬರೂ ಕುಡಿದು ಕೈಕಾಲು ತೊಳೆದುಕೊಂಡರು. ತಂದಿದ್ದ ಬುತ್ತಿಯನ್ನು ಉಂಡರು. ಸ್ವಲ್ಪ ದೂರದಲ್ಲಿದ್ದ ಒಂದು ದೊಡ್ಡ ಆಲದ ಮರದ ಹತ್ತಿರಕ್ಕೆ ಹೋಗಿ ಕುದುರೆಗಳನ್ನು ಕಟ್ಟಿಹಾಕಿ ಇಬ್ಬರೂ 'ನಳ್ಳಿ'ನಲ್ಲಿ ಮಲಗಿಕೊಂಡರು.

ಸ್ವಲ್ಪ ಹೊತ್ತಾದ ನಂತರ ಸ್ವಭಾವತಃ ಪುಕ್ಕಲನಾದ ರಾಜನ ಮಗನಿಗೆ ಏನೋ ಸದ್ದು ಕೇಳಿದಂತಾಗಿ ಎಚ್ಚರವಾಯಿತು. ಎದ್ದು ಕುಳಿತು ಸುತ್ತಲೂ ನೋಡಿದರು. ಹತ್ತಾರು ಜನ ಕಿಲಕಿಲ ನಕ್ಕಂತಾಯಿತು. ಕೊಳದ ಬಳಿ ಏಳೆಂಟು ಜನ ತುಂಬ ರೂಪವಂತೆಯರಾದ ಕನ್ಯೆಯರು ಒಬ್ಬರನ್ನೊಬ್ಬರು ನೂಕುತ್ತಾ ಚಕ್ಕಳಗುಳಿ ಆಡಿಸುತ್ತಾ 'ಇಪರೀತ' ನಗುವಿನಿಂದ ನಗುತ್ತಾ ಬಟ್ಟೆ ಧರಿಸಿಕೊಳ್ಳುತ್ತಿದ್ದರು. ರಾಜಕುಮಾರ ರೆಪ್ಪೆ ಬಡಿಯದೆ ಅವರನ್ನು ನೋಡಿದ. ಆ ಬಯಲಿನಲ್ಲಿ ನೂರಾರು ಮಿಂಚುಗಳು ಓಡಾಡುತ್ತಿರುವಂತೆ ಅವನಿಗೆ ಅನ್ನಿಸಿತು. ಅಲ್ಲಿದ್ದವರಲ್ಲೊಬ್ಬಳು ಎಲ್ಲರಿಗಿಂತ ಸುಂದರಿಯಾಗಿ ರಂಭೆ ಊರ್ವಶಿಯಂತೆ ಕಾಣುತ್ತಿದ್ದಳು. ಆಕೆ ಸ್ವಲ್ಪ ಹೊತ್ತು ನಿಂತು ಇವನನ್ನೇ ಡಿಟ್ಟಿಸಿ ನೋಡಿದಳು. ನಂತರ ಸರಸರನೆ

* ಹೇಳಿದವರು : ಹಾಸನ ಜಿಲ್ಲೆಯ ಹಂಪಾಪುರದ ಹುಚ್ಚೇಗೌಡ.



ಕೊಳಕ್ಕೆ ಇಳಿದು ಹೋಗಿ ಒಂದು ತಾವರೆ ಹೂವನ್ನು ಹಿಡಿದು ಮೇಲೆ ಬಂದಳು. ಇವನ ಕಡೆ ತಿರುಗಿ ಆ ಹೂವನ್ನು ಒಂದು 'ಸತಿ' ತಲೆ ಮೇಲಿಟ್ಟುಕೊಂಡಳು, ಒಂದು 'ಸತಿ' ಬಾಯಿ ಮೇಲೆ, ಒಂದು 'ಸತಿ' ಕಿವಿಯ ಮೇಲೆ, ಒಂದು 'ಸತಿ' ಎದೆಯ ಮೇಲಿಟ್ಟುಕೊಂಡಳು. ನಂತರ ಸಖಿಯರ ಜೊತೆಯಲ್ಲಿ ಕುಣಿಯುತ್ತಾ ನೆಗೆಯುತ್ತಾ ಹೊರಟುಹೋದಳು.

ಬೆಪ್ಪಾಗಿ ಅವರ ಕಡೆಯೇ ನೋಡುತ್ತಿದ್ದ ರಾಜಕುಮಾರ ಅವರು 'ಪಂಚಂಪಾಡಾಗಿ' ಹೋದ ಮೇಲೆ ಅವನ 'ಸಿನೇಹಿತಗಾರ'ನಾದ ಮಂತ್ರಿ ಕುಮಾರನನ್ನು ತಟ್ಟಿ ಏಳಿಸಿದನು. ಕಣ್ಣುಜ್ಜುತ್ತಾ ಎದ್ದು ಕುಳಿತ ಅವನಿಗೆ ನಡೆದ ಸಂಗತಿಯನ್ನೆಲ್ಲಾ ಹೇಳಿದನು. ಮಂತ್ರಿಕುಮಾರ ಅವನಿಗೆ ರಾಜಕುಮಾರಿಯ ಸಂಜ್ಞೆಗಳನ್ನು ವಿವರಿಸಿ ಹೇಳಿದ:

"ಅವಳು ರಾಜಕುಮಾರಿ, ಅವಳಿಗೆ ನಿನ್ನ ಮೇಲೆ ಮನಸ್ಸಾಗಿದೆ. ನೀನು ಬುದ್ಧಿವಂತನಾದರೆ ತಿಳಿದುಕೊಂಡು ಬರುತ್ತೀಯೆಂದು ಸಂಜ್ಞೆ ಮಾಡಿದ್ದಾಳೆ. ಅವಳು ಎದೆಯ ಮೇಲೆ ತಾವರೆ ಹೂವು ಇಟ್ಟುಕೊಂಡಿದ್ದು ತನ್ನ ಹೆಸರು ಪದ್ಮಾವತಿ ಅಂತ; ಕಿವಿಯ ಮೇಲೆ ಇಟ್ಟುಕೊಂಡಿದ್ದು ತಾನು ಕರ್ನಾಟಕದವಳು ಅಂತ; ಬಾಯಿ ಮೇಲಿಟ್ಕೊಂಡಿದ್ದು ತನ್ನ ತಂದೆ ಹೆಸರು ದಂತಕಾಟ ರಾಜ ಅಂತ ; ತಲೆ ಮೇಲಿಟ್ಟುಕೊಂಡಿದ್ದು ತಾನಿರೋದು ಉಪ್ಪರಿಗೇಲಿ ಅಂತ. ತಿಳೀತಾ? ನಿನಗೆ ಅವಳ್ನ ಮದ್ವೇ ಆಗ್ಬೇಕು ಅಂತ ಮನಸಿದ್ದರೆ, ಏಳು ಹೋಗಾನ". ರಾಜಕುಮಾರ ಸಂತೋಷದಿಂದ ಮಂತ್ರಿಕುಮಾರನನ್ನು ತಬ್ಬಿಕೊಂಡನು. "ನೀನು ಏನಾದ್ರೂ ಮಾಡಿ ಅವಳ್ನ ನನಗೆ ಮದ್ವೆಮಾಡಿಸ್ನೇಬೇಕು, ಇಲ್ದೆ ಇದ್ರೆ ನಾನು ಜೀವಸಹಿತ ಈ ಪರಾಣ ಇಟ್ಕೊಂಡು ಈ ಧರೇ ಮ್ಯಾಲೆ ಇರೋದಿಲ್ಲ" – ಎಂದು ಹೇಳಿದನು. "ನಾನಿವ್ನಿ, ನೀನೇನೂ ಯೇಚ್ನೆ ಮಾಡ್‌ಬ್ಯಾಡ" ಎಂದು ಹೇಳಿ ಮಂತ್ರಿಕುಮಾರ ಗೆಳೆಯನನ್ನು ಕರೆದುಕೊಂಡು ಹೊರಟನು.

## ೨

ದಂತಕಾಟನ ಪಟ್ಟಣ. ಅಲ್ಲಿ ಒಂದು ಅಡುಗೂಲಜ್ಜಿ ಮನೆ. ಅಲ್ಲಿ ಇಲ್ಲಿ ಸುತ್ತಿ ರಾಜಕುಮಾರ ಮತ್ತು ಮಂತ್ರಿಕುಮಾರರಿಬ್ಬರೂ ಆ ಅಜ್ಜಿಯ ಮನೆಗೆ ಬಂದರು. ಅವಳಿಗೆ ಒಂದು ಹಿಡಿ ಚಿನ್ನದ 'ವರ'ಗಳನ್ನು ಕೊಟ್ಟು ತಾವಿರುವವರೆಗೂ ಊಟಕ್ಕೆ ಏರ್ಪಾಟು ಮಾಡಬೇಕೆಂದು ಹೇಳಿದರು. ಆ ಮುದುಕಿ ಸಂತೋಷದಿಂದ ಒಪ್ಪಿಕೊಂಡಳು.

ಒಂದೆರಡು ದಿನ ಕಳೆಯಿತು. ಮುದುಕಿ ದಿನಾ ಹೊತ್ತಾರೆ ಬೇಕುಬೇಕಾದ ಅಡಿಗೆಮಾಡಿ ಅವರಿಬ್ಬರಿಗೂ ಬಡಿಸಿ ತಾನು ಹೂವು ಮಾರಲು ಹೋಗುತ್ತಿದ್ದಳು. ಮಂತ್ರಿಕುಮಾರ ಕೇಳಿದ; "ಅಜ್ಜಮ್ಮ ......ನೀನು ಹಿಂಗೆ ದಿನಾ ಹೂವು ತಕ್ಕೊಂಡು ಹೋಗಿ ಎಲ್ಲಿಗೆ ಮಾರ್ತಿ?" ಮುದುಕಿ ಸಡಗರದಿಂದ ಹೇಳಿದಳು: "ಅಯ್ಯೋ, ನಾನು ಅಲ್ಲಿ ಇಲ್ಲಿ ಯಾಕಪ್ಪಾ ಮಾರಕೆ ಹೋಗ್ಲಿ? ನಾನು ದಿನಾ ದೊರೇಮಗಳಿಗೆ ಹೂವು ತಕ್ಕೊಂಡ್ಹೋಗಿ ಕೊಡ್ತೀನಿ. ಅಯ್ಯೋ ಅಯ್ಯೋ ನಮ್ಮಾ ದೊರೇಮಗಳು ಹ್ಯಂಗವಳೆಗೊತ್ತಾ. ಸುದ್ಧ ಅಪರಂಜಿ. ಕೈತೊಳದು ಮುಟ್ಟಬೇಕು. ನೋಡಕೆ ಎರಡುಕಣ್ಣು ಸಾಲ್ದು. ಬುದ್ಧಿಯೂ ಅಷ್ಟೇಯ. ಅವಳಂಥ ಬುದ್ಧಿವಂತೇರು ಮೂಲೋಕದಲ್ಲೂ ಇಲ್ಲ".

ರಾಜಕುಮಾರ ಕಣ್ಣುಬಾಯಿ ಬಿಟ್ಟು ಕೇಳುತ್ತಿದ್ದ. ಮಂತ್ರಿಮಗ ಹೇಳಿದ: "ಹಂಗಾರೆ ನೋಡಮ್ಮ. ನಾನಿವತ್ತು ಹೂವು ಕಟ್ಟಿಕೊಡ್ತೀನಿ. ತಕ್ಕೊಂಡ್ ಹೋಗಿ ಕೊಡು. 'ಯಾರು ಕಟ್ಟಿದ್ರು' ಅಂತ ಕಳಿದ್ರೆ, 'ಅವತ್ತು ಕೊಣದ ತಾವು ನೀನು ಕಂಡ್ಯಂತಲ್ಲಾ ಅವರು' ಅಂತ ಹೇಳು". ಮಂತ್ರಿಕುಮಾರ ಯಾರಿಗೂ ಗೊತ್ತಿಲ್ಲದ 'ಪರಮಾಷಿ' ರೀತಿಯಲ್ಲಿ ಹೂವು ಕಟ್ಟಿಕೊಟ್ಟನು. ಮುದುಕಿ ತೆಗೆದುಕೊಂಡು ಹೋಗಿ ರಾಜಕುಮಾರಿಗೆ ಕೊಟ್ಟಳು. ಅವಳು ಅದನ್ನು ಮುಡಿಯದೆ ಅತ್ತಿತ್ತ ತಿರುಗಿಸಿ ನೋಡುತ್ತಾ, "ಇವತ್ತು ಏಟೊಂದ್ ಚಂದಾಗಿ ಹೂವು ಕಟ್ಟಿದ್ದೀಯಾ ಅಜ್ಜಿ! ನೀನು ಯಾವತ್ತೂ ಹಿಂಗ್ ಕಟ್ಟಿತ್ತಿಲ್ಲ. ನೀನೇ ಕಟ್ದೋ ? ಇನ್ಯಾರಾದ್ರೂ ಕಟ್ಟಿದ್ರೋ?" ಎಂದು ಕೇಳಿದಳು.

"ನಮ್ಮನೆಗೆ ಯಾರೋ ಬಂದವ್ರೆಕನವ್ವ. ಒಳ್ಳೆ ದೇವಪುರುಸರಂಗೆ ಅವರೆ. ಅವತ್ತು ಕೊಣದ ತಾವು ನೀನು ಕಂಡ್ಯಂತಲ್ಲಾ ಅವರು. ಅವ್ರೇ ಈ ಹೂಮಾಲೆ ಕಟ್‌ಕೊಟ್ರು. ಅಲ್ದೆ ಇದ್ರೆ ಈ ಮುದಿಗೂಬೆಗೆ ಬಂದಾದ ಇಂಥ ವೈನಾಗಿ ಕಟ್ಟಾಕೆ?"

ಈ ಮಾತು ಕೇಳಿದ್ದೇ ತಡ; ರಾಜಕುಮಾರಿ ಮುಖ 'ಕೆಂಡ ಸಂಪಿಗೆ ಹೂವಿನಹಂಗೆ' ಮಾಡಿಕೊಂಡು ಪಕ್ಕದಲ್ಲಿದ್ದ ಕರ್ಪೂರದ ತಟ್ಟೆಯಲ್ಲಿದ್ದ ಕರ್ಪೂರವನ್ನು ಅಂಗೈಗೆ ತೆಗೆದುಕೊಂಡು ಅಜ್ಜಿಯ ಮುಖಕ್ಕೆ ಅಪ್ಪಳಿಸಿದಳು. ಅಜ್ಜಿ ಹೆದರಿದಳು.

"ಅಲಲಾ ಪಾಪಿ ತಲೇಮ್ಯಾಲೆ ಕಲ್ಲು ಅಂತ ನಂಗ್ಯಾಕೆ ಹೊಡೀತೀಯವ್ವ. ಅವರು ಹೇಳಿದ್ರು. ನಾನು ಹೇಳ್ದೆ, ಅಷ್ಟೇಯ. ನಾನು ಇನ್ನುಮೇಲೆ ಹಿಂಗ್ಮಾಡಾಕಿಲ್ಲ" ಎಂದು ಗೋಗರೆದು ಮನೆಗೆ ಬಂದಳು. ನಡೆದ ಸಂಗತಿಯನ್ನು ವಿವರಿಸಿ ತನ್ನ



ಮುಖವನ್ನು ಅವರಿಗೆ ತೋರಿದಳು. ರಾಜಕುಮಾರ ಬೆಪ್ಪಾದ. ಮಂತ್ರಿಕುಮಾರ ಮಾತನಾಡಲಿಲ್ಲ.

ರಾತ್ರಿ ಮಲಗುವಾಗ ಅಳುಮೋರೆಯಿಂದ ಸಪ್ಪೆ ದನಿಯಲ್ಲಿ ರಾಜಕುಮಾರ ಕೇಳಿದ; "ಹಿಂಗ್ಯಾಕ್ ಮಾಡಿದ್ಲು. ನಾನಂತೂ ಊರಿಗೆ ಬರಾಕಿಲ್ಲಾ. ಹೊಳೆಯೋ ಕೆರೆಯೋ ನೋಡ್ಕೊತ್ತೀನಿ. ನೀನು ಊರಿಗೆ ಹೋಗು. ಇನ್ನುಮ್ಯಾಲೆ ಇಲ್ಲಿ ಯಾಕಿರಬೇಕು."

"ನಿಂಗ್‌ಗೊತ್ತಿಲ್ಲ ಸುಮ್ನಿರು. ಕರ್ಪೂರದ ಕೈನಲ್ಲಿ ಮುಖಕ್ಕೆ ಹೊಡ್ಡೀರೋದು ನಮ್ಗೆ ಸುದ್ದಿ ತಿಳಿಸಾಕೆ, 'ಈಗ ತಿಂಗಳ ಬೆಳಕು, ಬರಬ್ಯಾಡಿ ಆ ಮ್ಯಾಲೆ ಬನ್ನಿ" ಅಂತ – ಎಂದು ಮಂತ್ರಿ ಮಗ ಸಮಾಧಾನಪಡಿಸಿದನು.

ಹದಿನೈದು ದಿನಗಳು ಕಳೆದವು. ತಿಂಗಳ ಬೆಳಕು ಹೋಗಿ ಅಮಾವಾಸ್ಯೆಯ ಕತ್ತಲು ಕಾಲಿರಿಸಿತು. ಆ ದಿನ ಮತ್ತೆ ಮಂತ್ರಿಕುಮಾರ ತಾವಿರುವುದನ್ನು ಜ್ಞಾಪಿಸಬೇಕೆಂದು ಅಜ್ಜಿಗೆ ಹೇಳಿದ. ಅವಳು ಹೆದರಿ, "ನಾನು ಹೇಳೋದಿಲ್ಲ. ನಿಮ್ಮ ದಮ್ಮಯ್ಯ ಅಂತೀನಿ. ನನ್ನ ಕೊಂದ್‌ಹಾಕ್ ಬುಡ್ತಾಳೆ" – ಎಂದು ಕೈಮುಗಿದಳು. ಮಂತ್ರಿ ಮಗ ಮತ್ತೊಂದು ಹಿಡಿ ಚಿನ್ನದ ನಾಣ್ಯವನ್ನು ಕೊಟ್ಟು ಅವಳನ್ನು ಸಮಾಧಾನ ಪಡಿಸಿ, "ನೀನೇನೂ ಹೆದರಬೇಡ. ಈ ಸತಿ ಅವಳು ನಿನಗೇನೂ ಮಾಡೋದಿಲ್ಲ" ಎಂದು ಕಳಿಹಿದನು.

ಅಜ್ಜಿ ಉಪ್ಪರಿಗೆಗೆ ಹೋದಳು. ರಾಜಕುಮಾರಿಗೆ ಹೂವನ್ನು ಕೊಟ್ಟಳು. ಅದೂ ಇದೂ ಮಾತನಾಡುತ್ತಾ ಮಧ್ಯದಲ್ಲಿ ಮಾತು ತೆಗೆದು "ಅವತ್ತು ಹೂವು ಕಟ್ಟಿಕೊಟ್ಟಿದ್ರಲ್ಲಾ ಅವರು ಇನ್ನೂ ನಮ್ಮನೇಲೆ ಅವರೆ ಕನವ್ವ. ನಿಂಗೆ ಹೇಳು ಅಂದ್ರು" ಎಂದಳು. ರಾಜಕುಮಾರಿ ಬೆಂಕಿ ಕೆಂಡವಾದಳು.

"ನಿಂಗೆ ಒಂದ್ಸತಿ ಅಲ್ವಾ ಹೇಳೋದು, ಅವ್ರಿವ್ರ ಸುದ್ದಿ ಹೇಳ್‌ಬ್ಯಾಡಾ ಅಂತ" ಎಂದು ಬೆರಳಿನಿಂದ ಕುಂಕುಮವನ್ನು ತೆಗೆದು ಮುದುಕಿಯ ಎದೆಗೂಡಿಗೆ ಒಂದು ಬೊಟ್ಟಿಟ್ಟು ಕಳಿಸಿದಳು. ಅಜ್ಜಿ 'ರಾವು' ಹಿಡಿದವಳಂತೆ ನಡುಗುತ್ತಾ ಮನೆಗೆ ಬಂದು ನಡೆದ ಸಂಗತಿಯನ್ನು ಅವರಿಗೆ ಹೇಳಿ ತನ್ನ ಎದೆಯ ಮೇಲಿದ್ದ ಕುಂಕುಮದ ಬೊಟ್ಟನ್ನು ತೋರಿಸಿದಳು.

ಎಂದಿನಂತೆ ರಾಜಕುವಮಾರ ಆ ಬೊಟ್ಟಿನ ಅರ್ಥವೇನೆಂದು ಮಂತ್ರಿಕುಮಾರನನ್ನು ಕೇಳಿದ.

'ನಾನೀಗ ಮುಟ್ಟಾಗಿವ್ನಿ. ಇನ್ನೈದು ದಿನ ಕಳೆದ ಮೇಲೆ ಬನ್ನಿ' ಅಂತ ಇದರ ಅರ್ಥ' ಎಂದು ಮಂತ್ರಿ ಮಗ ಅರ್ಥ ಹೇಳಿ ಗೆಳೆಯನನ್ನು ಸಮಾಧಾನ

ಮಾಡಿದ. ರಾಜಕುಮಾರ ಐದು ದಿನಗಳನ್ನೂ ಐದು ಯುಗವಾಗಿ ಕಳೆದ. ಐದು ದಿನ ಕಳೆದ ನಂತರ ಮತ್ತೆ ಅಜ್ಜಿಯನ್ನು ಹಣಕೊಟ್ಟು ಪುಸಲಾಯಿಸಿದರು. ಮೊದ ಮೊದಲು ಅವಳು ಒಲ್ಲೆನೆಂದು ಹಿಂಜರಿದರೂ ಕೊನೆಗೆ ಹಣದಾಸೆಯಿಂದ ಒಪ್ಪಿಕೊಂಡಳು.

ಆ ದಿನ ರಾಜಕುಮಾರಿ ತುಂಬ ಸಂತೋಷದಲ್ಲಿದ್ದಳು. ಮುದುಕಿಯ ಅಂಜಿಕೆ ದೂರವಾಯಿತು. ಸ್ವಲ್ಪ ಧೈರ್ಯವಾಗಿಯೇ ತನ್ನ ಮನೆಯಲ್ಲಿ ಇನ್ನೂ ಆ 'ದೇವಪುರುಸ' ಇರುವನೆಂದು ಹೇಳಿದಳು. ಆಕೆ ಇದ್ದಕ್ಕಿದ್ದಂತೆ ಸಿಡಿದು ಬಿದ್ದು.

"ನಿಂಗ್ ಬ್ಯಾರೆ ಕೆಲ್ಸ ಇಲ್ವಾ? ನಿಂಗ್ ಹೇಳೋದು ಇದೇ ಕೊನೆ ಸತಿ. ಇನ್ನೊಂದ್ ಸತಿ ಏನಾದ್ರೂ ನೀನು ಈ ಸುದ್ದಿ ಸಮಾಚಾರ ಹೇಳಿದ್ರೆ, ಹನ್ನೆರಡುಗಂಟೆ ರಾತ್ರೇಲಿ ನಿನ್ನ ತೊಟ್ಲಲ್ಲಿ ತೂಗಿ ಉಪ್ಪರಿಗೆಯಿಂದಾಚೆಗೆ ಎಸದ್ ಬುಡ್ತೀನಿ. ಗೊತ್ತಾಯ್ತೊ? ಜೋಕೆ" ಎಂದು ಗದರಿಸಿದಳು.

ಮುದುಕಿ ಹೆದರಿ, "ನಿನ್ನ ಪಾದದಾಣೆಗೂ ಇನ್ಮೇಲೆ ಆ ಸುದ್ದೀನೆ ಎತ್ತಾಕಿಲ್ಲ ಕನವ್ವ. ಇದೊಂದು ಸತಿ ನನ್ನ ಮಾಫ್ ಮಾಡ್‌ಬುಡು" ಎಂದು ಬೇಡಿಕೊಂಡಳು.

ಮನೆಗೆ ಬಂದು ನಡೆದ ಸಂಗತಿಯನ್ನು ತಿಳಿಸಿ ಕಣ್ಣೀರು ಬಿಡುತ್ತಾ, "ನಿಮ್ಮ ಕೈಮುಗೀತೀನಿ ಕನ್ರಪ್ಪಾ. ಇನ್ನೊಂದಪ ಏನೂ ಹೇಳ್ ಕಳಿಸಬ್ಯಾಡಿ ನನ್ನ ಜೊತೇಲಿ." ಎಂದು ಅಂಗಲಾಚಿದಳು.

ಮಂತ್ರಿಕುಮಾರ ಗುಟ್ಟಾಗೆ ಹೇಳಿದ: "ನೋಡು ಕುಮಾರ, ಇವತ್ತು ನೀನು ನರಿಮೊಖ ನೋಡಿದ್ದೆ ಅಂತ ಕಾಣ್ತದೆ. ರಾಜಕುಮಾರಿ ನಿನ್ನ ಬರಹೇಳಿದ್ದಾಳೆ. ರಾತ್ರಿ ಹನ್ನೆರಡು ಗಂಟೇಲಿ ನೀನು ಅರಮನೆಯ ಉಪ್ಪರಿಗೆ ಹತ್ತಿರ ಹೋಗು. ಮೇಲಿನಿಂದ ಅವಳು ಒಂದು ತೊಟ್ಟಿಲು ಕೆಳಕ್ಕೆ ಇಳೀ ಬುಡ್ತಾಳೆ. ಅದರಲ್ಲಿ ಕೂತು ಮೇಲಕ್ಕೆ ಹೋಗು. ಆದರೆ, 'ಜೋಕೆ, ಅವಳು ಮಹಾ ಬುದ್ಧಿವಂತೆ ..... ಅವಳ ಬಲೇಲಿ ಬಿದ್ದು ನನ್ನ, ರಾಜ್ಯ ಎಲ್ಲಾನೂ ಮರತುಬುಟ್ಟೀಯೆ. ತುಂಬ ಹುಷಾರಾಗಿರು."

ರಾಜಕುಮಾರನಿಗೆ ಸಗ್ಗವೇ ಕೈಗೆ ಸಿಕ್ಕಿದಂತಾಯಿತು. ಸಂತೋಷದಿಂದ ಉಬ್ಬಿಹೋದನು. ರಾತ್ರಿ ಹನ್ನೆರಡು ಗಂಟೆಯಲ್ಲಿ ಇಬ್ಬರೂ ವೇಷ ಮರೆಸಿಕೊಂಡು ಅರಮನೆಯ ಹತ್ತಿರ ಹೋದರು. ಕಾವಲುಗಾರರು ಹನ್ನೆರಡು ಗಂಟೆ ಹೊಡೆದರು. ರಾಜಕುಮಾರಿ ಇದ್ದ ಉಪ್ಪರಿಗೆಯ ಬಳಿಗೆ ಬಂದು ನೆಟ್ಟ ನೋಟದಿಂದ ಮೇಲಕ್ಕೆ ನೋಡುತ್ತ ನಿಂತರು. ಮೇಲಿನಿಂದ ಸರಸರನೆ ಒಂದು ತೊಟ್ಟಿಲು ಇಳಿದು



ಬಂತು. ಮಂತ್ರಿಕುಮಾರ ಧೈರ್ಯ ಹೇಳಿ ರಾಜಕುಮಾರನನ್ನು ಅದರಲ್ಲಿ ಕೂರಿಸಿದನು. ಹಗ್ಗ ಅಲುಗಾಡಿತು. ತೊಟ್ಟಿಲು ಮೇಲಕ್ಕೆ ಹೋಯಿತು. ಮಂತ್ರಿಕುಮಾರ ಹಿಂದಿರುಗಿ ಅಜ್ಜಿಯ ಮನೆಗೆ ಬಂದನು.

೩

ಎರಡು ಮೂರು ತಿಂಗಳು ಕಳೆದವು. ಸ್ನೇಹಿತ ಇವತ್ತು ಬರಬಹುದು ನಾಳೆ ಬರಬಹುದು ಎಂದುಕೊಂಡು ಮಂತ್ರಿ ಮಗ ತುಂಬಾ ಬೇಜಾರಿನಿಂದ ಕಾಲ ತಳ್ಳಿದನು. ಆದರೂ ಅವನು ಬರಲೇ ಇಲ್ಲ. ಇವನಿಗೆ ತುಂಬಾ ಯೋಚನೆ ಹತ್ತಿತು. ಕನಸಿನಲ್ಲಿ ರಾಜ ರಾಣಿಯವರು ಕಾಣಿಸಿಕೊಂಡು 'ನನ್ನ ಮಗನ್ನ ಏನುಮಾಡಿದೆ?' ಎಂದು ಕೇಳಿದರು.

ಬೆಳಗಾಗ ಎದ್ದು ಬೈಲು ಕಡೆಗೆ ಹೋಗಿ ಬಂದು ಅಜ್ಜಿಗೆ ಹೇಳಿದನು: "ನೋಡಜ್ಜಿ, ನಾನು ಒಂದು ವಾಲೆ ಕೊಡ್ತೀನಿ. ಅದ ತಕ್ಕೊಂಡು ಹೋಗಿ ಏನಾದ್ರೂ ಉಪಾಯ ಮಾಡಿ ನನ್ನ ಗೆಳೆಯನಿಗೆ ಕೊಟ್ಬುಡು"

"ಅಯ್ಯಯ್ಯೋ ಅದಾಗಕಿಲ್ಲಕನಪ್ಪಾ. ನಮ್ಮ ದೊರೆ ಮಗಳು ಅವನ್ನ ಸರ್ಪಕಾಯೋ ಹಂಗೆ ಕಾಯ್ತಾ ಅವ್ಳೆ. ಅವನ್ನ ಒಂದು ಗಳಿಗೆ ಬುಟ್ಟು, ಅಳ್ಳಾಡಕ್ಕಿಲ್ಲ. ನಾನು ಅವನಿಗೆ ಇದ ಕೊಡೋದ್ ನೋಡಿದ್ರೆ ಅವ್ಳು ನಿನ್ನೂ ಜೀವಸಹಿತ ಬುಡಾಕಿಲ್ಲ, ನನ್ನೂ ಬುಡಾಕಿಲ್ಲ" – ಮುದುಕಿ ಭೂತ ಕಂಡವಳಂತೆ ನಡುಗಿ ಮಾತಾಡದಳು.

"ನೋಡಜ್ಜಿ, ಇದೊಂದಪ ನಾನು ಹೇಳಿದಂಗೆ ಮಾಡು. ಆ ಮೇಲೆ ನಿಂಗೆ ತೊಂದರೆ ಕೊಡೋದಿಲ್ಲ. ನೀನ್ ಕೇಳಿದಷ್ಟು ಹಣಕೊಟ್ಟು ಹೋಯ್ತೀವಿ." ಎಂದು ಆಸೆ ತೋರಿಸಿ ಪುಸಲಾಯಿಸಿ ಅವಳನ್ನು ಒಪ್ಪಿಸಿ, ಸರಸರನೆ ಒಂದು 'ವಾಲೆ' ಬರೆದುಕೊಟ್ಟನು.

ಅಜ್ಜಿ 'ವಾಲೆ' ತೆಗೆದುಕೊಂಡು ಹೋಗಿ ಸಮಯ ಕಾದು ರಾಜಕುಮಾರಿ ಮೀಯಲು ಹೋದ ವೇಳೆಯಲ್ಲಿ ರಾಜಕುಮಾರನಿಗೆ ಅದನ್ನು ಕೊಟ್ಟಳು. ಅದನ್ನು ನೋಡಿದ ತಕ್ಷಣ ಅವನಿಗೆ 'ಸ್ನೇಹಿತಗಾರನ ಗ್ಯಾನ' ಬಂತು; ತಂದೆ ತಾಯಿಗಳ ನೆನಪಾಯಿತು. ಮುಖ ಸಪ್ಪಗಾಯತು. ರಾಜಕುಮಾರಿ ಮಿಂದು ಬಂದು ಅವನ ಬಾಡಿದ ಮೋರೆಯನ್ನು ಕಂಡಳು. ತಾನಿಲ್ಲದಾಗ ಏನೋ ನಡೋದಿರಬೇಕೆಂದು ಊಹಿಸಿಕೊಂಡಳು. ತುಂಬ ವೈಯ್ಯಾರದಿಂದ ಅವನ ಬಳಿಗೆ ಬಂದು.

'ಏನು ಬಾಳ ಯೇಚ್ನೆ ಮಾಡ್ತಾ ಇದ್ದೀರಲ್ಲ?" ಎಂದು ಕೇಳಿದಳು. ಮೊದಮೊದಲು ಏನೂ ಇಲ್ಲವೆಂದು ಮಾತು ಹಾರಿಸಿದರೂ ಅವಳ ವೈಯ್ಯಾರಕ್ಕೆ

‘ಬಲ್ಮಿಷ್ಟಿ’ಗೆ ಮರುಳಾಗಿ ಮಂತ್ರಿಮಗನ ಸಮಾಚಾರವನ್ನು ಹೇಳಿದನು. ‘ಓಹೋ, ಹಂಗಾದ್ರೆ ಇವನ್ನು ಏನಾರೂ ಮಾಡಿ ನನ್ತಾವಿಂದ ಅವನು ಕರ್‍ಕೊಂಡು ಹೋಯ್ತಾನೆ, ಇರ್ಲಿ’ ಎಂದು ಮನಸ್ಸಿನಲ್ಲಿ ಏನೋ ಗುಣಾಕಾರ ಹಾಕಿಕೊಂಡಳು. ಆದರೂ ಅದನ್ನು ತೋರಗೊಡದೆ,

“ಅಯ್ಯೋ ಅಯ್ಯೋ ಈಟ್ದಿನಗಂಟ ನಂಗೆ ಇದ ಹೇಳ್ನೇ ಬಾರ್ದ? ನಿಮಗೆ ಬೇಕಾದೋನು ನಂಗೂ ನಂಟನೇ ಅಲ್ವಾ? ಬಿರ್‍ನೆ ಹೋಗಿ ನೋಡ್ಕೊಂಡ್ ಬನ್ನಿ, ಏನಾರೂ ಒಪ್ಪು ಒಳ್ಳೆ ಅಡಿಗೆ ಮಾಡಿಕೊಡ್ತೀನಿ” – ಎಂದಳು.

ಸಂಜೆಯಾಯಿತು. ‘ವಡೆ, ವಬ್ಬಿಟ್ಟು, ಕಜ್ಜಾಯ’ಗಳನ್ನು ಮಾಡಿ ಮೂರು ಬುತ್ತಿಗಳನ್ನು ಕಟ್ಟಿಕೊಟ್ಟಳು. ರಾಜಕುಮಾರ ತೆಗೆದುಕೊಂಡು ಅಡುಗೂಲಜ್ಜಿಯ ಮನೆಗೆ ಬಂದನು. ಮಂತ್ರಿಮಗ ಆನಂದದಿಂದ ಗೆಳೆಯನ್ನು ತಬ್ಬಿಕೊಂಡನು. “ನಿನ್ನ ಕಂಡ್ರೆ ಪ್ರೀತಿ ಕನೋ ಅವಳಿಗೆ. ಇಷ್ಟು ದಿವಸ ನಿನ್ನ ಸಮಾಚಾರ ತಿಳಿಸ್ದೇ ಇದ್ದದ್ಕೆ ನನ್ನ ತುಂಬ ಆಕ್ಷೇಪ್ನೆ ಮಾಡಿದ್ಲು. ಏಟೊಂದ್ ತಿಂಡೀ ಮಾಡಿಕೊಟ್ಟವಳೆ ನೋಡು” – ಎಂದು ರಾಜಕುಮಾರ ಬುತ್ತಿಯನ್ನು ಬಿಚ್ಚಿ ತಿಂಡಿಯನ್ನು ಕೊಟ್ಟನು. ಮಂತ್ರಿಮಗ ಹುಸಿನಗೆ ನಕ್ಕು “ನಿನ್ನ ರಾಜಕುಮಾರಿ ಪ್ರೀತಿ ತೋರಿಸ್ತೀನಿ ನೋಡು” ಎಂದು ಒಂದು ಕಜ್ಜಾಯವನ್ನು ತೆಗೆದು ಒಂದು ನಾಯಿಗೆ ಹಾಕಿದನು. ಅದನ್ನು ತಿನ್ನುತ್ತಲೇ ನಾಯಿ ಗರಗರನೆ ಸುತ್ತಿ ಕೆಳಕ್ಕೆ ಬಿದ್ದು ಶಿವನ ಪಾದ ಸೇರಿತು. ರಾಜಕುಮಾರನ ಮುಖ ಒಂದು “ಕಪ್ಪೆ ಚಿಪ್ಪಿನರ’ ಆಯಿತು. ಮಂತ್ರಿಮಗ ಅವನಿಗೆ ಸಮಾಧಾನ ಹೇಳಿ, “ನಾವು ಹಿಂಗೇ ಇದ್ರೆ ಆಗೋದಿಲ್ಲ. ನೀನೋಂದ್ ಕೆಲ್ಸ ಮಾಡು: ರಾತ್ರಿ ಅವಳು ನಿದ್ದೆ ಮಾಡಿದ್ದಾಗ ನಿನ್ನ ಉಗುರಿನಲ್ಲಿ ಅವಳ ಎದೇ ಮೇಲೆ ಮೂರುಗಾಯ ಮಾಡಿ ಅವಳ ಮುತ್ತಿನ ಕಂಠೀಹಾರ ತಕ್ಕೊಂಡ್ ಬಂದುಬುಡು. ಆ ಮೇಲೆ ಹೇಳ್ತೀನಿ” ಎಂದ. ರಾಜಕುಮಾರ ಹಿಂದಿರುಗಿ ಹೋದ.

ಮಧ್ಯರಾತ್ರಿ ಸಮಯ. ಹಾಲಕ್ಕಿ ಹಾಡುತ್ತಿತ್ತು. ರಾಜಕುಮಾರಿ ಮಾನಿದ್ರೆಯಲ್ಲಿ ಮಂಚದ ಮೇಲೆ ಪವಳಿಸಿದ್ದಳು. ರಾಜಕುಮಾರ ಮೆಲ್ಲನೆದ್ದು ಅತ್ತಿತ್ತ ನೋಡಿ ತನ್ನ ಉಗುರುಗಳಿಂದ ಮೆತ್ತಗೆ ಅವಳ ಎದೆಯ ಮೇಲೆ ಮೂರು ಗುರುತುಮಾಡಿ ಕಂಠೀಹಾರವನ್ನು ತೆಗೆದುಕೊಂಡು ತೊಟ್ಟಲಿನಲ್ಲಿ ಕೂತು ಕೆಳಕ್ಕೆ ಇಳಿದನು. ಅಲ್ಲಿ ಮಂತ್ರಿಕುಮಾರ ಕಾದಿದ್ದನು. ಇಬ್ಬರೂ ಊರ ಹೊರಗಿನ ‘ಮಸಾಣ’ಕ್ಕೆ ಹೋದರು. ತಮ್ಮ ಅಲಂಕಾರಗಳನ್ನೆಲ್ಲಾ ತೆಗೆದರು. ಮಂತ್ರಿಮಗ ಸನ್ಯಾಸಿಯಂತೆ ವೇಷ ಹಾಕಿಕೊಂಡನು. ದೊರೆ ಮಗ ಅವನ ಶಿಷ್ಯನಾದನು. ಬೆಳಗಾಗುವವರೆಗೆ ಅಲ್ಲಿಯೇ



ಕೂತು ಏನೇನೋ ಮಾತಾಡಿಕೊಂಡರು.

ಸೂರ್ಯ ಮೂಡಿದ. ‘ಸಿಸ್ಯ’ ಕಂಠೀಹಾರ ತೆಗೆದುಕೊಂಡು ಪಟ್ಟಣದ ಹಾದಿ ಹಿಡಿದನು.

ಪಟ್ಟಣದಲ್ಲೆಲ್ಲಾ ಅದನ್ನು ಹಿಡಿದು ತಿರುಗಿದನು. ಅಷ್ಟೊಂದು ಹಣಕೊಟ್ಟು ಅಂಥ ರವರವನೆ ಉರಿಯುವ ಹಾರವನ್ನು ಕೊಳ್ಳಲು ಯಾರೂ ಮುಂದಾಗಲಿಲ್ಲ. ಅರಮನೆಯ ಪರಿಚಾರಕರು ಅದನ್ನು ಕಂಡು ಅವನನ್ನು ರಾಜನ ಬಳಿಗೆ ಕರೆದುಕೊಂಡು ಹೋದರು. ಆ ಹಾರವನ್ನು ನೋಡಿದ ಕೂಡಲೇ ಅದು ತನ್ನ ಮಗಳದೆಂಬುದು ಖಚಿತವಾಯಿತು. ಕೋಪದಿಂದ ಉರಿಯುತ್ತಾ,

“ಲೇ ಬೂದಿಬಡಕಾ, ನಿನಗೆ ಇದೆಲ್ಲಿ ಸಿಕ್ತು, ಎಲ್ಲಿ ಕದ್ದೆ, ನಿಜ ಹೇಳು. ಇಲ್ದೆ ಇದ್ರೆ ಚಮ್ಡ ಸುಲಿಸ್ಬಿಡಿತೀನಿ” ಎಂದು ಗದರಿಸಿದ. ಅವನು ಸ್ವಲ್ಪವೂ ಹೆದರದೆ,

“ಅದೆಲ್ಲಾ ನಂಗೊತ್ರಿಲ್ಲಾ ಸ್ವಾಮಿ. ಇದ ನಮ್ ಗುರುಗಳು ಕೊಟ್ರು ಮಾರ್‍ಕೊಂಡ್ ಬಾ ಅಂತ. ನಾ ಬಂದೆ. ಬೇಕಾದ್ರೆ ಅವರ ಹತ್ರಕ್ಕೆ ಹೋಗಾನೆ ಬನ್ನಿ” ಎಂದನು. ರಾಜನು ಹಾಗೆಯೇ ಆಗಲೆಂದು ಕೆಲವು ಜನರನ್ನು ಜೊತೆಯಲ್ಲಿ ಕರೆದುಕೊಂಡು ‘ಮಸಾಣಕ್ಕೆ’ ಬಂದನು. ಗುರು ನಿಧಾನವಾಗಿ ಕಣ್ತೆರೆದನು. ರಾಜಕೇಳಿದ:

“ಈ ಕಂಠೀಹಾರ ಎಲ್ಲಿತ್ತು?”

“ರಾತ್ರಿ ಒಂದು ಮಾರಿ ರಾಕ್ಷಸಿ ಬಂದು ಈ ಮಸಾಣದ ಹೆಣಗಳ್ನ ಕಿತ್ಕೊಂಡು ತಿಂತಾ ಇತ್ತು. ಅದರ ಎದೆಗೆ ತ್ರಿಸೂಲದಲ್ಲಿ ತಿವಿದು ಈ ಹಾರ ಕಿತ್ಕೊಂಡೆ.”

ರಾಜ ನೇರವಾಗಿ ಅರಮನೆಗೆ ಬಂದು ಮಗಳಿದ್ದ ಉಪ್ಪರಿಗೆಗೆ ಹೋದ. ಅವಳನ್ನು ಕರೆಸಿ ನೋಡಿದ. ಮುಖ ಕಳೆಗುಂದಿತ್ತು. ಎದೆಯಲ್ಲಿ ಮೂರು ಗಾಯವಾಗಿತ್ತು. ಕೊರಳಲ್ಲಿ ಕಂಠೀ ಹಾರವಿಲ್ಲ. ರಾಜನಿಗೆ ಭಯವಾಯಿತು, ಅವಮಾನವಾಯಿತು. “ಹೆಣಗಳನ್ನೇ ತಿನ್ನುವ ಈ ಮಾರಿ ನನ್ನ ಪ್ರಜೆಗಳನ್ನು ಬಿಟ್ಟಾಳೆ?” ಎಂದುಕೊಂಡ. ತಕ್ಷಣ ಮಂತ್ರಿಯನ್ನು ಕರೆದ. ರಾಜಕುಮಾರಿಯನ್ನು ಕಣ್ಣು ಕಟ್ಟಿ ಊರಿಂದಾಚೆಗೆ ಬಿಡಬೇಕೆಂದು ಅಪ್ಪಣೆ ಮಾಡಿದ. ಈ ಅವಮಾನ ಹೊತ್ತುಕೊಂಡು ಭೂಮಿಗೆ ಭಾರವಾಗಿ ಬದುಕುವುದಕ್ಕಿಂತ ಸಾಯುವುದೇ ಒಳ್ಳೆಯದೆಂದು ಅವನು ನಿರ್ಧರಿಸಿಕೊಂಡನು. ಅರಮನೆಯ ಮುಂದೆ ದೊಡ್ಡ ‘ಅಗ್ನಿ’ಯನ್ನು ಹಾಕಿಸಿದ. ಯಾರು ಎಷ್ಟು ಹೇಳಿದರೂ ಕೇಳದೆ ತನ್ನ ಹೆಂಡತಿಯೊಡನೆ ಅದರಲ್ಲಿ ಧುಮುಕಿಬಿಟ್ಟ.

೪

ರಾಜಕುಮಾರಿಯನ್ನು ಕಣ್ಣು ಕಟ್ಟಿ ಪಟ್ಟಣದ ಹೊರಕ್ಕೆ ನೂಕಿದರು. ಅದನ್ನೇ ಕಾದಿದ್ದ ಮಂತ್ರಿಕುಮಾರ ರಾಜಕುಮಾರರು ಅವಳನ್ನು ಕರೆದುಕೊಂಡು ಹಗಲು ರಾತ್ರಿ ಎನ್ನದೆ ಪ್ರಯಾಣ ಮಾಡಿ ತಮ್ಮ ಊರಿಗೆ ಬಂದರು. ರಾಜರಾಣಿಯರಿಗೆ ಮಗನನ್ನು ನೋಡಿ ಸಂತೋಷವಾಯಿತು. ರಾಜಕುಮಾರಿಯನ್ನು ಮಗನಿಗೆ ಮದುವೆಮಾಡಿಕೊಂಡು ಸುಖವಾಗಿದ್ದರು.

* * * *



# ಮಾಡಿದ್ದುಣ್ಣೋ ಮಾರಾಯ*

೧

ಒಂದೂರಿನಲ್ಲಿ ಒಬ್ಬ ರಾಜ. ಅವನಿಗೆ ಒಬ್ಬಳೇ ಒಬ್ಬಳು ಮಗಳು. ಗಂಡೂ ಹೆಣ್ಣೂ ಎಲ್ಲಾ ಅವಳೇ. ಅಂಗೈಮೇಲೆ ಅರಗಿಣಿ ಸಾಕಿದಂಗೆ ರಾಜ ಅವಳನ್ನು ಸಾಕಿದ್ದ. ಅವಳು ಹೇಳಿದ ಮಾತಿಗೆ ಎದುರುತ್ತರವೇ ಇರಲಿಲ್ಲ. ಒಂದು ದಿನ ಅವಳಿಗೆ ವನ ನೋಡಿಕೊಂಡು ಬರಬೇಕೂ ಅಂತ ಮನಸ್ಸಾಯಿತು. ಅಪ್ಪನಿಗೆ ಹೇಳಿದಳು. ಅವನು "ಅದ್ಕೇನಂತೆ ಹೋಗಿಬುಟ್ಟು ಬಾ" ಅಂದ. ರಾಜಕುಮಾರಿ ಹತ್ತು ಹದಿನೈದು ಜನ ಸಖಿಯರನ್ನು ಕರಕೊಂಡು ಪಲ್ಲಕ್ಕಿಯ ಮೇಲೆ ಕೂತುಗೊಂಡು ವನಕ್ಕೆ ಹೋದಳು. ಅಲ್ಲೊಂದು ಸರೋವರದಲ್ಲಿ ಎಲ್ಲಾ ತಾನ ಮಡಿ ಮಾಡಿ ಕೊಂಡರು. ಬೇಕ್‌ಬೇಕಾದಂಗೆ ಅಲಂಕಾರ ಮಾಡಿಕೊಂಡರು. ತಂದಿದ್ದ ತಿಂಡಿಪಂಡಿ ಎಲ್ಲಾನೂ ತಿಂದುಕೊಂಡರು. ಆಮೇಲೆ ವನ ಸುತ್ತಾಕೆ ಹೊರಟರು. ಆಗ ವನಾದ ವನವೆಲ್ಲ ಚಿಗುರಿ ಹೂಬುಟ್ಟಿತ್ತು. ಅದೆಲ್ಲಾನೂ ನೋಡ್ತಾ ಕೈಗೆ ಸಿಕ್ಕಿದ ಹೂವುಗಳ್ನೆಲ್ಲಾ ತರಕೊಂಡು ತಲೆಗೆ ಮುಡಿಕೊಳ್ತಾ ಹಾಡಿಕೊಂಡು ಅಲ್ಲಿ ಇಲ್ಲಿ ಓಡಾಡಿದರು. ಕಣ್ಣು ಮುಚ್ಚಾಲೆ ಆಡಿದರು. ಹಿಂಗೇ ಆಡ್ತಾ ಆಡ್ತಾ ಅವರಿಗೆ ಎಷ್ಟು ದೂರ ಹೋಗೀವಿ ಅನ್ನೋದೇ ಗೊತ್ತಾಗಲಿಲ್ಲ. ಅಷ್ಟು ದೂರಕ್ಕೆ ಹೊಂಟು ಹೋದರು.

ಅಲ್ಲೊಂದು ತೋಪು. ಅಲ್ಲಿ ಆನೆ ಹುಲಿ ಹಂದಿ ಸಾರಗ ಕಡವೆ ಹುಲ್ಲೆ ಹಿಂಗೆ ಇರೊಂಬತ್ತು ಕೋಟಿ ಪ್ರಾಣಿಗಳೆಲ್ಲಾ ಕೂಡಿಕೊಂಡು ವಾಸಮಾಡ್ತಾ ಇದ್ವೊ. ಇವರು ಆಡ್ತಾಪಾಡ್ತಾ ಗೊತ್ತಿಲ್ದೆ ಆ ತೋಪಿಗೆ ಹೋದರು. ಇವರನ್ನ ನೋಡಿದ್ದೇ ತಡ ಒಂದು ಸಲಗ ಓಡಿಬಂದು ರಾಜಕುಮಾರೀನ ಸೊಂಡಿಲಲ್ಲಿ ಎತ್ಕೊಂಡು ಹೊಂಟ್ ಹೋಯ್ತು. ಸಖಿಯರೆಲ್ಲಾ ಹೆದಿರ್ಕೊಂಡು 'ಸತ್ತೇ ಕೆಟ್ಟೇ' ಅಂತ ಚಲ್ಲಾಪಿಲ್ಲಿಯಾಗಿ ಓಡಿಹೋದರು.

ರಾಜನಿಗೆ ಸುದ್ಧಿ ಗೊತ್ತಾಯಿತು. ರಾಜ ರಾಣಿ ಎಲ್ಲಾ ಗೋಳಾಡಿಕೊಂಡು

* ಹೇಳಿದವರು : ಕೃಷ್ಣ ರಾಜನಗರದ ತಾಲ್ಲೂಕು ಬಡಗನ ಕೊಪ್ಪನ ಶ್ರೀ ಬಿ.ಪಿ. ಮಲ್ಲೇಗೌಡ.

ಅತ್ತರು. ಇಡೀ ದೇಶಕ್ಕೆ ದೇಶವೇ ಕಣ್ಣೀರು ಸುರಿಸಿತು. ಅದೇ ಕೊರಗಿನಲ್ಲಿ ರಾಣಿ ಹಾಸಿಗೆ ಹಿಡಿದಳು. ರಾಜ "ಮೃಗಗಳ ಕೈಯಿಂದ ರಾಜಕುಮಾರಿ ಬುಡಿಸಿಕೊಂಡು ಬಂದೋರ್‍ಗೆ ಅರ್ಧರಾಜ್ಯಕೊಟ್ಟು ಅವಳನ್ನು ಮದುವೆಮಾಡ್ತೀನಿ" ಅಂತ ದೇಶ ದೇಶದಲ್ಲೆಲ್ಲಾ ಡಂಗೂರ ಹೊಡೆಸಿ ಸಾರಿಸಿದ. ಹಲಗೆ ಮೇಲೆಲ್ಲಾ ಬರೆಸಿ ಎಲ್ಲಾ ಕಡೇನೂ ನೆಡಿಸಿದ.

## ೨

ಇನ್ನೊಂದು ಪಟ್ಟಣದಲ್ಲಿ ಇನ್ನೊಬ್ಬ ರಾಜ. ಅವನಿಗೂ ಒಬ್ಬನೇ ಮಗ. ಮಂತ್ರಿಗೆ ಒಬ್ಬ ಮಗ, ಒಂದು ದಿನ ದೊರೆಮಗ ಮಂತ್ರಿಮಗ ಇಬ್ರೂ 'ಗಾಳಿಸವಾರಿ ಮಾಡಿಕೊಂಡು ಬರಾನೆ' ಅಂತ ಮಾತಾಡಿಕೊಂಡು ಕೈಲಿ ಚಂದ್ರಾಯುಧ ಹಿಡಕೊಂಡು ಹೊರಟರು. ಅಲ್ಲಿ ಇಲ್ಲಿ ಸುತ್ತಾಡಿಕೊಂಡು ಒಂದು ದೊಡ್ಡ ಆಲದಮರದ ಅಡೀಗ್ಬಂದು ತಳಾರಿಸಿಕೊಳ್ಳಾಕೆ ಕೂತುಗೊಂಡರು. ಎಷ್ಟೋ ಹೊತ್ತಾದ ಮೇಲೆ ಇನ್ನು ಪಟ್ಟಣಕ್ಕೆ ಹೋಗಾನೆ ಅಂತ ಇಬ್ರೂ ಎದ್ದರು. ಮೇಲೆ ನೋಡಿದರು. ಆ ಮರದ ಕೊಂಬೆಗೆ ಒಂದು ಹಲಗೆ ನೇತಾಕಿತ್ತು. ಅದರಲ್ಲಿ ನೋಡಿದರು : "ಮೃಗಗಳ ಕೈಯಿಂದ ರಾಜಕುಮಾರಿ ಬುಡಿಸಿಕೊಂಡು ಬಂದೋರ್‍ಗೆ ಅರ್ಧರಾಜ್ಯ ಕೊಟ್ಟು ಅವಳನ್ನ ಮದುವೆ ಮಾಡ್ತೀವಿ" ಅಂತ ಅಲ್ಲಿ ಬರೆದಿತ್ತು. ಇಬ್ರೂ ಅದನ್ನ ಓದಿಕೊಂಡರು. ಮಂತ್ರಿಮಗ "ಸರಿ, ಇವಳನ್ನ ಯಾರು ಹುಡಿಕಾಕೆ ಹೋಯ್ತಾರೆ, ನಡಿ ಮನೆಗೆ ಹೋಗಾನೆ" ಅಂದ. ರಾಜಕುಮಾರ "ಇಲ್ಲ ಇಲ್ಲ. ಏನಾದ್ರೂ ಆಗ್ಲಿ, ಅವಳನ್ನ ಹುಡುಕಿ ಕರಕೊಂಡು ಬರಲೇ ಬೇಕು. ಇಲ್ದೇ ಇದ್ರೆ ನಮ್ಮ ರಾಜಕುಲಕ್ಕೆ ಅವಮಾನ" ಅಂದ. "ಬೇಡ" ಅಂತ ಮಂತ್ರಿಮಗ ಎಷ್ಟೋ ಹೇಳಿದ. ದೊರೆಮಗ ಕೇಳಲೇ ಇಲ್ಲ. "ನೀನು ಬೇಕಾದ್ರೆ ಹಿಂತಿರುಗಿ ಹೋಗು. ನಾನು ಮಾತ್ರ ಅದೇನಾದ್ರೂ ಆಗ್ಲಿ, ಅವಳನ್ನ ಹುಡುಕಿಕೊಂಡೇ ಬರ್ತೀನಿ" ಅಂತ ಹಠ ಹಿಡಿದ.

ಇಬ್ಬರೂ ಅಲ್ಲಿ ಇಲ್ಲಿ ಕಾಡು ಮೂಡು ಗುಡಿ ಗೋಪುರ ಎಲ್ಲಾನೂ ಹುಡುಕಿದರು. ಎಲ್ಲೂ ಅವರ ಕಣ್ಣಿಗೆ ಆ ಮೃಗಗಳೇ ಸಂಧಿಸಲಿಲ್ಲ. ಹಿಂಗೇ ಹೋಯ್ತಾ ಇರುವಾಗ ಅಲ್ಲೊಂದು ಕೆರೆ ಸಿಕ್ತು. ಇಬ್ರೂ ಬಾಯಾರಿದ್ರು. ನೀರು ಕುಡುಕೊಂಡು ಮುಂದಕ್ಕೆ ಹೋಗಾನೆ ಅಂತ ಕೆರೆ ಕಡೀಗೆ ಇಳಿದು ನೋಡ್ತಾರೆ: ಅಲ್ಲೊಂದು ಹದಿನಾರು ಮೆಟ್ಟಿನ ಹಗ್ಗಬರೆ ಹುಲಿ ಸೊಂಟಗಂಟ ಅಟ್ಟಲೊಳಕ್ಕೆ ಹೂತುಕೊಂಡದೆ! ಅದು ಬುಡಿಸ್ಲಿ ಅಂತ ಇವರ ಕಡೆ ನೋಡ್ತು. ದೊರೆಮಗ



"ಪಾಪ ಅಟ್ಟಲ್ಲಿ ಹೂಣಿಕೊಂಡದೆ, ಇದ ಮೇಲಕ್ಕೆ ಎತ್ತಾನೆ ಬಾ" ಅಂದ.

"ನಿಂಗೇನು ಹುಚ್ಚೋ ಬೆಪ್ಪೋ? ಇದೇನು ದನವೋ ಎಮ್ಮೋ ಎತ್ತಾಕೆ? ಮೊದಲೇ ಕೆಟ್ಟ ಪ್ರಾಣಿ. ಇದ ಮೇಕೆ ಎತ್ತಿದ್ರೆ ಇಬ್ಬರ್‍ನೂ ಸಿಗಿದು ತಿನ್ಕೊತ್ತದೆ. ಬೇಡ" ಅಂದ ಮಂತ್ರಿಮಗ.

"ಇಲ್ಲ ಇಲ್ಲ. ಹುಲಿಯಾದ್ರೇನು ಮನುಷಾದ್ರೇನು, ಕಷ್ಟದಲ್ಲಿ ಸಿಕ್ಕಿಕೊಂಡಾಗ ಸಹಾಯ ಮಾಡ್ಬೇಕು. ನೀನು ಬಂದ್ರೆ ಬಾ, ಬರದೇ ಇದ್ರೆ ನಾನೊಬ್ನೇ ಎತ್ತುತ್ತೀನಿ" ಅಂತ ಹೇಳಿ ದೊರೆಮಗ ಕೆರೆವಳಕ್ಕೆ ಇಳಿದ. ಹಿಂದಿನಿಂದ ಮಂತ್ರಿಮಗನೂ ಬಂದ. ಇಬ್ರೂ ಸೇರಿ ಮುಕ್ಕುರಕೊಂಡು ಆ ಹುಲಿ ಎತ್ತಿ ದಡಕ್ಕೆ ತಂದರು. ಅದು ಇದ್ದಕ್ಕಿದ್ದಂಗೇ ಮನುಷ್ಯನ ರೂಪ ತಾಳ್ತು. ಅವರಿಗೆ ಬಾಳ ಆಶ್ಚರ್ಯವಾಯಿತು. ಆಗ ಅದು ಹೇಳಿತು: "ನಾನು ದೇವಲೋಕದ ಗಂಧರ್ವ. ಶಾಪದಿಂದ ನಾನು ಹುಲಿಯಾಗಿದ್ದೆ. ನಿಮ್ಮ ದೆಸೆಯಿಂದ ನನ್ನ ಶಾಪ ಹೋಯ್ತು. ನಿಮ್ಮ ಉಪಕಾರಕ್ಕೆ ನಾನು ಏನು ಕೊಟ್ರೂ ಸಾಲದು, ಈಗ ನಿಮಗೆ ಏನು ಬೇಕು ಹೇಳಿ"

ರಾಜಕುಮಾರ ಹೇಳಿದ: "ಒಬ್ಬಳು ರಾಜಕುಮಾರೀನ ಮೃಗಗಳು ತಕ್ಕೊಂಡು ಹೋಗಿ ಬುಟ್ಟವೆ. ಅವಳ್ನ ಬುಡಿಸಿಕೊಡಬೇಕು. ನಮಗೆ ಅಷ್ಟೇ ಸಾಕು. ಇನ್ನೇನೂ ಬೇಡ."

ಗಂಧರ್ವ ಒಂದು ಗಳಿಗೆ ಯೋಚನೆ ಮಾಡಿ "ಅಲ್ಲಿ ಕಾಣ್ತಾ ಅದಲ್ಲ ಬೆಟ್ಟ, ಆ ಬೆಟ್ಟದ ಕಿಬ್ಬಿಲಿ ಅವು ರಾಜಕುಮಾರೀನ ಮಡಗಿಕೊಂಡವೆ. ಅವಳಿಗೆ ಏನೂ ಮಾಡಿಲ್ಲ. ಬಾಳ ಪ್ರೀತಿಯಿಂದ ನೋಡಿಕೊಳ್ತಾ ಅವೆ. ನೀವು ನಾಳೆ ಅಲ್ಲಿಗೆ ಬಂದು ಒಂದು ಮರದ ಮೇಲೆ ಕೂತುಗೊಂಡಿರಿ. ನಾನು ಸಿಂಹವಾಗಿ ಬರ್ತೀನಿ. ನನ್ನ ಕಂಡು ಅವೆಲ್ಲಾ ಓಡಿಹೋಗ್ತವೆ. ಆಗ ನೀವು ಅವಳ್ನ ಕರಕೊಂಡು ಬನ್ನಿ" ಅಂತ ಹೇಳಿ ಮಾಯವಾಗಿ ಹೊಂಟ್‌ಹೋಯ್ತು.

ಹೊತ್ತಾರೆ ಮಸುವಿಗೆ ಎದ್ದು ರಾಜನ ಮಗ ಮಂತ್ರಿ ಮಗ ಇಬ್ರೂ ಆ ಬೆಟ್ಟದಿಂದ ಆಚೆ ಕಿಬ್ಬೀಗೆ ಹೋಗಿ ಒಂದು ಎತ್ತರವಾದ ಮರದ ಮೇಲೆ ಕೂತುಗೊಂಡರು. ಆ ಕಡೆಗೆ ತಿರುಗಿ ನೋಡ್ತಾರೆ: ಆನೆ ಹುಲಿ ಕರಡಿ ಹಂದಿ ಸಾರಗ ಕಡವೆ ಮುಂತಾದ ಎಲ್ಲಾ ಪ್ರಾಣಿಗಳೂ ಗುಂಪುಗುಂಪಾಗಿ ನಿಂತವೆ ! ಮಧ್ಯದಲ್ಲಿ ಒಂದು ಬಂಡೆ ಮೇಲೆ ರಾಜಕುಮಾರಿ ಖುಷಿಯಾಗಿ ನಗ್‌ನಗ್ತಾ ಕೂತವಳೆ ! ಅವಳ ಸುತ್ತಲೂ ಬಾಳೆಗೊನೆ ಹಳಸಿನ ಹಣ್ಣು ಮಾವಿನ ಹಣ್ಣು ಬೇಲದ ಹಣ್ಣು ಹಿಂಗೆ ಕಣ್ಣಿಗೆ ಬೇಕಾದ ಹಣ್ಣೆಲ್ಲಾ ತುಂಬಿ ರಾಶಿಯಾಗಿ ನಿಂತವೆ! ಅವರ ಕಣ್ಣನ್ನೇ ಅವರಿಗೆ ನಂಬಾಕಾಗಲಿಲ್ಲ.

ಅಷ್ಟು ಹೊತ್ತಿಗೆ ಗಂಧರ್ವ ದೊಡ್ಡ ಸಿಂಹನ ವೇಷ ತಾಳಿಕೊಂಡು ಗರ್ಜಿಸುತ್ತಾ ಬಂದ. ಆ ಸಿಂಹ ನೋಡಿದ ಕೂಡಲೇ ಎಲ್ಲಾ ಪ್ರಾಣಿಗಳೂ ಒಂದೇ ಅರೆಕ್ಷಣಕ್ಕೆ ಪಂಚಾಂಪಾಡಾಗಿ ಬುಟ್ಟವು. ರಾಜಕುಮಾರಿ ಒಬ್ಬಾನೊಬ್ಬಳೇ ಆಗಿ ಹೆದರಿ ಕಿರಿಚಿಕೊಂಡಳು. ಆಗ ದೊರೆ ಮಗ ಮಂತ್ರಿ ಮಗ ಇಬ್ಬರೂ ಮರ ಇಳಿದು ಬಂದರು. ಸಿಂಹನಾಗಿದ್ದ ಗಂಧರ್ವ ಮತ್ತೆ ಮೊದಲ ರೂಪ ತಾಳಿದ. ರಾಜಕುಮಾರ ರಾಜಕುಮಾರಿ ಹತ್ರಕ್ಕೆ ಹೋಗಿ "ನೀನೇನೂ ಹೆದರಬೇಡ. ನಾವು ನಿನ್ನ ಬುಡಿಸಾಕೆ ಸಲುವಾಗೇ ಬಂದಿವಿ" ಅಂದ, ಆಗ ಗಂಧರ್ವ ರಾಜಕುಮಾರನಿಗೆ,

"ನೀನು ಈ ಸಾರಿ ಇವಳನ್ನು ಕರಕೊಂಡು ಹೋಗು, ಸುಖವಾಗಿ ಬದುಕು. ನಿನಗೇನಾದ್ರೂ ಕಷ್ಟಬಂದ್ರೆ ನನ್ನ ನೆನಕೋ" ಅಂತ ಹೇಳಿ ಮಾಯವಾಗಿ ಹೋದ.

ರಾಜಕುಮಾರಿ "ಅವು ಪ್ರಾಣಿಗಳಾದ್ರೂ ನನ್ನ ಒಂದು ತಲೆಗೂದಲೂ ಕೊಂಕದ ಹಂಗೆ ಮಗಳಿಗಿಂತ ಹೆಚ್ಚಾಗಿ ಪ್ರೀತಿಯಿಂದ ಸಾಕ್ಕೊಂಡಿದ್ದೊ" ಅಂತ ಕಣ್ಣೀರು ತುಂಬಿಕೊಂಡಳು.

"ಅಲ್ಲಿ ನಿಮ್ಮ ಅಪ್ಪ ಅವ್ವ ನಿನ್ನ ಯೋಚನೇಲೇ ಅನ್ನ ಸೊಪ್ಪು ಏನೂ ತಿನ್ನದೆ ಕೊರಗ್ತಾ ಮಲಗಿಬುಟ್ಟವ್ರೆ. ಅಲ್ಲಿಗೆ ಹೋಗಾನೆ ಬಾ" ಅಂತ ಸಮಾಧಾನ ಹೇಳಿ ರಾಜಕುಮಾರ ಅವಳನ್ನು ಕರಕೊಂಡು ಹೊರಟ. ಮಂತ್ರಿ ಮಗನೂ ಜೊತೆಯಲ್ಲಿ ಹೋದ.

ದಾರಿಯಲ್ಲಿ ಹೋಗ್ತಾ ಹೋಗ್ತಾ ರಾಜಕುಮಾರನಿಗೆ ತುಂಬಾ ಬಾಯಾರಿಕೆಯಾಯಿತು. ಸುತ್ತ ಮುತ್ತ ಎಲ್ಲೂ ನೀರು ಸಿಕ್ಕಲಿಲ್ಲ. ಅವನು ಮಂತ್ರಿ ಮಗನಿಗೆ "ನೀನೂ ಇವಳೂ ಈ ಮರದ ಅಡೀಲಿ ಕೂತಿರಿ, ನಾನು ಎಲ್ಲಾದ್ರೂ ನೀರು ಇದೆಯೋ ನೋಡಿ ಕುಡುಕೊಂಡ್ ಬರ್ತೀನಿ," ಅಂತ ಹೇಳಿ ಹೋದ. ಅವರಿಬ್ಬರೂ ಆ ಅಳ್ಳೀ ಮರದ ಅಡೀಲಿ ಕೂತುಗೊಂಡರು. ಆ ಮರದ ಮೇಲೆ ಒಂದು ಬ್ರಹ್ಮ ರಾಕ್ಷಸ ವಾಸ ಮಾಡಿಕೊಂಡಿತ್ತು. ರಾಜಕುಮಾರೀನ ನೋಡುತ್ತಿದ್ದ ಹಂಗೇ ಅವನು 'ಹಾ' ಅಂತ ಮರದಿಂದ ಧುಮುಕಿ ಅವಳ್ನ ಹೊತ್ತುಕೊಂಡು ಓಡಿ ಹೋದ. ಅದು ಬಂದ ರಭಸಕ್ಕೇ ಹೆದರಿ ಸತ್ತವನಂತೆ ಮಂತ್ರಿ ಮಗ ನೆಲ ಕಚ್ಚಿದ.

ನೀರು ಕುಡಿಯಾಕೆ ಹೋಗಿದ್ದ ರಾಜಕುಮಾರ ಹಿಂತಿರುಗಿ ಬಂದು ನೋಡ್ತಾನೆ: ಮಂತ್ರಿ ಮಗ ಮೊಖಾಡೆ ಬಿದ್ದವ್ನೆ ! ರಾಜಕುಮಾರಿ ಇಲ್ಲವೇ ಇಲ್ಲ!



ಅವನಿಗೆ ಬಾಳ ಆಶ್ಚರ್ಯವಾಯಿತು. ಮಂತ್ರಿ ಮಗನ್ನ ಅಲ್ಲಾಡಿಸಿ ಏಳಿಸಿದ. ಅವನು ಮೆತ್ತಗೆ ತಲೆಯೆತ್ತಿ ನೋಡಿದ. "ರಾಜಕುಮಾರಿ ಎಲ್ಲಿ?" ಅಂತ ಕೇಳಿದ.

"ನಾವು ಕೂತಿದ್ದೊ, ಯಾವುದೋ ರಾಕ್ಷಸ ಇದ್ದಕ್ಕಿದ್ದಂಗೆ ಬಂದು ಗಬಕ್ ಅಂತ ರಾಜಕುಮಾರೀನ ಎತ್ತಿಗೊಂಡು ಹೊಂಟೋಯ್ತು" ಅಂದ ಮಂತ್ರಿ ಮಗ.

'ಈಗ ಏನು ಮಾಡೋದು? ಇಷ್ಟು ಕಷ್ಟಪಟ್ಟದ್ದೆಲ್ಲಾ ಹೊಳೇಲಿ ಹುಣಿಸೇ ಹಣ್ಣು ಕದರಿದಂಗೆ ಆಗೋಯ್ತು' ಅಂತ ರಾಜಕುಮಾರ ಯೋಚನೆ ಮಾಡಿದ. ಇಬ್ರೂ ಎದ್ದು ಅಲ್ಲಿ ಇಲ್ಲಿ ಹುಡುಕಿದರು. ಎಲ್ಲೂ ಅವಳ ಸುಳಿವು ಕಾಣಲಿಲ್ಲ. ಆಗ ರಾಜಕುಮಾರ ಗಂಧರ್ವನನ್ನ ನೆನೆದುಕೊಂಡ ತಕ್ಷಣ ಅವನು ಪ್ರತ್ಯಕ್ಷನಾದ. "ನನ್ನ ಯಾತಕ್ಕೆ ನೆನೆದೆ?" ಅಂತ ಕೇಳಿದ.

ರಾಜಕುಮಾರ ನಡದ ಸಂಗತಿ ಹೇಳಿದ. ಗಂಧರ್ವ ಒಂದು ಗಳಿಗೆ ಯೋಚನೆ ಮಾಡಿ, "ಇದು ಬ್ರಹ್ಮ ರಾಕ್ಷಸನ ಕೆಲಸ. ಅದು ರಾಜಕುಮಾರಿ ತಕ್ಕೊಂಡು ಹೋಗಿ ಪಾತಾಳ ಲೋಕದಲ್ಲಿ ಮಡಗಿಕೊಂಡದೆ. ನೀವು ಹೋಗಿ ರಾಜನ ಹತ್ರ ಹೇಳಿ ಒಂದು ಯೋಜನ ಉದ್ದದ ಸರಪಣಿ ಮಾಡಿಸಿಕೊಂಡು ಬನ್ನಿ. ಆ ಮೇಲೆ ಹೇಳ್ತೀನಿ" ಅಂದ.

ಸರಿ, ಇಬ್ರೂ ಆ ರಾಜನ ಹತ್ರಕ್ಕೆ ಹೋದರು. ನಡೆದ ಸಂಗತೀನೆಲ್ಲ ತಿಳಿಸಿದರು. "ರಾಜಕುಮಾರೀನ ಕರಕೊಂಡು ಬರ್ತೀವಿ. ಸರಪಣಿ ಮಾಡಿಸಿಕೊಡಿ" ಅಂದರು. ಅವನಿಗೆ ತನ್ನ ಮಗಳು ಸಿಕ್ತಾಳೆ ಅನ್ನೋ ಸುದ್ದಿ ಕೇಳಿ ಕೈಲಾಸವೇ ಭೂಮಿಗೆ ಇಳದಂಗಾಯಿತು. ಆ ಸಂತೋಷದಲ್ಲಿ ಒಂದೇ ದಿನದಲ್ಲಿ ಒಂದು ಯೋಜನ ಉದ್ದದ ಸರಪಣಿ ಮಾಡಿಸಿಕೊಟ್ಟ. ಅದನ್ನ ತಕ್ಕೊಂಡು ಇಬ್ಬರೂ ಬಂದರು. ಮತ್ತೆ ಗಂಧರ್ವನ್ನ ನೆನೆದರು. ಅವನು ಪ್ರತ್ಯಕ್ಷನಾದ. ಇವರ್ನ ಕರಕೊಂಡು ಒಷ್ಟು ದೂರ ಹೋದ. ಅಲ್ಲೊಂದು ಬಾವಿಯಂಥ ಜಾಗ ಇತ್ತು. ಅದನ್ನು ತೋರಿ "ಒಬ್ಬರು ಮೇಲೆ ನಿಂತುಕೊಂಡು ಸರಪಳಿ ಹಿಡಕೊಳ್ಳಿ. ಇನ್ನೊಬ್ಬರು ಅದನ್ನ ಹಿಡಕೊಂಡು ಇದರೊಳಕ್ಕೆ ಇಳಿದು ಹೋಗಿ. ಇದೇ ರಾಕ್ಷಸನ ಪಾತಾಳದ ಮನೆಯ ಬಾಗಿಲು. ಇದರ ವಳಗೇ ರಾಜಕುಮಾರಿ ಅವಳೆ. ಅವಳನ್ನ ಕರಕೊಂಡು ಉಪಾಯವಾಗಿ ಹೊಂಟ್ ಹೋಗಿ" ಅಂತ ಹೇಳಿ ತಾನು ಮಾಯವಾದ.

ಮಂತ್ರಿಮಗ ಮೇಲೆ ನಿಂತುಕೊಂಡು ಸರಪಣಿ ಹಿಡಕೊಂಡ. ರಾಜಕುಮಾರ ಅದನ್ನ ಹಿಡಕೊಂಡು ಸರಸರನೆ ಕೆಳಕ್ಕೆ ಇಳಿದು ಹೋದ. ಅಲ್ಲಿ ಹೋಗಿ ನೋಡ್ತಾನೆ : ಮುತ್ತು ರತ್ನ ಬಂಗಾರದಿಂದ ಮಾಡಿದ ಅರಮನೆ ! ಅವನ ಕಣ್ಣು

ಅವನೇ ನಂಬಲಿಲ್ಲ. ಆಗ ಬ್ರಹ್ಮ ರಾಕ್ಷಸ ಅಲ್ಲಿ ಇರಲಿಲ್ಲ. ಎಲ್ಲೋ ಹೊರಕ್ಕೆ ಹೋಗಿದ್ದ. ಮೊದಲು ರಾಜಕುಮಾರಿ ಕಾಣಿಸಿಕೊಂಡಳು. ಅವನ್ನ ನೋಡಿ ಅವಳಿಗೆ ಆನಂದವಾಯಿತು. ಅವಳಿಗಿಂತ ಮುಂಚೆ ರಾಕ್ಷಸ ಇನ್ನೊಬ್ಬಳನ್ನ ಹೊತ್ತುಗೊಂಡು ಹೋಗಿ ಅರಮನೇಲೆ ಇಟ್ಕೊಂಡಿತ್ತು. ಅವಳೂ ಅಲ್ಲೇ ಇದ್ದಳು. ಅವರಿಬ್ರೂ ಹಣೆ ಹಣೆ ಚಚ್ಚಿಗೊಂಡು "ಅಯ್ಯೋ ಯಾಕ್ ಬಂದ್ರಿ ಇಲ್ಗೆ ? ಈ ಬ್ರಹ್ಮ ರಾಕ್ಷಸ ನಿಮ್ಮನ್ನ ಸುಮ್ನೇಬುಟ್ಟಾತ? ಈಗ ಏನ್ಮಾಡೋದು?" ಅಂತ ಪರದಾಡಿದರು ರಾಜಕುಮಾರ "ನೀವೇನೂ ಹೆದರಬೇಡಿ" ಅಂದ. ರಾಕ್ಷಸ ಬರೋ ಹೊತ್ತಾಯಿತು. ಅವನು ಅಟ್ಟದ ಮೇಲಕ್ಕೆ ಹೋಗಿ ಚಂದ್ರಾಯುಧ ಹಿಡಕೊಂಡು ಕೂತುಗೊಂಡ. ರಾಕ್ಷಸ ಬಂದದ್ದೇ ತಡ ಮೂಗು ಮೇಲೆತ್ತಿಕೊಂಡು "ಇದೇನು ಹೊಸಗವಲು ಹೊಸಗವಲು" ಅಂದ.

"ಹೊಸಗವಲೂ ಇಲ್ಲ ಗಿಸಗವಲೂ ಇಲ್ಲ. ನೀನು ಸುಮ್‌ಸುಮ್ನೆ ಹಂಗಾಡ್ತೀಯಾ. ಇಲ್ಗೆ ಒಂದು ನೊಣ ತಾನೇ ಬಂದಾತ?" ಅಂದ್ರು ಅವರು.

ರಾಕ್ಷಸ ಊಟಕ್ಕೆ ಕೂತುಕೊಂಡ. ರಾಶಿ ರಾಶಿ ಅನ್ನ ತಂದು ಸುರಿದರು. ಕೊಳಗಗಟ್ಲೆ ಸಾರು ಸುರಿದರು. ಹಂಡೆಗಟ್ಲೆ ತುಪ್ಪ ಸುರಿದರು ರಾಕ್ಷಸ ಎಲ್ಲಾನೂ ಒಂದು ಗಳಿಗೇಲಿ ತಿಂದು ಥರ್ ಅಂತ ತೇಗಿ ಅಲ್ಲೇ ಕಾಲುನೀಡಿಕೊಂಡು ಬಿದ್ದುಕೊಂಡ. ಇನ್ನೊಂದು ಗಳಿಗೇಲಿ ಗೊಟರ್ ಗೊಟರ್ ಅಂತ ಗೊರಕೆ ಹೊಡಿಯಾಕೆ ಷುರುಮಾಡಿದ. ಆಗ ರಾಜಕುಮಾರ ಮೆತ್ತಗೆ ಅಟ್ಟದ ಮೇಗಳಿಂದ ಇಳಿದು ಬಂದ. ಅವನ ಹತ್ರಕ್ಕೆ ಹೋಗಿ ಚಂದ್ರಾಯುಧ ಎತ್ತಿ ಕತ್ತಿಗೆ ಬುಟ್ಟ. ರಾಕ್ಷಸ ಎರಡು ತುಂಡಾದ. ರಾಜಕುಮಾರಿಯರಿಬ್ಬರಿಗೂ ತಮ್ಮ ಬಂಧನ ಹೋಯ್ತು ಅಂತ ಅಪರಿಮಿತ ಸಂತೋಷವಾಯಿತು.

ರಾಜಕುಮಾರಿಯರಿಬ್ಬರ್ನೂ ಮೇಲಕ್ಕೆ ಹತ್ತಿಸಿ ತಾನೂ ಹತ್ತಿ ಬಂದ. ಆಗಲೆ ಅವನಿಗೆ ನೆನಪಾಯಿತು – ತಾನು ಚಂದ್ರಾಯುಧ ಪಾತಾಳಲೋಕದಲ್ಲೇ ಮರೆತು ಬಂದಿಪ್ನಿ ಅಂತ. ಮಂತ್ರಿಮಗನಿಗೆ "ನೀನು ಸರಪಣಿ ಹಿಡಕೊಂಡಿರು. ನಾನು ಬೇಗ ಬೇಗ ಹೋಗಿ ಚಂದ್ರಾಯುಧ ತಕ್ಕೊಂಡು ಬಂದ್ ಬುಡ್ತೀನಿ" ಅಂತ ಹೇಳಿ ರಾಜಕುಮಾರ ಸರಸರನೆ ಕೆಳಗಿಳಿಯೋಕೆ ಷುರುಮಾಡಿದ. ಆ ಗಳಿಗೇಲಿ ಮಂತ್ರಿ ಮಗನಿಗೆ "ಇವನ್ನ ಏನಾದ್ರೂ ಮಾಡಿ ಸಾಯಿಸಿಬಿಟ್ಟು ಈ ರಾಜಕುಮಾರಿಯರ್ನ ತಾನು ಹೊಡಕೊಂಡು ಹೋಗಬೇಕು" ಅನ್ನೋ ದುರ್ಬುದ್ಧಿ ಹುಟ್ಟಿಬುಡ್ತು. ರಾಜಕುಮಾರ ಧಡೀರ್ ಅಂತ ಪಾತಾಳಕ್ಕೆ ಬಿದ್ದು ಬುಟ್ಟ. ಅವನ ಮೈ ಕೈ ಎಲ್ಲಾ ನಜ್ಜು ಗುಜ್ಜಿಯಾಗೋಯ್ತು.



೩

ರಾಜಕುಮಾರಿಯರಿಬ್ರೂ ಮಂತ್ರಿ ಮಗನ್ನ ತರಾಟೆಗೆ ತಕ್ಕೊಂಡರು: "ನೀವು ಯಾಕೆ ಸರಪಣಿ ಬುಟ್ಟು ಅವರ್ನ ಕೆಳಕ್ಕೆ ಕೆಡವಿದಿರಿ ? ಸ್ನೇಹಿತರು ಸ್ನೇಹಿತರಿಗೆ ಹಿಂಗೆ ಮಾಡಬುಹುದಾ?" ಅಂತ. ಅವನು "ಇಲ್ಲ ಇಲ್ಲ. ನಾನು ಬೇಕೂ ಅಂತ ಮಾಡಲಿಲ್ಲ. ಕೈತಪ್ಪಿ ಸರಪಣಿ ಉರುಚಿಕೊಂಡು ಬುಡ್ತು. ನಾನೇನ್ ಮಾಡ್ಲಿ?" ಅಂದ.

"ಹಂಗಾದ್ರೆ ಈಗ ಏನ್‌ಮಾಡೋದು?" ರಾಜಕುಮಾರಿಯರು ಕೇಳಿದರು.

"ಈಗ ಏನೂ ಮಾಡಕಾಗೋದಿಲ್ಲ. ಈಗ ನಮಗೆ ಇಲ್ಲಿಗೆ ಇಳಿಯಾಕೂ ಆಗೋದಿಲ್ಲ. ಇಳಿದ್ರೂ ರಾಜಕುಮಾರ ಇಷ್ಟು ದೂರದಿಂದ ಬಿದ್ದ ಮೇಲೆ ಸತ್ತೂ ಹೋಗಿರ್ತಾನೆ. ಇನ್ನು ಯೋಚನೆ ಮಾಡಿ ಏನೂ ಪ್ರಯೋಜನವಿಲ್ಲ" ಅಂತ ಹೇಳಿ ಅವರನ್ನ ಸಮಾಧಾನಪಡಿಸಿ ಕರಕೊಂಡು ರಾಜಕುಮಾರಿಯ ಪಟ್ಟಣಕ್ಕೆ ಹೋದ. ಆ ರಾಜನಿಗೆ "ನಾನೇ ಅವರಿಬ್ರನ್ನೂ ಬುಡಿಸಿಕೊಂಡು ಬಂದೆ" ಅಂತ ಹೇಳಿದ. "ರಾಜಕುಮಾರ ರಾಕ್ಷಸನ ಜೊತೆ ಹೊರಾಡ್ತಾ ಸತ್ತುಹೋದ. ಇನ್ಯಾರಾದ್ರೂ ಅವನ ಹೆಸರು ಗಿಸರು ಹೇಳಿಕೊಂಡು ಇಲ್ಲಿಗೆ ಬಂದ್ರೂ ಬರಬಹುದು. 'ಹಂಗೇನಾದ್ರೂ ಬಂದರೆ ಕೈಕಾಲು ಕತ್ತರಿಸಿ ಹಾಳು ಬಾವಿಗೆ ಎಸೀರಿ' ಅಂತ ನಿಮ್ಮ ಗಡೀ ಕಾವಲಿನೋರಿಗೆ ಹೇಳಿಬುಡಿ" ಅಂತ ಹೇಳಿದ. ರಾಜ ಅವನು ಹೇಳಿದ್ದೆಲ್ಲಾ ನಿಜ ಅಂತ ತಿಳುಕೊಂಡು ಅವನು ಹೇಳಿದಂಗೆ ಮಾಡಿದ.

ಇನ್ನು ಮಂತ್ರಿ ಮಗನಿಗೆ ರಾಜಕುಮಾರಿಯರ್ನ ಲಗ್ನ ಮಾಡಿ ಅರ್ಧ ರಾಜ್ಯ ಕೊಡಬೇಕೂಂತ ರಾಜ ನಿರ್ಧಾರ ಮಾಡಿದ. ಆಗ ರಾಜಕುಮಾರಿಯರು ಹೇಳಿದರು :

"ನಾವು ಇನ್ನೊಂದು ತಿಂಗಳಗಂಟ ವ್ರತ ಹಿಡಿದಿದ್ದೀವಿ. ಅದು ಮುಗಿಯೋ ಗಂಟ ನಾವು ಯಾರ್ನೂ ಮದುವೆಯಾಗೋದಿಲ್ಲ. ಏನಾದ್ರೂ ಹಿಡಿಬಿಟ್ಟೆ ಮಾಡಿದ್ರೆ ಪ್ರಾಣತಕ್ಕೊತ್ತೀವಿ."

ರಾಜ ಅವರ ಮಾತಿಗೆ ಹೆದರಿ "ನೀವು ಹೇಳಿದಂಗೇ ಆಗಲಿ" ಅಂತ ಸುಮ್ಮನಾದ.

ಇತ್ಲಾಗಿ ರಾಜಕುಮಾರನಿಗೆ ಕೈಕಾಲೆಲ್ಲ ಮುರುದುಹೋಗಿ ಮೈಯೆಲ್ಲಾ ಮುದ್ದೆ ಆದಂಗೆ ಆಗೋಯ್ತು. ಆ ನೋವಿನಿಂದ ಜೋರಾಗಿ ನರಳ್ತಾ ಬಿದ್ದುಕೊಂಡ. ಎಷ್ಟೋ ಹೊತ್ತಿನ ಮೇಲೆ ಅವನಿಗೆ ಗ್ಯಾನ ಬಂತು. ಆ ಮೇಲೆ

ಗಂಧರ್ವನ್ನ ನೆನೆದುಕೊಂಡ. ಗಂಧರ್ವ ಪ್ರತ್ಯಕ್ಷನಾದ. ರಾಜಕುಮಾರ ಅವನಿಗೆ ನಡೆದ ಸಂಗತೀನೆಲ್ಲ ಹೇಳಿದ. ಗಂಧರ್ವ ಒಂದು ಸಾರಿ ಅವನ ಮೈಯೆಲ್ಲಾನೂ ಸವರಿದ. ಅವನ ಮುರಿದ ಮೂಳೆಯೆಲ್ಲಾ ಸರಿಯಾಗಿ ಮೈ ಕೈ ನೋವೆಲ್ಲಾ ಒಂದು ಗಳಿಗೇಲಿ ನಿಂತು ಹೋಯಿತು. ಇನ್ನೊಂದು ಕ್ಷಣದಲ್ಲಿ ಅವನ್ನ ಮೇಲಕ್ಕೆ ಕರಕೊಂಡು ಬಂದು ಬುಟ್ಟು ತಾನು ಮಾಯವಾಗಿ ಹೋದ.

ರಾಜಕುಮಾರ ಅಲ್ಲಿಂದ ಆ ರಾಜನ ಪಟ್ಟಣಕ್ಕೆ ಬಂದ. ಹೆಬ್ಬಾಗಿಲಲ್ಲಿ ಕಾವಲುಗಾರರು "ನೀನು ಯಾರು?" ಅಂತ ಕೇಳಿದರು. "ನಾನು ರಾಜಕುಮಾರ" ಅಂದ. ಹಂಗಂದ ತಕ್ಷಣವೇ ಅವರು ಅವನ್ನ ಹಿಡಕೊಂಡು ಹೋಗಿ ಕೈಕಾಲು ಕತ್ತರಿಸಿ ಹಾಳು ಬಾವಿಗೆ ಹಾಕಿಬುಟ್ಟರು. ರಾಜಕುಮಾರ ಅಲ್ಲಿ ನರಳ್ತಾ ಬಿದ್ದುಕೊಂಡ. ಆ ನೋವು ಉರಿ ತಡೀಲಾರದೆ "ಶಿವ ಶಿವ ಶಿವ" ಅಂತ ಶಿವನ ಧ್ಯಾನ ಮಾಡಿದ. ಅದೇ ಸಮಯದಲ್ಲಿ ಶಿವ ಪಾರ್ವತಿ ಭೂಲೋಕ ಸಂಚಾರಕ್ಕೆ ಬಂದಿದ್ದರು. ಇವನು 'ಶಿವ ಶಿವ' ಅಂತಿದ್ದ ದನಿ ಅವರ ಕಿವಿಗೆ ಬೀಳ್ತು. "ಅದೇನೋ ನನ್ನ ಹೆಸರನ್ನ ನೆನೀತಾ ಅದೆ. ಏನು ಕಷ್ಟವೋ ಏನೋ. ನೋಡಿಕೊಂಡ ಬರಾನೆ ಬಾ" ಅಂತ ಹೇಳಿ ಪಾರ್ವತಿ ಕರಕೊಂಡು ಶಿವ ಅಲ್ಲಗೆ ಬಂದ. ಬಂದು ನೋಡ್ತಾನೆ : ರಾಜಕುಮಾರ ಕೈಕಾಲು ಏನೂ ಇಲ್ಲದೆ 'ಶಿವ ಶಿವ' ಅಂತಾ ಅವ್ನೆ. ಆಗ ಶಿವನಿಗೆ ತುಂಬಾ ಹೊಟ್ಟೆ ಉರೀತು. ಅವನ ಮೇಲೆ ವೀಭೂತಿ ಚಿಮುಕಿಸಿ 'ಏಳು ಅಂದ. ತಕ್ಷಣ ರಾಜಕುಮಾರನಿಗೆ ಕೈಕಾಲು ಬಂದೊ. ಅವನು ದಡಬಡನೆ ಎದ್ದು ಶಿವನಿಗೂ ಪಾರ್ವತಿಗೂ ಅಡ್ಡಬಿದ್ದ. ಶಿವ ಅವನ ತಲೆ ಹಿಡಿದು ಏಳಿಸಿ "ಇನ್ನು ನಿನ್ನ ಕಷ್ಟವೆಲ್ಲಾ ಕಳೀತದೆ ಹೋಗು" ಅಂತ ಹೇಳಿ ಮಾಯವಾದ.

ರಾಜಕುಮಾರ ಹಾಳು ಬಾವಿಯಿಂದ ಈಚೆಗೆ ಬಂದು ಬೇರೆ ಹೆಸರು ಹೇಳಿಕೊಂಡು ಪಟ್ಟಣಕ್ಕೆ ಬಂದ. ಅಲ್ಲೊಂದು ಅಡುಗೂಲಜ್ಜಿ ಮನೇಲಿ ಉಳಿಕೊಂಡ. ಅವಳು ದಿನಾಲೂ ರಾಜಕುಮಾರಿಯರಿಗೆ ಹೂವು ಕಟ್ಟಿಕೊಡ್ತಾ ಇದ್ದಳು. ಒಂದು ದಿನ ರಾಜಕುಮಾರನೇ ಹೂವು ಕಟ್ಟಿ ಅದರೊಳಗೆ ಒಂದು ಕಾಗದ ಮಡಗಿ ರಾಜಕುಮಾರಿಯರ ಹತ್ರಕ್ಕೆ ಕಳಿಸಿದ. ಅವರು ಅದ ಓದಿಕೊಂಡರು. ಕೊನೆಗಾದ್ರೂ ರಾಜಕುಮಾರ ಬದುಕಿ ಸುಖವಾಗಿ ಬಂದನಲ್ಲಾ ಅಂತ ಅವರಿಗೆ ಪರಮಾನಂದವಾಯಿತು. ನಡೆದ ಸಂಗತೀನೆಲ್ಲ ತಿಳಿಸಿ ಅವರೂ ಒಂದು ಕಾಗದ ಬರೆದು ಮುದುಕಿ ಹತ್ರ ಕೊಟ್ಟು ಕಳಿಸಿದರು.

ಒಂದು ತಿಂಗಳು ಕಳೀತು. ತಾವು ಮದುವೆಯಾಗೋಕೆ ಒಪ್ಪಿದೀವಿ ಅಂತ ರಾಜಕುಮಾರಿಯರು ರಾಜನಿಗೆ ಹೇಳಿದರು. ಅವನು ಕೊಟ್ನಕುಟ್ಲಿ ಪಟ್ಣಸಾರಿಸಿ



ಲಗ್ನಕ್ಕೆ ಏರ್ಪಾಟುಮಾಡಿದ. ಮದುವೆ ದಿನಾನೂ ಬಂತು. ಊರಿನ ಜನವೆಲ್ಲಾ ಮದುವೆಗೆ ಬಂದಿದ್ದರು. ಆಗ ರಾಜಕುಮಾರಿಯರು "ಮದುವೆಗೆ ಎಲ್ಲಾ ಬಂದವರೆ, ನಮ್ಮ ಹೂವಾಡಿಗಿತ್ತಿ ಮನೇಲಿ ಒಬ್ಬ ಶೂರ ಅವನೆ. ಪಲ್ಲಕ್ಕಿಕೊಟ್ಟು ರಾಜನ ಉಡುಪುಕೊಟ್ಟು ಅವನ್ನೂ ಕರಸು" ಅಂತ ರಾಜನಿಗೆ ಹೇಳಿದರು. ಅವನು "ಹಂಗೇ ಆಗಲಿ" ಅಂತ ಒಪ್ಪಿಕೊಂಡು ರಾಜರು ತೊಡೋ ಅಂತ ಉಡುಪು ಕೊಟ್ಟು ಅಂದಣ ಪಲ್ಲಕ್ಕಿ ಕಳಸಿದ. ರಾಜಕುಮಾರ ರಾಜರ ಉಡುಪು ಧರಿಸಿಕೊಂಡು ಪಲ್ಲಕ್ಕಿಮೇಲೆ ಕೂತುಗೊಂಡು ಅರಮನೆಗೆ ಬಂದ. ಅವನ್ನ ನೋಡಿದ ತಕ್ಷಣ ಮಂತ್ರಿಮಗ ನಡುಗಾಕೆ ಷುರುಮಾಡಿದ. ಆಗ ರಾಜಕುಮಾರಿಯರಿಬ್ಬರೂ ರಾಜನಿಗೆ ನಡೆದ ಸಂಗತಿ ತಿಳಿಸಿದರು. ಮಂತ್ರಿಮಗ 'ಅದೆಲ್ಲಾ ನಿಜ' ಅಂತ ಒಪ್ಪಿಗೊಂಡು ತಲೆತಗ್ಗಿಸಿದ. ರಾಜ "ಮಂತ್ರಿ ಮಗನನ್ನ ಸಿಗಿದು ಕೋಟೆಬಾಗಿಲಿಗೆ ತೋರಣ ಕಟ್ಟಿ' ಅಂತ ಆಜ್ಞೆ ಮಾಡಿದ. ಆದರೆ ರಾಜಕುಮಾರ "ಅವನು ಎಷ್ಟಾದರೂ ನನ್ನ ಸ್ನೇಹಿತ. ಹಂಗೆ ಮಾಡಬೇಡಿ" ಅಂತ ಹೇಳಿ ತಪ್ಪಿಸಿದ. ಮದುವೆ ಅದ್ದೂರಿಯಾಗಿ ನಡೀತು. ರಾಜ ತನ್ನ ರಾಜ್ಯಾನೆಲ್ಲಾ ರಾಜಕುಮಾರನಿಗೆ ಕೊಟ್ಟ. ಅವನು ಮಂತ್ರಿಮಗನ್ನೇ ತನ್ನ ಮಂತ್ರಿಯಾಗಿ ಮಾಡಿಕೊಂಡ. ತನ್ನ ತಂದೆಗೂ ಈ ಸುದ್ದಿ ತಿಳಿಸಿದ. ಎರಡು ರಾಜ್ಯಕ್ಕೂ ದೊರೆಯಾಗಿ ಸುಖವಾಗಿ ಬದುಕಿಕೊಂಡ.

* * * *

**Blank**



# ನೀತಿ ಕಥೆಗಳು

**Blank**



# ಬ್ರಹ್ಮಗಂಟು*

ಒಂದೂರಿನಲ್ಲಿ ಒಬ್ಬ ಬ್ರಾಹ್ಮಣ. ಅವನಿಗೆ ಒಬ್ಬನೇ ಮಗ. ಅವನು 'ಯಿದ್ಯ' ಕಲಿಯುವುದಕ್ಕಾಗಿ ಪ್ರತಿನಿತ್ಯ 'ಮಠ'ಕ್ಕೆ ಹೋಗುತ್ತಿದ್ದ. ಅವನು ಹೋಗಿ ಬರುವ ದಾರಿಯಲ್ಲಿ ಬ್ರಹ್ಮ ಕುಳಿತುಕೊಂಡು ದಿನವೂ ಏನೋನೋ ಗಂಟುಗಳನ್ನು ಹಾಕುತ್ತಿದ್ದ. ಈ ಹುಡುಗನಿಗೆ ಅದೇನು ಕೇಳಬೇಕೆಂದು ಕುತೂಹಲ. ಆದರೆ ಮಾರುದ್ದ ಗಡ್ಡ ಮೀಸೇ ಬೆಳೆಸಿದ್ದ ಆ ಮಾನಾಡ ಮುದುಕನನ್ನು ಮಾತಾಡಿಸುವುದಕ್ಕೆ ಅಂಜಿಕೆ. ಹೀಗೆ ದಿನಗಳು ಕಳೆದು ಹೋದವು. ಇವನು ಮಠಕ್ಕೆ ಹೋಗುವುದು ತಪ್ಪಲಿಲ್ಲ. ಅವನು ದಾರಿಯಲ್ಲಿ ಕೂತು ದಿನಾ ಗಂಟುಹಾಕುವುದು ತಪ್ಪಲಿಲ್ಲ. ಹೀಗೆ ಹುಡುಗನಿಗೆ ವಯಸ್ಸಾಯಿತು. ಒಳ್ಳೇ ನೇಗಿಲ ಮುಂಡಿನಂತೆ ತೊಲೇ ತುಂಡಿನಂತೆ ಬೆಳದ. ವಸಿ ಧೈರ್ಯವೂ ಹೆಚ್ಚಾಯಿತು. ಆವತ್ತು ಏನಾದರೂ ಮಾಡಿ ಬ್ರಹ್ಮನನ್ನು ಕೇಳಿಯೇ ಬಿಡಬೇಕೆಂದುಕೊಂಡು ಗಟ್ಟಿ ಮನಸ್ಸು ಮಾಡಿಕೊಂಡು ಹೋದ. ಎಂದಿನಂತೆ ಬ್ರಹ್ಮ ಹಾದಿಯಲ್ಲಿ ಗಂಟು ಹಾಕುತ್ತಾ ಕೂತಿದ್ದ. ಹುಡುಗ ಧೈರ್ಯ ತಂದುಕೊಂಡು ಕೇಳಿದ:

"ಇದೇನಜ್ಜ, ನೀನು ದಿನಾ ಹಿಂಗೆ ಗಂಟ್ಹಾಕ್ತಾ ಕೂತಿರ್ತೀಯ?"

"ಹೂ ಕನಪ್ಪಾ ನಂಗಿದೇ ಕೆಲಸ."

"ಇದೆಂಥಾ ಗಂಟು?"

"ಬ್ರಹ್ಮಗಂಟು ಕನಪ್ಪ"

"ಹಂಗಂದ್ರೆ ?"

"ಅಂದ್ರೆ ...... ನಿಂಗ್ ಅದು ತಿಳಿಯಾಕಿಲ್ಲ, ಸುಮ್ನೆ ಹೋಗಪ್ಪ"

"ತಿಳಿದೇ ಏನಜ್ಜಾ, ನಂಗೆಲ್ಲಾ ತಿಳೀತದೆ. ನಾನು ಎಂತೆಂಥಾ ಪುಸ್ತಕ ಓದಿವ್ನಿ, ನೀನು ಹೇಳೋದು ತಿಳಿಯಾಕಿಲ್ವ?,,,,,, ತಿಳೀತದೆಕಂತೆ ಹೇಳು."

"ಹಂಗಾರೆ ಹೇಳ್ತೀನಿ ಕೇಳು ..... ಯಾವ್ಯಾವ ಗಂಡಿಗೆ ಯಾವ್ಯಾವ

---

* ಹೇಳಿದವರು : ಕೃಷ್ಣರಾಜ ನಗರದ ತಾಲ್ಲೂಕು ಬಡಗನ ಕೊಪ್ಪಲಲ್ಲಿರುವ ಹೊನ್ನವಳ್ಳಿ ದೊಡ್ಡೇ ಗೌಡ.

ಹೆಣ್ಣು ಮದುವೆಯಾಗಬೇಕು ಅಂತ ಜೊತೆ ಕೂಡ್ಸಿ ಗಂಟ್ಹಾಕ್ತಾ ಇವ್ನಿ. ಇವೆಲ್ಲಾ ಆ ಗಂಟುಗಳೇ."

"ಓಹೊಹೋ! ..... ನೀನು ಯಾವುದೋ ಹಾದೀಲಿ ಹಿಂಗ್ ಕೂತೊಂಡು ಗಂಟ್ಹಾಕಿದರೆ ಮದುವೆಯಾದಾತಾ? .... ಇದೆಲ್ಲಾ ಬರೀ ಭ್ರಮೆ ಮುದುಕಪ್ಪಾ" –ಹುಡುಗ ಕೈತಟ್ಟಿ ಜೋರಾಗಿ ನಗಾಡಿದ. ಬ್ರಹ್ಮ ಏನೂ ಮಾತಾಡಲೇ ಇಲ್ಲ. ಅವನ ಪಾಡಿಗೆ ಅವನು ತಲೆತಗ್ಗಿಸಿ ಗಂಟು ಹಾಕುತ್ತಲೇ ಇದ್ದ.

"ಅಲ್ಲಾಕನಜ್ಜ. ನೀನು ಗಂಟು ಹಾಕಿದರೆ ಹಂಗೇ ಮದುವೆ ನಡೀತದ?"

"ಹೂ"

"ಇಲ್ಲೀಗಂಟ ಒಂದು ತಪ್ಪಿಲ್ವ ಹಂಗಾದರೆ?"

"ಇಲ್ಲ".

"ತಪ್ಪಾಕಾಗೋದಿಲ್ವ?"

"ಇಲ್ಲ"

"ಹಂಗಾದ್ರೆ ನನಗೆ ಯಾರನ್ನ ಜೊತೆ ಕೂಡ್ಸಿದ್ದೀಯಾ?"

"ಇನ್ನೂ ನಿನ್ನಗಂಟು ಹಾಕಿಲ್ಲಕನಪ್ಪ"

"ಸರಿ, ಹಂಗಾರೆ. ನೋಡ್ತೀನಿ ಹಾಕ್ತಾ ಇರು".

– ಅಂತ ಹೇಳಿ ಹುಡುಗ ಮಠಕ್ಕೆ ಹೋದ.

ಮಾರನೆ ದಿನ ಬೆಳಗಿನ ಜಾವ ಸೂರ್ಯ ರವರವನೆ ಉರಿಯೋ ಹೊತ್ತಿನಲ್ಲಿ ಹುಡುಗ ಅದೇ ಮಾರ್ಗದಲ್ಲಿ ಬಂದ. ಆ ಬಿಳಿಗೂದಲಿನ ಅಜ್ಜಜ್ಜಿ ಮುದುಕ ಅಲ್ಲೇ ಗಂಟು ಹಾಕುತ್ತಾ ಕೂತಿದ್ದ.

ಹುಡುಗ ನಗುತ್ತಾ ಕೇಳಿದ :

"ಇವತ್ತು ಯಾರಗಂಟು ಹಾಕ್ತಾ ಇದ್ದೀಯಾ ಅಜ್ಜಾ?"

"ನಿಂದೇ ಗಂಟು ಕನಪ್ಪಾ" – ಮುದುಕ ತಲೆಯೆತ್ತಿ ಹುಸಿನಗೆ ನಗುತ್ತಾ ಹೇಳಿದ.

"ಆಂ....?" – ಬೆಚ್ಚಿಬಿದ್ದ ಹುಡುಗ.

"ಅದ್ಯಾಕೆ ಹಂಗೆ ಬೆಚ್ತೀಯಾ ಮೊಗ. ಮದುವೆ ಅಂದ್ರೆ ಭಯವಾ? ಸಂತೋಷ ಅಲ್ವಾ ?"

"ಅದೆಲ್ಲಾ ಇರ್ಲಿ ಅಜ್ಜ ..... ನನಗೆ ಯಾವ ಹೆಣ್ಣು ಗಂಟ್ಹಾಕಿದ್ದೀ ?" – ಅಂತ ಕೇಳಿದ.

"ನೀನು ಬ್ರಾಹ್ಮಣರೋನು. ಆದ್ರೂವೆ ನೀನು ಮದುವೆಯಾಗೋದು ಮಾದಿಗರ



ಹೆಣ್ಣನ್ನ......" – ಅಂದ ಬ್ರಹ್ಮ. ಹಾರುವರ ಹುಡುಗನಿಗೆ ಬಾಳ ಯಥೆ ಆಯಿತು. ಆಕಾಶವೇ ಕಳಚಿಕೊಂಡು ತಲೇಮ್ಯಾಲೆ ಬಿದ್ದಹಂಗಾಯಿತು. ಸೇಷ್ಟ ಜಾತಿಯ ಹಾರುವರ ಹುಡುಗ ಕೀಳು ಜಾತಿಯ ಮಾದಿಗರ ಹೆಣ್ಣನ್ನು ಮದುವೆಯಾಗೋದು ಯಾವ ಲೋಕದಲ್ಲಾದ್ರೂ ಉಂಟೇ? ಜಾತ್ಯೋರು ಸುಮ್ನೆ ಬುಟ್ಟಾರ? ಕುಲದಿಂದ ಹೊರಕ್ಕೆ ಹಾಕ್ತಾರೆ. ಬೆಂಕಿ ಬಿಸಿನೀರು ಕೊಡೋದಿಲ್ಲ. ಶಾಸ್ತ್ರ ಸಂಬಂಧಕ್ಕೆ ಮದುವೆ ಮುಂಜಿಗೆ ಊಟಪಾಟಕ್ಕೆ ಕರೆಯೋದಿಲ್ಲ. ನಮ್ಮ ಕಂಡರೆ ನಾಯಿ ಕಂಡ್ಹಂಗೆ ಕಾಣ್ತಾರೆ. ಇದೆಲ್ಲಾರೂ ಉಂಟಾ? ಇದೆಲ್ಲಾ ಆಗದ ಹೋಗದ ಮಾತು. ಹಂಗೆಲ್ಲಾ ಹುಡುಗ ಯೋಚನೆ ಮಾಡಿದ. ಅವನಿಗೆ ಜರ ಸಳಿ ಒಟ್ಟಿಗೆ ಬಂದ್ಹಂಗಾಯಿತು. ಆದರೂ ಬಂಡ ಧೈರ್ಯಮಾಡಿ ಕೇಳಿದ:

"ಇದು ನಿಜವಾ ಅಜ್ಜ? ..... ಇಲ್ಲಾ ತಮಾಷೆಗೆ ಹಿಂಗೆ ಹೇಳ್ತೀಯೋ?"

"ಇದು ಸತ್ಯಕನಪ್ಪಾ ..... ನಾನು ಯಾವಾಗ಼್ೂ ತಮಾಷೆ ಗಿಮಾಷೆ ಮಾಡೋದಿಲ್ಲ."

"ಹೋಗ್ಲಿ ..... ಆ ಹೆಣ್ಮು ಯಾವೂರಲ್ಲದೆ? ಅದ್ನಾರೂ ಹೇಳು."

"ನಿಮ್ಮೂರಲೇ ಅದೆ. ನಿಮ್ಮೂರ ಮಾದಿಗ್ಗೇರೀಲಿ ಯಂಕಟ ಅಂತ ಒಬ್ಬವ್ನೆ. ಅವನಿಗೆ ಕಣ್ಣಿಗೆ ಮೂಗಿಗೆ ಒತ್ತಿಕೊಳ್ಳೋ ಅಂತ ಒಬ್ಬಳು ಸುಂದರಿ ಮಗಳವಳೆ. ಅವಳ ಜೊತೇಲಿ ನಿಂಗೆ ಲಗ್ನ ಆಯ್ತದೆ."

"ಇದು ಖಂಡಿತವಾ?"

"ಖಂಡಿತ".

'ಇದ ಸುಳ್ಮಾಡಾಕಾಗೋದಿಲ್ವ?'

"ಇಲ್ಲ, ಇಲ್ಲ."

"ಹಂಗಾರೆ ನೋಡು ಮುದುಕಪ್ಪಾ, ನನ್ನ ಬುದ್ದಿನಾರೂ. ನೀನು ಹಾಕಿದ ಗಂಟು ಸುಳ್ಳು ಆಗೋ ಹಂಗೆ ಮಾಡ್ದೇ ಇದ್ರೆ ನಾನು ಹಾರುವರ ಹೈದನೇ ಅಲ್ಲ" – ಅಂತ 'ಪ್ರತಿಜ್ಞೆ' ಮಾಡಿ ಹಠಮಾಡಿ ಆ ಹುಡುಗ ಊರಿಗೆ ಹಿಂತಿರುಗಿದ.

೨

'ಏನಾರೂ ಮಾಡಿ ಬ್ರಹ್ಮನ ಮಾತು ಸುಳ್ಳಾಗೋಹಂಗೆ ಮಾಡಲೇಬೇಕು. ಇಲ್ಲೀಗಂಟಾ ಯಾರೂ ಮಾಡದೇ ಇರೋ ಅಂಥ ದೊಡ್ಡ ಕೆಲಸಮಾಡಬೇಕು. ಆ ಮುದುಕನ ಮಾನ ಕಾಸಿಗೆ ಪಂಚೇರುಮಾಡಿ, ಹಾದಿ ಬಿದ್ಯೋರೆಲ್ಲಾ ನೋಡಿ ನಗೋಹಂಗೆ ಮಾಡಬೇಕು. ಹಾರುವರ ಹೈದ ಮಾದಿಗರ ಹೆಣ್ಣನ್ನ ಲಗ್ನ ಆಯ್ತಾನಂತೆ. ಅದು ಹ್ಯಂಗೆ ಆಯ್ತದೆ ನಾನು ನೋಡ್ತೀನಿ' ಅಂತ ಹಟ ಹಿಡಿದೇ

ಬಿಟ್ಟ. ಹಗಲೂ ರಾತ್ರಿ ಇದೇ ಯೋಚನೆ ಅವನಿಗೆ. ಕಣ್ಣಿಗೆ ನಿದ್ದೆ ಹತ್ತಲಿಲ್ಲ, ಹೊಟ್ಟೆಗೆ ಹಿಟ್ಟು ಸೇರಲಿಲ್ಲ. ಮಾದಿಗರ ಕೇರಿಯನ್ನು ತಿರುಗಿ ತಿರುಗಿ ಯಂಕಟನ ಮನೆಯನ್ನು ಪತ್ತೆಮಾಡಿದ. ಅವನ ಮಗಳು ಕಣ್ಣಿಗೆ ಬಿದ್ದಳು. ಜಾತಿಯಲ್ಲಿ ಕೀಳಾದರೂ ಅವಳು ಬ್ರಹ್ಮ ಹೇಳಿದಂತೆ ಕೈತೊಳೆದುಕೊಂಡು ಮುಟ್ಬೋ ಅಂತ ಮುತ್ತಿನಂಥ ಹೆಣ್ಣು. ಕಡೆದ ಕಂಬದ ಹಾಗೆ ಒಳ್ಳೇ ಕಟ್ಟುಮಸ್ತಾಗಿದ್ದಳು. ಉಟ್ಟದ್ದು ಚಿಂದಿ 'ಶ್ಯಾಲೆ' ಆದರೂ ಕೆಂಡಸಂಪಿಗೆಯಂಥ ಅವಳ ಬಣ್ಣ ಕಣ್ಣುಕೋರೈಸುತಿತ್ತು. ಅವಳನ್ನು ನೋಡಿದ ತಕ್ಷಣ ಹಾರುವರ ಹುಡುಗನಿಗೆ ಮನಸ್ಸು ಹೇಗೋ ಹೇಗೋ ಆಯಿತು. 'ನಮ್ಮ ಜಾತಿ ಹೆಣ್ಣಿಗಿಂತಲೂ ಚಂದಾಗ್ಯವಳೆ. ಇಂಥ ಕೀಳು ಜಾತೀಲೂ ಇಂಥ ಹೆಂಗಸರು ಇರ್ತಾರಾ? ತಿಪ್ಪೇಲಿ ಮಾಣಿಕ್ಯ ಇದ್ದಹಂಗೆ' ಅಂದುಕೊಂಡ. ಒಂದು ಗಳಿಗೆ ಹೊಟ್ಟೆ ಉರಿಯಿತು. ಇಂಥಾ ಚಂದುಳ್ಳಿ ಹೆಣ್ಣು ತಮ್ಮ ಜಾತೀಲೆ ಇದ್ರೆ ತಲೇಮೇಲೆ ತಲೆಬಿದ್ರೂ ಇವಳನ್ನೇ ಮದುವೆಯಾಗಬಹುದಿತ್ತು. ಅವಳ ಕರ್ಮ. ಯಾರೇನು ಮಾಡ್ಯಾರು ಅಂದುಕೊಂಡ. ನಾಲ್ಕು ದಿನ ಅವಳು ಹೋದಹೋದ ಕಡೆಯಲ್ಲೇ ಹಿಂದೆ ಹಿಂದೆ ಹೋದ. ಅವಳು 'ಈವಯ್ಯ ಯಾಕೆ ಹಿಂಗೆ ಹಿಂದ್‌ಹಿಂದಗುಟ್ಟೇ ಬಂದಾನು' ಅಂದುಕೊಂಡಳು. ಅಂತೂ ಏನೇನೋ ಉಪಾಯ ಮಾಡಿ ಒಂದು ದಿನ ಅವಳನ್ನು ಮಾತಾಡಿಸಿದ. ಹಿಂಗೇ ಪರಿಚಯ ಬೆಳೆಯಿತು. 'ಸಿಲೋಟಾಗಿ' ಕೆಂಪಾಗಿರುವ ಈ ಚೂರುಮೂಗಿನ ಹೈದನನ್ನು ಕಂಡು ಅವಳಿಗೂ ಮನಸ್ಸಾಯಿತು. ಆದರೆ ಇವನು ಹಾರುವರವನೆಂದು ತಿಳಿದಾಗ ಅವಳಿಗೆ ಗಾಬರಿಯಾಯಿತು. "ನಾನೆಲ್ಲಿ ನೀವೆಲ್ಲಿ? ನಾಯಿ ದೇವರ ಮನೆಗೆ ಬರೋದುಂಟಾ? ನನ್ನ ಸಾವಾಸ ಬ್ಯಾಡಿ ಸ್ವಾಮಿ. ಯಾರಿಗಾರೂ ಗೊತ್ತಾದ್ರೆ ನನ್ನ ಸಿಗಿದು ಊರಬಾಗಿಲಿಗೆ ತ್ವಾರಣ ಕಟ್‌ಬುಡ್ತಾರೆ ! 'ಬಡವಾ ನೀ ಮಡಗಿದ್ಹಂಗಿರು' ಅಂತ ನನ್ನ ನೆಳ್ಳಿಗೆ ನಾನು ಅಂಜ್ಕೊಂಡಿರೋದು ಒಳ್ಳೇದು" ಅಂತ ಅವನನ್ನು ಗೋಗರೆದಳು. ಆದರೆ ಈ ಹುಡುಗ ಅವಳಿಗೆ ಏನೋನೋ 'ಪೂಸಿ' ಮಾತುಗಳನ್ನು ಹೇಳಿದ, ಆಣೆಭಾಷೆ ಮಾಡಿದ. ಕಟ್ಟರಯದ ಆ ಹುಡುಗಿ ನಂಬಿದಳು.

ಈ ಹುಡುಗ ಮನಸ್ಸಿನಲ್ಲಿ ಏನೇನೋ ಲೆಕ್ಕಾಚಾರ ಹಾಕಿದ, ಅಳೆದ ಸುರಿದ. ಒಂದು ದಿನ ಅವಳ ಹತ್ತಿರ ಹೋಗಿ ಹೇಳಿದ:

"ನೋಡು, ನಂಗೆ ನಿನ್ನ ಮೇಲೆ ತುಂಬಾ ಮನಸಾಗಿಬುಟ್ಟದೆ. ನೀನೂ ನಾನೂ ಹೋಗಿ ಎಲ್ಲಾರೂ ದೂರದಲ್ಲಿ ಮದುವೆಯಾಗಿ ಸುಖವಾಗಿರಾನೆ, ಬಾ".



ಹುಡುಗಿ ಹೆದರಿಕೆಯಿಂದ ಗಡಗುಟ್ಟಿದಳು.

"ಎಲ್ಯಾರೂ ಉಂಟಾ ಬುದ್ಧಿ? ಹೆತ್ತೋರು ಹುಟ್ಟಿಸಿರೋರು ಎಲ್ಲಾರ್ನೂ ಬುಟ್ಟುಬುಟ್ಟು ಹೋಗಾಕಾದಾತಾ? ಈ ಮಾತು ಬುಡಿ" – ಅಂದಳು.

ಹುಡುಗ ಏನೇನೋ ಮಂತ್ರಮರೂಡಿ ಮಾತುಗಳನ್ನು ಹೇಳಿದ. "ನೀನು ಒಪ್ಪದಿದ್ದರೆ ನಾನು ಹೊಳೇ ಕೆರೇ ಪಾಲಾಯ್ತೀನಿ" ಅಂದ. ಹುಡುಗಿ ಹೆದರಿಕೊಂಡು ಕೊನೆಗೆ ಒಪ್ಪಿಕೊಂಡಳು.

ಹುಡುಗ ಒಂದು ದೊಡ್ಡ ಪೆಟ್ಟಿಗೆ ಮಾಡಿಸಿಕೊಂಡು ಬಂದ. ಅದರಲ್ಲಿ ಅವಳನ್ನು ಕೂರಿಸಿ ಬೀಗ ಹಾಕಿದ. ಯಾರಿಗೂ ಕಾಣದಂತೆ ಅದನ್ನು ಹೊತ್ತುಕೊಂಡು ನಡೆದ. ಊರ ಆಚೆಗೆ, ಒಂದು ಹರಿದಾರಿ ದೂರ ಹೋದಮೇಲೆ ಒಂದು ಹೊಳೆ ಸಿಕ್ಕಿತು. ಅದರಲ್ಲಿ ಒಂದು ಮಹಾಂತ 'ಮಡ'. ಅದರ ಆಳ ಕಂಡವರೇ ಇಲ್ಲ. ಹತ್ತು ವರುಷ ಮಳೆ ಹೋಗಿ ಹೊಳೆಯೆಲ್ಲಾ ಬತ್ತಿಹೋದರೂ ಅದರಲ್ಲಿ ಮಾತ್ರ ನೀರು ತುಂಬಿರುತಿತ್ತಂತೆ. ಅದರ ಹತ್ತಿರಕ್ಕೆ ಹೋಗಿ ಹೊತ್ತಿದ್ದ ಪೆಟ್ಟಿಗೆಯನ್ನು ಧೊಪ್ಪನೆ ಅದರಲ್ಲಿ ಹಾಕಿದ. ಒಳಗಿದ್ದ ಹುಡುಗಿ 'ಅಯ್ಯೋ' ಅಂತ ಕಿರುಚಿದಳು. ಪೆಟ್ಟಿಗೆ ದುಡುಂ ಅಂತ ಸದ್ದುಮಾಡಿತು. ಆ ಸದ್ದಿಗೆ ಹೆದರಿ ಹುಡುಗ ಬಿರುಬಿರುನೆ ಮೇಲಕ್ಕೆ ಬಂದು ಮನೆಯ ಹಾದಿ ಹಿಡಿದ. 'ಇನ್ನು ಅವಳು ಸತ್ತಳು. ಅವಳಿಗೂ ನನಗೂ ಇನ್ನು ಮೇಲೆ ಲಗ್ನ ಹ್ಯಂಗೆ ನಡೆದೀತು. ತಾನು ಹಾಕಿದ ಗಂಟು ಯಾವಾಗಲೂ ತಪ್ಪಿಲ್ಲ ಅಂತ ಆ ಮುದಿಬ್ರಹ್ಮ ಜಂಬಾ ಹೊಡೀತಿದ್ದ. ನಾನು ಅವನ ಗಂಟ ಹುಸೀಮಾಡ್ಬುಟ್ಟೆ. ಸಿಕ್ಕಲಿ ಅವನ್ನ ಕೇಳ್ತೀನಿ' ಅಂದುಕೊಂಡು ತಾನು ಮಾಡಿದ ಉಪಾಯಕ್ಕೆ ತಾನು ಹುಡುಕಿದ ಸಂದಿಗೆ ತಾನೇ ಹಿಗ್ಗುತ್ತಾ ಮನೆಗೆ ಹಿಂದಿರುಗಿದ.

೩.

ಮಡುವಿನಲ್ಲಿ ಒಂದು ಸಲ ಮುಳುಗಿದ ಪೆಟ್ಟಿಗೆ ಮೇಲಕ್ಕೆ ಎದ್ದಿತು. ಹೊಳೆಯ ನೀರು ಜೋರಾಗಿ ಅದನ್ನು ಹೊಡೆದುಕೊಂಡು ಹೋಯಿತು. ಹಿಂಗೇ ಎಷ್ಟೋ ದೂರ ಅದು ಕೊಚ್ಚಿಕೊಂಡು ಹೋಗಿ ಹೊಳೆಯ ಇನ್ನೊಂದು ದಡದ ಕಡೆಗೆ ತೇಲುತ್ತಾ ಹೋಯಿತು. ಅಲ್ಲಿ ಒಬ್ಬಳು ಹಾರುವರ ಮುದುಕಿ ಬಟ್ಟೆ ಹಿಂಡುತ್ತಿದ್ದಳು. ದೂರದಲ್ಲಿ ಏನೋ ತನ್ನ ಕಡೆಗೆ ತೇಲಿಬರುತ್ತಿರುವುದನ್ನು ಕಂಡಳು. ಹಂಗೇ ನೋಡುವಾಗ ಆ ಪೆಟ್ಟಿಗೆ ತೇಲಿಕೊಂಡು ಹತ್ತಿರಕ್ಕೆ ಬಂತು. ಅವಳಿಗೆ ಏನು ಧೈರ್ಯ ಬಂತೋ, ತಾನು ಹಿಂಡುತಿದ್ದ ಸೀರೆಯನ್ನೇ ಬಿಚ್ಚಿ ಎಸೆದು ಆ ಪೆಟ್ಟಿಗೆಯನ್ನು ಎಳೆದುಕೊಂಡಳು. ಎತ್ತುವುದಕ್ಕೆ ಏಳದಷ್ಟು ಅದು

ಭಾರವಾಗಿತ್ತು, 'ಅದರಲ್ಲಿ ಭಾರೀ ಹಣ ಇರಬಹುದು. ಹ್ಯಂಗೋ ದೇವರು ಕಣ್ಣು ಬುಟ್ಟ' ಅಂದುಕೊಂಡು ಆನಂದಪಡುತ್ತಾ ಹೊರಲಾರದೆ ಮುಕ್ಕುರಿಯುತ್ತಾ ಅದನ್ನು ಹೊತ್ತುಕೊಂಡು ಮನೆಗೆ ಬಂದಳು. ದಡಬಡನೆ ಮನೆಯ ಬಾಗಿಲನ್ನು ಮುಚ್ಚಿ ಅಗಣಿಹಾಕಿ ಪೆಟ್ಟಿಗೆಯ ಬೀಗ ತೆಗೆದಳು. ಹಣಕ್ಕೆ ಬದಲಾಗಿ ರಂಭೆಯಂಥಾ ಒಂದು ಹುಡುಗಿಯನ್ನು ಕಂಡು ಅವಳಿಗೆ 'ಸೋಜಿಗ'ವಾಯಿತು. ಹೇಳುವುದಕ್ಕಾಗದ ಸಂತೋಷವಾಯಿತು. ಹುಡಿಗಿಗೆ 'ಗ್ಯಾನ' ಇರಲಿಲ್ಲ. ಮೆಲ್ಲಗೆ ಪೆಟ್ಟಿಗೆಯಿಂದ ಕೆಳಕ್ಕಿಳಿಸಿ ಮುಖಕ್ಕೆ ನೀರು ತಟ್ಟಿ ಗಾಳಿ ಹಾಕಿದಳು. ಹುಡುಗಿ 'ಉಸ್' ಅನ್ನುತ್ತಾ ಎದ್ದು ಕೂತಳು. ಚಿನ್ನದಂಥ ಹುಡುಗಿಯನ್ನು ನೋಡಿ ಅವಳಿಗೆ ಬಾಯೇ ಬರದಂತಾಯಿತು. 'ಮಕ್ಕಳಿಲ್ಲದಿದ್ದ ತನಗೆ ಭಗವಂತನೇ ಇಂಥ ಕಿತ್ತಳೆ ಹಣ್ಣಿನಂಥ ಹುಡುಗಿಯನ್ನು ಕೊಟ್ಟಿದ್ದಾನೆ' ಅಂದುಕೊಂಡು ಆ ಮುದುಕಿ ಅಕ್ಕರೆಯಿಂದ ಅವಳನ್ನು ಸಾಕಿಕೊಂಡಳು.

೪

ಬ್ರಹ್ಮಗಂಟನ್ನು ಮುರಿದೆನೆಂಬ ಹೆಮ್ಮೆ ಹಾರುವರ ಹುಡುಗನಿಗೆ. ಹಿಂಗೇ ಒಂದೆರಡು ವರ್ಷ ಕಳೆಯಿತು. ಅವರ ತಾಯಿ ತಂದೆ ಮಗನಿಗೆ ಮದುವೆ ಮಾಡಬೇಕೆಂದು ಮನಸ್ಸುಮಾಡಿದರು. ತಮ್ಮುದ್ದಕ್ಕೂ ಬೆಳೆದು ಮೀಸೆಮಿಂಡಾಳನಾಗಿ ನಿಂತಿರೋ ಮಗನಿಗೆ ಲಗ್ನವಾಡಿ ಬ್ಯಾಗನೆ ಸೊಸೆಯನ್ನು ಮನೆ ತುಂಬಿಸಿಕೊಳ್ಳಬೇಕೆಂದು ಹವಣಿಸಿದರು. ಹತ್ತಿರದ ತಮ್ಮ ಸುತ್ತಮುತ್ತಿನ ನಂಟರ ಮನೆಯಲ್ಲೆಲ್ಲೂ ಸರಿಯಾದ ಹೆಣ್ಣು ಸಿಕ್ಕಲಿಲ್ಲ. ದೇಶ ದೀಪಾಂತರಗಳನ್ನೆಲ್ಲಾ ಹುಡುಕಿದರು. ಹುಡುಗನಿಗೆ ಜೋಡಿಯಾಗುವ ಹೆಣ್ಣು ಸಿಕ್ಕಲಿಲ್ಲ. ತಿರುಗಿ ತಿರುಗಿ ಸಾಕಾಗಿ ಒಂದು ದಿನ ಹೊಳೆಯಾಚೆಯ ಊರಿನ ಮುದುಕಿ ಮನೆಯ ಜಗಲಿಯ ಮೇಲೆ ಕೂತರು. ತುಂಬ ದಾವಾಯಿತು. ಕುಡಿಯಲು ನೀರು ಕೇಳಿದರು. ಥಳಥಳಿಸುವ ಚಿನ್ನದ ಗೊಂಬೆಯಂತಿದ್ದ ಒಂದು ಹುಡುಗಿ ಬೆಳ್ಳಗೆ ಹೊಳೆಯುವ ಬೆಳ್ಳಿಯ ಚೊಂಬಿನಲ್ಲಿ ನೀರನ್ನು ತಂದುಕೊಟ್ಟಿತು. ತಮ್ಮ ಮಗನಿಗೆ ಇವಳು ಪಸಂದಾದ ಜೋಡಿ ಎನಿಸಿತು. ಮುದುಕಿಯ ಜೊತೆ ಮಾತುಕತೆ ನಡೆಸಿದರು. ಅವಳು ತನ್ನ ಮಗಳನ್ನು ಕೊಡಲು ಒಪ್ಪಿದಳು.

ಮಗನಿಗೆ ಈ ಸುದ್ದಿ ತಿಳಿಸಿದಾಗ ಅವನು ಸಂತೋಷವಾಗಿಯೇ ಒಪ್ಪಿಕೊಂಡ. 'ಮಾದಿಗರ ಹೆಣ್ಣು ಸತ್ತು ಹೋದಳು. ಈಗ ಹಾರುವರ ಹುಡುಗಿಯನ್ನೇ ಮದುವೆಯಾಗುತ್ತೇನೆ. ಬ್ರಹ್ಮ ಸಂಪೂರ್ಣ ಸೋತು ಹೋದ' – ಅಂದುಕೊಂಡು ಆನಂದ ಪಟ್ಟ. ತನ್ನಂಥ ಬುದ್ಧಿವಂತ ಪ್ರಪಂಚದಲ್ಲೇ ಇಲ್ಲ



ಅಂದುಕೊಂಡು ಗರ್ವಪಟ್ಟ. ಮದುವೆ ತುಂಬ ಅದ್ದೂರಿಯಾಗಿ ನಡೆದು ಹೋಯಿತು.

ಮಾರನೆಯ ದಿನ ಬೆಳಿಗ್ಗೆ ಬ್ರಹ್ಮ ಅವನ ಮನೆಗೆ ನೇರವಾಗಿ ಹೋದ. ಹೊಸ ಮದುವಣ್ಣ ಜಗಲಿಯ ಮೇಲೆ ಕಾಲ ಮೇಲೆ ಕಾಲು ಹಾಕಿಕೊಂಡು ಸಂತೋಷವಾಗಿ ಕೂತಿದ್ದ. ಬ್ರಹ್ಮ "ಏನಪ್ಪಾ, ಚಂದಾಗಿದ್ದೀಯಾ?" – ಅಂದ.

ಹುಡುಗ ಹುಸಿನಗುತ್ತಾ, "ಚಂದಾ ಏನ್ಬತ್ತು ಮುದುಕಪ್ಪಾ? ನೀನು ಹೇಳಿದಂತೆ ನಾನು ಮಾದಿಗರ ಹೆಣ್ಣನ್ನೇ ಮದುವೆಯಾದೆ ನೋಡು. ಏನಾದ್ರೂ ತಾನೇ ಬ್ರಹ್ಮಗಂಟು ಮೀರಾಕಾದಾತ? ನೀನು ಹಾಕಿದ ಗೆರೆ ಅಳಿಸಕಾದಾತಾ ಅಜ್ಜ? ನೀನು ಅಂದರೆ ಸಾಮಾನ್ಯವಾ !" ಅಂತ ಹಾಸ್ಯ ಮಾಡಿದ. "ಇಲ್ಲಕನಪ್ಪಾ. ನಾನು ಹೇಳಿದ್ದಂಗೇ ನೀನು ನಡೆದಿದ್ದಿ. ಅದಕೇ ನಿನಗೆ ಒಳ್ಳೆಯದಾಗಲಿ ಅಂತ ಹೇಳಾಕೆ ಬಂದೆ" ಅಂದ ಬ್ರಹ್ಮ.

"ನಿನಗೆ ಅರಳೋ ಮರಳೋ ಮುದಕಯ್ಯಾ? ಆ ಮಾದಿಗರ ಹೆಣ್ಣು ಸತ್ತು ಎಷ್ಟೋ ವರ್ಷ ಆಗ್ಹೋಯ್ತು. ಈಗ ನಾನೆಂಥಾ ಹೆಣ್ಣು ಮದುವೆಯಾಗಿವ್ನಿ ಗೊತ್ತಾ? ನಿಮ್ಮ ದೇವಲೋಕದಲ್ಲೂ ಸಿಗದಂತ ಚೆಂದುಳ್ಳಿ ಹೆಣ್ಣು, ನಮ್ಮ ಜಾತೀದೆ" ಅಂತ ಜಂಭ ಕೊಚ್ಚಿ ಕೊಂಡ ಹುಡುಗ.

"ಅದೆಲ್ಲಾ ಇರಲಿ, ನಿಮ್ಮ ಅತ್ತೇ ಕರೆಸು ಹೇಳಿಸ್ತೀನಿ" – ಅಂದ ಬ್ರಹ್ಮ.

ಆ ಮುದುಕಿ ಬಂದಳು. ಬ್ರಹ್ಮ ಕೇಳಿದ:

"ಅಮ್ಮಾ ಈ ಹುಡುಗಿ ನಿನ್ನ ಸ್ವಂತ ಹೊಟ್ಟೇಲಿ ಹುಟ್ಟಿದ ಮಗಳೋ ಹ್ಯಂಗೆ? ನಿಜಹೇಳು".

ಅವಳು ತನಗೆ ಪೆಟ್ಟಿಗೆ ಸಿಕ್ಕಿದಲಾಗಾಯ್ತು ಇಲ್ಲಿಯವರೆಗಿನ ಸಂಗತಿಯನ್ನೆಲ್ಲಾ ಚಾಚೂ ತಪ್ಪದೆ ಹೇಳಿದಳು. ಹಾರುವರ ಹುಡುಗನ ಮುಖ ಬಿಳುಪಾಯಿತು. ಮದುವೆ ಹೆಣ್ಣನ್ನು ಬ್ರಹ್ಮ ಕರೆಸಿದ.

"ಅಮ್ಮಾ ನೀನು ದೇವರ ಸತ್ಯವಾಗಿ ಹೇಳು. ನೀನು ಯಾರು? ಹುಟ್ಟಿದ್ದೆಲ್ಲಿ? ಒಂದು ಚೂರೂ ತಪ್ಪದೆ ಹೇಳು" – ಅಂದ.

ಹುಡುಗಿಗೆ ಈ ಹಿಂದಿನದೆಲ್ಲಾ ಕಣ್ಣಿಗೆ ಕಟ್ಟಿದಂತೆ ನೆನಪಿಗೆ ಬಂತು.

"ನಾನು ಇದೇ ಊರ ಮಾದಿಗಗೇರಿಯ ಯಂಕಟನ ಮಗಳು. ಇವರು ನನ್ನನ್ನು ಪೂಸಿ ಮಾಡಿ ಪೆಟ್ಟಿಗೆಯಲ್ಲಿ ಕೂರಿಸಿಕೊಂಡು ಹೋಗಿ ಹೊಳೆಗೆ ಎಸೆದರು" ಮುಂತಾಗಿ ಎಲ್ಲಾ ಸಂಗತಿಗಳನ್ನೂ ಹೇಳಿದಳು. ಬ್ರಹ್ಮ ನಗುತ್ತಾ.

"ನೀನು ಬ್ರಹ್ಮಗಂಟು ಮುರಿದೆ. ಅಲ್ಲವೇನಪ್ಪಾ" ಅಂದು ನಗುನಗುತ್ತಾ

ಬಂದ ದಾರಿಯಲ್ಲಿ ಹೊಂಟು ಹೋದ. ಹಾರುವರ ಹುಡುಗ ಇದನ್ನು ಕೇಳಿ ಹೌಹಾರಿದ. ತಾನು ಮಾಡಿದ ತಪ್ಪು ಅವನಿಗೆ ಅರಿವಾಯಿತು. ತಾವು ಬದುಕಿದ್ದರೆ ಇಬ್ಬರ ಕುಲಕ್ಕೂ ಒಳ್ಳೆಯದಲ್ಲವೆಂದು ಅರಿತರು. ಮನೆಯ ಮುಂದೆ ದೊಡ್ಡ ಹಗ್ಗಿಯನ್ನು ಹಾಕಿ ಅದರಲ್ಲಿ ಇಬ್ಬರೂ ಕೈ ಕೈ ಹಿಡಿದುಕೊಂಡು ಧುಮುಕಿದರು. ಬ್ರಹ್ಮಗಂಟು ಅಂತೂ ನಿಜವಾಯಿತು.

* * * *



## ಹಣೇಬರಹ*

ಒಂದು ಪಟ್ಟಣ. ಅಲ್ಲಿ ಒಬ್ಬ ರಾಜ. ಅವನಿಗೆ ದೇವಲೋಕದ ರಂಭೇನೂ ಮೀರಿಸೋ ಅಂತ ಸೋಸಿದ ಚಿನ್ನದಂಥ ಸುರದ್ರೂಪಿ ಮಗಳು. ಅವನಿಗೆ ಅವಳೊಬ್ಬಳೇ ಮಗಳು. ಹಿಂದೂ ಇಲ್ಲ ಮುಂದೂ ಇಲ್ಲ. ಆದ್ದರಿಂದ ಅವಳನ್ನ ಅಂಗೈಲಿ ಅವಧರಿಸಿಕೊಂಡು ಗಂಡಹೆಂಡತಿ ಇಬ್ರೂ ಕಣ್ಣೊಳಗಿನ ಗೊಂಬೇ ಹಂಗೆ ಅವಳನ್ನ ಸಾಕಿದರು. ನೆಲದಲ್ಲಿ ನಡೆದರೆ ನನಿಗಿ ಹೋಯ್ತಾಳೆ ಅಂತ ಅವಳ್ನ ಹೂವಿನಂಗೆ ನೋಡ್ಕೊತ್ತಾ ಇದ್ದರು.

ಹಂಗಾಡಿ ಹಿಂಗಾಡಿ ಹುಡುಗಿ ಮದುವೆ ವಯಸ್ಸಿಗೆ ಬತ್ತು. ಅವಳ ವಯಸ್ಸಿಗೂ ಅವಳ ರೂಪಿಗೂ ನೋಡಿದೋರು ಮೂರ್ಛೆ ಹೋಗೋಹಂಗೆ ಇದ್ದಳು. ಒಂದು ದಿನ ರಾತ್ರೆ ಮಗಳು ಉಂಡು ಮಲಗಿದ ಮೇಲೆ ಗಂಡ ಹೆಂಡತಿ ಇಬ್ರೂ ಮಾತಾಡ್ತಾ ಕೂತುಕೊಂಡರು. ಹೆಂಡತಿ "ನೆರೆದಿರೋ ಹೆಣ್ಣ ಇನ್ನೂ ಏಟ್ ದಿನ ಅಂತ ಹಿಂಗೇ ಮನೇಲಿ ಮಡೀಕೊಂಡಿರೋದು? ನಿಮಗೆ ಒಂದೀಟೂ ಯೋಚನೇನೆ ಇಲ್ವಲ್ಲಾ. ನೋಡ್ದೋರು ಏನಂತಾರೆ?" ಅಂದಳು.

"ಒಳ್ಳೇ ವರ ನೋಡಿ ಲಗ್ನ ಮಾಡಬ್ಯಾಡವಾ? ಲಗ್ನ ಅಂದರೆ ಸುಮ್ನೇ ಬಾಯ್‌ಮಾತಾಗ್ಹೋಯ್ತ? ನಾನೂ ನೋಡ್ತಾ ಇವ್ನಿ. ನನ್ನ ಮಗಳಿಗೆ ಸರಿಸಮಾನ ಆಗಿರೋ ಗಂಡು ಎಲ್ಲೂ ನನ್ನ ಅಳತೆಗೆ ಸಿಕ್ಕಿಲ್ಲ" ಅಂದ ರಾಜ.

"ಅದ್ಯಾಕೆ, ನನ್ನ ತಮ್ಮನೇ ಇಲ್ವಾ? ಮನೇಲಿ ಬೆಣ್ಣೆ ಮಡೀಕೊಂಡು ತುಪ್ಪಕ್ಕೆ ಅರಸಿದರು ಅನ್ನೋಹಂಗೆ ನಮ್ಮ ಕಣ್ಮುಂದೆ ಇರೋ ಹುಡುಗನ್ನ ಬುಟ್ಟು ಅಲ್ಲಿ ಇಲ್ಲಿ ನೋಡೋದ್ಯಾಕೆ?" ಅಂದಳು ರಾಣಿ.

"ನಿನ್ನ ತಮ್ಮನಿಗಾ? ನನ್ನ ಮಗಳ ಒಂದು ಉಂಗುಷ್ಟದ ಬರಾಬರಿ ಬರೋದಿಲ್ಲ ಅವನು, ಅವನಿಗೆ ನನ್ನ ಮಗಳ ಕೊಡಲಾ ಮಂಗನ ಕೈಗೆ ಮಾಣಿಕ್ಯ ಕೊಟ್ಟಹಂಗೆ. ನಮ್ಮ ಕತ್ತಿ ಅಂತ ಮೆಟ್ರೆಕೊಯ್ಕೋಳಾಕಾದಾತ. ನಿನ್ನ ತಮ್ಮ ಅಂತ ಮರುಳಾಗಿ ಮಗಳ್ನ ಕೊಟ್ಟು ಅವಳ ಬಾಳ ಹಾಳ್ಮಾಡೋದ? ನಿಂಗ್ ಒಂದೀಟೂ

* ಹೇಳಿದವರು : ಕೃಷ್ಣರಾಜನಗರದ ತಾಲ್ಲೂಕು ಬಡಗನಕೊಪ್ಪಲು ಗ್ರಾಮದಲ್ಲಿರುವ ಅಣ್ಣಯ್ಯಾಚಾರ್ ಅವರು.

ಗ್ಯಾನಗೀನ ಬ್ಯಾಡವಾ?" ಅಂತ ಕಾರವಾಗಿ ಹೇಳಿದ ರಾಜ. ರಾಣಿಗೆ ಅಷ್ಟಕ್ಕೇ ಕಣ್ಣಲ್ಲಿ ನೀರು ತುಂಬಿಕೊತ್ತು.

"ಎಲ್ಲಾ ನನ್ನ ತಮ್ಮನ್ನ ಕುರೂಪಿ ಅಂತ ಆಡ್ಕೋತಾರೆ ಅಂತ ನೀವೂ ಆಡ್ಕೊಳ್ಳಾಕೆ ಸುರುಮಾಡಿದ್ರಾ. ಏನೋ ಅವನು ತಂದ ಅದೃಷ್ಟ ಹಂಗಾದ.

ರೂಪ ಏನು ಅರಕೊಂಡು ಕುಡಿಬೇಕ? ಗಂಡು ಮಕ್ಕಳು ಹ್ಯಂಗಿದ್ರೇನು? ನಾವೇ ಅವನಿಗೆ ಹೆಣ್ಣು ಕೊಡದೆ ಹೋದ್ರೆ ಇನ್ನ್ಯಾರು ಕೊಡ್ತಾರೆ?" ಅಂತಾ ಗೊಳೋ ಅಂತ ಅಳಾಕೆ ಸುರುಮಾಡಿದಳು ರಾಣಿ.

"ನೋಡು, ನೀನೇಟು ಅತ್ರೂ ಕರದ್ರೂ ನಿನ್ನ ತಮ್ಮನಿಗೆ ಮಾತ್ರ ನನ್ನ ಮಗಳ್ನ ಕೊಡೋದಿಲ್ಲ. ಇದು ಪ್ರಮಾಣ" ಅಂತ ರಾಜ ರೇಗಿದ. ರಾಣಿಗೂ ಕೋಪ ಬತ್ತು. ಅವಳೂ, "ನೋಡಾನೆ ಹಂಗಾದ್ರೆ, ನನ್ನ ಜೀವ ಇರೋಗಂಟ ನನ್ನ ತಮ್ಮನಿಗಲ್ದೆ ಅವಳ್ನ ಇನ್ನ್ಯಾರಿಗೂ ಕೊಡೋದಿಲ್ಲ" ಅಂತ ಹಠಮಾಡಿದಳು. ಹಿಂಗೆ ಗಂಡ ಹೆಂಡರಿಗೆ ಮನಸ್ತಾಪ ಬಂದುಬುಡ್ತು.

## ೨

ರಾಣಿಗೆ ಮನಸಿನಲ್ಲಿ ಕೊರತನೆ ಹತ್ತಿಕೊತ್ತು. ಏನಾದರೂ ಮಾಡಿ ಮಗಳ್ನ ತನ್ನ ತಮ್ಮನಿಗೇ ಕೊಡಬೇಕೂಂತ ಮನಸ್ಸಿನಲ್ಲಿ ಹಠ ತೊಟ್ಟುಕೊಂಡಳು. ಕಡೇ ಚರಿಗೆ ಒಂದು ಉಪಾಯ ಹೊಳೀತು. ಆವತ್ತು ರಾತ್ರೆ ಉಂಡು ಉಟ್ಟು ಆದ ಮೇಲೆ ಗಂಡನಿಗೆ ಹೇಳಿದಳು:

"ನೋಡಿ, ನಾಡ್ದು ಗೌರಿ ಹಬ್ಬ. ನಾನೂ ಅಪ್ಪನ ಮನೆಗೆ ಹೋಗಿ ಬಾಳ ದಿನ ಆಯ್ತು. ಅದೂ ಹೋಗ್ಲಿ ಅಂದ್ರೆ ವರ್ಷಕ್ಕೆ ಒಂದು ಸರ್ತಿಯಾದ್ರೂ ಬರಿ ಬಾಗಿನನಾದ್ರೂ ಕೊಡಬ್ಯಾಡವಾ? ನಾಳಿಕ್ಕೆ ಬಾಗಿನನಾರೂ ಕೊಟ್‌ಕಳಿಸ್ತೀನಿ. ಇರೋನೊಬ್ಬ ತಮ್ಮ, ಅವನಾರೂ ಸಂತೋಷಪಟ್ಕೊಳ್ಳಿ."

ರಾಜ "ಆಗಲಿ ಅದ್ಕೇನಂತೆ, ಮಾರಾಯಳಾಗಿ ಕೊಟ್‌ಕಳುಸು, ಯಾರು ಬ್ಯಾಡಾ ಅಂತಾರೆ" ಅಂದ.

ಸರಿ, ರಾಣಿ ತಂತು ಮಾಡಿದಳು. ಒಂದು ದೊಡ್ಡ ಪೆಟ್ಟಿಗೆ ಮಾಡಿಸಿದಳು. ಅದರಲ್ಲಿ ಸಣ್ಣ ಕಂಡಿ ಮಾಡಿಸಿದಳು. ಅದರೊಳಗೆ ಮಗಳ್ನ ಕುಂಡಿರಿಸಿದಳು. ಮೇಲೆ ಹಣ್ಣು ಹಂಪಲ ಮಡಗಿದಳು. ಆ ಪೆಟ್ಟಿಗೇಯ ಯಿಮಾನದಲ್ಲಿ ಮಡಗಿದಳು. "ಮೊದಲು ಈ ಪೆಟ್ಟಿಗೆ ಬಾಗಲು ಯಾರು ತಗೀತಾರೆ ಅವರಿಗೆ ಮಾಲೆ ಹಾಕ್‌ಬುಡು" ಅಂತ ಮಗಳಿಗೆ ಹೇಳಿದಳು. "ಮೊದಲು ನೀನೇ ಬಂದು ಪೆಟ್ಟಿಗೆ ಬಾಗಲು ತಗೀಬೇಕು" ಅಂತ ತಮ್ಮನಿಗೆ ಹೇಳಿದಳು. ಸರಿ, ಯಿಮಾನ ಬೊಯ್



ಅಂತ ಹೊಂಡ್ತು. ರಾಜನಿಗೆ ಇದೊಂದೂ ಗೊತ್ತಾಗಲಿಲ್ಲ.

ನಾರದ ರಾಜನ ಹತ್ರಕ್ಕೆ ಬಂದ. ಆ ರಾಜನಿಗೆ ಒಬ್ಬಳು ಮಗಳವಳೆ, ಅವಳಂಥಾ ಹೆಣ್ಣು ಮೂರು ಲೋಕದಲ್ಲೂ ಇಲ್ಲವಂತೆ ಅಂತ ನಾರದನಿಗೆ ಗೊತ್ತಾಗಿತ್ತು. ಅದ್ನೇ ಕೇಳ್ಬೇಕೂ ಅಂತ ನಾರದ ಬಂದಿದ್ದ. ಅದೂ ಇದೂ ಮಾತಾಡ್ತಾ "ನಿನಗೆ ಒಬ್ಬಳು ಮಗಳು ಅವಳಂತಲ್ಲ. ಇನ್ನೂ ಯಾಕೆ ಮದುವೆಗಿದುವೆ ಮಾಡದೆ ಹಿಂಗೇ ಇದ್ದಿ? ಹೆಣ್ಣು ಮಕ್ಕಳ್ನ ಹೆತ್ತ ಮೇಲೆ ಆದಷ್ಟು ಬಿರಬಿರನೆ ಅವರ್ನ ಒಂದು ಗೊತ್ತಿಗೆ ಸೇರಿಸಬೇಕು" ಅಂದ ನಾರದ.

"ಅಯ್ಯೋ ಆ ಕಥೆ ನಾನ್ ಏನು ಹೇಳ್ಲಿ ಸ್ವಾಮಿ, ನನ್ನ ಮಗಳು ಕೈತೊಳಕೊಂಡು ಮುಟ್ಟೋ ಹಂಗವಳೆ. ಅಂಥ ಅಪರಂಜಿಯಂಥ ಹೆಣ್ಣನ್ನ ತನ್ನ ತಮ್ಮನಿಗೇ ಕೊಡಬೇಕು ಅಂತ ರಾಣಿ ಹಠಹಿಡದು ಬುಟ್ಟವಳೆ. ಅವನಿಗೆ ಕೊಡಾಕೆ ನನಗೆ ಸುತರಾಂ ಇಷ್ಟ ಇಲ್ಲ. ನಾನು ಕರಕೊಂಡು ಬರೋ ಗಂಡುಗಳ ಕಡೆಗೆ ಅವಳು ಮೋರೇನೂ ತಿರುಗಿಸೋದಿಲ್ಲ. ಹಿಂಗಾಗ್ಯದೆ ಸ್ಥಿತಿ. ನಾನು ಏನು ಮಾಡ್ಲಿ ಹೇಳಿ" ಅಂದ ರಾಜ.

"ಸರಿ, ಗಂಡ ಹೆಂಡತೀರ ಜಗಳದಲ್ಲಿ ಕೂಸು ಬಡವಾಯ್ತು ಅಂತ ನಿಮ್ಮ ನಿಮ್ಮ ಮನಸ್ತಾಪದಲ್ಲಿ ಆ ಅರೀದ ಹುಡುಗಿ ಹಂಗೇ ಮುಪ್ಪುನೀಸಬೇಕು ಅಂತ ಕಾಣ್ತದೆ. ಹೂಂ, ಅವಳ ಹಣೇಬರಹ ಹ್ಯಂಗದೋ" ಅಂದುಬುಟ್ಟು ನಾರದ ಹೊಂಟ್‌ಹೋದ.

ಅವನಿಗೆ ಈ ಇಚಾರ ಯಾಕೋ ಬಾಳ ಮನಸ್ಸಿಗೆ ಹಿಡಿಸಿತು. 'ನೋಡಾನೆ, ಇದು ಹ್ಯಂಗಾಯ್ತದೇ ಅಂತ ನಮ್ಮ ಅಪ್ಪನ್ನೇ ಕೇಳಿದ್ರೆ ಗೊತ್ತಾಯ್ತದೆ" ಅಂತ ನಾರದ ಬ್ರಹ್ಮನ ಲೋಕಕ್ಕೆ ಹೋದ. ಅಲ್ಲಿ ಬ್ರಹ್ಮ ಶಾರದೆ ಎಲ್ಲಾ ಕೂತಿದ್ರು. ಬ್ರಹ್ಮ "ಯಾಕ್ ಬಂದೆ?" ಅಂತ ಕೇಳಿದ. "ನಮ್ಮ ಭೂಲೋಕದಲ್ಲಿ ಒಂದು ಇಚಿತ್ರ ಆಗಿ ಬುಟ್ಟದೆ. ಒಬ್ಬ ರಾಜನ ಮಗಳು ಬೆಳದು ನಿಂತವ್ಳೆ. ಅವಳು ಬಾಳ ರೂಪವಂತೆ. ಅವಳನ್ನ ತಮ್ಮನಿಗೇ ಕೊಡಬೇಕು ಅಂತ ರಾಣಿ, ಏನಾದ್ರೂ ಕೊಡಾಕಾಗೋದಿಲ್ಲ ಅಂತ ರಾಜ. ಹಿಂಗಾಗ್ಯದೆ. ಅವಳು ಯಾರಿಗೆ ಮದುವೆಯಾಯ್ತಾಳೆ?" ಅಂತ ನಾರದ ಕೇಳಿದ. ಬ್ರಹ್ಮ ನಗ್ತಾ.'

"ಅವರಿಗೊಂದು ಹುಚ್ಚು, ಅಷ್ಟೇಯ. ಅವರ ಯಾರ ಆಸೇನೂ ಆಗೋದಲ್ಲ ಹೋಗೋದಲ್ಲ. ಅವಳಿಗೆ ಕಾಯ್ಕೊಂಡ್ ಕೂತಿರೋ ಗಂಡನೇ ಬೇರೆ" ಅಂದ.

"ಅವನು ಯಾರು?" ಅಂತ ಕೇಳಿದ ನಾರದ.

"ಆ ರಾಣಿಯ ಅಪ್ಪನ ಪಟ್ಟಣದಲ್ಲಿ ಒಬ್ಬ ಭಿಕ್ಷುಕ ಅವನೆ. ಅವನು

ಊರಲ್ಲೆಲ್ಲಾ ಭಿಕ್ಷೆ ಮಾಡಿಕೊಂಡು ಬಂದು ಊರ ಹೆಬ್ಬಾಗಿಲಲ್ಲಿರೋ ಹಾಳು ಮಂಟಪದ ಜಗಲಿ ಮೇಲೆ ಕೂತ್ಕೋತ್ತಾನೆ. ಅವನೇ ಆ ರಾಜಕುಮಾರಿಯ ಗಂಡ. ಇದೇ ಅವಳ ಹಣೇಬರ" ಅಂದ ಬ್ರಹ್ಮ.

ಇದ ಕೇಳಿ ನಾರದನಿಗೆ ಹೊಟ್ಟೆ ಕಳ್ಳು ಚುರ್ ಅಂತು. 'ಅಯ್ಯೋ ಪಾಪಾ, ಎಂಥ ಹೆಣ್ಣಿಗೆ ಎಂಥಾ ಗಂಡು?" ಅಂದುಕೊಂಡು ಭೂಲೋಕಕ್ಕೆ ಬಂದ. ಆ ರಾಣಿಯ ಅಪ್ಪನ ಪಟ್ಟಣಕ್ಕೆ ಹೋದ. ಅಷ್ಟು ಹೊತ್ತಿಗಾಗಲೇ ಆ ಭಿಕ್ಷುಕ ಊರಲ್ಲೆಲ್ಲಾ ತಿರುಪೆ ಎತ್ತಿಕೊಂಡು ಬಂದು ಆ ಹಾಳು ಮಂಟಪದ ಜಗಲೀ ಮೇಲೆ ಕೂತಿದ್ದ. ನಾರದ ಅವನ್ನ ನೋಡಿದ. 'ಬ್ರಹ್ಮನ ಮಾತನ್ನ ಪರೀಕ್ಷೆ ಮಾಡೇ ಬುಡಬೇಕು ನೋಡಾನೆ' ಅಂದುಕೊಂಡು ಜಟಾಯು ಪಕ್ಷಿ ಕರದ. ಅದು ಕರದ ಕೂಡಲೇ ಭರ್ರ್ ಅಂತ ಕಣ್‌ಮುಚ್ಚಿ ಕಣ್‌ಬುಡೋದ್ರೊಳಗೆ ಬಂದುಬುಡ್ತು. "ನೋಡು, ಎರಡು ಸಮುದ್ರದ ನಡೂಮಧ್ಯೆ ಇರೋ ದಿಂಡಿನ ಮೇಲೆ ತಕ್ಕೊಂಡ್ ಹೋಗಿ ಇವನ್ನ ಬುಟ್‌ಬುಡು" ಅಂತ ಹೇಳಿದ ನಾರದ. ಸರಿ, ಹೇಳಿದ್ದೇ ತಡ ಜಟಾಯು ಆ ಭಿಕ್ಷುಕನ್ನ ಅನಾಮತ್ತಾಗಿ ಎತ್ತಿಕೊಂಡು ಹಾರಿ ಹೊಂಟೋಯ್ತು. ಎರಡು ಸಮುದ್ರದ ಮದ್ಯದಲ್ಲಿ ಇಳಿಸ್ತು. ಅವನಿಗೆ ಕಕರುಮಕರು ಬಂದಂಗಾಯ್ತು. "ನನ್ನ ಯಾಕಪ್ಪಾ ಜನಮನ ಯಾರೂ ಇಲ್ಲದ ಈ ಜಾಗಕ್ಕೆ ತಂದ್ ಬುಟ್ಟೆ. ಇಲ್ಲಿ ನೀರೂ ನೆಳ್ಳೂ ಒಂದು ಇಲ್ಲ. ನಾನು ನಿನಗೆ ಏನು ಅನ್ಯಾಯ ಮಾಡಿದ್ನಪ್ಪಾ. ಹೋಗಲಿ, ಬಾಯಾರಿ ಜೀವ ಹೋಯ್ತದೆ. ಎಲ್ಯಾರೂ ಒಂದಿಷ್ಟು ಹಣ್ಣಾರೂ ತಂದುಕೊಡಪ್ಪಾ" ಅಂತ ಕೇಳಿಕೊಂಡ ಭಿಕ್ಷುಕ.

"ಅಷ್ಟೇ ತಾನೇ? ಆಗಲಿ ತಂದ್‌ಕೊಡ್ತೀನಿ ತಡಿ" ಅಂತ ಹೇಳಿ ಜಟಾಯು ಭರ್ರ್ ಅಂತ ಹಾರಿಹೋದ.

ರಾಣಿ ಕಳಿಸಿದ ಯಿಮಾನ ಆಕಾಶ ಮಾರ್ಗದಲ್ಲಿ ಹೋಯ್ತಾ ಇತ್ತು. ಅದರಲ್ಲಿ ಪೆಟ್ಟಿಗೆ ಮೇಲೆ ಬೇಕಾದೋಟು ಹಣ್ಣಿನ ರಾಸೀನೆ ಇದ್ದದ್ದು ಜಟಾಯುಗೆ ಕಾಣ್ತು. 'ಸರಿ, ಪರವಾಯಿಲ್ಲ. ಹುಡುಕೋದೇ ತಪ್ತು' ಅಂದುಕೊಂಡು ಅದು ಆ ಪೆಟ್ಟಿಗೆ ಸಮೇತ ಹಾರಿಸಿಕೊಂಡು ತಂದು ಭಿಕ್ಷುಕನ ಮುಂದಕ್ಕೆ ಮಡಗಿತು. ಆ ಮೇಲೆ "ಈ ಪಟು ನಾನು ಹೋಯ್ತೀನಿ. ಇನ್‌ಮ್ಯಾಲೆ ನಿನ್ನ ಹಣೇಬರ" ಅಂತ ಹೇಳಿ ಅದು ಹಾರಿಹೋಯಿತು.

೩

ಆ ಭಿಕ್ಷುಕ ಅವನಪ್ಪನ ಕಾಲದಿಂದ್ಲೂ ಅಂಥ ಹಣ್ಣ ಕಂಡೋನಲ್ಲ. ಅವ ನೋಡಿದ್ದೇ ತಡ, ಒಂದೇ ಉಸಿರಿಗೆ ಬರಗೆಟ್ಟಂಗೆ, ಹೊಟ್ಟೆ ಊದೋ ಹಂಗೆ



ತಿಂದ. ತಿಂದು ನಿಪ್ಪಣ ಆದ ಮೇಲೆ 'ಈ ಪೆಟ್ಗೆಲಿ ಏನಿದೆ?' ಅಂತ ಮೆತ್ತಗೆ ಅದರ ಬಾಯಿತೆಗೆದ. ತಕ್ಷಣವೇ ಹುಡಿಗಿ ಅವನ ಕೊಳ್ಳಿಗೆ ಹೂಮಾಲೆ ಹಾಕಿಬಿಟ್ಟಳು. ಅವನಿಗೆ ಹ್ಯಂಗಂಗೋ ಆಯಿತು. 'ಇದೇನು ಕನಸೋ ನಿಜವೋ' ಅಂದುಕೊಂಡ. ಇವನ ನೋಡಿದಕೂಡಲೇ ರಾಜಕುಮಾರಿಗೆ ಎಲ್ಲೂ ಇಲ್ಲದ ಚಿಂತೆ ಬಂದು ಕವಕೊಂಡುಬುಡ್ತು.

* * * * *

ನಾರದ ರಾಜನ ಹತ್ರಕ್ಕೆ ಬಂದ. ಮಗಳು ಮಾಯವಾಗ್ಯವಳೆ ಅಂತ ರಾಜ ಕೊರಗಿ ಕೊರಗಿ ಕಡ್ಡಿ ಆಯ್ತಾ ಇದ್ದ. "ನೀನ್ಯಾಕೆ ಸುಮ್ ಸುಮ್ನೇ ಕೊರಗ್ತೀ. ಹಾಲು ಹುಯ್ಯಾಕೆ ನಮ್ಮಿಚ್ಚೆ ಅಂದ್ರೆ ಹಣೇಲಿ ಬರಿಯಾಕೂ ನಮ್ಮಿಚ್ಚೇನಾ. ಅವರವರು ತಂದ ಫಲ ಅವರವರಿಗೆ. ನೀನು ಎದೆ ಕಲ್‌ಮಾಡಿಕೊ. ನಿನ್ನ ಮಾತೂ ನಡೆಯೋದಿಲ್ಲ, ನಿನ್ನ ರಾಣಿ ಇಷ್ಟಾನೂ ನಡೆಯೋದಿಲ್ಲ. ಅದು ಆಗೋದೆ ಬ್ಯಾರೆ" ಅಂದ ನಾರದ.

"ಹಂಗಂದ್ರೆ?"

"ನಿನ್ ಮಗಳು ಒಬ್ಬ ಅನ್ನಾನ್ನಗತಿಕನಾದ ಭಿಕ್ಷುಕನ ಕೈ ಹಿಡೀಬೇಕು ಅಂತ ಅವಳ ಹಣೇಲಿ ಬರ್ದದೆ" ಅಂತ ಬ್ರಹ್ಮ ತನಗೆ ಹೇಳಿದ್ದನ್ನೆಲ್ಲಾ ಹೇಳಿದ. ರಾಜ "ಅಯ್ಯೋ ಅಯ್ಯೋ" ಅಂತ ಎದೆ ಎದೆ ಬಡುಕೊಂಡ. ನಾರದ ಅವನ್ನ ಸಮಾಧಾನ ಮಾಡಿ ಹಿಂದಿರುಗಿದ. ಅಷ್ಟು ಹೊತ್ತಿಗೆ ಜಟಾಯು ಬಂದು "ನೀವು ಹೇಳಿದಂಗೆ ಮಾಡಿವ್ನಿ" ಅಂದ. "ಸಿಕ್ಕಿಲ್ಲ, ನೀನು ಮತ್ತೆ ಹಿಂತಿರುಗಿ ಹೋಗಿ ಅವನು ಏನಾಗ್ಯವನೆ ನೋಡಿಕೊಂಡು ಬಾ" ಅಂತ ಹೇಳಿ ನಾರದ ಮತ್ತೆ ಅವನ್ನ ಹಿಂದಕ್ಕೆ ಕಳಿಸಿದ. ಅವನು ಹೋಗಿ ಸಮುದ್ರದ ತಾವು ನೋಡ್ತಾನೆ : ರವರವನೆ ಉರಿಯೋ ರಾಜಕುಮಾರಿ ಮತ್ತೆ ಭಿಕ್ಷಕ ಇಬ್ರೂ ಕೂತವರೆ. ಅವನಿಗೇ ಬಲು ಚೋಜಿಗವಾಯಿತು. ಹಿಂತಿರುಗಿ ಬಂದ. ಅವನು ಬರೋ ಹೊತ್ತಿಗೆ ನಾರದ ರಾಜನ ಹತ್ರ ಕೂತಿದ್ದ. ಅಲ್ಲಿಗೇ ಬಂದು ಅವರಿಗೆ ಕೈ ಮುಗಿದು ಹೇಳಿದ : "ಏನು ಚೋಜಿಗ ಅಂತೀರಿ ನಾನು ಕರಕೊಂಡು ಹೋಗಿ ಬುಟ್ಟದು ಒಬ್ಬನ್ನೇಯ. ಈಗ ನೋಡಿದರೆ ಕೆಂಡಸಂಪಿಗೆಯಂಥ ಒಂದು ಹೆಣ್ಣು ಬ್ಯಾರೆ ಅವನ ಜೊತೇಲದೆ". ನಾರದನಿಗೂ ಬಾಳ ಆಚರ್ಯವಾಯಿತು. "ನೀನು ಇನ್ನೇನೂ ತಕ್ಕೊಂಡು ಹೋಗಿ ಕೊಡನಿಲ್ವ?" ಅಂದ. "ಯಿಮಾನದಲ್ಲಿ ಒಂದು ಪೆಟ್ಟಿಗೆ ಹೋಯ್ತಾ ಇತ್ತು. ಅದರಲ್ಲಿ ಹಣ್ಣಿದ್ದೋ, ಅದು ಮಾತ್ರ ತಕ್ಕೊಂಡು ಹೋಗಿ ಕೊಟ್ಟೆ" ಅಂತ ಜಟಾಯು ಹೇಳಿದ. ಆಗ ಬ್ರಹ್ಮನ ವಾಕ್ಯ ನೆರವೇರಿತು

ಅಂತ ನಾರದನಿಗೆ ಗೊತ್ತಾಯಿತು. ಆಗ ನಾರದ "ನೋಡು ರಾಜ, ಬ್ರಹ್ಮನ ವಾಕ್ಯ ಸುಳ್ಳು ಮಾಡಬೇಕೂ ಅಂತ ಆ ಭಿಕ್ಷುಕನ್ನ ತಕ್ಕೊಂಡು ಹೋಗಿ ಸಮುದ್ರದ ಆಚೆಗೆ ಬುಡಿಸಿದೆ. ಬ್ರಹ್ಮ ಬರೆದ ಹಣೇಬರ ನಿಜವಾಗೇ ಹೋಯ್ತು. ನಾನು ಏನ್ ಮಾಡಿದ್ರೂ ತಪ್ಪಿಸಕಾಗ್ಲಿಲ್ಲ" ಅಂತ ನಡೆದ ಸಂಗತೀನೆಲ್ಲಾ ತಿಳಿಸಿದ. ರಾಜನಿಗೆ ಬರಬಾರದ ಚಿಂತೆ ಬತ್ತು. ಆಗ ನಾರದ ಹೇಳಿದ: "ನೀನು ಯೋಚ್ನೆ ಚಿಂತೆ ಎಲ್ಲಾನೂ ಬುಟ್ಬುಡು. ಏನೇನಾಗಬೇಕೋ ಎಲ್ಲಾ ಆಗೋಯ್ತು. ಈಗ ಅವರ್ನ ಕರೆಸಿ ಅವರ ಜೀವನಕೊಂದು ದಾರಿ ಮಾಡ್ಕೊಡು."

ಸರಿ, ರಾಜ ರಾಣಿಯರಿಗೆ ದೇವರ ಸಂಕಲ್ಪದ ಮುಂದೆ ತಮ್ಮ ಆಟ ಏನೂ ನಡೀನಿಲ್ಲ ಅಂತ ಗೊತ್ತಾಯ್ತು. ತಾವು ಹಾರೈಸಿದ್ದೆಲ್ಲಾ ಹಾಳಾಯ್ತು ಅಂದುಕೊಂಡರು. ಆಮೇಲೆ ರಾಜಕುಮಾರೀನೂ ಭಿಕ್ಷುಕನ್ನೂ ಅಲ್ಲಿಂದ ಕರೆಸಿದರು. ಅದ್ದೂರಿಯಾಗಿ ಮದುವೆ ಮಾಡಿದರು. ಪಟ್ಟಣದಲ್ಲೆಲ್ಲಾ ಸಬಗಸ್ತು ಮಾಡಿಸಿದರು. ರಾಜ ತನ್ನ ಅರ್ಧ ರಾಜ್ಯ ದಂಡು ದಾಳಿ ಮಂದಿ ಮಾರ್ಬಲ, ಬೇಕಾದಷ್ಟು ಮುತ್ತು ರತ್ನ ವಜ್ರ ವೈಢೂರ್ಯ ತನ್ನ ಅಳಿಯನಿಗೆ ಉಡುಗೊರೆ ಕೊಟ್ಟ. ಎಲ್ಲಾ ಸಂತೋಷವಾಗಿ ಬದುಕಿಕೊಂಡರು.

* * * *



# ಯಾರು ಹೆಚ್ಚು ?*

ಒಂದೂರಲ್ಲಿ ಒಬ್ಬ ಮಾ ಸಾವುಕಾರ. ಅವನು ಮೂರು ಖಂಡುಗ ಜೋಳದ ಬಿತ್ತನೆ ಬಿತ್ತುತಿದ್ದ. ಆ ಜೋಳದ ಕಡ್ಡಿಗೊಂದೊಂದು ಕರು ಅವನ ಮನೇಲಿತ್ತು. ಸುತ್ತ ಹತ್ತಳ್ಳಿಗೆಲ್ಲಾ ತಾನೊಬ್ಬನೇ ತನುವಾದ ತೂಕವಾದ ಭರ್ಜರಿಕುಳ ಅಂತ ಅವನಿಗೆ ತಲೆತಿರುಗು. ಹತ್ತೊರ್ಷ ಮಳೆ ಧರೆಗೆ ಹನೀದೆ ಇದ್ರೂ ತನ್ನ ಮನೆ ಮೂಲೇಲಿರೋ ಒಂದು ಕಣಜ ತನ್ನೂರನ್ನೆಲ್ಲಾ ಸಾಕಬಹುದು ಅಂತ ಅವನಿಗೆ 'ಸೆಡಾರತ್ತು'. ಅವನಿಗೆ ಒಬ್ಬನೇ ಮಗ. ಅವನು 'ಮಿಜಾರಷ್ಟಿ'ಗೆ ಬಂದಿದ್ದ. ಅವನಿಗೆ ಹೆಣ್ಣು ನೋಡಾಕೆ ಅಂತ ರೊಟ್ಟಿ ಬುತ್ತಿಕಟ್ಟಿಕೊಂಡು ಹೊಂಟ. ಅಲ್ಲಿ ಇಲ್ಲಿ ದಿಳ್ಳಿ ದೀಪಾಂತರ ಎಲ್ಲಾನೂ ಒಂದು ಕಡೆಯಿಂದ 'ಸಿದಿಕಿದ'. ತನ್ನ ಮಗನಿಗೆ ಜೋಡಿಯಾದ ಹೆಣ್ಣು, ತನ್ನ ದಕ್ಷತ್ತಿಗೆ ಸರಿಯಾದ ಮನೆ ಎಲ್ಲೂ ಅವನ ಕಣ್ಣಿಗೆ ಗೋಚರವಾಗಲಿಲ್ಲ. ಹೀಗೇ ಸುತ್ತಿ ಸುತ್ತಿ ಸಾಕಾಗಿ ಕೊನೆಗೆ ಒಂದೂರಿಗೆ ಬಂದ. ಅಲ್ಲೊಬ್ಬ ಸಾಹುಕಾರ. ಅವನ ಮನೇಲಿ ಒಂದು ಹೊತ್ತಿನ 'ಎಸರಿಗೆ' ಒಂದು ಖಂಡುಗ ಅಕ್ಕಿ ಹೊಂದು ಬುಡುತ್ತಿದ್ದರು. ಅದನ್ನ ನೋಡಿ ಈ ಸಾವುಕಾರ 'ಅಬ್ಬಾ' ಅಂತ ಬಾಯ್ಮೇಲೆ ಕೈಮಡೀಕೊಂಡ. 'ನಾನೇ ಹೆಚ್ಚು ಅಂದ್ರೆ ನನ್ನೂ ಮೀರಿಸಿದ ಭೂಪ ಇವ್ನ' ಅಂದುಕೊಂಡು 'ಇವನೇ ನನಗೆ ಸರಿಯಾದ ಜೋಡಿ. ಇವನ ಮನೇಲೇ ಹೆಣ್ಣು ತರಬೇಕು. ಇದರಿಂದ 'ಸತಾಗತಾ' ಆಗಲಿ ಅಂತ ಮನಸ್ಸಿನಲ್ಲಿ ಹೂಟ ಹಾಕಿಕೊಂಡ. "ಗೌಡ್ರೇ, ನನ್ಮಗನಿಗೆ ನಿಮ್ಮೆಣ್ಣು ಕೊಟ್ಟು ಪುಣ್ಯ ಕಟ್ಕೊಳ್ಳಿ" – ಅಂದ. ಅವರೂ ಒಪ್ಪಿದರು. ಮದುವೆ ನಿಷ್ಕರ್ಷೆ ಆಗೇಹೋಯಿತು. ಇನ್ನು ಸಾಮಾನು ಸರಂಜಾಮು ಹೊಂದಿಸಬೇಕು. ಅವರೂರ ಕಡೆ ಸೌದೆ ಸಿಕ್ತಿರಲಿಲ್ಲ. ಆದ್ರಿಂದ ಆಳಿಗೆ ಇಪ್ಪತ್ತೈದು ಇಪ್ಪತ್ತೈದು ಗಾಡಿ ಕಟ್ಟಿಸ್ಕೊಂಡು ಬೀಗರಿಬ್ಬರೂ ಸೌದೆ ತರೋಕೆ ಹೊಂಟರು. ಒಂದು ಪಟ್ಟಣದ ತಾವು ಒಬ್ಬಯ್ಯ ಬತ್ತಾ ಇದ್ದ. ಈ ಬೀಗರಿಬ್ಬರೂ ಅವನನ್ನ ಕೇಳಿದರು:

"ಅಯ್ಯಾ ಅಯ್ಯಾ ಇಲ್ಲಿ ಯಾರ್ತಾವಾರೂ ಸೌದೆ ಸಿಕ್ಯಾವ?"

---

* ಹೇಳಿದವರು : ಕೃಷ್ಣರಾಜ ನಗರದ ತಾಲ್ಲೂಕು ಬಡಗನಕೊಪ್ಪಲಿನಲ್ಲಿರುವ ಹೊನ್ನವಳ್ಳಿ ದೊಡ್ಡೇ ಗೌಡ.

"ನಿಮಗೆ ಏಸುಗಾಡಿ ಬೇಕಾಗಿತ್ತು?" – ಅಂತ ಕೇಳಿದ ಆವಯ್ಯ.

"ನಮಗೆ ಅಷ್ಟು ಇಷ್ಟು ಸಾಕಾಗೋದಿಲ್ಲ. ಐವತ್ತು ಗಾಡಿನಾದ್ರೂ ಬೇಕೇ ಬೇಕು" ಅಂತ ಬೀಗರಿಬ್ಬರೂ ಠೀವಿಯಿಂದ ಹೇಳಿದರು. ಆವಯ್ಯ ಮೀಸೆ ಮರೇಲಿ ನಗ್ತಾ.

"ಅಯ್ಯೋ ಈಟೇತಾನೆ? ಇದಕೆ ಯಾಕೆ ಯೋಚನೆ? ಒಂದು ಲಾಜಾದೊಳಗೆ ನಾನೇ ಕೊಡ್ತೀನಿ ಬನ್ನಿ" ಅಂತ ಆ ಬೀಗರನ್ನ ಜೊತೇಲಿ ಕರಕೊಂಡು ಹಟ್ಟೀಗೆ ಹೋದ. ಎಲ್ಲಾ ಜಗಲೀ ಮೇಲೆ ಸ್ಯಾಪೆ ಹಾಸಿಕೊಂಡು ಕೂತುಗೊಂಡರು. ಆವಯ್ಯ ಒಬ್ಬ ಆಳನ್ನು ಕೂಗಿ

"ಲೋ ತಿಮ್ಮ, ಕೆಂಪ ಯಾರಿದ್ದಿರೋ ಅಲ್ಲಿ. ಹೊಲ್ತಾಕ್ಹೋಗಿ, ಇವತ್ತು ಹೊತ್ತಾರೆ ಒಪ್ಪತ್ತು. ಮುರಿದಿರೋ ನೇಗಿಲು ನೊಗ ಮೇಣಿ ಎಲ್ಲಾನೂ ಒಂತಕೆ ಗುಡ್ಡೆ ಹಾಕ್ರೋ" – ಅಂತ ಹೇಳಿದ. ಸ್ವಲ್ಪ ಹೊತ್ತಾದ ಮೇಲೆ ಹೊಲದ ಹತ್ರ ಹೋಗಿ ನೋಡಿದ್ರೆ ಮುರಿದಿರೋ ನೇಗಿಲು ನೊಗದ ರಾಶಿ ಒಂದು ಬೆಟ್ಟದ ಗಾತ್ರ ಇತ್ತು. ಸರಸರನೆ ಆಳುಗಳು ಅವನ್ನು ಗಾಡಿಗೆ ತುಂಬಿದರು. ಅವರು ತಂದಿದ್ದ ಐವತ್ತು ಗಾಡಿಗಳೂ ತುಂಬಿ ಉಕ್ಕಡಿಸಿ ಇನ್ನೂ ಬೇಕಾದಷ್ಟು ಸೌದೆ ಉಳೀತು. ಬೀಗರಿಗೆ ಬಾಯಿಕಟ್ಟಿಹೋಯಿತು. "ತುಂಬಾ ಉಪ್ಕಾರ ಆಯ್ತು ಗೌಡ್ರೆ, ನಿಮ್ಮ ಸಾಯ ನಾವು ಜಲ್ಮ ಇರೋಗಂಟ ಮರೆಯೋದಿಲ್ಲ" – ಅಂತ ಆ ಗೌಡನಿಗೆ ಕೈಮುಗಿದರು. "ಏ, ಇದೆಂಥ ಸಾಯ ಬುಡು, ಮನುಸ್ಯನಿಗೆ ಮನುಸ್ಯ ಆಗದೆ ಮರ ಆದಾತಾ? ಅಷ್ಟಕ್ಕೂ ನಾ ಮಾಡಿದ್ದು ತಾನೇ ಏನು ? ನಮಗೆ ಕೆಲಸಕ್ಕೆ ಆಗ್ದೇ ಇರೋ ನೇಗಲು ನೊಗದ ತುಂಡು ಕೊಟ್ಟೆ, ಒಂದು ಜಿನಕ್ಕೆ ಇಂಥೇವು ಒಂದು ನೂರು ಗಾಡಿ–ಕೊನೇಪಕ್ಷ ಮುರಿತವೆ. ಇದೇನು ಜುಜಿಬಿ ಬುಡು" ಅಂದ ಆ ಗೌಡ. ಸರಿ, ಗಾಡಿ ಕಟ್ಟಿಸಿಕೊಂಡು ಮುಂದಕ್ಕೆ ಪಯಣ ಬೆಳೆಸಿದ್ರು. ಹೋಯ್ತಾ ಹೋಯ್ತಾ ಉಟ್ಟುರು ಬಿಸಲು. ಬೆವರು ಜಲಜಲನೆ ಬೆಟ್ಟುಗಾತ್ರ ಕಿತ್ತು ಹರಿಯುತ್ತಿತ್ತು. ದಾವಾಗಿ ಗಂಟಲೆಲ್ಲಾ ಒಣಗಿ ಹೋಯಿತು. ಹಂಗೂ ಹಿಂಗೂ ವದ್ದಾಡಿಕೊಂಡು ಯಾವುದೋ ಒಂದೂರಿಗೆ ಬಂದು ಬಿದ್ದರು. ಅಲ್ಲೊಬ್ಬಳು ಮುದುಕಿ ಬಾಗಿಲಲ್ಲಿ ಕೂತುಕೊಂಡು ಕುಟ್ಟಣದಲ್ಲಿ ಎಲೆ ಅಡಿಕೆ ಕುಟ್ತಾ ಇದ್ದಳು. ಬೀಗರಿಬ್ಬರೂ ಹೋಗಿ ಅವಳನ್ನೆ ಕೇಳಿದರು:

"ಅಜ್ಜಮ್ಮಾ, ಅಜ್ಜಮ್ಮಾ ..... ಬಾಯಾರಿ ಪರಾಣ ಹೋಯ್ತಾ ಅದೆ. ನಮ್ಗೂ ನಮ್ಮೆತ್ಗೂ ಕುಡಿಯಾಕೆ ಒಂದೀಟು ನೀರುಕೊಟ್ಟು ಪುಣ್ಯಕಟ್ಕೋ ತಾಯಿ."

ಆಳುದ್ದ ಸರೀರ ಗೇಣುದ್ದ ಮಾಡ್ಕೊಂಡು ತೊಟ್ಟು ನೀರಿಗಾಗಿ



'ಬಣಗು'ತ್ತಿರುವ ಅವರನ್ನು ನೋಡಿ ಮುದುಕಮ್ಮನಿಗೆ ಹೊಟ್ಟೆ ಚುರ್ ಅಂತು.

"ಅಯ್ಯೋ ಕುಡಿಯಾಕೆ ಒಂದೀಟು ನೀರು ಕೊಟ್ರೆ ನಮ್ಮ ಭಾಗ್ಯ ಹೊಂಟೋದದಾ? ನೀರ್ಯಾಕೆ ಬೇಕು, ಮಜ್ಗೇನೆ ಕೊಡ್ತೀನಿ ತಡೀರಿ. ಮನಸ್‌ಪೂರ್ತ ಕುಡೀವ್ರಂತೆ" ಅಂತ ಹೇಳಿ ಆ ಮುದುಕಮ್ಮ ಒಳಗಿದ್ದ ಸೊಸೇ ಕರೆದಳು.

"ಲೇ, ಅವಳು ಯಾರೇ ಒಳಗೆ, ಚನ್ನಮ್ಮಾ .... ಚನ್ನಮ್ಮಾ"

ಸೊಸೆ ಬಂದಳು. "ಏನ್ರತ್ಯಮ್ಮಾ ಕರ್ದಿದ್ದೂ?" ಅಂತ ಕೇಳಿದಳು.

"ನೋಡು, ಪಾಪ ಇವರು ದಾವಾಗಿ ಬಂದವ್ರೆ. ನೆನ್ನೆ ಕಡೆದ ಬೆಣ್ಣೆ ಕಟ್ಟೆ ಹಾಕಿ, ಇವತ್ತು ಕಡೆದ ಮಜ್ಗೆ ಹೂದು ಕೊಡು. ಇವ್ರೂ ಇವ್ರೆತ್ತೂ ಕುಡೀಲಿ..... ಪಾಪ ಏಟ್ದೂರ್ದಿಂದ ಬಂದವರೋ" ಅಂತ ಮುದುಕಿ ಹೇಳಿದಳು. ಸೊಸೆ 'ಅಗ್ಲಿ' ಅಂತ ಹೋಗಿ ನೆನ್ನೆ ಕಡೆದ ಬೆಟ್ಟದ ಗಾತ್ರ ಬೆಣ್ಣೆ ಉಂಡೆ ತಂದು ಕಟ್ಟೆ ಹಾಕಿದಳು. ಇವತ್ತು ಕಡೆದ ಮಜ್ಜಿಗೆ ತಂದು ಅದಕ್ಕೆ ಹೂದಳು, ಹೂದಳು. ಅದು ಮಜ್ಜಿಗೆ ಹೊಳೆಯಾಗಿ ಹರಿಯಿತು. ಬೀಗರೂ, ಐವತ್ತು ಜೊತೆ ಗಾಡಿ ಎತ್ತುಗಳೂ, ಅವರ ಜೊತೆ ಬಂದಿದ್ದ ಐವತ್ತು ಆಳುಗಳೂ ಎಲ್ಲಾ ಹೊಟ್ಟೆ ಬಿರಿಯೋ ಹಂಗೆ ಕುಡಿದೂ ಕುಡಿದೂ ಸಾಕಾದರು, ಮುಗಿಯಲಿಲ್ಲ. ಎತ್ತು ಗಾಡಿ ಮಜ್ಜಿಗೆ ಹೊಳೆ ದಾಟಿ ಆಚೆಗೆ ಹೋಗೋಕೆ ಆಗಲಿಲ್ಲ. ಅವರಿಗೆ ಬಾಳ ಯಥೆ ಆಯಿತು. 'ಏನು ಮಾಡೋದೂ' ಅಂತ ತಲೇ ಮೇಲೆ ಕೈ ಹೊತ್ತು ಕೂತರು. ಕೊನೆಗೆ 'ಶಿವ ಮಾಡ್ಸಿದ್ದಾಗಲಿ' ಅಂತ ಇಬ್ಬರು ಬೀಗರೂ ನಡೆದೂ ನಡೆದೂ ಹೊಳೆ ಬಳಸಿಕೊಂಡು ಬಂದರು. ಅಲ್ಲೊಂದೂರು ಸಿಕ್ತು. ಅಲ್ಲೂ ಒಬ್ಬಳು ಮುದುಕಮ್ಮ ಜಗಲೀ ಮೇಲೆ ಕೂತಿದ್ದಳು. ಇವರು ಹೋಗಿ ನಡೆದ ಸಂಗತಿ 'ಇವರಿಸಿ'ದರು. "ನಮ್ಮ ಎತ್ತು ಗಾಡಿ ಆಳು ಎಲ್ಲಾ ಮಜ್ಗೇ ಹೊಳಿಂದ ಆಚೆ ಸಿಕ್ಕೊಂಡು ಬುಟ್ಟವರೆ. ಅವರ್ನ ಏನಾರೂ ಮಾಡಿ ಈಚೆಗೆ ಕರಕೊಂಡು ಬರಾಕೆ ಸಾಯ ಮಾಡಬೇಕು" ಅಂತ ಅಂಗಲಾಚಿದರು. ಮುದುಕಮ್ಮ ಹುಸಿನಗೆ ನಗುತ್ತಾ,

"ಈಟೇ ತಾನೇ? ಇದಕ್ಕೆ ಯಾಕೆ ಈಟೊಂದು 'ಸಿಂತೆ' ಮಾಡ್ತೀರಪ್ಪ, ತಡೀರಿ" ಅಂತ ಹೇಳಿ ಒಳಗಿದ್ದ ಸೊಸೇ ಕರೆದಳು. ಅವಳು ಬಂದು 'ಏನು' ಅಂತ ಕೇಳಿದಳು. "ನೋಡೇ ಪುಟ್ಟಮ್ಮ ನಮ್ಮನೇಲಿರೋ ಪಡ್ಡೆ ಕೊತ್ತಿಗಳ್ನ–ಉಳಿದೋವು ಬ್ಯಾಡ–ಒಂದು ಸಟಾಗಿ ಬುಡು. ಎಲ್ಲೋ ಮಜ್ಗೆ ಹರೀತದಂತೆ, ನೆಕ್ಕೊಂಡು ಬರಲಿ" – ಅಂದಳು. ಅವಳು ಹೋಗಿ 'ಕೊತ್ತಿ'ಗಳನ್ನು ಈಚೆ ಬುಟ್ಟಳು. ಬುಳು ಬುಳು ಬುಳು ಅಂತ ಕೊತ್ತಿಗಳ ದಂಡಿಗೆ ದಂಡೇ ಮನೆಯಿಂದ

ಹೊರಕ್ಕೆ ಹೊಂಡ್ತು. ಅವು ಬಂದು ಸಾಸ್ತ್ರಕ್ಕೂ ಒಂದು ತೊಟ್ಟೂ ಇಲ್ಲದಂತೆ ಎಲ್ಲಾ ಮಜ್ಗೇನೂ ಪುಟ್ಗೆ ನೆಕ್ಕಿ ಹಾಕಿದವು. ಹರೀತಿದ್ದ ಮಜ್ಗೆಹೊಳೆ ಪುಟ್ಟಗಾದ ಮೇಲೆ ಇವರು ಎತ್ತು ಗಾಡಿ ಹೊಡಕೊಂಡು ಬಂದರು. ಮುಂದಕ್ಕೆ ಹೊಂಟರು. ಬತ್ತಾ ಬತ್ತಾ ದಾರಿಯಲ್ಲಿ ಕತ್ತಲಾಯಿತು. ಉಳುಕೊಳ್ಳುವುದಕ್ಕೆ ಜಾಗಬೇಕಾಯಿತು. ಅಲ್ಲೊ ಒಂದು ಭಾರಿ ಮನೆ. ಆ ಮನೆ ಯಜಮಾನಿ ಒಬ್ಬಳು ಮುದುಕಿ. ಬೀಗರಿಬ್ಬರೂ ಹೋಗಿ ಅವಳ ಹತ್ತಿರ ಕೇಳಿಕೊಂಡರು.

"ಅಮ್ಮಾ, ಅಮ್ಮಾ .... ನಾವು ಮದುವೆಗೆ ಸೌದೆ ಹೇರ್ಕೊಂಡು ಹೋಯ್ತಾ ಇವಿ. ನಿಮ್ಮೂರ್ತಾವು ಕತ್ತಲಾಗೋಯ್ತು. ನಮ್ಮೋವು ಐವತ್ತು ಗಾಡಿಅವೆ, ಐವತ್ತು ಜೊತೆ ಎತ್ತವೆ, ಐವತ್ತಾಳವರೆ, ಇಷ್ಟಕ್ಕೆಲ್ಲಾ ಮನಗೋಕೆ ನೀವು ದೊಡ್ಮನಸು ಮಾಡಿ ಜಾಗ ಕೊಡಬೇಕು". ಆ ಮುದುಕಿ ತನ್ನ ಬೊಚ್ಚು ಬಾಯನ್ನು ಅಗಲವಾಗಿ ಬುಡುತ್ತಾ ಹೇಳಿದಳು. "ಅಯ್ಯೋ ಅಯ್ಯೋ ಅದ್ಕೇನ್ರಪ್ಪ. ಬಂದ ಪುಣ್ಯಾತ್ಮರಿಗೆ ಮನಗಾಕೆ ಒಂದೀಟು ಜಾಗ ಕೊಟ್ರೆ ನಮ್ಮಪ್ಪನ ಮನೆ ಗಂಟ್ಹೋದದಾ? ನೀವೇನು ನಮ್ಮ ಜಾಗಾನೇ ಹೊತ್ಕೊಂಡು ಹೋದೀರಾ? ಮಾರಾಯರಾಗಿ ಮನೀಕೊಳ್ಳಿ" – ಅಂತ ಹೇಳಿ ಸೊಸೆ ಕರೆದು ಅಜ್ಞೆ ಮಾಡಿದಳು :

"ನೋಡೇ ಹೊನ್ನಿ, ನಮ್ಮ ಆ ಹಳೇ ದನೀನ ಕೊಟ್ಗೇಲಿ ಹದಿನಾರು ಅಂಕಣ ಒಳಕೊಂಡು ಒಂದು ಮಾಗಿ ಬುಂಡೆ ಅದಲ್ಲ, ಅದ್ನ ಇವರಿಗೆ ಕೊಡು .... ಪಾಪ ಇವರ ಎತ್ತು ಗಾಡೀನೆಲ್ಲ ಅದರೊಳಗೆ ಬುಟ್ಕೊಳ್ಳಿ".

ಬೀಗರಿಬ್ಬರೂ ಒಬ್ಬರ ಮೊಖ ಒಬ್ಬರು ನೋಡಿಕೊಂಡರು. ಸೊಸೆ ಹೂವು ಎತ್ತೊಂಗೆ ಆ ಮಾಗೀ ಬುಂಡೆ ತಂದು ಈಚೆಗೆ ಮಡಗಿದಳು. ಅದು ಒಂದು ಊರು ಗಾತ್ರ ಇರೋ ಮಾ ಮಾಗೀ ಬುಂಡೆ. ಅದರ ಒಂದು ಕಡೆ ತೂತು ಮಾಡಿದರು. ಅವರ ಎತ್ತು ಗಾಡಿ ಆಳು ಎಲ್ಲಾ ಅದರೊಳಗೆ ಬೀಡಿಕೆ ಹೂಡಿದರು. ಅದರೊಳಗೆ ಇನ್ನೂ ಬೇಕಾದಷ್ಟು ಜಾಗ ಉಳೀತು. ಬೆಳಗಿಂದ ಎಲ್ಲಾ ಪಯಣ ಮಾಡಿ ಬಳಲಿದ್ದರು. ಮನೀಕೊತ್ತಿದ್ದ ಹಾಗೇ ಅವರಿಗೆ ಎಲ್ಲೂ ಇಲ್ಲದ ಮಾಯದ ನಿದ್ರೆ ಬಂದು ಬುಡ್ತು. ಎಲ್ಲರೂ ಒಂದೂರಿಗೆ ಕೇಳೋ ಹಂಗೆ ಗೊರಕೆ ಹೊಡೀತಾ ಸತ್ತೋರಂಗೆ ಬಿದ್ದುಕೊಂಡ್ರು.

ಸಮಸಮ ರಾತ್ರೆ ಹೊತ್ತು ಆ ಮುದುಕಮ್ಮನ ಸೊಸೆಗೆ ಎಚ್ಚರವಾಯಿತು. ಒಂದ ಮಾಡಬೇಕು ಅನ್ನಿಸ್ತು. ಬಾಗಲು ತಕ್ಕೊಂಡು ಈಚೆಗೆ ಬಂದಳು. ಕಣ್ಣು ಹೂದರೆ ಕಣ್ಣು ಕಾಣದಂತ ಕರಿಗತ್ತಲೆ. ಈಚೆಗೆ ಬಂದು ಒಂದಮಾಡಿ ಒಳಕ್ಕೆ ಹೋದಳು. ಆ ಮೈನೀರು ನುಗ್ಗಿ ಬಂದು ಎತ್ತು ಗಾಡಿ ಸೌದೆ ಆಳಿನಸಮೇತ



ಮಾಗೀ ಬುಂಡೇನೆ ಕೊಚ್ಚಿಕೊಂಡು ಹೋಗಿ ಹೊಳೆಗೆ ಹಾಕುತು. ಇವರು ಯಾರಿಗೂ ಎಚ್ಚರವೇ ಇಲ್ಲ. ಬೆಳಕು ಹರಿಯೋಗಂಟಾ ಆ ಮಾಗಿ ಬುಂಡೆ ಹೊಳೇಲಿ ತೇಲಿ ಹೋಗುತ್ತಲೇ ಇತ್ತು. ಆ ಮಸುವಿನಲ್ಲಿ ಯಾರೋ ಒಬ್ಬ ಬೆಸ್ತ ಮೀನು ಹಿಡಿಯಾಕೆ ಹೊಳೆಗೆ ಬಂದಿದ್ದ. "ಹೊಳೇಲಿ ಏನೋ ಗುಡ್ಡದಂಗೆ ತೇಲಿಬತ್ತಾ ಅದಲ್ಲ" ಅಂತ ಬೆಕ್ಕಸ ಬೆರಗಾಗಿ ನೋಡಿದ. ಈ ಬುಂಡೆ ಹತ್ತಿರಕ್ಕೆ ಬತ್ತು. ಮಳಲಿರೋ ಜಾಗಕ್ಕೆ ಹೋಗಿ ನೋಡ್ತಾನೇ ! ಒಬ್ಬರೂ ಮೈಮೇಲೆ ಒಂದಿಷ್ಟೂ ಎಚ್ಚರವಿಲ್ಲದಂಗೆ ಮಾನಿದ್ದೇಲಿ ಮುಳುಗ್ಯವರೆ. ಅವರೆಲ್ಲಾರ್ನೂ ಆ ಬೆಸ್ತ ಎಳಿಸಿದ. ಎಲ್ಲರೂ ಎದ್ದರು. ತಾವೆಲ್ಲಿದ್ದೀವಿ ಅಂತ ಎಲ್ಲರಿಗೂ ಕಕಮಕರು ಹಿಡೀಇತು. ಎಷ್ಟೋ ಹೊತ್ತಾದ ಮೇಲೆ ಬುದ್ಧಿ ಹದಕ್ಕೆ ಬತ್ತು. ಆಗ ಎಲ್ಲಾ ದಡಬಡನೆ ಎದ್ದು ಗಾಡಿ ಕಟ್ಟಿಕೊಂಡು ಹೆಂಗೋ ಊರಿಗೆ ಹೋಗಿ ತಲಪಿದರು. ಬೀಗರಿಬ್ಬರಿಗೂ 'ತಾವೇ ಹೆಚ್ಚು' ಅಂತಾ ಮೀಸೆ ನುಲೀತದ್ವಲ್ಲಾ ಒಬ್ಬೊಬ್ಬರ ತಲೇ ಮೆಟ್ಟಿ ಹಾರೋ ಅಂತ ಭೂಪತಿಗಳವರೆ ಜಗತ್ತಿನಲ್ಲಿ' ಅನ್ನಿಸ್ತು. ಜೋಳ ಬಿತ್ತೋನ ಮಗ, ಒಂದು ಖಂಡುಗ ಅಕ್ಕಿ ಒಂದು ಹೊತ್ತಿಗೆ ಹೊಂದು ಬುಡೋನ ಮಗಳು, ಮಾಗಿ ಬುಂಡೆ ಅಮ್ಮನ ಮಗಳು ಇಬ್ಬರ್ನೂ ತಂದ್ರೇ ನಾನು ಮದುವೆ ಆಗೋದು. ಇಲ್ದೆ ಇದ್ರೆ ಆಗೋದೇ ಇಲ್ಲ" ಅಂತ ಹಠ ಹಿಡಿದ. ಸರಿ, ಅವನ ಹಠದಂತೇ ಹೋಗಿ ಅವಮ್ಮನ್ನೂ ಹೆಣ್ಣು ಕೇಳಿದರು. ಅವಳೂ ಒಪ್ಪಿದಳು. ಆ ಎರಡು ಹೆಣ್ಣುಮಕ್ಕಳ್ನೂ ತಂದು ಮಗನಿಗೆ ಮದುವೆ ಮಾಡಿಕೊಂಡ, ಮೂರು ಖಂಡುಗ ಜೋಳ ಬಿತ್ತೋ ಗೌಡ.ಆಮೇಲೆ ಎಲ್ಲರೂ ಸುಖವಾಗಿದ್ದರು.

* * * *

# ಚೆಂದುಳ್ಳಿ ಹೆಣ್ಣು *

ಒಂದೂರು. ಅಲ್ಲಿ ಒಬ್ಬಳು ತಾಯಿ. ಅವಳ ಗಂಡ ಮದುವೆಯಾದ ನಾಕು ವರ್ಷಕ್ಕೇ ಹಳೇರಾಗಿ ತರೋಕೆ ಹೊಂಟೋದ. ಅಷ್ಟು ಹೊತ್ತಿಗೆ ಅವಳಿಗೆ ಒಬ್ಬ ಮಗ ಇದ್ದ. ಹರಯದಲ್ಲೇ ಗಂಡನ್ನ ತಿಂದುಕೊಂಡರೂ ಕಾಲಲ್ಲಿ ಕೈಲಿ ಒದಿಯೋವಷ್ಟು ಲಕ್ಷ್ಮಿ ಕಾಲು ಮುರಕೊಂಡು ಮನೇಲಿ ಬಿದ್ದಿದ್ದರೂ ಅವಳು ಕಟ್ಟುನಿಟ್ಟಾಗಿ ಹಿರಿಯೋರು ಹಾಕಿದ ಗೆರೆ ದಾಟದೆ ಬದುಕಾಟ ಮಾಡಿದಳು. "ಈಟೊಂದು ರೂಪವಂತೆ ಗಂಡಿಲ್ಲದೆ ಇದ್ದಾಳ? ಎಲ್ಲಾರೂ ಹೊಂಟೋಯ್ತಳೆ" ಅಂತ ಗಂಡ ಸತ್ತಾಗ ಆಡಿಕೊಂಡೋರ ಮೊಖದ ಮೇಲೆ ಹೊಡೆದಂಗೆ ಬಾಳಾಟ ಮಾಡಿದಳು. ಇರೋ ಒಬ್ಬ ಮಗನ್ನ ಅಂಗೈಮೇಲಿನ ಅರಗಿಣಿ ಹಂಗೆ ಸಾಕಿದಳು. ಅವನಿಗೆ ಯಾವುದಕ್ಕೂ ಕಡಿಮೆ ಮಾಡ್ನಿಲ್ಲ. ಅವನ ಬಾಯಲ್ಲಿ ಹೊಂಟಿದ್ದನ್ನ ಇಲ್ಲಾ ಅಂತಿರಲಿಲ್ಲ. ಕಣ್ಣಿನ ಗೊಂಬೆ ಹಂಗೆ ಕಳಲೆ ಕದಿರಿನಂತೆ ಅವನು ಬೆಳೆದ. ಇರೋ ಒಬ್ಬ ಮಗನ್ನ ಮದುವೆ ಬೇಗಮಾಡಿ ಕಣ್ತುಂಬ ನೋಡಾನೆ ಅಂತ ಚಿಕ್ಕವಯಸ್ನಲ್ಲೇ ಅವನಿಗೆ ಲಗ್ನ ಮಾಡಿ ಬುಟ್ಟಳು. ಹುಡುಗಿ ಬಲು ಚೆಂದುಳ್ಳಿ ಹೆಣ್ಣು: ನೋಡಿದರೆ ಕಣ್ಣೆಸರು ಆಗೋ ಅಂತ ರೂಪ. ಆದರೆ ಅವಳು ಇನ್ನೂ "ಋಷ್ಯಾಂತೆ' ಆಗಿರನಿಲ್ಲ. ಹುಡುಗನ ಮನೇಲಿ ಬೇಕಾದಂಗೆ ಹಣಕಾಸು ವಡವೆ ವಸ್ತ್ರ ಎಲ್ಲಾ ತುಂಬಿತ್ತು. ಅದ ಏನಾರೂ ಮಾಡಿ ಹೊಡ್ಕೊಬೇಕೂಂತ ಏಟೋ ಜನ ಅವನ ಮೇಲೆ ಕಣ್ಣು ಹಾಕ್ತಿದ್ದರು. ಹುಡುಗನ ಮನಸ್ಸೂ ಅತ್ತಿತ್ತ ಹರೀತು, 'ಮೀಸೆ ಬರೋರ ಕಣ್ಣು ದೇಸದ ಮೇಲೆ' ಅಂತ ಇವನು ಹೆಂಗಸರ ಸಾವಾಸ ಬಿದ್ದ. ಅದರಲ್ಲಿ ಒಬ್ಬಳು ಸೂಳೆ. ಅವಳು ಸುತ್ತಲ ಹನ್ನೆರಡು ಹಳ್ಳೀಗೆಲ್ಲ ಕಡುಚೆಲುವೆ ಅಂತ ಹೆಸರಾಗಿದ್ದೋಳು. ಅವಳ ಬಲೆಗೆ ಈ ಹುಡುಗ ಬಿದ್ದ. ಅವ್ವ, ಹೆಂಡ್ತಿ ಎಲ್ಲಾರ್ನೂ ಮರತುಬುಟ್ಟ. ಮೂರು ಹೊತ್ತೂ ಆ ಸೂಳೇ ಮನೇಲೇ ಇರೋಕೆ ಆರಂಭ ಮಾಡಿದ. ಎಷ್ಟೋದಿವಸಕ್ಕೆ ಒಂದು ದಿನ ತನಗೆ ಮನಸ್ಸು ಬಂದಾಗ ಮನೆಗೆ ಬರೋದು, ಬೇಕಾದಷ್ಟು ಹಣಕಾಸು

* ಹೇಳಿದವರು : ಕೃಷ್ಣ ರಾಜನಗರದ ತಾಲ್ಲೂಕು ಬಡಗನ ಕೊಪ್ಪಲಲ್ಲಿರುವ ಹೊನ್ನವಳ್ಳಿ ದೊಡ್ಡೇಗೌಡ.



ತಕ್ಕೊಳ್ಳೋದು, ಹೊಂಟ್ಹೋಗೋದು–ಇದೇ ಕಸುಬು ಮಾಡುತಿದ್ದ. ಮನೆಗೆ ಬಂದಾಗ ಹೆಡ್ತಿತಾಯೀನ 'ನೀವು ಹೆಂಗಿದ್ದೀರಿ, ಸತ್ತಿದ್ದೀರೋ ಬದುಕಿದ್ದಿರೋ' ಅಂತಲೂ ಕೇಳುತ್ತಿರಲಿಲ್ಲ. ತಾಯಿಗೆ ಇದೇ ಕೊರಗು ಹತ್ತಿಕೊಂಡಿತು.

ಈ ಮಧ್ಯೆ ಹುಡುಗಿ 'ಋಷ್ಯಾಂತೆ'ಯಾದಳು. ಹುಡುಗಿ ಮೊದಲೇ ರೂಪವತಿ; ಈಗಂತೂ ನೋಡಲು ಎರಡು ಕಣ್ಣು ಸಾಲುತ್ತಿರಲಿಲ್ಲ. ಆದರೇನು? 'ಎತ್ತೋರಿಲ್ಲದ ಮಕ್ಕಳ ಹೆತ್ತೇನು ಫಲ, ಆಳೋರಿಲ್ಲದ ಹೆಣ್ಣು ಬಾಳೇನು ಫಲ' ಅಂತ ಇವಳ ಕಡೆಗೆ ಗಂಡ ಕಣ್ಣೆತ್ತಿಯೂ ನೋಡುತಿರಲಿಲ್ಲ 'ತನಗೆ ಗಂಡ ಸತ್ತು ಬಾಳು ಹಾಳಾಯಿತು ; ಈಗ ಮಗ ಇದ್ರೂ ಸೊಸೆ ಬಾಳು ಹಾಳಾಯ್ತಾ ಅದೆ' ಅಂದುಕೊಂಡು ಮುದುಕಿ ಕೊರಗಿ ಕೊರಗಿ ಕಡ್ಡಿಯಾಗ್ತಾ ಬಂದಳು. ಈ ಹುಡುಗೀಗೂ ಅತ್ತೆ ಕಣ್ಣೀರು ಸುರಿಸೋದು ನೋಡಲಾರದೆ,

"ಸುಮ್ನಿರಿ ಅತ್ಯಮ್ಮ, ನಾ ತಂದ ಅದೃಷ್ಟ ಫಲಕೆ ನೀವ್ಯಾಕೆ ಅತ್ತು ಜೀವ ಸಣ್ಣ ಮಾಡ್ಕೊತ್ತೀರಿ. ನನ್ನ ಹಣೇಲಿ ಬರದಿದ್ದು ನಾನು ಅನುಭವಿಸ್ತೀನಿ. ನಾನು ಹಿಂದಿನ ಜಲ್ಮದಲ್ಲಿ ಯಾವ ಗಂಡಾ ಹೆಂಡಿರ್ನ ಬುಡಿಸಿದ್ನೋ ಏನೋ, ಆ ಪಾಪ ಈಗ ನನಗೆ ಸುತ್ತಿಕೊಂಡದೆ" ಅಂತ ಎಷ್ಟೆಷ್ಟೋ ಸಮಾಧಾನ ಮಾಡುತ್ತಿದ್ದಳು. ಆದರೆ ಅತ್ತೆ ಕಾಣದ ಹಾಗೆ ತಾನೇ ಅಳ್ತಾ ಕೂತ್ಕೋತಿದ್ದಳು. ಗಂಡ ಅಪ್ಪಿ ತಪ್ಪಿ ಮನೆಗೆ ಬಂದಾಗೆಲ್ಲ ಬಾಳ ಸಂಭ್ರಮದಿಂದ ಅವನಿಗೆ ಸೇವೆ ಮಾಡ್ತಿದ್ದಳು. ಅವನ ಕಣ್ಣು ಕೋರೈಸೋಹಂಗೆ ಅಲಂಕಾರ ಮಾಡ್ಕೊತ್ತಿದ್ದಳು. ಆದರೆ ಅವನು ಯಾವುದಕ್ಕೂ ಮನಸ್ಸು ಕೊಡ್ತಿರಲೇ ಇಲ್ಲ. ಬಂದರೆ, ಗಡಿಬಿಡಿ ಮಾಡ್ಕೊಂಡು ಹೊಂಟೇ ಬುಡ್ತಿದ್ದ. ಅವ್ವ ಏನಾದ್ರೂ ಮಾತಾಡಿಸಿದರೆ 'ಹಾ ಹೂ' ಅಂತ ಹೇಳ್ತಿದ್ದನೇ ಹೊರತು ಸರಿಯಾಗಿ ಮಾತಾಡುತ್ತಿರಲಿಲ್ಲ. ಕೊನೆಗೆ ಅತ್ತೆ ಸೊಸೆ ಇಬ್ಬರೂ "ಇವನ್ನ ಹಾದಿಗೆ ತರಾಕೆ ಆಗೋದಿಲ್ಲ. ಆದೀಲಿ ಇರದ್ದು ಹಾದೀಲಿ ಕೂತ್ಕೊಂಡು ಬಡುಕೊಂಡ್ರೆ ಬಂದಾತ?" ಅಂದು ಕೊಂಡು ಅವನ ಆಸೆಯನ್ನು ಬುಟ್ಟುಬುಟ್ಟರು.

ಆ ಊರಿಗೆ ಒಬ್ಬ ಹೂವಾಡಿಗರ ಹುಡುಗ ಹೂವು ಮಾರೋಕೆ ಬತ್ತಾ ಇದ್ದ. ಹುಡುಗ ಎಣ್ಣೆಗೆಂಪಾಗಿದ್ರೂ ನೋಡೋಗೆ ಲಕ್ಷಣವಾಗಿದ್ದ. ಒಳ್ಳೇ ಭೂಮೀಲಿ ಒಡೆದು ಮೂಡಿದ್ದಂಗೆ ಇದ್ದ. ಇವನು 'ಜಿನಾ' ಮರುಗ, ಜಾಜಿ, ಸಂಪಿಗೆ, ಮಲ್ಲಿಗೆ, ತಾವರೆ ಹಿಂಗೆ ತರತರದ ಹೂವುಗಳನ್ನು ತುಂಬಾ 'ಸುಂದರ'ವಾಗಿ ಕಣ್ಣಿಗೆ ಮೂಗಿಗೆ ಒತ್ತಿಕೊಳ್ಳೋಹಂಗೆ ಮಾಲೆಕಟ್ಟಿ ತಕ್ಕೊಂಡು ಬರುತ್ತಿದ್ದ. ಅವನು ಊರಿಗೆ ಬತ್ತು ಅಂದರೆ ಒಂದು ಮೈಲಿ ಪಾಸಲೆ ಘಮಘಮಾ ಅಂತ ಪರಿಮಳ

ಹಬ್ಬೋದು. ಅದರಲ್ಲೂ ಅವನು ಈ ಹುಡುಗಿ ಮನೆಗೆ ಆದು ಆದು ಹೂವು ಕಟ್ಕೊಂಡು ಬಂದು ಕೊಡುತಿದ್ದ. ಈ ಹುಡುಗಿಯ ಗಂಡ ಸೂಳೇ ಮನೇಲಿ ಸೇರ್‍ಕೊಂಡವನೆ ಅನ್ನೋ ಸಂಗತಿ ಅವನಿಗೂ ಗೊತ್ತಿತ್ತು. ಅದೇ ನೆಪಮಾಡಿಕೊಂಡು ಹೂವು ತಂದು ಕೊಟ್ಟು ಮುದುಕಮ್ಮನ ಜೊತೆ ಅದೂ ಇದೂ ಮಾತಾಡ್ತಾ ಬಾಳ ಹೊತ್ತು ಕೂತುಕೋತಿದ್ದ. ಒಂದೊಂದು ದಿನ ಅಲ್ಲಿ ಇಲ್ಲಿ ಹೂವು ಮಾರಿಕೊಂಡು ಬಂದು ಕತ್ತಲಾದರೆ ಅಲ್ಲೇ ಮನೀಕೊಳ್ಳುತ್ತಿದ್ದ. ಹಿಂಗಾಗಿ ಆ ಹುಡುಗಿಗೂ ಈ ಹುಡುಗನಿಗೂ ಪರಿಚಯ ಬೆಳೀತು. ಹರೇದ ಹೆಣ್ಣು, ಅವಳೂ ಗಂಡನ ಯೋಚನೆ ಬುಟ್ಟಿದ್ದಳು. ಅಷ್ಟರಲ್ಲಿ ಈ ಹುಡುಗ ಪರಿಚಯವಾದ. ಸರಿ, ಯಾವುದೋ ಗಳಿಗೇಲಿ ಇವರಿಬ್ಬರೂ ಒಂದಾದರು.

ಹಿಂಗೇ ಎರಡು ವರ್ಷ ಕಳೀತು. ಇಷ್ಟರಲ್ಲಿ ಮುದುಕಿಗೆ ಕಣ್ಣು ಹೋಯಿತು. ಸಂದೆ ಆಗಿ ದೀಪ ಕತ್ತುತ್ತಿದ್ದ ಹಾಗೆ ಅತ್ತೆಗೆ ಊಟ ಇಕ್ಕಿ ತಾನೂ ಉಣ್ಣುತಿದ್ದಳು. ಉಂಡ ಮೇಲೆ ಅತ್ತೆ ತನ್ನ ಪಾಡಿಗೆ ತಾನು ಮನೀಕೋತಿದ್ದಳು, ಈ ಹುಡುಗಿ ಹೂವಾಡಿಗರ ಹುಡುಗನ ಜೊತೇಲಿ ಸರಸ ಆಡುತ್ತಿದ್ದಳು.

ಒಂದು ದಿನ ಹುಡುಗ ಹೇಳಿದ:

"ನೋಡು ಹೆಂಗೂ ಇಳ್ಳೊತ್ತು ಊಟ ಆದ್ಮೇಲೆ ನಿಮ್ಮತ್ತೆ ಮನೀಕೊಂಡು ಬುಡ್ತಾಳೆ, ನೀನು ಆಗ ನಮ್ಮೂರಿಗೇ ಯಾಕ್ ಬರಬಾರ್‍ದು? ನಮ್ಮೂರು ಇಲ್ಲಿಗೆ ಬಾಳ ಹತ್ತಿರ, ಬರೀ ಒಂದು ಕೊಂಬಿನ ಕೂಗಿನ ದೂರ. ದಾರೀಲಿ ಯಾವ ಹೆದರಿಕೆ ಭಯವೂ ಇಲ್ಲ" – ಅಂದ. ಅವಳು ಮೊದಮೊದಲು ಹಿಂಜರಿದಳು. ಆದರೆ ಹುಡುಗ ಪುಸಲಾಯಿಸಿದ:

"ರಾತ್ರೆಯೆಲ್ಲಾ ನಮ್ಮನೇಲಿ ಸುಖವಾಗಿ ಇದ್ದು ಹೊತ್ಮೂಡೋ ಹೊತ್ತಿಗೆ ನಿಮ್ಮ ಮನೆಗೆ ಬಂದು ಬುಡಬಹುದು" – ಅಂದ.

ಬಾಳ ಪಿಂಡಾಡಿಸಿದ ಮೇಲೆ ಹುಡುಗಿ ಒಪ್ಕೊಂಡಳು. ರಾತ್ರಿ ಹೊತ್ತು ಅತ್ತೆಗೆ ಉಣ್ಣಾಕಿಕ್ಕಿ, ಅವಳು ಉಂಡು ನಿದ್ದೆ ಹೋದ್ಮೇಲೆ ಇವಳು ಆ ಹುಡುಗನ ಊರಿಗೆ ಹೋಗುತ್ತಿದ್ದಳು. ಕೋಳಿ ಕೂಗೋಕೆ ಮುಂಚೆ ಅವನು ಮನೆಗೆ ಕರಕೊಂಡು ಬಂದು ಬುಡುತಿದ್ದ.

ಒಂದು ರಾತ್ರಿ ಆ ಹೂವಾಡಿಗರ ಹುಡುಗ ಈ ಹುಡುಗೀ ಮೈ ಮೇಲೆ ಮಲ್ಲಿಗೆ ಎಣ್ಣೆ ಚೆಲ್ಲಿದ. ಆ ಬೆಳಿಗ್ಗೆ ಗಂಡ ಮನೆಗೆ ಬಂದ. ಇವಳು ಸಂತೋಷದಿಂದ ಅವನ ಸೇವೆಮಾಡಿದಳು. ಆಗ ಅವನ ಮೂಗಿಗೆ ಮಲ್ಲಿಗೆ ಎಣ್ಣೆಯ 'ಗಮನ' ಹೊಡೀತು. ಅವನಿಗೆ ಯಾಕೋ ಅನುಮಾನವಾಯಿತು. ಆದರೆ ಏನೂ ಮಾತಾಡದೆ



ಎಂದಿನಂತೆ ಬಿರಬಿರನೆ ಹೋಗಿ ಬುಟ್ಟ. ಸಂದೆಯಾಯಿತು, ದನಕರ ಎಲ್ಲ ಊರಿಗೆ ಬಂದೊ, ಗಂಡ ಯಾರಿಗೂ ಕಾಣದಂತೆ ಬಂದು ಅವನ ಮನೆ ಮುಂದಿದ್ದ ನುಗ್ಗೇ ಮರಹತ್ತಿ ಕೂತುಕೊಂಡ. ಈ ಹುಡುಗಿ ಎಂದಿನಂತೆ ಅತ್ತೆಗೆ ಇಕ್ಕಿ ತಾನು ಉಂಡು ದೀಪ ತುಂಬಿಸಿದಳು. ನಡೆ ಬಾಗಿಲಿಗೆ ಬಂದು ಅತ್ತ ಇತ್ತ ನೋಡಿ ಬಾಗಿಲು ಹೊಚ್ಚಿ ಚಿಲಕ ಹಾಕಿಕೊಂಡಳು. ಮನೇ ಮುಂದಕೆ ಬಂದಳು. ಒಂದು ಶ್ಯಾಲೆ ಅಡ್ಡ ಹೊದಿಕೆ ಹೊದ್ದುಕೊಂಡು ಬರಬರನೆ ನಡೆದಳು. ಗಂಡ ನುಗ್ಗೆಮರದ ಮೇಲಿಂದ ಇದನ್ನೆಲ್ಲ ನೋಡಿದ. ಅವಳು ಮುಂದಕ್ಕೆ ಹೋದ ಮೇಲೆ ಇಳಿದು ಅವಳಿಗೆ ಕಾಣದಂತೆ ಅವಳ ಹಿಂದೆಯೇ ಹೋದ. ಅವಳು ನೆಟ್ಟಗೆ ಹೂವಾಡಿಗನ ಊರಿಗೆ ಹೋಗಿ ಅವನ ಮನೆ ಸೇರಿಕೊಂಡಳು. ಇವನು ಇದನ್ನೆಲ್ಲ ನೋಡಿಕೊಂಡು ಹಿಂತಿರುಗಿ ಬಂದ.

ಹೊತ್ತು ಮೂಡಿತು. ಇವಳು ಎಂದಿನಂತೆ ಮನೇ ಕಸ ಮುಸುರೆ ತಗದು ಸಾರಿಸಿ ರಂಗೋಲೆ ಬುಟ್ಟಳು. ತಾನೂ ತಾನಾ ಮಾಡಿ ಮಡಿ ಉಟ್ಕೊಂಡಳು. ಅಷ್ಟು ಹೊತ್ತಿಗೆ ಗಂಡ ಏನೂ ತಿಳಿದೋನಂಗೆ ಬಂದ. ಅವಳಿಗೆ ಚೋಜಿಗವಾಯಿತು. "ನನ್ನ ಗಂಡ ನೆನ್ನೆ ದಿನಾನೂ ಬಂದಿದ್ದ, ಇವತ್ತೂ ಬಂದವ್ನಲ್ಲ. ದೇವರು ಕಣ್ಣು ಬುಟ್ಟ ಅಂತ ಕಾಣ್ತದೆ. ನನ್ನ ಮೇಲೆ ಸ್ವಲ್ಪ ಗ್ಯಾನ ಬಂದಿರಬೇಕು" – ಅಂದುಕೊಂಡಳು. ಅವಳ ಸಂತೋಷಕ್ಕೆ ಸರಿಯಾಗಿ ಯಾವತ್ತೂ ಇಲ್ದೋನು ಅವತ್ತು ಅವಳನ್ನ ಮಾತಾಡಿಸಿದ:

"ನೋಡೇ, ಇವತ್ತು ಒಂದು ಪುಣ್ಯಕಾರ್‍ಯ, ಹಬ್ಬ ಮಾಡ್ಬೇಕು. ನಿಂಗೆ ಏಟೇಟ್ಟರ ತಿಂಡಿ ಮಾಡಾಕೆ ಬತ್ತದೋ ಅಷ್ಟೆಲ್ಲಾನೂ ಮಾಡ್ಬುಡು. ಇವತ್ತಾರೂ ಸಂತೋಷವಾಗಿ ಉಣ್ಣಾನೆ."

ಅವಳು ಹಿಗ್ಗಿ ಹೀರೇಕಾಯಿ ಆದಳು. ದೇವೇಂದ್ರನ ವೈಭೋಗವೇ ಅವಳಿಗೆ ಭೂಮಿಗೆ ಇಳಿದಂತಾಯಿತು. ಸಡಗರದಿಂದ ಬೇಕುಬೇಕಾದ ಅಡಿಗೇನೆಲ್ಲ ಮಾಡಿದಳು. ಗಂಡ ತೋಟಕ್ಕೆ ಹೋಗಿ ಒಂದು ದೊಡ್ಡ ಪಿಂಡಿ ಚಿಗುರೆಲೆ ತಂದ. ಗಂಡ ಹೆಂಡ್ತಿ ಅವ್ವ ಮೂರು ಜನವೂ ಕೂತುಕೊಂಡು ಎಂದೂ ಇಲ್ಲದ ಸರಸದಿಂದ ಸಂತೋಷದಿಂದ ಬಗೆಬಗೆ ಅಡಿಗೆನೆಲ್ಲ ಊಟಾ ಮಾಡಿದರು. ತಮಗೆ ಬೇಕಾದೋರೂ ಕರೆದು ಇಕ್ಕಿದರು. ಅಷ್ಟು ಹೊತ್ತಿಗೆ ಹಸಕರೆಯೋ ಹೊತ್ತಾಗಿ ಹೋಯಿತು. ಎಲ್ಲಾ ಆದ ಮೇಲೆ ಗಂಡ ಹೆಂಡ್ತೀಗೆ ಹೇಳಿದ:

"ನೋಡೇ, ಈ ಸತಿ ಆ ಹಣತೆ ತಕ್ಕೊಂಡು ಆ ಚಿಗುರು ಎಲೇನೂ ತಕ್ಕೊಂಡು ಬಾ". ಅವಳಿಗೆ ಬಾಳ ಖುಷಿಯಾಗಿ ಹೋಯಿತು. ಇನ್ನು ಮೇಲೆ

ತನ್ನ ಕಷ್ಟೆಲ್ಲಾ ಕಳೀತು ಅಂದುಕೊಂಡಳು. ಜಟಪಟನೆ ಹಣತೆ ತಕ್ಕೊಂಡು ಎಲೆಪಿಂಡೀನು ತಕ್ಕೊಂಡು ಬಂದಳು. ಗಂಡ ಎಲೇನೆಲ್ಲಾ ಹರಡಿ ಅದರ ಮೇಲೆ ಎಣ್ಣೆ ಸುರಿದು ಬೆಂಕಿ ಹತ್ತಿಸಿದ. ಅವಳಿಗೆ ಕಕಮಕ ಹಿಡಿದಂತಾಯಿತು. 'ಇವರು ಯಾಕೆ ಹಿಂಗ್ಮಾಡ್ತಾರೆ ಅಂದುಕೊಂಡಳು. ಕನುಗುತಿದ್ದ ಚಿಗುರೆಲೆಗಳೆಲ್ಲಾ ಹತ್ತಿಕೊಂಡು ಉರಿಯುತಿದ್ದವು. ಅವಳಿಗೆ ಹೊಟ್ಟೆ ಉರಿಯಿತು. "ಚೆಂದುಳ್ಳಿ ಎಲೆ ನಿಂದುರಿದು ಬೇವಾಗ ತಂದೋರ ಜೀವ ಹೆಂಗಿದ್ದಾದು?" ಅಂದಳು. ಅದಕ್ಕೆ ಅವನು ಉತ್ತರ ಕೊಟ್ಟ:

"ಚೆಂದುಳ್ಳಿ ಹೆಣ್ಣು ನಿಂದೊಬ್ಬನ ಕೂಡುವಾಗ ತಂದೋರ ಜೀವ ಹೆಂಗಿದ್ದಾತು?". ಅವಳಿಗೆ ಚಾವಟಿ ಕೋಲಲ್ಲಿ ಬಾರಿಸಿದಂತಾಯಿತು. 'ಕಳ್ಳನ ಮನಸ್ಸು ಹುಳ್ ಹುಳ್ಳಗೆ' ಅಂತ ಅವಳಿಗೆ 'ತಾನು ಮಾಡುತಿರೋ ಕೆಟ್ಟ ಕೆಲಸ ತನ್ನ ಗಂಡನಿಗೆ ತಿಳಿದು ಹೋಗಿದೆ' ಅಂತ ದಿಟ್ಟವಾಗಿ ಅವಳಿಗೆ ಗೊತ್ತಾಗಿ ಹೋಯಿತು. 'ಇನ್ನು ಮೇಲೆ ನಾ ಸಾಯೋದೇ ಒಳ್ಳೇದು' ಅಂತ ನಿರ್ಧಾರ ಮಾಡಿಕೊಂಡಳು. ಉರಿಯುತಿದ್ದ ವೀಳೆದೆಲೇ ಮೇಲೆ ಮಲಗಿ ಪ್ರಾಣಬಿಟ್ಟಳು.

ಮಾರನೆ ದಿನ ಆ ಹೆಣ ತೆಗೆದುಕೊಂಡು ಹೋಗಿ ಊರ ಹೊರಗೆ ಸುಡುತ್ತಿದ್ದರು. ಅಷ್ಟು ಹೊತ್ತಿಗೆ ಕುದುರೆ ಮೇಲೆ ಕೂತುಕೊಂಡು ಹೂವಾಡಿಗರ ಹುಡುಗ ಅದೇ ಮಾರ್ಗವಾಗಿ ಬಂದ. ಅವನಿಗೆ ವಿಷಯವೆಲ್ಲಾ ತಿಳೀತು.

"ಚೆಂದುಳ್ಳಿ ಹೆಣ್ಣು ನಿಂದುರಿದು ಬೇವಾಗ ತಂದೋರ ಜೀವ ಹೆಂಗಿದ್ದಾತು?" – ಅಂದ. ಆಗ ಆ ಹುಡುಗಿಯ ಗಂಡ,

"ಆಗ ಉಂಡೋನು ನೀನು, ಭೋಗ ಉಂಡೋನು ನೀನು. ಆಲದ ಮರಕೆ ಕುದುರೆ ಕಟ್ಟಿ ನೀನೂ ಬೀಳು ಬಾ" ಅಂದ.

ಆ ಹುಡುಗ ಹಿಂದು ಮುಂದೆ ನೋಡಲಿಲ್ಲ. ಕುದುರೆಯಿಂದ ಕೆಳಕ್ಕೆ ಇಳಿದು, ಅದನ್ನ ಆಲದ ಮರಕ್ಕೆ ಕಟ್ಟಿದ. ಅಲ್ಲಿಂದ ಒಂದೇ ಹಾರತಕ್ಕೆ ನೆಗೆದು ಬಂದು ಅದೇ ಬೆಂಕೀ ವಳಕ್ಕೆ ತಾನೂ ಬಿದ್ದು ಸತ್ತ.

* * * *



## ಅಣ್ಣ–ತಂಗಿ*

ಅಣ್ಣ – ತಂಗಿ ಇಬ್ಬರು. ತಂದೆ–ತಾಯಿಗಳು ಸತ್ತು ಬಾಳ ದಿನ ಆಗಿತ್ತು. ಆಗಿನಿಂದಲೂ ಅಣ್ಣ ಅಂದರೆ ತಂಗೆಗೆ ಪರಾಣ, ತಂಗೆ ಅಂದರೆ ಅಣ್ಣನಿಗೆ ಪರಾಣ. ಒಂದು ಜೀವ ಎರಡು 'ದೇಹ' ಅನ್ನೋ ಹಂಗೆ ಅವರು ಇದ್ದರು. ಅಣ್ಣ ಕೂಲಿನಾಲಿ ಮಾಡಿ ತಂಗೀಗೆ ಒಂದೀಟೂ ಕಷ್ಟ ಆಗದಂತೆ ಹೂವಿನಂತೆ ಸಾಕಿದ. ತಂಗೀನೂ ಅಷ್ಟೆ, ಅಣ್ಣನಿಗೆ ಒಂದೀಟು ಹುಷಾರು ತಪ್ಪಿದರೂ ವದ್ದಾಡಿಕೊಳ್ಳೋಳು. ಎದ್ದು ತಂಗೀ ಮೊಖ ನೋಡಿಕೊಂಡು ಹೊಂಟರೆ ಅವನಿಗೆ ಏನಾದರೂ ಸಂಪಾದನೆ ಆಗಿಯೇ ಆಗುತ್ತಿತ್ತು. ಇದರಿಂದ ನನ್ನ ತಂಗೆ 'ಭಾಗ್ಯಲಕ್ಷ್ಮಿ' ಅಂತ ಅವನು ಕೊಂಡಾಡುತ್ತಿದ್ದ.

ಅಣ್ಣ ತಂಗೆ ದೊಡ್ಡೋರಾದರು. ಕುಳದಲ್ಲೂ ಭರಕತ್ತಾದರು. ಸುತ್ತಲ ನಾಕು ಹಳ್ಳಿ ಜನ ಇವರ ಮನೆ ಹತ್ರಕ್ಕೆ ಸಾಲಸೋಲಕ್ಕೆ ಬರೋಹಂಗಾದರು. ಅಣ್ಣನಿಗೆ ಮದುವೆಯಾಯಿತು; ಎರಡು ವರ್ಷ ಕಳೆದರೂ ಮಕ್ಕಳಾಗಲಿಲ್ಲ. ತಂಗಿ ಅಣ್ಣನಿಗೆ ಒಂದೇ ಸಮನೆ ಒತ್ತಡ ಮಾಡಿದಳು :

"ಇನ್ನೊಂದು ಮದ್ವೆ ಮಾಡ್ಕೊಂಬುಡಣ್ಣಯ್ಯ, ಯಾಕೋ ಅತ್ಗ್ಯಮ್ಮನಿಗೆ ಇಲ್ಲೀ ಗಂಟಾ ಏನೂ 'ಕೂನುಕುರಾ' ಕಾಣೆ".

ಕೊನೆಗೆ ನಿರ್ವಾಹವಿಲ್ಲದೆ ಇನ್ನೊಂದು ಮದುವೆಯನ್ನೂ ಮಾಡಿಕೊಂಡ. ಆದರೂ ತಂಗೀ ಮೇಲಿನ ಪ್ರೀತಿ ಕಡಿಮೆಯಾಗಲಿಲ್ಲ. ಮನೆಯ ಯಜಮಾನಿಕೆಯಲ್ಲಾ ಅವಳದೇ. ಏನೂ ಕೊಡಬೇಕಾದ್ರೂ ತರಬೇಕಾದ್ರೂ ತಂಗೆ ಕೇಳ್ದೆ ಏನೂ ಮಾಡ್ತಿರಲಿಲ್ಲ ಅಣ್ಣ. ತಂಗೆ ಉಗಿದಿವ್ನಿ ಅಂದ್ರೆ ದಾಟುತಿರಲಿಲ್ಲ. ಅತ್ಗ್ಯಮ್ಮದೀರಿಗೆ ಏನು ಬೇಕಾದರೂ ಇವಳಿಗೆ ಹೇಳಿಯೇ ತರಿಸಿಕೊಳ್ಳಬೇಕಾಗಿತ್ತು. ಹೀಗಾಗಿ ಹೆಂಡತಿಯರಿಗೆ ನಾದಿನಿ ಮೇಲೆ ಹೊಟ್ಟೆ ಕಿಚ್ಚು ಹುಟ್ಟಿತು.

"ಪರ್ಪಂಚದಲ್ಲಿ ಇವರಿಬ್ರೇ ಅಣ್ಣ ತಂಗೆ, ಇನ್ನಾರೂ ಇಲ್ಲ ಅನ್ನೋಹಂಗೆ ಆಡ್ತಾರೆ. ಏನು ಮೆರೀತಾಳೆ. ಅಬ್ಬಬ್ಬ ಇವಳ ದರಬಾರು ಏಟ್ದಿನ ನಡೀತದೆ

* ಹೇಳಿದವರು : ಕೃಷ್ಣ ರಾಜನಗರದ ತಾಲ್ಲೂಕು ಬಡಗನಕೊಪ್ಪಲಲ್ಲಿರುವ ಹೊನ್ನವಳ್ಳಿ ದೊಡ್ಡೇಗೌಡ.

ನಾವೂ ನೋಡ್ತೀವಿ ಈ ಕಣ್ಣಿಂದ. ಚೋಟುದ್ದ ಅವಳೆ, ಇವಳ ಕೈ ಸಂದೀಲಿ ನಾವು ಜೀವನ ಸಾಗಿಸಬೇಕು. ನಮ್ಮ ಹಣೇಬರ ನೋಡು'' ಅಂತ ಗೊಣಗಿಕೊಳ್ಳುತ್ತಿದ್ದರು. ಈ ಹುಡುಗಿ ಅತ್ತಿಗೆಯರ ಗೊಣಗಾಟ ಕೇಳಿದರೂ ಕೇಳದವಳಂತೆ ಇದ್ದು ಬುಡುತ್ತಿದ್ದಳು. ಹಿಂಗಿರುವಾಗ ಹುಡುಗಿ 'ಋಷ್ಯಾಂತೆ'ಯಾದಳು. ಅಣ್ಣ ಕೊಬ್ಬರಿ ಬೆಲ್ಲ ಎಲಡಕೆ ಅದು ಇದು ಅಂತ ಬೇಕಾದಂಗೆ ತಂದು ಮನೆಗೆ ತುಂಬಿದ. ಮನೇಲಿ ಎಲ್ಲಿ ನೋಡಿದ್ರೂ ಸಾಮಾನು ತುಂಬಿ ಗಿಟಗಿಟ ಅನ್ನೋದು. ಇದೆಲ್ಲಾನೂ ನೋಡಿ ಅತ್ತಿಗೇರ ಹೊಟ್ಟೆಗೆ ಸುಣ್ಣ ಹೂದಂಗಾಯಿತು.

ಅವರ ಮನೇಲಿ ಒಂದು ರಾಗಿ ಕಣಜ. ಅದರೊಳಗೆ 'ಕೊತ್ತಿ' ಮರೀ ಹಾಕ್ಕೊಂಡಿತ್ತು. ಇದು ಆ ಹುಡುಗೀಗೆ ಗೊತ್ತಿಲ್ಲ. ಸವತೀರಿಬ್ರೂ ಮಾತಾಡ್ಕೊಂಡರು. "ಕಣಜದ ವಳಗೆ ವಸೀ ರಾಗಿ ತುಂಬಿಕೊಡಬನ್ನಿ" – ಅಂತ ನಾದಿನೀನ ಕರೆದರು. ಇವಳ ಒಳಸಂಚು ಗೊತ್ತಿಲ್ಲದ ಈ ಅರೀದ ಹುಡುಗಿ,

"ಆಗ್ಲಿ ಅದ್ಕೇನಂತೆ, ಕುಕ್ಕೆ ಕೊಡಿ ತಕ್ಕೊಡ್ತೀನಿ" ಅಂದಳು.

ಇಬ್ಬರೂ ಸೇರಿ ಅವಳನ್ನ ಕಣಜಕ್ಕೆ ಇಳಿಸಿದರು. ಒಳಗೆ 'ಗೌ'ಗರಿಯೋ ಕತ್ತಲೆ. ಹುಡುಗಿ ಕಾಣದೆ ಕೊತ್ತೀಮರಿ ತುಣಿದುಬುಟ್ಟಳು. ಅವು ಕಿರಿಚಿಕೊಂಡವು. ತಾಯಿ ಕೊತ್ತಿಗೆ ಕೋಪ ಬತ್ತು. ಆ ಹುಡುಗೀಯ ಮೈ ಕೈಯೆಲ್ಲಾನೂ ತನ್ನ ಚೂಪಾದ ಉಗುರಲ್ಲಿ ಅವರಿಬುಡ್ತು. ಹುಡುಗಿ "ಅಯ್ಯೋ, ಅಯ್ಯೋ" ಅಂತ ಕಣಜದ ವಳಗೆಲ್ಲಾ ಓಡಾಡಿದಳು. ಕಾಲು ಹಾಕಿದ ಕಡೆ ದೊಸಕೊಳ್ಳುತ್ತಿತ್ತು. ಕೊತ್ತಿ ಶ್ಯಾಲೆಪಾಲೇನೆಲ್ಲ ಹರಿದು ಮುಖ ಮೈ ಎಲ್ಲಾನೂ ಪರಚಿಬುಡ್ತು. ಎಷ್ಟೋ ಹೊತ್ತಾದ ಮೇಲೆ ಅತ್ತಿಗೇರು ಅವಳನ್ನ ಕೆಳಕ್ಕೆ ಇಳಿಸಿಕೊಂಡರು.

"ನಿಮಗೆ ನಾನೇನು ಕೇಡು ಮಾಡಿದ್ದೆ ಅತ್ತಿಗಮ್ಮ, ನನ್ನ ಮರೀಕೊತ್ತೀಲಿ ಅವರಿಸಿ ಬುಟ್ರ್ಯಲ್ಲಾ. ಏಟ್ದಿನದಿಂದ ಕಾಯ್ಕೊಂಡಿದ್ರಿ" – ಅಂದಳು.

"ಅದರೊಳಗೆ ಮರೀ ಕೊತ್ತಿ ಅದೆ ಅಂತ ನಾವೇನು ಕನಸು ಕಂಡಿದ್ವಾ?" – ಅಂದರು ಅವರು. ಅವಳ ಮುಖ ಮೈ ಎಲ್ಲಾ ಕಿತ್ತು ರಕ್ತ ತೊಟ್ಟಿಕ್ಕುತ್ತಿತ್ತು. ಆ ನೋವು ತಡೀಲಾರದೆ ನರಳ್ತಾ ಆ ಹುಡುಗಿ ಮಲಗಿಕೊಂಡಳು. ಗಾಯದ ನೋವಿಗೆ ಜ್ವರವೂ ಬತ್ತು.

ದೀಪ "ಕತ್ತಿಸಿ'ದ ಮೇಲೆ ಎಲ್ಲೋ ಹೋಗಿದ್ದ ಅಣ್ಣ ಬಂದ. ತಂಗೆ ಮೊಖ ಮುಚ್ಚಿಕೊಂಡು ನಳ್ಳಾಡುತ್ತಾ ಮಲಗಿದ್ದಳು. ಅವಳ ತಲೆ ಹತ್ತಿರ ಕೂತು ಎಂದಿನಂತೆ "ಅವ್ವಾ, ಅವ್ವಾ" ಅಂದ. ಅವಳು ಮಾತಾಡಲಿಲ್ಲ. ಮುಸುಕು ತಗಿಯಲಿಲ್ಲ



ಮುಸುಕಿನೊಳಗೆ ಬಿಕ್ಕಿ ಬಿಕ್ಕಿ ಅಳುವುದು ಕೇಳಿಸಿತು. ಅವನಿಗೆ ಅನುಮಾನವಾಯಿತು. 'ಈಟುದಿನ ನನ್ನ ತಲೆ ಕಾಣ್ತಿದ್ದಂಗೇ ಮಲ್ಲಿಗೆ ಹೂವಿನಂಗೆ ಮೊಖ ಅರಳಸ್ತಾ ಕಿಲಿಕಿಲಿ ಅಂತ ನಗ್ತಿದ್ದೋಳು ಈವತ್ತು ನಾನು ಏಟು ಕರದ್ರೂ ಮುಸುಕ್ನೂ ತಗೀದೆ ಅವಳಲ್ಲ, ಏನ್ಕಾರಣ' ಅಂದುಕೊಂಡ. ಸುತ್ತಮುತ್ತ ನೋಡಿದ. ಹೆಂಡ್ತೀರಿಬ್ರೂ ಕೋಣೆ ಬಾಗಲಲ್ಲಿ ನಿಂತಿದ್ರು.

"ಅವ್ವಯ್ಯ ಯಾಕ್ ಹಿಂಗೆ ನಳ್ಳಾಡ್ತಾ ಮನಗ್ಯವ್ಳೆ, ಮಾತಾಡ್ಸಿದ್ರೂ ಮಾತಾಡೋದಿಲ್ವಲ್ಲಾ" ಅಂತ ಕೇಳಿದ.

"ನಳ್ಳಾಡ್ದೇ ಇನ್ನೇನ್ಮಾಡ್ಯಾಳು? ಮಾಡಬಾರದು ಮಾಡಿದ್ರೆ ಆಗಬಾರದ್ದು ಆಯ್ತದೆ" ಅಂದಳು ಒಬ್ಬಳು ಹೆಡ್ತೀ.

ಅವನಿಗೆ ಇನ್ನೂ ಅನುಮಾನ ಹೆಚ್ಚಾಯಿತು. "ಹಂಗಂದರೆ? ಅದೇನು ನೆಟ್ಟಗೆ ಹೇಳು. ನಿನ್ನ ಅಂಕ ಬಿಂಕ ಎಲ್ಲಾನು ಬುಟ್‌ಬುಟ್ಟು" – ಅಂದ.

"ಅಯ್ಯಯ್ಯೋ ಪಿರೀತಿ ಅಣ್ಣ–ತಂಗೆ. ನಾವು ಹೇಳಿದ್ರೆ ಸುಮ್ನೇ ಬುಟ್ಟೀರಾ? ಹೊಟ್ಟೇಕಿಚ್ಗೆ ಅಂತ ನಮ್ಮನ್ನೇ ಬಡದ್ರೂ ಬಡಿದ್ರಿ ನಾವ್ಯಾಕ್ ಹೇಳಾನೆ, 'ಮಾಡಿದೋರ ಪಾಪ ಆಡಿದೋರ ಬಾಯ್ಲಿ' ಅಂತ" – ಅಂದಳು ಎರಡನೆಯವಳು, ಅವನಿಗೆ ಸಿಟ್ಟು ನೆತ್ತಿಗೇರಿತು.

"ಅದೇನು ಬುಡ್ಸಿ ಹೇಳ್ತಿಯೋ? ಇಲ್ಲಾ ಮೈ ಕಡೀತದೋ?" – ಅಂದ.

"ನಾವು ಹೊಲ್ತಾಕ್ಹೋಗಿದ್ದೋ. ಬರೋ ಹೊತ್ಗೆ ಯಾವೋನೋ ಅಪ್ಪಯ್ಯನ ಕುಟ್ಟಾಡಿ ಮೈಯೆಲ್ಲಾನೂ ಕಚ್ಚಿಸ್ಕೊಂಡವಳೆ. ಮೊಖಾ ತೋರಿಸಾಕೆ ನಾಚಿಕೆಯಾಗಿ ಮುಸುಗು ಎಳಕೊಂಡು ಏನೋ ಕಾಯಿಲೆ ಬಂದೋಳಂಗೆ ನಳ್ತಾ ಅವಳೆ" – ಅಂದಳು.

ಅವನಿಗೆ ಹುಚ್ಚುಗೋಪ ಬಂದುಬುಡ್ತು. 'ಓ ಇದ್ಕೇ ಮತ್ತೆ, ನಾನೇಟ್ ಕರದ್ರೂ ಮಾತಾಡ್ದೆ ಅವಳೆ ಅಮ್ಮೀ' ಅಂದವನೆ ಎದ್ದು ಮೂಲೇಲಿದ್ದ ಅರಿಕೋಲು ತಕ್ಕೊಂಡು ದಬದಬನೆ ದನ ಬಡದಂಗೆ ಬಡಿದುಬುಟ್ಟ.

"ಅಯ್ಯೋ ಅಣ್ಣಾ, ದಮ್ಮಯ್ಯ ಕನಣ್ಣ ... ನಾನೇನು ತಪ್ಮಾಡಿಲ್ಲ ಕನಣ್ಣಾ .... ನಾ ಸತ್ತೆ ಕನಣ್ಣಾ" ಅಂತ ಬಡಕೊಂಡಳು ತಂಗಿ.

"ನನ್ನ ಜೀವ ನಿನ್ನಲ್ಲೇ ಇಟ್ಟಿದ್ನಲ್ಲೇ ..... ಈಟು ದಿನಗಂಟ ಇದ್ದು ಈಗ ನಿನಗೇನು ಬತ್ತೇ ನನ್ನ ಮಾನಾ ಮೂರು ಕಾಸಿಗೆ ಹರಾಜು ಹಾಕ್‌ಬುಟ್ಯಲ್ಲೇ .... ಥೂ...... ಥೂ...... ನಮ್‌ವಂಸ್ಕೇ ಮಸೀ ಬಳದು ಬುಟ್ಯಲ್ಲೇ ..... ನಿನ್ನ ಮೊಖಾ ನೋಡಬಾರ್ದು ಹೋಗು. ನನ್ನ ಮನೇ ಬುಟ್ಟು ಹೋಗು" ಅಂತ ಝಾಡಿಸಿ

ನೂಕಿದ. ಬಾಗಿಲಲ್ಲಿ ನಿಂತಿದ್ದ ಅತ್ತಿಗೋರು, "ನೀನು ಭಿಮರಾಶಿ ಬಳೆ ತೊಟ್ವೀಯಾ? ಬೊಮ್ಮರಾಶೀ ಕಡಗ ಇಟ್ವೀಯಾ ? ಸತ್ತ ಗಂಡನ ಏಳಿಸ್ಕೊಂಡಿಯಾ? ಕಳ್ಳುಮೇಲೆ ಕಂದ ಮೂಡಿ ಕಾಲು ನೀಡಿ ಹಾಲು ಹೂದಿಯಾ ?" ಅಂತ ನಟಿಗೆ ನಗ್ಗಿದರು.

೨

ಬರಬಾರದ ದುಃಖದಿಂದ ಹಾಡಿಕೊಂಡು ಗುಡಿಸಿಕೊಂಡು ಅಳ್ತಾ ಊರು ಬುಟ್ಟು ಹೊಂಟೇ ಬುಟ್ಟಳು ತಂಗಿ. ಇಳ್ಳೆಲ್ಲಾ ನಡೆದೇ ನಡೆದಳು, ಎಲ್ಲೂ ಕೂರ್ನಿಲ್ಲ, ಎಲ್ಲೂ ನಿಲ್ನಿಲ್ಲ. 'ನಾನೇನ್ ತಪ್‌ಮಾಡಿದ್ದಕ್ಕೆ ಈ ಸಿಕ್ಷೆ ಕೊಟ್ಟಪ್ಪಾ ಸಿವನೇ' ಅಂತ ಶಿವ ಪಾರ್ವತಿಯರನ್ನ ನೆನೀತಾ ಮಹಾಂತ ಕಾಡಿನಲ್ಲಿ ಕಲ್ಲು ಮುಳ್ಳು ತುಣೀತಾ ಹೋಯ್ತಾ ಇದ್ದಳು. ಕೊತ್ತಿ ಅವರಿದ ಗಾಯಕ್ಕೆ ನೊಣ 'ಜೊಯ್' ಅಂತ ಮತ್ತುತ್ತಿದ್ದವು. ಆಗ ಶಿವ ಪಾರ್ವತಿ ನಂದಿ ಮೇಲೆ ಕೂತುಕೊಂಡು ಆಕಾಶ ಮಾರ್ಗದಲ್ಲಿ ಹೋಯ್ತಾ ಇದ್ರು. ಈ ಹುಡುಗಿ 'ಶಿವ ಪಾರ್ವತಿ' ಅಂತ ನೆನೀತ ಇದ್ದದ್ದು ಪಾರ್ವತಿಗೆ ಕೇಳಿಸಿತು. ಆಗ ಪಾರ್ವತಿ ಹೇಳಿದಳು :

"ಶಿವರಾಯ, ಶಿವರಾಯ ಯಾರೋ ನಮ್ಮಿಬ್ರ ಹೆಸರನ್ನು ನೆನೀತಾ ದುಃಖ ಮಾಡ್ತಾ ಹೋಯ್ತ ಅವರೆ, ನೋಡಾನೆ ಬಾ."

"ಅದು ಯಾರೋ ಏನೊ? ನಮಗ್ಯಾಕೆ ಆ ಸುದ್ದಿ. ಹೋಗಾನೆ ಬಾ" ಅಂದ ಶಿವ.

"ಉಹು. ಯಾವುದೋ ಹೆಣ್ಣು, ಪಾಪಾ, ನಮ್ಮ ನೆನೀತಾ ಇದ್ರೆ ನಾವು ಕೇಳದೋರಂಗೆ ಹೋಗೋದು ನ್ಯಾಯವಾ? ಆ ಹೆಣ್ಣು ಮಗಳಿಗೆ ಏನು ಕಷ್ಟ ಬಂದದೋ ಏನೋ? ಹೋಗಿ ನೋಡ್ಕೊಂಡೇ ಬರಬೇಕು" ಅಂತ ಪಾರ್ವತಿ ಹಠ ಹಿಡಿದಳು. ಸರಿ. ಶಿವ ಒಪ್ಪಿದ. ಇಬ್ಬರೂ 'ದಗನ' ಮಾರ್ಗದಿಂದ ಕೆಳಕ್ಕೆ ಇಳಿದು ಪ್ರತ್ಯಕ್ಷ'ವಾದರು.

"ಏನವ್ವಾ ನಿನ್ನ ಕಷ್ಟ? ಯಾಕ್ ಹಿಂಗೆ ಒಬ್ಬಳೇ ಇಂಥ ನರಮನುಷ್ಯರು ಸುಳೀದಂಥ ಆರಂದ ಅಡವೀಲಿ ಸೋಕ ಮಾಡ್ತಾ ಹೋಯ್ತಾ ಇದ್ದಿ?" ಅಂತ ಪಾರ್ವತಿ ಕೇಳಿದಳು. ಆ ಹುಡುಗಿ ತನ್ನ ಕಷ್ಟಾನೆಲ್ಲ ಆ ಜಗತ್ತಿನ ತಾಯಿತಂದೆಗಳಿಗೆ ಹೇಳಿಕೊಂಡಳು. ಪಾರ್ವತಿಗೆ ಅದೆಲ್ಲಾನೂ ಕೇಳಿ ಕಣ್ಣಲ್ಲಿ ಬೆಟ್ಟುಗಾತ್ರ ನೀರು ಕಿತ್ತುಗೊತ್ತು.

"ನೀನೇನೂ ಚಿಂತೆ ಯೋಚನೆ ಮಾಡಬ್ಯಾಡವ್ವ" ಅಂತ ಹೇಳಿ ಶಿವಪಾರ್ವತಿ ಇಬ್ಬರೂ ಅವಳಿಗೆ ಒಂದು ಮರಿಜವಳಿ ಕಡ್ಡಿ, ಒಂದು ಮಾತ್ರೆ, ಒಂದು ಕಡ್ಡಿ ಬೇವಿನ ಸೊಪ್ಪು ಕೊಟ್ಟರು.



"ನೋಡವ್ವ, ಇವ ಜ್ವಾಕೇಲಿ ಮಡೀಕೋ. ಸತ್ತೋರಿಗೆ ಈ ಬೇವಿನ ಸೊಪ್ಪಲ್ಲಿ ನೀವಳಿಸು, ಆ ಮ್ಯಾಲೆ ಮಾತ್ರೆ ನುಂಗಿಸು, ಕೊನೆಗೆ ಈ ಮರಿಜವಳಿ ಕಡ್ಡೀಲಿ ನೀವಳಿಸು. ಅವರು ದಡಕ್ಕನೆ ಎದ್ದು ಕೂತ್ಕೋತಾರೆ" ಅಂತ ಹೇಳಿ ಮಾಯವಾಗಿ ಹೋದರು. ಹುಡಿಗಿ ಹಂಗೇ ಮುಂದಕ್ಕೆ ನಡೆದಳು.

೩

ಒಂದು ಪಟ್ಟಣದಲ್ಲಿ ಒಬ್ಬ ದೊರೆ. ಅವನಿಗೆ ಒಬ್ಬನೇ ಮಗ. ಅವನು ಸತ್ತು ಹೋದ. ಆವತ್ತಿನ ಬೆಳಿಗ್ಗೆ ಹಾದಿ ವತ್ತೀಯ ಬೇವಿನ ಮರದ ಕೆಳಗೆ 'ಸಬ' ಹಾಕಿಕೊಂಡು ಸುಡಾಕೆ ಅಂತ ಎಲ್ಲಾನೂ ಅಣಿ ಮಾಡ್ತಾ ಕೂತಿದ್ದರು. ಈ ಹುಡುಗಿ ಅಲ್ಲಿಗೆ ಬಂದಳು. 'ಈ ಹೆಣಾವ ನಾನು ಏಳಿಸ್ತೀನಿ' ಅಂದಳು. ಎಲ್ಲರಿಗೂ ಅಪರಿಮಿತವಾಗಿ ಸಂತೋಷವಾಯಿತು. "ಹಂಗೇ ಮಾಡವ್ವ ತಾಯಿ, ಇದ್ದೋನು ಒಬ್ಬ ಮಗ. ದೇವರು ಬಂದಂಗೆ ಒಳ್ಳೇ ಸಮಯಕ್ಕೆ ಸರಿಯಾಗಿ ಬಂದಿದ್ದೀಯಾ" ಅಂದರು ಅವರು.

ಸರಿ, ಆ ಹುಡುಗಿ ಬೇವಿನ ಸೊಪ್ಪಲ್ಲಿ ನೀವಳಿಸಿದಳು, ಮಾತ್ರೆ ನುಂಗಿಸಿದಳು. ಮತ್ತೆ ಮರಿಜವಳಿ ಕಡ್ಡೀಲಿ ನೀವಳಿಸಿದಳು. ದೊರೆಮಗ ನಿದ್ದೆ ಮಾಡಿ ಎದ್ದೋನ ಹಂಗೆ ಎದ್ದು ಕೂತ. ಎಲ್ಲರಿಗೂ ಬೋ 'ಅಚರ್ಯ' ಆಗಿಹೋಯ್ತು. ಅವಳನ್ನೂ ಕರೆದುಕೊಂಡು ಪಟ್ಟಣಕ್ಕೆ ಬಂದರು. ಕೊಟ್ಟಣ ಕುಟ್ಟಿ ಪಟ್ಟಣ ಸಾರಿಸಿದರು. ಒಳ್ಳೇ ಲಗ್ನದಲ್ಲಿ ದೊರೆ ಮಗನಿಗೂ ಆ ಹುಡುಗಿಗೂ ಲಗ್ನಮಾಡಿದರು. ಮಗನ 'ಪರಾಣ' ಉಳಿಸಿದೋಳು ಅಂತ ಅರಮನೇಲಿ ಅತ್ತೆ ಮಾವ ಎಲ್ಲರೂ ಅಂಗೈಲಿ ಅವಧರಿಸಿ ಕೊಂಡರು. ಅವಳು ಹೇಳಿದಂತೆ ಕೇಳಿಕೊಂಡು ಸುಖವಾಗಿದ್ದರು.

ಗಂಡ ಹೆಂಡತಿ ಕಿತ್ತರೆ ಬರದಂತೆ ಇದ್ದರು. ಹಿಂಗೇ ನಾಕು ವರ್ಷ ಕಳೀತು. ಅವರಿಗೆ ಒಳ್ಳೇ ರವರವನೆ ಉರಿಯೋ ಅಂತ ಒಂದು ಗಂಡು ಮೊಗ ಹುಟ್ಟಿತು. ಅವರ ಸಂತೋಷಕ್ಕೆ ಪಾರಾವಾರವೇ ಇಲ್ಲದಂತಾಯಿತು.

ಇತ್ತಲಾಗಿ ಇವಳು ಬಂದ ಮೇಲೆ ಅತ್ತಲಾಗಿ ಅಣ್ಣನ ಮನೆಯ, 'ಕಳೇವೇ' ಹೊಂಟೋಯ್ತು. ಹಳೇರಾಗಿ ಹುಳಿ ಮಜ್ಜಿಗೆ ಕುಡೀತಿದ್ದೋರು ತೀರ ಬಡವರಾದರು. ದವಸ ಧಾನ್ಯ ತುಂಬಿ ಗಿಟಿ ಗಿಟಿ ಅಂತಿದ್ದ ಮನೆ 'ಬಸುಂ' ಅಂದ್ಹೋಯ್ತು. ಗಂಡ ಹೆಂಡತಿಯರು ಜೀವನಕ್ಕೆ ಬೇರೆ ಮಾರ್ಗವಿಲ್ಲದೆ ಸೌದೆ ಹೊತ್ತು ಮಾರಿ ಹೆಂಗೋ ಅಂಬಲಿಯೋ ತುಂಬೇಸೊಪ್ಪೋ ತಿನ್ನುತಿದ್ದರು.

ಒಂದು ದಿನ ಅಣ್ಣ ಪಟ್ಟಣದ ಬೀದಿಯಲ್ಲಿ 'ಸೌದೇ, ಸೌದೇ' ಅಂತ ಸಾರಿದ. ಉಪ್ಪರಿಗೆ ಮೇಲ್ದಿ ತಂಗಿಗೆ ಈ ದನಿ ಕೇಳಿಸಿತು. ತಟಕ್ಕನೆ ಎದ್ದು

ಅಲ್ಲಿಂದ ಕೆಳಗೆ ಬಗ್ಗಿ ನೋಡಿದಳು. ಅವನು ಅಣ್ಣನೇ ಅಂತ ಗುರುತು ಹಿಡಿದಳು. ಅತ್ತಿಗೆಯರಿಬ್ಬರೂ ಅವನ ಹಿಂದೆ ಸೌದೆ ಹೊರೆ ಹೊತ್ತು ಹೋಗುತ್ತಿದ್ದರು. ತಕ್ಷಣವೇ ಆಳು ಕಳುಹಿಸಿ ಕರೆಸಿದಳು. ಅವರಿಗೆ ಇವಳ ಗುರುತು ಹತ್ತಲಿಲ್ಲ. ಇವಳಿಗಂತೂ ಖಾತರಿಯಾಯಿತು. ಅವರ 'ಇರಸ್ಥಿತಿ' ನೋಡಿ ಕಳ್ಳು ಚುರಕ್ ಅಂತು. ಆದರೂ ಅದನ್ನು ತೋರಿಸಲಿಲ್ಲ.

"ಈ ಮೂರು ಸೌದೆ ಹೊರೇನೂ ಇಲ್ಲಿ ಹಾಕಿ" ಅಂದಳು. ಅವರು ಹಾಕಿದರು.

"ಇದಕ್ಕೆ ಕರಾಯ ಏಟ್ರೋ?" – ಅಂದಳು.

ಅವರು ಎಷ್ಟೋ ಹೇಳಿದರು. ಅವರು ಕೇಳಿದ್ದರ ಎರಡರಷ್ಟು ಹಣ ಕೊಟ್ಟು ಅವನ್ನು ಕೊಂಡಳು. ಅವರಿಗೆ 'ಬೋ ಚೋಜಿಗ'ವಾಯಿತು. ಒಬ್ಬರ ಮೊಖ ಒಬ್ಬರು ನೋಡಿಕೊಂಡರು. "ಈ ತಾಯಿ ಪುಣ್ಯಾತ್ಗಿತ್ತಿ. ಇನ್ನು ಮೇಲೆ ಇವಳಿಗೇ ಸೌದೆ ಹಾಕಬೇಕು" – ಅಂತ ಮಾತಾಡಿಕೊಂಡರು. ಆ ಮೇಲೆ ತಂಗಿ.

"ನೋಡ್ರೋ ..... ಇನ್ನೊಂದು ವಾರಕ್ಕೆ ಒಳ್ಳೇ ಸೌದೆ ತಕ್ಕೊಂಡು ಬನ್ನಿ. ಏಟು ಬೆಲೆಯಾದರು ಕೊಡ್ತೀನಿ. ಆವತ್ತು ನಮ್ಮನೆ ಗಣರಾಜನ ಹಬ್ಬ .... ಊಟಾನೂ ಮಾಡ್ಕೊಂಡ್ ಹೋಗಿವ್ರಂತೆ ಬನ್ನಿ" – ಅಂದಳು.

ಎಲ್ಲರಿಗು ಬಾಳ ಸಂತೋಷವಾಯಿತು. ಊರಿಗೆ ಹೋದರು.

ಇನ್ನೊಂದು ವಾರದ ಹೊತ್ತಿಗೆ ತಂಗಿ ಭೀಮರಾಶಿ ಬಳೆ ತೊಟ್ಟುಕೊಂಡಳು. ಬೊಮ್ಮರಾಶಿ ಕಡಗ ತೊಟ್ಟುಕೊಂಡಳು. ಹೇಳಿದ ದಿನ ಹೊತ್ತಿಗೆ ಸರಿಯಾಗಿ ಅಣ್ಣ ಅತ್ತಿಗೆಯರು ಸೌದೆ ಹೊತ್ತುಕೊಂಡು ಬಂದರು. ಅವರನ್ನು ಪ್ರೀತಿಯಿಂದ ಬರಮಾಡಿಕೊಂಡಳು. ಸೌದೆ ಹಾಕಿಸಿಕೊಂಡಳು. "ಈವತ್ತು ನಮ್ಮನೆ ಹಬ್ಬ, ಊಟ ಮಾಡ್ಕೊಂಡು ಹೋಗಿವ್ರಿ. ಹೊಳೇಕಡೆ ಹೋಗಿ ತಾನ ಮಡಿ ಮಾಡ್ಕೊಂಡು ಬನ್ನಿ" ಅಂತ ಹೇಳಿ ಕಳುಹಿಸಿದಳು. ಅವರು ಬರುವ ಹೊತ್ತಿಗೆ ಬೇಕುಬೇಕಾದ ತಿಂಡಿಪಂಡಿ ಎಲ್ಲಾನೂ ಮಾಡಿಸಿದಳು. ಅವರು ಹೊಳೆಯಿಂದ ಬಂದರು. ಅವರೆಲ್ಲರಿಗೂ ಹೊಸ ಹೊಸ ಶ್ಯಾಲೆ ಬಟ್ಟೆಗಳನ್ನು ಕೊಡಿಸಿದಳು. ಅವರೆಲ್ಲರಿಗೂ ಒಂದುಕಡೆ ಹೆದರಿಕೆ. ಇನ್ನೊಂದುಕಡೆ ಹಿಗ್ಗು. ಅವಳು ಹೇಳಿದಂತೆ ಹೊಸ ಬಟ್ಟೆ ಉಟ್ಟು ಮಲ್ಲಿಗೆ ಎಣ್ಣೆ ಸಂಪಿಗೆ ಎಣ್ಣೆ ಹಾಕಿಕೊಂಡು ಅವರೆಲ್ಲಾ ತಲೆ ಬಾಚಿಕೊಂಡರು.

"ವಳಗೇ ಊಟ ಮಾಡ್ಬನ್ರೋ ...." ಅಂದಳು.



ಎಲ್ಲರಿಗೂ ದಿಗಿಲು. ಆದರೂ ನಿರ್ವಾಹವಿಲ್ಲದೆ ವಳಕ್ಕೆ ಹೋದರು. ಅವರನ್ನ ಬೆಳ್ಳಿಮಣೆ ಮೇಲೆ ಕೂರಿಸಿ ಚಿನ್ನದ ಹರಿವಾಣದಲ್ಲಿ ಊಟಕ್ಕೆ ತಾನೇ ಇಕ್ಕಿದಳು. ಏಳೇಳು ಜಲ್ಮದಲ್ಲೂ ಉಣ್ಣದಂಥ ಊಟ ಮಾಡಿದರು. ಎಲ್ಲಾ ಆಯಿತು. ಅಣ್ಣ ಹೊರಗಡೆ ಬಂದು ಕೂತುಗೊಂಡ. ಅತ್ತಿಗೆಯರನ್ನ,

"ನೀವು ಇಲ್ಲೇ ಕೂತುಗೊಳ್ಳಿ" ಅಂದಳು. ಅವರು ಕಕಮಕ ಹಿಡಿದು ಪಳಪಳನೆ ಕಣ್ಣು ಬುಡುತ್ತಾ ಮುಳ್ಳಿನ ಮೇಲೆ ಕೂತಂತೆ ಕೂತುಕೊಂಡರು. ತಂಗಿ ಮೊಗ ಕರಕೊಂಡು ಬಂದಳು. ಅತ್ತಿಗೆಯರ ಎದುರಿಗೆ ಎರಡೂ ಕಾಲನ್ನೂ ನೀಡಿಕೊಂಡು ಅದರ ಮೇಲೆ ಮೊಗ ಮಲಗಿಸಿಕೊಂಡು ಹಾಲು ಹುಯ್ದಳು. ತನ್ನ ಪಂಥ ನೆರವೇರಿಸಿಕೊಂಡಳು. ಅವರಿಗೆ ಇದರ ತಲೇಬುಡ ಒಂದೂ ತಿಳಿಯಲಿಲ್ಲ. ಆಗ ಹೇಳಿದಳು,

"ಅತ್ತಿಗಮ್ಮದೀರಾ, ಈಗಲೂ ನಾನು ಯಾರು ಅಂತ ಗೊತ್ತಾಗನಿಲ್ಲವಾ? ನನ್ನ ಕಣಜಕ್ಕಿಳ್ಸಿ ಮರೀಕೊತ್ತೀಲಿ ಅವರಿಸಿ ಅಣ್ಣನಿಗೆ ಸುಳ್ಳು ಚಾಡಿ ಹೇಳಿ ನನ್ನ ಹೊರಕ್ಕೆ ನೂಕೋಗ ನೀವು ಅಂದದ್ದು ಗ್ಯಾಪಕ ಇಲ್ವಾ? ನೋಡಿ, ನಾನು ಭೀಮರಾಶಿ ಬಳೆ ತೊಟ್ಟಿವ್ನಿ, ಬೊಮ್ಮರಾಶಿ ಕಡಗ ಇಕ್ಕಿವ್ನಿ, ಸತ್ತ ಗಂಡನ್ನ ಏಳಿಸ್ಕೊಂಡಿವ್ನಿ. ಕಳ್ಳುಮೇಲೆ ಕಂದ ಮೂಡಿ ಕಾಲು ನೀಡಿ ಹಾಲು ಹೂದಿವ್ನಿ ತಿಳೀತಾ?"

ಆಗ ಅತ್ತಿಗೆಯರಿಗೆ ಎಲ್ಲಾ ತಿಳೀತು. 'ಏನೋ ಮಣ್ತಿಂದೋ' ಅಂತ ಪೇಚಾಡಿಕೊಂಡರು. ಈಚೇಲಿ ಕೂತಿದ್ದ ಅಣ್ಣ ಎಲ್ಲಾನೂ ಕೇಳಿಸ್ಕೊಂಡ. 'ಈ ಮುಂಡೇರ ಮಾತು ಕೇಳಿಕೊಂಡು ನನ್ನ ಚಿನ್ನದಂಥ ತಂಗೀಗೆ ಹಿಂಗೆ ಮಾಡಿದ್ನೆಲ್ಲಾ' ಅಂತ ಅವನಿಗೆ ದುಃಖವೇ ಬಂದು ಬುಡ್ತು. ಹೆಂಡತೀರನ್ನೂ ಬುಟ್ಟು ದಡದಡವೆ ಎದ್ದು ನೆಟ್ಟಗೆ ಊರಿಗೆ ಹೋಗಿಬುಟ್ಟ. ಹೆಂಡತೀರೂ ಅಲ್ಲಿಂದೆದ್ದು ಹೊರಕ್ಕೆ ಬಂದು ನೋಡಿದರು. ಗಂಡ ಇರಲಿಲ್ಲ. ಅಲ್ಲಿ ಇಲ್ಲಿ ಪರದಾಡಿಕೊಂಡು 'ಸತ್ತೆನೋ ಕೆಟ್ಟೆನೋ' ಅಂತ ಹೆಂಗೋ ಮನೆಗೆ ಬಂದು ಬಿದ್ದರು. ಅವರು ಬರೋದನ್ನೇ ಕಾಯುತ್ತಿದ್ದ ಗಂಡ ಇಬ್ಬರನ್ನೂ ಕಡಿದು ತುಂಡುತುಂಡು ಮಾಡಿ ಬಾಗಿಲಿಗೆ ತೋರಣ ಕಟ್ಟಿದ. ತಂಗೆ ಮನೆಗೆ ಬಂದ. ತಂಗೆ ಅಣ್ಣನಿಗೆ ಇನ್ನೊಂದು ಮದುವೆ ಮಾಡಿದಳು. ಎಲ್ಲ ಸುಖವಾಗಿ ಬದೀಕ್ಕೊಂಡರು.

* * * *

Blank

# ಅತಿಮಾನುಷ ಕಥೆಗಳು

**Blank**



## ಗೌಡನ ಮಗ*

ಗಂಗೂರಂಗೆ ಒಂದೂರು. ಅಲ್ಲಿ ಒಂದೊರ್ಷ ಬಾಳ ಚಾಮ ಬಂದು ಬುಡ್ತು. ಕುಡಿಯಾಕೆ ಒಂದ್‌ತೊಟ್ಟು ಕೆರೇಲಿ ನೀರಿಲ್ಲ. ತಿನ್ನಾಕೆ ಮೂರು ಕಾಳು ರಾಗಿ ಮನೇಲಿಲ್ಲ. ದನಕರ ಎಲ್ಲ ಸತ್ತೋದ್ದೋ. ಜನಗಳೆಲ್ಲ ಸಾವು ಸತ್ತು ಬಾಳು ಬತ್ತಿದ್ದರು. ಆ ಊರಲ್ಲಿ ಒಂದು ಕೂಲಿ ಮಠ. ಮೇಷ್ಟ್ರು ತುಂಬಾ ಒಳ್ಳೇನು. ಅವರ ಹತ್ತರ ಇಪ್ಪತ್ತು ಇಪ್ಪತ್ತೈದು ಹುಡುಗರು ಓದಾಕೆ ಬತ್ತಾ ಇದ್ರು. ಬರಗಾಲ ಬಂದು ಬುಟ್ಟಿದ್ದರಿಂದ ಜನಕೇ ತಿನ್ನಾಕಿಲ್ಲ. ಇನ್ನು ಮೇಷ್ಟ್ರಿಗೆ ಏನು ಕೊಟ್ಟಾರು? ಮೇಷ್ಟ್ರೂ ಹಂಗೂ ಹಿಂಗೂ ನೋಡಿದ. ಹೊಟ್ಟೆಗೆ ತಾಳ ಹಾಕ್ಕೊತ್ತು. ಆಗ ಒಂದು ದಿನ ಹುಡುಗರ ಕರೆದು ಹೇಳಿದ:

"ನೋಡಿ, ನಂಗೂ ಹೊಟ್ಗೆ ತಿನ್ನಾಕೆ ಏನೂ ಇಲ್ಲ. ನಾನು ಊರು ಬುಟ್ಟು ಹೊಂಟ್ ಹೋಗ್ಬೇಕೂ ಅಂತ ಮನಸ್ ಮಾಡಿವ್ನಿ. ನೀವು ಯಾರಾರೂ ಬರೋದಿದ್ರೆ ಬನ್ನಿ. ನಿಮ್ಮ ಓದಿಸಿ ದೊಡ್ಡ ಇದ್ಯಾವಂತರ ಮಾಡಿಸ್ತೀನಿ. ಆಮ್ಯಾಲೆ ಬೇಕಾದ್ರೆ ನಿಮ್ಮೂರಿಗೇ ಹಿಂದಿರಿಗಿ ಬರಬಹುದು."

ಒಂದು ಹದಿನೈದು ಹುಡುಗರು "ನಾವು ಬತ್ತೀವಿ" ಅಂದರು. ಸರಿ, ಮೇಷ್ಟ್ರು ಅವರನ್ನು ಕರಕೊಂಡು ಊರು ಬುಟ್ಟು ಹೊಂಟರು. ಹೋಯ್ತಾ ಹೋಯ್ತಾ ಒಂದು ಪಟ್ಟಣ ಸಿಕ್ತು. ಅದರ ವಳಕ್ಕೆ ಹೋಗಿ ನೋಡ್ತಾರೆ, ಬೀದೀಲಿ ಒಂದು ನರಪಿಳ್ಳೆಯೂ ಇಲ್ಲ. ಮನೆಬಾಗಲುಗಳೆಲ್ಲಾ ಹಾರಹೊಡದವೆ. ಆ ಮನೆಗಳ ವಳಕ್ಕೆ ಹೋಗಿ ನೋಡಿದರೆ ಅಲ್ಲೂ ನರಮನುಷ್ಯರ ಸುಳಿವೇ ಇಲ್ಲ. ಮನೆಗಳಲ್ಲೆಲ್ಲಾ ಅಕ್ಕಿ ಬ್ಯಾಳೆ ಅದು ಇದು ಅಂತ ಬೇಕ್‌ಬೇಕಾದ ಸಾಮಾನೆಲ್ಲ ತುಂಬಿ ಗಿಟಿಗಿಟಿ ಅಂತದೆ. ಅವರಿಗೆಲ್ಲಾ ಕೈಲಾಸವೇ ಕೆಳಕ್ಕೆ ಇಳದಂಗಾಗೋಯ್ತು. ಎಲ್ಲಾ ಹೋಗಿ ವಳ್ಳೇ ಮನೇಲಿ ಉಳಕೊಂಡರು. ಬೇಕಾದಂಥ ಬ್ಯಾಡವಾದಂಥಾ ತಿಂಡಿಪಂಡಿ ಅಡಿಗೆ ಊಟ ಮಾಡ್ಕೊಂಡು ಬರಗೆಟ್ಟ ದೇವರಿಗೆ ಪರ ಮಾಡಿದಂಗೆ ಎಲ್ಲಾ

---

* ಹೇಳಿದವರು : ಹಾಸನ ಜಿಲ್ಲಾ ಅರಕಲಗೂಡು ತಾಲ್ಲೂಕು ಹಂಪಾಪುರದ ತಾಯಿ ಕಾಳಮ್ಮನವರು

ಒಂದೇ ಉಸುರಿಗೆ ಹೊಡೆದರು. ಉಣ್ಣುವಾಗ ಮೇಷ್ಟ್ರು "ಈ ಸಣ್ಣಕ್ಕಿ ಅನ್ನ ತಗರಿಬ್ಯಾಳೆ ಸಾರಿನ ಜೊತೆಗೆ ತುಪ್ಪ ಹಾಲೂ ಮೊಸರೂ ಇದ್ರೆ ಇನ್ನೂ ಪಸಂದಾಗಿರೋದೋ ಊಟಾ" ಅಂದ. ಎಲ್ಲಾ ಉಂಡು ಹಾಯಾಗಿ ಮನೀಕೊಂಡರು.

ಒಂದು ಹೆಣ್ಣು ರಾಕ್ಷಸ ಆ ಊರಲ್ಲಿ ವಾಸಮಾಡಿಕೊಂಡಿತ್ತು. ಅದು ಆ ಊರಿನ ಜನಾನೆಲ್ಲ ತಿಂದುಕೊಂಡು ಪಾಳೂರು ಮಾಡಿಬುಟ್ಟಿತ್ತು. ಈ ಮೇಷ್ಟ್ರು ಅಂದ ಮಾತ ಅದು ಕೇಳಿಸ್ಕೊಂಡುಬುಡ್ತು. ಬೆಳಕು ಹರಿಯೋಹೊತ್ಗೆ ಒಂದೆಮ್ಮೆ ಕರುವಾಗಿ ಆ ಮನೆ ಸೊಂಪಲಲ್ಲಿ ನಿಂತುಕೊತ್ತು. ಹುಡುಗರೆಲ್ಲ ಎದ್ದು ಈಚೆಗೆ ಬಂದು ನೋಡ್ತಾರೆ ಎಮ್ಮೆ ಕರ ನಿಂತವೆ ! ಎಮ್ಮೆಗೆ ಒಂದು ಮೂಡೆಗಾತ್ರ ಕೆಚ್ಚಲದೆ ! ಹುಡುಗರು ಬಾಳ ಸಂತೋಷದಿಂದ ಓಡ್ಹೋಗಿ ಮೇಷ್ಟ್ರಿಗೆ ಈ ಸುದ್ದಿ ಹೇಳಿದರು. ಅವನಿಗೂ ಆನಂದವಾಯಿತು. ರೋಗಿ ಬಯಸಿದ್ದೂ ಹಾಲೂ ಅನ್ನ, ವೈದ್ಯರು ಹೇಳಿದ್ದೂ ಹಾಲೂ ಅನ್ನ ಅಂತ "ಹೊಡಕೊಂಡು ಬಂದು ಕಟ್ಟಿ ಹಾಕಿ, ಹಾಲು ಕರಕೊಳ್ರೋ" ಅಂದ. ಹುಡುಗರು ಹಂಗೇ ಮಾಡಿದರು. ಒಂದೆರಡು ಮೂರು ದಿವಸ ಅಚ್ಚುಕಟ್ಟಾಗಿ ಹಾಲುಮೊಸರು ಬೆಣ್ಣೆ ಮಾಡ್ಕೊಂಡು ಗಡದ್ದಾಗಿ ಹೊಡೆದರು. ಮೂರು ದಿನ ಆದಮ್ಯಾಲೆ ರಾಕ್ಷಸಿ ರಾತ್ರೆಹೊತ್ತು ಬಂದು ಒಂದು ಹುಡುಗನ್ನ ಎಳಕೊಂಡು ತಿಂದುಕೊಂಡಳು. ಹೊತ್ತಾರೆ ಎದ್ದು ನೋಡ್ತಾರೆ ಒಂದು ಹುಡುಗನೇ ಇಲ್ಲ. "ನೋಡಿದ್ರಾ, ಇಲ್ಲಿ ಎಷ್ಟುಸುಖವಾಗಿ ಉಂಡ್ಕೊಂಡು ತಿಂದ್ಕೊಂಡು ಇದ್ರೂ ಅಪ್ಪ ಅವ್ವನ್ನ ನೆನಕೊಂಡು ಊರಿಗೆ ಈ ಹುಡುಗ ಹೋಗಿ ಬುಟ್ಟವ್ನಲಾ" ಅಂದ್ಕೊಂಡ ಮೇಷ್ಟ್ರು.

ಹೀಗೆ ಪ್ರತಿನಿತ್ಯ ರಾಕ್ಷಸಿ ಬಂದು ಒಂದೊಂದು ಹುಡುಗನ್ನ ತಿಂದ್ಕೊಂಡು ತಿಂದ್ಕೊಂಡು ಬೆಳಗಿನ ಹೊತ್ತಿಗೆ ಮತ್ತೆ ಎಮ್ಮೆಯಾಗಿ ಕೊಟ್ಟಿಗೇಲೇ ನಿಂತಿರ್ತಿದ್ದಳು. ಮೇಷ್ಟ್ರು 'ದಿನಾ ಒಬ್ಬ ಹುಡುಗ ಹೋಯ್ತಾ ಅವನಲ್ಲ, ಅವರಿಗೆ ಇಲ್ಲಿ ಏನ್ ಅರೆಯಾಗ್ಯದೆ, ಪಾಪ, ತಂದೆ ತಾಯಿ ಅಂದ್ರೆ ಎಲ್ಲಾಕ್ಕಿಂತ ಹೆಚ್ಚು. ಅದಕೆ ಹಿಂಗೆ ಹೋಯ್ತಾಅವೆ' ಅಂದ್ಕೊಂಡು ಸುಮ್ಮನಾದ. ಹಿಂಗೇ ಹದಿನಾಲ್ಕು ಹುಡುಗರ್‍ನೂ ರಾಕ್ಷಸಿ ತಿಂದುಕೊಂಡಬುಡ್ತು. ಇನ್ನೊಬ್ಬನೇ ಹುಡುಗ ಉಳುಕೊಂಡ. ಆವತ್ತು ಮೇಷ್ಟ್ರಿಗೆ ಎಲ್ಲೂ ಇಲ್ಲದ ಚಿಂತೇನೆ ಬಂದು ಕವ್‌ಕೊಂಡು ಬುಡ್ತು. 'ಇದರಲ್ಲೇನೋ ಹಿಕಮತ್ತು ಇರಬೇಕು. ಇವತ್ತು ಕಾದು ನೋಡಿ ಏನೂ ಅಂತ ಪರೀಕ್ಷೆ ಮಾಡೇಬಿಡಬೇಕು' ಅಂತ ಮನಸ್ಸಿನಲ್ಲಿ ದಿಟ್ಟ ಮಾಡಿಕೊಂಡು ಆವತ್ತು ರಾತ್ರೆ ಉಂಡು ಉಟ್ಟು ಎಲ್ಲಾ ಆದ ಮ್ಯಾಲೆ ಹುಡುಗನ್ನ ತನ್ನ ವತ್ತೀಲೇ ಮನಗಿಸಿಕೊಂಡ.



ತನ್ನ ಮೊಖದ ಮ್ಯಾಲೆ ಒಂದು ನೇತ್ರದಂಥ ಬಟ್ಟೆ ಹಾಕ್ಕೊಂಡು ನಿದ್ದೆ ಬಂದೋನಂಗೆ ಮನೀಕ್ಕೊಂಡ. ಆ ಬಟ್ಟೇವಳಗಿನಿಂದ ಈಚೆಕಡೆ ನಡೆಯೋದೆಲ್ಲ ಕಾಣಿಸ್ತಾ ಇತ್ತು. ಮಧ್ಯ ಮಧ್ಯ ರಾತ್ರೆ ಸಮಯ. ಬಾಗಲು ಧಡಕ್ ಅಂತು. ಮೇಷ್ಟ್ರು ನೋಡ್ತಾನೇ ಅವನೆ. ರಾಕ್ಷಸಿ ಬಂದು ಮೆತ್ತಗೆ ಆ ಹುಡುಗನ್ನ ಎಳಕೊಂಡು ನುಂಗಿಬುಟ್ಟು ಹೊಂಟುಹೋಯಿತು. ಮೇಷ್ಟ್ರಿಗೆ ಮೈಯ್ಯೆಲ್ಲಾ ಜಲ ಜಲನೆ ಬೆವತುಬುಡ್ತು. ಜಲಮಲ ಎಲ್ಲಾ ಆಗೋಯ್ತು. 'ಅಯ್ಯೋ ಅನ್ಯಾಯವಾಗಿ ಈ ಬಾಳೋ ಬದುಕೋ ಮಕ್ಕಳ ಕರಕೊಂಡು ಬಂದು ರಾಕ್ಷಸೀ ಬಾಯಿಗೆ ಕೊಟ್‌ಬುಟ್ಯ್ನಲ್ಲಾ' ಅಂತ ಪೇಚಾಡಿಕೊಂಡ. ಇನ್ನೂ ಇಲ್ಲೆ ಇದ್ರೆ ತನ್ನೂ ನುಂಗಿಹಾಕ್‌ಬುಡ್ತದೆ ಅಂತ ಅವನಿಗೆ ತಿಳದುಹೋಯಿತು.

ಮಸುವು ಹರೀತಿದ್ದಂಗೇ ಮೇಷ್ಟ್ರು ಆ ಮನೇ ಬುಟ್ಟು ಹೊಂಟ್‌ಬುಟ್ಟ. ಒಂದು ಚಂದ್ರಾಯುಧ ಹಿಡಕೊಂಡು ರಾಕ್ಷಸಿ ಹಿಂದುಗಡೆಯಿಂದ ಒಂದು ಊರಗಲಕ್ಕೆ ಬಾಯಿಬುಟ್ಕೊಂಡು ಆಲಬ್ಬರಿಸಿಕೊಂಡು ಬತ್ತಾ ಅದೆ. ಮೇಷ್ಟ್ರು ಅದ ನೋಡಿಬುಟ್ಟು ಓಡಿದ ಓಡಿದ. ಬರಗಾಳಿ ಹಂಗೆ ಓಡಿದ. ಬಿಸಲು ಹತ್ತಿಬುಡ್ತು. ಮೇಷ್ಟ್ರಿಗೆ ಬಾಯಾರಿ ಗಂಟಲೆಲ್ಲಾ ಒಣಗಿಹೋಯ್ತು. ಅಲ್ಲೊಂದು ಬಾವಿ ಸಿಕ್ತು. ಅದರಲ್ಲಿ ನೀರು ಸೇದಿ ಕೊಂಡು ಕುಡಿಯಾನೆ ಅಂತ ಚಂದ್ರಾಯುಧ ಬಾವಿ ಕಟ್ಟೇ ಮ್ಯಾಲೆ ಮಡಗಿ ಚೊಂಬ್ನೂ ಹಗ್ಗಾನೂ ಬಾವಿಗೆ ಇಳೀಬುಟ್ಟ. ನೀರು ಸೇದಿಕೊಂಡು ಒಂದು ಗುಟುಕು ಕುಡಿದ. ಅಷ್ಟರಲ್ಲಿ ರಾಕ್ಷಸಿ ಬಂದೇ ಬುಡ್ತು. ಮೇಷ್ಟ್ರು ಚಂದ್ರಾಯುಧ ಬುಟ್ ಬುಟ್ಟು ಓಟ ಕಿತ್ತು ಬುಟ್ಟ. ರಾಕ್ಷಸಿ ಬಂದದ್ದೇ ಆ ಚಂದ್ರಾಯುಧ ತಕ್ಕೊಂಡು ಎರಡು ತುಂಡಿಗೆ ಮುರೀತು. ಒಂದು ತುಂಡು ಮೊಗ ಮಾಡ್ಕೊತ್ತು. ಒಂದು ತುಂಡ ತೊಟ್ಟು ಮಾಡ್ಕೊತ್ತು. ತಾನು ಸುಂದರಿಯಾದ ಹುಡುಗಿಯಾಗಿ ಬುಡ್ತು. ಹಿಂದುಗಡೆಯಿಂದ ಹೊಂಡ್ತು.

ಅಲ್ಲಿ ಒಂದೂರು ಸಿಕ್ತು. ಅಲ್ಲಿನ ಊರಿನ ಜನವೆಲ್ಲಾ ಏನೋ ನ್ಯಾಯ ಮಾಡ್ತಾ ಕೂತಿದ್ದರು. ಮೇಷ್ಟ್ರು ಬಂದು ಅವರ ಮೊರೆಹೊಕ್ಕು, "ಅಲ್ಲೊಬ್ಬ ರಾಕ್ಷಸಿ ಬತ್ತಾ ಅವ್ಳೆ. ಅವಳಿಂದ ನನ್ನ ಬುಡಿಸ್ರಪ್ಪಾ" ಅಂತ ಗೋಗರೆದ. ಆ ರಾಕ್ಷಸಿ ಬಂದು "ನೋಡ್ರಪ್ಪಾ, ಇವನು ನನ್ನ ಗಂಡ. ನನ್ನ ಸಾಕನಾರದೆ ಬುಟ್ ಬುಟ್ ಹೋಯ್ತಾ ಅವ್ನೆ. ನೀವಾರೂ ವಸಿ ಬುದ್ಧಿ ಹೇಳ್ರಿಪ್ಪಾ" ಅಂತು. ಅಂದ "ಮೇಷ್ಟು ಅಯ್ಯೋ ಅಯ್ಯೋ ಅವಳು ಖಂಡತವಾಗ್ಲೂ ಹೆಡ್ತೀನೆ ಅಲ್ಲ. ಬರೀ ಸುಳ್ ಹೇಳ್ತಾ ಅವ್ಳೆ." ಗೌಡನಿಗೆ ಏಳು ಜನ ಹೆಡ್ತೀರಿದ್ದರು. ಅವರೊಬ್ಬರಿಗೂ ಮಕ್ಕಳೇ ಇರನಿಲ್ಲ. ಆದ್ರಿಂದ ಪಂಚಾಯತಸ್ಥರು "ನೋಡಿ ಗೌಡ್ರೆ, ನಿಮಗೆ

ಹ್ಯಂಗೂ ಮಕ್ಕಳಿಲ್ಲ. ಇವಳಿಗೆ ಒಂದು ಚಿನ್ನದಂಥಾ ಗಂಡು ಮೊಗ ಅದೆ. ಇವಳ್ನ ಕೂಡಾವಳಿ ಮಾಡ್ಕೊಂಡ್‌ಬುಡಿ. ನಿಮಗೂ ಮನೆಕಾಲ ನಡೀತದೆ" ಅಂದರು. ಗೌಡ ನೋಡಿದ. ಅವಳು ಕೈ ತೊಳಕೊಂಡು ಮುಟ್ಟೋ ಹಂಗಿದ್ದಳು. ಅವನಿಗೂ ಅವಳ ಮ್ಯಾಲೆ ಮನಸಾಯಿತು. "ಹೂಂ ಆಗಲಿ" ಅಂದ. ಮೇಷ್ಟ್ರು "ಸದ್ಯ ಗಾಚಾರ ಕಳೀತು" ಅಂದ್ಕೊಂಡು ತನ್ನ ಪಾಡಿಗೆ ತಾನು ಹೋದ. ಗೌಡ ರಾಕ್ಷಸೀನ ಕೂಡಾವಳಿ ಮಾಡ್ಕೊಂಡು ಮನೆಗೆ ಕರಕೊಂಡು ಹೋದ.

೨

ಸುತ್ತಲ ಏಳು ಹಳ್ಳಿಗೂ ಗೌಡ ಅವನು. ಅವನ ಮನೇಲಿ ಆನೆ ಕುದುರೆ ಒಂಟೆ ದನ ಕರ ಕೋಳಿ ಬೇಕಾದಂಗೆ ತುಂಬಿ ತುಳುಕಾಡುತಿದ್ದೊ. ಈ ರಾಕ್ಷಸಿ ಮೊದಲನೆ ದಿನ ಒಂದಾನೆ ತಿಂದಳು. ಒಂದಿಷ್ಟು ಆನೆ ಬಾಡು ತಂದು ಸವತೀರು ಮನಗಿದ್ದ ಹಾಸಿಗೆಮ್ಯಾಕೆ ಹಾಕಿದಳು. ಹೊತ್ತಾರೆ ಎದ್ದು ಗೌಡನ ಹೆಂಡ್ತೀರು ಹೊಲದ ಕೆಲಸಕ್ಕೆ ಹೊಂಟ್‌ಹೋಯ್ತಿದ್ದು. ರಾಕ್ಷಸೀನೆ ಹಾಸಿಗೆ ಎತ್ತುತ್ತಾ ಇದ್ದಳು. ಎತ್ತುವಾಗ "ಇದೆಲ್ಲೀದು ಹಸೀಬಾಡು, ಏನ್ ತಿಂದುಬಂದ್ರೋ ಕಾಣೆ" ಅಂತ ಬೋದು ಗಂಡನಿಗೆ ಹೇಳಿದಳು. "ಇವರೇ ತಿಂದಿರ್ಬೇಕು, ಇನ್ಯಾರು ತಿಂದಾರು. ಬಾಡು ಮಗ್ಗುಲಲ್ಲೇ ಬಿದ್ದಿತ್ತು" ಅಂದಳು ರಾಕ್ಷಸಿ. ಗೌಡನಿಗೆ ಬಹಳ ಚೋಜಿಗವಾಯ್ತು.

ದಿನಾ ಹಿಂಗೇ ಆನೆ ಒಂಟೆ ಕುದರೆ ಎತ್ತು ಎಮ್ಮೆ ಎಲ್ಲಾನೂ ಒಂದೊಂದಾಗಿ ರಾಕ್ಷಸಿ ತಿಂದುಕೊಂಡಳು. ಬಾಡ ಸವತೀರ ಹಾಸಿಗೆ ಹತ್ರ ತಂದು ಹಾಕಿ ಅವರ ಮ್ಯಾಲೆ ದೂರು ಹೊರಿಸಿದಳು. ಹಟ್ಟಿಯೆಲ್ಲಾ ಹಿಂಗೆ ಕಾಲಿಯಾಗ್ತಾ ಬಂತು. ಗೌಡನೂ ತಡದೂ ತಡದೂ ಸಾಕಾದ. ಒಂದು ದಿನ ಇಪರೀತ ಕ್ವಾಪ ಬಂದ್‌ಬುಡ್ತು. ರೇಗಾಡಿದ "ಇವರು ಏಳು ಜನಾನೂ ಸಿಗಿದು ಕಣ್ಣು ಕೀಳಿಸಿ ಹನ್ನೆರಡಾಳುದ್ದ ಬಾವಿ ತಗದು ಅದರೊಳಕ್ಕೆ ಬಿಸಾಡಿ ಬುಡಿ" ಅಂದಳು ರಾಕ್ಷಸಿ. ಸಂಪೂರ್ಣವಾಗಿ ರಾಕ್ಷಸಿಗೆ ಮರುಳಾಗಿ ಬುಟ್ಟಿದ್ದ ಗೌಡ 'ಹಂಗೇ ಆಗಲಿ' ಅಂತ ಹೇಳಿ ಹನ್ನೆರಡಾಳುದ್ದ ಬಾವಿ ತಗಿಸಿ ಅವರು ಏಳು ಜನಾನೂ ಕಣ್ಣು ಕೀಳಿಸಿ ಅದರೊಳಕ್ಕೆ ಹಾಕಿಸಿ ಬುಟ್ಟ. ಆದ್ರೆ ಅವರ್ನ ಸಿಗಿಸಿ ಹಾಕನಿಲ್ಲ.

ಬಾವಿಗೆ ಹಾಕಿದಾಗ ಅವರು ಏಳು ಜನ ಹೆಂಗಸರೂ ಬಸಿರೀರಾಗಿದ್ರು. ಒಬ್ಬಳಿಗೆ ಎಂಟು ತಿಂಗಳು. ಒಬ್ಬಳಿಗೆ ಏಳು ತಿಂಗಳು, ಒಬ್ಬಳಿಗೆ ಆರು ತಿಂಗಳು...... ಹಿಂಗಾಗಿತ್ತು. ಹತ್ತ ಕಡೇಚಾರ್‍ಯೋಳಿಗೆ ಎರಡು ತಿಂಗಳಾಗಿತ್ತು. ಅವರಿಗೆ ಹೊಟ್ಟೆಗೆ



ಆವಾರ ಇಲ್ಲ. ಎಲ್ಲ ಸುಟ್ಟು ಸುಣ್ಣವಾದರು. ಹಿರಿಯೋಳು ಒಂದು ಗಂಡು ಮೊಗ ಹೆತ್ತಳು. ಅದ ಸಿಗಿದು ಏಳು ಜನೂವೆ ಹಂಚಿಕೊಂಡು ತಿಂದುಕೊಂಡ್ರು. ಆದರೆ ಕಿರಿಯೋಳು ಮಾತ್ರ ತಿಂದಂಗೆ ಮಾಡಿ ಮುಚ್ಚಿ ಮಡೀಕೊತಿದ್ಲು. ಹಿಂಗೇ ಆರು ಜನಾನೂ ಹೆತ್ರು. ಆರು ಮಕ್ಕಳ್ನ ಸಿಕ್ಕೊಂಡು ಹಂಚ್ಕೊಂಡ್ರು. ಕಟ್ಟಕಡೆಗೆ ಕಿರಿಯೋಳು ಹೆತ್ತಳು. ರತ್ನದಂಥಾ ಗಂಡು ಮೊಗ. ಆಗ ಎಲ್ಲಾ ಕೇಳಿದರು. "ನಿನ್ನ ಮಗಾನು ಸಿಗಿದು ಕೊಡು. ನಾವು ನಮ್ಮ ಮಕ್ಳೆಲ್ಲಾನೂ ಸಿಗದು ಹಂಚಿಕೊಡ್ಲಿಲ್ವಾ?" ಅಂದರು. ಆಗ ಅವಳು "ನಿಮ್ಮ ಮಕ್ಕಳ ಪಾಲು ನಾನೇನೂ ತಿಂದ್‌ಕೊಂಡಿಲ್ಲ" ಅಂತ ಹೇಳಿ ಅವರ ಮಕ್ಕಳ ಚೂರೆಲ್ಲಾನೂ ಅವರಿಗೇ ಮಡ್ಲಿಂದ ತಗುದು ಕೊಟ್ಟ್‌ಬುಟ್ಟಳು. ತನ್ನ ಶ್ಯಾಲೆ ಸೆರಗು ಹರಿದು ಅದರಲ್ಲಿ ಮೊಗ ಸುತ್ತಿ ಈಚೆಗೆ ಎಸೆದಳು.

ಆ ಊರಲ್ಲಿ ಒಬ್ಬಳು ಅಡುಗೂಲಜ್ಜಿ ಇದ್ಲು. ಅವಳು ಬೈಲುಕಡೆಗೆ ಹೋಗಾಕೆ ಅಂತ ಬಾವಿ ಹತ್ರ ಬಂದಳು. ಎಳೇಮೊಗ ಬಾವಿತಾವು ಬಡಕೊತ್ತಾ ಇತ್ತು. ಅವಳು ಬಂದುನೋಡಿ "ಅಯ್ಯೋ ಪಾಪ, ಈ ಮೊಗ ಬಾವಿ ವಳಗಿರೋ ಗೌಡಿತೀರ್ದೇನೋ" ಅಂದುಕೊಂಡು ಎತ್ತಿಕೊಂಡು ಹೋಗಿ ಸಾಕಿದಳು. ಆ ಮೊಗ ಹೊತ್ತಿಗೆ ಬೆಳಿ ಅಂದ್ರೆ ಜಾವಕೆ ಬೆಳೀತು. ಒಂದು ತಿಂಗಳಿಗೆ ಒಂದು ವರ್ಷದ ಮಗು ಆಯ್ತು. ಒಂದು ವರ್ಷಕ್ಕೆ ನಾಕುವರ್ಷದ ಮಗೀನಂಗೆ ಆಯ್ತು. ನಾಕೆ ವರ್ಷಕ್ಕೆ ಹತ್ತು ವರ್ಷದ ಮೊಗೀನಂಗೆ ಬೆಳೀತು. ಆ ಮುದುಕಮ್ಮನೇ ಬಾಯಿಮ್ಯಾಕೆ ಕೈಮಡೀಕೊಂಡಳು. ಅಷ್ಟು ವರ್ಷಕ್ಕೇ ಸೀಮೇಲಿಲ್ದ ಮಾತೆಲ್ಲಾನೂ ಆಡ್ತು. 'ಶಿವಸಾಪದ ಮಕ್ಕಳು ಹಿಂಗೇಯ' ಅಂದುಕೊಂಜಳು ಮುದುಕಿ. ಆ ಹುಡುಗ ಆಟಾ ಆಡಾಕೆ ಹೋದ್ರೆ ಮಕ್ಕಳ ಹತ್ರ ಗಜ್ಜುಗ, ಗೋಲಿ, ಬುಗುರಿ ಎಲ್ಲಾನೂ ಗೆದ್ಕೊಂಡ್ ಬಂದುಬುಡ್ತಿದ್ದ. ಒಂದು ದಿನ ಹಿಂಗೇ ಆಟ ಆಡ್ತಾ ಆಡ್ತಾ ಗಜ್ಜುಗ ಗೋಲಿ ಎಲ್ಲಾನೂ ಗೆದ್ಕೊಂಡ. ಆಗ ಒಂದು ಹೈದ. "ಅಪ್ಪ, ಅವ್ವ ಇಲ್ದೇ ಹುಟ್ಟಿದ ಬಡ್ಡೀ ಹೈದನ್ನ ನೋಡ್ಲಾ, ದಿನಾ ಹಿಂಗೇ ಗೆದ್ಕೊಂಡ್ ಹೋಯ್ತಾನೆ" ಅಂದ. ಹುಡುಗ ಗೆದ್ದಿದ್ದ ಗಜ್ಜುಗ ಗೋಲಿ ಎಲ್ಲಾನೂ ಬಿಸಾಡಿ ಮನೆಗೆ ಬಂದು ಅಳ್ತಾ ಕೂತ್ಗೊಂಡ. ಆ ಮುದುಕಿ "ಯಾಕಪ್ಪಾ ಅಳ್ತೀಯಾ? ಹಕ್ಳೇನಾದ್ರೂ ಹೊಡೆದವಾ?" ಅಂತ ತಲೆ ಸವರಿದಳು. ಅವನು ಬಿಕ್ಕಿ ಬಿಕ್ಕಿ ಅತ್ತ. 'ಅದೇನ್ ಹೇಳಪ್ಪಾ" ಅಂದ್ಲು ಮುದುಕಿ.

"ನನ್ನ ಅಪ್ಪ ಅವ್ವ ಯಾರು ಹೇಳು ಮತ್ತೆ" ಅಂದ ಹುಡುಗ.

"ನೀನು ಈ ಊರ ಗೌಡನ ಮಗ. ನಿಮ್ಮ ಚಿಕ್ಕವ್ನ ಮಾತ ಕೇಳ್ಕೊಂಡು

ನಿಮ್ಮಪ್ಪ ನಿನ್ನವ್ವದೀರ ಕಣ್ಣುಕೀಳಿಸಿ ಬಾವೀಗೆ ಹಾಕಿಸ್ಯವ್ನೆ" ಅಂದಳು ಮುದುಕಿ. ಹುಡುಗ ಏನೂ ಮಾತಾಡನಿಲ್ಲ.

ದಿನಾ ಕಿಂದರಿ ನುಡಿಸಿಕೊಂಡು ಹಾಡು ಹೇಳ್ಕೊಂಡು ಊರಲ್ಲೆಲ್ಲಾ ಭಿಕ್ಷ ಮಾಡಿಕೊಂಡು ಬಂದು ಅನ್ನ ಹಿಟ್ಟು ಮಾಡ್ಸಿ ತಾನೂ ಉಂಡು ಬಾವೀತಕೆ ತಕ್ಕೊಂಡ್ ಹೋಗಿ ಅದರೊಳಗೆ ಹಾಕ್ತಿದ್ದ. ಹುಡುಗ ಸೂರ್ಯಚಂದ್ರನಂಗೆ ಉರೀತಿದ್ದ. ಅವನ ಮೊಖಾ ನೋಡಿ ಯಾರೂ 'ಭಿಕ್ಷೆ ಇಲ್ಲಾ' ಅಂತಿರಲಿಲ್ಲ. ಒಂದು ದಿನ ಕಿಂದರಿ ನುಡಿಸಿಕೊಂಡು ಹಾಡು ಹೇಳಿಕೊಂಡು ಗೌಡನ ಮನೆಗೆ ಭಿಕ್ಷುಕ ಬಂದ. ಅವರ ಚಿಕ್ಕವ್ವ – ರಾಕ್ಷಸಿ – ದೂರದಿಂದ್ಲೇ ನೋಡಿದಳು. ನೋಡಿದ ತಕ್ಷಣ ಅವಳಿಗೆ ಗೊತ್ತಾಗೋಯ್ತು. 'ಓಹೋ ಇವನು ನನ್ನ ಸವತೀರ ಮಗನೇಯ. ಏನಾರೂ ಮಾಡಿ ಇವನ್ನ ತಗೀಬೇಕು. ಇಲ್ದೆ ಇದ್ರೆ ಇವ್ನು ನನ್ನ ಬುಡಕ್ಕೇ ನೀರು ತಿದ್ದಿಬುಡ್ತಾನೆ ಅಂತ ಮನಸ್ಸಿನಲ್ಲಿ ಅಂದುಕೊಂಡಳು. ಇವನು ಬಾಗಿಲಿಗೆ ಬತ್ತಿದ್ದಹಂಗೇ ಒಂದು ಮೊರ ರಾಗಿ ಒಂದು ಮೊರ ಅಕ್ಕಿ ತಂದು ಹಾಕಿದಳು. "ಏನುಂಡು ಬಂದ್ಯೋ ಮಗನೇ?" ಅಂತ ಕೇಳಿದಳು.

"ಸಣ್ಣಕ್ಕಿ ಬೋನಾನೂ ತಗರಿಬ್ಯಾಳೆ ಸಾರ್ನೂ ಉಂಡುಬಂದೆ" ಅಂದ ಹುಡುಗ.

"ಅಯ್ಯೋ ಇಷ್ಟೇಯ? ನೀನು ಕಿಂದರಿ ನುಡಿಸೋನು. ಸಣ್ಣಕ್ಕಿ ಅನ್ನಾನೂ ತಗರಿಬ್ಯಾಳೆ ಸಾರ್ನೂ ಸರಳೆಮ್ಮೆ ತುಪ್ಪಾನೂ ಉಂಡುಬಂದು ಕಿಂದರಿ ನುಡಿಸಿದ್ರೆ ಅದೂ ಒಂದು ಮಜ" ಅಂದಳು ರಾಕ್ಷಸಿ.

"ಸರಳೆಮ್ಮೆ ಎಲ್ಲಿ ಸಿಕ್ತದೆ?" ಅಂತ ಹೇಳಿದ ಹುಡುಗ.

"ಅಯ್ಯೋ ಅಯ್ಯೋ ಅದು ಬಾಳ ದೂರದಲ್ಲಿದೆ. ನಿನ್ನ ಕೈಲಿ ತರಕಾದಾತಾ?"

"ಓಹೋ ತತ್ತೀನಿ. ಅದೆಲ್ಲದೆ ಹೇಳು."

"ಇಲ್ಲಿಗೆ ಏಳು ಯೋಜನದಾಚೆ ಒಂದು ಮಹಾಂತ ಕಾಡದೆ. ಅಲ್ಲಿ ಆ ಸರಳಮ್ಮೆ ಕರ ಹಾಕ್ಕೊಂಡದೆ. ನೀನು ಸೂರನಾದ್ರೆ ತಕ್ಕೊಂಡ್ ಬಾ ನೋಡಾನೆ" ಅಂದಳು ರಾಕ್ಷಸಿ.

ಮನೆಗೆ ಹೋದ. "ಅಮ್ಮ ನಾನು ಸರಳೆಮ್ಮೆ ತರಾಕೆ ಹೋಯ್ತೀನಿ. ಅಡಿಗೆ ಮಾಡಿಕೊಳ್ಯಾಕೆ ಒಂದು ತಪ್ಪಲೇನೂ ಒಂದಿಷ್ಟು ಅಕ್ಕೀನೂ ಕೊಡು" ಅಂದ. ಅವಳು ಗಾಬರಿಯಾಗಿ "ನೀನೂ ಅಂದ್ರೇನೂ ಸರಳಮ್ಮೆ ಅಂದ್ರೇನೂ, ಎಲ್ಲಿಂದೆಲ್ಲಿಗಪ್ಪ ? ಅದು ರಾಕ್ಷಸ ಎಮ್ಮೆ, ನಿನ್ನ ಬುಟ್ಟಾತಾ? ಒಂದೇ ಸತಿಗೆ ನುಂಗಿಕೊಂಡ್ ಬುಡ್ತದೆ. ಹೋಗಬ್ಯಾಡ ಕನಪ್ಪಾ" ಅಂದಳು.



"ಇಲ್ಲ. ಅದೇನಾರೂ ಆಗಲಿ ನಾನು ಹೋಗಲೇಬೇಕು. ನೀನು ಅಕ್ಕೀನೂ ತಪ್ಪಲೇನೂ ಕೊಡು" ಅಂತ ಆ ಹುಡುಗ ಹಠ ಹಿಡಿದ.

ಸರಿ, ಆ ಮುದುಕಿ ಅವನ ಹಿಜ ತಡೀನಾರ್ದೆ ಅಕ್ಕೀನೂ ತಪ್ಪಲೇನೂ ಕೊಟ್ಲು. ಅವ್ನೂ ಹೊತ್ಕೊಂಡು ನಡದ ನಡದ, ಅಷ್ಟು ದೂರ ನಡದ. ಇಳ್ಳು ಹಗಲು ಬೆಟ್ಟ ಗುಡ್ಡ ಕಾಡು ಮೂಡು ಅನ್ನದೇನೇ ನಡದ. ಅಲ್ಲೊಂದು ಊರು ಸಿಕ್ತು. ಅದರಿಂದ ಆ ಕಡೆ ಮೂರು ಜನ ಋಷಿಗಳು ತಪಸು ಮಾಡ್ತಾ ಕೂತಿದ್ದರು. ಅವರು ಯಾರ ಜೊತೇಲೂ ಮಾತಾಡ್ತಿರಲಿಲ್ಲ. ಮಾತಾಡಿಸಿದೋರ್ಗೆ ಸಾಪಕೊಡ್ತಿದ್ರು. ಅದು ಈ ಹುಡುಗನಿಗೆ ಗೊತ್ತಾಯ್ತು. ಅವರ ಮುಂದುಗಡೆಗೆ ಒಂದಷ್ಟು ದೂರದಲ್ಲಿ ಕೂತುಗೊಂಡು ಎರಡು ಕಲ್ಲು ಮಡಗಿ ಅದರ ಮ್ಯಾಲೆ ತಪ್ಪಲೆ ಮಡಗ್ತು. ಎರಡು ಕಲ್ಲುಮ್ಯಾಲೆ ತಪ್ಪಲೆ ನಿಂತಾತಾ? ಅದು ಬುಡುಕ್ ಅಂತ ಬಿದ್ದೋಯ್ತು. ಮತ್ತೆ ಮಡುಗ್ತು. ಮತ್ತೆ ಬಿದ್ದೋಯ್ತು. ಹಿಂಗೇ ಮಧ್ಯಾಹ್ನ ಆಗೋಯ್ತು. ಋಷಿಗಳೂ ಅದನೋಡಿ ನೋಡಿ ಸಾಕಾದ್ರು. ಅವರಿಗೂ ಅವನ ಕಂಡು ಹೊಟ್ಟೆಉರೀತು "ಎರಡು ಕಲ್ಲು ಮಡಗಿದ್ರೆ ಅದರ ಮ್ಯಾಲೆ ತಪ್ಪಲೆ ನಿಂತಾತಾ? ಮೂರು ಕಲ್ಲು ಮಡಗಿ ಅದರ ಮ್ಯಾಲೆ ತಪ್ಪಲೆ ಮಡಗು" ಅಂದರು. ಅವರು ಬಾಯಿ ಬುಟ್ಟಿದ್ದೇ ತಡ, ಹುಡುಗ ಓಡೋಡಿ ಅವರ ಪಾದದಮ್ಯಾಲೆ ಬಿದ್ದ.

"ನಿಂಗೇನಾಗ್ಬೇಕಪ್ಪಾ?" ಅಂತ ಕೇಳಿದರು. ಹುಡುಗ ಎಲ್ಲಾ ಸಂಗ್ತೀನೂ ಹೇಳಿದ.

"ನಿಂಗ್ಯಾಕಪ್ಪಾ ಸರಳೆಮ್ಮೆ ಸುದ್ದಿ? ಅದು ಬಾಳ ಕಷ್ಟ. ಸುಮ್ಮನೇ ಮನೇಗೆ ಹೋಗು" ಅಂದರು.

"ಇಲ್ಲ, ನಾನು ಸತ್ರೂ ಪರವಾಯಿಲ್ಲ. ಅದ ತರನೇಬೇಕು, ನೀವು ಸಾಯ ಮಾಡಬೇಕು."

"ಸರಿ" ಅಂತ ಹೇಳಿ ಮೂರು ಉಂಡೆಗಳ್ನ ಮಂತ್ರಿಸಿಕೊಟ್ಟರು. ಒಂದು ಮಳ್ಳುಂಡೆ, ಒಂದು ಸೀಗೆ ಉಂಡೆ, ಒಂದು ಮಸಿಉಂಡೆ. ಅವ ಕೊಟ್ಟು ಉಪಯೋಗಿಸೋ ಇಧಾನಾನೂ ಹೇಳಿಕೊಟ್ರು.

ಹುಡುಗ ಆ ಮೂರುಂಡೇನೂ ಜೋಬಿಗೆ ಮಡೀಕೊಂಡು ಹೋದ. ಮಹಾಂತ ಕಾಡು. ಸರಳೆಮ್ಮೆ ಅಲ್ಲಿ ಕರಹಾಕ್ಕೊಂಡು ಕಾಲುಕೆರಕೊಂಡು ನಿಂತದೆ. ಇವನ್ನ ನೋಡಿದ ತಕ್ಷಣ 'ಹಾ ಹೋ' ಅಂತ ಬಾಯಿ ಬುಟ್ಟುಕೊಂಡು ಹರಿಸಿಕೊಂಡು ಬಂದ್‌ಬುಡ್ತು. ಹುಡುಗ ಮಳ್ಳುಂಡೆ ತಗದು ಎಸೆದ. ಒಂದು

ದೊಡ್ಡ ಹೊಳೆ ಹರಿಯಾಕೆ ಸುರುಮಾಡ್ತು. ನೀರು ಉಕ್ಕಂಡ ಬರಮಂಡ ತುಂಬಿ ತುಳುಕಾಡ್ತು. ಹುಡುಗ ಮುಂದಕ್ಕೆ ಓಡಿದ. ಆ ಸರಳೆಮ್ಮೆ ಬಾಳ ಕಷ್ಟಪಟ್ಕೊಂಡು ಆ ಹೊಳೇನೂ ಈಜಿಕೊಂಡು ಈಚೆಗೆ ಬತ್ತು. ಆಮ್ಯಾಲೆ ಒಂದೇ ಉಸುರಿಗೆ ಅಡ್ರಗಾಲು ಹಾಕ್ಕೊಂಡು ನೆಕ್ಕೊಂಡು ಬತ್ತು. ಹುಡುಗ ಸೀಗೆಉಂಡೆ ಎಸದ. ಒಂದು ದೊಡ್ಡ ಸೀಗೆ ಕಾಡು ಬೆಳಕೊಂಡು ಬುಡ್ತು. ಸರಳೆಮ್ಮೆ ಕಾಡಿನೊಳಕ್ಕೆ ಹೊಕ್ಕೊಂಡು ಅದೆಲ್ಲಾನೂ ದಾಟಿ ಬರಬೇಕಾದರೆ ಅದಕ್ಕೆ ಬಾಳಹೊತ್ತು ಹಿಡೀತೂ. ಅಷ್ಟೊತ್ತಿಗೆ ಹುಡುಗ ಶಾನೆದೂರ ಮುಂದಕ್ ಬಂದ್ ಬುಟ್ಟಿದ್ದ. ಆದ್ರೂ ಕಾಡು ಕಡೀತಿದ್ದಂಗೇ ಎಮ್ಮೆ ದೌಡುಕಿತ್ತು ಅವನ ಅಟ್ಟಿಸಿಕೊಂಡು ಬಂದ್‌ಬುಡ್ತು. ಇನ್ನೇನೂ ಸಿಕ್ಕಿಬುಟ್ಟ ಅನ್ನೋದರಲ್ಲಿ ಮಸಿಉಂಡೆ ತಗದು ಎಸದ. ಒಂದು ಮೈಲಿ ಪಾಸಲೆ ಉದ್ದೂ ಅಗಲ್ಲೂ ಬೆಂಕಿ ದಿಗಂತರವಾಗಿ ಉರಿಯಾಕೆ ಸುರುಮಾಡ್‌ಬುಟ್ತು. ಎಮ್ಮೆ ಬೆಂಕಿ ವಳಗೆ ಅತ್ತಾಗಿ ಇತ್ತಾಗಿ ಓಡಾಡಿ ಬೆಂದು ಸುಸ್ತಾಗಿ ಬೆಪ್ಪಾಗಿ ಈಚೆಗೆ ಬಂದು ದೂಪರಿಸ್ಯಾಡ್ತಾ ನಿಂತುಕೊಳ್ತು. ಆಗ ಹುಡುಗ ಅದರ ಹತ್ರಕ್ಕೆ ಹೋಗಿ ಹಿಡಕೊಂಡು ಹಗ್ಗ ಮೂಗುದಾರ ಹಾಕಿದ. ಎಳಕೊಂಡು ಬಂದ. ಅದು ಸುಮ್ಮನೆ ನಾಯಿಮರೀ ಹಂಗೆ ಹಿಂದುಗುಟ್ಟೆ ಬತ್ತು.

೩

ಊರಿಗೆ ಸರಳೆಮ್ಮೆ ಎಳಕೊಂಡು ಬಂದು ಮುದುಕಿ ಮನೇಲಿ ಕಟ್ಟಿಹಾಕಿದ. ಹಾಲು ಕರಕೊಂಡರು. ಹೆಪ್ಪಾಕಿದಳು ಮುದುಕಿ. ಮೊಸರು ಸಿಲುಬಿದಳು. ಬೆಣ್ಣೆ ತಗದು ಕಾಸಿದಳು. ಮಾರನೆ ದಿನ ಹೊತ್ತಾರೆ ಹುಡುಗ ಸಣ್ಣಕ್ಕಿ ಅನ್ನ, ತಗರಿಬ್ಯಾಳೆ ಸಾರು, ಸರಳೆಮ್ಮೆ ತುಪ್ಪ ಉಂಡು ಬಾವೀಲಿದ್ದ ಅವ್ವದೀರ್ಗೂ ಒಂದಿಷ್ಟು ಸುರಿದ. ಕಿಂದರಿ ನುಡಿಸಿಕೊಂಡು ಎಂದಿನಂಗೇ ಹಾಡ್ತಾ ಗೌಡನ ಮನೆ ಹತ್ರಕ್ಕೆ ಬಂದ. ರಾಕ್ಷಸಿ ಇವನ್ನ ನೋಡಿದಳು. "ಆ, ಈಗಲೂ ಬದಿಕಿ ಬಂದವ್ನಲ್ಲಾ ! ಇರಲಿ" ಅಂದುಕೊಂಡಳು. ಹುಡುಗ ಬಂದ. ಒಂದು ಮೊರ ರಾಗಿ ಒಂದು ಮೊರ ಅಕ್ಕಿ ಸುರಿದು "ಏನುಂಡು ಬಂದ್ಯೋ ನನ್ಮಗನೆ?" ಅಂತ ಕೇಳಿದಳು.

"ನಾನು ಸಣ್ಣಕ್ಕಿ ಅನ್ನ, ತಗರಿಬ್ಯಾಳೆ ಸಾರು, ಸರಳೆಮ್ಮೆ ತುಪ್ಪ ಉಂಡು ಬಂದೆ" ಅಂದ.

"ಏ ಇದೇನ್ ಮಹಾ, ಮಧ್ಯಾಹ್ನದ ಬೈಲು ಬತ್ತದ ಅಕ್ಕಿ ಅನ್ನ, ತಗರಿಬ್ಯಾಳೆ ಸಾರು, ಸರಳೆಮ್ಮೆ ತುಪ್ಪ ಉಂಡು ಕಿಂದರಿ ನುಡಿಸಿಕೊಂಡು ಹಾಡ್ತಾ ಬಂದರೆ ಅದೂ ಒಂದು ಮಜ" ಅಂದಳು.

"ಅದೆಲ್ಯದೆ ಮಧ್ಯಾಹ್ನದ ಬೈಲು ಬತ್ತ?" ಅಂತ ಕೇಳಿದ.



"ಏ ಅದ ನಿಂಗೆ ತರಾಕೆ ಆಗೋದಿಲ್ಲ ಸುಮ್ನೆ ಹೋಗು" ಅಂತ ಅವನ್ನ ಕೆಣಕಿದಳು.

"ನಿಂಗ್ಯಾಕೆ ಅದೆಲ್ಲ. ನಾನು ತಂದೇ ತತ್ತೀನಿ. ಅದಿರೋ ಜಾಗ ಹೇಳು"

"ಇಲ್ಲಿಗೆ ಏಳು ಗಾವುದ ದೂರದಲ್ಲಿ ಒಂದು ಮಹಾಂತ ಕಾಡದೆ. ಆ ಕಾಡಿನ ಮಧ್ಯದಲ್ಲಿ ಒಂದು ಬೈಲದೆ. ಅಲ್ಲಿ ಹೊತ್ತಾರೆ ಬತ್ತ ಬಿತ್ತಿದರೆ ಮಧ್ಯಾಹ್ನದ ಹೊತ್ತಿಗೆ ಮೊಳಕೆ ಆಗಿ ಸೊಸಿ ಆಗಿ ಬಲಿತು ಹೊಡೆಕಡದು ತೆನೆ ಆಗಿ ಬತ್ತ ಒಣಗಿ ನಿಂತಿರ್ತದೆ"

"ಸರಿ, ತಂದೇ ತತ್ತೀನಿ, ತರದೇ ಇದ್ರೆ ನನಗೆ ಬದ್ಲ್ ಹೆಸರ ಕಟ್ಟು" ಅಂತ ಹೇಳಿ ಒಂದೇ ಉಸುರಿಗೆ ಮುದುಕಿ ಮನೆಗೆ ಬಂದ.

"ಅಮ್ಮಾ ಅಮ್ಮಾ ರೊಟ್ಟಿ ಬುತ್ತಿ ಕಟ್ಕೊಡು, ಮಧ್ಯಾಹ್ನದ ಬೈಲಿಗೆ ಹೋಗಬೇಕು" ಅಂದ.

"ನಿಂಗೊಂದು ಹುಚ್ಚು ಕನ್ಮೊಗ, ನೆನ್ನೆ ತಾನೇ ಅಲ್ಲಿ ಇಲ್ಲಿ ಸುತ್ತಿ ಸುಸ್ತಾಗಿ ದೇವರ ದಯದಿಂದ ಬದುಕಿ ಬಂದಿದ್ದೀ. ಇವತ್ತು ಆಗ್ಲೇ ಹೋಯ್ತೀನಿ ಇಂತೀಯಲ್ಲ, ಅದೇನು ಸಾಮಾನ್ಯ ಅಲ್ಲ. ಹೋಗ ಬ್ಯಾಡ ಸುಮ್ನಿರು" ಅಂತ ಅಂಗಲಾಚಿಕೊಂಡಳು.

"ನೀನು ನನ್ನ ತಡೀಬ್ಯಾಡ ಸುಮ್ನಿರಮ್ಮ. ಹುಟ್ಟೋದು ಒಂದ್ ದಿನ, ಸಾಯೋದ್ ಒಂದ್ ದಿನ. ನಾನು ಹೋಗಲೇಬೇಕು."

ಮುದುಕಿ ಗೊಣಗ್ತಾ ರೊಟ್ಟಿ ಬುತ್ತಿ ಕಟ್ಟಿಕೊಟ್ಳು. ಇನ್ನಷ್ಟು ರೊಟ್ಟಿ ಅನ್ನ ತಕ್ಕೊಂಡು ಹೋಗಿ ಬಾವೀವಳಕ್ಕೆ ಸುರಿದ. ರೊಟ್ಟೀನೂ ಬುತ್ತೀನೂ ತಕ್ಕೊಂಡು ಒಂದು ಚಂದ್ರಾಯ ಹಿಡಿಕೊಂಡು ಹೊಂಟ. ಹೋದ ಹೋದ ಹೋದ, ಅಷ್ಟು ದೂರ ದೂರ ಹೋದ. ಕತ್ಲೆ ಆದ ಜಾಗದಲ್ಲಿ ಮನೀಕೊಳ್ಳೋದು, ಬೆಳಕಾದಾಗ ಎದ್ದು ಹೋಗೋದು – ಹಿಂಗೇ ಮಾಡಿದ. ನಡದು ನಡದು ಕಾಲು ಹೊಪ್ಪಳೆ ಬಂದುಬುಟ್ವೋ. ಮಟ ಮಟ ಮಧ್ಯಾನ ಅಂಗಾಲು ಬೆಂಕಿ ಮ್ಯಾಲೆ ಮಡಗಿದಂಗೆ ಚುರುಗುಟ್ಟುತಿದ್ದೊ. ಅಲ್ಲೇ ಒಂದು ಆಲದ ಮರ ಇತ್ತು. ಸುಸ್ತಾಗಿ ಅದರ ಅಂಡೀಲಿ ಕೂತುಗೊಂಡ. ಆ ಮರದ ಮ್ಯಾಲೆ ಹೆಣ್ಣು ಭೇರುಂಡ ಗಂಡು ಭೇರುಂಡ ಗೂಡುಕಟ್ಟಿಕೊಂಡಿದ್ದೂ, ಮರಿಹಾಕಿ ಮೇವು ತರಾಕೆ ಇಂದ್ರಲೋಕಕ್ಕೆ ಹೋಗಿದ್ದೂ. ಆಗ ಒಂದು ಸರ್ಪ ಸರಸರನೆ ಮರಹತ್ತಿ ಭೇರುಂಡದ ಮರಿಗಳ್ನ ತಿನ್ನಾಕೆ ಹೋಯ್ತಾ ಇತ್ತು. ಈ ಹುಡುಗ ಅದನೋಡಿ ಚಂದ್ರಾಯದಿಂದ ಎರಡು ತುಂಡಿಗೆ ಅದ ಕತ್ತರಿಸಿ ಹಾಕಿಬುಟ್ಟ.

ಎಷ್ಟೋ ಹೊತ್ತಾದ ಮೇಲೆ ಭೇರುಂಡಗಳು ಮೇವು ತಕ್ಕೊಂಡು ಗೂಡಿಗೆ ಬಂದೊ. ಇಷ್ಟು ದಿವಸ ಬರೋ ಹೊತ್ತಿಗೆ ಒಂದು ಮರೀನೂ ಇರ್ತಾಇತ್ತಿಲ್ಲ. ಇವತ್ತು ಎಲ್ಲಾ ಮರಿಗಳೂ ಜೀವವಾಗಿರೋದು ನೋಡಿ ಅವಕ್ಕೆ ಆನಂದವಾಯ್ತು. ಮೇವು ತಂದು ಮರಿಗಳಿಗೆ ಕೊಡಾಕೆ ಹೋದೂ. ಆಗ ಅವು "ನಮ್ಮ ಪರಾಣ ಉಳಿಸಿದ ಪುಣ್ಯಾತ್ಮ ಮರದಡೀಲವ್ನೆ. ಮೊದ್ಲು ಅವನು ಬಂದ ಕಾರ್ಯ ನೆರವೇರಿಸಿ ಕೊಡಿ. ಆ ಮ್ಯಾಲೆ ನಾವು ಮೇವು ತಿಂತೀವಿ" ಅಂತ ಅಂದೊ. ಆಗ ಭೇರುಂಡಗಳು ಕೆಳಕ್ಕೆ ಇಳಿದು ಬಂದು ಬಾಳ ಉಪಚಾರ ಮಾಡಿದೊ. "ನಾನೇನ್ ಮಹಾ ಮಾಡಿದ್ದು. ಮರಿಗಳ ತಿನ್ನಾಕೆ ಅಂತ ಸರ್ಪ ಗೂಡಿನ ಕಡೆಗೆ ಹೋಯ್ತಾ ಇತ್ತು. ಕತ್ತರಿಸಿ ಹಾಕಿದೆ, ಅಷ್ಟೇಯೇ" ಅಂದ "ನೀನು ಬಂದ ಕಾರ್ಯ ಏನು?" ಅಂತ ಕೇಳಿದೊ.

"ನಾನು ಮಧ್ಯಾನದ ಬೈಲ ಬತ್ತ ತರಬೇಕು"

"ಅಯ್ಯೋ ಅಯ್ಯೋ ಅಲ್ಲಿ ಗಿಡಕೊಂದು ರಾಕ್ಷಸಗೋಳು ಕಾವಲವೆ. ನೀನು ಹೋದ್ರೆ ಒಂದೇ ಗುಕ್ಕಿಗೆ ನುಂಗಿ ನೀರು ಕುಡಿದುಬುಡ್ತವೆ."

"ಆದ್ರೂ ಪರವಾಯಿಲ್ಲ. ಹೋದ್ರೆ ಇದೊಂದು ಶರೀರ ಅಲ್ವಾ? ಯಾವತ್ತಾದ್ರೂ ಸಾಯ್ನೋ ಬೇಕು, ಇವತ್ತೇ ಹೋಗ್ಲಿ."

ಅವನ ಧೈರ್ಯಕ್ಕೆ ಮೆಚ್ಚಿ ಭೇರುಂಡಗಳು "ನಮ್ಮ ರೆಕ್ಕೆಮ್ಯಾಲೆ ಅಳ್ಳಾಡದಂಗೆ ಕೂತ್ಕೊ. ಅಲ್ಲಿಗೆ ತಕ್ಕೊಂಡ್ ಹೋಗಿ ಬುಡ್ತೀವಿ. ಒಂದೇ ಉಸುರಿಗೆ ಒಂದು ಚೀಲ ಬತ್ತ ತರಕೊಂಡು ಬಂದು ಬುಡು. ನಾವು ಮತ್ತೆ ಮ್ಯಾಲೆ ಕುಂಡಿರಿಸಿಕೊಂಡು ಬತ್ತೀವಿ" ಅಂತ ಹೇಳಿದೊ.

ಆ ಹುಡುಗ ಭೇರುಂಡದ ರೆಕ್ಕೆ ಮ್ಯಾಲೆ ಭದ್ರವಾಗಿ ಕೂತುಗೊಂಡ. ಅವು ಭರ್ರ್ ಅಂತ ಹಾರಿಕೊಂಡು ಹೋಗಿ ಅಡವೀ ಮಧ್ಯದಲ್ಲಿದ್ದ ಮಧ್ಯಾಹ್ನದ ಬೈಲಲ್ಲಿ ಇಳಿಸಿದೆ. ರಾಕ್ಷಸಿಗೊಳು ಬತ್ತ ಬುಟ್ಟು ಎಲ್ಲೋ ಹೋಗಿದ್ದೊ. ಬತ್ತ ಆಗಲೇ ಹಣ್ಣು ಮೆಟ್ಟಿ ತೂಗಾಡ್ತಿತ್ತು. ಹುಡುಗ ಸರಸರನೆ ಒಂದು ಮೂಟೆ ತರಕೊಂಡ. ಅಷ್ಟುಹೊತ್ತಿಗೆ ರಾಕ್ಷಸಗೋಳು ಮನುಷನ ಗವಲು ಹಿಡಿದು 'ಹಾ' ಅಂತ ಸುತ್ತಾ ಮುತ್ತಾ ಬತ್ತಾ ವೆ. ಹುಡುಗ ಚೀಲಾನೂ ತಕ್ಕೊಂಡು ದಡಬಡನೆ ಓಡಿಹೋಗಿ ಭೇರುಂಡದ ರೆಕ್ಕೆ ಮ್ಯಾಲೆ ಕೂತುಗೊಂಡ. ಅವು ಭರ್ರ್ ಅಂತ ಮ್ಯಾಕೆ ಹಾರಿದೊ. ರಾಕ್ಷಸಗೋಳು ಬಂದು ಕಣ್ ಕಣ್ ಬುಡ್ತಾ ಮ್ಯಾಕೆ ನೋಡ್ತಾ ನಿಂತು ಕೊಂಡೊ.



೪

ಹುಡುಗ ಊರಿಗೆ ಬತ್ತ ತಕ್ಕೊಂಡು ಹಿಂತಿರುಗಿ ಬಂದ. ಬತ್ತ ಕುಟ್ಟಿಸಿ ಅನ್ನ ಮಾಡಿಸಿ ತಾನೂ ಉಂಡು ಅವ್ವದೀರ್ಗೂ ಸುರಿದು ಕಿಂದರಿ ನುಡಿಸಿಕೊಂಡು ಹಾಡ್ತಾ ಗೌಡನ ಮನೆಗೆ ಬಂದ. 'ಇವ್ನು ಇನ್ನೂ ಸಾಯ್ಲಿಲ್ವಲ್ಲ. ನಾನೇನ್ ಮಾಡಿದ್ರೂ ಎಲ್ಲಾರಿಂದ್ಲೂ ಉಳ್ಕೊಂಡು ಬಂದ್‌ಬುಟ್ನಲ್ಲ. ಇವನನ್ನ ಈಸತೀಲಾರೂ ತಗೀದೇ ಹೋಗ್‌ಬುಟ್ರೆ ನನ್ನ ಜೀವ ಉಳಿಸೋದಿಲ್ಲ ಇವ್ನು. ಇರಲಿ, ಈ ಸತಿ ಸರಿಯಾದ ಜಾಗಕ್ಕೆ ಕಳಿಸ್ತೀನಿ' ಅಂದುಕೊಂಡಳು. ಹುಡುಗ ಹಾಡ್ತಾ ಹಾಡ್ತಾ ಬಂದ. ರಾಕ್ಷಸಿ ಎಂದೀನಂಗೇ ನಗ್ ನಗ್ತಾ ಬಂದು ಒಂದು ಮೊರ ರಾಗಿ ಒಂದು ಮೊರ ಅಕ್ಕಿ ಅವನ ಜೋಳಿಗೆಗೆ ಸುರಿದು "ಏನುಂಡು ಬಂದ್ಯೋ ನನ್ಮಗನೇ?" ಅಂತ ಹೇಳಿದಳು.

"ಮಧ್ಯಾಹ್ನದ ಬೈಲು ಅಕ್ಕಿ ಅನ್ನ, ತಗರಿಬ್ಯಾಳೆ ಸಾರು, ಸರಳೆಮ್ಮೆ ತುಪ್ಪ ಉಂಡ್ಬಂದೆ" ಅಂದ.

"ಏ, ಇದೆಲ್ಲಾ ಏನಪ್ಪಾ ! ಮಧ್ಯಾಹ್ನದ ಬೈಲಿನ ಅಕ್ಕಿ ಅನ್ನ, ತಗರಿಬ್ಯಾಳೆ ಸಾರು, ಸರಳೆಮ್ಮೆ ತುಪ್ಪ ಉಂಡು ಕಂಚಿನ ಕಾಳಿಂಗನ ನುಡಿಸಿಕೊಂಡು ಹಾಡ್ತಾ ಬಂದ್ರೆ ಅದೂ ಒಂದು ಮಜ."

"ಅದೆಲ್ಯದೆ, ಆ ಕಂಚಿನ ಕಾಳಿಂಗ?"

"ಇಲ್ಲಿಗೆ ಎಪ್ಪತ್ತು ಗಾವುದ ದೂರದಲ್ಲಿ ಒಂದು ದೊಡ್ಡ ರಾಕ್ಷಸನ ಪಟ್ಣ ಅದೆ. ಅ ಪಟ್ಟಣದಲ್ಲಿ ಆ ರಾಕ್ಷಸನ ಮನೇಲಿ ಆ ಕಂಚಿನ ಕಾಳಿಂಗ ಅದೆ".

"ಸರಿ. ಅದ್ನೂ ತಂದೇ ಬುಡ್ತೀನಿ" ಅಂದುಬುಟ್ಟು ಮನೆಗೆ ಬಂದ.

ಉಂಡ ಉಟ್ಟ, ಅವ್ವದೀರಿಗೆ ಅನ್ನ ಸುರಿದ. ರೊಟ್ಟಿ ಬುತ್ತಿ ತಕ್ಕೊಂಡು "ನಾನು ಕಂಚಿನ ಕಾಳಿಂಗ ತರಾಕೆ ಹೋಯ್ತೀನಿ ಕನಮ್ಮೋ" ಅಂತ ಮುದುಕಿಗೆ ಹೇಳಿದ. ಅವಳೆಷ್ಟು ಬ್ಯಾಡಾ ಅಂದ್ರೂ ಕೇಳದೆ ಹೊಂಟೇಬುಟ್ಟ.

ಹೋದ ಹೋದ ಹೋದ, ಇಳ್ಳು ಹಗಲು ಅನ್ನೋದ್ನೂ ಕಾಣದೆ ಹೋದ. ಆ ಪಟ್ಟಣಕ್ಕೆ ಹ್ಯಂಗೋ ದುಳ್ಳಾಡಿಕೊಂಡು ಹೋಗಿ ಬಿದ್ದ. ಅಲ್ಲೊಂದು ಬೂದಿಗುಡ್ಡೆ ಇತ್ತು. ಅಲ್ಲಿ ಅವತುಗೊಂಡ.

ಈ ದೊಡ್ಡ ರಾಕ್ಷಸಿ ಆ ಚಿಕ್ಕ ರಾಕ್ಷಸಿಯ ಅಕ್ಕ, ಅದಕ್ಕೇ ತಿಂದು ಹಾಕ್ಲೀ ಅಂತ ಆ ಹುಡುಗನ್ನ ಇಲ್ಲಿಗೆ ಕಳಿಸಿದ್ದಳು. ಈ ರಾಕ್ಷಸಿ ಊರೆಲ್ಲಾನೂ ತಿಂದುಕೊಂಡು ಒಂದು ನರಪಿಳ್ಳೇನೂ ಇಲ್ಲದಂಗೆ ಮಾಡಿದ್ದಳು. ಇವಳಿಗೆ ಒಬ್ಬಳು ಮಗಳಿದ್ದಳು. ಹೊತ್ತಾರೆ ಹೊತ್ತು ಅಡಿಗೆ ಮಾಡ್ಕೊಂಡು ಅವ್ವ ಮಗಳಿಬ್ರೂ

ಉಣ್ಣೋರು. ಆಮ್ಯಾಲೆ ಅವ್ವ ಅವಾರ ತರಾಕೆ ಹೊಂಟ್‌ಹೋಗೋಳು. ಆ ಹುಡುಗಿ ಒಬ್ಬಳೇ ಮನೇಲಿರೋಳು. ಅವತ್ತು ಅವ್ವ ಹೊಂಟೋದ ಮ್ಯಾಲೆ ಮಗಳು ಬೂದಿ ತಂದು ಆ ರಾಸಿಗೆ ಸುರಿದಳು. ಈ ಹುಡುಗ ತಲೆ ಕೆರೀತಾ ನಿಂತ್ಕೊಂಡ. "ನೀನ್ಯಾರು?" ಅಂದಳು ಹುಡುಗಿ.

"ನಾನೊಬ್ಬ ಪರದೇಶಿ ಕನಕ್ಕ" ಅಂದ ಹುಡುಗ.

"ಅಯ್ಯೋ ಅಯ್ಯೋ ಇಲ್ಯಾಕೆ ಬಂದೆ? ನಮ್ಮವ್ವ ಕಂಡ್ರೆ ನಿನ್ನ ಸುಮ್ಮೇ ಬುಟ್ಟಾಳ? ಮೊದ್ಲು ಹೋಗು"

"ಇಲ್ಲ ಕನಕ್ಕ. ನಂಗೆ ಅಪ್ಪ ಅವ್ವ ಯಾರೂ ಇಲ್ಲ ಕನಕ್ಕ. ನಿಂಗೊಬ್ಬಳಿಗೇ ಬೇಜಾರಾಗೋದಿಲ್ವಾ? ನಾನೂ ನಿನ್ನ ಜೊತೇಲೇ ಇದ್ದು ಬುಡ್ತೀನಿ ಕನಕ್ಕ" ಅಂತ ಕುಸುಕ್ತು ಹುಡುಗ.

"ಹೋಗ್ಲಿ ಇವತ್ತು ಅವ್ವ ಬಂದಾಗ ಕೇಳ್ತೀನಿ. ಅಷ್ಟೊದ್ಗಂಟ ಅಟ್ಟದ ಮ್ಯಾಲೆ ಕೂತುಗೋ ಬಾ" ಅಂತ ಹೇಳಿ ಆ ಹುಡಗನ್ನ ಕರಕೊಂಡು ಹೋಗಿ ಅಟ್ಟದ ಮ್ಯಾಲೆ ಕುಂಡಿರಿಸಿದಳು. ದೊಡ್ಡ ರಾಕ್ಷಸ ಬತ್ತು. ಮಗಳೂ ಅವ್ವನೂ ಉಂಡ್ರು. ರಾಕ್ಷಸ ಠರ್ರ್ ಅಂತ ತೇಗ್ತು. ಒಂದು ಸಾವಿರ ಮೊರದಗಲ ಈಳೇದೆಲೆ ಅಗೀತು. ಒಂದು ಗುದ್ಲಿ ಸುಣ್ಣ ಹಾಕ್ಕೊತ್ತು. ಆಮ್ಯಾಲೆ ಒಂದು ಒನಕೇ ಗಾತ್ರ ಕಡ್ಡಿ ತಕ್ಕೊಂಡು ಹಲ್ಲಿಗೆ ಚುಚ್ತಾ ಕೂತ್ಗೊತ್ತು. ಆಗ ಮಗಳು ಬಂದು "ಅವ್ವಾ ಅವ್ವಾ, ನೀನು ಉಂಡ್ ಬುಟ್ಟು ಅವಾರ ತರಾಕೆ ಹೊಂಟ್ ಹೋಯ್ತೀ. ನಂಗೊಬ್ಬಳಿಗೇ ಮನೇಲಿ ಕೂತು ಕೂತು ಬೇಜಾರಾಯ್ತದೆ ಕನವ್ವ" ಅಂದಳು.

"ಇನ್ನೇನ್ಮಾಡೋದು ಹೇಳು?"

"ಯಾರ್‍ನಾರೂ ಜೊತೆಗೆ ಕರ್‍ಕೊತ್ತೀನಿ ಕನವ್ವ"

"ಇಲ್ಲಿ ಯಾರು ಸಿಕ್ತಾರೆ ನಿನ್ನ ಜೊತೆಗೆ, ಒಂದು ನರಪಿಳ್ಳೇನೂ ಇಲ್ಲ"

"ಅಲ್ಲ, ಅಕಾಸ್ಮಾತ್ ಯಾರಾರೂ ಸಿಕ್ಕಿದ್ರೆ ಕರ್‍ಕೋಳ್ಳಾನಾ?"

"ಹೂಂ. ಈಗೇನು ಕರ್‍ಕೊ"

"ನೀನು ಆಮ್ಯಾಲೆ ತಿಂದ್‌ಕೊಂಡ್ ಬುಡ್ತಿದ್ದೀ?'

"ಇಲ್ಲಾಕಂತೆ ಕರ್‍ಕೊ. ನಾನು ಪ್ರಮಾಣವಾಗೂ ತಿನ್ಕೊಳೋದಿಲ್ಲ" ಅಂತ ಹೇಳಿ ರಾಕ್ಷಸ ಹೊಂಟ್‌ಹೋಯ್ತು. ಅದು ಹೋದಮ್ಯಾಲೆ ಹುಡುಗ ಕೆಳಕ್ಕೆ ಇಳಿದುಬದ. ಹಿಂಗೆ ಅವರ ಮನೇಲೇ ಏಳೆಂಟು ದಿನ ಇದ್ಬುಟ್ಟ. ಇಬ್ರೂ ದಿನಾಲೂ ಉಂಡ್ಯಾದಮ್ಯಾಲೆ ಕಾಡಿಗೆ ಹೋಗೋದು, ಸೌದೆ ತಕ್ಕೊಂಡು ಬರೋದು. ಹಿಂಗೇ ಮಾಡ್ತಿದ್ರು. ಅವ್ವ ಮಗಳಿಬ್ಬರಿಗೂ ಅವ್ನು ಚಂದಾಗಿ ವಗ್ಗಿ



ಕೊಂಡ್‌ಬುಟ್ಟ. ಒಂದಾನೊಂದು ದಿವಸ ಆ ಹುಡುಗ "ನಾನು ಬಂದು ಇಷ್ಟು ದಿನ ಆಯ್ತು. ನಿಮ್ಮನೇ ನೋಡ್ನಿಲ್ವಲ್ಲಾ?" ಅಂತ ಆ ಹುಡುಗೀ ಕೇಳಿದ.

"ಅದ್ಕೇನಂತೆ ಬಾ ನೋಡು" ಅಂತ ಒಂದು ಕೋಣೆಗೆ ಕರಕೊಂಡು ಹೋದಳು. ಅಲ್ಲೊಂದು ದೊಡ್ಡ ಚಂದ್ರಾಯ ಇತ್ತು.

"ಇದೆಂಥೇದು?" ಅಂದ ಹುಡುಗ.

"ಇದು ಚಂದ್ರಾಯ ಅಂತ ಒಂದು ಕತ್ತಿ. ಇದರಲ್ಲಿ ಇಬ್ಬರ್‍ನ ಬೇಕಾದ್ರೂ ಒಂದೇ ಸತಿಗೆ ಕಡದು ಬುಡಬಹುದು" ಅಂದ್ಲು ಹುಡುಗಿ. ಅಲ್ಲಿಂದ ಇನ್ನೊಂದು ಕೋಣೆಗೆ ಹೋದ್ರು. ಅಲ್ಲಿ ಒಂದು ದೊಡ್ಡ ಭರಣೀಲಿ ಕಣ್ಣುಗಳ ತುಂಬಿ ಮಡಗಿತ್ತು.

"ಅದೆಂಥಾ ಭರಣಿ?" ಅಂದ ಹುಡುಗ.

"ಇದ್ರಲ್ಲಿ ಕಣ್ಣವೆ. ಕಣ್ಣಿಲ್ಲೋರಿಗೆ ಕಣ್ಣುಹಾಕಬಹುದು."

ಅಲ್ಲಿಂದ ಇನ್ನೊಂದು ಕೋಣೆಗೆ ಹೋದರು. ಅಲ್ಲಿ ಒಂದು ಕಂಚಿನ ಸಾಮಾನಿತ್ತು.

"ಇದೆಂಥೇದು?" ಅಂತ ಹುಡುಗ.

"ಇದು ಕಂಚಿನ ಕಾಳಿಂಗ. ಇದ ನುಡಿಸಿದರೆ ಇಂಪಾದ ಸಂಗೀತ ಬತ್ತದೆ."

ಅಲ್ಲಿಂದ ಮತ್ತೊಂದು ಕೋಣೆಗೆ ಹೋದರು. ಒಂದು ಪಂಜರದಲ್ಲಿ ಒಂದು ಗಿಣಿ ಕೂತಿತ್ತು.

"ಇದೆಂಥೇದು?" ಅಂದ ಹುಡುದ.

"ಇದು ನಮ್ಮ ಚಿಕ್ಕವ್ವನ ಜೀವಾಳದ ಕುಟುಕು"

ಹಿಂಗೇ ಎಲ್ಲಾನೂ ನೋಡಿ ಆಯ್ತು. ಮಾರನೆ ದಿನ ಇಬ್ರೂ ಸೌದೆ ತರಾಕೆ ಕಾಡಿಗೆ ಹೋದರು. 'ಅಲ್ಲಿ ಒಳ್ಳೇ ಸೌದೆ ಅವೆ, ಇಲ್ಲಿ ಒಳ್ಳೆ ಸೌದೆ ಅವೆ' ಅಂತ ಕಾಡೆಲ್ಲಾನೂ ಅಲೆಸಿಬುಟ್ಟ. ರಾಕ್ಷಸ ಬರೋ ಹೊತ್ತಾಗೋಯ್ತು. ಹಸಿಹಸಿ ಸೌದೆ ಕಡಿದು ಎರಡು ಹೊರೆ ಕಟ್ಟಿದ. ಇಬ್ರೂ ಹೊತ್ಕೊಂಡು ಮನೆಗೆ ಬಂದರು. ಅಡಿಗೆ ಮಾಡಾಕೆ ಅಂತ ಹುಡಿಗಿ ಒಲೆ ಹತ್ತಿಸಿದಳು ಹಸೀ ಸೌದೆ. ಏನಾದ್ರೂ ಹತ್ತನೇ ಇಲ್ಲ. ಇಬ್ರೂ ಉರಬೀ ಉರಬೀ ಸಾಕಾದ್ರು. ಮನೇಲೆಲ್ಲಾ ಹೊಗೆ ತುಂಬಿಕೋತ್ತು. ಒಲೆ ಮಾತ್ರ ಹತ್ನಿಲ್ಲ. ಅಷ್ಟೊತ್ತಿಗೆ ರಾಕ್ಷಸಿ ಬಂದಳು "ಅಡಿಗೆ ಆಗಿಲ್ವಾ?" ಅಂತ ಕೇಳಿದಳು.

"ಇನ್ನೂ ಇಲ್ಲ ಕನವ್ವಾ. ಇವತ್ತು ಕಾಡೆಲ್ಲಾನೂ ತಿರುಗಿದರೂ ಒಣಸೌದೆ ಸಿಕ್ನಿಲ್ಲ. ನಾವಿಬ್ರೂ ಊದೀ ಊದಿ ಸಾಕಾಯ್ತು" ಅಂದಳು ಮಗಳು.

“ನೀವಿಬ್ರೂ ಒಬ್ಬರ ತಲೆಮ್ಯಾಲೆ ಒಬ್ಬರು ತಲೆಹಾಕ್ಕೊಂಡು ಉರುಬಿ ನೋಡಾನೆ” ಅಂದ ಹುಡುಗ. ಸರಿ, ಅವರಿಬ್ರೂ ಹಂಗೇ ಒಬ್ಬರ ತಲೆಮ್ಯಾಲೆ ಇನ್ನೊಬ್ಬರು ತಲೆಹಾಕ್ಕೊಂಡು ಉಸುರುಕಟ್ಟಿ ಉರುಬಿದರು. ಮನೇಲೆಲ್ಲಾ ಹೊಗೆ ತುಂಬಿಕೊತ್ತು. ಆ ಹುಡುಗ ಮೆತ್ತಗೆ ಕೋಣೆಗೆ ಹೋಗಿ ಚಂದ್ರಾಯ ತಕ್ಕೊಂಡು ಬಂದು ಹಿಂದುಗಡೆ ನಿಂತ್ಕೊಂಡು ಎತ್ತಿ ಕತ್ತಿಗೆ ಹೊಡೆದ. ಇಬ್ರ ಕತ್ತೂ ಕತ್ರಿಸಿ ತುಂಡಾಗಿ ಬಿದ್ದುಹೋದೂ. ಆಮ್ಯಾಲೆ ಹುಡುಗ ಹೋಗಿ ಕಣ್ಣಿನ ಭರಣಿ, ಕಂಚಿನ ಕಾಳಿಂಗ, ಗಿಣಿಪಂಜರ ಎಲ್ಲಾನೂ ತಕ್ಕೊಂಡು ಊರಿಗೆ ಬಂದುಬುಟ್ಟ.

ಉಂಡು ಉಟ್ಟು ಅವ್ವದೀರ್ಗೂ ಅನ್ನ ಹಿಟ್ಟು ಬಾವಿಗೆ ಸುರಿದ. ಕಂಚಿನ ಕಾಳಿಂಗನ್ನ ನುಡಿಸಿಕೊಂಡು ಗಿಣಿ ಕೈಲಿ ಹಿಡಕೊಂಡು ಹಾಡ್ತಾ ಗೌಡನ ಮನೆಕಡೆಗೆ ಬಂದ. ಕಂಚಿನ ಕಾಳಿಂಗದ ದನಿ ಕೇಳ್ತಿದ್ದಂಗೇ ರಾಕ್ಷಸಿಗೆ ಜಲಮಲ ಎಲ್ಲಾ ಒಂದೇ ತಾವು ಆಗೋಯ್ತು. ಸುಂದರಿ ಹೆಂಗಸಾಗಿದ್ದೋಳು ರಾಕ್ಷಸಿ ಅವತಾರ ತಾಳಿಕೊಂಡು ‘ಹಾಽಽ’ ಅಂತ ಊರಗಲ ಬಾಯಿಕಿಸಕೊಂಡು ಬಂದುಬುಟ್ಲು. ಹುಡುಗ ಗಿಣೀ ಕಾಲುಮುರಿದ. ಅವಳ ಕಾಲೂ ಮುರಿದುಹೋಗಿ ಭೂಮಿಗೆ ಧೊಪ್ ಅಂತ ಬಿದ್ದು ಉಳ್ಳಿಕೊಂತಾ ಇದ್ಲು. ಗಿಣೀ ಸೊಂಟ ಮುರಿದುಹಾಕಿದ ಹುಡುಗ. ಅವಳ ಸೊಂಟಾನೂ ಮುರಿದುಹೋಯ್ತು. ‘ಹಾಽಽ’ ಅಂತ ಊರೆಲ್ಲಾ ಕಿತ್ತುಹೋಗೋ ಹಂಗೆ ಕಿರಿಚಾಕೆ ಸುರುಮಾಡಿದಳು. ಆಗ ಗಿಣೀ ಕತ್ತ ಮುರಿದ. ರಾಕ್ಷಸಿ ಕತ್ತೂ ಮುರಿದುಹೋಗಿ ಅವಳು ಸತ್ತುಹೋದಳು. ಊರಿನೋರಿಗೆಲ್ಲಾ ಅವಳ ಇಚಾರ ಗೊತ್ತಾಗ್‌ಹೋಯ್ತು. ಆಗ ಹುಡುಗ ಬಾವಿಯಿಂದ ಅವ್ವದೀರ ಈಚೆಗೆ ತಗಸಿದ. ಎಲ್ಲಾರ್ಗೂ ಅವರವರ ಕಣ್ಣು ಹಾಕಿ ಕಣ್ಣು ಬರಿಸಿದ. ಗೌಡ ಬಂದು ಮಗನ್ನ ತಬ್ಕೊಂಡು ಕಣ್ಣೀರು ಸುರಿಸಿದ. ಆಗ ಆ ಮುದುಕೀನೂ ಅವರ ಮನೆಗೇ ಕರಕೊಂಡು ಎಲ್ಲಾ ಸುಖವಾಗಿದ್ರು.

* * * *



# ದೆವ್ವದ ದಯೆ*

ಒಂದೂರಲ್ಲಿ ಒಬ್ಬ ಗರೀಬ; ಒಂದು ಹೊತ್ತು ತಿಂದರೆ ಮೂರ್ಹೊತ್ತು ಒಲೇನೇ ಹಚ್ಚಕೆ ಗತಿಯಿಲ್ಲದಂಥ ಗರೀಬ. ಆದರೆ ಬಾಳ ನಿಯತ್ತಿನ ಮನುಷ. ಬೇರೆಯವರ ಭಕ್ಷ್ಯ ಭಂಡಾರವೇ ಅವನಿಗೆ ಸಿಕ್ಕಿದರೂ ಅದ ಕಣ್ಣೆತ್ತೂ ನೋಡುತ್ತಿರಲಿಲ್ಲ. ಅವನಿಗೆ ಒಬ್ಬಳು ಹೆಂಡತಿ. ಬೋ ಬಜಾರಿ. ಗಂಡನ ಮಾತೂ ಅಂದ್ರೆ ಒಂದು ರೇಣುತೂಕಾನೂ ಕೇಳುತ್ತಿರಲಿಲ್ಲ. ಗಂಡನ ಜೊತೇಲಿ ದಿನಾ ಜಗಳ ಮಾಡೋಳು. ಒಂದು ದಿನನಾದ್ರೂ ಹೆಂಡತಿ ಲೊಟಗಾಲೆ ಇಲ್ಲದೆ ಅವನು ನಿಪ್ಪಣವಾಗಿ ಅಂಬಲಿಯೋ ತುಂಬೇ ಸೊಪ್ಪೋ ತಿಂದ ಕಾಲವೇ ಇಲ್ಲ.

ಹಾಲು ಚೆಲ್ಲಿದ ಹಂಗೆ ತಿಂಗಳ ಬೆಳಕು ಬಂತು. ಊರೋರೆಲ್ಲಾ ಸಂದೇಲಿ ದನಕರ ಮನೆಗೆ ಕರಕೊಂಡು ಬಂದು ಕಟ್ಟಿಹಾಕಿ, ಅವಕ್ಕೆ ಹುಲ್ಲು ಸೊಪ್ಪು ಹಾಕಿ ನೇರ್ಪುಮಾಡಿ ಏನಾರು ಬಿಸಿ ಉಂಡು ಮೊಲದ ಬಲೆ ಹೆಗಲಿಗೆ ಹಾಕ್ಕೊಂಡು ಬೇಟೆಗೆ ಹೋಗುತ್ತಿದ್ದರು ; ಮಸ್ತಾನಾಗಿ ಮೊಲ ತಂದು ತಿಂತಾ ಇದ್ದರು. ಬಡವನ ಹೆಂಡತಿಗೆ ಬಾಳ ಕ್ವಾಪ ಬತ್ತು. “ನೀನು ಯಾವಾಗ್ಲೂ ಹಿಂಗೇಯೆ. ಊರೋರೆಲ್ಲ ಹರಿದಾಡಿಕೊಂಡು ಹೋಗಿ ಮೊಲಗಿಲ ಬ್ಯಾಟೆ ಮಾಡ್ಕೊಂಡು ಬಂದು ಬರಹಿಂಗೋ ಹಂಗೆ ತಿಂತಾ ಅವರೆ. ನೀನು ಮೂದೇವಿ ಹಂಗೆ ಮೂಲೇಲೇ ಕೂತಿದ್ದಿ. ನಿಂಗೆ ನಾಚಿಕ್ಯಾರೂ ಆಗೋದಿಲ್ಲವಾ? ಈ ಮನೆಗೆ ಕಾಲು ಹಾಕಿದಾಗಿನಿಂದ ಉಣ್ಣೋರ ಕಂಡು ಉಣ್ಣಿಲ್ಲ, ಉಡೋರ ಕಂಡು ಉಡ್ನಿಲ್ಲ. ನಿನ್ನ ಮದುವೆ ಆಗೋ ಬದ್ಲು ಊರು ಮುಂದಲ ಕರೀಕಲ್ನಾದರೂ ಮದುವೆ ಆಗಿದ್ರೇ ಏಟೋ ಸುಕವಾಗಿರ್ತಿದ್ದೆ” ಅಂತ ಲೊಟಗಾಲೆ ಆಡಾಕೆ ಸುರುಮಾಡಿದಳು. ಅವನಿಗೆ ಮನಸು ತುಂಬಾ ಕೆಟ್ಟು ಹೋಯಿತು. ‘ತಾನು ಹಿಂತಿರುಗಿ ಮಾತಾಡಿದರೆ ಅವಳು ಊರುಕೇರೀನೆಲ್ಲ ಒಂದು ಮಾಡ್ತಾಳೆ’ ಅಂದು ಕೊಂಡು ಮೆತ್ತಗೆ ಹೇಳಿದ:

“ನಂಗೇನು ಆಸೆ ಇಲ್ವಾ ಬ್ಯಾಟೆಗೆ ಹೋಗ್ಬೇಕು ಅಂತ. ಹೊತ್ತಾರಿಂದ್ಲೂ

* ಹೇಳಿದವರು : ಕೃಷ್ಣ ರಾಜನಗರದ ತಾಲ್ಲೂಕು ಬಡಕನಕೊಪ್ಪಲಲ್ಲಿರುವ ಕಂಟ್ರಾಕ್ಟರ್ ಜವರೇಗೌಡ.

ಏನೂ ಇಲ್ಲ. ಹೊಟ್ಟೆ ಬಡಕೋತದೆ. ಏನಾರು ಒಂದು ತುತ್ತು ಇದ್ರೆ ಕೊಡು ಮತ್ತೆ, ತಿಂದ್ಬುಟ್ಟು ಹೋಯ್ತೀನಿ".

ಅವಳಿಗೆ ಸಿಟ್ಟು ನೆತ್ತಿಗೇರಿತು. "ಏನು, ತಂದು ತಂದು ರಾಶಿಹಾಕಿದ್ದೀಯಲ್ಲಾ ಮನೆ ತುಂಬಾವ. ಮಾಡಿ ಚಾಚ್ತೀನಿ ತಡಿ, ಕೂತುಕೊಂಡು ಕಮರಿಸಿ ಬಿಟ್ಟು ಹೋಗೀವಂತೆ, ನಿನ್ನ ಹೊಟ್ಟೆಗೆ ಗೆಂಡೆ ಮೂಡ" ಅಂತ ಬೋದು ಭಂಗೇಳಿಸಿದಳು. ಅವಳ ಬೋಗಳ ತಡೀಲಾರದೆ ಆ ಬಡವಣ್ಣ ಎದ್ದ. ಅವನ ಹತ್ರ ಒಂದು ಹಳೇ ಬಲೆ ಇತ್ತು. ಅದನ್ನೇ ಹೆಗಲ ಮೇಲೆ ಹಾಕ್ಕೊಂಡು ಒಂದು ಕುಡ್ಲನ್ನೂ ಹಿಡಕೊಂಡು ಹಾಳು ಹೊಟ್ಟೇಲೆ ಬ್ಯಾಟೆಗೆ ಹೊಂಟ. ಅಷ್ಟು ಹೊತ್ತಿಗೆ ಬ್ಯಾಟೇರೆಲ್ಲಾ ಹೊಂಟು ಹೋಗಿದ್ರು. ಬಡವಣ್ಣ ಒಬ್ಬನೇ ಕಾಲೆಳಕೊಂಡು ಹೋದ. ಅವರೂರಿನ ಓಣಿ ಕಳೀತು. ಅದರ ಮುಂದಕೆ ಒಂದು ದೊಡ್ಡ ಹುಣಿಸೇ ಮರ. ಅದರ ಮೇಲೆ ಒಂದು ದೆಯ್ಯ ವಾಸಮಾಡಿಕೊಂಡಿತ್ತು. ಇವನೊಬ್ಬನೇ ಹೋಗ್ತಾ ಇದ್ದದ್ದನ್ನ ನೋಡಿ ಮರದ ಮೇಲಿಂದಲೇ ಕೂಗಿತು: "ಅಯ್ಯೋ ಅವನ್ಯಾರಯ್ಯ ಅಲ್ಲಿ ಹೋಗೋನು?" ಅಂತ. ಅವನು ಯಾರೋ ಮನುಷ್ಯರು ಕೂಗ್ತಾರೆ ಅಂದುಕೊಂಡು "ನಾನೇಯಕನಣ್ಣೋ, ಮೂಲೆ ಮನೆ ಸಣ್ಣಕಾಳ" ಅಂತ ಕೂಗುಹಾಕಿದ. "ಬಾಯಿಲ್ಲಿ" ಅಂತು. ಹುಣಿಸೆ ಮರದ ಹತ್ತಿರಕ್ಕೆ ಹೋದ ಸಣ್ಣಕಾಳ. ಮರ ಒಂದು ಸತಿ ಲೊಳಲೊಳ ಅಂತ ಸದ್ದು ಮಾಡಿತು. ಮೇಗಲಿಂದ ದುಪ್ ಅಂತ ದೆಯ್ಯ ಕೆಳಕ್ಕೆ ಗುಪ್ಪಿತು. ಸಣ್ಣಕಾಳನ ಮೈಯ್ಯಾದ ಮೈಯ್ಯೆಲ್ಲಾ ಜಲ ಜಲ ಅಂತ ಬೆವತುಹೋಯ್ತು. ಕೈಕಾಲು ನಡುಗಾಕೆ ಸುರುವಾದವು. ಅವನ ಅವಸ್ಥೆ ನೋಡಿ ದೆಯ್ಯ ನಗ್ತಾ ಹೇಳಿತು: "ನೋಡು ಸಣ್ಣಕಾಳಣ್ಣ, ನೀನೇನೂ ಹೆದರಿಕೋಬ್ಯಾಡ, ನಾನು ನಿಂಗೇನೂ ಕೇಡು ಮಾಡಕಿಲ್ಲ. ನಿಮ್ಮೂರೋರೆಲ್ಲ ಮೊಲ ಹಿಡಿಯಾಕೆ ಹೋಗ್ಯವರೆ, ನೀನು ಎಲ್ಲೂ ಹೋಗಬ್ಯಾಡ, ಹಳ್ಳ ಸೇರಿಸಿ ನಿನ್ನ ಬಲೇಬುಡು, ನಾನು ಎಲ್ಲಾರೂ ಎರಡು ಮೊಲ ಅಟ್ಟಿಕೊಂಡು ಬಲೆಗೆ ಕೆಡವುತೀನಿ."

ಸಣ್ಣಕಾಳ ದೆಯ್ಯ ಹೇಳಿದಂಗೇ ಹಳ್ಳದ ಸುತ್ತ ಬಲೇ ಬುಟ್ಟುಕೊಂಡು ಕೈಲಿ ದೊಣ್ಣೇ ಹಿಡಕೊಂಡು ನಿಂತುಕೊಂಡ. ದೆಯ್ಯ ಮೆಳೆಮಂಡೀನೆಲ್ಲ ತಡ್ಡಿಕ್ಕೊಂಡು ಎರಡು ಮೊಲ ತಂದು ಬಲೆಗೆ ಕೆಡವಿತು. ಅವನು ಹೊಡಕೊಂಡ. ಆ ಮೇಲೆ "ನೋಡು, ಒಂದು ಮೊಲ ನೀನು ತಿಂದುಕೋ. ಇನ್ನೊಂದು ಮೊಲ ಚೆನ್ನಾಗಿ ಹುರಿಸಿಕೊಂಡು ತಕ್ಕೊಂಡುಬಂದು ನಂಗೆ ಕೊಡು; ಬಾಯೆಲ್ಲ ಸಪ್ಪೆಬಿದ್ದು ಹೋಗ್ಬುಟದೆ. ಹುರಿದ ಬಾಡು ತಿನ್ನಬೇಕು" ಅಂತ ದೆಯ್ಯ ಹೇಳಿತು.



"ಆಗಲಿ" ಅಂತ ಹೇಳಿ ಸಣ್ಣಕಾಳ ಊರಿಗೆ ಹೋದ. ಹೆಡತಿ ಕದ ಹೊಚ್ಚಿಕೊಂಡು ದೀಪ ತುಂಬಿಸಿ ಆಗಲೇ ಮಲಗಿದ್ದಳು. "ಲೇ ಲೇ ಬಾಗಲು ತಗೀ" ಅಂತ ಕದ ಬಡಿದ. ಅವಳು "ಏನು ಕಡಿದು ಕಟ್ಟೇಹಾಕಿಬುಟ್ಟು ಬಂದಿವ್ನಿ ಅಂತ ಹಿಂಗ್ ಕದ ತಟ್ಟೀಯಾ?" ಅಂತ ಗೊಣಗಿಕೊಂಡು ಬಂದು ಬಾಗಲು ತಗದಳು. ಎರಡು ಮೊಲಾನೂ ತಂದು ಒಳಕ್ಕೆ ಮಡಗಿದ. ಆಗ ಅವನ ಹೆಂಡತಿಗೆ ಒಂದಿಷ್ಟು ಸಮಾಧಾನವಾಯಿತು. ಅವನು ಎಲ್ಲಾನೂ ಕತ್ತರಿಸಿ ಉತ್ತರಿಸಿ ಹದಮಾಡಿಕೊಟ್ಟ. ಅವಳು ಒಂದೇ ಚಣಹೊತ್ತಿಗೆ ಅಡಿಗೆ ಮಾಡಿದಳು. ಇಬ್ಬರೂ ಕೂತುಗೊಂಡು ಮನಸ್ಸುಪೂರ್ತಿ ಬಾಡು ತಿಂದರು. ಆಮೇಲೆ ಸಣ್ಣಕಾಳ "ನೋಡು, ಇದೊಂದು ಮೊಲದ ಬಾಡು ಮಾತ್ರ ಪಸಂದಾಗಿ ಗಮಗಮ ಅನ್ನೋಹಂಗೆ ಹುರುಕೊಟ್ಟು ಬುಡು. ಅದ ಯಾರಿಗೋ ಕೊಡ್ತೀನಿ ಅಂತ ಮಾತುಕೊಟ್ಟಿವ್ನಿ, ಅವರಿಲ್ದೆ ಇದ್ರೆ ಈ ಮೊಲ ನನ್ನ ಕೈವಸ ಆಗ್ತಿರ್ನಿಲ್ಲಾ" ಅಂದ. ಹಂಗಂದಕೂಡಲೇ ಅವಳು ಮುಖ ದಪ್ಪಗೆ ಮಾಡಿಕೊಂಡು "ಏನೋ ಮಾ ತಂದ್‌ಬುಟ್ಟಿವ್ನಿ ನಿದ್ನಾವ ಅನ್ನೋಹಂಗೆ ಆಡ್ತಾನೆ, ತಿರುಕ್‌ನಿಗೆ ಐಸ್ಪಿರಿ ಬಂದು ಅರ್ಧ ರಾತ್ರೀಲಿ ಕೊಡೇ ಹಿಡಿಸಿಕೊತ್ತಿದ್ನಂತೆ ಹಂಗೆ. ಹೋಗ್ ಹೋಗು, ನಿನ್ನ ಮೊಖಕ್ಕೂ ನಿಂಗೂ ಬೆಂಕಿಹೆಟ್ಟ. ಮನೇಲೆ ಏನೂ ಹದವಾಗಿ ಸಾಮಾನು ಸಂರಂಜಾಮು ಇತ್ತಿಲ್ಲ ಅಂತ ಹೇಳ್ಹೋಗು" ಅಂದಳು. ಸರಿ, ಸಣ್ಣಕಾಳ ತೆಪ್ಪಗಾದ.

೨

ಮಾರನೆ ದಿನ ಸಣ್ಣಕಾಳ ಮತ್ತೆ ಬಲೆ ಹೊತ್ತುಕೊಂಡು ಓಣೀಗುಂಟೆ ಹೊಂಟ. ಹುಣಿಸೆ ಮರದ ಹತ್ತಿರಕ್ಕೆ ಬರುತ್ತಲೇ ದೆಯ್ಯ ಕೂಗಿ ಹೇಳಿತು : "ಸಣ್ಣ ಕಾಳಣ್ಣ ಬಾಡು ತಕ್ಕೊಂಡು ಬಂದ್ಯಾ?"ಇಲ್ಲಾಕನಣ್ಣಾ ಬಾಡಾ ಹುರಿಯಾಕೆ ಇವತ್ತು ಮನೇಲೇನೂ ಹದ ಇತ್ತಿಲ್ಲ ಅದಕ್ಕೆ ಹಂಗೇ ಬಂದ್‌ಬುಟ್ಟೆ. ನಾಳಿಕ್ಕೆ ಖಂಡಿತಾ ತಕ್ಕೊಂಡ್ ಬತ್ತೀನಿ" ಅಂತ ಗೋಗರೆದ.

"ಹೋಗಲಿ ಬುಡು, ಇವತ್ತು ಬೆಟ್ಟದ ಕಿಬ್ಬರೀಲಿ ಬಲೆ ಬುಡು. ಪರಮಾಷಿ ಮಿಕ ಅಟ್ಕೊಂಡು ಬಂದುಬುಡ್ತೀನಿ, ನಾಳಿಕ್ಕೆ ಮಾತ್ರ ತಪ್‌ಬ್ಯಾಡ. ಹುರಿದ ಬಾಡು ತಿಂದು ಬಾಳದಿನ ಆಗಿಹೋಗ್ಯದೆ. ನಾಲಗೆ ಬೆಂಡ್ ಬಂದುಬುಟ್ಟದೆ" ಅಂತ ಹೇಳ್ತು ದೆಯ್ಯ.

ದೆಯ್ಯ ಹೇಳಿದಹಂಗೇ ಅವನು ಬೆಟ್ಟದ ಕಿಬ್ಬರೀಲಿ ಬಲೆಬುಟ್ಟುಕೊಂಡು ಕೂತ. ಮೆಳೆಪಳೆ ಹಳ್ಳಪಳ್ಳ ಎಲ್ಲಾನೂ ಸಿದಿಕಿಕೊಂಡು ಮಿಕ ಅಟ್ಟಿಕೊಂಡು ಬಂದು ಬಲೆಗೆ ಕೆಡವಿತು. ಆವತ್ತು ಐದು ಮೊಲ ಒಂದು ಪಡ್ಡೆಕೊತ್ತಿ ಬಲೆಗೆ

ಬದ್ದುವು. ಅವೆಲ್ಲಾನೂ ದೆಯ್ಯ ಅವನ ಹಸಿಬೆ ಚೀಲಕ್ಕೆ ತುಂಬಿಕೊಡ್ತು. "ನಾಳಿಕ್ಕೆ ಏನಾದ್ರೂ ತಪ್ಪಾಕಿಲ್ಲ, ಬಾಯಿಗೆ ಹಾಕಿದರೆ ಹಂಗೇ ಕರಗಿ ಹೋಗ್ಬೇಕು. ಅಷ್ಟು ವೈನಾಗಿ ಹುರಿಸಿಕೊಂಡು ಬತ್ತೀನಿ ಕನ್ ದಯ್ಯಣ್ಣಾ" ಅಂತ ಹೇಳಿ ಸಣ್ಣಕಾಳ ಹೊರಲಾರದೆ ಮುಕ್ಕುರುಕೊಂಡು ಹೊತ್ತುಕೊಂಡು ಮನೆಗೆ ಬಂದ. ಅವನ ಹೆಂಡತೀಗೆ ನಾಲಿಗೆ ರುಚಿಹತ್ತಿ ಕಾರ ಗೀರ ಎಲ್ಲನೂ ಅರಕೊಂಡು ಗಂಡನ ದಾರೀನೇ ಕಾಯ್ತಾ ಕೂತಿದ್ದಳು. ಅವನು ತಂದು ಹೆಂಡತೀ ಮುಂದಕ್ಕೆ ಎತ್ತಿಹಾಕಿದ. ಅವೆಲ್ಲಾನೂ ನೋಡಿ ಅವಳಿಗ ಬಾಳ ಖುಷಿಯಾಗೋಯ್ತು. ಅವನು ಸರಸರನೆ ಅವೆಲ್ಲಾನೂ ಉತ್ತರಿಸಿ ಹದಮಾಡಿ ಕೊಟ್ಟ. ಅವರು ಹುಟ್ಟಿದಾಗಿನಿಂದ್ಲೂ ಇಷ್ಟು ಬಾಡು ಕಂಡೋರೇ ಅಲ್ಲ. ಇಬ್ಬರೂ ಕೂತುಗೊಂಡು ಬರಗೆಟ್ಟೋರಹಂಗೆ ತುತ್ ಗಟ್ ಆಗೋಗಂಟ್ಲೂ ತಿಂದರು. ಎಲ್ಲಾ ಆದಮೇಲೆ ಸಣ್ಣಕಾಳ ಹೆಂಡತಿಗೆ ಹೇಳಿದ:

"ನೋಡು, ಇದನ್ನು ಇವತ್ತಾದ್ರೂ ಕೊಡ್ತೀನಿ ಅಂತ ಹೇಳಿ ಕೊಡ್ನಿಲ್ಲ, ನಾಳಿಕ್ಕಾದ್ರೂ ತಕ್ಕೊಂಡ್ ಹೋಗ್ದೇ ಹಂಗೇ ಹೇಗೋಹಂಗಿಲ್ಲ. ನನ್ನ ಜೊತೆಗಾರ ಸುಮ್ಮನೇ ಬುಡೋದಿಲ್ಲ. ಅದಲ್ದೇ ಮಾತಿಗೆ ತಪ್ಪಿದಹಂಗೆ ಆಯ್ತದೆ. ಒಳ್ಳೊಳ್ಳೆ ಖಂಡ ನೆಣ ಎಲ್ಲಾನೂ ಚಂದಾಗಿ ಹುರುಕೊಡು. ನಿನ್ನ ಕೈಗುಣ ನೋಡಾನೆ"

ಹೆಂಡತಿ ಇಷ್ಟುಹೊತ್ತೂ ನಗ್‌ನಗ್ತಾ ಖುಷಿಯಾಗಿದ್ದೋಳು ಈ ಮಾತು ಕೇಳಿ ಮೊಖ ಗಂಟುಹಾಕ್ಕೊಂಡು "ಹೋಗ್ ಹೋಗು, ನಿನ್ನ ತೀರಿಗೆ ತಿರುಕೊಳ್ಳೀ ಹೆಟ್ಟ, ನಿಂಗ್ ಬಂದಿರೋ ದವಲತ್ ನೋಡು, ಯಂಡ್ ಮೊಲಾ ಹಿಡಕೊಂಡು ಬಂದಿವ್ನೀ ಅಂತ ಕೇಳಿದೋರಿಗೆ ಒಂದು ಸಬೂಬು ಹೇಳಾಕೆ ಬರದಮೇಲೆ ನೀನೆಂಥಾ ಗಂಡಸು" ಅಂದಳು. ಅವನಿಗೆ ಏನೂ ತೋರಲಿಲ್ಲ. "ನಾಳಿಕ್ಕೆ ಏನ್ ಹೇಳ್ಳಿ ಮತ್ತೆ?" ಅಂದ.

"ಅಷ್ಟೂ ಗೊತ್ತಾಕ್ಕಿಲ್ವಾ? ನನ್ನ ಹೆಂಡ್ತಿ ಹೊರಗಾಗ್ಯವಳೆ ಅಂತ ಹೇಳ್‌ಹೋಗು" ಅಂದಳು.

ಮಾರನೇ ರಾತ್ರಿ ಮತ್ತೆ ಬಲೇನೂ ಹೆಗಲಮ್ಯಾಲೆ ಹಾಕ್ಕೊಂಡು ಸಣ್ಣಕಾಳ ಹೋದ. ದಯ್ಯ ಆಸೆಯಿಂದ ಹತ್ರ ಬತ್ತು. "ಏನ್ ಸಣ್ಣಕಾಳಣ್ಣ, ತಂದಿದ್ದೀ ತಾನೇ?" ಅಂತು. ಅವನು ತಲೆ ಕೆರೆದಾಡುತ್ತ,

"ಏನ್ ಹೇಳ್ಳಿ ದಯ್ಯಣ್ಣಾ, ಅದೇನು ನಿನ್ನ ದುರಾದೃಷ್ಟವೋ, ಇಲ್ಲ ನನ್ನ ದುರಾದೃಷ್ಟವೋ ಕಾಣೆ. ಇವತ್ತು ನನ್ನ ಹೆಡ್ತಿ ಹೊರಗಾಗಿಬುಟ್ಟವಳೆ. ಏನ್ ಮಾಡ್ಲೀ?" ಅಂದ. ದಯ್ಯ ಏನೂ ಮಾತಾಡಲಿಲ್ಲ. 'ದಿನಾ ಏನೇನೋ ಸುಳ್ಳು



ಸಬೂಬು ಹೇಳ್ತಾ ಅವನೆ. ಇವನಿಗೆ ಮಾಡ್ತೀನಿ' ಅಂತ ಮನಸಿನಲ್ಲೇ ಅಂದುಕೊಂಡು "ಹೋಗ್ಲಿ ಬುಡು, ನೀನ್ ತಾನೇ ಇನ್ನೇನ್ ಮಾಡ್ತಿ. ನಂಗೇ ಯೇಗ ಇಲ್ಲ ಅಂತ ಕಾಣ್ತದೆ..... ಇವತ್ತು ಬೆಟ್ಟದ ಆಚೆ ಬಲೆಬುಡು. ಬಲೆ ವತ್ತೀಲೇ ಕೂತ್ಕೋ, ನಾನು ಮೊಲ ಅಟ್ಕೊಂಡ್ ಬತ್ತೀನಿ" ಅಂತ ಹೇಳ್ತು.

ಅವನಿಗೆ ಯಾಕೋ ಇವತ್ತು ಬಾಳ ಹೆದರಿಕೆಯಾಯಿತು, 'ಸುತ್ತ ಮುತ್ತ ನೀನೇ ಅನ್ನೋ ನರಪಿಳ್ಳೇನೂ ಇಲ್ಲ. ಏನಾರೂ ಮಾಡಿದರೆ ಏನು ಮಾಡೋದು. ಒಳ್ಳೆ ದಯ್ಯದ ಸಾವಾಸ ಆಯ್ತಲ್ಲ' ಅಂದುಕೊಂಡು ಹೋಗಿ ಬೆಟ್ಟದ ಆಚೆ ಬಲೆಬುಟ್ಟು ತನ್ನ ಬಟ್ಟೆ ತಗದು ಒಂದು ಕಲ್ಲಿನ ಮೇಲೆ ಹೊದಿಸಿ ದೂರ ಹೋಗಿ ಒಂದು ಮೆಳೆ ಹಿಂದೆ ಕೂತುಕೊಂಡ. ಒಷ್ಟೊತ್ತು ಆದ ಮೇಲೆ ದೆಯ್ಯ ಒಂದು ದಪ್ಪ ಕಲ್ಲು ತಂದು ಬಟ್ಟೆ ಮೇಲೆ 'ದಡ್' ಅಂತ ಎತ್ತಿ ಹಾಕಿ "ಹಿಡಕೋ ಮೊಲಾವ" ಅಂತು. ಮೆಳೇ ಮರೇಲಿ ಕೂತಿದ್ದ ಸಣ್ಣ ಕಾಳ "ಹಿಡಕೊಂಡೇ" ಅಂದ. ತನ್ನ ಕಲ್ಲಿಗೆ ಸಿಕ್ಕಿ ಸತ್ತು ಹೋದ ಅಂತ ದೆಯ್ಯ ತಿಳ್ಕೊಂಡಿತ್ತು. ಈಗ ಅವನ ದನಿ ಕೇಳಿ ಅದಕ್ಕೆ ಬಲು ಚೋಜಿಗವಾಯ್ತು. 'ಇವನು ನನಗಿಂತ ಬುದ್ಧಿವಂತ, ಪರವಾಯಿಲ್ಲ' ಅಂದು ಕೊಂಡಿತು. ಆಮೇಲೆ ಮತ್ತೆ ಕರೀತು: "ಬಾ ಸಣ್ಣಕಾಳಣ್ಣಾ, ಬಾ" ಅಂತ. "ನಾ ಬರೋದಿಲ್ಲ, ನೀನು ನನ್ನ ಸಾಯಿಸ್ತೀ" ಅಂತ ಅವನಂದ. "ಇಲ್ಲ, ನನ್ನ ಆಣೆಗೂ ಏನೂ ಕೆಡಕು ಮಾಡೋದಿಲ್ಲ ಬಾ" ಅಂತ ಕರೀತು. ಆ ಮೇಲೆ ಮೆಳೆತಾವಿನಿಂದ ಸಣ್ಣಕಾಳ ಎದ್ದುಬಂದ. ಆಮೇಲೆ ಅದು ಮೂರು ಮೊಲ ಹಿಡಕೊಂಡು ಬಂದು ಕೊಡ್ತು. ಅವನು ಹೊತ್ತುಕೊಂಡು ಹೊಂಟ. 'ಈ ಸುಳ್ಳು ತಟಪಟ ಎಲ್ಲಾ ಇವನದೊ, ಇಲ್ಲಾ ಇವನ ಹೆಡತೀದೋ ಇವತ್ತು ಪರೀಕ್ಷೆ ಮಾಡಬೇಕು' ಅಂದು ಕೊಂಡು ದೆಯ್ಯ ಅವನ ಹಿಂದೆಯೇ ಹೋಯಿತು.

ಅವತ್ತೂ ಹಂಗೇ ಆಯಿತು. ಉಂಡೂ ತಿಂದೂ ಎಲ್ಲಾ ಆದ ಮೇಲೆ 'ಒಂದು ಮೊಲ ಹುರುಕೊಡು. ಇಲ್ದೇ ಇದ್ರೆ ನಾನು ಜೀವ ಸಹಿತ ಉಳಿಯೋದಿಲ್ಲ' ಅಂತ ಸಣ್ಣಕಾಳ ಏನೇನೋ ಹೇಳಿದ. ಆದರೆ ಆ ಬಜಾರಿ ಕೇಳಲೇ ಇಲ್ಲ. "ನೀನೊಬ್ಬ ಪುಕ್ಕಲ, ಹೆಣ್ಣಿಗ ....... ಮೀಸೆ ಬಂದ ಗಂಡಸು ಹೆಣ್ಣು ಹೆಂಗಸಿನಂಗೆ ಹೆದರಿಕೊಂಡು ಪುದುರ್‌ಗರೀತೀಯಲ್ಲಾ ......ನನ್ ಹೆಡ್ತಿ ಊರಿಗೆ ಹೋಗ್ಯವಳೆ ಅನ್ನು, ನಿನ್ನ ಬಾಯೇನೂ ಸೇದಿಹೋಗೋದಿಲ್ಲ" ಅಂತ ಆಟಕಾಯಿಸಿದಳು. ಇದನ್ನ ಕೇಳಿಕೊಂಡು ದೆಯ್ಯ ಮತ್ತೆ ಹುಣಿಸೆ ಮರಕ್ಕೆ ಹಿಂತಿರುಗಿತು.

ಮತ್ತೆ ಮಾರನೆಯ ರಾತ್ರೆ ಸಣ್ಣಕಾಳ ಜೀವ ಎಡಗೈಲಿ ಹಿಡಕೊಂಡು

ಮೆತ್‌ಮೆತ್ತಗೆ ಹುಣಿಸೆ ಮರದ ಹತ್ರಕ್ ಹೋದ. ದೆಯ್ಯ ಮರದಿಂದ ಕೆಳೀಕೆ ಗುಪ್ತು. ಅವನ ಗಂಟಲು ಒಣಗಿ ಹೋಯಿತು. ಕಾಲು ಥರಥರನೆ ನಡುಗಾಕೆ ಸುರುವಾದವು. ಅವನ ಅವಸ್ಥೆ ನೋಡಿ ದಯ್ಯಕ್ಕೆ ನಗೆಬತ್ತು. "ನೀನೇನೂ ಹೆದರಿಕೋ ಬ್ಯಾಡ ಎಲ್ಲಾ ನಂಗೊತ್ತು ........ ಆದರೆ ನಿಂಗೀಗ ಬ್ಯಾಟೆ ಬೇಕೊ. ನಾನು ಹೇಳಿದಂಗೆ ಕೇಳ್ತೀಯೋ?" ಅಂತ ಕೇಳ್ತು. ಸಣ್ಣ ಕಾಳನಿಗೆ ಏನೂ ತೋರದೆ "ನೀನ್ ಹೇಳಿದಂಗೇ ಕೇಳ್ತೀನ್‌ಕನಣ್ಣಾ" ಅಂತ ಅಂಗಲಾಚಿದ. ಆಗ ದಯ್ಯ ಹೇಳ್ತು:

"ನೋಡು ನಿನ್ನ ಹಿಂಗೆ ಗೋಳು ಹುಯ್ಕೋಳೋಳು ನಿನ್ನ ಹೆಡ್ತಿ ಅಂತ ನನಗೆ ಗೊತ್ತು. ಇವತ್ತು ಯಂಡು ಮೊಲ ಹಿಡಕೊಡ್ತಿನಿ, ತಕ್ಕೊಂಡ್ ಹೋಗು. ನಿನ್ ಹೆಡ್ತಿ ಇವತ್ತೂ ನೀನ್ ಹೇಳಿದ ಹಂಗೆ ಕೇಳ್ದೇ ಇದ್ರೆ ಅವಳನ್ನು ಬಡಿದು ಕಣ್ಣಿಗೆ ಕಾಣದಂಗೆ ದೂರ ಕಳಿಸಿಬುಡು. ನಾನು ನಿನಗೆ ಬೇಕಾದ್ದು ಕೊಡ್ತೀನಿ. ನೀನು ಯಾತ್ಕೂ ಸಿಂತೆ ಮಾಡ್‌ಬ್ಯಾಡ."

ಇಷ್ಟು ಧೈರ್ಯಹೇಳಿ ಅವನಿಗೆ ಎರಡು ಮೊಲ ಹಿಡಿದುಕೊಡ್ತು. ಅವ ತಕ್ಕೊಂಡು ಸಣ್ಣಕಾಳ ಮನೆಗೆ ಬಂದ. ಆವತ್ತೂ ಗಿಣಿಮರಿಗೆ ಹೇಳಿದಂಗೆ ತಾನು ಕಲಿತ ಬುದ್ದಿನೆಲ್ಲಾ ಖರ್ಚು ಮಾಡಿ ಹೇಳಿದ. ಆದರೆ ಅವಳು ಇವನ ಮಾತನ್ನು ಲೆಕ್ಕಕ್ಕೇ ಇಡ್ಲಿಲ್ಲ. ಬಾಯಿಗೆ ಬಂದಂಗೆ ಬೋದಳು. ಇವನಿಗೂ ರೋಸಿ ಹೋಯಿತು. ಸೀಳು ಸೌದೆ ತಕ್ಕೊಂಡು ಹೊಡ್ದಾ, ಹೊಡ್ದಾ, ಮೈ ಊದೋ ಹಂಗೆ ಹೊಡೆದ. ಆದರೂ ಅವಳು ಜಗ್ಗಲಿಲ್ಲ. ಗಂಡನ ಮುಂದಲೇನೇ ಹಿಡಕೊಂಡು ಬಗ್ಗಿಸಿದಳು. ಚೆನ್ನಾಗಿ ಚಚ್ಚಿ ಹಣ್ಣುಗಾಯಿ ನೀರುಗಾಯಿ ಮಾಡಿ ಕಾಲು ಹಿಡಕೊಂಡು ದರದರನೆ ಎಳಕೊಂಡು ಹೋಗಿ ಬೀದಿಗೆ ಹಾಕಿ, "ಎಲ್ಲಾರೂ ಹಾಳಾಗ್‌ಹೋಗು ಬೇವಾರ್ಸಿ ಮುಂಡೇ ........ ತಿರುಗ ನನ್ನ ಮನೆವಳೀಕೆ ಕಾಲ್ ಹಾಕಿದ್ರೆ ಯಂಡು ತುಂಡು ಮಾಡ್ ಬುಡ್ತೀನಿ" ಅಂತ ಹೇಳಿ ಬಾಗಲು ಹಾಕ್ಕೊಂಡು ವಳೀಕೆ ಬಂದ.

೩

ರಾತ್ರೆ ಹುಣಿಸೆ ಮರದ ಹತ್ತರಕ್ಕೆ ಬಂದ. ದೆಯ್ಯ ಮರದಿಂದ ಕೆಳೀಕೆ ಇಳೀತು. ನಡೆದದ್ನೆಲ್ಲಾ ಹೇಳಿ ಕಣ್ಣೀರು ಬುಡ್ತಾ "ನೀನು ಹೇಳಿದಂಗೇ ಮಾಡಿವ್ನಿ. ನಂಗೆ ತಂದೆ ತಾಯಿ ಬಂಧುಬಳಗ ಯಾರೂ ಇಲ್ಲ. ನೀನೇ ಗತಿ. ನನ್ನ ಹಾಲಿನಲ್ಲಾದ್ರೂ ಹಾಕು, ನೀರಿನಲ್ಲಾದ್ರೂ ಹಾಕು" ಅಂತ ಅದರ ಕಾಲು ಹಿಡಕೊಂಡ. ಆಗ ದೆಯ್ಯ ಅವನ ತಲೆ ಸವರಿ,

"ನೀನು ಯಾತ್ಕೂ ಒಂದೀಟೂ ಯೋಚನೆ ಮಾಡಬ್ಯಾಡ. ಒಳ್ಳೇ ದೊಡ್ಡ



ಅಧಿಸ್ಥಾನದ ಮನೇಲಿ ಹೆಣ್ಣು ನೋಡು" ಅಂತು.

"ಅಯ್ಯೋ ನಾನು ಬಡವ. ಹೊಲ ಇಲ್ಲ, ಗದ್ದೆಯಿಲ್ಲ, ತೋಟ ಇಲ್ಲ, ಮನೆಮಠ ಏನೂ ಇಲ್ಲ. ಇಂಥ ದರಿದ್ರದ ಮುಕ್ಕ ಹೆಣ್ಣು ಕೇಳೋಕೆ ಹೋದ್ರೆ ಯಾರಾದ್ರೂ ಕೊಡೋದ್ ನಿಜವಾ? ಬಡವಾ ನೀ ಮಡಗಿದ್ಹಂಗಿರು ಅಂತ ನನ್ನ ಮಿತೀಲಿ ನಾನಿರ್ಬೇಕು, ಇಲ್ದೇ ಹೋದ್ರೆ ಹಮ್ ಆಡಿ ದೊಮ್ಮ ಕೆಟ್ಟ ನಮ್ಮೂರಲ್ಲೊಬ್ಬ ಸುಮ್ಮನೇ ಕೆಟ್ಟ ಅಂತ ಯಾರಾರೂ ನನ್ನ ಮೂಳೆ ಮುರೀತಾರೆ'" ಅಂದ ಸಣ್ಣ ಕಾಳ.

"ಹಂಗಾದ್ರೆ ನೀನಿಲ್ಲೇ ಇರು. ನಾನು ಒಂದರಕ್ಷಣದಲ್ಲಿ ಬತ್ತೀನಿ" ಅಂತ ಹೇಳಿ ದೆಯ್ಯ ಹೋಯಿತು. ಅವನೊಬ್ಬನೇ ನಿಂತುಕೊಂಡ. ಒಂದಡಕೆ ಕಡಿಯೊ ಹೊತ್ನಲ್ಲಿ ದೆವ್ವ ಎಲ್ಲಿಂದಲೋ ಒಂದು ದೊಡ್ಡ ಪೆಟಾರಿ ಹೊತ್ತುಕೊಂಡು ಬತ್ತು. ಕೆಳಕ್ಕೆ ಮಡಗಿ "ಇದರಲ್ಲಿರೋ ದುಡ್ಡೆಲ್ಲಾನೂ ತಕ್ಕೋ" ಅಂತು. ಅದರಲ್ಲಿ ಬೇಕಾದಷ್ಟು ದುಡ್ಡಿತ್ತು ಅವನು ಎಲ್ಲಾನೂ ತಕ್ಕೊಂಡು ಮಟ್ಟೆಕಟ್ಟಿಕೊಂಡ. "ಹೋಗ್ ಈಸತಿ ನಿಂಗೆ ಏನಾರೂ ಬೇಕಾದ್ರೆ ಬಾ, ಆದರೆ ದಿನಾ ಬರೋದ್ ಮಾತ್ರ ಬುಡಬ್ಯಾಡ" ಅಂತ ದೆಯ್ಯ ಹೇಳಿ ಅವನನ್ನು ಕಳಿಸಿಕೊಟ್ಟಿತು.

ಹೊತ್ತಾರೆ ಹೊತ್ತು ಅರಳಿಕಟ್ಟೆ ತಾವು ನಾಕಾರು ಜನ ಕೂತುಕೊಂಡಿದ್ದರು. ಏನೇನೋ ಮಾತಾಡ್ತಾ. ಸಣ್ಣಕಾಳನೂ ಅಲ್ಲಿಗೆ ಹೋಗಿ ಓಟು ದೂರದಲ್ಲಿ ಬಿಸಿಲು ಕಾಯ್ತಾ ಕೂತುಕೊಂಡ. ಯಾರೋ ಒಬ್ಬ "ನನ್ನ ಮನೇ ಕೊಟ್‌ಬುಡ್ತೀನಿ ಯಾರಾರೂ ತಕ್ಕೊಳ್ಳಿ' ಅಂದ. ಸುಮ್ಮನೆ ಕೂತಿದ್ದ ಸಣ್ಣಕಾಳ "ಅದೇನಪ್ಪ ಮನೆಗಿನೆ ಅಂತ ಮಾತಾಡ್ತಿರಲ್ಲ" ಅಂದ. ಮನೇನೆಲ್ಲಾ ತಡಕಿದರೂ ಮೂರುಕಾಳು ದವಸ ಇಲ್ಲದ ಕಾಳ ಮನೆ ಸುದ್ದಿ ಕೇಳ್ತಾ ಇರೋದು ನೋಡಿ ಅವರಿಗೆ ನಗೆ ಬತ್ತು. ಮನೆ ಕೊಡ್ತೀವಿ ಅಂದೋನು ಹನಾಸವಾಗಿ ಹೇಳಿದ: "ಏನು ಮನೆ ತಕ್ಕೊತ್ತಿಯೇನೋ ಸಣ್ಣಕಾಳ?". ಅವನು ತಲೆ ಕೆರೀತಾ "ಅಯ್ಯೋ ಹೊಟ್ಟೆಗೇ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೇ ಹೂವು ಅಂತ, ಕಟಕ್‌ನೆ ಕಡಿಯಾಕೆ ಮೂರು ಕಾಳು ದಿನಸಿಲ್ಲ. ನಂಗ್ಯಾಕ್‌ರಪ್ಪಾ ಮನೇ ಸುದ್ದಿ. ನನ್ನ ಅಕ್ಲಾಸ ಮಾಡ್ತಿರಾ?" ಅಂದ. ಅವನ್ನ ಇನ್ನೂ ಹಾಸ್ಯಮಾಡಬೇಕೂ ಅಂತ "ನೋಡು, ತಕ್ಕೊಳೋದಾದ್ರೆ ತಕ್ಕೊಂಬುಡು. ನಿಂಗಾದರೆ ಐದು ಸಾವಿರ ಬಾಳೋ ಮನೆ ಒಂದೇ ಸಾವಿರಕ್ಕೆ ಕೊಡ್ತೀನಿ" ಅಂದ. ಅಲ್ಲಿದ್ದ ಇನ್ನೊಬ್ಬರು "ಹಂಗಾರೆ ಒಂದೇ ಸಾವಿರಕ್ಕೆ ಕೊಟ್‌ಬುಡ್ತಿಯಾ? ಪ್ರಮಾಣ ಪೂರ್ತ ಹೇಳ್ತೀಯಾ?" ಅಂತ ಅವನಿಗೆ ಸವಾಲು ಹಾಕಿದರು. ಸಣ್ಣ ಕಾಳ ಒಂದು ಸಾವಿರ ಎಲ್ಲಿ ತಂದಾನು ಅಂದುಕೊಂಡು,

"ಹೂಂ. ಖಂಡಿತಾ ಪ್ರಮಾಣವಾಗೂ ಕೊಡ್ತೀನಿ" ಅಂದ. "ನೋಡೋ ಕಾಳ, ಎಲ್ಲಾದರೂ ಮಡಗಿದ್ದರೆ ತಂದುಬುಡು, ಒಳ್ಳೆ ಚಾರೀಲಿ ಮನೆಸಿಕ್ತದೆ" ಅಂದ ಇನ್ನೊಬ್ಬ. "ತಡೀರಪ್ಪಾ ನೋಡ್ತೀನಿ" ಅಂತ ಸಣ್ಣಕಾಳ ಮನೆಗೆ ಹೋಗಿ ಒಂದು ಸಾವಿರ ತಕ್ಕೊಂಡು ಬಂದು ಕೊಟ್ಟ. ಎಲ್ಲಾರ ನಾಲಗೆಗಳೂ ನಿಂತಹೋದೋ. ಅವರ ಕಣ್ಣು ಅವರೇ ನಂಬಲಿಲ್ಲ. ಒಳ್ಳೇ ಪೀಕಲಾಟಕ್ಕೆ ಬತ್ತು. ಉಳಿದವರೂ "ಕೊಡು ಮತ್ತೆ ಈಗ" ಅಂದರು. 'ಮಾತು ಆಡಿ ಹೋಯ್ತು, ಮುತ್ತು ಒಡೆದು ಹೋಯ್ತು, ಇನ್ನೇನ್ಮಾಡೋದು' ಅಂತ ಇಕ್ಕಟಿಗೆ ಸಿಕ್ಕಿ ಮನೇಯವನು ಒಪ್ಪಿಕೊಂಡ. ಸರಿ ಭರ್ಜರಿಯಾದ ಮನೆ ಸಣ್ಣಕಾಳನಿಗೆ ಬಾಳ ಚಾರೀಲಿ ಸಿಕ್ಕಿತು.

ಕೇವಲ ಒಂದೇ ಸಾವಿರಕೆ ಮನೆ ಕಳಕೊಂಡೋನಿಗೆ ತುಂಬಾ ಹೊಟ್ಟೇ ಉರಿಬಂತು. 'ಏನಾರೂ ಮಾಡಿ ಈ ಬಡ್ಡೀಮಗನ ಸೊಕ್ಕು ಇಳಿಸಿ ಬುದ್ದಿಕಲಿಸಿ ಮನೆ ವಾಪಸ್ ಬರೆಸಿಕೋಬೇಕು' ಅಂತ ಅವನಿಗೆ ಹಠ ಹತ್ತಿಬುಡ್ತು. ಮಾರನೇ ದಿನ ಯಥಾಪ್ರಕಾರ ಅರಳೀಕಟ್ಟೆ ತಾವು ಎಲ್ಲಾ ಸೇರಿದರು. ಸಣ್ಣ ಕಾಳನೂ ತಲೇ ಕೆರದಾಡಿ ಕೊಂಡು ಬಂದು ಕೂತುಕೊಂಡ. ಮನೇ ಕೊಟ್ಟೋನು ಹೇಳಿದ: "ಏನೋ ಸಣ್ಣ ಕಾಳ, ಹ್ಯಂಗಂಗೋ ಕಾಸಿಗೆ ಕಾಸು ಗಂಟುಮಾಡಿ ಸಾವಿರ ಸಂಪಾದನೆ ಮಾಡ್‌ಬುಟ್ಟೇ ಅಂತ ಮನೇ ಗ್ಯಬಿಕೊಂಡುಬುಟ್ಟೆ. ತಾಕತ್ತಿದ್ರೆ ನನ್ನ ಐದು ಎಕರೆ ತೋಟ ಮೂರು ಸಾವಿರಕೆ ಕೊಡ್ತೀನಿ ತಕ್ಕೋ ಮತ್ತೆ". "ಅಯ್ಯೋ ನಂಗೆ ಯಾಕಪ್ಪ ತೋಟ, ಅಷ್ಟು ದುಡ್ಡು ಈ ಗರೀಬನ ತಾವು ಎಲ್ಲಿ ಬಂದಾತು. ಸುಮ್ ಸುಮ್ನೇ ನನ್ನ ಹನಾಸ ಮಾಡ್ತೀರಿ ಕನ್ರಪ್ಪಾ" ಅಂತ ತಲೆಕೆರದಾಡಿದ ಸಣ್ಣ ಕಾಳ.

"ಹಂಗಾರೆ ಮೂರೇ ಸಾವಿರಕೆ ತೋಟ ಕೊಟ್ ಬುಡ್ತೀಯೇನೋ. ಬ್ಯಾಡಕನೋ, ಹಟಕ್ಕೆ ಮೂಗು ಕೊಯಿಸ್ಕೋಬಾರ್ದು" – ಅಂದ ಇನ್ನೊಬ್ಬ.

"ಅವನು ಕೂತ ಜಾಗದಲ್ಲಿ ಮೂರು ಸಾವಿರ ಕೊಡಲಿ, ಕೊಟ್ಟೇ ಬುಡ್ತೀನಿ. ಮಾತಿಗೆ ತಪ್ಪಿದರೆ ನಾಲಿಗ್ಗೆ ಯಕ್ಕಡದ ಅಟ್ಟೇ ಹೆಟ್ಟಿಬುಡು" – ಅಂತ ಜೂರತ್ತು ಮಾಡಿದ ಮನೇ ಕೊಟ್ಟವನು. ಕಾಳ ಮೆತ್ತಗೆ ಸೊಂಟದಲ್ಲಿದ್ದ ಒಂದು ಕರಗಿ ಚಿಮಟಹಿಡಿದಿದ್ದ ಬಟ್ಟೆ ತಗದ. ಅದರಲ್ಲಿ ಸುತ್ತಿಟ್ಟಿದ್ದ ಹಿಮ್ಮಣ್ಣಿ ಚೀಲದಿಂದ ದುಡ್ಡು ತಗದು ಎಣಿಸಿ ಮೂರುಸಾವಿರ ಕೊಟ್ಟ. ಎಲ್ಲರ ಮೊಖವೂ ಒಂದು ಕಪ್ಪೇ ಚಿಪ್ಪಿನ ಅಗಲ ಆಗೋಯ್ತು. ಶರತ್ತು ಮಾಡಿದೋನು 'ಕೆಟ್ಟೇ' ಅಂದುಕೊಂಡ. ಆದರೆ ವಿಧಿ ಇರಲಿಲ್ಲ. ಐದು ಎಕರೆ ಸೊಗಸಾದ – ಕಣ್ಣುಕಾಣದ ಕುಂಡನಿಗೆ ಕೊಟ್ಟಿದ್ರೂ ಹತ್ತು ಹದಿನೈದು ಸಾವಿರಕ್ಕೆ ತಕ್ಕೊಳ್ಳೋ ಅಂತ – ಎಲೆತೋಟ ಹಿಂಗೆ ಸಣ್ಣಕಾಳನಿಗೆ ಅನಾಯಾಸವಾಗಿ ಸಿಕ್ಕಿತು.



ಮೂರನೇ ದಿನವೂ ಹಿಂಗೇ ಶರತ್ತು ಬಿದ್ದು ಇಪ್ಪತ್ತೈದು ಸಾವಿರ ರೂಪಾಯಿ ಬಾಳೋ ನಾಕು ಎಕರೆ ಗದ್ದೆ ಬರೀ ಹದಿನೈದು ಸಾವಿರಕ್ಕೆ ಸಿಕ್ಕಿತು. ಅಂತೂ ಇಂತೂ ಸಣ್ಣಕಾಳನಿಗೆ ಅದೃಷ್ಟ ಖುಲಾಯಿಸಿತು. ತೆಯ್ಕೊಂಡು ಕುಡಿಯಾಕೆ ಮೂರುಕಾಳು ದವಸಧಾನ್ಯ ಇಲ್ಲದೋನು ಮೂರೇ ಮೂರು ದಿನದಲ್ಲಿ ಭಾರೀಗನಂಧಾರಿ ಕುಳವಾಗಿಬಿಟ್ಟ. ಜನ ಮೂರೇ ದಿನಕ್ಕೆ ಸಣ್ಣಕಾಳೇಗೌಡ್ರೆ ಅನ್ನಾಕೆ ಸುರುಮಾಡಿದರು. ದಿನಂಪ್ರತಿ ತಪ್ಪದೆ ಸಣ್ಣಕಾಳ ಇದೆಲ್ಲಾನೂ ದೆಯ್ಯಕ್ಕೆ ವರದಿಮಾಡಿ ಅದರ ಹತ್ರ ಬೇಕಾದಹಂಗೆ ದುಡ್ಡು ಈಸಿಕೊಂಡು ಬರುತ್ತಿದ್ದ.

ಸಣ್ಣಕಾಳ ಬರಕತ್ತಾದ ಕುಳ ಆಗಿದ್ದನ್ನ ನೋಡಿ ನೆರೆಯೂರಿನ ಸಾಹುಕಾರ ತನ್ನ ಬಿದರೆ ಮೇಗಳ ಚೆದುರೆ ಅಂತ ಮಗಳನ್ನ ಕೊಡ್ತೀನಿ ಅಂತ ಹೇಳಿ ಕಳಿಸಿದ. ಇವನು ಹೋಗಿ ಬಂದ, ಒಪ್ಪಿಕೊಂಡ. ಆ ರಾತ್ರೆ ದೆಯ್ಯದ ಹತ್ರ ಬಂದು ಆ ಸುದ್ದಿ ತಿಳಿಸಿದ. "ಸರಿ, ತುಂಬಾ ಸಂತೋಷ. ನಿನಗೇನು ಬೇಕು?" ಅಂತ ಕೇಳ್ತು. "ವಡವೆ ವಸ್ತ್ರ ಏನೂ ಇಲ್ಲ." ಅಂತ ತಲೆಕೆರದಾಡಿದ. "ಹಂಗಾದರೆ ಒಂದು ಗಳಿಗೆ ಇಲ್ಲೇ ಇರು" ಅಂತ ಹೇಳಿ ದೆಯ್ಯ ಮಾಯವಾಯಿತು. ಕಣ್ಣುರೆಪ್ಪೆ ಹುಯ್ಯೋ ಅಷ್ಟರಲ್ಲಿ ಒಂದು ದೊಡ್ಡ ಪೆಟ್ಟಿಗೆ ತಂದು ಮುಂದಕ್ಕೆ ಮಡಗಿತು. ಸಣ್ಣಕಾಳ ಅದರ ಮುಸುಕು ತೆಗೆದುನೋಡಿದ. ಅಡ್ಡಿಕೆ, ದೊಡ್ಡ ಗುಂಡು, ಸಣ್ಣ ಗುಂಡು, ಕಾಸಿನಸರ, ಚೈನು, ಪದಕ ವಾಲೆ ಬುಗಡಿ ಚಳತುಂಬು ಜಡೆಹೂವು ರೋಚಾದಹೂವು ಕೆನ್ನೆಸರ ಕೈ ಕಪ್ಪಡ ಉಂಗುರ – ಹೀಗೆ ಕುಲಕೆ ಚಿತ್ತಾರದ ವಡವೆಗಳೆಲ್ಲಾ ತುಂಬಿ ಮಿರಿಮಿರಿ ಅಂತ ಮಿಂಚುತಿದ್ದೊ. ಬಟ್ಟೆಗಳಂತೂ ಕೇಳಾಕೆ ಕೆಲಸಿಲ್ಲ. ಮಡಿಸಿ ಮಡಗಿದರೆ ಒಂದು ಬೆಂಕೀಪಟ್ಟಣಕೆ ಆಗೋ ಅಂತ ಶ್ಯಾಲೆಗಳು, ವೈನವನಾರಸಂದೆಲ್ಲಾ ಕಾಣೋ ಅಂಥ ನೇತ್ರದಂಥ ಶ್ಯಾಲೆಗಳು ಬೇಕಾದೋಟಿದ್ದೊ. ಅವೆಲ್ಲಾನೂ ತಕ್ಕೊಂಡು ಮಟ್ಟೆ ಕಟ್ಟಿಕೊಂಡ. ಊರಿಗೆ ಬಂದ.

ಮದುವೆ ಬಾಳ ಅದ್ದೂರಿಯಾಗಿ ನಡೀತು. ಹೆಣ್ಣಿಗೆ ತಂದಿದ್ದ ವಡವೆ ವಸ್ತ್ರನೋಡಿ ಊರಿಗೆ ಊರೇ 'ಅಬ್ಬಾ' ಅಂತ ಬಾಯಮೇಲೆ ಕೈ ಮಡೀಕೊತ್ತು. ಸಣ್ಣಕಾಳ ಹೆಣ್ಣುಕರಕೊಂಡು ಮನೆಗೆ ಬಂದ. ಕಂಕಣ ಬಿಚ್ಚಿದ ತಕ್ಷಣವೇ ದಯ್ಯದ ಹತ್ರಕ್ಕೆ ಬಂದ. ನಡೆದದ್ದೆಲ್ಲಾನೂ ಕಡ್ಡೀಲಿ ಬರದಂಗೆ ಹೇಳಿದ. ದೆಯ್ಯಹೇಳಿತು: "ಎಲ್ಲಾ ಒಳ್ಳೇದಾಯಿತು. ನೀನು ಕರೆನೆರೆ ಊಟಕೊಡುವಾಗ ದೊಡ್ಡ ಹೋತಗಳನ್ನ ಕಡಿ. ಅದರ ನೆಣಾನೆಲ್ಲ ಚೆಂದಾಗಿ ಹುರಿಸಿ ನಿನ್ನ ಮನೇಮ್ಯಾಕೆ ಮಡಗಿಬುಡು.

ನಾನು ಬಂದು ತಿಂತೀನಿ"

ಹೆಣ್ಣು ಕರೆಯಾಕೆ ಬಂದರು. ಸಣ್ಣಕಾಳ ಕುತ್ತಿಗೆ ಉದ್ದದ ಹತ್ತು ಹದಿನೈದು ಹೋತಕಡಿಸಿದ. ಎಲ್ಲರಿಗೂ ವಲ್ಲೆ ವಲ್ಲೆ ಅನ್ನೋಹಂಗೆ ಬಾಡು ತಿನ್ನಿಸಿದ. ನೆಣ ಹುರಿಸಿ ಒಂದು ದೊಡ್ಡ ಹೆಡಗೆ ತಂಬಿ ಮನೆಮೇಲಕ್ಕೆ ಮಡಗಿದ. ದೆಯ್ಯ ಬಂದು ಬರಗೆಟ್ಟಹಂಗೆ ತಿಂತು. ತಿಂತು – ಕುತ್ತಿಗೆಗೆ ಬರೋಗಂಟ್ಲೂತಿಂತು. ಅದಕ್ಕೆ ಬಾಳ ನಿಪ್ಪಣ ಆಗಿಹೋಯಿತು. ಆ ಮೇಲೆ ಮೆತ್ತಗೆ "ನಿಮ್ಮ ಮಾವನಮನೆಗೆ ಹೋಗೋಕೆ ಮುಂಚೆ ದಂಪತಿಗಳು ಒಂದು ಸತಿ ನನ್ನ ಮನೇತಾಕೆ ಬನ್ನಿ" ಅಂತ ಹೇಳಿ ಹೊಂಟೋಯ್ತು.

ನಾಳೆ ಹೊತ್ತಾರೆ ಮಾವನ ಮನೆಗೆ ಹೋಗಬೇಕು ಅನ್ನುವಾಗ ಈ ರಾತ್ರೆ ಸಣ್ಣಕಾಳ ತನ್ನ ಹೆಡತೀನು ಕರಕೊಂಡು 'ನಮ್ಮ ಮನೆದೇವರ ದರ್ಶನ ಮಾಡ್ಕೊಂಡು ಬತ್ತೀವಿ' ಅಂತ ಹೇಳಿ ಹುಣಿಸೆ ಮರದ ಹತ್ರಕ್ಕೆ ಬಂದ. ದೆಯ್ಯ ಪಲ್ಲಕ್ಕಿ ಮ್ಯಾಲೆ ಕೂತುಕೊಂಡು ಬ್ಯಾರೆ ದೆಯ್ಯಗಳ್ನೂ ಕರಕೊಂಡು ದೊಂದಿಗಳನ್ನು ಹಿಡಕೊಂಡು ಸಣ್ಣಕಾಳನ ಹತ್ರಕ್ಕೆ ಬಂತು. "ಹೆದರಿಕೋ ಬ್ಯಾಡ. ಏನೂ ಭಯವಿಲ್ಲ' ಅಂತ ಅವನು ಹೆಡತಿಗೆ ಹೇಳಿದ. ಪಿಶಾಚಿಗಳೆಲ್ಲ ಸೇರಿಕೊಂಡು ಹುಣಿಸೆ ಮರದ ಅಂಡೀಲಿ ಗಂಡ ಹೆಂಡತಿ ಇಬ್ಬರ್ನೂ ಹಸೆ ಹತ್ತಿಸಿದರು. ಸುತ್ತ ಮುತ್ತ ಎಂಥೆಂಥದೋ ಹಾಡು ಹೇಳಿಕೊಂಡು ಕುಣಿದರು. ಆಗ ಹಿರೀದೆಯ್ಯ ಕಣ್ಣಿಗೆ ಬೇಕಾದ ಬಟ್ಟೆಬರೆ ವಡವೆ ದುಡ್ಡುಕಾಸು ಎಲ್ಲಾನೂ ತಂದು ಗಂಡ ಹಂಡತೀಯ ಮುಂದೆ ರಾಶಿಹಾಕಿ ಮುಯ್ಯಿ ಮಾಡಿತು. ಅವರಿಬ್ಬರ್ನೂ ಕಣ್ಣು ತುಂಬಾ ನೋಡಿ ಸಂತೋಷಪಡ್ತು. ಆ ಮೇಲೆ "ಇನ್ನು ನನ್ನ ವಾಯಿದೆ ಮುಗೀತು; ನಾನು ನನ್ನ ಲೋಕಕ್ಕೆ ಹೊಂಟೋಯ್ತೀನಿ. ನಿನಗೆ ನಾನು ಇನ್ನು ಸಿಕ್ಕೊದಿಲ್ಲ. ನೀನು ಇಲ್ಲಿಗೆ ಬರಲೂಬ್ಯಾಡ. ನೀವಿಬ್ರೂ ಸುಖವಾಗಿ ಬದುಕಿ ಅಂತ ಹೇಳಿ ಕಣ್ಣಲ್ಲಿ ನೀರು ತುಂಬಿಕೊಂಡಿತು. ಸಣ್ಣಕಾಳನ ಕಣ್ಣಲ್ಲೂ ನೀರು ಬಂತು. ಅಳ್ತಾ ಅಳ್ತಾ "ಇಲ್ಲೀಗಂಟ ನೀನು ತಂದೆಹಂಗೆ ಕಾಪಾಡಿದೆ. ಮೂರು ಕಾಸಿಗೂ ಗತಿ ಇಲ್ದೋನ ಭಾರೀ ಕುಳಮಾಡಿದೆ. ನಿನ್ನ ಹೆಸರಿನಲ್ಲಿ ದಿನಾ ನಾನು ಮನೇಲಿ ಜ್ಯೋತಿ ಹತ್ತಿಸುತೀನಿ" ಅಂತ ನಮಸ್ಕಾರ ಮಾಡಿದ. ಹೆಡತೀನೂ ಕೈಮುಗಿದಳು. ದೆಯ್ಯ "ಅಳಬ್ಯಾಡಿ, ಹೋಗಿ ನಾಕುಜನಕೆ ಉಪಕಾರ ಮಾಡಿಕೊಂಡು ಬದುಕಿ" ಅಂತಹೇಳಿ ಸಮಾಧಾನ ಮಾಡಿ ಕಳಿಸಿಕೊಡ್ತು. ಸಣ್ಣಕಾಳ ಅವನ ಹೆಡತಿ ಇಬ್ಬರೂ ದುಃಖದಿಂದ ಊರಿಗೆ ಬಂದರು. ನಾಕು ಜನದ ಕೈಲಿ 'ಸೈ' ಅನ್ನಿಸಿಕೊಂಡು ಬದುಕಾಟಮಾಡಿದರು.

* * * *



## ಕಿಲಾಡಿ ಚಿಕ್ಕ*

ಒಂದೂರಲ್ಲಿ ಒಬ್ಬ ತಾಯಿಗೆ ಇಬ್ಬರು ಗಂಡು ಮಕ್ಕಳು, ಒಬ್ಬಳು ಹೆಣ್ಮಗಳು ಇದ್ದರು. ತಾಯಿಗೆ ಹಿರಿಮಗನ ಮೇಲೆ ತುಂಬಾ ಪ್ರೀತಿ. ಕಿರಿಮಗನ ಕಂಡರೆ ಅಷ್ಟಕ್ಕಷ್ಟೆ. ಮಗಳ ಮೇಲಂತೂ ಪ್ರಾಣ.

ಆ ಊರಿನ ಆಚೆಕಡೆ ಒಂದು ಹಳ್ಳ. ಆ ಹಳ್ಳದಿಂದ ಆಚೆ ಅವರ ಹೊಲ. ಅಣ್ಣತಮ್ಮಂದೀರು ಇಬ್ರೂ ಆ ಹೊಲ ಉಳಾಕೆ ಹೋಗ್ತಾ ಇದ್ದರು. ತಂಗಿ ಆ ಇಬ್ಬರಿಗೂ ಮಧ್ಯಾಹ್ನದ ಹೊತ್ತು ಊಟ ತಕ್ಕೊಂಡು ಹೋಗ್ತಾ ಇದ್ದಳು. ಅವರು ಹೊಲಕ್ಕೆ ಹೋಗಬೇಕಾದರೆ ಹಳ್ಳ ದಾಟಿಕೊಂಡು ಹೋಗಬೇಕಾಗಿತ್ತು. ಆ ಹಳ್ಳದ ಹತ್ತಿರ ಒಂದು ಹುಣಿಸೆ ಮರ ಇತ್ತು. ಆ ಮರದ ಮೇಲೆ ಒಂದು ಬ್ರಹ್ಮರಾಕ್ಷಸ ವಾಸವಾಗಿತ್ತು.

ಒಂದು ದಿನ ತಂಗಿ ಅಣ್ಣದೀರಿಗೆ ಊಟ ಹೊತ್ಕೊಂಡು ಆ ಹಳ್ಳದಗುಂಟೆ ಹೋಗ್ತಾ ಇದ್ದಳು. ಆ ಬ್ರಹ್ಮರಾಕ್ಷಸ ಮರದಿಂದ ಕೆಳಕ್ಕೆ ಇಳಿದು ಬಂದು ದಾರಿಗೆ ಅಡ್ಡವಾಗಿ ನಿಂತುಕೊತ್ತು. ಹುಡುಗಿ ಗಡಗಡನೆ ನಡುಗಿದಳು. "ಹೆದರ್ಕೋ ಬ್ಯಾಡ, ನನಗೆ ಬಾಳ ಹಸಿವಾಗ್ತದೆ, ಊಟ ಕೊಡು. ನಿನ್ನ ಬುಟ್‌ಬುಡ್ತೀನಿ" ಅಂತು. ಅವಳು "ಇವತ್ತು ಹೆಚ್ಚಾಗಿ ಊಟ ತಂದಿಲ್ಲ. ನಾಳಿಕ್ಕೆ ತಕ್ಕೊಂಡು ಬರ್ತೀನಿ" ಅಂದಳು.

"ಸರಿ" ಅಂತ ಬುಟ್‌ಬುಡ್ತು.

ಮಾರನೆ ದಿನ ಊಟ ತಕ್ಕೊಂಡು ಆ ಹಳ್ಳದ ಹತ್ತಿರ ಬಂದಾಗ ಮತ್ತೆ ಬ್ರಹ್ಮ ರಾಕ್ಷಸ ಅಡ್ಡ ಹಾಕ್ಕೊತ್ತು. "ಇವತ್ತು ಊಟ ಹೆಚ್ಚಾಗಿ ತಂದಿವ್ನಿ ಆ ಕಡೆಯಿಂದ ಬರುವಾಗ ಕೊಡ್ತೀನಿ. ಈಗ ಬುಟ್‌ಬುಡು" ಅಂದಳು ಹುಡುಗಿ. "ಸರಿ" ಅಂತ ರಾಕ್ಷಸ ಬುಟ್‌ಬುಡ್ತು. ಅವಳು ಹೊಲದ ಹತ್ತಿರ ಹೋದಳು. ಆದರೆ ಅವಳ ಕಿರಿ ಅಣ್ಣ ಹಟಕ್ಕರ್ಧ ತಂದಿದ್ದ ಊಟಾನೆಲ್ಲ ಉಂಡುಕೊಂಡುಬುಟ್ಟ.

* ಹೇಳಿದವರು : ಹಾಸನ ಜಿಲ್ಲಾ ರಕಲಗೂಡು ತಾಲ್ಲೂಕು ಹಂಪಾಪುರದ ಶ್ರೀ ಎಚ್.ಜೆ. ಹುಚ್ಚೇಗೌಡ.

ಹುಡುಗಿ ಚಿಂತೆ ಮಾಡ್ತಾ ಆ ಕಡೆಯಿಂದ ಬಂದಳು. ರಾಕ್ಷಸ ಕಾಯ್ತಾ ನಿಂತಿತ್ತು. "ಎಲ್ಲಿ ಊಟಾ ಕೊಡು" ಅಂತ ಕಿರಿಚ್ತು. "ಇವತ್ತು ಹೆಚ್ಚಾಗಿ ತಂದಿದ್ದೆ, ಆದ್ರೆ ನಮ್ಮಣ್ಣದೀರು ಹಸಿದುಬುಟ್ಟು ಎಲ್ಲಾನೂ ಉಂಡುಕೊಂಡರು. ನಾಳಿಕ್ಕೆ ಖಂಡಿತಾ ಇನ್ನೂ ಹೆಚ್ಚಾಗಿ ತರ್ತೀನಿ ಅಂದಳು. "ದಿನಾ ಹಿಂಗೇ ಹೇಳ್ತಾ ಇದ್ದೀ, ನಿನ್ನ ಹ್ಯಂಗೆ ನಂಬೋದು?" ಅಂತು ರಾಕ್ಷಸ.

"ಇಲ್ಲ, ಸತ್ಯವಾಗೂ ನಾಳಿಕ್ಕೆ ತಂದೇತರ್ತೀನಿ" ಅಂದಳು ಹುಡುಗಿ.

"ಆಗಲಿ ಹೋಗು" ಅಂತ ಹೇಳಿ ಆವತ್ತು ಅವಳನ್ನು ರಾಕ್ಷಸಬುಟ್‌ಬುಡ್ತು.

ಮಾರನೆ ದಿನ ಇನ್ನೂ ಹೆಚ್ಚಾಗಿ ಊಟ ತಕ್ಕೊಂಡು ಹುಡುಗಿ ಬಂದಳು. ಎಂದಿನಂತೆ ರಾಕ್ಷಸ ಹಳ್ಳದ ಹತ್ರ ಅಡ್ಡಾಕಿಕೊಂಡಿತು. "ಇವತ್ತು ಬೇಕಾದಷ್ಟು ತಂದಿವ್ನಿ. ನೀನೇನೂ ಯೋಚನೆ ಮಾಡಬ್ಯಾಡ. ಆ ಕಡೆಯಿಂದ ಬರುವಾಗ ಖಂಡಿತಾ ಊಟ ಕೊಡ್ತೀನಿ" ಅಂದಳು ಹುಡುಗಿ. ರಾಕ್ಷಸ ಸುಮ್ಮನಾಯಿತು.

ಹೊಲದ ಹತ್ರ ಹೋದಳು. ಅಣ್ಣದೀರು ಆರುಬಿಟ್ಟು ಬಂದು ಊಟ ಮಾಡಿದರು. ಅವತ್ತೂ ಕಿರಿಯ ಅಣ್ಣ ಹಟಕರ್ಕ್ಧ ಕುಕ್ಕೇಲಿ ಒಂದಗುಳೂ ಉಳೀದ ಹಾಗೆ ಎಲ್ಲಾನೂ ಪುಟ್ಟಗೆ ಉಂಡುಕೊಂಡ. ಹುಡುಗಿಗೆ ಬಾಳ ಹೆದರಿಕೆಯಾಯಿತು. 'ಈವತ್ತೂ ಊಟಾ ಸಿಗಲಿಲ್ಲ, ರಾಕ್ಷಸ ನನ್ನ ಸುಮ್ಮನೆ ಬುಡೋದಿಲ್ಲ' ಅಂದುಕೊಂಡಳು. ಆಗ ಹಿರಿಯಣ್ಣನಿಗೆ "ಅಣ್ಣ ಅಣ್ಣ ಯಾಕೋ ಹಳ್ಳದ ಹತ್ರ ಹೆದರಿಕೆ ಆಯ್ತದೆ. ಆ ಹಳ್ಳದಗಂಟ ಕಳಿಸಿಕೊಡು ಬಾಣ್ಣ" ಅಂದಳು. ಆಗ ಅವನು ತಮ್ಮನಿಗೆ "ಲೋ ಚಿಕ್ಕ, ಹೋಗಿ ತಂಗ್ಯಮ್ಮನ್ನ ಹಳ್ಳ ಕಡಸಿ ಕಳಿಸಿಕೊಟ್ಟು ಬಾ" ಅಂತ ಹೇಳಿದ.

ಸರಿ, ಕಿರಿಯ ಅಣ್ಣ ತಂಗಿ ಇಬರೂ ಹಳ್ಳಗಂಟ ಬಂದರು. ಆದರೆ ಅವನು "ನಿನಗೇನು ಹೆದರಿಕೆ? ನೀನೇನು ಎಳೆ ಮಗುವಾ? ನಿನ್ನೇನೂ ಅಲ್ಲಿ ರಾಕ್ಷಸ ಹಿಡುಕೊಳ್ಳೋದಿಲ್ಲಕಂತೆ ಹೋಗ್ ಹೋಗು" ಅಂದುಬುಟ್ಟು ಅಲ್ಲೇ ಒಂದ ಮಾಡಾಕೆ ಕೂತುಗೊಂಡ. "ಇನ್ನೊಂದು ಸ್ವಲ್ಪ ದೂರ ಬಾರಣ್ಣ" ಅಂತ ಅವಳು ಗೋಗರೆದರೂ ಅವನು ಮುಂದಕ್ಕೆ ಮೂರು ಹೆಜ್ಜೇನೂ ಬರಲಿಲ್ಲ.

ಅವಳು ವಿಧಿಯಿಲ್ಲದೆ ಹೆದರಿಕೆಯಿಂದ ಗಡಗುಟ್ತಾ ಹಳ್ಳದ ಹತ್ರ ಬಂದಳು. ರಾಕ್ಷಸ ಹುಣಿಸೇ ಮರದಿಂದ ಕೆಳಕ್ಕೆ ಕುಪ್ಪಿ "ಎಲ್ಲಿ ಊಟ?" ಅಂತು. ಇವಳಿಗೆ ಮಾತಾಡೋಕೆ ಬಾಯೇ ಬರಲಿಲ್ಲ. "ಹೂಂ, ಕೊಡು" ಅಂತ ಗದರಿಸ್ತು. ಅವಳು ಕೊಡ್ಲಿಸ್ತಾ "ಇವತ್ತು ಇವತ್ತು ನಮ್ಮಣ್ಣ ಉಂಡುಕೊಂಬುಟ್ಟ" ಅಂದಳು. ಅದು ಮರುಮಾತಾಡಲೇ ಇಲ್ಲ. ಅವಳನ್ನ ಹೊತ್ತುಕೊಂಡು ಹೋಗೇಬುಡ್ತು.



## ೨

ತಮ್ಮ ತೊಡೇಮೇಲೆಲ್ಲಾ ಒಂದ ಮಾಡ್ಕೊಂಡು ವಾಪಸು ಬಂದ. ಅಣ್ಣ "ಕಳಿಸಿಬಂದ್ಯೋ ಇಲ್ಲವೋ ತಂಗ್ಯಮ್ಮನ್ನ?" ಅಂದ. "ಅಯ್, ಹಳ್ಳ ಕಡಸಿ ಆಚೆಗೆ ಕಳಿಸಿಬಂದೆ. ನೋಡು, ನನ್ನ ತೊಡೆಯೆಲ್ಲಾ ನೀರಾಗ್ಯದೆ" ಅಂತ ತೊಡೆತೋರಿಸಿದ ಆ ಕಿಲಾಡಿ.

ಸಾಯಂಕಾಲ ಆರು ಬುಟ್ಕೊಂಡು ಮನೆಗೆ ಬಂದರು. "ಎಲ್ಲಿರ್ಲಾ ಮೊಗ ಅಮ್ಮಿ? ಹೊತ್ತಾರೆ ಹೊಲ್ತಾಕೆ ಊಟಾ ತಕ್ಕೊಂಡ್ ಹೋದೋಳು ಇನ್ನೂ ಬರಲೇ ಇಲ್ಲವಲ್ಲ. ಅಲ್ಲಿ ಏನು ಕೆಲಸ ಮಾಡಿಸ್ತಾ ಇದ್ರಿ?" ಅಂದಳು ತಾಯಿ. ದೊಡ್ಡಣ್ಣನಿಗೆ ದೊಡ್ಡ ಜೀವವೇ ಹೋಯ್ತು. "ಆಗಲೇ ಬಂದ್ಲಲ್ಲವ್ವಾ? ಚಿಕ್ಕ ಬಂದು ಹಳ್ಳಕಡಸಿ ಕಳಿಸಿಬಂದ" ಅಂದ. ಚಿಕ್ಕನೂ "ಹೂ ಕನಪ್ಪ ನಾನು ಹಳ್ಳ ಕಡಸಿ ಊರು ಗಂಟ್ಲೂ ಕಳಿಸಿಹೋದೆ" ಅಂದ. ಎಲ್ಲರಿಗೂ ದಿಕ್ಕೇ ತೋರದಂತಾಯಿತು. ಅವ್ವ "ಅಯ್ಯೋ ನನ್ಮಗಳೇ" ಅಂತ ಎದೆಎದೆ ಬಡಿದುಕೊಂಡು ಅತ್ತಳು.

ರಾತ್ರಿ ಆಯ್ತು, ಬೆಳಗಾಯ್ತು ತಂಗಿ ಬರಲೇ ಇಲ್ಲ. ರಾತ್ರೆ ಒಬ್ಬರೂ ಕಣ್ಣಿಗೆ ಕಣ್ಣು ಹತ್ತಿಸಲಿಲ್ಲ. ಮಸುವು ಹರಿದಿದ್ದೇ ತಡ. ಅಣ್ಣ, ತಮ್ಮಂದಿರಿಬ್ಬರೂ ತಂಗಿ ಹುಡುಕಾಕೆ ಹೊರಟರು. ತಾಯಿ ಹಿರೀಮಗನಿಗೆ ಬಿಸಿಬಿಸಿ ಅನ್ನ, ಸೊಗಸಾದ ಎಮ್ಮೆ ಹಳಿಮೊಸರು ಬುತ್ತಿಕಟ್ಟಿಕೊಟ್ಟಳು. ಕಿರಿಮಗನಿಗೆ ಕರಿಸೀಕು ರೊಟ್ಟಿ ಬುತ್ತಿ ಕಟ್ಟಿಕೊಟ್ಟಳು. ಇಬ್ಬರೂ ಹೊರಟರು. ಅಲ್ಲಿ ಹುಡುಕಿದರು. ಇಲ್ಲಿ ಹುಡುಕಿದರು. ಎಲ್ಲೆಲ್ಲಿ ಹುಡುಕಿದರೂ ಹುಡುಗಿ ಸುಳಿವೇ ಸಿಕ್ಕಲಿಲ್ಲ. ಅಲೆದೂ ಅಲೆದೂ ಸಾಕಾಗಿ ಸತ್ತುಗೆಟ್ಟು ಹೊಟ್ಟೆ ಹಸಿದು ಒಂದು ಕಡೆ ಹತ್ರಕ್ಕೆ ಬಂದು ಕೂತುಗೊಂಡರು. ಕೈ ಕಾಲು ಮೊಖ ತೊಳೆದುಕೊಂಡು ಬುತ್ತಿ ಉಣ್ಣೊಕೆ ಕೂತುಗೊಂಡರು. ಇಬ್ರೂ ಬುತ್ತಿ ಬಿಚ್ಚಿದರು. ಹಿರಿಯವನ ಬಿಸಿಬಿಸಿ ಅನ್ನ ಮೊಸರಿನ ಬುತ್ತಿ ಹಳಸಿಹೋಗಿತ್ತು. ಕಿರಿಯವನದು ಚೆನ್ನಾಗೇ ಇತ್ತು. ಹಿರಿಯವನಿಗೆ ಪೀಕಲಾಟಕ್ಕೆ ಬಂತು. ಹೊಟ್ಟೆ ತಾಳ ಹಾಕಾಕೆ ಸುರುಮಾಡ್ತು. ಅವನು "ಲೋ ಲೋ ಚಿಕ್ಕ, ಹೊಟ್ಟೆ ಹಸಿದು ಸಾಯೋಹಂಗೆ ಆಯ್ತಾ ಅದೆ ಕನ್ಲಾ. ಒಂದು ಚೂರು ನೀರು ರೊಟ್ಟಿ ಕೊಡ್ಲಾ" ಅಂತ ತಮ್ನ್ನ ಗೋಗರೆದ. ಅವನು ಕಿಲಾಡಿ. ಇದೇ ಸಮಯ ಅಂತ "ಅವ್ವ ಹಿರೀಮಗ ಅಂತ ಪ್ರೀತಿಯಿಂದ ಬುತ್ತಿ ಕಟ್ಟಿಕೊಟ್ಟಿದ್ಲಲ್ಲಾ, ಉಣ್ಣು ಈಗ" ಅಂತ ಹಂಗಿಸಿದ. ಹಿರಿಯವನು ದಮ್ಮಯ್ಯ ದತ್ತಯ್ಯ ಅಂದ. ಕೊನೆಗೆ ಕಿರಿಯವನು "ನಾನು ಹೇಳಿದಂಗೆ ಕೇಳೋದಾದ್ರೆ ಕೊಡ್ತೀನಿ" ಅಂದ. "ನೀನು ಹೇಳಿದಂಗೇ

ಕೇಳ್ತೀನಿ ಕನೋ. ನಿನ್ನ ದಮ್ಮಯ್ಯಾ ಕೊಡೋ'' ಅಂತ ಅಣ್ಣ ಬಣಗಿದ. ಸರಿ, ಒಂದಿಷ್ಟು ಕರಿ ಸೀಕು ಒಣರೊಟ್ಟಿ ಕೊಟ್ಟ. ಇಬ್ಬರೂ ತಿಂದು ನೀರು ಕುಡಿದು ಹೊರಟರು.

ಹೋಗ್ತಾ ಹೋಗ್ತಾ ದಾರೀಲಿ ಒಂದು ದೊಡ್ಡ ತೊಲೆ ಬಿದ್ದಿತ್ತು. "ಅಣ್ಣ ಅಣ್ಣ ಇದನ್ನು ಹೊತ್ಕೋ'' ಅಂದ ತಮ್ಮ. "ಲೋ ಯಾತ್ಕೋ ಚಿಕ್ಕ ಇದೆಲ್ಲಾ. ಸುಮ್ಮನೆ ನಡಿಯೋ'' ಅಂದ ಅಣ್ಣ. "ನಾನು ಹೇಳಿದಂಗೆ ಕೇಳ್ತೀಯೋ, ನನ್ನ ಕರಿಸೀಕು ಒಣರೊಟ್ಟಿ ಕಕ್ತೀಯೋ'' ಅಂದ ತಮ್ಮ. ಅಣ್ಣ ಮರು ಮಾತಾಡದೆ ತೊಲೆ ಹೊತ್ತು ಕೊಂಡ. ಇನ್ನಷ್ಟು ದೂರ ಮುಂದಕ್ಕೆ ಹೋದರು. ಅಲ್ಲೊಂದು ಹಲುಬೆ ಬಿದ್ದಿತ್ತು. "ಅಣ್ಣ ಇದನ್ನು, ಹೊತ್ಕೋ'' ಅಂದ. "ಇವೆಲ್ಲಾ ಯಾಕೋ?'' ಅಂದ ಅಣ್ಣ. "ನೀನು ಸುಮ್ಮನೆ ನಾನು ಹೇಳಿದಂಗೆ ಕೇಳ್ತೀಯೋ, ಇಲ್ಲ ನನ್ನ ಕರಿಸೀಕು ಒಣರೊಟ್ಟಿ ಕಕ್ತೀಯೋ?'' ಅಂದ ತಮ್ಮ. ಸರಿ, ಅಣ್ಣ ಅದನ್ನೂ ಹೊತ್ಕೊಂಡ. ಮುಂದಕ್ಕೆ ಹೋದರು ಅಲ್ಲೊಂದು ಕತ್ತೆ ನಿಂತಿತ್ತು. ಅದನ್ನ ನೋಡಿದ ತಕ್ಷಣ ತಮ್ಮ "ಅಣ್ಣ, ಈ ಕತ್ತೆ ಹಿಡಕೊಂಡು ನಡಿ'' ಅಂದ.

"ನಿಂದೊಳ್ಳೆ ಕಾಟ ಕನೋ. ಇವೆಲ್ಲ ಏನ್ ಮಾಡಾಕೋ?'' ಅಂದ ಅಣ್ಣ ರೇಗಿ.

"ನಿಂಗ್ಯಾಕೆ ಅದೆಲ್ಲಾ. ನಾನು ಹೇಳಿದಂಗೆ ಕೇಳೋದಿದ್ರೆ ಕೇಳು. ಇಲ್ದೆ ಇದ್ರೆ ನನ್ನ ಕರಿಸೀಕು ಒಣರೊಟ್ಟಿ ಕಕ್ಕು'' ಅಂದ ತಮ್ಮ.

ವಿಧಿಯಿಲ್ಲದೆ ಅಣ್ಣ ಅದನ್ನೂ ಹೊತ್ತುಕೊಂಡ. ಮುಂದಕ್ಕೆ ಹೋದರು. ಅಲ್ಲೊಂದು ಜೀರುದುಂಬೆ ಬಂತು. "ಅಣ್ಣಾ, ಇದ ಹಿಡಕೊಂಡು ಜೇಬಿಗೆ ಹಾಕ್ಕೋ'' ಅಂದ. ಸರಿ, ಅಣ್ಣ ಅದನ್ನೂ ಹಿಡಕೊಂಡು ಜೇಬಿಗೆ ಹಾಕಿಕೊಂಡ. ಮುಂದಕ್ಕೆ ಹೋದರು. ಕಾಡಿನ ಒಳಗೆ ಒಂದು ಸೂಜಿಗಾತ್ರ ಹೊಗೆ ಕಡೀತಾ ಇತ್ತು. "ಅಲ್ಲಿಗೆ ಹೋಗಾನೆ'' ಅಂದುಕೊಂಡು ಹೋದರು. ಆ ಕಾಡಿನಲ್ಲಿ ಅದೊಂದೇ ಮನೆ. ಸುತ್ತ ಮುತ್ತ ಒಂದು ನರಪಿಳ್ಳೆಯೂ ಇಲ್ಲ. ಹೋಗಿ ಕದ ತಟ್ಟಿದರು. ಬಾಗಿಲು ತಗೀತು. ನೋಡ್ತಾರೆ, ತಂಗೀನೇ! ಮೂರು ಜನಕ್ಕೂ ಅಪರಿಮಿತ ಸಂತೋಷವಾಯಿತು. ಹುಡುಗಿ ತಕ್ಷಣ ಬಾಗಿಲು ಹಾಕಿಕೊಂಡಳು. ಒಳಗೆ ಕೂರಿಸಿ ಬೇಕುಬೇಕಾದ ಊಟಹಾಕಿದಳು. ಆ ಮೇಲೆ "ನೀವು ಬೇಗ ಬೇಗ ಹೊರಟು ಹೋಗಿ. ಇದು ರಾಕ್ಷಸನ ಮನೆ. ಅದು ಬಂದರೆ ನಿಮ್ಮನ್ನು ಒಂದೇ ಸಾರಿಗೆ ನುಂಕೊಂಡು ಬುಡ್ತದೆ'' ಅಂದಳು. "ಇಲ್ಲಾ ಇಲ್ಲಾ ನಾವು ಹೋಗೋದಿಲ್ಲ. ಅದೇನ್ ಮಾಡ್ತದೋ ನೋಡಾನೆ'' ಅಂದ ಕಿರಿಯೋನು. ಅವಳಿಗೆ ಉಭಯ



ಸಂಕಟವಾಯಿತು. "ಈಗ ಅದು ಬರೋ ಹೊತ್ತಾಯ್ತು. ನೀವು ಅಟ್ಟದ ಮೇಲೆ ಕೂತುಕೊಂಡ್ ಬುಡಿ. ಆ ಮೇಲೆ ನೋಡಾನೆ'' ಅಂದಳು. ಸರಿ, ಇಬ್ಬರೂ ಅಟ್ಟದ ಮೇಲೆ ಹತ್ತಿದರು. ತೊಲೆ ಹಲುಬೆ ಕತ್ತೆ ಎಲ್ಲಾನೂ ಮೇಲಕ್ಕೆ ತಕ್ಕೊಂಡರು. ಅಷ್ಟು ಹೊತ್ತಿಗೆ ರಾಕ್ಷಸ ಹೊಟ್ಟೆ ಹಸಿದು ಬಂದ್‌ಬುಡ್ತು.

"ಇದೇನು ಮನುಷ್ಯರ ಗವಲು, ಮನುಷ್ಯರ ಗವಲು'' ಅಂತು.

"ಏನೂ ಇಲ್ಲ. ಊಟಾ ಮಾಡು'' ಅಂತ ಹೇಳಿ ಒಂದು ಖಂಡುಗದ ಅಕ್ಕಿ ಅನ್ನ ಮುಂದಕ್ಕೆ ರಾಶಿ ಹಾಕ್ತು. ದೊಡ್ಡ ದೊಡ್ಡ ಹಂಡೇಲಿ ಸಾರು ತಂದು ಸುರೀತು. ರಾಕ್ಷಸ ಒಂದೊಂದು ಮೂಡೆಗಾತ್ರ ತುತ್ತು ಮಾಡಿಕೊಂಡು ನುಂಗಾಕೆ ಸುರುಮಾಡ್ತು.

ಅಟ್ಟದ ಮೇಲಿದ್ದ ತಮ್ಮನಿಗೆ ಒಂದ ಮಾಡೋಹಂಗಾಯ್ತು. "ಅಣ್ಣ ಅಣ್ಣ ಒಂದ ಮಾಡಬೇಕು ಕನೋ'' ಅಂದ. ಅಣ್ಣನಿಗೆ ಬಾಳ ಭಯವಾಗೋಯ್ತು. "ನಿನ್ನ ಮನೆ ಕಾಯ್ವಾಗ ರಾಕ್ಷಸ ಇಲ್ಲೇ ಅದೆ ಕನೋ. ನಮ್ಮ ಸುಮ್ನೆ ಬುಟ್ಟಾತ?'' ಅಂದ. ಆದ್ರೂ ಅವನು ಕೇಳಲೇ ಇಲ್ಲ. ಮೆತ್ತಗೆ ಒಂದ ಮಾಡೇ ಬುಟ್ಟ. "ಇದೇನು ಇದೇನು'' ಅಂತ ಕೂಗ್ತು ರಾಕ್ಷಸ.

"ಏ ಅಟ್ಟದ ಮೇಲೆ ಎಣ್ಣೆಗಡಿಗೆ ಉಂಟಿಕೊಂಡಿರಬೇಕು'' ಅಂದಳು ಹುಡುಗಿ.

ಸ್ವಲ್ಪ ಹೊತ್ತಾದ ಮೇಲೆ ಚಿಕ್ಕ ಮೆತ್ತಗೆ ಪದ ಹೇಳಾಕೆ ಸುರುಮಾಡಿದ.

"ಇದ್ಯಾರು, ಇದ್ಯಾರು ಅಟ್ಟದ ಮೇಲೆ'' ಅಂತ ಗರ್ಜಿಸಿದ ರಾಕ್ಷಸ.

"ನಾನು ನಿನಗಿಂತ ದೊಡ್ಡ ರಾಕ್ಷಸ. ಹಾಂ'' ಅಂತ ಜೋರಾಗಿ ಕಿರುಚಿದ ಚಿಕ್ಕ.

"ಎಲ್ಲಿ ನಿನ್ನ ಆಕಲು ತೋರ್ಸು'' ಅಂತು ರಾಕ್ಷಸ. ಚಿಕ್ಕ ತೊಲೆ ತೋರಿದ. ರಾಕ್ಷಸನಿಗೆ ಭಯವಾಯಿತು.

"ಎಲ್ಲಿ ನಿನ್ನ ಹಲ್ಲು ತೋರ್ಸು'' ಅಂತು ರಾಕ್ಷಸ. ಚಿಕ್ಕ ಹಲುಬೆ ತೋರಿದ. ರಾಕ್ಷಸನಿಗೆ ಇನ್ನೂ ಭಯವಾಯಿತು. "ಎಲ್ಲಿ ನಿನ್ನ ದನಿ ತೋರ್ಸು'' ಅಂತು ರಾಕ್ಷಸ.

ಚಿಕ್ಕ ಜೀರುದುಂಬೆ ತೆಗೆದು ಕತ್ತೆಯ ಕಿವಿವಳಕ್ಕೆ ಬುಟ್ಟ. ಅದು "ಹೊ ಹೊ ಹೊ ಹೋ'' ಅಂತ ಕಿವಿ ಮರಗಟ್ಟುವ ಹಂಗೆ ಕಿರಿಚಿಕೊಳ್ತು. ರಾಕ್ಷಸನಿಗೆ ಮೈಯೆಲ್ಲಾ ಬೆವತು ಹಿಂದೆ ಮುಂದೆ ಎಲ್ಲಾ ಆಗ್ಹೋಯ್ತು. "ಇವನು ನನಗಿಂತ ದೊಡ್ಡ ರಾಕ್ಷಸ. ಇವನು ನನ್ನ ಬುಡೋದಿಲ್ಲ ಇಲ್ಲಿದ್ರೆ'' ಅಂದುಕೊಂಡು ಬಿದ್ದಂಬೀಳ

ಓಡಿ ಹೊರಟು ಹೋಯಿತು.

ಚಿಕ್ಕ ಅವರಣ್ಣ ಇಬ್ರೂ ಅಟ್ಟದಿಂದ ಕೆಳಕ್ಕೆ ಇಳಿದರು. ಮನೇಲಿದ್ದ ಬೆಳ್ಳಿ ಬಂಗಾರ ಎಲ್ಲಾನೂ ಗಂಟು ಮೂಟೆ ಕಟ್ಟಿ ಹೊತ್ತುಕೊಂಡರು. ತಂಗೀ ಕರಕೊಂಡು ಊರಿಗೆ ಹೋಗಿ ಸುಖವಾಗಿದ್ದರು.

* * * *



# ಬೆನ್ನ ಹಿಂದೆ ಬಂದ ಭಾಗ್ಯ*

ಒಬ್ಬ ದೊರೆ. ಅವನಿಗೆ ಆರುಜನ ಗಂಡುಮಕ್ಕಳು. ಕಡೆಯಮಗು ಹುಟ್ಟಿದಾಗ ಹೆಂಡತಿ ಶಿವನ ಪಾದ ಸೇರಿದಳು. ಆದ್ದರಿಂದ ಇನ್ನೊಬ್ಬಳನ್ನು ಮದುವೆಯಾದ. ತಾಯಿಯಿಲ್ಲದ ಆ ಗಂಡು ಮಕ್ಕಳು ಒಂದು ದಿನಕ್ಕೆ ಒಂದು ತಿಂಗಳವರಂತೆ, ಒಂದು ತಿಂಗಳಿಗೆ ಒಂದು ವರ್ಷದವರಂತೆ ಬೆಳೆದರು. ಬಾಳೆ ಸುಳಿಯಂತೆ ಹೊರವಾಗಿ ಗಣೆಮರದಂತೆ ಎತ್ತರವಾಗಿ ನೇಗಿಲ ಮುಂಡಿನಂತೆ ದಿಂಬಾಗಿ ಬೆಳೆದು ನಿಂತ ಮಕ್ಕಳಿಗೆ ಮದುವೆ ಮಾಡಿ ಕಣ್ತುಂಬ ನೋಡಬೇಕೆಂದು ರಾಜನಿಗೆ ಮನಸ್ಸಾಯಿತು. ಮಂತ್ರಿಯನ್ನು ಜೊತೆಯಲ್ಲಿ ಕರೆದುಕೊಂಡು ತಾನೇ ಹೆಣ್ಣನ್ನು ಹುಡುಕುವುದಕ್ಕೆ ಹೊರಟ. ಹತ್ತಾರು ಊರುಕೇರಿಗಳನ್ನ ತಿರುಗಿ ಒಂದು 'ಮಹಾಂತ' ಅರಣ್ಯದ ದಾರಿಯಲ್ಲಿ ಹೋಗುತ್ತಿದ್ದ. ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಆರು ಜನ ಹೆಣ್ಮು ಮಕ್ಕಳನ್ನು ಮಾತ್ರವೇ ತನ್ನ ಆರು ಮಕ್ಕಳಿಗೂ ತರಬೇಕೆಂದೂ ಮನಸ್ಸಿನಲ್ಲಿ 'ದಿಟ್ಟ' ಮಾಡಿಕೊಂಡಿದ್ದರಿಂದ ಅಂಥ ಹೆಣ್ಣು ಮಕ್ಕಳು ಅವನಿಗೆ ಸಿಕ್ಕುವುದು ಕಷ್ಟವಾಯಿತು.

ಇನ್ನೊಂದು ದೇಶದ ಇನ್ನೊಬ್ಬ ರಾಜನಿಗೆ ಆರು ಜನ ಹೆಣ್ಮು ಮಕ್ಕಳು. ಅವನೂ ಸಹ ಒಂದೇ ತಾಯಿ ಹೊಟ್ಟೆಯಲ್ಲಿ ಹುಟ್ಟಿದ ಆರು ಜನ ಗಂಡು ಮಕ್ಕಳಿಗೇ ಕೊಡಬೇಕೆಂದು 'ದೃಢ' ಮಾಡಿಕೊಂಡು ಗಂಡುಗಳನ್ನು ಹುಡುಕುತ್ತಾ ಹೊರಟಿದ್ದ. ಇಬ್ಬರೂ ಕಾಡಿನಲ್ಲಿ 'ಮೊಖ್ತ' ಸೇರಿದರು. ಒಬ್ಬರಿಗೊಬ್ಬರು ತಾವು ಬಂದ ಸಮಾಚಾರವನ್ನು ಹೇಳಿಕೊಂಡರು. ಇಬ್ಬರಿಗೂ ಅಮೃತ ಕುಡಿದಷ್ಟು ಸಂತೋಷವಾಯಿತು. ತಾವಿಬ್ಬರೂ ಬೀಗರಾಗುವುದಕ್ಕೆ ಒಪ್ಪಿಕೊಂಡು ಒಂದು 'ಸಿರೇಷ್ಟ' ವಾದ ಮುಹೂರ್ತವನ್ನ ನಿಗದಿಮಾಡಿಕೊಂಡು ಹಿಂತಿರುಗಿದರು.

* * * * *

ಆರು ಹೆಣ್ಣು ಮಕ್ಕಳ ತಂದೆಯಾದ ದೊರೆ ಆ ಮಕ್ಕಳು ಹುಟ್ಟುವುದಕ್ಕಿಂತ ಮುಂಚೆ ತನಗೆ ಹೆಣ್ಣುಮಕ್ಕಳಾದರೆ 'ನಿನ್ನ ಮಗನಿಗೇ ಕೊಡುತ್ತೇನೆ' ಎಂದು ತನ್ನ

---

* ಹೇಳಿದವರು : ಕೃಷ್ಣ ರಾಜನಗರದ ತಾಲ್ಲೂಕು ಚನ್ನಂಗೆರೆಯ ರಾಮೇಗೌಡ.

'ಕಿತ್ತರೆ ಬರದಂತ' ಒಬ್ಬ ಸ್ನೇಹಿತನಿಗೆ ಹೇಳಿದ್ದನು. ಈಗ ಬೇರೊಬ್ಬರಿಗೆ ಹೆಣ್ಣು ಕೊಡಲು ನಿಶ್ಚಯವಾದುದರಿಂದ ಆತ ಬಂದು ಈ ರಾಜನ ಜೊತೆಯಲ್ಲಿ 'ನೆವರಿ' ಗಲಾಟೆ ಮಾಡಿ ದುಮುದುಮನೆ ಕುಣಿದ. 'ಆಡಿದ ಮಾತು ಉಳಿಸ್ಕೊಳ್ದೇ ಇದ್ರೆ ಆದೇನು ನಾಲಗೆನೋ ಯಕ್ಕಡದ ಅಟ್ಟೆಯೋ' ಎಂದು ರೇಗಾಡಿದ. ಇಂಥ ಮಣ್ಣು ತಿನ್ನುವ ಕೆಲಸವನ್ನು ದೊರೆ ಮಾಡಬಾರದೆಂದು ನೆವರಾಡಿದ. ಇನ್ನು ಯಾವ ಉಪಾಯವನ್ನೂ ಕಾಣದೆ ದೊರೆ ಹೀಗೆಂದು ಹೇಳಿದ:

"ನೀನೂ ಅವರೂ ಯುದ್ಧಮಾಡಿ. ಗೆದ್ದೋರು ನನ್ನ ಮಕ್ಕಳ್ನ ಮದುವೆಯಾಗಿ. ಇದು ಬುಟ್ಟು ಬ್ಯಾರೆ ಮಾತೇ ಬ್ಯಾಡ. ಸೀರೆ ಉಟ್ಟಿದ್ರೆ ಮನೇಲಿರು ........ ಮೀಸಿದ್ರೆ ಯುದ್ಧ ಮಾಡಿ ಗೆಲ್ಲು" ಎಂದು ಸವಾಲು ಹಾಕಿದ. ಇದಕ್ಕೆ ಅವನೂ "ಹಂಗೇ ಆಗಲಿ" ಅಂತ ಒಪ್ಪಿಕೊಂಡ. ವಸಿ ಜನವನ್ನು ಕರೆದುಕೊಂಡು ಆರುಜನ ಮದುವಣದಿರನ್ನು ಪಲ್ಲಕ್ಕಿಯಲ್ಲಿ ಕುಂಡರಿಸಿಕೊಂಡು ಆ ರಾಜ ಮದುವೆಗೆ ವೈಭವದಿಂದ ಬಂದ. ಇವರು ಬಂದ ಮೇಲೆ ಹಿಂದೆ ನಡೆದಿದ್ದ ಷರತ್ತು ಗೊತ್ತಾಯಿತು. ಆ ರಾಜನ ಮಗ 'ದಂಡಾದಾಳಿ' ಇವರ ಮೇಲೆ ಮುತ್ತಿಗೆ ಹಾಕಿದ. ಬಾಳೆಮರ ಕೊಚ್ಚುವಂತೆ ಎಲ್ಲರನ್ನೂ ಒಂದು ಕಡೆಯಿಂದ ಕೊಚ್ಚಿಹಾಕಿದ. ಕಿರಿಯ ಮಗನೂ ಕಿರಿಯ ಹೆಂಡತಿಯೂ ಹೇಗೋ ತಪ್ಪಿಸಿಕೊಂಡು ಕಾಲಿಗೆ ಬುದ್ಧಿ ಹೇಳಿದರು.

ಇಬ್ಬರೂ ಓಡಿ ಓಡಿ ಸುಸ್ತಾಗಿ ಒಂದು ಕಾಡಿಗೆ ಬಂದರು. ಅಲ್ಲಿ ಕಾ ಅನ್ನೊ ಕಾಗೆ ಇಲ್ಲ, ಗೂ ಅನ್ನೋ ಗೂಬೆಇಲ್ಲ. ಅತ್ತಿತ್ತ ನೋಡುತ್ತಾ ಏದುಸುರು ಬಿಡುತ್ತಾ ಇಬ್ಬರೂ ನಡೆದರು. ಅಲ್ಲೊಂದು ದೊಡ್ಡ ಮನೆಯಿತ್ತು. ಇಬ್ಬರೂ ಅಲ್ಲಿಗೆ ಹೋದರು. ರಾಜಕುಮಾರ ಒಂದು ಮೊಲವನ್ನು ಹೊಡೆದುತಂದ. ಇಬ್ಬರೂ ಬೇಯಿಸುತ್ತಾ ಕುಳಿತರು. ಇದ್ದಕ್ಕಿದ್ದಂತೆ ಎಲ್ಲಿಂದಲೋ ಗವಲು ವಾಸನೆ ಮೂಗಿಗೆ ಬಡಿಯಿತು. ಕತ್ತೆತ್ತಿ ದೂರ ನೋಡಿದಾಗ ಒಂದು ದೊಡ್ಡ ರಾಕ್ಷಸ ಬರುತ್ತಿರುವುದು ಕಾಣಿಸಿತು. ರಾಜಕುಮಾರ ಮತ್ತು ರಾಣಿ ಇಬ್ಬರೂ ಬಾಗಿಲಿನ ಮೂಲೆಯಲ್ಲಿ ಅವಿತುಕೊಂಡರು. ರಾಕ್ಷಸ ಒಳಗೆ ತಲೆಹಾಕುತ್ತಿದ್ದ ಹಾಗೆಯೇ ರಾಜಕುಮಾರ ಚಂದ್ರಾಯುಧದಿಂದ ಬೀಸಿ ಹೊಡೆದ. 'ಹಾಽಽ' ಎಂದು ಕಾಡೆಲ್ಲಾ ಕಿತ್ತು ಹೋಗುವಂತೆ ಅರಚುತ್ತಾ ರಾಕ್ಷಸ ಓಡಿಹೋಯಿತು. ಮನೆಯಲ್ಲೆಲ್ಲಾ 'ನತ್ತರ' ಹರಿಯಿತು. ಅದು ಇನ್ನು ಸತ್ತೇ ಹೋಗುತ್ತದೆಂದು ತಿಳಿದು ಇಬ್ಬರೂ ನಿಶ್ಚಿಂತೆಯಿಂದ ಇದ್ದರು.



## ೨

ಒಂದು ದಿನ ರಾಜಕುಮಾರ ಎಲ್ಲಿಯೋ ಹೋಗಿದ್ದ. ರಾಣಿಯೊಬ್ಬಳೇ ಮನೆಯಲ್ಲಿದ್ದಳು. ಆ ಸಮಯ ನೋಡಿ ರಾಕ್ಷಸ ಒಳನುಗ್ಗಿತು. ಅವಳು ಗಾಬರಿಯಾಗಿ ಕೂಗಿಕೊಳ್ಳುವಾಗ ಅದು ಕೆಂಡದಂಥ ಕಣ್ಣುಗಳನ್ನು ಬಿಡುತ್ತಾ ಗವಿಯಂತೆ ಬಾಯಿ ಬಿಟ್ಟು ಮೊಳದುದ್ದದ ಕೋರೆಹಲ್ಲುಗಳನ್ನು ಚಾಚಿತು. ಒಂದು ಮಾರುದ್ದವಿದ್ದ ನಾಲಿಗೆಯನ್ನು ಹಿರಿದು 'ಆಽಽ' ಎನ್ನುತ್ತಾ ತನ್ನ ತೆಂಗಿನಮರದಂಥ ಕೈಯನ್ನು ಚಾಚಿ ಅವಳ ಬಾಯನ್ನು ರಪ್ಪೆಂದು ಮುಚ್ಚಿತು. 'ಕೂಕ್ಕೊಂಡ್ರೆ ಒಂದೇ ಸತಿಗೆ ತಿಂದು ಅಗದು ಹಾಕ್ಬುಡ್ತೀನಿ. ಆ ಗಂಡ್ಸನ್ನ ಕೊಂದ್ ಹಾಕ್ಬುಡಾನೆ. ಅದ್ಕೆ ನೀನು ಸಾಯಮಾಡು. ಆಮ್ಯಾಲೆ ನೀನೂ ನಾನೂ ಗಂಡ ಹೆಂಡ್ತಿ ಆಗನೆ, ತಿಳಿತಾ. ಇದೇನಾದ್ರು ಅವನ್ಗೆ ಹೇಳಿದ್ರೆ ಹಿಸ್ಕಿ ಹಿಪ್ಪೆಮಾಡ್ತೀನಿ. ಹೂಂ" ಎಂದಿತು. ಅವಳು ಹೆದರಿ ಗಡಗಡನೆ ನಡುಗುತ್ತಾ ಒಪ್ಪಿಕೊಂಡಳು.

ರಾಜಕುಮಾರ ಬರುವಹೊತ್ತಿಗೆ ರಾಣಿ ಕೊರಗುತ್ತಾ ನರಳುತ್ತಾ ಮಲಗಿದ್ದಳು. "ಇದ್ಯಾಕವ್ವಾ?" ಎಂದು ಅವನು ಕೇಳಿದ.

"ಅಯ್ಯೋ ನಂಗೆ ಹೊಟ್ಟೆ ಸೂಲ ಕನಪ್ಪಾ ..... ನನ್ನ ಪರಾಣ ಹೋಯ್ತಾ ಅದೆ. ಬಿರ್ನೆ ಏನಾರೂ ಮಾಡಪ್ಪಾ" ಎಂದಳು.

"ಏನ್ಮಾಡ್ಬೇಕು ಹೇಳವ್ವ"

"ಹುಲಿಹಾಲು ಕುಡಿದ್ರೆ ಇದು ಹುಸಾರಾಯ್ತದೆ. ನಿಮ್ಮಪ್ಪ ಹಿಂದೆ ತಂದ್ಕೊಡ್ತಿದ್ರು ಬಿರ್ನೋಗಿ ತಕ್ಕೊಂಬಾಪ್ಪ. ಅಯ್ಯೋ" – ಎಂದು ರಾಕ್ಷಸ ಹೇಳಿಕೊಟ್ಟಿದ್ದ ಹಾಗೆ ಹೇಳಿದಳು.

"ಈಟೆ ತಾನೇ, ಅದೇನ್ ಮಾ ಬುಡು ತಕ್ಕೊಂಬತ್ತೀನಿ ಒಂದ್ ಹಾರ್ತದಲ್ಲಿ" – ಎಂದು ಹೇಳಿ ರಾಜಕುಮಾರ ಹೊರಟು ಹೋದ.

ಅರ್ಧದಾರಿಗೆ ಹೋದಮೇಲೆ ಮಳೆ ಸಿಕ್ಕಾಬಟ್ಟೆ ಚಚ್ಚಿಬಿಟ್ಟಿತು. ನೆಲ ಮುಗಿಲು ಏನೂ ಕಾಣದಂತೆ, ಒಂದೇ ಸಮನೆ ಆನೆ ಸೊಂಡಿಲಲ್ಲಿ ನೀರು ಬೀಳುವಂತೆ ಮಳೆ ಹುಯ್ಯಿತು. ಮಳೆ ಬಿಟ್ಟ ಮೇಲೆ ದೊರೆಮಗ ಮುಂದಕ್ಕೆ ಹೋದ. ಒಂದು ಹಳ್ಳದಲ್ಲಿ ಮೂರು ಹುಲಿಮರಿಗಳು ಕೊಚ್ಚಿಕೊಂಡು ತೇಲಿ ಹೋಗುತ್ತಿದ್ದವು ಹೋಗಿ ಅವುಗಳನ್ನು ಬಾಚಿ ತಬ್ಬಿಕೊಂಡು ದಡಕ್ಕೆ ತಂದುಬಿಟ್ಟ. ಅವು ತುಂಬ ಪ್ರೀತಿಯಿಂದ ಅವನಿಗೆ ಕೈಮುಗಿದು ಹೇಳಿದವು:

"ಪುಣ್ಯಾತ್ಮ, ಸಮಯಕ್ಕೆ ಸರಿಯಾಗಿ ನೀನು ಬರದೆ ಇದ್ರೆ ಈಟೊತ್ಗೆ ಶಿವನಪಾದ ಸೇರ್ಬುಡ್ತಿದ್ದೆವು. ನಮ್ಮ ದೇವರಂಗೆ ಬಂದು ನೀನು ನಮ್ಮ ಪರಾಣ

ಉಳಿಸ್ದೆ. ನಿಂಗೇನು ಬೇಕು ಹೇಳು.”

“ನಂಗೇನೂ ಬ್ಯಾಡಿ. ನಮ್ಮ ಚಿಕ್ಕವ್ವನಿಗೆ ತುಂಬಾ ಹೊಟ್ಟೆಸೂಲ. ಅದ್ಕೆ ಹುಲಿಹಾಲು ಬೇಕಂತೆ. ಅದ ತಂದ್ಕೊಟ್ರೆ ಸಾಕು ನಂಗೆ. ಇನ್ನೇನೂ ಬ್ಯಾಡಿ”.

“ಈಟೆ ತಾನೆ, ಒಂದೇ ಚಣದಲ್ಲಿ ತಂದ್ಕೊಡ್ತೀವಿ” ಎಂದು ಹೇಳಿ ಅವನಿಂದ ಮುತ್ತುಗದ ಎಲೆಯ ಒಂದು ‘ಗಿಂಜಲ’ನ್ನು ಕಟ್ಟಿಸಿಕೊಂಡು ತಮ್ಮ ತಾಯ ಹತ್ತಿರಕ್ಕೆ ಹೋದವು. ಅದರ ತುಂಬಾ ಹಾಲನ್ನು ತಂದುಕೊಟ್ಟವು.

“ನಾವೂ ನಿನ್ಜೊತೇಲೆ ಬತ್ತೀವಿ. ನೀನು ನಮ್ಮ ಪರಾಣ ಕೊಟ್ಟೋನು” – ಎಂದವು. ಅವನು ಎಷ್ಟು ಹೇಳಿದರೂ ಕೇಳದೆ ಅವನ ಹಿಂದೆಯೇ ಬಂದವು. ಹಾಲನ್ನು ಚಿಕ್ಕವ್ವನಿಗೆ ತಂದುಕೊಟ್ಟ. ಅವಳು ಅವನು ಹುಲಿಯ ಬಾಯಿಯಿಂದ ಬದುಕಿ ಬಂದುದಕ್ಕೆ ‘ಚೋಜಿಗ’ ಗೊಂಡಳು.

ಇನ್ನೊಂದು ದಿನ ರಾಜಕುಮಾರ ಮತ್ತು ಹುಲಿಮರಿಗಳು ಮನೆಗೆ ಬರುವ ಹೊತ್ತಿಗೆ ಮತ್ತೆ ಹೊಟ್ಟೆನೋವೆಂದು ಚಿಕ್ಕವ್ವ ಮಲಗಿದ್ದಳು.

“ಯಾಕೋ ಹುಲಿ ಹಾಲ್ಗೂ ಈಸತಿ ಹುಸಾರಾಗ್ನಿಲ್ಲ. ಆ ಕೆರೆತಾವ ಒಂದು ದೊಡ್ಡ ಹುಣಿಸೆ ಮರ ಅದೆ, ಅದರ ಚಿಗುರು ತಂದ್ಕೊಡು ನೋಡ್ತೀನಿ” – ಎಂದು ರಾಕ್ಷಸ ಹೇಳಿಕೊಟ್ಟುದನ್ನು ಹೇಳಿದಳು. ಅದನ್ನು ತರುವುದಕ್ಕೆ ಹುಲಿಮರಿಗಳನ್ನು ಜೊತೆಯಲ್ಲಿ ಕರೆದುಕೊಂಡು ಹೊರಟ, ಆ ದೊಡ್ಡ ಹುಣಸೆಮರ ಆಲಬ್ಬರವಾಗಿ ಬೆಳೆದಿತ್ತು. ಅದರ ಬುಡ ನೂರಾಳು ತಬ್ಬಿದರೂ ಸಾಕಾಗುತ್ತಿರಲಿಲ್ಲ. ಅಂಥ ಮರದ ಮೇಲೆ ಒಂದು ಬೊಮ್ಮ ರಾಕ್ಷಸ ವಾಸವಾಗಿತ್ತು. ದೊರೆಮಗ ಚಿಗುರು ಕುಯ್ಯಲು ಹೋದಾಗ ಅದು ‘ಹಾಽಽ’ ಎಂದು ಊರಗಲ ಬಾಯಿಬಿಟ್ಟಿತು. ತನ್ನ ಉದ್ದನೆಯ ನಾಲಿಗೆಯನ್ನು ಚಾಚಿ ಅವನನ್ನು ಎಳೆದುಕೊಂಡಿತು. ಅವನು ಎಷ್ಟು ಹೊಡೆದಾಡಿದರೂ ಬಿಡಲಿಲ್ಲ. ತಕ್ಷಣವೇ ಹುಲಿಮರಿಗಳು ಕಲ್ಲು ಗುಂಡುಗಳನ್ನು ತಂದು ಆ ರಾಕ್ಷಸನ ಕಿವಿಗೆ ಹಾಕಿ ಹಿಂಡಿದವು ನೋವನ್ನು ತಡೆಯಲಾರದೆ ಅವನು “ಅಯ್ಯೊಯ್ಯೋ” ಬುಡ್ರೋ” ಅಂದ. “ನಮ್ಮ ಯಜಮಾನನನ್ನು ಬುಟ್‌ಬುಡು ಮತ್ತೆ” ಎಂದವು. ಆತ ಅವನನ್ನು ಬಿಟ್ಟುಬಿಟ್ಟ.

“ಅಯ್ಯಾ ........ ನೀನು ಮಹಾತ್ಮ ...... ನಿನ್ನ ನಾ ಕೊಲ್ಲಾಕಿಲ್ಲ. ನಾನೂ ನಿನ್ಜೊತೇಲೆ ಬಂದು ನಿನಗೆ ಯಾವ ಕಷ್ಟಾಬಂದ್ರೂ ಕಾಪಾಡ್ತೀನಿ” ಎಂದು ಹೇಳಿ ಅವನ ಜೊತೆಯಲ್ಲೇ ಬಂದ. ಹುಣಿಸೆ ಚಿಗುರನ್ನು ತಂದು ಚಿಕ್ಕವ್ವನಿಗೆ ಕೊಟ್ಟ. ಅವಳಿಗೆ ಮಗನ ‘ಸಾಸ’ ನೋಡಿ ತುಂಬಾ ‘ಆಚರ್ಯ’ವಾದರೂ ಅದನ್ನು ತೋರಗೊಡದೆ ಅವನನ್ನು ಕೊಂಡಾಡಿದಳು.



## ೩

ಚಿಕ್ಕರಾಕ್ಷಸನಿಗೆ ರಾಜಕುಮಾರ ಸಾಯದಿದ್ದರಿಂದ ತುಂಬಾ ಚಿಂತೆಯಾಯಿತು. ಏನು ಮಾಡಿದರೂ ಅವನು ಎಲ್ಲವನ್ನೂ ಹುಲ್ಲುಕಡ್ಡಿಗಿಂತ ಹಗುರವಾಗಿ ಉಗುರಲ್ಲಿ ಜಿಗುಟುವಷ್ಟು ಸುಲಭವಾಗಿ ಮಾಡಿ ಮುಗಿಸಿ ಗೆದ್ದಿದ್ದ, ಅವನು ಹೀಗೇ ಇದ್ದರೆ ಎಂದಾದರೊಂದು ದಿನ ತಾನು ಅವನ ಚಂದ್ರಾಯುಧಕ್ಕೆ ಬಲಿಯಾಗುವುದು ಖಂಡಿತವೆಂದು ಯೋಚಿಸಿ ಹೆದರಿದ. ಕೊನೆಯ ‘ಪರಿಯತ್ನ’ ಮಾಡಿ ನೋಡೋಣವೆಂದು ತನ್ನ ಉಪಾಯವನ್ನು ರಾಣಿಗೆ ತಿಳಿಸಿದ. ಇನ್ನೊಂದು ದಿನ ರಾಜ ಕುಮಾರ, ಹುಲಿಮರಿಗಳು ಮತ್ತು ರಾಕ್ಷಸ ಮೂರು ಜನವೂ ಮನೆಗೆ ಬಂದಾಗ, ಎಂದಿಗಿಂತಲೂ ಜೋರಾಗಿ ಅವಳು ನರಳುತಿದ್ದಳು. ಅವನು ಬಂದು ವಿಚಾರಿಸಿದ. ಅವಳು ಇನ್ನಷ್ಟು ಜೋರಾಗಿ ನರಳುತ್ತಾ.

“ಅಯ್ಯೋ ಈ ಹೊಟ್ಟೆನೋವು ನನ್ನ ಕುಂಡ್ ಹೋಗಾಕೆ ಬಂದದೇ ಅಂತ ಕಾಣ್ತದೆ. ನಿಂಗೆ ನಾನು ತುಂಬಾ ಹಿಂಸೆ ಕೊಟ್ಟೆ. ಇದೊಂದ್ ಸತಿ ಒಂದೌಸ್ತಿ ತಂದ್ಕೊಟ್ಬುಡು. ಆಮ್ಯಾಲೆ ಹ್ಯಂಗಾರೆ ಆಗ್ಲಿ” – ಎಂದಳು.

“ನೀನೇನೂ ಯೋಚ್ನೆಮಾಡಬೇಡ ಚಿಕ್ಕವ್ವ. ಅದೆಂತಾ ಔಸ್ತಿ ಆದ್ರೂ ಅದೆಲ್ಲಿದ್ರೂ ನಾ ತಂದ್ಕೊಡ್ತೀನಿ. ಒಟ್ಟಲ್ಲಿ ನಿಂಗೆ ಕಾಯ್ಲೆ ಗುಣ ಆದ್ರೆ ಸಾಕು. ಅದೇನು ಹೇಳು, ದೇವ್ರವ್ನೆ ಕಾಪಾಡ್ತಾನೆ”.

“ಏಳು ಸಮುದ್ರದಿಂದಾಚೆ ಒಂದು ಕೀಳು ಸಮುದ್ರ. ಅದರಾಚೆ ಒಂದು ದೊಡ್ಡ ಹುತ್ತ. ಅದರಲ್ಲಿ ಒಂದು ಹಕ್ಕಿ ಗೂಡ್ ಕಟ್ಕೊಂಡದೆ. ಅದ ನೀನು ತಂದುಕ್ಕೊಟ್ರೆ ಒಂದು ಚಿಟಿಕೆ ಹೊಡೆಯೋ ಹೊತ್ನಲ್ಲಿ ನನ್ನ ಕಾಯ್ಲೆ ವಾಸ್ಯಾಯ್ತದೆ. ಆಮ್ಯಾಲೆ ಹಾಯಾಗಿರ್ಬವುದು.”

ದೊರೆಮಗ ಹಿಂದು ಮುಂದು ನೋಡದೆ ‘ತಂದುಕೊಡ್ತೀನಿ’ ಎಂದು ಭಾಷೆಕೊಟ್ಟ. ಹೊರಗಡೆಯಿದ್ದ ರಾಕ್ಷಸನ ಬಳಿಗೆ ಬಂದು ನಡೆದುದನ್ನು ಹೇಳಿದ. ‘ನೀನೇನೂ ಸಿಂತೆಗಿಂತೆ ಮಾಡ್‌ಬ್ಯಾಡ, ನಾನಿವ್ನಿ ಬಾ’ ಎಂದು ಕರೆದುಕೊಂಡು ಹೋದ.

ಸಮುದ್ರದ ಹತ್ತಿರ ಬಂದ ಮೇಲೆ ಬೊಮ್ಮ ರಾಕ್ಷಸ ಒಂದು ದಡದ ಮೇಲೆ ಒಂದು ಕಾಲನ್ನೂರಿ ಇನ್ನೊಂದು ಕಾಲನ್ನು ಏಳು ಸಮುದ್ರದಾಚೆಯ ದಡದ ಮೇಲೆ ಊರಿ ‘ಭೂಮ್ಗೂ ಆಕಾಸ್ಕೂ’ ಒಂದೇ ಸಮನಾಗಿ ನಿಂತುಕೊಂಡ. ಹುಲಿಮರಿಗಳೂ ರಾಜಕುಮಾರನೂ ಅವನ ತೊಡೆಯ ಮೇಲೆ ಹತ್ತಿ ಇನ್ನೊಂದು ತೊಡೆಯ ಕಡೆಯಿಂದ ಕೆಳಕ್ಕೆ ಇಳಿದರು. ಅನಂತರ ರಾಕ್ಷಸ ತನ್ನ ಕಾಲುಗಳನ್ನು

ತೆಗೆದ. ಕೀಳು ಸಮುದ್ರವನ್ನೂ ಅದೇ ರೀತಿ ದಾಟಿದರು. ಸ್ವಲ್ಪ ದೂರ ನಡೆದ ಮೇಲೆ ತೆಂಗಿನ ಮರದ ಎತ್ತರ ವಿದ್ದ ದೊಡ್ಡ ಹುತ್ತ ಕಾಣಿಸಿತು. ಅದನ್ನು ಅಗೆದು ಅಲ್ಲಿದ್ದ ಹಕ್ಕಿಯನ್ನು ರಾಜಕುಮಾರ ಹಿಡಿದುಕೊಂಡ. ಅಷ್ಟು ಹೊತ್ತಿಗೆ ಸಂಜೆಯಾಯಿತು. ಎಲ್ಲರೂ ಬಳಲಿದ್ದರು. ಆದ್ದರಿಂದ 'ಜೊಂಪು' ಹತ್ತಿ ಅಲ್ಲೇ ಮಲಗಿದರು.

ಸಮಸಮ ಹೊತ್ತು. ಏನೋ ಭೋರಾಟ ಕೇಳಿಸಿತು. ಹುಲಿಮರಿಗಳು ಕಣ್ತೆರೆದು ನೋಡಿದವು. ರಾಕ್ಷಸ ಮತ್ತು ರಾಜಕುಮಾರ ಇಬ್ಬರೂ ಘನವಾಗಿ ಗೊರಕೆ ಹೊಡೆಯುತ್ತಾ ಮೈಮೇಲೆ 'ಗ್ಯಾನ' ವಿಲ್ಲದೆ ಮಲಗಿದ್ದರು. ಸೂರ್ಯ ಮೂಡಿದಂತೆ ಬೆಳಗಾಯಿತು. ಇದೇನೆಂದು ಅವು ನೋಡುವಾಗ ಏಳು ಹೆಡೆಯ ಒಂದು ಘಟ ಸರ್ಪ ಭೋರಾಡಿಕೊಂಡು ಬರುತ್ತಿತ್ತು. ಅದು ಹತ್ತಿರ ಬಂದು 'ಸೆಡೆ' ಯೊಡ್ಡಿ ನಿಂತು ಇನ್ನೇನು ದೊರೆಮಗನಿಗೆ ಅಪ್ಪಳಿಸಬೇಕು ಎನ್ನುವಾಗ ಅಲ್ಲಿಯೇ ಇದ್ದ ಚಂದ್ರಾಯುಧವನ್ನು ತೆಗೆದುಕೊಂಡು ಹುಲಿಯ ಮರಿ ಹಾವಿಗೆ ಹೊಡೆಯಿತು. ಅದು 'ಸೆಡೆ' ಕತ್ತರಿಸಿ ಕೆಳಗೆ ಬಿತ್ತು.

ಬೆಳಗಾದ ಮೇಲೆ ಹಕ್ಕಿಯನ್ನು ತೆಗೆದುಕೊಂಡು ಎಲ್ಲರೂ ಮೊದಲಿನಂತೆ ಸಮುದ್ರವನ್ನು ದಾಟಿ ತಮ್ಮ ಮನೆಗೆ ಬಂದರು. ಹುಲಿಮರಿಗಳು ಮುಂಚೆ ಓಡೋಡಿ ಬಂದು ಕಿಟಕಿಯಲ್ಲಿ ಬಗ್ಗಿ ನೋಡಿದವು. ರಾಣಿಯೂ ಚಿಕ್ಕ ರಾಕ್ಷಸನೂ ಪಗಡೆಯಾಡುತ್ತಾ ಕೂತಿದ್ದರು. ಅದನ್ನು ಕಂಡು ಸರಸರನೆ ಬಂದು ದೊರೆಯ ಮಗನ ಕಿವಿಯಲ್ಲಿ ಪಿಸುಗುಟ್ಟಿದುವು. ದೊರೆಯ ಮಗ ತಕ್ಷಣವೇ ಚಂದ್ರಾಯುಧವನ್ನು ಹಿರಿದು ಒಳ ನುಗ್ಗಿದ. ಬೊಮ್ಮ ರಾಕ್ಷಸ ಮತ್ತು ಹುಲಿಮರಿಗಳು ಬಾಗಿಲಿಗೆ ಅಡ್ಡವಾಗಿ ನಿಂತವು. ಅವನು ಹೋದ ಕೂಡಲೇ ರಾಣಿ ಮತ್ತು ರಾಕ್ಷಸ ಇಬ್ಬರೂ ಬೆಚ್ಚಿ ಬೆಕ್ಕಸಬೆರಗಾಗಿ ತಡವರಿಸಿ ಎದ್ದು ನಿಂತರು. ಅವರ ಒಳಸಂಚೆಲ್ಲಾ ದೊರೆಯ ಮಗನಿಗೆ ಒಂದು ಚಣಮಾತ್ರದಲ್ಲಿ ಹೊಳೆಯಿತು. 'ಪಾಪಿಗಳೇ' ಎನ್ನುತ್ತಾ ಹಿಡಿದಿದ್ದ ಕತ್ತಿಯಿಂದ ಬೀಸಿದ. ಒಂದೇ ಏಟಿಗೆ ಅವರಿಬ್ಬರ ತಲೆಗಳೂ ಉರುಳಿ ಬಿದ್ದುವು.

೪

ಒಂದು ದಿನ ಎಲ್ಲರೂ ಬೇಟೆಗೆ ಹೋಗಿದ್ದಾಗ ಒಂದು ಹುಡುಗಿ ಬಿದ್ದಂಬೀಳ ಓಡಿಬರುತ್ತಿತ್ತು. ದೊರೆಯ ಮಗ ಹತ್ತಿರ ಹೋಗಿ 'ಅದ್ಯಾಕೆ' ಎಂದು ಕೇಳಿದ. ಆ ಊರ ರಾಜನ ಒಬ್ಬ ಹುಚ್ಚನಾದ ಕುರೂಪಿಯಾದ ಮಗನಿಗೆ ತನ್ನನ್ನು ಮದುವೆ ಮಾಡಲು ಅಪ್ಪ ಅವ್ವ ಒಪ್ಪಿದ್ದಾರೆ. ಅದು ತನಗೆ ಇಷ್ಟವಿಲ್ಲದೆ ಎಲ್ಲಾದರೂ ದೇಶಾಂತರ ಹೋಗಲು ಓಡೋಡಿ ಬರುತ್ತಿದ್ದೇನೆಂದು ಅವಳು



ಹೇಳಿದಳು. ಎಳೆ ಬಾಳೆಯ ಸುಳಿಯಂತೆ ಕನುಗುತ್ತಿದ್ದ ಗಾಜಿನ ಗೊಂಬೆಯಂತೆ ತೆಳ್ಳಗೆ ಬೆಳ್ಳಗೆ ಸುಂದರಿಯಾಗಿದ್ದ ಅವಳ ಮೇಲೆ ದೊರೆಯ ಮಗನಿಗೆ ಮನಸ್ಸಾಯಿತು. 'ನಮ್ ಜೊತೇಲಿ ಬಾ. ಏನೂ ಅಂಜಿಕೆ ಭಯ ಬ್ಯಾಡ' ಎಂದು ಹೇಳಿ ಕರೆದುಕೊಂಡಹೋದ.

ಸ್ವಲ್ಪ ದಿವಸ ಕಳೆದ ಮೇಲೆ ಒಬ್ಬಳು 'ಅಜ್ಜಜ್ಜಿ ಮುದ್ಕಿ' ಆ ಮನೆಗೆ ಬಂದಳು. ತಲೆ ಹಂಜಿ ಕುಕ್ಕೆಯಾಗಿತ್ತು. ಸೊಂಟ ಯಂಡು ಮಡಿಕೆಯಾಗಿತ್ತು. ತಲೆ ನಡುಗುತ್ತಿತ್ತು. 'ನಂಗೊಂತುತ್ತು ಹೊಟ್ಗೆ ಹಾಕ್‌ಬುಡಪ್ಪ. ನಿನ್ನ ಮನೆ ಕಾಯ್ಕೊಂಡ್ ನಿನ್ ಹೆಡ್ತಿಗೆ ಜೊತಾಗಿ ಇದ್ಬುಡ್ತೀನಿ' ಎಂದಳು. ಅವನು ಒಪ್ಪಿಕೊಂಡ.

ಇನ್ನೇನೂ ತೊಂದರೆಯಿಲ್ಲವೆಂದು ತಿಳಿದ ಮೇಲೆ ದೊರೆ ಮಗ ಹುಲಿಮರಿಗಳಿಗೂ ರಾಕ್ಷಸನಿಗೂ ಹೇಳಿದ:

"ನಿಮ್ಮಿಂದ ನನಗೆ ಬಾಳ ಸಾಯ ಆಗ್ಯದೆ. ನೀವಿಲ್ದೆ ಇದ್ರೆ ನನ್ನಗತಿ ಏನಾಗೋದೋ ಹೇಳೋಂಗಿಲ್ಲ. ಇನ್ಮ್ಯಾಲೆ ನೀವು ನಿಮ್ಮನೆಗೆ ಹೋಗಿ ಬದಿಕೊಳ್ಳಿ."

"ನಿನ್ ಬುಟ್ಟು ನಮ್ಗೆ ಇರಾಕಾಗಾಕಿಲ್ಲ. ನಾವು ಅತ್ತಾಗಿ ಹೋದ್ಮ್ಯಾಲೆ ನಿನ್ಗೆ ಏನಾದ್ರೂ ಆದ್ರೆ ನಮ್ಗೆ ಹ್ಯಂಗ್ ಗೊತ್ತಾಗೋದು" ಎಂದವು ಹುಲಿಮರಿಗಳು.

"ನಿಮ್ಮ ಮನೆ ಮುಂದೆ ಒಂದು ತೊಳಸಿಗಿಡ ಹಾಕ್ಕೊಂಡು ದಿನಾ ನೀರ್ಹಾಕಿ. ಅದು ಒಣಗಿ ಹೋದ್ರೆ ನನ್ನ ಪರಾಣ ಹೋಯ್ತು ಅಂತ ತಿಳ್ಕೊಳ್ಳಿ. ನನ್ನ ಪರಾಣ ಬಲಗಿವಿಲಿರೋ ಚಿನ್ನದ ಕಡಿಕಿನಲ್ಲದೆ. ಅದ ಬಿಚ್ಚಿ ಒಲೆಗೆ ಹಾಕಿದರೆ ನಾನು ಸಾಯ್ತೀನಿ. ಅದ ಬೆಳಗಿ ಮತ್ತೆ ಇಕ್ಕಿದರೆ ಜೀವ ಬತ್ತದೆ."

ಒಲ್ಲದ ಮನಸ್ಸಿನಿಂದ ಹುಲಿಮರಿಗಳೂ ಬೊಮ್ಮ ರಾಕ್ಷಸನೂ ಹೊರಟು ಹೋದರು. ಇವರಾಡಿದ ಮಾತನ್ನೆಲ್ಲಾ ಆ ಮುದುಕಿ ಕೇಳಿಕೊಂಡಿತ್ತು.

ಒಂದು ದಿನ ದೊರೆ ಮಗ ಮಲಗಿದ್ದಾಗ ಯಾರಿಗೂ ತಿಳಿಯದಂತೆ ಅವನ ಕಿವಿಯ ಹತ್ತಕಡುಕನ್ನು ಬಿಚ್ಚಿ ಒಲೆಯ ಬೂದಿಗೆ ಹಾಕಿದಳು. ಅವನು ಸತ್ತುಹೋದ. ಆ ಹುಡುಗಿಯನ್ನು ಸಮಾಧಾನ ಮಾಡಿ ಹೆದರಿಸಿ ಬೆದರಿಸಿ ಜೊತೆಯಲ್ಲಿ ಕರೆದು ಕೊಂಡು ಹೊರಟುಹೋದಳು. ಆದರೆ ಹುಡುಗಿ ಬುದ್ಧಿವಂತೆ. ತನ್ನ ಮುತ್ತಿನ ಸರವನ್ನು ಕಿತ್ತು ತಾನು ಹೋಗುವ ದಾರಿಯುದ್ದಕ್ಕೂ ಮುತ್ತನ್ನು ಚೆಲ್ಲಿಕೊಂಡು ಹೋದಳು.

* * * * *

ರಾಕ್ಷಸ ಮತ್ತು ಹುಲಿಯ ಮರಿಗಳು ಆದಿನ ಹೊತ್ತಾರೆ ಎದ್ದು ನೋಡಿದಾಗ

‘ತೊಳಸಿ’ ಗಿಡ ಒಣಗಿ ಉದುರಿ ಹೋಗಿತ್ತು. ದೊರೆಮಗನಿಗೆ ಏನೋ ಆಪತ್ತು ಬಂದಿದೆಯೆಂದು ತಿಳಿದು ಅವು ಓಡೋಡಿ ಬಂದವು. ಅವನು ಸತ್ತುಹೋಗಿದ್ದ. ಮನೆಯಲ್ಲಿ ಯಾರೂ ಇರಲಿಲ್ಲ. ಇದೆಲ್ಲಾ ಆ ಮಾನಾಡ ಮುದುಕಿಯ ಕಿತಾಪತಿಯೇ ಇರಬೇಕೆಂದು ಅವಕ್ಕೆ ಗೊತ್ತಾಯಿತು. ಒಲೆಯ ಬೂದಿಯನ್ನು ಕೆದಕಿ ನೋಡಿದಾಗ ಹತ್ತಕಡುಕು ಸಿಕ್ಕಿತು. ಬಿರಬಿರನೆ ಅದನ್ನು ಬೆಳಗಿ ದೊರೆಮಗನ ಕಿವಿಗೆ ಇಕ್ಕಿ ಗಾಳಿ ಬೀಸಿದವು. ನಿದ್ದೆಯಿಂದ ಎದ್ದವನಂತೆ ಅವನು. ‘ಅಸ್’ ಎನ್ನುತ್ತಾ ಎದ್ದು ಕುಳಿತ. ತಕ್ಷಣ ಎಲ್ಲರೂ ಆ ಮುದುಕಿಯನ್ನೂ, ಹುಡುಗಿಯನ್ನೂ ಹುಡುಕಿಕೊಂಡು ಹೊರಟರು. ದಾರಿಯಲ್ಲಿ ಚೆಲ್ಲಿದ್ದ ಮುತ್ತುಗಳು ಕಾಣಿಸಿದವು. ಅದೇ ಜಾಡಿನ ಮೇಲೆ ಹೋಗಿ ನೋಡಿದಾಗ ಅದು ಒಂದು ಪಟ್ಟಣಕ್ಕೆ ಹೋಯಿತು. ಆ ದಿನ ಆ ರಾಜನ ಮಗನ ಮದುವೆ. ಆ ಮುದುಕಿ ರಾಜನ ಕಡೆಯಿಂದ ಬಂದು ಹುಡುಗಿಯನ್ನು ಹಾರಿಸಿಕೊಂಡು ಹೋಗಿದ್ದಳೆಂದು ತಿಳಿಯಿತು. ರಾಕ್ಷಸ, ಹುಲಿಮರಿಗಳು, ದೊರೆಮಗ ಅರಮನೆಗೆ ನುಗ್ಗಿದರು. ರಾಜ, ರಾಜನ ಮಗ, ಮುದುಕಿ ಎಲ್ಲರನ್ನೂ ಸಾಲು ಬಡಿತ ಬಡಿದು ಸಂಹಾರ ಮಾಡಿದರು. ಎದುರು ಬಂದವರನ್ನು ಕಳಲೆ ಕೊಚ್ಚುವಂತೆ ಕೊಚ್ಚಿ ಹಾಕಿದರು. ಅದೇ ಮುಹೂರ್ತದಲ್ಲಿ ಆ ಹುಡುಗಿಯನ್ನು ದೊರೆಮಗ ಮದುವೆಯಾದ. ಆ ರಾಜ್ಯಕ್ಕೆ ದೊರೆಯಾದ. ಹುಲಿಮರಿಗಳು ಮತ್ತು ರಾಕ್ಷಸ ಅವನಿಗೆ ಪಟ್ಟ ಕಟ್ಟಿಸಿ ಮತ್ತೆ ತಮ್ಮ ಕಾಡಿಗೆ ಹಿಂತಿರುಗಿದರು.

* * * *



## ಗುರು – ಶಿಷ್ಯ*

ದಿಗಂಬರ ಪಟ್ಟಣ. ಅಲ್ಲೊಬ್ಬ ರಾಜ. ಅವನಿಗೆ ಬಾಳಕಾಲ ಮಕ್ಕಳೇ ಇರಲಿಲ್ಲ. ಅವನಿಗೆ ವಯಸ್ಸಾಗಿ ಹೋಯಿತು. ತಲೇಲೆಲ್ಲ ಹಂಜಿ ಕುಕ್ಕೆ ಹಂಗೆ ನೆರೆ ಬತ್ತು. ಆ ಕಾಲದಲ್ಲಿ ಅವನಿಗೆ ಇಬ್ಬರು ಗಂಡು ಮಕ್ಕಳಾದರು.

ಕದಂಬರ ಅಂತ ಇನ್ನೊಬ್ಬ ರಾಜ. ಅವನಿಗೆ ದಿಗಂಬರ ರಾಜ್ಯದ ಮೇಲೆ ಬಾಳ ದಿನದಿಂದ್ಲೂ ಕಣ್ಣು. ಏನಾದರೂ ಮಾಡಿ ಅದ ಗೆದ್ದು ತನ್ನ ರಾಜ್ಯಕ್ಕೆ ಸೇರಿಸಿಕೊಬೇಕು ಅಂತ ಬಲು ದಿನದಿಂದ್ಲೂ ಮಸಲತ್ತು ಮಾಡ್ತಾ ಇದ್ದ. ಎಷ್ಟೋ ಸತಿ ದಂಡೆತ್ತಿ ಹೋಗಿ ಮೈಮುರಿಯೋ ಹಂಗೆ ಏಟು ತಿಂದು ಸೋತು ಸತ್ತೇನೋ, ಬಿದ್ದೇನೊ ಅಂತ ತನ್ನ ಪಟ್ಟಣಕ್ಕೆ ಬಂದು ಬಿದ್ದಿದ್ದ. ಈಗ ಆ ರಾಜನಿಗೆ ವಯಸ್ಸಾದ್ದರಿಂದ ಹೋಗಿ ಮುತ್ತಿಗೆ ಹಾಕಬೇಕು ಅಂತ ದಂಡು ದಾಳಿ ಮಂದಿ ಮಾರ್ಬಲ ಎಲ್ಲಾನೂ ಕೂಡಿಸಿಕೊಂಡು ಯುದ್ಧಕ್ಕೆ ಹೊರಟ. ಇದು ದಿಗಂಬರ ರಾಜನಿಗೆ ತಿಳೀತು. ‘ಯುದ್ದ ಆದರೆ ಈ ಸಲ ಗೆಲ್ಲಾಕೆ ಆಗೋದಿಲ್ಲ’ ಅಂತ ಮನಸಿನಲ್ಲಿ ದಿಟ್ಟಮಾಡಿಕೊಂಡು ರಾತ್ರೋರಾತ್ರೆ ಅರಮನೆ ಬಿಟ್ಟು ಹೆಂಡತಿ ಮಕ್ಕಳು ಎಲ್ಲಾರ್ರೂ ಕರಕೊಂಡು ಹೊಂಟುಬುಟ್ಟ. ಹಿಂದೆ ಎಲ್ಲಾದ್ರೂ ವೈರಿಗಳು ಬಂದಾರು ಅಂತ ಎಲ್ಲೂ ನಿಲ್ಲದೆ ದಾರಿಬುಟ್ಟು ಆ ಹಸುಮಕ್ಕಳನ್ನು ಎತ್ತಿಕೊಂಡು ಗಂಡಹೆಂಡತಿ ಇಬ್ರೂ ನಡೆದರು. ಮುಳ್ಳುಮಳ್ಳೆ ತುಣಿದು ಕಾಲಿಗೆ ಗೋರ್ಚೆ ಹೊಡೆದು ಅಂಗಾಲಲ್ಲಿ ನತ್ತರ ಸೋರುತ್ತಿತ್ತು. ಅದ್ಯಾವುದನ್ನೂ ಲೆಕ್ಕಿಸದೆ ಅಂತೂ ಇಂತೂ ದೇವರು ಮೂಡೋ ಹೊತ್ತಿಗೆ ನಡೆದು ಆ ರಾಜ್ಯದ ಗಡಿ ಹಿಡಿದರು. ಒಂದು ದೊಡ್ಡ ಕಾಡಿಗೆ ಬಂದರು.

ಕಾಡಿನಲ್ಲಿ ಸುತ್ತಮುತ್ತ ಮರಗಳು ಮುಗಿಲು ಮುಟ್ಟೋ ಹಂಗೆ ಬೆಳಿದಿದ್ದವು. ಅಲ್ಲಿ ತಾವಿರೋದು ಯಾವ ನರಪಿಳ್ಳೆಗೂ ಗೊತ್ತಾಗೋದಿಲ್ಲ ಅಂದುಕೊಂಡು ಅಲ್ಲೇ ಒಂದು ಗುಡ್ಲು ಹಾಕಿಕೊಂಡರು. ಅಲ್ಲಿ ಮಕ್ಕಳು ತಾವು ಎಲ್ಲಾ ಹ್ಯಂಗೋ ವಾಸಮಾಡಿಕೊಂಡಿದ್ದರು. ಸುತ್ತಮುತ್ತ ಬೆಳದಿರೊ ಗೆಡ್ಡೆಗೆಣಸು ಕಾಯಿಸೊಪ್ಪು

* ಹೇಳಿದವರು : ಕೃಷ್ಣ ರಾಜನಗರದ ತಾಲ್ಲೂಕು ಬಡಗನಕೊಪ್ಪಲಲ್ಲಿರುವ ಕಂಟ್ರಾಕ್ಟರ್ ಜವರೇಗೌಡ.

ತಿಂದು ಹೊಟ್ಟೆ ಹೊರೀತಾ ಇದ್ದರು. ಒಂದೊಂದು ದಿನ ಮೊಲಗಿಲ ಸಾರಗಗೀರಗ ಬೇಟೆ ಮಾಡಿಕೊಂಡು ತಕ್ಕೊಂಡು ಬತ್ತಾ ಇದ್ದ ರಾಜ. ಅವತ್ತು ಅದನ್ನು ಬೇಸಿಕೊಂಡು ತಿಂದು ಕಾಲ ಹಾಕ್ತಾ ಇದ್ದರು. ಮಕ್ಕಳು ಹಂಗೇ ಬೆಳೆದರು. ಅವರಿಗೆ ಐದಾರು ವರ್ಷ ತುಂಬಿತು. ಒಂದು ರಾತ್ರೆ ಮಕ್ಕಳೆರಡೂ ಮಲಗಿದ ಮೇಲೆ ರಾಜ ರಾಣಿ ಇಬ್ಬರೂ ಮಾತಾಡ್ತಾ ಕೂತುಕೊಂಡರು.

"ಮಕ್ಕಳಿಗೆ ಆಗಲೇ ಐದಾರು ತುಂಬ್ತು. ನಮ್ಮ ಪಟ್ಟಣದಲ್ಲಿದ್ರೆ ಇಷ್ಟೊತ್ತಿಗೆ ಅರಮನೆ ಮೆಷ್ಟ್ರ ಹತ್ರ ಪಾಠ ಕಲ್ತುಕೊತಿದ್ದರು. ನಮ್ಮ ದುರಾದೃಷ್ಟಕ್ಕೆ ನಮ್ಮ ಮಕ್ಕಳ ಕಾಲಕ್ಕೆ ಕಾಡುಪಾಲಾದೊ. ಶಿವ ಪರೀಕ್ಷೆ ಮಾಡ್ತಾ ಅವ್ನೆ. ಮಾಡಲಿ. ಮಕ್ಕಳಿಗೆ ಏನಿಲ್ದೆ ಇದ್ರೂ ಒಂದಿಷ್ಟು ವಿದ್ಯ ಬುದ್ದೀನಾದ್ರೂ ಕಲಿಸದೇ ಹಿಂಗೇ ಕಾಡುಪಾಪಗಳ ಹಂಗೆ ಬೆಳೆದರೆ ಮುಂದಕ್ಕೆ ಅವರು ಬದುಕೋ ದಾರಿ ಹ್ಯಂಗೆ?" ಅಂದ ರಾಜ.

"ಇನ್ನೇನ್ಮಾಡೋದು? ಅವರವರು ಈಸಿಕೊಂಡು ಬಂದ ಫಲ ಅವರವರು ಅನುಭವಿಸ್ಬೇಕು. ಹಾಲು ಹುಯ್ಯಾಕೆ ನಮ್ಮಿಚ್ಚೆ ಅಂದ್ರೆ ಹಣೇಲಿ ಬರಿಯಾಕೂ ನಮ್ಮಿಚ್ಚ್ಯಾ. ಇಷ್ಟಕ್ಕೂ ಈ ಕಾಡಿನಲ್ಲಿ ನಿಪಿ ಹಂಗೆ ಕೂತುಕೊಂಡು ಕಾಡಿನಲ್ಲಿ ಹೊಂಬಾಳೆ ಅರಸಿದ ಹಂಗೆ ಮೇಷ್ಟರ್ನ ಎಲ್ಲಿ ಹುಡುಕೋದು? ನಮ್ತಾವು ಒಂದು ಮೂರುಕಾಸಿನ ಮಂಗಾಣೀನೂ ಇಲ್ಲ. ಮೇಷ್ಟರಿಗೆ ದುಡ್ಡು ಕೊಡದೆ ಹೇಳಿಕೊಟ್ಟಾರಾ? ಅಂತ ಕಣ್ಣೀರು ತುಂಬಿಕೊಂಡಳು ರಾಣಿ. ಅವಳು ಅಳೋದು ನೋಡಿ ಸಮಾಧಾನ ಮಾಡ್ತಾ ರಾಜ 'ಸುಮ್ನೆ ಅತ್ರೆ ಏನು ಬಂದಂಗಾಯ್ತು. ಕಷ್ಟ ಬಂದಾಗ ಧೈರ್ಯ ತಂದುಕೋಬೇಕು. ಪರದೇಶಿ ಮಕ್ಕಳಿಗೆ ಪರಮಾತ್ಮನೇ ಕಾವಲು. ಹುಟ್ಟಿಸಿದ ಶಿವ ಹುಲ್ಲುಮೇಯಿಸ್ಯಾನ? ಸುಮ್ನಿರು. ಪಕ್ಕದಲ್ಲಿ ಒಂದು ಹಳ್ಳಿ ಅದೆ. ಅಲ್ಲೊಬ್ಬ ಮೇಷ್ಟ್ರ ಅವನೆ. ಯೇದ ಪುರಾಣ ರಾಮಾಯಣ, ಮಾಭಾರತ ಮಂತ್ರ ಮರೂಡಿ – ಅಂತ ಅವನಿಗೆ ಬರದೇ ಇರೋ ವಿದ್ಯವೇ ಪರ್ಪಂಚದಲ್ಲಿಲ್ಲ. ಆದರೆ ಅದೇನು ಶಿವಸಾಪವೋ ಅವನ ಹೊಟ್ಟೇಲಿ ಒಂದು ಕುಡಿ ಮೂಡ್ನಿಲ್ಲ. ಅವನಿಗೆ ಹೇಳ್ತೀನಿ. 'ನನ್ನ ಹತ್ರಾನೂ ಕೈಲಿ ಕಾಸಿಲ್ಲ. ನಿಂಗೂ ಹ್ಯಂಗೂ ಮಕ್ಕಳಿಲ್ಲ. ಇಬ್ಬರಿಗೂ ಮನಸ್‌ಪೂರ್ತಿ ನೀನು ಕಲಿತಿರೋ ವಿದ್ಯಾನೆಲ್ಲ ಧಾರೆಯರದು ಬುಡು. ವಿದ್ಯಾ ಎಲ್ಲಾ ಕಲ್ತು ಆದ ಮೇಲೆ ನೀನು ಒಬ್ಬ ಮಗನ್ನ ಮಡೀಕೋ, ನಾನು ಒಬ್ಬನ್ನ ಕರಕೊಂಡು ಹೋಯ್ತೀನಿ' ಅಂತ. ಒಪ್ಕೋತಾನೆ" ಅಂದ.

"ನಿಮಗೆ ಹ್ಯಂಗೆ ದೇವರು ಗ್ಯಾನಾ ಕೊಡುತಾನೋ ಹಂಗೆ ಮಾಡಿ.



ನಾನು ಹೆಣ್ಣು ಹೆಂಗಸು. ನನಗೇನ್ ತಿಳೀತದೆ" ಅಂದಳು ರಾಣಿ.

ಸರಿ, ರಾಜ ಹೊತ್ತಾರೆ ಮಸುವಿನಲ್ಲೇ ಎದ್ದು ಎರಡು ಮಕ್ಕಳನ್ನೂ ಕರಕೊಂಡು ಆ ಮೇಷ್ಟರ ಹತ್ರಕ್ಕೆ ಹೋದ. ಅವನು "ಏನು ಬಂದೆ?" ಅಂದ. ರಾಜ ತಾನೂ ತನ್ನ ಹೆಡ್ತೂ ಮಾತಾಡಿಕೊಂಡಿದ್ದ ಹಂಗೇ ಹೇಳಿದ. ಮೇಷ್ಟ್ರ ಒಂದು ಗಳಿಗೆ ಹಿಂದೆ ಮುಂದೆ ನೋಡಿದರು. "ನೀವೇ ಹೇಳಿದ ಹಂಗೆ ಸತ್ಯವಾಗಿ ನಡಕೋತೀಯಾ? ಆಮೇಲೆ ಮಗನ್ನ ಕೊಡೋದಿಲ್ಲ ಗಿಡೋದಿಲ್ಲ ಅಂದರೆ ನಾನು ಕೇಳೋನಲ್ಲ. ನಾನು ಬಲು ಕೆಟ್ಟ ಮನುಷ್ಯ" ಅಂತ ಅಂದ. ರಾಜ ಪ್ರಮಾಣ ಮಾಡಿ "ದೇವರ ಸತ್ಯವಾಗೂ ಒಬ್ಬ ನನಗೆ, ಇನ್ನೊಬ್ಬ ನಿನಗೆ, ಆದರೆ ಒಂದು ಮಾತು. ನೀನು ಮಾತ್ರ ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಮಾಡಬಾರದು. ಇಬ್ಬರಿಗೂ ಯಾವ ವಂಚನೇನೂ ಮಾಡದೆ ಒಂದೇ ಸಮನೆ ವಿದ್ಯಾವಂತರ್ನ ಮಾಡಬೇಕು, ತಿಳೀತಾ" ಅಂದ. "ಹಂಗೇ ಆಗಲಿ" ಅಂದ ಮೇಷ್ಟ್ರ ಒಪ್ಪಿಕೊಂಡ. ರಾಜ ತನ್ನ ಇಬ್ಬರೂ ಮಕ್ಕಳ್ನೂ ಮೇಷ್ಟರಿಗೆ ಒಪ್ಪಿಸಿ "ಇವಕ್ಕೆ ತಾಯೂ ನೀನೇ, ತಂದೇನೂ ನೀನೆ. ಇವರ್ನ ಕಾಪಾಡೋ ಭಾರ ನಿಂದು" ಅಂತ ಹೇಳಿ ಕಾಡಿಗೆ ಹಿಂತಿರುಗಿ ಬಂದ.

## ೨

ಮೇಷ್ಟ್ರ ಮಹಾಪ್ರಚಂಡ, ಮಹಾ ಹಿಕ್ಮತ್‌ಗಾರ. 'ರಾಜನಿಗೆ ಹ್ಯಂಗಿದ್ರೂ ಹಿರಿಮಗನ ಮೇಲೆ ಇಷ್ಟ. ಅವನು ಏನಾದ್ರೂ ಹಿರೀಮಗನ್ನ ನನಗೆ ಕೊಟ್ಟು ಕಿರಿಮಗನ್ನ ಕರಕೊಂಡು ಹೋಗೋದಿಲ್ಲ. ಇಬ್ಬರಿಗೂ ಒಂದೇ ಸಮ ವಿದ್ಯಾ ಕಲಿಸಿದರೆ ಹಿರಿಮಗ ಒಂದಲ್ಲ ಒಂದು ದಿನ ನನ್ನ ಬುಡಕೇ ನೀರು ತಿದ್ದಿ ಗುರುವಿಗೇ ತಿರುಮಂತ್ರ ಹೇಳಿಬುಡ್ತಾನೆ. ಆದ್ದರಿಂದ ಇವನಿಗೆ ಒಂದಿಷ್ಟು ಕಮ್ಮಿ ಅನ್ನೋ ಹಂಗೇ ವಿದ್ಯ ಹೇಳಬೇಕು' ಅಂತ ಮನಸಿನಲ್ಲಿ ಯೋಚನೆ ಮಾಡಿಕೊಂಡ. ಹಿರಿಮಗನ್ನ ಬೇಕು ಬೇಕು ಅಂತ಼್ೇ ಮಂಕುಮಾಡಿ, ಹ್ಯಂಗೂ ತನ್ನ ತಾವೇ ಉಳೀತಾನೇ ಅಂತ ಕಿರಿಮಗನಿಗೆ ತಾನೂ ಕಲಿತಿರೋ ಅರವತ್ತನಾಲ್ಕು ವಿದ್ಯಾನೆಲ್ಲ ಧಾರೆಯೆಎದುಬುಟ್ಟ. ಅವನು ಮಹಾಪಂಡಿತನಾದ. ಆದರೆ ರಾಜ ತನ್ನ ಮಕ್ಕಳನ್ನು ನೋಡಿಕೊಂಡು ಹೋಗಾಕೆ ಬಂದ ದಿನ ಅವನ ಕಣ್ಣಿಗೆ ಮಣ್ಣೆರಚಿ ಮೋಸ ಮಾಡಬೇಕೂ ಅಂತ ಏನೂ ಅರೀದ ಬೆಪ್ಪ ಅನ್ನೋ ಹಂಗೆ ಕಿರಿಯಮಗನ್ನ ಮೂಲೆಗೆ ಕೂರಿಸಿ, ಹಿರೀಮಗನ್ನ ಮುಂದಕ್ಕೆ ಕುಂಡಿರಿಸುತ್ತಿದ್ದ. ಅವನೇ ಉಳಿದ ಹುಡುಗರ ಮೇಲುಸ್ತುವಾರಿ ನೋಡಿಕೋತಾನೆ ಅನ್ನೋ ಹಂಗೆ ಆಟ ಕಟ್ಟುತ್ತಿದ್ದ.

ರಾಜನೂ ತನ್ನ ಹಿರಿಮಗ ಬೋ ಬುದ್ಧಿವಂತ ಅಂತ ಹಿರಿಹಿರಿ ಹಿಗ್ಗುತ್ತಿದ್ದ. ಬೆಳ್ಳಗಿರೋದೆಲ್ಲ ಹಾಲು ಅಂತ ನಂಬಿಕೊಂಡ.

ಮಕ್ಕಳು ವಿದ್ಯೇನೆಲ್ಲಾ ಕಲಿತರು. ಅವರು ಹೋಗೋ ಕಾಲಾನೂ ಬತ್ತು. ಮಕ್ಕಳ್ನ ಹಿಸ್ಸೆ ಮಾಡ್ಕೊಳ್ಳೋದು ಇನ್ನೊಂದೆರಡು ದಿನ ಅದೆ ಅನ್ನುವಾಗ ರಾಜ ಮೇಷ್ಟ್ರ ಮನೆಗೆ ಬಂದ, ಯಾವೂರಿಗೋ ಹೋಗಿದ್ದೋನು ಆಗ ಮೇಷ್ಟ್ರ ತಾನಮಾಡಾಕೆ ಅಂತ ಹೊಳೆತಾಕೆ ಹೋಗಿದ್ದ. ದೊಡ್ಡ ಹುಡುಗ ಎಲ್ಲಾರ್ನೂ ಓದಿಸ್ತಾ ಕೂತಿದ್ದ. ಕಿರಿಯೋನು ಮೊಣಕಾಲು ಸಂದಿಗೆ ತಲೆ ಹಾಕ್ಕೊಂಡು ಏನೋ ಯೋಚನೆ ಮಾಡ್ತಾ ಮೂಲೇಲಿ ಕೂತಿದ್ದ. ಅಪ್ಪ ಬಂದಾಗ ಗಕ್ಕನೆ ತಲೆಯೆತ್ತಿ ನೋಡಿದ. ಕಣ್ಣುಸನ್ನೆ ಮಾಡಿ ಅಪ್ಪನ್ನ ಹೊರಕ್ಕೆ ಕರಕೊಂಡು ಹೋದ.

"ಅಪ್ಪಾ ಈ ಮೇಷ್ಟ್ರ ಬಾಳ ಮೋಸಗಾರ. ಒಬ್ಬರಿಗೊಂದು ತರ ಮತ್ತೊಬ್ಬರಿಗೆ ಒಂದು ತರ ವಿದ್ಯೆ ಕಲಿಸಿ ವಲವರ ಮಾಡ್ತವನೆ. ನೀನು ಅಣ್ಣನ್ನ ಕರಕೊಂಡು ಹೋಯ್ತೀಯೆ ಅಂತ ತಿಳುಕೊಂಡು ಅವನಿಗೆ ಜಾಸ್ತಿ ವಿದ್ಯೆ ಹೇಳಿಕೊಟ್ಟಿಲ್ಲ, ಆದರೆ ಅವನೇ ಮಹಾ ಬುದ್ದಿವಂತ ಅನ್ನೋ ಹಂಗೆ ಮುಂದಕ್ಕೆ ಕೂರಿಸಿ ನಿನ್ನ ಕಣ್ಣಿಗೆ ಮಣ್ಣೆರಚುತ್ತಾ ಅವನೆ. ನನಗೆ ಮಾತ್ರ, ನಾನು ಅವನತಾವೇ ಇರ್ತೀನಿ ಅಂತ ತಿಳಕೊಂಡು ಅವನಿಗೆ ಬರೋ ವಿದ್ಯಾನೆಲ್ಲಾ ಧಾರೆಯೆರದವ್ನೆ. ಅವನ ಮಾತು ನಂಬಿಕೊಂಡು ನೀನೇನಾದ್ರೂ ಅಣ್ಣನ್ನ ಕರಕೊಂಡು ಹೋದ್ರೆ, ನೀನು ಕೆಟ್ಟಂಗೇಯ" – ಅಂತ ಮೇಷ್ಟ್ರ ಮಾಡಿದ ಹಿಕ್ಮತ್ನೆಲ್ಲಾ ಕಿರಿಮಗ ಬಯಲು ಮಾಡಿದ. ರಾಜ ಬೆಳ್ಳಗಿರೋದೆಲ್ಲ ಹಾಲು ಅಂತ ಮೋಸ ಹೋಯ್ತಿದ್ದೆನಲ್ಲಾ ಅಂದುಕೊಂಡು ಮಠದೊಳಕ್ಕೆ ಹೋದ. ಅಷ್ಟು ಹೊತ್ತಿಗೆ ತಾನಕ್ಕೆ ಹೋಗದ್ದ ಮೇಷ್ಟರೂ ಬಂದ. ಕಷ್ಟ ಸುಖ ವಿಚಾರಿಸಿದ. ಆ ಮೇಲೆ ಊಟಗೀಟ ಎಲ್ಲಾ ಅಲ್ಲೇ ಆಯಿತು. ಮೇಷ್ಟ್ರರಿಗೆ ಏನು ಗ್ಯಾನ ಬತ್ತೋ, "ಇವತ್ತೇ ನಿನ್ನ ಮಗನ್ನ ಕರಕೊಂಡು ಹೋತ್ತೀಯಾ?"

"ಹೂಂ. ಇನ್ನೆರಡು ದಿನ ಬುಟ್ಟು ಕಳೀಸಿದರೆ ಕರಕೊಂಡು ಹೋಯ್ತೀನಿ"

"ಇನ್ನೆರಡು ದಿನ ಏನು, ಇವತ್ತೇನು, ಕರಕೊಂಡೇ ಹೋಗು. ನೀನು ಆಡಿದ ಮಾತು ಗ್ಯಪ್ತಿ ಅದೆ ತಾನೆ?"

"ಹೂಂ, ಅದೆ"

"ಸರಿ ಮತ್ತೆ, ನಿನಗೆ ಯಾವ ಮಗ ಬೇಕು, ಹೇಳು"

"ನನಗೆ ಕಿರಿಮಗ ಬೇಕು."

ಮೇಷ್ಟರಿಗೆ ದೊಡ್ಡ ಜೀವವೇ ಹೋದಂತಾಯಿತು. ಒಂದು ಕತ್ತೆಗಾತ್ರಕ್ಕೆ



ಉಸುರು ಬುಟ್ಟ. 'ನಾನು ಮಾಡಿದ ಗೂಟ ನಂಗೇ ತಿರುಗಿ ಹೊಡೀತಲ್ಲಾ, ನಾನೆಂಥಾ ಪೆಗ್ಗಿ ಬಿದ್ದೆ' ಅಂದುಕೊಂಡ. ಆದರೆ ಮಾತು ಕೊಟ್ಟಾಗಿತ್ತು, ತಪ್ಪೋ ಹಂಗಿರಲಿಲ್ಲ. ಬೇರೆ ದಾರಿಯಿಲ್ಲದೆ. "ಹೂಂ ಆಗಲಿ ಕರಕೊಂಡು ಹೋಗಪ್ಪ" ಅಂದ. ರಾಜ ತನ್ನ ಕಿರಿಮಗನ ಕರಕೊಂಡು ಕಾಡಿಗೆ ಗುಡ್ಲಿಗೆ ಹಿಂದಿರುಗಿದ.

## ೩

ತಿನ್ನೋದಕ್ಕೆ ಹೊಟ್ಟೆಗೆ ಸರಿಯಾಗಿರಲಿಲ್ಲ. ಮಗ ಅಪ್ಪನಿಗೆ ಹೇಳಿದ :

"ನೋಡಪ್ಪ, ನಾನು ಇಲಿ ರೂಪ ತಾಳ್ತೀನಿ. ನೀನು ಕೈಲಿ ಹಸಿಬೆ ಚೀಲತಕ್ಕೊ. ಊರೊಳಕ್ಕೆ ಇಬ್ಬರೂ ಹೋಗಾನೆ. ನಾನು ಬಿಲ ತೋಡಿ ಕಣಜಕ್ಕೆ ಕನ್ನ ಹಾಕಿ ಈಚೆಗೆ ವದೀತೀನಿ. ನೀನು ಆ ದವಸಾನೆಲ್ಲ ಚೀಲಕ್ಕೆ ತುಂಬಿಕೊ."

ಸರಿ, ಅಪ್ಪ ಮಕ್ಕಳಿಬ್ಬರೂ ಊರೊಳಕ್ಕೆ ಹೋದರು. ಒಂದು ದೊಡ್ಡ ಗೌಡನ ಮನೆ. ಆ ಮನೇಲಿ ಯಾವ ಮೂಲೆ ನೋಡಿದರೂ ಬರೀ ಕಣಜಗಳೇ. ರಾಗಿ ಕಣಜ, ಬತ್ತಡ ಕಣಜ, ಹುಳ್ಳಿ ಕಣಜ ಹಿಂಗೇ ಬೇಕಾದಷ್ಟು ಕಣಜಗಳು. ಮಗ ಇಲಿಯಾಗಿ ಗೋಡೆ ಕೊರಕೊಂಡು ಕಣಜದವಳಕ್ಕೆ ಹೋಗಿ ಆ ಬಿಲದಗುಂಟೆ ಬತ್ತ ವದ್ದ. ಅಪ್ಪ ಈಚೇಲಿ ಚೀಲ ತುಂಬಿಕೊಂಡ. ಆ ಮೇಲೆ ಮಗ ಈಚೆಗೆ ಬಂದು ಮತ್ತೆ ಮನುಷ್ಯನಾದ. ಹಿಂಗೇ ಎಷ್ಟೋ ದಿವಸ ನಡೀತು. ಅವರಿಗೂ ಇದೇ ತರ ಮಾಡಿ ಮಾಡಿ ಬೇಜಾರಾಯಿತು. ಮತ್ತೆ ಮಗ ಅಪ್ಪನಿಗೆ ಹೇಳಿದ:

"ಅಪ್ಪ, ದಿನಾರೋಜೀನು ಬರೀ ದವಸ ತಂದು ತಂದು ರೇಜಿಕೆ ಆಗ್ ಬುಟ್ಟದೆ. ದುಡ್ಡು ಕಾಸು ಇಲ್ದೇ ಹೋದ್ರೆ ಬರೀ ದವಸದಿಂದ ಏನಾದಾತು? ನಾನು ಹುಂಜನ ಯಾಸ ತಾಳ್ತೀನಿ. ನೀನು ಸರಪಳಿ ಹಾಕ್ಕೊಂಡು ಕೈಲಿ ಹಿಡಕೊಂಡು ಊರೊಳಕ್ಕೆ ಹೋಗಿ "ನನ್ನ ಕೋಳಿ ಹುಂಜನ್ನ ಸೋಲಿಸಿದೋರಿಗೆ ಐದು ಸಾವಿರ ರೂಪಾಯಿ' ಅಂತ ಸವಾಲ್ ಹಾಕಿ ಸಾರು. ಆದ್ರೆ ನನ್ನ ಯಾರಾರೂ ಕರಾಯಕೆ ಕೇಳಿದರೆ ಕೊಡು, ಸರಪಣಿ ಮಾತ್ರ ಕೊಡಬ್ಯಾಡ ಜ್ವಾಕೆ."

ಮಗ ಹುಂಜನಾದ, ಅಪ್ಪ ಸರಪಳಿ ಹಾಕಿ ಹಿಡಕೊಂಡು ಊರೊಳಕ್ಕೆ ಹೋಗಿ ಸಾರಿದ. ಆ ಊರಲ್ಲಿ ಕೋಳಿ ಕಾಳಗ ಅಂದ್ರೆ ಬಾಳ ಹೆಸರುವಾಸಿ. ಒಬ್ಬೊಬ್ಬರೂ ಒಂದೊಂದು ಆಳೆತ್ತರದ ಹುಂಜನ್ನ ಸಾಕಿಕೊಂಡಿದ್ದರು. ರಾಜ 'ಗೆದ್ದೋರಿಗೆ ಐದು ಸಾವಿರ' ಅಂತ ಕೂಗಿದ. ಸರಿ, ಜಿದ್ದು ಹತ್ತು. ಹುಂಜಗಳು ಒಂದಾದ ಮೇಲೊಂದು ನುಗ್ಗಿ ಬಂದೊ; ಆದ್ರೆ ಎಂಥಾ ಹುಂಜನ್ನೂ ಒಂದೇ ಕ್ಯಾತಾರದೊಳಗೆ ಸೋಲಿಸಿ ರಾಜನ ಹುಂಜ ಗೆದ್ದು ಬುಡ್ತು. ರಾಜ ಐದು ಸಾವಿರ ಗ್ಯಬೀಕ್ಕೊಂಡು ಮನೆಗೆ ಬಂದ. ಹಿಂಗೇ ವಷ್ಟು ದಿವಸ ನಡೀತು.

ಆ ಊರಿನೋರು 'ಏನಾರೂ ಮಾಡಿ ಈ ಹುಂಜನ್ನ ಹೊಡಕೊಂಡು ಬುಡಬೇಕು. ಇದು ನಮ್ಮೂರಲ್ಲಿದ್ರೆ ಒಂದು ಗೌರವ' ಅಂತ ಮಸಲತ್ ಮಾಡಿದರು. ಆವತ್ತು ರಾಜ ಬಂದಾಗ ಒಬ್ಬ "ನಿನ್ನ ಹುಂಜನ್ನು ಕರೀದಿಗೆ ಕೊಡ್ತೀಯೇನಯ್ಯಾ?" ಅಂತ ಕೇಳಿದ.

"ಇಲ್ಲ ಇಲ್ಲ, ಇದರಿಂದಲೇ ನನ್ನ ಜೀವನ ನಡೀಬೇಕು. ನಾನು ಹ್ಯಂಗೆ ಕೊಡ್ಲಿ" ಅಂದ ರಾಜ.

"ನೀನು ಎಷ್ಟು ಕೇಳಿದ್ರೂ ಕೊಡ್ತೀವಿ. ನೀನು ಮಾತ್ರ ಹುಂಜನ್ನ ಕೊಡ್ಲೇ ಬೇಕು" ಅಂತ ಅವನು ಬಾಳ ಪಿಂಡಾಡಿಸಿದ.

"ಸರಿ ಹಂಗಾದ್ರೆ, ಸಾವಿರ ರೂಪಾಯಿ ಕೊಡಿ" ಅಂದ ರಾಜ :

ಅವನು ಅದಲು ಬದಲು ಮಾತು ಅನ್ನೇ ಇಲ್ಲ. ಜೋಬಿನಿಂದ ಸಾವಿರ ರೂಪಾಯಿ ತಗದು ಎಣಿಸಿ ಕೊಟ್ಟೇ ಬುಟ್ಟ. ರಾಜ ಸರಪಣಿ ಬಿಚ್ಚಿಕೊಂಡು ಹುಂಜ ಅವರ ಕೈಗೆ ಕೊಟ್ಟ; ತನ್ನ ಮನೆಗೆ ಬಂದ.

ಬಿಸಿ ಉಣ್ಣೊ ಹೊತ್ತಾಯಿತು. ಈ ಹುಂಜನಿಗೆ ಬ್ಯಾರೆ ಸರಪಣಿ ಹಾಕಿ ಅದರ ಮೇಲೆ ಒಂದು ಪಂಜರ ದಬ್ಬಾಕಿದ. ಮನೇರೆಲ್ಲ ಊಟ ಮಾಡಿಕೊಂಡು ಹುಂಜನಿಗೆ ಅನ್ನ ಹಾಕಕ್ಕೆ ಅಂತ ಪಂಜರ ತಗದು ನೋಡ್ತಾರೆ ! ಅಲ್ಲೆಲ್ಯದೆ ಹುಂಜ ! ರಾಜನ ಮಗ ಹುಂಜದ ರೂಪ ಬುಟ್ಟು ಇಲೀಮರಿ ಆಗಿ ಬುಟ್ಟಿದ್ದ. ಅವನಿಗೆ ಬೋ ಆಚರ್ಯೆ ಅಗ್‌ಹೋಯ್ತು. "ಅಯ್ಯಯ್ಯೋ ಈ ಹಾಳು ಇಲಿಮರಿ ನನ್ನ ಸಾವಿರ ರೂಪಾಯಿನ ಹುಂಜನ್ನ ತಿಂದು ಹಾಕ್‌ಬುಟ್ಟದೆ. ಇದು ನೆಗೆದು ಬಿದ್ದು ಹೋಗ. ಬನ್ನಿ ಬನ್ನಿ ಇದ ಹಿಡಕೊಳ್ಳಿ" ಅಂತ ಅವನು ಕೂಗಿದ. ಅಷ್ಟರಲ್ಲಿ ಅದು ಬಚ್ಚಲು ಕಿಂಡೀಲಿ ನುಗ್ಗಿಬುಡ್ತು. "ಅಯ್ಯಯ್ಯೋ ಹೋಯ್ತು ಹೋಯ್ತು, ಆ ಕಡೆ ಬಚ್ಚಲು ಮುಚ್ರೋ, ದೆವ್ವದ್ಹಂಗೆ ನಿಂತಿದ್ದೀರಲ್ಲ" ಅಂತ ಕೂಗಿಕೊಂಡ. ಆದರೆ ಆ ಇಲಿ ಮೆತ್ತಗೆ ಎಲ್ಲೆಲ್ಲಿ ಗುಂಟೋ ಕಡದು ಕಾಡಿಗೆ ಸೇರಿಕೊಂಡುಬುಡ್ತು. "ಅಯ್ಯೋ ನನ್ನ ಸಾವಿರ ರೂಪಾಯಿ ಹೋಯ್ತಲ್ಲಪ್ಪೋ" ಅಂತ ಅವನು ಬಾಯಿ ಬಾಯಿ ಬಡಕೊಂಡ, ತಲೆ ತಲೆ ಚಚ್ಚಿಕೊಂಡ.

೪

ಈ ವಿದ್ಯಮಾನಗಳೆಲ್ಲಾ ಮೇಷ್ಟರಿಗೆ ಗೊತ್ತಾಯಿತು. ತನ್ನ ಶಿಷ್ಯನದೇ ಇದೆಲ್ಲಾ ತರಲೆ ಅಂದುಕೊಂಡು "ಇದರ ಗುಟ್ಟೆಲ್ಲ ನನಗೆ ಗೊತ್ತು. ನನ್ನೆದುರಿಗೆ ಅವನಇದ್ಯ ತೋರಲಿ ನೋಡ್ತಿನಿ" ಅಂತ ಅವರಿವರ ಹತ್ರ ಅವನು ಹೇಳಿಕೊಂಡ. ಹುಡುಗನಿಗೆ ಇದು ತಿಳಿದಾಗ 'ಅವನಪ್ಪನ ಎದುರಿಗೂ ತೋರ್ತೀನಿ' ಅಂದ.



ತನಗೆ ಮೋಸಮಾಡಿದನಲ್ಲಾ, ಗುರುವಿಗೇ ತಿರುಮಂತ್ರ ಹಾಕಿದನಲ್ಲಾ ಅಂತ ಮೇಷ್ಟರಿಗೆ ಅವನ ಮೇಲೆ ಬಾಳ ಕುತ್ತು. ಅವನ್ನ ಏನಾದರೂ ಮಾಡಿ ಮುರೀದೇ ಹೋದ್ರೆ ಮುಂದೆ ತನ್ನ ಬೇಳೆ ಬೇಯೋದಿಲ್ಲ ಅಂತ ಅವನು ನಿರ್ಧಾರ ಮಾಡಿಕೊಂಡ. ಇವನಿಗೆ ಮಣ್ಣಿಗೆ ಮಣ್ಣು ತಿನ್ನಸದೆ ಇದ್ರೆ ನಾನು ಇಷ್ಟೆಲ್ಲಾ ವಿದ್ಯೆ ಕಲಿತದ್ದು ಯರ್ಥ ಅಂತ ಅಂದುಕೊಂಡು ಗರುಡ ಯಾಸ ತಾಳಿಕೊಂಡು ಕಾಡಿಗೆ ಬಂದ, ಇಲಿಯಾಗಿದ್ದ ರಾಜಕುಮಾರನನ್ನ ಹಿಡಿಯಾಕೆ. ಮೇಲೆ ಗರುಡ ಹಾರಾಡಿಕೊಂಡು ಬಂತು. ಇಲಿಯಾಗಿದ್ದ ಹುಡುಗ ಇದನ್ನ ನೋಡಿದ. 'ಇವ್ನು ನಮ್ಮ ಮೇಷ್ಟ್ರೇಯ, ನನ್ನ ಹಿಡಿಯಾಕೆ ಬಂದವ್ನೆ. ಇವನ್ನ ಚಳಿಸಿ ಚೊಳ್ಳೆಹಣ್ಣು ತಿನ್ನಿಸದೆ ಇದ್ರೆ ನಾನು ನಮ್ಮಪ್ನ ಮಗನೇ ಅಲ್ಲ' ಅಂದುಕೊಂಡ. ವತ್ತೀಲೇ ಒಂದು ಎತ್ತು ಸತ್ತು ಹೋಗಿ ಬಿದ್ದಿತ್ತು. ಮೆತ್ತಗೆ ಅದರ ಹೊಟ್ಟೇವಳಕ್ಕೆ ಹೊಕ್ಕೊಂಬುಟ್ಟ. ಸತ್ತು ಬಿದ್ದಿದ್ದ ಎತ್ತು ಎದ್ದು ಮೆಯ್ಯಾಕೆ ಸುರುಮಾಡಿತು. ಆದ ಕುಯ್ಯಾಕೆ ಬಂದದ್ದ ಮಾದಿಗರಿಗೆ ಬೋ ಚೋಜಿಗವಾಯಿತು. 'ಹಿಂಗಾಗೋದೂ ಉಂಟಾ? ನಮ್ಮ ಅಜ್ಜಮುಜ್ಜನ ಕಾಲದಿಂದ್ಲೂ ಇಂಥ ಚೋಜಿಗ ಕಂಡಿತ್ತಿಲ್ಲ, ಏನೋ ನಮ್ಮ ದೇಸಕೆ ಕೇಡುಗಾಲ ಬತ್ತು ಅಂತ ಕಾಣ್ತದೆ' ಅಂತ ಒಬ್ಬರಿಗೊಬ್ಬರು ಮಾತಾಡಿಕೊಂಡರು. ಮೇಷ್ಟ್ರು ನಿಜರೂಪ ತಾಳ್ಕೊಂಡು 'ಇದು ನನ್ನೆತ್ತು ಬುಡ್ರಯ್ಯಾ' ಅಂದ. 'ನಿನ್ನೆತ್ತು ಹ್ಯಂಗಾಯಿತು. ನಾವು ಕುಯ್ಯಾಕೆ ತಂದಿವಿ. ಇದು ಜೀವಾಯ್ತು. ಇದು ಹ್ಯಂಗಿದ್ರೂ ನಮ್ಗೇ ಸೇರಬೇಕು' ಅಂದರು ಮಾದಿಗರು. ಸರಿ, ಒಬ್ಬರಿಗೊಬ್ಬರು ಹಿಂಗೇ ಜಗಳ ಬವರ ಮಾಡಿಕೊಂಡು ಎತ್ನೂ ಅಟ್ಕೊಂಡು ಒಂದು ಹೊಳೆ ದಂಡೆಗೆ ಬಂದರು. ಅಲ್ಲೊಂದು ಗೆಂಡೆ ಮೀನು ಥಣಕ್ ಅಂತ ಮೇಕೆ ನೆಗೀತು. ಹುಡುಗ ತಕ್ಷಣ ಆ ಮೀನು ಹೊಟ್ಟೇವಳಕ್ಕೆ ಹೊಕ್ಕೊಂಬುಟ್ಟ, ಎತ್ತು ದುಬುಕ್ ಅಂತ ನೆಲಕ್ಕೆ ಬಿದ್ದು ಸತ್ತು ಹೋಯಿತು. ಜಗಳ ನಿಂತು ಹೋಯಿತು. ಮಾದಿಗರು ಅದ ಕುಯ್ಕೊಳ್ಳಾಕೆ ಕೂತುಗೊಂಡರು. ಮೇಷ್ಟ್ರಿಗೆ ತನ್ನ ಶಿಷ್ಯನ ಆಟಗೊತ್ತಾಗ್ಹೋಯ್ತು. 'ಎಲಾ ಇವ್ನ ... ನನ್ನೇ ಆಟ ಆಡಿಸ್ತಾನಲ್ಲ, ನೋಡಾನೆ ಎಲ್ಲೀಗಂಟ ಆಡ್ತಾನೆ' ಅಂತ ಕೊಕ್ಕರೆ ಯಾಸ ತಾಳಿದ. ಹೊಳೆ ವಳೀಕೆ ಹೋಗಿ ಅಲ್ಲಿಯ ಮೀನನ್ನೆಲ್ಲಾ ಒಂದೊಂದಾಗಿ ತಿಂತಾ ಬಂದ. ಆದರೆ ಮೀನಾಗಿದ್ದ ಹುಡುಗ ಹಂಗೆ ಹಿಂಗೆ ನುಣುಚಿಕೊಂಡು ತಪ್ಪಿಸಿಕೊಂಡು ದಡದಲ್ಲಿ ಸೆತ್ತೆ ಬೆಳಿದಿದ್ದ ಜಾಗಕ್ಕೆ ಬಂದ. ಅಲ್ಲಿ ಒಂದು ಗಿಣಿ ಸತ್ತು ಬಿದ್ದಿತ್ತು. ಹುಡುಗ ಅದರ ಹೊಟ್ಟೇವಳಕ್ಕೆ ಸೇರಿಬುಟ್ಟ. ಪುರ್ ಅಂತ ಹಾರಿ ಹೊಂಟೋದ.

ಒಬ್ಬ ರಾಜನ ಮಗಳು ಮಾಡಿಮೇಲೆ ತಲೆ ಬಾಚ್ತಾ ನಿಂದ್ದಳು. ಈ ಗಿಣಿ

ಹೋಗಿ ಅವಳ ಮುಂಗೈ ಮೇಲೆ ಕೂತುಗೊತ್ತು. ಆ ಗಿಣಿಯ ಅಂದ ಚಂದ ನೋಡಿ ಅವಳಿಗೇ ಬೋ ಆನಂದವಾಯಿತು. ಅದರ ತಲೆ ನೀವಿದಳು. ಮುತ್ತು ಕೊಟ್ಟಳು, ಮುದ್ದಾಡಿದಳು. ಅದಕೆ ಬೇಕಾದೋಟು ಉಪಚಾರ ಮಾಡಿದಳು. ಗಿಣಿ ಒಂದಷ್ಟು ದಿವಸ ಅಲ್ಲಿ ಸುಖವಾಗಿತ್ತು.

ಮೇಷ್ಟ್ರು ಬಾಳ ಅಸಾಮಿ, ತಾಯಿ ಹುಟ್ಟೋಗ ತಲೆದಸೀಲಿ ಕೂತಿದ್ದಂತಾ ಗಂಡು. 'ನಾನು ಏನು ಮಾಡಿದ್ರೂ ನನ್ಗೇ ಕೈಕೊಟ್ ಹೋಯ್ತಾ ಅವ್ನಲ್ಲ! ಇರ್ಲಿ ಇವನಿಗೆ ಮಾಡ್ತೀನಿ' ಅಂದುಕೊಂಡು ವಸೀ ದಿವಸ ಅಲ್ಲಿ ಇಲ್ಲಿ ಸಿದಿಕಿದ. ಕೊನೆಗೆ ಹ್ಯಂಗೋ ಇಲ್ಲೇ ಹೋಗ್ಯವನೆ ಅಂತ ತಿಳ್ಕೊಂಡ್‌ಬುಟ್ಟ. ಹಾವಾಡಿಗನ ಯಾಸ ಹಾಕ್ಕೊಂಡ. ಹಾವಿನ ಪುಟ್ಟಿ ಹೊತ್ಕೊಂಡ. ತುತ್ತೂರಿ ಊದ್ತಾ ಅರಮನೆ ಮುಂದಕೆ ಬಂದ, ಗಿಣಿಗೆ ಇದೆಲ್ಲಾ ಗೊತ್ತಾಯಿತು. ಅವನು ರಾಜಕುಮಾರಿಗೆ ಹೇಳಿದ:

"ನೋಡು ರಾಜಕುಮಾರಿ, ಇವತ್ತು ಒಬ್ಬ ಹಾವಾಡಿಗ ಬರ್‍ತಾನೆ, ಕಣ್ಣಿಗೆ ಬೇಕಾದ ಆಟ ಆಡಿ ದೊರೆಯ ಮೆಚ್ಚಿಸ್ತಾನೆ. ಆಗ ನನ್ನ ಕೇಳ್ತಾನೆ. ಆದ್ರೆ ನನ್ನ ಕೊಡುವಾಗ ಕತ್ತು ನುಲಿಚಿ ಎಸದ್ ಬುಡು, ನಾನು ನಿನ್ನ ಕಂಠೀಹಾರಕ್ಕೆ ಸೇರ್‍ಕೊತ್ತೀನಿ. ಆಗ ಕಂಠೀಹಾರನೂ ಕೇಳ್ತಾನೆ. ನೀನು ಹಾರಕಿತ್ತು ಮಣಿ ಊರಿ ಎರಚಿಬುಡು." ಅವಳು ಒಪ್ಪಿಕೊಂಡಳು.

ಹಾವಾಡಿಗ ಬಂದ. ಅರಮನೆ ಮುಂದೆ ತನ್ನ ಪುಟ್ಟಿ ಬಿಚ್ಚಿ ಹಾವು ಆಡಿಸಿದ, ಆಡಿಸಿದ, ಹಂಗಾಡಿಸಿದ. ಇಡೀ ಪಟ್ಟಣಕ್ಕೆ ಪಟ್ಟಣವೇ ಅಲ್ಲಿ ಸೇರಿಬುಡ್ತು. ಮಂತ್ರಿ ಹೋಗಿ, "ಇಂಥಾ ಆಟ ನಾವು ಹಿಂದೂ ಕಂಡಿಲ್ಲ. ಮುಂದೂ ಕಂಡಿಲ್ಲ. ಆ ಆಟ ನೋಡ್ದೇ ಇದ್ರೆ ಕಣ್ಣಿದ್ರೂ ಯರ್ಥ" ಅಂತ ಪರ್ವತರಾಜನಿಗೆ ಹೇಳಿದ. ಅವನಿಗೂ ಆಸೆಯಾಯಿತು. ಹೆಂಡತಿ ಮಕ್ಕಳು ಎಲ್ಲಾರ್‍ನೂ ಕರಕೊಂಡು ಆಟ ನೋಡಾಕೆ ಅಂತ ಬಂದ. ಅಲ್ಲಿ ನಿಂತಿದ್ದೋರೆಲ್ಲಾ ತಲೆದೂಗಿ ತಪ್ಪನೆ ಒಗೆಯೋಹಂಗೆ ಮೇಷ್ಟ್ರು ಆಟ ಆಡಿದ. ಪರ್ವತರಾಜನಿಗೆ ಬಾಳ ಖುಷಿಯಾಯಿತು. "ನಿಂಗೇನು ಬೇಕು, ಹೇಳು" ಅಂದ. ಮೇಷ್ಟರು ಸಲಾಂ ಮಾಡಿ,

"ನಿಮ್ಮ ದಯದಿಂದ ನಂಗೇನೂ ಬ್ಯಾಡಿ" ಅಂದ.

"ಇಲ್ಲ, ನೀನು ಏನಾದರೂ ಕೇಳು ಕೊಡ್ತೀನಿ" ಅಂತ ರಾಜ ಒತ್ತಾಯ ಮಾಡಿದ, ಏನೋ ಹಿಡಿಬಿಟ್ಟಿ ಮೇಲೆ ಒಪ್ಪಿಕೊಂಡೋನಂಗೆ ಒಂದು ಗಳಿಗೆ ಸುಮ್ಮನಿದ್ದು,

"ನಂಗೆ ಇನ್ನೇನೂ ಬ್ಯಾಡಿ, ನಿಮ್ಮ ಮಗಳ ಹತ್ರ ಇರೋ ಅರಗಿಣಿ



ಕೊಡಿ" ಅಂದ.

ರಾಜ "ಇಷ್ಟೇ ತಾನೆ?" ಅಂತ "ಹೋಗಲಿ ಕೊಟ್‌ಬುಡಮ್ಮ. ನಿಂಗೆ ಇನ್ನೊಂದು ಪಸಂದಾದ ಗಿಣಿ ತರಿಸಿಕೊಡ್ತೀನಿ" ಅಂದ. ಅವಳಿಗೆ ಬರಬಾರದ ಕೋಪ ಬಂತು. "ಇವನ ಕಣ್ಣಿಂಗಿ ಕಪಾಲ ಸಿಡಿಯಾ, ನಾನು ಅಪರೂಪದಂಗೆ ಒಂದು ಗಿಣಿ ಸಾಕ್ಕೊಂಡಿದ್ರೆ ಅದರ ಮೇಲೇ ಕಣ್ ಹಾಕ್ತಾನೆ" ಅಂತ ಬೋದು ಕೊಸಾರನೆ ಗಿಣಿ ತಗದು ಕತ್ತು ನುಲಿಚಿ "ತಕ್ಕೋ" ಅಂತ ಎಸೆದಳು. ಹುಡುಗ ಗಿಣಿಯಿಂದ ಹಾರಿ ಕಂಠೀಹಾರದಲ್ಲಿ ಸೇರಿಕೊಂಡ. ಮೇಷ್ಟರಿಗೆ ತಬ್ಬಿಬ್ಬಾಯಿತು. ಆದರೆ ಕಣ್ಣು ಮುಚ್ಚಿ ಕಣ್ಣು ಬುಡೊ ಅಷ್ಟರಲ್ಲಿ ಅವನು ಇವನ ಮಾಯಾಮರೂಡಿ ಎಲ್ಲಾನೂ ತಿಳಕೊಂಡು ಬುಟ್ಟ. ರಾಜನ ಮೊಖ ಪೆಚ್ಚಾಯಿತು. ಅವನು,

"ಹೋಗ್ಲಿ ..... ಏನೋ ಅರೀದ ಹುಡಿಗಿ ಕೋಪದಲ್ಲಿ ಹಿಂಗ್‌ಮಾಡ್‌ಬುಡ್ತು. ಇನ್ನೇನಾರೂ ಕೇಳಿಕೋ" ಅಂದ.

"ಹಂಗಾದರೆ ನಿಮ್ಮ ಮಗಳ ಕೊಳ್ಳಲ್ಲಿರೋ ಕಂಠೀಹಾರಕೊಡಿ" ಅಂದ ಮೇಷ್ಟ್ರು.

ರಾಜಕುಮಾರಿಗೆ ವಿಪರೀತ ಸಿಟ್ಟು ಬಂದು ಬುಡ್ತು. "ಅಯ್ಯೋ ನಿನ್ನ ನೆಗೆದು ಬಿದ್ದೋಗ. ನಾನು ಹಾಕ್ಕೊಂಡಿರೋ ಪದಾರ್ಥದ ಮೇಲೇ ನಿಂಗೆ ಕಣ್ಣು. ತಕ್ಕೋ, ಹ್ಯಂಗಾರೂ ನಿನ್ನ ಮನೆ ಹಾಳ್ಮಾಡ್ಕೋ" ಅಂತ ಬೋದು ಸರ್ರನೆ ತನ್ನ ಕೊಳ್ಳಲ್ಲಿದ್ದ ಕಂಠೀಸರ ಕಿತ್ತು ಮಣಿ ಊರಿ ಎರಚಿ ಬಿಟ್ಟಳು. ಅವು ದಿಕ್ಕಿಗೊಂದು ದೇಶಕ್ಕೊಂದು ಆಗಿಹೋದೊ. 'ಓಹೋ, ಕೆಡ್ತಲ್ಲ ಈಗ ಕೆಲಸ" ಅಂದುಕೊಂಡು ಮೇಷ್ಟ್ರು ತಕ್ಷಣ ಕೋಳಿಹುಂಜನ ಯಾಸ ತಾಳಿದ. ಒಂದೊಂದು ಮಣಿ ಆಯ್ತಾ ಹೊಂಟ. ಅಲ್ಲಿ ನಿಂತಿದ್ದೋರೆಲ್ಲ ಬೆಕ್ಕಸ ಬೆರಗಾಗಿ ಬಾಯಿ ಬುಟ್ಕೊಂಡು ಈ ಚೋಜಿಗ ನೋಡ್ತಾ ಇದ್ದರು. ಮೇಷ್ಟ್ರು ನಾಕೈದು ಮಣಿ ಆದನೋ ಇಲ್ಲವೋ, ಹುಡುಗ ದೊಡ್ಡ ಕಾಡು ಗೊತ್ತಿ.ಆಗಿ ಹುಂಜದ ಮೆಟರೆ ಹಿಡಕೊಂಡು ಬುಟ್ಟ. ಅಲ್ಲಿದ್ದೋರೆಲ್ಲ "ಅಯ್ಯೋ ಅಯ್ಯೋ' ಅಂತ ಬಡಕೊಂಡರು. ರಾಜ ಮುಂದೆ ಬಂದು "ಪ್ರಾಣ ತಗೀ ಬ್ಯಾಡಿ, ನೀವ್ಯಾರು ಹೇಳಿ. ನಿಮ್ ನಿಮ್ ವಿಷಯ ಏನಿದ್ರೂ ಹೇಳು ನಾನು ನ್ಯಾಯ ತೀರ್ಮಾನ ಮಾಡ್ತೀನಿ" ಅಂದ. ಸರಿ, ರಾಜ ಹಂಗಂದ ಕೂಡಲೇ ಮೇಷ್ಟ್ರು ಹುಡುಗ ತಮ್ಮ ನಿಜರೂಪು ಪಡಕೊಂಡರು. ಆ ಮೇಲೆ ರಾಜ "ಈ ಸತಿ ಹೇಳಿ, ನೀವು ಯಾರು?" ಅಂದ.

ಮೇಷ್ಟ್ರು ಆ ಹುಡುಗನಿಗೆ "ನೀನೇ ಹೇಳು" ಅಂದ.

ಹುಡುಗ "ಇಲ್ಲ. ನೀವೇ ಹೇಳಿ ದೊಡ್ಡೋರು" ಅಂದ.

ಮೇಷ್ಟರಿಗೆ ಹಿಡಿ ನಾಚಿಕೆಯಾಯಿತು. ಸರಿ, ನಡೆದ ಸಂಗತಿಯಲ್ಲಾನೂ ಮೊದಲಿಂದ ಕೊನೆಗಂಟ, ಒಂದೀಟೂ ಬುಡದೆ ಮೇಷ್ಟರು ಹೇಳಿದ. ಆಗ ರಾಜ ಮೇಷ್ಟರ ಕಡೆಗೆ ತಿರುಗಿ,

"ಜಲ್ಮ ಕೊಟ್ಟ ಅಪ್ಪನೂ ಒಂದೇ, ವಿದ್ಯ ಕಲಿಸಿದ ಗುರುವೂ ಒಂದೇ. ನೀವು ಹೀಗೆ ಒಬ್ಬರಿಗೊಂದು ಇನ್ನೊಬ್ಬರಿಗೊಂದು ವಲವಾರ ಮಾಡಬಾರ್ದು', ಅದೂ ಅಲ್ದೆ ಯಿದ್ಯ ಕಲಿಸಿದ ಮಗನ ಮೇಲೆ ಹಿಂಗೆ ಹಠ ಸಾಧಿಸ್ಬಾರ್ದು ಇದು ತುಂಬ ಅನ್ಯಾಯ" ಅಂದ. ಆಮೇಲೆ ಆ ಹುಡುಗನ ಕಡೆಗೆ ತಿರುಗಿ "ತಂದೇಗಿಂತ ಗುರುವೇ ಹೆಚ್ಚು. ಗುರು ಏನ್ಮಾಡಿದ್ರೂ ಅವನ್ನ ಸಾಯಿಸೋದು ಮಹಾ ಪಾಪಾ" ಅಂತ ಹೇಳಿದ. ಅಂತೂ ಇಂತೂ ಹುಡುಗನದೇ ಸರಿ ಅಂತ ತೀರ್ಮಾನ ಆಗಿಹೋಯ್ತು. ಮೇಷ್ಟ್ರು "ನಂದು ಮಹಾಂತ ತಪ್ಪು. ನಾನು ಮಣ್ಣು ತಿನ್ನೋ ಕೆಲಸಮಾಡಿದೆ. ಇನ್ನು ಏಳೇಳು ಜಲ್ಮಕ್ಕೂ ಇಂಥ ಅಮಾಧಿ ತಿನ್ನೋಕೆಲಸ ಮಾಡೋದಿಲ್ಲ" ಅಂತ ಹೇಳಿ ಹೊಂಟು ಹೋದ.

ರಾಜನ ಮಗಳು ತಾನು ಏನಾದ್ರೂ ಅವನ್ನೇ ಮದುವೆ ಆಯ್ತೀನಿ ಅಂತ ಹಠ ಹಿಡಿದುಬುಟ್ಟಳು. ಹುಡುಗ ಯಾವ ರಾಜಕುಮಾರನಿಗೂ ಒಂದು ರೇಣು ತೂಕಾನೂ ಕಡಿಮೆ ಅನ್ನೋಹಂಗಿರಲಿಲ್ಲ. ಸರಿ, ರಾಜ ಒಪ್ಪಿಕೊಂಡ. ಕೊಟ್ಟಣ ಕುಟ್ಟಿ ಪಟ್ಟಣ ಸಾರಿಸಿ ಅವನಿಗೂ ತನ್ನ ಮಗಳಿಗೂ ಒಳ್ಳೇ ಅದ್ದೂರಿಯಿದ ಮದುವೆ ಮಾಡಿದ. ಆಮೇಲೆ ಆ ಹುಡುಗ ತಮ್ಮ ಅಪ್ಪ ಅವ್ವನ ಸುದ್ದಿ ತಿಳಿಸಿದ. ಕಾಡಿನ ಗುಡ್ಲಲ್ಲಿ ಇದ್ದ ಅಪ್ಪ ಅವ್ವನನ್ನು ಕರೆಸಿಕೊಂಡ. ಮೇಷ್ಟ್ರ ಹತ್ರ ಇದ್ದ ಅಣ್ಣನ್ನೂ ಕರೆಸಿಕೊಂಡ. ಆಮೇಲೆ ತನ್ನ ಮಾವನ ದಂಡು ದಾಳಿ ಮಂದಿ ಮಾರ್ಬಲ ಎಲ್ಲನೂ ತಕ್ಕೊಂಡುಹೋಗಿ ಕದಂಬರ ರಾಜನ್ನ ಸೋಲಿಸಿ ಯಂಡುತುಂಡಿಗೆ ಕತ್ತರಿಸಿ ಹಾಕಿದ. ತನ್ನ ಅಪ್ಪನ ದೇಶ, ಕದಂಬರನ ದೇಶ ಮತ್ತೆ ಮಾವನ ದೇಶ – ಹಿಂಗೇ ಮೂರು ದೇಶಕ್ಕೂ ದೊರೆಯಾಗಿ ಸುಖವಾಗಿ ಬದೀಕ್ಕೊಂಡ.

* * * *



## ಟೋಪಿ – ಕೋಲು – ಉಂಗುರ*

ಒಂದು ರಾಜ್ಯದಲ್ಲಿ ಒಬ್ಬ ದೊರೆ. ಅವನಿಗೆ ಮೂರು ಜನ ಹೆಂಡತಿಯರು. ಅವರು ಏನೇನು ಮಾಡಿದರೂ, ಎಷ್ಟು ಗಿರಿ ಹತ್ತಿ ವರಬೇಡಿದರೂ ದಾನಧರ್ಮ ಮಾಡಿದರೂ ಅವರಿಗೆ ಮಕ್ಕಳಾಗಲಿಲ್ಲ. ತಮಗೆ ಪಿಂಡ ಕಾಣಿಸೋನು ಒಬ್ಬ ಮಗ ಇಲ್ದೇ ಹೋದನಲ್ಲಾ ಅಂತ ರಾಜನಿಗೂ ರಾಣಿಯರಿಗೂ ಇಳ್ಳು ಹಗಲೂ ಅದೇ ಯೋಚನೆಯಾಯಿತು. ಹಿಂಗಿದ್ದಾಗ ಆ ಪಟ್ಟಣದ ವತ್ತೀಲಿ ಒಂದು ತೋಟದಲ್ಲಿ ಒಬ್ಬ ಋಷಿ ಬಂದು ಇಳುಕೊಂಡು ತಪಸ್ಸು ಮಾಡ್ತಾ ಅವನೆ ಅಂತ ಗೊತ್ತಾಯಿತು. "ನೀವು ಹೋಗಿ ಋಷಿಗಳ್ನ ಒಂದು ಮಾತು ಕೇಳಿಕೊಂಡು ಬನ್ನಿ" ಅಂತ ರಾಣೀರು ಒಂದೇ ಸಮನೆ ರಾಜನಿಗೆ ಹಿಂಸೆಮಾಡಿದರು. ಅವರ ಕಾಟ ತಡೀಲಾರ್ದೆ ಒಂದು ದಿನ ರಾಜ ಋಷಿ ಹತ್ರಕ್ಕೆ ಬಂದ. ಅವರಿಗೆ ಹಣ್ಣು ಹಂಪಲ ಕೊಟ್ಟು ನಮಸ್ಕಾರ ಮಾಡಿದ.

"ಏನು ಬಂದೆ?" ಅಂತ ಕೇಳಿದ ಋಷಿ.

"ನನಗೆ ಮೂರು ಜನ ಹೆಂಡತೀರು. ಒಬ್ಬರಿಗೂ ಸುಳಿ ಸಂತಾನ ಇಲ್ಲ. ನೀವು ಏನಾದ್ರೂ ಮಾಡಿ ವರ ಕೊಡಬೇಕು" ಅಂತ ಬೇಡಿಕೊಂಡ ರಾಜ.

ಋಷಿ ಒಂದು ಗಳಿಗೆ ಯೋಚನೆ ಮಾಡಿದ, ಆಮೇಲೆ

"ಇಲ್ಲಿ ಕಾಣೋ ಮಾವಿನ ಮರದಲ್ಲಿ ಮೂರು ಹಣ್ಣು ಕುಯ್ಕೊಂಡು ಬಾ" ಅಂದ.

ರಾಜ ಮರಹತ್ತಿ ನೋಡಿದ. ಮರಾದಮರೆಲ್ಲಾ ಹಣ್ಣಾಗಿ ನೇತಾಡ್ತಾ ಇದ್ವೊ. ಅವನಿಗೆ ಬಾಯಲ್ಲಿ ನೀರು ಬಂತು. ಬಾಳ ಆಸೆ ಆಯ್ತು. ಒಂದು ಬುಟ್ಟಿ ತುಂಬಾ ಕಣ್ಣಿಗೆ ಬೇಕಾದ ಹಣ್ಮು ಕುಯ್ಕೊಂಡು ಕೆಳಕ್ಕೆ ಇಳಿದ. ಇಳಿದು ನೋಡಿದರೆ ಬುಟ್ಟೀಲಿ ಮೂರೆ ಹಣ್ಣು ! 'ಎಲಾ ಎಲಾ ಇದೇನು ಸೋಜಿಗ' ಅಂದುಕೊಂಡು ಮತ್ತೆ ಮರ ಹತ್ತಿ ಆ ಬುಟ್ಟಿ ತುಂಬಾ ಹಣ್ಣು ಕುಯ್ಕೊಂಡು ಕೆಳಕ್ಕಿಳಿದ. ಮತ್ತೆ ನೋಡಿದರೆ ಬುಟ್ಟಿ ತುಂಬಿದ ಹಣ್ಣು ಮಾಯವಾಗಿ ಮೂರೇ ಹಣ್ಣು ! ಆಗ

* ಕಥೆ ಹೇಳಿದವರು : ಹಾಸನ ಜಿಲ್ಲಾ ಅರಕಲಗೂಡು ತಾಲ್ಲೂಕು ಹಂಪಾಪುರದ ಸೋದರ ಎಚ್.ಜೆ. ಹುಚ್ಚೇಗೌಡ.

‘ಇದೆಲ್ಲಾ ಋಷಿ ಮಾಯ, ನಾನು ಅತಿಯಾಸೆಮಾಡಿದ್ದು ತಪ್ಪು. ಎಣ್ಣೆ ಸರವಿಕೊಂಡು ಮಳ್ಳಿಗೆ ಬಿದ್ರೆ ಅದೃಷ್ಟ ಇದ್ದಷ್ಟೇ ಹತ್ತೋದು’ ಅಂದುಕೊಂಡು ಋಷಿ ಹತ್ರಕ್ಕೆ ಬಂದು ಆ ಮೂರು ಹಣ್ಣೂ ಕೊಟ್ಟ.

ಋಷಿ ಹುಸಿನಗೆ ನಗ್ತಾ ಆ ಹಣ್ಣು ಈಸಿಕೊಂಡು ಅವಕ್ಕೆ ಏನೇನೋ ಮಂತ್ರ ಹಾಕಿದ. ಆಮೇಲೆ ಅವನ್ನ ರಾಜನ ಕೈಗೆ ಕೊಟ್ಟು “ಇವು ತಿನ್ನುವಾಗ ಯಾರ‍್ಯಾರು ಏನೇನು ಯೋಚನೆ ಮಾಡ್ತಾರೊ ಹಂಗೇ ಮಕ್ಕಳಾಗ್ತವೆ” ಅಂತ ಹೇಳಿದ.

ರಾಜ ಸಂತೋಷದಿಂದ ಆ ಮೂರು ಹಣ್ಣನ್ನೂ ತಕ್ಕೊಂಡು ಹೋಗಿ ಒಬ್ಬೊಬ್ಬರಿಗೆ ಒಂದೊಂದು ಹಣ್ಣು ಕೊಟ್ಟ. ಕೊಡುವಾಗ “ನೀವು ಈ ಹಣ್ಣು ತಿನ್ನಿ. ಆದರೆ ಹಣ್ಣು ತಿನ್ನುವಾಗ ನೀವು ಏನೇನು ಯೋಚನೆಮಾಡುತ್ತೀರೋ ಹಂಗಂಗೇ ಮಕ್ಕಳಾಗ್ತವೆ” ಅಂತ ಹೇಳಿದ.

ಸರಿ, ಒಂದು ಬೆಳಿಗ್ಗೆ ಆ ಮೂರು ಜನ ರಾಣೀರೂ ದೇವರ ಪೂಜೆ ಮಾಡಿದರು. ಒಳ್ಳೆ ಯೋಚನೆ ಮಾಡ್ತಾ ಹಣ್ಣು ತಿನ್ನಬೇಕು’ ಅಂದುಕೊಂಡರು. ಆದರೆ ಮೊದಲನೆಯವಳು ಹಣ್ಣು ತಿನ್ನುವಾಗ ಯಾಕೋ ಏನೋ ’ಕಳ್ಳತನಮಾಡಿ ಬದುಕುತ್ತಾರಲ್ಲ, ಅವರ ಬಾಳು ಹ್ಯಂಗೆ?’ ಅನ್ನೋ ಯೋಚನೆ ಬಂತು. ಎರಡನೆಯವಳಿಗೆ ‘ಕುಂಟರ ಬಾಳು ಹ್ಯಂಗೆ?’ ಅನ್ನೋ ಯೋಚನೆ ಬಂತು. ಮೂರನೆಯವಳಿಗೆ ‘ಸದಾ ದುಡ್ಡಿಲ್ಲದೆ ಪರದಾಡ್ತಾರಲ್ಲ ಅವರ ಬಾಳು ಹ್ಯಂಗೆ?” ಅನ್ನೋ ಯೋಚನೆ ಬಂತು. ಅಂತೂ ಮೂರು ಜನವೂ ಹಣ್ಣು ತಿಂದರು. ಬಿಮ್ಮನಸೇರಾದರು.

ನವಮಾಸೊಂಬತ್ತು ತಿಂಗಳು ತುಂಬ್ತು. ಮೂರು ಜನವೂ ಮೂರು ಗಂಡುಮಕ್ಕಳನ್ನು ಹೆತ್ತರು. ಮೂರು ಜನವೂ ಒಳ್ಳೇ ಹವಳದ ಕುಡಿ ಹಂಗೆ ಇದ್ದರು. ರಾಜ ರಾಣಿಯರಿಗೆ ಅಪರಿಮಿತ ಸಂತೋಷವಾಯಿತು. ಮೂರು ಮಕ್ಕಳೂ ಹೊತ್ತಿಗೆ ಬೆಳಿ ಅಂದರೆ ಜಾವಕ್ಕೆ ಬೆಳೆದರು. ದೊಡ್ಡವರಾದರು. ಆದರೆ ಹಿರಿಯೋನು ಮನೇಲಿ ದುಡ್ಡು ಕಾಸು ಅದು ಇದು ಕದಿಯಾಕೆ ಷುರುವಾದ. ಆಮೇಲಾಮೇಲೆ ಹೊರಗಡೇನೂ ಏನೇನೋ ಕಳ್ಳತನ ಮಾಡಕೆ ಷುರುವಾದ. ಪ್ರತಿ ನಿತ್ಯ ಅವನ ಮೇಲೆ ಕಳ್ಳತನದ ದೂರು ಬರಾಕೆ ಷುರುವಾಯಿತು. ಎರಡನೆಯವನಿಗೆ ಒಂದು ಕಾಲು ಸೇದಿಕೊಂಡಿತ್ತು. ಅವನಿಗೆ ಮುಂದಕ್ಕೆ ಮೂರು ಹೆಜ್ಜೆಹಾಕಾಕಾಗ್ತಾ ಇರಲಿಲ್ಲ. ಮೂರನೇಯವನು ಮನೇಲ್ದಿ ಹಣಕಾಸು ಎಲ್ಲಾನೂ ದುಂದು ಮಾಡ್ತಿದ್ದ. ಕೈಗೆ ಸಿಕ್ಕಿದ ಸಾಮಾನು ಮಾರುತಿದ್ದ. ಆದರೆ ಅವನ ಕೈಲಿ



ಯಾವಾಗಲೂ ಮೂರು ಕಾಸೂ ಉಳೀತಿರಲಿಲ್ಲ. ರಾಜನ ಮಗನಾದ್ರೂ ಯಾವಾಗಲೂ ದಟ್ಟದರಿದ್ರ ಬಂದೋನಂಗೆ ಆಡುತಿದ್ದ. ರಾಜನಿಗೆ ಇದು ನೋಡಿ ಮನಸ್ಸಿಗೆ ತುಂಬಾ ಕೊರತನೆ ಹತ್ತಿಕೊಂಡ್ ಬುಡ್ತು. “ಮೂರು ಜನ ಮಕ್ಳೂ ಮೂರಂದ ಆಗಿ ಬುಟ್ರಲ್ಲ. ಒಬ್ಬನಾದ್ರೂ ನನ್ನ ಹೆಸರುಳಿಸೋ ಅಂಥೋನು ಆಗಲಿಲ್ಲವಲ್ಲ. ಮಕ್ಕಳಿಲ್ಲದೆ ಇದ್ದಾಗ ಇಲ್ಲ ಅಂತ ಒಂದೇ ಚಿಂತೆ, ಇದ್ದಾಗ ನಾನಾ ಚಿಂತೆ. ಇಂತ ಮಕ್ಳು ಹುಟ್ಟೋದ್ಕಿಂತ ನನ್ನ ಹೆಂಡತೀರು ಬಂಜೇರಾಗಿದ್ರೇ ಎಷ್ಟೋ ಚಂದಾಗಿತ್ತು” ಅಂದುಕೊಂಡು ದಿನಾನೂ ಕೊರಗ್ತಾ ಇದ್ದ. ರಾಣೀರು “ಋಷಿಗಳ ಹತ್ರಕ್ಕಾದ್ರೂ ಹೋಗಿ ಕೇಳ್ಕೊಂಡ್‌ಬನ್ನಿ” ಅಂತ ಪೀಡಿಸಿದರು.

ರಾಜ ಸಪ್ಪಗೆ ಮೊಖ ಮಾಡಿಕೊಂಡು ಬಂದು ಋಷಿಗಳ ಮುಂದೆ ನಿಂತುಕೊಂಡ. “ಏನಪ್ಪಾ ಬಂದೆ?” ಅಂದ ಋಷಿ.

“ನೀವು ಮಕ್ಕಳ ಫಲ ಕೊಟ್ರಿ. ಆದರೆ ಒಬ್ಬೂ ನ್ಯಾಯವಾದ ಮಗುಹುಟ್ಲಿಲ್ಲ. ಒಬ್ಬ ಕಳ್ಳ, ಒಬ್ಬ ಕುಂಟ, ಇನ್ನೊಬ್ಬ ದಟ್ಟದರಿದ್ರ. ಇಂಥಾ ಮಕ್ಕಳು ಕಟ್ಕೊಂಡು ನಾನೇನ್ ಮಾಡ್ಲಿ?” ಅಂದ ರಾಜ.

“ನಾನೇನಪ್ಪಾ ಮಾಡ್ಲಿ. ಮನಸಿನಂತೆ ಮಹಾದೇವ. ನಿನ್ನ ಹೆಂಡ್ತೀರು ಒಳ್ಳೇ ಮನಸಿನಿಂದ ಹಣ್ಣು ತಿಂದಿದ್ರೆ ಒಳ್ಳೇ ಮಕ್ಕಳಾಗ್ತಾ ಇದ್ರು” – ಅಂದ ಋಷಿ.

ರಾಜ ಕಣ್ಣೀರು ಸುರಿಸಿದ. ಅವನ ಸ್ಥಿತಿ ನೋಡಿ ಋಷಿಗೆ ಹೊಟ್ಟೆ ಉರೀತು. ರಾಜನಿಗೆ ಒಂದು ಟೋಪಿ, ಒಂದು ಕೋಲು, ಒಂದು ಉಂಗುರ ಮೂರ‍್ನೂ ಕೊಟ್ಟು ಹೇಳಿದ:

“ಈ ಟೋಪಿ ನಿನ್ನ ಹಿರೀಮಗನಿಗೆ ಕೊಡು. ಇದನ್ನು ಹಾಕ್ಕೊಂಡು ಅವನು ಎಲ್ಲಿ ಕಳ್ಳತನ ಮಾಡಿದ್ರೂ ಸಿಕ್ಕಿಹಾಕ್ಕೊಳೋದಿಲ್ಲ. ಆ ಕೋಲನ್ನು ನಿನ್ನ ಕುಂಟ ಮಗನಿಗೆ ಕೊಡು. ಇದು ಅವನು ಎಲ್ಲಿಗೆ ಬೇಕೂ ಅಂದ್ರೆ ಅಲ್ಲಿಗೆ ಕರಕೊಂಡು ಹೋಗಿ ಬುಡ್ತದೆ. ಈ ಉಂಗುರ ನಿನ್ನ ಕಿರೀಮಗನಿಗೆ ಕೊಡು. ಇದನ್ನು ಅವನು ಬೆರಳಿಗೆ ಹಾಕ್ಕೊಂಡು ಬಗ್ಗಿಸಿದರೆ ಚಿನ್ನದ ನಾಣ್ಯಗಳೇ ಸುರೀತವೆ.”

ರಾಜನಿಗೆ ಸಂತೋಷವಾಯಿತು. ಆ ಮೂರ‍್ನೂ ತಕ್ಕೊಂಡು ಹೋಗಿ ಮೂರು ಜನ ಮಕ್ಕಳಿಗೂ ಕೊಟ್ಟ. ಕಿರೀಮಗ ಬಾಳ ಕಿಲಾಡಿ. ಅವನು ‘ಇಂಥ ಉಂಗುರ ಮಡೀಕ್ಕೊಂಡು ಸುಮ್ಮನೆ ಕೂತ್ಕೋಬಾರ್ದು. ಎಲ್ಲಿಗಾದ್ರೂ ಹೋಗಿ ಒಂದು ಅಪರಂಜಿಯಂಥ ಹೆಣ್ಣು ನೋಡಿ ಮದುವೆಯಾಗಿ ಬರಬೇಕು’ ಅಂಥ ಯೋಚನೆ ಮಾಡಿದ. ಸರಿ, ಊರು ಬುಟ್ಟು ಹೊಂಟ್‌ಹೋದ.

## ೨

ಒಂದು ಪಟ್ಟಣದಲ್ಲಿ ಒಬ್ಬ ರಾಜ. ಅವನಿಗೆ ಒಬ್ಬಳೇ ಒಬ್ಬಳು ಮಗಳು. 'ಒಂದು ಆನೆ ಮೇಲೆ ಒಬ್ಬ ಮನುಷ್ಯ ನಿಂತುಕೊಂಡು ಬಿಲ್ಲಿಗೆ ಬಾಣ ಹೂಡಿ ಹೊಡೆದರೆ ಆ ಬಾಣ ಎಷ್ಟು ಎತ್ತರಕ್ಕೆ ಹೋಗುತ್ತೋ ಅಷ್ಟು ಎತ್ತರದವರೆಗೆ ಹೊನ್ನಿನ ರಾಶಿ ಹಾಕಿದೋರಿಗೆ ಮದುವೆ ಆಗ್ತೀನಿ' ಅಂತ ಅವಳು ಪಂಥ ಕಟ್ಟಿದ್ದಳು. ಅಲ್ಲೀವರೆಗೆ ಯಾರೂ ಅಂಥೋರು ಬಂದಿರಲಿಲ್ಲ.

ರಾಜನ ಮಗ ಅದೇ ಊರಿಗೆ ಹೋಗಿ ಒಬ್ಬಳು ಅಡುಗೂಲಜ್ಜಿ ಮನೇಲಿ ಉಳಕೊಂಡ. ಅವಳು ಈ ವಿದ್ಯಮಾನ ಎಲ್ಲಾ ಅವನಿಗೆ ಹೇಳಿದಳು. ಅವನು "ಆಗಲಿ ಅಜ್ಜಿ, ನಾನು ಅಷ್ಟು ಹಣ ಕೊಡ್ತೀನಿ, ನೀನು ಒಪ್ಕೊಂಡು ಬಾ" ಅಂತ ಹೇಳಿಕಳಿಸಿದ. ಅವಳು ಬಂದು ರಾಜಕುಮಾರೀಗೆ ಈ ಸುದ್ದಿ ತಿಳಿಸಿದಳು. ಅವಳಿಗೆ ಸೋಜಿಗವಾಯ್ತು. "ಅವನ್ನ ಕರಕೊಂಡು ಬಾ" ಅಂದಳು.

ರಾಜನ ಮಗ ತನ್ನ ಉಂಗುರ ಬಗ್ಗಿಸಿದ. ಹೊನ್ನು ಸುರೀತು, ಸುರೀತು ಅಷ್ಟು ಸುರೀತು. ರಾಶಿ ರಾಶಿಯಾಗಿ ಹೋಯ್ತು. ಅದೆಲ್ಲಾನೂ ಸಾಲು ಗಾಡೀಲಿ ಹೇರಿಸಿಕೊಂಡು ಅರಮನೆ ಹತ್ರಕ್ಕೆ ಬಂದ. ಪಟ್ಟಣದ ಜನಾದಜನವೆಲ್ಲ ಗುಜು ಗುಂಪಲಾಗಿ ಅರಮನೇ ಮುಂದೆ ಜಾತ್ರೆ ಹಂಗೆ ಸೇರಿಬುಡ್ತು. ರಾಜಕುಮಾರಿ ಕೈಲಿ ಹೂಮಾಲೆ ಹಿಡಕೊಂಡು ನಿಂತುಕೊಂಡಳು. ರಾಜ ಒಂದು ಎತ್ತರವಾದ ಆನೆ ತರಿಸಿದ. ಒಬ್ಬ ಸಿಪಾಯಿ ಅದರ ಮೇಲೆ ನಿಂತುಕೊಂಡು ಬಿಲ್ಲಿಗೆ ಬಾಣ ಹೂಡಿ ಆಕಾಶದ ಕಡೆಗೆ ಹೊಡೆದ. ರಾಜನ ಮಗ ಅದರ ಎತ್ರಕ್ಕೂ ಹೊನ್ನು ಸುರಿದ. ಅವನು ಸುರಿದ ಹೊನ್ನು ಅದಕ್ಕಿಂತ ಎತ್ತರವಾಗಿತ್ತು. ಸರಿ, ರಾಜಕುಮಾರಿ ಅವನ ಕೊರಳಿಗೆ ಹೂಮಾಲೆ ಹಾಕಿದಳು. ರಾಜ ಕೊಟ್ಟಕುಟ್ಸಿ ಪಟ್ಟ ಸಾರ್ಲಿ ಬಾಳ ವೈಭೋಗದಿಂದ ಮದುವೆ ಮಾಡಿದ.

ಒಂದು ದಿನ ರಾಜನ ಮಗ ಸೆಜ್ಜೆ ಮನೇಲಿ ಮಲಗಿದ್ದ. ರಾಜಕುಮಾರಿ ಅವನ ಹತ್ರ ಕೂತುಗೊಂಡು ಯೋಚನೆ ಮಾಡಿದಳು: "ಇವನ ಹತ್ರ ಏನೂ ಇಲ್ಲವಲ್ಲ. ಇಷ್ಟೊಂದು ಹೊನ್ನಿನ ರಾಶಿ ಇವನಿಗೆ ಹ್ಯಂಗೆ ಬಂತು" ಅಂತ. ಅವನು ಮಾನಿದ್ದೇಲಿ ಮಲಗಿದ್ದ. ಅವಳು ಅವನ ಜೋಬಿ ಪಾಬಿ ಎಲ್ಲಾನೂ ಹುಡುಕಿ ತಡಕಿ ನೋಡಿದಳು. ಎಲ್ಲೂ ಏನೂ ಸಿಕ್ಕಲಿಲ್ಲ. ಬೆರಳಲ್ಲಿ ಮಾತ್ರ ಒಂದು ಉಂಗುರ ಇತ್ತು. ಕೈ ಹಿಡಿದು ಅಲ್ಲಾಡಿಸಿದಳು. ಉಂಗುರ ಬಗ್ಗಿದಾಗ ಹೊನ್ನು ಸುರೀತು. ಆಗ ಅವಳಿಗೆ ಗುಟ್ಟು ತಿಳಿದುಹೋಯ್ತು. 'ಇರಲಿ' ಅಂದುಕೊಂಡು ಸುಮ್ಮನಾದಳು.



ಮಾರನೆ ದಿನ ಅಂಥದೇ ಒಂದು ಉಂಗುರ ತಯಾರುಮಾಡಿಸಿದಳು. ಗಂಡ ಎಂದಿನಂತೆ ಮಲಗಿದ್ದಾಗ ಈ ಉಂಗುರ ಅವನ ಬೆರಳಿಗೆ ತೊಟ್ಟು ಅವನ ಉಂಗುರ ಬಿಚ್ಚಿಕೊಂಡಳು. ಅವನು ಎದ್ದಮೇಲೆ ಏನೇನೋ ನೆಪ ಮಾಡಿ ಬಾಳ ವಯ್ಯಾರ ಮಾಡಿ "ಒಂದು ಸಾವಿರ ವರ ಬೇಕಾಗಿತ್ತು" ಅಂದಳು. ಅವನು ತಾತ್ಸಾರದಿಂದ "ಅದ್ಕೇನಂತೆ ತಕೋ" ಅಂತ ತನ್ನುಂಗುರ ಬಗ್ಗಿಸಿದ. ಇನ್ನೆಲ್ಲಿ ಹೊನ್ನು ಬಿದ್ದಾತು? ಅವನ ಮೊಖ ಒಂದು ಕಪ್ಪೆಚಿಪ್ಪಿನ ತರ ಆಯ್ತು. ಅವಳು ತಕ್ಷಣ ಮೋರೆ ಗಂಟ್ಹಾಕಿ ಗೊಂಡು "ನಿನ್ನಾಟೆಲ್ಲಾ ನಂಗೊತ್ತು. ಒಂದು ಸಾವಿರ ವರ ಕೊಡೋಕಾಗ್ದೇ ಇದ್ಮೇಲೆ ನೀನೆಂಥ ಗಂಡಸು? ಮೊದ್ಲು ನನ್ನ ಅರಮನೆ ಬುಟ್ಟು ಆಚೆಗೆ ಕಡಿ" ಎಂದಳು. ಅವನು ಏನೂ ತೋರದೆ ಕಕಮಕರು ಬಂದೋನಂಗೆ ಮಿಕಮಿಕ ನೋಡಿದ. ಅವಳು ಇನ್ನೂ ಜೋರು ಮಾಡಿ ಅರಮನೆ ಜವಾನನ ಕರದು ಆಚೆಗೆ ನೂಕಿಸಿಬುಟ್ಟಳು.

ರಾಜನ ಮಗ ಕೈ ಹಿಸುಕಿಕೊಂಡ. 'ನನಗೇ ಕೈಕೊಟ್ಟಲ್ಲಾ. ಇರ್‍ಲಿ ಇವಳಿಗೆ ಮಾಡ್ತೀನಿ' ಅಂದುಕೊಂಡು ತಮ್ಮೂರಿಗೆ ಹೋದ. ಇವರಪ್ಪ ಅವ್ವ ಇವನು 'ಎಲ್ಲಿಗೆ ಹೋದ, ಎಲ್ಲಿಂದ ಬಂದ' ಅಂತ ಕೇಳ್ತಿರಲಿಲ್ಲ. ಅಣ್ಣದೀರು ಮಾತ್ರ "ಇಷ್ಟು ದಿನಗಂಟ ಎಲ್ಲಗಿ ಹೋಗಿದ್ದೆ" ಅಂತ ಹೇಳಿದರು. ಅವನು ನಡೆದ ಸಂಗತೀನೆಲ್ಲ ಹೇಳಿದ. ಆಮೇಲೆ ಹಿರಿಯಣ್ಣನಿಗೆ "ಅಣ್ಣ ಅಣ್ಣ ನಿನ್ನ ಟೋಪಿ ಕೊಡು. ನನ್ನ ಉಂಗುರ ಹೊಡಕೊಂಡು ಬ್ಟುಟವಳೆ. ಏನಾದ್ರೂ ಮಾಡಿ ಅದ ಹೊಡ್‌ಕೊಂಡು ಬಂದ್‌ಬುಡ್ತೀನಿ" ಅಂದ. ಅವನು ಆಗೋದಿಲ್ಲ ಅಂದ. ಆದ್ರೂ ಬುಡದೆ ಅವನ್ನು ಕಾಡಿಸಿ ಪೀಡಿಸಿ ಏನೇನೋ ಗಿಲೀಟು ಮಾಡಿ ಟೋಪಿ ಈಸುಕೊಂಡು ಬುಟ್ಟ.

ಟೋಪಿ ಹಾಕ್ಕೊಂಡು ಮತ್ತೆ ರಾಜಕುಮಾರಿ ಪಟ್ಟಣಕ್ಕೆ ಹೋದ. ಯಾರಿಗೂ ಗೊತ್ತಾಗದಂಗೆ ಅರಮನೆ ವಳಕ್ಕೆ ನುಸುಕೊಂಡ. ಮೆತ್ತಗೆ ಸಜ್ಜೆಮನೆಗೆ ಹೋದ. ಅಲ್ಲಿ ರಾಜಕುಮಾರಿ ಪಟ್ಟೆ ಮಂಚದ ಮೇಲೆ ಸುಖನಿದ್ರೇಲಿ ಮಲಗಿದ್ದಳು. ಅವನು ಹೋಗಿ ನೋಡ್ತಾನೆ: ತನ್ನ ಉಂಗುರ ಅವಳ ಕೈಲೇ ಕೂತದೆ! 'ನನಗೇ ಏಳು ಮೊಗೆ ನೀರು ಕುಡಿಸಿದ್ಯಲ್ಲಾ ಗರ್ತಿ, ನಿನಗೆ ನಾನು ಕುಡಿಸ್ತೀನಿ ನೋಡು' ಅಂದು ಕೊಂಡು ಬಗ್ಗಿ ಅವಳ ಕೈಲಿದ್ದ ಉಂಗುರ ಬಿಚ್ತಾ ಇದ್ದ, ಅಷ್ಟು ಹೊತ್ತಿಗೆ ಅವನ ತಲೇಮೇಲಿದ್ದ ಟೋಪಿ ಕೆಳಕ್ಕೆ ಬಿದ್ದುಹೋಯ್ತು. ಅವನು ತಟಕ್ಕನೆ ಅದ ತಕ್ಕೋಳೋದ್ರಲ್ಲಿ ರಾಜಕುಮಾರಿಗೆ ಎಚ್ಚರವಾಯಿತು. ಅವಳು ಸರಕ್ ಅಂತ ಎದ್ದು ಆ ಟೋಪಿ ತಕ್ಕೊಂಡು ನೋಡ್ತಾಳೆ: ಎದುರಿಗೆ ತನ್ನ ಗಂಡ ನಿಂತವ್ನೆ !

ಅವಳು ತಕ್ಷಣ ಹಲ್ಮುರಿ ಕಚ್ಕೊಂಡು "ನೀನಾ? ಮತ್ ಬಂದಿದ್ದೀಯಾ ಇಲ್ಲಿಗೆ" ಅಂತ ಹೇಳಿ ಆ ಟೋಪೀಲೆ ರಪರಪನೆ ಬಾರಿಸಿದಳು. ಅವನು 'ಒಳ್ಳೇ ಕೆಲಸ ಆಯ್ತಲ್ಲಾ' ಂದು ಕೊಂಡು ಏನೂ ಮಾತಾಡದೆ ನಿಂತಿದ್ದ. ರಾಜಕುಮಾರಿ ಆಳು ಕರದು ಅವನ್ನ ಅರಮನೆಯಿಂದ ಆಚೆಗೆ ನೂಕಿಸಿದಳು.

ರಾಜನ ಮಗ ಹ್ಯಾಪ್ ಮೋರೆ ಹಾಕ್ಕೊಂಡು ಊರಿಗೆ ಬಂದ. ಅಣ್ಣದೀರಿಗೆ ಈ ಸುದ್ದೀನೆಲ್ಲಾ ಹೇಳಿದ. ಅವರೆಲ್ಲ ಇವನ್ನ ಹಾಸ್ಯಮಾಡಿ ನಗಾಡಿದರು. ಹಿರಿಯಣ್ಣ 'ನ್ಯಾಯವಾಗಿ ನನ್ನ ಟೋಪಿ ಕೊಡು' ಅಂದ 'ತಕ್ಕೋ ಮುಕ್ಕೋ' ಅಂತ ನಿಂತುಕೊಂಡ್‌ಬುಟ್ಟ. "ಏನಾರೂ ಮಾಡಿ ಈ ಸತಿ ತಂದ್‌ಕೊಡ್ತೀನಿ ತಡಿಯಣ್ಣ" ಅಂತ ಏನೇನೋ ಸಮಾಧಾನ ಹೇಳಿ ಕುಂಟಣ್ಣನ ಹತ್ರಕ್ಕೆ ಬಂದ. ತನ್ನ ಅವಸ್ಥೆಯೆಲ್ಲಾ ಹೇಳಿಕೊಂಡು ಕಣ್ಣೀರು ಬುಟ್ಟ. ಆಮೇಲೆ ಮೆತ್ತಗೆ "ಅಣ್ಣ ಒಂದು ಸಟೀಗೆ ನಿನ್ನ ಕೋಲು ಕೊಡು, ಆ ಐನಾತಿ ಕಿಲಾಡಿ ಹೆಣ್ಣು ನನ್ನ ಉಂಗುರ ಅಣ್ಣನ ಟೋಪಿ ಎಲ್ಲಾನೂ ಹೊಡಕೊಂಡು ಬುಟ್ಟವಳೆ. ಏನಾದ್ರೂ ಮಾಡಿ ಈ ಸತಿ ಎಲ್ಲಾನೂ ಕಿತ್ತುಗೊಂಡು ಅವಳ್ನೂ ಹೊಡಕೊಂಡು ಬಂದ್‌ಬುಡಬೇಕು" ಅಂದ. ಅವನು ಇವನ ಬೆಳ್ಳೇವದ ಮಾತಿಗೆ ಬೆರಗಾಗಲಿಲ್ಲ. "ನಾನು ಮೊದ್ಲೇ ಕುಂಟ, ಈ ಕೋಲು ಕೊಟ್‌ಬುಟ್ರೆ ನನ್ನ ಜೀವವೆ ಹೋದಂಗೆ. ನಾನು ಏನಾದ್ರೂ ಕೊಡೋದಿಲ್ಲ" ಅಂದ. ಆದರೆ ಇವನು ಬುಡಬೇಕಲ್ಲ ! ಅವನು ಕೊಡೋದಿಲ್ಲ ಅನ್ನಾಕೆ, ಇವನು ಕೊಡು ಅನ್ನಾಕೆ–ಹಂಗಾಡಿ ಹಿಂಗಾಡಿ ಅಂತೂ ಅವನಿಗೆ "ಅಂಗಿ ಹಾಕಿ' ಕೋಲು ಈಸಿಕೊಂಡ.

ಗಡ್ಡ ಮೀಸೆ ಎಲ್ಲಾನೂ ಕಟ್ಗೊಂಡು ಬಳೆಗಾರನ ವೇಷ ಹಾಕ್ಕೊಂಡು ಆ ಕೋಲು ಹಿಡಕೊಂಡು ರಾಜಕುಮಾರಿಯ ಪಟ್ಟಣಕ್ಕೆ ಬಂದ. "ಬಳೇ ಬಳೇ ಚಿತ್ತರದ ಬಳೆ ಬಂಗಾರದ ಬಳೆ ಬೊಂಬಾಯಿ ಬಳೆ, ಅತ್ತೇಮನೆ ಸೊಸೇರು ತೊಡೋ ಸಿಂಗಾರದ ಬಳೇ ಬಳೇ ಬಳೇ" ಅಂತ ಸಾರ್ತಾ ಅರಮನೆ ಮುಂದಕ್ಕೆ ಬಂದ. ರಾಜಕುಮಾರಿಗೆ ಹೊಸ ಬಳೆ ತೊಟ್ಕೋಬೇಕೂ ಅಂತ ಆಸೆ ಆಯಿತು. ಬಳೆಗಾರನ್ನ ಕರಸಿದಳು. ಅವನು ಬಂದು ಬಳೆ ಮಡೀಕೊಂಡು ರತ್ನಗಂಬಳಿ ಮೇಲೆ ಕೂತುಗೊಂಡ. ಮೆತ್ತಗೆ ಅವಳಿಗೆ ಕಾಣದಹಂಗೆ ಆ ಕೋಲನ್ನ ಕಂಬಳಿ ಅಂಡಿಕ್ಕೆ ಸೇರಿಸಿಬುಟ್ಟ. ರಾಜಕುಮಾರಿ ಬಂದು ಮಲಾರದ ಮುಂದೆ ಕೂತುಕೊಂಡು ಅದಕ್ಕೆ ಸಣ್ಣಾಡಿಕೊಂಡಳು. ಬಳೆಗಾರ ಬಳೆ ತೊಡ್ತೀನಿ ಅಂದ ಅವಳ ಕೈಯ್ಯನ್ನ ತನ್ನ ಕೈಲಿ ಹಿಡಕೊಂಡ. ಆಮೇಲೆ "ನಮ್ಮ ತಕ್ಕೊಂಡ್ ಹೋಗಿ ಸಮುದ್ರದ ಆಚೆಗೆ ಬುಟ್‌ಬುಡು" ಅಂದ. ಆ ಕೋಲು ರತ್ನಗಂಬಳಿ ಸಮೇತವಾಗಿ ಅವರಿಬ್ಬರ್ನೂ ಸರ್ ಅಂತ ಎತ್ಗೊಂಡ್ ಹೋಗಿ ಸಮುದ್ರದ ಆಚೆಗೆ ಬುಡ್ತು. ಅವಳಿಗೆ ದಿಗ್‌ಭ್ರಮೆ ಬಂದಂಗಾಯಿತು. ಇದೇನು ಹಿಂಗಾಯ್ತಲ್ಲ' ಅಂದುಕೊಂಡಳು. ಆಗ ರಾಜನ ಮಗ ತನ್ನ ಗಡ್ಡಮೀಸೆ ಎಲ್ಲನೂ ತಗದು ಹಾಕಿದ. ಆಗ ನೋಡ್ತಾಳೆ: ತನ್ನ ಗಂಡ ! "ನೋಡಿದ್ಯಾ, ಯಾರ ಉಪಾಯ ಗೆಲ್ತು ?" ಅಂದ ಅವನು. ಅವಳಿಗೆ ಒಂದು ಹಿಡಿ ನಾಚಿಕೆ ಆಯ್ತು. ಆದ್ರೂ ಹುಸಿನಗೆ ನಗಾಡಿದ್ಲು ಸ್ವಲ್ಪ ಹೊತ್ತಾಯಿತು. ಅವ್ರಿಗೆ ದಾವಾಗಿ ಗಂಟಲೆಲ್ಲಾ ಒಣಗಿ ಹೋದಂಗಾಯ್ತು. "ಬಾಯಾರಿ ಜೀವ ಹೋಯ್ತದೆ. ಎಲ್ಲಾದ್ರೂ ಒಂದಿಷ್ಟು ನೀರು ತಕ್ಕೊಂಡ್ ಬನ್ನಿ ಕುಡಿಯಾಕೆ" ಅಂದಳು. ಅವನು "ಆಗಲಿ, ಇಲ್ಲೇ ಇರು. ಒಂದು ಲಾಜಾದೊಳಗೆ ಬಂದ್‌ಬುಡ್ತೀನಿ" ಅಂತ ಹೇಳಿ ನೀರು ಹುಡೀಕೊಂಡು ಹೊಂಟ. ಅವನು ಅತ್ಲಾಗಿ ಹೋದಮೇಲೆ ಇವಳು ಯೋಚನೆ ಮಾಡಿದಳು: "ಇದು ನಮ್ಮನೇ ರತ್ನಗಂಬಳಿ. ಆದ್ರೆ ಅವನು ಎತ್ಗೊಂಡ್ ಹೋಗು ಅಂದ ತಕ್ಷಣ ಎತ್ಗೊಂಡು ಬಂದುಬುಡ್ತಲ್ಲ ! ಇದೆಂಥ ಸೋಜಿಗ" ಅಂತ. ಹಿಂಗಂದುಕೊಂಡು ಅವಳು ತನ್ನ ಕೈಲಿ ಆ ಕಂಬಳಿ ಸವರಿ ನೋಡಿದಳು. ಕೋಲು ಉದ್ದಕ್ಕೆ ಅವಳ ಕೈಗೆ ಸಿಕ್ತು. ಆಗ ಅವಳಿಗೆ ಹೊಳೀತು. "ಓಹೋ ಇರ್‍ಲಿ !" ಅಂದುಕೊಂಡು "ನನ್ನ ಕರಕೊಂಡ್‌ಹೋಗಿ ನಮ್ಮ ಅರಮನೆಗೆ ಬುಟ್‌ಬುಡು" ಅಂದಳು. ಅದು 'ಸರ್' ಅಂತ ಎತ್ಗೊಂಡ್ ಹೋಗಿ ಅವಳ್ನ ಅವಳ ಅರಮನೆಗೆ ಇಳಿಸಿತು.



## ೩

ರಾಜನ ಮಗ ಒಂದು ಗಿಂಜಲಿನಲ್ಲಿ ನೀರು ತಕ್ಕೊಂಡು ಬಂದು ನೋಡ್ತಾನೆ: ರಾಜಕುಮಾರಿ ಇಲ್ಲವೇ ಇಲ್ಲ ! 'ಓಹೋ ಎಂಥ ಕೆಲಸವಾಯ್ತು !' ಅಂದುಕೊಂಡ ಅವನಿಗೆ ಜೀವ ದಢ್ ಅಂತು. 'ಊರಿಗೆ ಹೋದ್ರೆ ಅಣ್ಣದೀರು ಟೋಪಿ, ಕೋಲು ಕೊಡು ಅಂತ ಜೀವ ಹಿಂಡ್ತಾರೆ, ನನ್ನ ಸುಮ್ನೆ ಬುಡೋದಿಲ್ಲ. ಏನ್ಮಾಡೋದು, ಎಲ್ಲಿಗೆ ಹೋಗೋದು. ಇದ್ದದ್ನೂ ಕಳಕೊಂಡ್‌ನಲ್ಲೋ ಈರಬಸವ ಅನ್ನೊಂಗ್ ಆದ್ನಲ್ಲಾ' ಅಂದುಕೊಂಡು ಸುಮ್ಮನೆ ಗೊತ್ತುಗುರಿ ಇಲ್ಲದೆ ಮುಂದಕ್ಕೆ ಹೋದ. ಹೋದ ಹೋದ ಹೋದ. ಅಷ್ಟು ದೂರ ಹೋದಮೇಲೆ ಒಂದೂರು ಸಿಕ್ಕಿತು. ತಿರುಗೀ ತಿರುಗೀ ಬೆಪ್ಪಾಗಿ ಸೊಪ್ಪಾಗಿ ಕಾಲೆಳಕೊಂಡು ಒಂದು ಮನೆ ಜಗಲಿಮೇಕೆ ಬಂದು ಕೂತುಗೊಂಡ. ಅದು ಒಬ್ಬಳು ಅಡುಗೂಲಜ್ಜಿಮನೆ. ಅವಳಿಗೆ ಯಾರೂ ಇರಲಿಲ್ಲ. ಅವಳು ಈಚೆಗೆ ಬಂದು "ನೀನು ಯಾರಪ್ಪಾ?" ಅಂದಳು. "ಅಯ್ಯೋ ನಾನೊಬ್ಬ ಪರದೇಶಿಕನಜ್ಜಿ ನಂಗೆ ಯಾರೂ ಗತಿ ಇಲ್ಲ. ನೀನು ಹೊಟ್ಟೆಗೆ ಒಂದು ತುತ್ತು ಹಾಕಿದರೆ ನಿನ್ನ ದನಗಿನ ಕಾಯ್ಕೊಂಡು ಇಲ್ಲೇ

ಇರ್ತೀನಿಕನಜ್ಜಿ." ಅಂದ. ಪಾಪ, ಅವನ ಮಾತು ಕೇಳಿ ಆ ಮುದುಕಿ ಕರುಳು ಮರುಗಿತು. "ಅಯ್ಯೋ ನನ್ನ ಕಂದಾ, ನನಗೂ ಯಾರೂ ಇಲ್ಲಕನಪ್ಪಾ. ಉಂಡ್ಕೊಂಡು ತಿಂದ್ಕೊಂಡು ದನಕಾಯ್ಕೊಂಡು ಇಲ್ಲೇಇರು, ನಂಗೂ ಒಂದು ದಿಕ್ಕಾಗಿ" ಅಂದಳು.

ಸರಿ, ರಾಜನ ಮಗ ಅವಳ ಮನೇಲೇ ಸುಖವಾಗಿ ಉಂಡ್ಕೊಂಡು, ಅವಳ ಹಿಂಡು ದನ ಕಾಯ್ಕೊಂಡು ಸುಖವಾಗೇ ಇದ್ದ. ಅವಳಿಗೆ ನಾಕು ಹಟ್ಟೀದನ ಇದ್ವೊ. ಅವೆಲ್ಲಾನೂ ಬುಟ್ಕೊಂಡು ಮೇಸಾಕೆ ಹೋಗುವಾಗ ಪ್ರತಿನಿತ್ಯ ಆ ಅಜ್ಜಿ ಅವನಿಗೆ "ನೀನು ಮೂಡ್ಲಾಗಾದ್ರೂ ಹೋಗು, ಪಡೂಲಾಗಾದ್ರೂಹೋಗು, ತೆಂಕಲಾಗೂದ್ರೂ ಹೋಗು. ಆದರೆ ಬಡಗಲಾಗಿ ಮ್ಯಾತ್ರ ದನ ಮೇಸಾಕೆ ಹೋಗಬೇಡ" ಅಂತ ಹೇಳಿ ಕಳಿಸ್ತಾ ಇದ್ದಳು. ಅವನೂ ಸ್ವಲ್ಪದಿನ ಹಂಗೇ ಮಾಡಿದ. ಆ ಮೇಲೆ ಒಂದು ದಿನ "ಯಾಕೆ ಈ ಅಜ್ಜಿ ದಿನನಿತ್ಯ ಹಿಂಗೇ ಹೇಳ್ತಾಳಲ್ಲ ! ಆ ಬಡಗ ದಿಕ್ಕಿನಲ್ಲಿ ಏನದೆ ನೋಡೇ ಬುಡಾನೆ ಅಂತ ದನಾ ಬುಟ್ಕೊಂಡು ಹೋದ. ಸ್ವಲ್ಪ ದೂರ ಹೋದ ಮೇಲೆ ಒಂದು ಭರ್ಜರಿಯಾದ ತೋಟ ಸಿಕ್ತು ಅದರೊಳಕ್ಕೆ ಹೋಗಿ ನೋಡ್ತಾನೆ: ಬಾಳೇ ವನವೇ ಆಗ್ಯದೆ. ಸುತ್ತಮುತ್ತ ಬಾಳೆಗೊನೆಗಳು ಹಣ್ಣಾಗಿ ನೇತಾಡ್ತಾ ಅವೆ, ಲೆಕ್ಕ ಇಲ್ಲದಷ್ಟು ! ಅವನ ಬಾಯಲ್ಲಿ ನೀರು ಕಿತ್ತುಗೊಂಡ್‌ಬುಡ್ತು. "ಓಹೋ ಇದ್ಕೇ ಇಲ್ಲಿಗೆ ಹೋಗಬ್ಯಾಡ ಅಂತಿದ್ಲೇನೋ ಮುದುಕಿ" ಅಂದುಕೊಂಡು ತಾರಿಗೆಮಾರಿಗೆ ಹಣ್ಣು ಮುರಕೊಂಡು ಆಗೋವಷ್ಟು ನುಂಗಿದ. ಹೊಟ್ಟೆ ತುಂಬಿ ನಿಗರಾಡೋ ಹಂಗಾಯ್ತು. ಹಂಗೇ ಮುಂದಕ್ಕೆ ಹೋದ. ಅಲ್ಲೊಂದು ಎರಡಾಳುದ್ದದ ಬಾಳೆಗೊನೆ ನೇತಾಡ್ತದೆ ! ಅದರ ಒಂದೊಂದು ಹಣ್ಣು ಒಂದೊಂದು ಮಾರುದ್ದಾ ಅವೆ ! "ಅಯ್ಯೋ ಎಂಥಾ ಕೆಲಸ ಆಗೋಯ್ತು, ಮೊದಲೇ ನೋಡಿದ್ರೆ ಇವ್ನೇ ತಿನ್ನಬಹುದಾಗಿತ್ತಲ್ಲ. ಇಂಥ ಹಣ್ಣ ಈ ಜಂಬೂಜಾತಕದಲ್ಲೇ ಇಲ್ಲೀಗಂಟ ಕಂಡಿರಲಿಲ್ಲ" ಅಂದುಕೊಂಡ. ಆದರೂ ಬುಡಾಕೆ ಮನಸಾಗದೆ ಒಂದು ಹಣ್ಣು ಮುರುಕೊಂಡು ಹ್ಯಂಗಂಗೋ ಮಾಡಿ ನುಂಗಿದ. ನುಂಗಿದ ತಕ್ಷಣ ಅವನ ತಲೇಲಿ ಮಾರುದ್ದದ ಕೊಂಬು ಮೂಡಿಬುಟ್ವೋ. ಅವನಿಗೆ ತಲೆ ಕಸುಕೊಂಡು ಎರಡು ಭಾಗ ಆದಂಗಾಗಿ "ಅಯ್ಯೋ ಅಯ್ಯೋ" ಅಂತ ಬಡುಕೊಂಡ. ಇವನ ಕೂಗು ಮನೇಲಿದ್ದ ಮುದುಕಿಗೆ ಕೇಳಿಸ್ತು. "ಅಯ್ಯಯ್ಯೋ ಏನು ಮಾಡಿಕೊಂಡ್ನೋ ಕಾಣೆ" ಅಂದುಕೊಂಡು ಬಿದ್ದಂಬೀಳ ಓಡೋಡಿ ತೋಟದ ಹತ್ರಕ್ಕೆ ಬಂದಳು. ಅಲ್ಲಿ ನೋಡ್ತಾಳೆ: ಅವನು ಮಾರುದ್ಧ ಕೊಂಬು ಬೆಳುದು ಎರಡು ಕೈಲೂ



ಹಿಡಕೊಂಡು ಬಡುಕೊತ್ತಾ ಅವ್ನೆ ! "ಅಯ್ಯಯ್ಯೋ ನಿನ್ನ ಮನೆ ಕೆಟ್‌ಹೋಗ ! ನಾನು ಇದಕ್ಕೆ ಸಲುವಾಗೇ ಇಲ್ಲಿಗೆ ಬರಬೇಡ ಅಂತ ಹೇಳಿದ್ದು. ಹಂಗೂ ನನ್ನಾತ್ ಕೇಳದೆ ಬಂದು ಹಿಂಗೆ ಮಾಡಿಕೊಂಡು ಬುಟ್ಯಾ?" ಅಂದುಕೊತ್ತಾ ಆ ಬಾಳೆ ಮರದ ನಾರು ಕಿತ್ತುಕೊಂಡು ಅದರಲ್ಲಿ ಆ ಕೊಂಬು ಕೂದಳು. ಅವು ಕತ್ತರಿಸಿ ಕೆಳಕ್ಕೆ ಬಿದ್ದುಹೋದೋ. ಆಗ ಬಿಗಿದು ಬಿರುದು ಹೋಗೋ ಹಂಗಿದ್ದ ತಲೆ ಒಡೆತ ನಿಲ್ತು. ಆಗ ರಾಜನ ಮಗನಿಗೆ ತಕ್ಷಣ ತಲೇಲಿ ಏನೋ ಹೊಳೀತು. ಆ ಒಂದು ಗೊನೆ ಕಡಕೊಂಡ. ಅದರದು ಒಂದಿಷ್ಟು ನಾರು ತಕ್ಕೊಂಡ. ಮುದುಕಿ ಜೊತೆ ಮನೆಗೆ ಹೋದ.

ಮಾರನೆ ದಿನ ಬೇರೆ ವೇಷ ಹಾಕ್ಕೊಂಡು ಆ ಬಾಳೆ ಹಣ್ಣು ತಕ್ಕೊಂಡು ಹೊರಟ. ರಾಜಕುಮಾರಿಯ ಪಟ್ಟಣಕ್ಕೆ ಬಂದ. ಆ ಊರು ಬೀದೀಲೆಲ್ಲಾ "ಬಾಳೇ ಹಣ್ಣು, ಬಾಳೇ ಹಣ್ಣು, ಇಂದ್ರಲೋಕದ ಬಾಳೆಹಣ್ಣು, ಚಂದ್ರಲೋಕದ ಬಾಳೆ ಹಣ್ಣು, ಬಾಲೇರು ತಿನ್ನೋ ಬಾಳೇ ಹಣ್ಣು, ಮುದುಕರು ತಿನ್ನೋ ಬಾಳೆ ಹಣ್ಣು, ಮುದುಕೀರು ತಿನ್ನೋ ಬಾಳೆ ಹಣ್ಣು" ಅಂದುಕೊಂಡು ಸಾರಿಕೊಂಡು ಬಂದ. ಆ ಹಣ್ಣು ನೋಡಿದೋರೆಲ್ಲಾ "ಈವಯ್ಯ ಹೇಳೋದು ನಿಜ, ಇದು ಈ ಲೋಕದ ಬಾಳೆ ಹಣ್ಣಲ್ಲ. ಇದು ನಮ್ಮಂಥೋರಿಗಲ್ಲ, ಮಹಾರಾಜರಂಥೋರಿಗೆ" ಅಂದುಕೊಂಡು ರಾಜನಿಗೆ ಬಂದು ಈ ಸುದ್ದಿ ಹೇಳಿದರು. ಅವನಿಗೂ ಕುತೂಹಲವಾಯಿತು. 'ಅದೆಂಥಾ ಬಾಳೇ ಹಣ್ಣು ನೋಡಾನೆ' ಅಂದುಕೊಂಡು ಹಣ್ಣು ಮಾರುವವನನ್ನು ಕರೆಸಿದ.

"ನಮಗೆ ಒಂದಷ್ಟು ಹಣ್ಣು ಕೊಡಯ್ಯ" ಅಂದ.

"ಇದು ಸುಮ್‌ಸುಮ್ನೇ ಹಂಗೆಲ್ಲಾ ಕೊಡೋ ಹಣ್ಣಲ್ಲ ಮಾಸ್ವಾಮಿ" ಅಂದ. ಆ ರಾಜನ ಮಗ.

"ಸುಮ್ನೇ ಕೊಡಬೇಡ. ನೀನೆಷ್ಟು ಹಣ ಕೇಳಿದ್ರೂ ಕೊಡ್ತೀನಿ ಕೊಡು" ಅಂದ ರಾಜ.

"ಹಂಗಲ್ಲ. ನಾನು ಹೇಳಿದಂಗೆ ನೀವು ಕೇಳೋದಾದ್ರೆ ಕೊಡ್ತೀನಿ"

"ಆಗ್ಲಿ, ಕೇಳ್ತೀವಿ. ಅದೇನು ಹೇಳು"

"ನೀವು, ಮಹಾರಾಣಿಯೋರು, ರಾಜಕುಮಾರಿಯೋರು ಸಾಲಾಗಿನಿಂತುಕೊಳ್ಳಿ"

"ಹೂಂ ಆಗಲಿ" ಅಂತ ಹೇಳಿ ಅವರು ಹಂಗೇ ನಿಂತುಕೊಂಡರು.

ರಾಜನ ಮಗ ಅವರೆಲ್ಲರಿಗೂ ಒಂದೊಂದು ಬಾಳೆ ಹಣ್ಣು ಕೊಟ್ಟ;

"ಈಗ ಎಲ್ಲಾರೂ ಒಂದೇ ಸಾರಿಗೆ ತಿನ್ನಿ" ಅಂದ. ಅವರು ಮೂರು ಜನವೂ ಒಂದೇ ಸಾರಿಗೆ ತಿಂದರು. ತಿಂದ ತಕ್ಷಣ ಅವರು ತಲೇಲಿ ಒಂದೊಂದು ಮಾರುದ್ಧದ ಎರಡೆರಡು ಕೊಂಬುಗಳು ಮೂಡಿ ಬುಟ್ವೋ. ಅವರೆಲ್ಲಾ 'ಅಯ್ಯಯ್ಯೋ ನಿನ್ನ ದಮ್ಮಯ್ಯ ಕನಪ್ಪಾ, ನೀನು ಹೇಳಿದಂಗೆ ಕೇಳ್ತೀವಿ ಕನಪ್ಪಾ, ನೀನು ಕೇಳಿದ್ದು ಕೊಡ್ತೀವಿ ಕನಪ್ಪಾ, ನಮ್ಮ ಪ್ರಾಣ ಉಳಸಪ್ಪಾ" ಅಂತ ಒಂದೆ ಸಮನೆ ಬಡುಕೊಂಡರು. ಆಗ ರಾಜನ ಮಗ "ದೇವರಾಣೆ ಮೋಸ ಮಾಡೋದಿಲ್ಲ ಅಂತ ಹೇಳಿ" ಅಂದ. ಅವರು ಹಂಗೇ ಹೇಳಿದರು. ಆಗ ತನ್ನ ಜೇಬಿನಲ್ಲಿದ್ದ ಬಾಳೆನಾರು ತಗದು ರಾಜನ ಮತ್ತು ರಾಣಿಯ ತಲೆ ಮೇಲೆ ಮೂಡಿದ್ದ ಕೊಂಬು ಕುಯ್ದುಹಾಕಿದ. ಆದರೆ ರಾಜಕುಮಾರಿಯ ತಲೆ ಕೂಯಲಿಲ್ಲ. ತನ್ನ ವೇಷ ತಗದುಹಾಕಿ "ನಾನು ಯಾರು ಗೊತ್ತಾಯ್ತಾ?" ಅಂದ.

ರಾಜಕುಮಾರಿ ನೋಡಿ ಕಣ್‌ಕಣ್ ಬುಟ್ಟಳು. "ನಾನು ಮಾಡಿದ್ದು ತಪ್ಪಾಯ್ತು. ನಿಮ್ಮ ದಮ್ಮಯ್ಯಾ ಅಂತೀನಿ. ಇದ ತಗೀರಿ. ಇಲ್ದೇ ಇದ್ರೆ ನನ್ನ ಪ್ರಾಣ ಹೋಯ್ತದೆ" ಅಂದಳು.

"ಮೊದ್ಲು ನನ್ನ ಉಂಗುರ, ಟೋಪಿ, ಕೋಲು ಎಲ್ಲಾನೂ ತಂದ್‌ಮಡಗು" ಅಂದ.

ಅವಳು ಎಲ್ಲಾನೂ ತಂದು ಅವನ ಮುಂದಕ್ಕೆ ಮಡಗಿದಳು. ಆಗ ರಾಜ ರಾಣೀರಿಗೆ ಆಶ್ಚರ್ಯವಾಯಿತು. ಅವರಿಗೆ ನಡೆದ ಸಂಗತೀನೆಲ್ಲಾ ಅವನು ಹೇಳಿದ. ಅವರು ಮಗಳನ್ನು ಹೀನಾಮಾನಾ ಬೋದರು. ಅವಳು ಅವರ ಕಾಲಿಗೆ ಅಡ್ಡಬಿದ್ದಳು. ಆಗ ಬಾಳೆನಾರು ತಗದು ಅವಳ ಕೊಂಬುಗಳನ್ನು ಕೂದುಹಾಕಿ. ಅತ್ತೆಮಾವದೀರಿಗೆ "ನಾವು ಹೋಗಿ ಬತ್ತೀವಿ" ಅಂತ ಹೇಳಿದ. "ನಮ್ಮ ಕರಕೊಂಡು ಹೋಗಿ ನಮ್ಮೂರಿಗೆ ಬುಡು" ಅಂತ ಕೋಲಿಗ ಹೇಳಿದ. ಅದು ಅವನನ್ನೂ ರಾಜಕುಮಾರೀನೂ ತಂದು ಅವರೂರಿಗೆ ಬುಡ್ತು. ಆಗ ಅಣ್ಣದೀರಿಗೆ ಟೋಪಿ ಕೋಲು ಕೊಟ್ಟ. ಅಪ್ಪ ಅವ್ವನ ಕಾಲಿಗೆ ನಮಸ್ಕಾರ ಮಾಡಿದ. ಅವರು ಸಂತೋಷದಿಂದ ಕೊಟ್ಟಣ ಕುಟ್ಸಿ ಪಟ್ಟಣ ಸಾರ್ಸಿ ಅವರಿಬ್ಬರಿಗೂ ಐಭೋಗದಿಂದ ಮದುವೆ ಮಾಡಿದರು. ಎಲ್ಲಾ ಸುಖವಾಗಿ ಬದುಕಿಕೊಂಡರು.

* * * *



## * ಹಾವು–ಬೆಕ್ಕು–ಮುರ್ಕಾಟಿ

### ೧

ನಗರನಹಳ್ಳಿ ಅಂತ ಒಂದೂರು. ಆ ಊರಿನ ಕೊಟ್ಟ ಕೊನೇಲಿ ಒಂದು ಹುಲ್ಲು ಜೋಪಡಿ. ಅಲ್ಲೊಂದು ಮುದುಕಿ, ಗಂಡ ಸತ್ತ ಮುಂಡೆ. ಬಾಳ ಬಡಸ್ತನ. ಒಂದ್ಹೊತ್ತಿಗೆ ತಿನ್ನಾಕೆ ಇದ್ರೆ ಇನ್ನೊಂದು ಹೊತ್ತಿಗೆ ಹೊಟ್ಟೇಗೆ ತಣ್ಣೀರು ಪಾವಡೆ. ಅಲ್ಲಿ ಇಲ್ಲಿ ಕೂಲಿ ನಾಲಿ ಮಾಡೋದು, ಸೊಪ್ಪೋ ಸದೆಯೋ ಬೇಸಿ ಕೊಂಡು ಕಾಸಿಕೊಂಡು ತಿನ್ನೋದು ಮಾಡ್ತಿದ್ದಳು. ಹಂಗೂ ಹಿಂಗೂ ಉಳಿಸಿ ಕಾಸಿಗೆ ಕಾಸು ಗಂಟು ಹಾಕ್ತಿದ್ದಳು. ಅವಳಿಗೆ ಒಬ್ಬನೇ ಮಗ. ಅವಳ ದುರಾದೃಷ್ಟಕ್ಕೆ ಅವನೂ ಸದ್ದಾಮುದ್ದಾ ವಾಸುದೇವ. ಅವನೊಂದು ಕಣ್ಣುರಿ ಅವಳಿಗೆ. 'ಎಂಥಾ ಮಗನ ಕೊಟ್ಟಪ್ಪಾ ಶಿವನೆ' ಅಂತ ಎದ್ದೂ ಬಿದ್ದೂ ಕೊರಗ್ತಾ ಇದ್ಲು. ಅವನು ಒಂದು ಹುಲ್ಲುಕಡ್ಡಿ ಗಾತ್ರ ಕೆಲಸಾನೂ ಮಾಡ್ತಿರಲಿಲ್ಲ. ಉಣ್ಣೋದು, ತಿರ್ಗೋದು ಇದೇ ಕಸುಬು ಅವಂದು. ಕಾಟಿ ಅಂತ ಕರೀನಿಲ್ಲ, ಗೂಟೀ ಅಂತ ಹುಲ್ಲ ಹಾಕಲಿಲ್ಲ. ಹಂಗೂ ಹಿಂಗೂ ಬೆಳೆದ. ಮುದುಕಿ ಒಂದಿನ ಮಗನ್ನ ಕೂರಿಸಿಕೊಂಡು "ಅಪ್ಪಾ, ನೀನು ಗೆಯ್ಯೋರ ಕಂಡು ಗೆಯ್ನಿಲ್ಲ, ಸಂಪಾದ್ನೆ ಮಾಡೋರ ಕಂಡು ಸಂಪಾದ್ನೆ ಮಾಡ್ನಿಲ್ಲ. ಸುಮ್ನೆ ಗೊದ್ದನ ಮರದಂಗೆ ಬೆಳದೆ ಅಷ್ಟೇಯ. ನನ್ನ ಕಾಲ ಆದಮ್ಯಾಲೆ ನಿನ್ನ ಗತಿ ಏನು? ನಾನು ಇವತ್ತು ಅಂದ್ರೆ ಇವತ್ತು, ನಾಳೆ ಅಂದ್ರೆ ನಾಳೆ ಗೊಟಕ್ ಅನ್ನೋಳು. ನಂದು ಯಾವುದು ಸಾಸೀನ? ನಿಂಗೆ ಈಗ್ಲಾರೂ ಒಂದು ರವ್ವೋಟು ಬುದ್ಧಿ ಬರಬಾರ್ದ. ನಿನ್ನ ಜೊತೇರೆಲ್ಲ ನಿನ್ನಂಗೇ ಅವರಾ?" ಅಂತ ಬುದ್ದಿ ಹೇಳಿದ್ಲು. ಅನು ತಲೆ ಕೆರದಾಡ್ತಾ "ನಂಗೆ ಯಾವ ಕೆಲಸ ಮಾಡಾಕೂ ಬರೋದಿಲ್ಲ ನಾನೇನ್ಮಾಡ್ಲಿ? ಒಂದೀಟು ದುಡ್ಡಾದ್ರೂ ಕೊಟ್ರೆ ನಾನೇನಾದ್ರೂ ಯಾಪಾರಗೀಪಾರ ಮಾಡಿ ನನ್ನ ಅನ್ನ ನಾನು ಹುಟ್ಟಿಸ್ಕೋತೀನಿ" ಅಂದ. ಮುದುಕಿ 'ಅದ್ನೂ ನೋಡಾನೆ' ಅಂದುಕೊಂಡು ತಾನು ಕೂಡಿ ಹಾಕಿದ್ದ ಪುಟ್ಟಗಂಟು ತಂದು ಅವನ ಕೈಗೆ ಕೊಟ್ಟು "ನಿನ್ ಸಲವಾಗಿ ಅರೆ ಹೊಟ್ಟೆ

---

* ಹೇಳಿದವರು : ಕೃಷ್ಣರಾಜ ನಗರದ ತಾಲ್ಲೂಕು ಬಡಗನ ಕೊಪ್ಪಲು ಕಂಟ್ರ್ಯಾಕ್ಟರ್ ಜವರೇಗೌಡ.

ಉಂಡ್ಕೊಂಡು ಅರೆಬೆತ್ಲೆ ಇದ್ಕೊಂಡು ವನವಾಸ ಮಾಡ್ಕೊಂಡು ಕಾಸಿಗೆ ಕಾಸು ಗಂಟ್ಹಾಕಿವ್ನಿ. ಇದ ತಕ್ಕೊಂಡು ಬದ್ಕೋ ದಾರಿ ನೋಡು. ಇದ್ರಲ್ಲಿ ಬದುಕಿದ್ರೂ ನಿಂದೇಯ, ಕೆಟ್ರೂ ನಿಂದೇಯ" ಅಂದಳು.

ಪೆದ್ದಣ್ಣ ಅವ್ವ ಕೊಟ್ಟ ದುಡ್ಡ ಜೇಬೀಲಿ ಮಡೀಕೊಂಡು ರೊಟ್ಟಿ ಬುತ್ತಿ ಕಟ್ಟಿಸ್ಕೊಂಡು 'ಯಾಪಾರ ಮಾಡ್ತೀನಿ' ಅಂತ ಹೊಂಟ. ಒಂದೂರಿನ ತಾವು ಒಬ್ಬಯ್ಯ ಒಂದು ಕರೀಕೊತ್ತಿ ಹಿಡಕೊಂಡು ಬತ್ತಾ ಇದ್ದ. ಅದು ಮನೇಲಿ ಬಾಳ ಅಡಾವುಡಿ ಮಾಡ್ತಿತ್ತು. ಹಾಲುಕೆನೆ ಮೊಸರುಕೆನೆ ಎಲ್ಲಾನೂ ತಿನ್ಕೊತಿತ್ತು. ಪಟ್ ಪಟ್ ಅಂತ ನೆಗದು ಮನೇ ಮಡಕೇನೆಲ್ಲ ತಲೆಕೆಳಕು ಮಾಡ್ತಿತ್ತು. ಅದರ ಕಾಟ ತಡೀನಾರ್ದೆ ಅದ ಕಾಡಿನ ಕಡೆಗೆ ಬುಡಬೇಕು ಅಂತ ಹಿಡಕೊಂಡು ಬತ್ತಾ ಇದ್ದ. ಈ ಪೆದ್ದಣ್ಣ ಆವಯ್ಯನ್ನ ನೋಡಿ "ಇದೆಲ್ಲಿಗಯ್ಯಾ ಈ ಕೊತ್ತಿ ತಕ್ಕೊಂಡ್ ಹೋಯ್ತ ಇದ್ದೀಯಲ್ಲ"ಅಂದ. ಅವನು ತಮಾಷೆಗೆ "ಸಂತೆಗೆ ಮಾರಾನೆ ಅಂತ ಹೋಯ್ತಾ ಇವ್ನಿ" ಅಂದ. "ಏಟ್ ರೂಪಾಯಿ ಹೇಳ್ತೀ?" ಅವನು ಪೆದ್ದಣ್ಣನ ಮೊಖ ನೋಡಿದ. ಇವನಿಗೆ ಸರಿಯಾಗಿ ನಾಮ ಹಾಕಬಹುದು ಅಂದುಕೊಂಡು "ಸಂತೇಲಾದ್ರೆ ಮೂವತ್ತು ರೂಪಾಯಿಗೆ ಮಾರ್ತೀನಿ. ನಿಂಗಾದ್ರೆ ಇಪ್ಪತ್ತೈದೇ ರೂಪಾಯ್ಗೆ ಕೊಡ್ತೀನಿ, ತಕ್ಕೋ" ಅಂದ. ಐದ್ರೂಪಾಯಿ ಚಾರೀಲಿ ಹೊಡಕೊಂಡು ಹೋದ್ರೆ ನಮ್ಮವ್ವ ಖುಷಿಯಾಗಿ ಕುಣಿದಾಡ್ತಾಳೆ' ಅಂದುಕೊಂಡು ಇಪ್ಪತ್ತೈದ್ರೂಪಾಯಿ ಕೊಟ್ಟು ಆ ಕರೀಕೊತ್ತಿ ಕೊಂಡು ಕೊಂಡ. ಮುಂದಕ್ಕೆ ಹೋದ. ಅಲ್ಲಿ ಒಂದೂರೊಳಗೆ ಒಬ್ಬ ಹಾವಾಡಿಗ ಹಾವಾಡಿಸ್ತಾ ಇದ್ದ. ಆ ನಾಗರ ಹಾವು ಒಳ್ಳೇ ಭೋಜರಾಜನಂಗೆ ಇತ್ತು. ಅದರ ಆಟ ಮುಗಿದ ಮ್ಯಾಲೆ ಆ ಹಾವಾಡಿಗನ ಹತ್ರಕ್ಕೆ ಬಂದು "ಅಯ್ಯಾ ಅಯ್ಯಾ ನಿನ್ನ ಹಾವು ಕೊಟ್ಟೀಯಾ?" ಅಂದ. "ಅದಕಾಗೋ ಬೆಲೆಕೊಟ್ರೆ ಕೊಡ್ತೀನಿ" ಅಂದ ಹಾವಾಡಿಗ, "ಏಟ್ ರೂಪಾಯಿ ಕೊಡಬೇಕು ಹೇಳು".

"ನಂಗೆ ಅದರಿಂದ್ಲೇ ಜೀವನ ನಡೀಬೇಕು. ನೀವು ಕೇಳಿದ್ರಿ ಅಂತ ಕೊಡ್ತೀನಿ. ಮೂವತ್ರೂಪಾಯಿ ಕೊಡಿ ಮತ್ತೆ" ಅಂದ.

"ಅದೆಲ್ಲಾ ಚೌಕಾಸಿ ಬ್ಯಾಡ. ನಂತಾವು ಇರೋದು ಇಪ್ಪತ್ತೈದ್ರೂಪಾಯಿ. ಕೊಡ್ತೀನಿ ಕೊಡು." ಇವನೆಲ್ಲೋ ಗಮಾರ ಸಿಕ್ಕಿದ ಅಂದುಕೊಂಡು ಅವನು ಸಂತೋಸವಾಗಿ ಆ ಹಾವು ಕೊಟ್ಟು ಹಣ ಈಸಿಕೊಂಡ. ಪೆದ್ದಣ್ಣ ಆ ಹಾವ ಕೊಳ್ಳಿಗೆ ಸುತ್ತಿಕೊಂಡ. ಬೆಕ್ಕ ಕಂಕುಳಲ್ಲಿ ಇರೀಕೊಂಡ. ಮುಂದಕ್ಕೆ ಹೋದ. ಅಲ್ಲೊಂದು ಪಾಳುಗೆರೆ. ನೀರು ಬತ್ತಿಹೋಗಿ ಬೀಟೆ ಸೆಣದಿತ್ತು. ಅಲ್ಲೊಂದಿಷ್ಟು



ಅರ್ಲಿತ್ತು. ಆ ಅರ್ಲಲ್ಲಿ ಒಂದು ಮುರ್ಕಾಟಿ ತುತ್‌ಗಟ್ಟಾಗಿ ಜೀವಬುಡನಾರದೆ ಒದ್ದಾಡ್ತಿತ್ತು. ಅದ ನೋಡಿ ಪೆದ್ದಣ್ಣನಿಗೆ ಅಯ್ಯೋ ಪಾಪ ಅನ್ನಿಸ್ತು. ಓಡಿಹೋಗಿ ಅದ ಅಟ್ಟಲ್ನಿಂದ ಮೇಲಕ್ಕೆ ಎತ್ತಿ ಹಿಡಕೊಂಡ. ಅಷ್ಟು ಹೊತ್ತಿಗೆ ದನಸಂದೆಯಾಯ್ತು. ಸಂತೇರೆಲ್ಲ ವಾಪಸ್ ಬತ್ತಾಇದ್ರು. ಅವರ ಜೊತೆ ಊರಿಗೆ ನೆಟ್ಟಗೆ ಬಂದ. "ಏನ್ ಯಾಪಾರ ಮಾಡ್ಕೊಂಡು ಬಂದ್ಯೋ ಮಗನೆ" ಅಂದ್ಲು ಮುದುಕಿ. ಪೆದ್ದಣ್ಣ ಏನೋ ಬಾಳ ಸಂಪಾದ್ನೆ ಮಾಡ್ಕೊಂಡು ಬಂದೋನಂಗೆ ಸಂರಂಭದಿಂದ ಹಾವು ಬೆಕ್ಕು ಮುರ್ಕಾಟಿ ತೋರಿದ. ಮುದುಕಿಗೆ ದೊಡ್ಡ ಜೀವವೇ ಹೋದಂಗಾಯ್ತು. ಎದೆ ಎದೆ ಬಡಕೊಂಡಳು. "ಅಯ್ಯೋ ಮನೆಹಾಳ. ನೀರು ಬರೋ ಕಣ್ಣಲ್ಲಿ ರಕ್ತ ಸುರಿಸಿ ಉಂಡರೆ ಹೋಯ್ತದೆ ಅಂತ ನಿನ್ನ ಹೆಣಕ್ಕೆ ಮೋಚಿಸ್ದೆನಲ್ಲೋ. ನನ್ನ ಹೊಟ್ಟೆ ಯಾಕೆ ಉರಿಸ್ತಿಯೋ? ನೀನು ಹುಟ್ಟೋ ಬದ್ಲು ಒಂದು ಕರಿಕಲ್ಲಾದ್ರೂ ಆಗಿ ಹುಟ್ಟಿದ್ರೆ ಏಟೋ ಉಪ್ಕಾರ ಆಯ್ತಿತ್ತಲ್ಲೋ. ನಿನ್ನ ಹಿಂಡೇಕೂಳು ನಾಯ್ತಿನ್ನ. ನಿನ್ನ ಹೊಟ್ಗೆ ನುಗ್ಗಿಸಾಕೇ ಕೂಳಿಲ್ಲ. ಇನ್ನು ಇವ್ಕೆಲ್ಲಾ ಎಲ್ಲಿ ತರ್ಲೋ. ದೇವ್ರು ನನ್ನ ಬಾಯಿಗೆ ಒಂದಿಷ್ಟು ಮಣ್ಣು ಕೊಡ್ನಿಲ್ವಲ್ಲೋ" ಅಂತ ಬೋದು ಊರು ಹೊಲಗೇರಿ ಒಂದು ಮಾಡಿದಳು. ಅವನ ಮೊಖ ಸಗಣಿ ತಿಕ್ಕಿದಂಗೆ ಆಯ್ತು.

ಮುದುಕಿ ಹೆತ್ತಕಳ್ಳು ತಡೀನಾರ್ದೆ ಹ್ಯಂಗೋ ಒಂದಿಷ್ಟು ಅವನಿಗೆ ಕೂಳು ಕಾಣಿಸ್ತಿದ್ಲು. ಆದ್ರೆ ಅವನು ತಾನು ತಿನ್ನದೆ ತನ್ನ ಪಾಲಿಂದೆಲ್ಲಾನೂ ಕೊತ್ತಿಗೆ, ಹಾವಿಗೆ, ಮುರ್ಕಾಟಿಗೆ ಹಾಕುತ್ತಿದ್ದ. ತಾನು ಹಸುಕೊಂಡು ರಾತ್ರೆಯೆಲ್ಲಾ ನಳ್ಳಾಡ್ತಾ ಉಳ್ಳಾಡ್ತಿದ್ದ. ಇದ ನೋಡಿ ನೋಡಿ ಮುದುಕಿಗೆ ಸಾಕಾಗಿ ತಲೆಚಿಟ್ಟು ಹಿಡದು ಹೋಯಿತು. ಒಂದು ದಿನ ಬಾಯಿಗೆ ಬಂದಂಗೆ ಬೋದು "ನೀನು ನನ್ನ ಮಗನೂ ಅಲ್ಲ, ನಾನು ನಿನ್ನ ಅವ್ವೂ ಅಲ್ಲ. ನನ್ನ ಪಾಚೀನ ಕರ್ಮ ಎಲ್ಲೋ ನಿನ್ನ ರೂಪದಲ್ಲಿ ಹುಟ್ಟೈದೆ. ನೀನು ಈ ಹಾಳು ಹಾವು ಕೊತ್ತಿ ಮುರ್ಕಾಟಿ ಎಲ್ಲಾನೂ ದೂರ ಬುಟ್ಟು ಮನೆಗೆ ಬಂದ್ರೆ ಬಾ. ಇಲ್ದಿದ್ರೆ ನನಗೆ ಮೊಖ ತೋರಿಸಬ್ಯಾಡ. ಎಲ್ಯಾದ್ರೂ ಹಾಳಾಗಿ ಹೋಗು" ಅಂದುಬುಟ್ಟಳು ರೋಸಿ.

ಪೆದ್ದಣ್ಣ ಮನೆಬುಟ್ಟು ಹೊಂಟ್‌ಹೋದ. ಆ ಪ್ರಾಣಿಗಳ ಬುಡಾಕೆ ಅವನಿಗೆ ಮನಸು ಬರಲಿಲ್ಲ. ಅವ್ವೂ ಜೊತೇಲಿ ಹಿಡಕೊಂಡು ಊರೂರು ದೇಶ ದೇಶ ತಿರುಗಿದ. ನೋಡಿದ ಜನವೆಲ್ಲಾ ಇವನ ಬೆಪ್ಪು ತನಕ್ಕೆ ಹೊಟ್ಟೆ ಹಿಡಕೊಂಡು ನಗ್ತಿದ್ದರು. ಹಿಂಗೇ ಹೋಗ್ತಿರುವಾಗ ಒಂದು ಕಾಡು ಸಿಕ್ತು. ಅಲ್ಲೊಂದು ದೊಡ್ಡ ಉಡುಬೆ. ಆ ಉಡುಬೆ ವಳಗೆ ಒಂದು ದೊಡ್ಡ ಹುತ್ತ. ಆ ಉಡುಬೆ ಹತ್ರಕ್ಕೆ

ಹೋದಾಗ ಹಾವು ಪೆದ್ದಣ್ಣನಿಗೆ ಹೇಳ್ತು: "ನಾನು ನಾಗರಾಜನ ಒಬ್ನೇ ಮಗ. ಹಿಂಗೇ ಆಟಕ್ಕೆ ಅಂತ ಭೂಲೋಕಕ್ಕೆ ಬಂದಿದ್ದಾಗ ಆ ಹಾವಾಡಿಗ ನನ್ನ ಹಿಡ್ಕೊಂಡುಬುಟ್ಟ. ನನ್ನ ಸೆರೆ ನೀನು ಬುಡಿಸ್ದೆ. ನೀನು ನಂಗೆ ಎರಡನೆ ಅಪ್ಪ. ನನ್ನ ನೋಡಿದರೆ ನಮ್ಮಪ್ಪಗೆ ಬಾಳ ಸಂತೋಸಾಯ್ತದೆ. ನಿನಗೆ ನಾನು ಉಪ್ಕಾರ ಮಾಡ್ತೀನಿ. ನನ್ನ ಈ ಹುತ್ತದ ಹತ್ರ ಬುಡು. ನಾನು ಈ ಹುತ್ತದ ಕ್ವಾವೆ ವಳಗೆ ನಾಗಲೋಕಕ್ಕೆ ಹೋಗಿ ನಮ್ಮಪ್ಪನ್ನ ನೋಡಿಬತ್ತಿನಿ. ನಾನು ಬರೋಗಂಟ್ಲೂ ನೀನು ಇಲ್ಲೇ ಇರು. ಎಲ್ಲೂ ಹೋಗಬ್ಯಾಡ." ಪೆದ್ದಣ್ಣಗೆ ಎಲ್ಲೂ ಇಲ್ಲದ ಸೋಜಿಗವಾಯ್ತು. ಮಾತೇ ಬರ್ನಿಲ್ಲ ಬಾಯಿಂದ. ಅದರ ಮಾತಿನಂತೇ ಹುತ್ತದ ಹತ್ರಕ್ಕೆ ಬುಟ್ಟ. ಸರ್ಪ ಅವನ್ನ ಮೂರು ಸತಿ ಪರ್ದಕ್ಷಣೆ ಮಾಡಿ ಹುತ್ತದ ವಳಕ್ಕೆ ಹೋಯಿತು.

ಎಷ್ಟೋ ದಿನಗಳ ಮೇಲೆ ಹಿಂದಕ್ಕೆ ಬಂದ ಮಗನ್ನ ನೋಡಿ ನಾಗರಾಜನಿಗೆ ಪರಮಾನಂದವಾಯಿತು. ಅವನ್ನ ತಬ್ಬಿಕೊಂಡು ಮುತ್ತು ಕೊಟ್ಟು ಮುದ್ದಾಡಿ ಹೆಚ್ಚಾಳದಿಂದ ಕಷ್ಟಸುಖ ವಿಚಾರಿಸಿದ. ನಾಗಕುಮಾರ ತನ್ನ ಕತೆಯೆಲ್ಲಾನೂ ಹೇಳಿದ: "ನನ್ನ ಸೆರೇ ಬುಡಿಸಿದ ಮಹಾತ್ಮ ಹುತ್ತದ ಹತ್ರ ಕಾಯ್ತಾ ಅವ್ನೆ. ಅವನ್ನ ನಮ್ಮ ಪಟ್ಲಕ್ಕೆ ಕರಕೊಬಂದು ಉಪಚಾರ ಮಾಡಬೇಕು. ನಮಗಾಗಿ ಅವನು ಪಟ್ಟಿರೋ ಕಷ್ಟ ಅಷ್ಟಿಷ್ಟಲ್ಲ. ಅವನ್ನ ಕರೆತರಾಕೆ ಅಪ್ಣೆ ಕೊಡು" ಅಂದ.

"ನೀನು ಅವನ್ನ ಹುತ್ತದ ಕ್ವಾವೆವಳಗೆ ಹ್ಯಂಗೆ ಕರ್ಕೊಂಬತ್ತೀಯಾ?" ಅಂದ ನಾಗರಾಜ.

"ಏನು ಮಾಡಬೇಕು, ನೀನೇ ಹೇಳಪ್ಪ"

"ಅವನ ಹತ್ರ ಏನೇನ್ ಪದಾರ್ಥಗಳು ಅವೆ?"

"ಒಂದು ಕೊತ್ತಿ, ಒಂದು ಮುರ್ಕಾಟ".

ನಾಗರಾಜ ಮೂರು ಗುಳಿಗೆಗಳನ್ನ ಮಂತ್ರಿಸಿಕೊಟ್ಟ. "ಒಂದು ಗುಳಿಗೆ ಕೊತ್ತಿ ತಲೇಮ್ಯಾಲೆ ಮಡಗು, ಒಂದು ಗುಳಿಗೆ ಮುರ್ಕಾಟಿ ತಲೆಮ್ಯಾಲೆ ಮಡಗು, ಇನ್ನೊಂದು ಗುಳಿಗೆ ಅವನಿಗೆ ನುಂಗ್ಸು. ಆಗ ಮೂರು ಸರ್ಪವಾಯ್ತವೆ. ನೆಟ್ಟಗೆ ಕರ್ಕೊಂಬಾ" – ಅಂದ.

ನಾಗಕುಮಾರ ಗುಳಿಗೆ ತಕ್ಕೊಂಡು ಭೂಲೋಕಕ್ಕೆ ಬಂದ. ತಂದೆ ಹೇಳಿದಂಗೆ ಮಾಡಿದ. ಅವರು ಮೂರು ಜನವೂ ಸರ್ಪಗಳಾದರು. ನಾಗರಾಜನ ಪಟ್ಣಕ್ಕೆ ಬಂದರು. ಬಾಗಿಲಿಗೆ ಬತ್ತಿದ್ದ ಹಂಗೇ ಹೂವಿನ ಪಲ್ಲಕ್ಕಿ ಎದುರಿಗೆ ಬಂತು. ಅದರ ಮ್ಯಾಲೆ ಕೂತು ಅರಮನೆಗೆ ಬಂದರು. ಅಲ್ಲಿ ಅವರಿಗೆ ಬೇಕ್‌ಬೇಕಾದಂಥ



ರಾಜೋಪಚಾರ ನಡೀತು. ಬಾಯಿಗೆ ಬೇಕಾದ್ದು ತಿಂದರು. ಕಣ್ಣಿಗೆ ಬೇಕಾದಷ್ಟು ನೋಡಿದರು. ಮನಸ್ಸಿಗೆ ಬೇಕಾದ್ದು ಉಟ್ರು ತೊಟ್ರು. ನಾಗರಾಜನಿಗೆ ರತ್ನಾವತಿ ಅಂತ ಒಬ್ಬಳು ಮಗಳಿದ್ದಳು. ಅವಳು ನೋಡಾಕೆ ಎಷ್ಟು ಕಣ್ಣಾದ್ರೂ ಸಾಲದು. ಅವಳು ನಿಂತುಕೊಂಡ್ರೆ ಅವಳ ತಲೇ ಕೂದಲು ನೆಲದಲ್ಲಿ ಎಳೆಯೋದು. ಅಂಥ ಮಗಳನ್ನು ಕೊಟ್ಟು ಪೆದ್ದಣ್ಣನಿಗೆ ಲಗ್ನ ಮಾಡಿದರು. ಅವನು ಅಪ್ಪನ ಕಾಲದಿಂದ್ಲೂ ಕಾಣದ ಸುಖದಲ್ಲಿ ಮುಳುಗಿದ. ಹಂಗೇ ಒಂದು ತಿಂಗಳು ಒಂದು ದಿನದಂಗೆ ಕಳೆದುಹೋಯ್ತು. ಆಗ ಪೆದ್ದಣ್ಣನಿಗೆ ತನ್ನ ಮುದಿಯವ್ವನ ನೆಪ್ಪು ಬತ್ತು. ಆಗ "ನಾನು ಊರಿಗೆ ಹೋಗಬೇಕು" ಅಂತ ಮೆತ್ತಗೆ ಭಾವಗೆ ಹೇಳಿದ. ಅವನು ಅವರಪ್ಪನಿಗೆ ಹೇಳಿದ ನಾಗರಾಜ "ನಿಂಗೆ ಏನಾಗಬೇಕು?" ಅಂದ.

"ನಾನು ಏನೂ ಇಲ್ಲದ ಗರೀಬ. ನಂಗೆ ನಿಮ್ಮಗಳ ಕೊಟ್ಟುಬುಟ್ರಿ. ಅವಳ್ನ ನಾನು ಹ್ಯಂಗೆಸಾಕ್ಲಿ? ಅವಳು ಹಾಲ್ನಲ್ಲಿ ಮಿಂದೋಳು, ತುಪ್ಪದಲ್ಲಿ ಕೈತೊಳದೋಳು, ಹೂವಿನ ಮ್ಯಾಲೆ ಮನಗಿದೋಳು, ಅಮುರ್ತ ಉಂಡೋಳು..... ಅವಳಿಗೆ ನಾನು ಹ್ಯಂಗೆ ಕಷ್ಟಕೊಡ್ಲಿ" ಅಂದ ಪೆದ್ದಣ್ಣ.

"ಅದಕ್ಕೆ ನನ್ನಿಂದೇನಾಗ್ಬೇಕು ಹೇಳು. ನಾಚೀಕೋಬ್ಯಾಡ" ಅಂದ ನಾಗರಾಜ.

"ನಾನು ಕಾಡ್ನಲ್ಲಿ ಕೂತು ಕೇಳಿದ ವಸ್ತು ನನ್ನ ಕೈಸೇರಬೇಕು. ಅಂಥ ವರ ಕೊಡ್ಬೇಕು. ಹಂಗಾದ್ರೆ ನಾನು ನಿಮ್ಮಗಳ ಕರ್ಕೊಂಡು ಹೋಯ್ತೀನಿ. ಇಲ್ದೆ ಇದ್ರೆ ನಿಮ್ಮಗಳು ನಿಮ್ಮೇಲೇ ಇರ್ಲಿ, ನಾನು ಎಂದಿನಂಗೇ ಹೋಯ್ತೀನಿ".

ನಾಗರಾಜನಿಗೆ ಅಳಿಯನ ಬುದ್ಧಿ ನೋಡಿ ಸಂತೋಷವಾಯಿತು. ಒಂದು ನಾಗರತ್ನದ ಹರಳು ಮೆಟ್ಟಿದ ವಜ್ರದುಂಗುರ ಅವನಿಗೆ ಕೊಟ್ಟ. "ಇದು ನೀನು ಕೇಳಿ ಕೇಳಿದ ಸಂಪತ್ತೆಲ್ಲಾ ಕೊಡ್ತದೆ. ಆದ್ರೆ ಇದ ನಿನ್ನ ಹೆಡ್ತಿ ಹೊರ್ತು ಬ್ಯಾರೆ ಯಾರ್ಗೂ ಕೊಡಕೂಡದು" ಅಂತ ಎಚ್ಚರಿಕೆ ಹೇಳಿದ. ಪೆದ್ದಣ್ಣ ಎಲ್ರಿಗೂ ಹೇಳಿ ಮಾವನಿಗೆ ಸಣ್ಮಾಡ್ಕೊಂಡು ರತ್ನಾವತೀನೂ ಕರ್ಕೊಂಡು, ಬೆಕ್ಕು ಮುರ್ಕಾಟೀನೂ ಕರ್ಕಂಡು ಈಚೆಗೆ ಬಂದ.

ರತ್ನಾವತಿ ಒಳ್ಳೆ ಸೂರ್ಯಚಂದ್ರ ಉರಿಯೋ ಹಂಗೆ ಉರಿಯೋಳು, ಅವಳ್ನ ಕಂಡೋರೆಲ್ಲ 'ಅಯ್ಯಯ್ಯೋ ಇವನಿಗ್ಯಾಕೆ ಇಂಥಹೆಣ್ಣು. ನಮಗಾರೂ ಸಿಕ್ಕಿದ್ರೆ ಅಂತ ಬಾಯಿನೀರು ಸುರಿಯೋರು. 'ಏನಾರೂ ಮಾಡಿ ಇವಳ್ನ ಹೊಡೋಬೇಕಲ್ಲ' ಅಂತ ಏನೇನೂ ಹುನಾರು ಹಾಕೋರು.

೨

ಒಂದು ಪಟ್ಣಣ. ಅಲ್ಲಿ ಪರ್ವತರಾಜ ಅನ್ನೋನು ಆಳ್ತಾ ಇದ್ದ. ಅವನು

ಶಿಕಾರಿಗೆ ಬಂದಿದ್ದ ವನಾಂತರಕ್ಕೆ. ಹಿಂಗೇ ಶಿಕಾರಿ ಮಾಡಿಕೊಂಡು ಬರೋಗ ರತ್ನಾವತಿ ಕಣ್ಣಿಗೆ ಬಿದ್ದಳು. 'ಎಲಾ ಎಲಾ ಇಂಥ ಹೆಣ್ಣ ಈ ಭೂಲೋಕದಲ್ಲೇ ನಾನು ನೋಡಿಲ್ಲ. ಇವಳ್ನ ಏನಾರೂ ಮಾಡಿ ಹಾರಿಸ್ಕೊಂಡು ಹೋಗ್ಬೇಕು' ಅಂತ ಮನಸ್ನಲ್ಲೇ ಗುಣಾಕಾರ ಹಾಕ್ಕೊಂಡು ಮುಂದಕ್ಕೆ ಹೋದ. ಆಗ ರತ್ನಾವತಿ "ನಾವು ಬೈಲಿನಲ್ಲಿ ಇದ್ರೆ ಜನ ನಮ್ಮ ಸುಮ್ನೇ ಬುಡೋದಿಲ್ಲ" ಅಂದಳು. ಸರಿ, ಗಂಗಾಸ್ಥಾನದಲ್ಲಿ ತಾನ ಮಾಡಿಕೊಂಡ್ರು. ಆ ನಾಗರತ್ನದ ಉಂಗುರ ಪೂಜೆ ಮಾಡಿದ್ರು. 'ಈ ಗೊಂಡಾರಣ್ಯದಲ್ಲಿ ಅರಮನೆ ಪಟ್ಣ ಇತಿಷ್ಟೂ ಆಗಬೇಕು' ಅಂದರು. ಕಣ್ಮುಚ್ಚಿ ಕಮ್ಣು ಬುಡೋವಷ್ಟರಲ್ಲಿ ದೇವೇಂದ್ರಾಯನ ಪಟ್ಣದಂಥ ಪಟ್ಣ, ಮೈಸೂರು ಅರಮನೆಯಂಥ ಅರಮನೆ ಎಲ್ಲಾ ಆಗ್ಹೋಯ್ತು ಆ ಕಾಡಿನಲ್ಲಿ. ಎಲ್ಲಿ ನೋಡಿದ್ರೂ ಕಣ್ಣಿಗೆ ಬೇಕಾದಂಥ ವಸ್ತು ತುಂಬಿ ತುಳುಕಾಡ್ತಾ ಇರೋದು. ಪೆದ್ದಣ್ಣನಿಗೆ ತನ್ನ ಕಣ್ಣ ತಾನೇ ನಂಬಕಾಗಿನಲ್ಲ. ಆಗ ತನ್ನ ಅವ್ವನ್ನೂ ಆಳುಕೊಟ್ಟು ಕರಸಿಕೊಂಡ. ಅವಳು ಇದೇನು ಕನಸೋ ಮಾಯವೋ, ತಾನು ಸತ್ತಿದ್ದೀನೋ ಬದ್ಕಿದ್ದೀನೋ ಅಂತ ಪಿಳಿಪಿಳಿ ಕಣ್ಬುಟ್ಟಳು. ಮಗ ನಗ್‌ನಗ್ತಾ ಎಲ್ಲಾನೂ ಹೇಳಿದ. ತನ್ನ ಮಗ ಮೂರು ಕಾಸಿಗೂ ಬರ್ದ ನಾಮರ್ದ ಅಂದ್ಕೊಂಡಿದ್ನಲ್ಲ, ಕುಂಟನಿಗೆ ಒಬ್ಬ ಶಿವ ಕುರುಡನಿಗೂ ಒಬ್ಬ ಶಿವ ಹೆಡ್ಡನಿಗೂ ಒಬ್ಬ ಶಿವ ಹೆಳವನಿಗೂ ಒಬ್ಬ ಶಿವ ಅವ್ನೆ ಅನ್ನೋದು ಸುಳ್ಳಲ್ಲ ಅಂದುಕೊಂಡಳು. ಎಲ್ರೂ ಸುಖವಾಗಿದ್ರು.

ಒಂದ್ ದಿನ ಅವ್ವ ಹೇಳಿದಳು: "ನೋಡ್ಕೊಗ, ಏನೋ ನಿನ್ನ ನಸೀಪ ಚಂದಾಗಿತ್ತು, ದೇವರು ಕಣ್ಬುಟ್ಟ. ನೋಡಿದರೆ ಬಾಡಿಹೋಗೋ ಅಂತ ಈ ಹೂವಿನಂತ ಹುಡುಗೀಯ ಈ ದಾರೀಲಿ ನೀರಿಗೆ ನಬಟೆಗೆ ಕಳಸಾಕೆ ಆಗೋದಿಲ್ಲ. ಒಂದು ಹೊತ್ತು ಕೆಟ್ಟದ್ದು, ಒಂದು ಹೊತ್ತು ಒಳ್ಳೇದು. ಮನುಸನ ಕಣ್ಣು ಒಳ್ಳೇದಲ್ಲ. ಇದ್ಕೇನ್ಮಾಡೋದು?" ಎಲ್ಲಾ ಸೇರಿ ಯೋಚನೆ ಮಾಡಿದರು. ಅರಮನೆಯಿಂದ ನೆಲದ್ವಾರದಲ್ಲಿ ಹೊಳೆಗೆ ಹೋಗೋ ಹಂಗೆ ಆಗ್ಬೇಕು ಅಂದುಕೊಂಡರು. ಸರಿ, ನಾಗರತ್ನದ ಉಂಗುರದ ಉಂಗುರಪೂಜೆ ಮಾಡಿ "ಮನೆಗೂ ಸ್ನಾನ ಘಟ್ಟಕ್ಕೂ ಸೊಗಸಾದ ನೆಲದ್ವಾರ ಆಗಬೇಕು, ನರಮನುಸರ ಕಣ್ಣಿಗೆ ಕಾಣದಂಗೆ" ಅಂತ ಬೇಡಿದರು. ರೆಪ್ಪೆ ಹೊಡಿಯೋ ಅಷ್ಟರಲ್ಲಿ ವೈನಾದ ಸುರಂಗ ಮಾರ್ಗ ಆಯಿತು.

ಪರ್ವತರಾಜ ನಿಸಮಾಯದಲ್ಲಿ ನಿಂತುಕೊಂಡ ಈ ಪಟ್ಟಣ ನೋಡಿದ. ಅವಳು ದೇವಲೋಕದ ಹೆಣ್ಣೇ ಇರ್ಬೇಕು ಅಂತ ಅವನಿಗೆ ಖಾತ್ರಿಯಾಯ್ತು. ಏನಾರೂ ಮಾಡಿ ಅವಳ್ನ ಕಂಡುಹಿಡಿದು ತನ್ನ ಕೈವಶ ಮಾಡ್ಕೋಬೇಕು ಅಂತ ಹಗಲೂ ಇಳ್ಳೂ ಕಣ್ಣಿಗೆ ಎಣ್ಣೆ ಬುಟ್ಕೊಂಡು ಕಾದ. ಅವಳು ಕಣ್ಣಿಗೇ ಸಂಧಿಸಲಿಲ್ಲ.



ಕೊನೆಗೆ ಬ್ಯಾರೆ ಉಪಾಯ ಕಾಣದೆ "ರತ್ನಾವತೀನ ತಂದುಕೊಟ್ಟೋರಿಗೆ ಅರ್ಧ ರಾಜ್ಯ ಕೊಡ್ತೀನಿ" ಅಂತ ರಾಜ್ಯದಲ್ಲೆಲ್ಲ ಡಂಗುರ ಹೊಡೆಸಿ ಸಾರಿಸಿದ. ರಾಜ್ಯದ ಆಸೆಗೆ ಏಟೇಟೋ ಜನ ಪರ್ದಾಡಿದರು. ಪರಿಯತ್ನ ಮಾಡಿದರು. ಅವ್ಳ ತರೋದು ಇರ್ಲಿ, ಅವಳ ಒಂದು ತಲೆ ಕೂದಲ್ನೂ ತರಾಕೆ ಆಗಲಿಲ್ಲ ಅವರಿಗೆ.

ಆ ಪಟ್ಣದಲ್ಲಿ ಒಬ್ಬಳು ಕುಂಟಣಿ ಇದ್ಲು. ಅವಳಿಗೆ ಒಬ್ಬನೇ ಮಗ ಇದ್ದ. ಏನಾರೂ ಮಾಡಿ ರತ್ನಾವಳಿ ಕಂಡುಹಿಡಿದು ರಾಜನಿಗೆ ಒಪ್ಪಿಸಿ ಅರ್ಧರಾಜ್ಯಕ್ಕೆ ತನ್ನ ಮಗನ್ನ ರಾಜನ ಮಾಡಬೇಕು ಅಂತ ಅವಳಿಗೆ ಆಸೆ ಬತ್ತು. ರಾಜನ ಹತ್ರಕ್ಕೆ ಬಂದು "ನಾನು ರತ್ನಾವತಿ ಕರ್ಕೊಂಬತ್ತೀನಿ" ಅಂತ ಹೇಳಿ ಇಳ್ಳೇವು ತಕ್ಕೊಂಡಳು. ರತ್ನಾವತಿ ದಿನಾಲೂ ಕೋಳಿ ಕೂಗೋ ಮುಂದಾರದಲ್ಲಿ ತಾನಕೆ ಹೋಗೋ ಕಟ್ಲೆ. ಆ ಕಿಲಾಡಿ ಮುದುಕಿ ಹ್ಯಂಗೋ ಆ ತಾನಗಟ್ಟ ನೋಡ್ಕೊಂಬುಟ್ಲು. ಒಂದು ದಿನ ರತ್ನಾವಳಿ ತಾನ ಮಾಡ್ತಿರುವಾಗ ಮ್ಯಾಲೆ ಕೂತ್ಕೊಂಡು ಗೂಬೇ ಹಂಗೆ ನಳ್ಳಿದಳು. ಆ ದನಿ ಕೇಳಿ ರತ್ನಾವತಿಗೆ ಬೋ ಚೋಜಿಗ ಆಯ್ತು. 'ಯಾವತ್ತೂ ಇಲ್ದೇ ಇದ್ದ ದನಿ ಇವತ್ತೇನು' ಅಂದುಕೊಂಡು ಬಿರ್‌ಬಿರ್ನೆ ತಾನ ಮಾಡಿ ಮ್ಯಾಲೆ ಬಂದ್ಲು. ಅವಳ್ನ ಕಂಡ ಕೂಡ್ಲೆ ಮುದ್ಕಿ ಬಾಯಿ ಬಾಯಿ ಬಡಕೊಂಡು ಅಳಾಕೆ ಸುರುಮಾಡಿದ್ಲು. "ಯಾಕಮ್ಮಾ ಹಿಂಗಳ್ತೀ, ಏನ್ ನಿನ್ನ ಕಷ್ಟ?" ಅಂತ ಕೇಳಿದಳು ರತ್ನಾವತಿ. ಮುದುಕಿ ಮತ್ತಷ್ಟು ಜೋರಾಗಿ ಅಳ್ತಾ "ಅಯ್ಯೋ ನನ್ನ ಮಗಳೊಬ್ಬಳು ನಿನ್ನಂಗೇ ಸುಂದರವಾಗಿ ಇದ್ಲು ಕನವ್ವ. ನಿನ್ನ ಅವಿಸಿ ಅವಳ ತರಬಹ್ದು. ಈಗ ಎಂಟು ದಿನದಲ್ಲಿ ಜವರಾಯ ಅವಳ್ನ ಕರಕೊಂಡ ಕನವ್ವ. ನನ್ನ ಅನಾದ್ರಿ ಮಾಡಿ ಕಾಡ್ಹೆಣ ಮಾಡಿ ಹೊಂಟೋದ್ಲು ಕನವ್ವ" ಅಂತ ಹೇಳಿದಳು. ಅವಳಿಗೆ ಬಾಳ ಕನಿಕರ ಬತ್ತು. "ಅಯ್ಯಯ್ಯೋ ಅಳಬ್ಯಾಡ ಮುದುಕಮ್ಮ. ನರಮನುಸನಾಗಿ ಹುಟ್ಟಿದಮ್ಯಾಲೆ ಒಂದುದಿನ ಸಾಯ್ನೇಬೇಕು. ಅವಳು ಹೋದ್ಲು. ನಾವೇನು ಇಲ್ಲೇ ಮೊಳೆ ಬಡಿಸ್ಕೊಂಡು ಸಾಸೀನವಾಗಿ ಇರ್ತೀವಾ? ಎಲ್ರೂ ಒಂದಿವಸ ಜವರಾಯ್ನ ಪಟ್ಟಣಕ್ಕೆ ಹೋಗ್ನೇಬೇಕು. ಸುಮ್ನಿರು ಅಳಬ್ಯಾಡ" ಅಂತ ಸಮಾಧಾನ ಹೇಳಿದ್ಲು. "ಅಯ್ಯೋ, ನನ್ನ ಚೆನ್ನದಂಥ ಮಗಳ ನಾನು ಹ್ಯಂಗವ್ವ ಮರೀಲಿ? ನೀನಾರೂ ನನ್ನ ಜೊತೇಲಿ ಕರ್ಕೊಂಡೋಗವ್ವ, ನಿನ್ನ ಮುಖ ನೋಡ್ಕೊಂಡು ಅವಳ್ನ ಮರೀತೀನಿ. ನೀನು ಹೇಳಿದ ಕೆಲ್ಸ ಮಾಡಿ ಕೊಂಡಿರ್ತೀನಿ. ನಿನ್ನ ನೆತ್ತಿ ಕೂದಲು ಕೊಂಕದ ಹಂಗೆ ನೋಡ್ಕೋತ್ತೀನಿ" ಅಂತ ಗೋಗರೆದಳು. ರತ್ನಾವತಿಗೆ ಅಯ್ಯೋ ಅನಿಸ್ತು "ಅದ್ಕೇನಂತೆ ಬಾ ಮುದುಕವ್ವ.

ನಿನಗೊಂದು ಬ್ಯಾರೆ ಒಲೆ ಹೂಡ್ತೀವಾ? ನಾವ್ ತಿನ್ನೋ ಒಂತುತ್ತು ತಿಂದ್ಕೊಂಡು ಇರೀವಂತೆ ಬಾ" ಅಂತ ಹೇಳಿ ಕರಕೊಂಡು ಹೋದ್ಲು.

ಹಂಗೂ ಹಿಂಗೂ ಒಂದು ತಿಂಗಳು ಕಳೀತು. ಆ ಮುದುಕಿ ರತ್ನಾವತೀನ ತಾಯಿಗಿಂತ ಹೆಚ್ಚಾಗಿ ನೋಡಿಕೊಂಡ್ಲು. ಅವಳು ಸಟಾಗಿ ಆಗ್ದು ಅಂದ್ರೆ ಮನೇಲೆಲ್ಲಾ ಪರ್ದಾಡೋಳು. ಸೀಮೆ ದೇವರಿಗೆಲ್ಲ ಹರಕೆ ಹೊರೋಳು. ಎಲ್ಲಾರ್ಗೂ ಅವಳ್ನ ಕಂಡ್ರೆ ಅಚ್ಚುಮೆಚ್ಚಾಯ್ತು. ಯಾರ್ಗೂ ಒಂದು ರವೋಟೂ ಅನುಮಾನ ಬರ್ಲ್ನಿಲ್ಲ. ಕುಂಟಿಣಿ ಪೆದ್ದಣ್ಣ ಉಂಗುರ ಹಾಕ್ಕೋಳ್ಳೋದು ಮಾಡೋದು ನೋಡಿ ಕೊಂಡ್ಲು. ಅದರಿಂದ್ಲೇ ಇವರಿಗೆಲ್ಲ ಇಂಥ ಶಕ್ತಿ ಸಂಪತ್ತು ಅಂತ ಅವಳಿಗೆ ಗೊತ್ತಾಯ್ತು. ಒಂದು ದಿನ ಇದ್ದಕ್ಕಿದ್ದಂತೆ ಏಕ್‌ದಂ ಹಿಟ್ಟುಸೊಪ್ಪು ಬುಟ್ಟು ಮನಗಿ ಬುಟ್ಲು. ರತ್ನಾವತಿಗೆ ಬಾಳ ಸಂಕಟವಾಯ್ತು. "ಯಾಕಮ್ಮ?" ಅಂತ ಕೇಳಿದಳು. "ನಾನು ಹೇಳಿದಂಗೆ ಮಾಡ್ತೀನಿ ಅಂತ ಭಾಷೆ ಕೊಟ್ರೆ ಊಟ ಮಾಡ್ತೀನಿ. ಇಲ್ದಿದ್ರೆ ಹಿಂಗೇ ಸಾಯ್ತೀನಿ" ಅಂದಳು. ಅವಳಿಗೆ ಉಬೇಸಂಕಟಾಯ್ತು. ಒಂದು ಗಳಿಗೆ ಯೋಚನೆ ಮಾಡಿ "ಹಂಗೇ ಆಗ್ಲಿ, ನೀನು ಹೇಳಿದಂಗೆ ಮಾಡ್ತೀನಿ. ಅದೇನು ಹೇಳು" ಂತ ಅವಳ ಕೈಮೇಲೆ ಕೈ ಹಾಕಿ ಭಾಷೆಕೊಟ್ಲು. ಆಮ್ಯಾಲೆ "ನಿಮ್ಮ ಯಜಮಾನ್ರ ಕೈಲಿರೋ ಉಂಗುರ ಒಂದರೆಕ್ಷಣ ಕೈಗೆ ಹಾಕ್ಕೊಂಡು ವಾಪಸ್ ಕೊಡ್ತೀನಿ ಕೊಡು" ಅಂದ್ಲು. "ಅಯ್ಯೋ ಇಷ್ಟೇಯ? ನಾನು ಏನೋ ಅಂತಿದ್ದೆ. ಅವರು ತಾನಕ್ಕೆ ಹೋದಾಗ ನಿಂಗೆ ಕೊಡ್ತೀನಿ" ಅಂದ್ಲು ರತ್ನಾವತಿ. ಗಂಡ ಸ್ನಾನಕ್ಕೆ ಹೊಂಟ. ಹೋಗುವಾಗ ತನ್ನ ಕೈಯಿಂದ ಉಂಗುರ ತಗದು ಹೆಂಡತಿ ಕೈಲಿ ಕೊಟ್ಟ. ರತ್ನಾವತಿ ಅದನ್ನ ಮುದುಕಿ ಕೈಗೆ ಕೊಟ್ಟು ತಾನೂ ತಾನಕ್ಕೆ ಹೋದ್ಲು. ಅವಳು ಅದನ್ನ ಬೆಳ್ಳಿಗೆ ಹಾಕ್ಕೊಂಡ್ಲು. "ಇಕ್ಕುದೊಣ್ಣೆ, ಪಾದರಕ್ಷೆ ಎರಡಾಗಲಿ" ಅಂದಳು. ಅವು ಸರ್ರನೆ ಬಂದು ಅವಳ ಮುಂದೆ ಇಳದೊ. ಅವಳು ಪಾದರಕ್ಷೆ ಮೇಲೆ ನಿಂತುಕೊಂಡ್ಲು. ಇಕ್ಕುದೊಣ್ಣೆ ಹಿಡಕೊಂಡ್ಲು. ಭರ್ರನೆ ಹಾರಿ ತಾನಗಟ್ಟಕ್ಕೆ ಹೋಗಿ ರತ್ನಾವತೀನ ಎಳಕೊಂಡು ಕುಂಡಿರಿಸಿಕೊಂಡ್ಲು. ನೆಟ್ಟಗೆ ಪರ್ವತರಾಜನ ಪಟ್ಟಣಕ್ಕೆ ಹೋದ್ಲು.

ಕುಂಟಿಣಿ ಬಾಳ ಸಂರಂಭದಿಂದ ಪರ್ವತರಾಜನ ಅರಮನೆಗೆ ಹೋದ್ಲು ರಾಜ ಇದೇ ಕೊರತನೇಲಿ ಹಾಸಿಗೆ ಹಿಡಿದಿದ್ದ. ಇವಳ ಮೊಖ ಕಂಡಕೂಡ್ಲೆ ಅವನಿಗೆ ಹೋದ ಜೀವ ಬಂದಂಗಾಯ್ತು. ಮುದುಕಿ ತನ್ನ ಸಾಸನೆಲ್ಲ ಹೇಳಿಕೊಂಡ್ಲು. ಹುಡುಗೀನ ಅವನ ವಸಕ್ಕೆ ಕೊಟ್ಲು. ಉಂಗುರಾನೂ ಕೊಟ್ಟು ಅದರ ಮೈಮೆನೆಲ್ಲಾ ಕಡ್ಡೀಲಿ ಬರದಂಗೆ ಹೇಳಿದಳು. ಅವನಿಗೆ ಇಂದ್ರನ ಬಿಳಿಯಾನೆಯೇ ಕೆಳಕ್ಕೆ



ಇಳಿದಂಗಾಗೋಯ್ತು. ಕುಂಟಿಣೀನ ಬಾಯ್ತುಂಬ ಹೊಗಳಿ ಅವಳಿಗೆ ಬೇಕಾದಂಥ ಮುತ್ತು ರತ್ನ ವಜ್ರ ವೈಢೂರ್ಯ ಮೊರಮೊರದಲ್ಲೇ ತುಂಬಿಸಿಕೊಟ್ಟ. ತಾನು ಆಡಿದ ಮಾತಿನಂಗೇ ಅರ್ಧ ರಾಜ್ಯಾನೂ ಕೊಟ್ಟುಬುಟ್ಟ. ಕುಂಟಿಣಿ ಮಗ ಅರ್ಧರಾಜ್ಯಕ್ಕೆ ದೊರೆಯಾದ.

ರಾಜ ರತ್ನಾವತೀ ಮದುವೆ ಮಾಡ್ಕೊಳಾಕೆ ಎಲ್ಲಾ ಹಮೆಜಮೇವು ಮಾಡ್ಕೊಂಡ. ಆಗ ರತ್ನಾವತಿ ಹೇಳಿದ್ಲು: "ನಾನು ಗೌರಿರತ ಹಿಡಿದಿವ್ನಿ, ಮೂರು ತಿಂಗ್ಳಗಂಟ ಪರಪುರುಸ್ರ ಮೊಖ ನೋಡೋದಿಲ್ಲ. ನನಗೆ ಪಟ್ಣದ ಹೊರಗೆ ಬ್ಯಾರೆ ಅರಮನೆ ಕಟ್ಟಿಸ್ಬೇಕು. ಅಲ್ಲಿಗೆ ನರಮನುಸರು ಯಾರೂ ಬರದಂಗೆ ಕಾವಲು ಹಾಕಬೇಕು. ಅದರ ಹತ್ರ ಅನ್ನಛತ್ರ ಇಡಿಸ್ಬೇಕು. ಅಲ್ಲಿಗೆ ತಿರುಕೇರು ಹೊರಕೇರು ಹೋಗ್ತಾ ಬ್ಯಾರೆ ಯಾರೂ ದೊಡ್ಮನುಸರು ಬರದಂಗೆ ಮಾಡಬೇಕು." ರಾಜ ಇಧಿ ಇಲ್ಲದೆ ಅವಳ ಕರಾರಿಗೆಲ್ಲ ಒಪ್ಕೊಂಡ. ಅವಳು ಹೇಳಿದಂಗೇ ಎಲ್ಲಾನೂ ಏರ್ಪಾಡು ಮಾಡಿದ. ಅಷ್ಟೊತ್ತಿಗೆ ಯಾವುದೋ ದೇವತಾಕಾರ್ಯದ ಸಲುವಾಗಿ ರಾಜ ಸಮುದ್ರದ ಆಚೆಗೆ ಹೋಗಬೇಕಾಗಿ ಬತ್ತು. ಉಂಗುರ ತನ್ನ ಹತ್ರ ಇರೋಗಂಟ ರತ್ನಾವತಿ ಎಲ್ಲೂ ತಪ್ಪಿಸ್ಕೊಂಡು ಹೋಗಾಕಾಗೋದಿಲ್ಲ ಅಂತ ನಿರ್ಚಿಂತೆಯಿಂದ ರಾಜ ಸಮುದ್ರದಾಚೆಗೆ ಪಯಣಮಾಡಿದ.

ಪೆದ್ದಣ್ಣ ಯಥಾಸ್ಥಿತಿ ಆದ. ಅರಮನೆಗಿರಮನೆ ಎಲ್ಲಾ ಮಾಯವಾಯ್ತು. ಪರದೇಸಿ ಹಂಗಾದ. ಕೊತ್ತಿ ಮುರ್ಕಾಟಿ ಎರಡ್ನೂ ಹಿಡಕೊಂಡು ಊರೂರು ದೇಶದೇಶ ಎಲ್ಲಾನೂ ಸುತ್ತಿದ. ತಾನು ಹಸುಕೊಂಡು ಬಳ್ಳಿಕೊಂಡು ಇದ್ರೂ ಅವಕೆ ಮಾತ್ರ ಹೊಟ್ಗೆ ಏನಾರೂ ಸಂಪಾದಿಸಿ ಹಾಕುತಿದ್ದ. ಹಿಂಗೇ ಅಲೆದು ಅಲೆದು ಪರ್ವತರಾಜನ ಪಟ್ಟಣಕ್ಕೇ ಬಂದು ಇಳಿದ. ಅಲ್ಲಿ ಯಾರೋ ಹೇಳಿದರು – ಊರಾಚೆ ಇರೋ ಛತ್ರದಲ್ಲಿ ತಿರುಕೇರಿಗೆ ಅನ್ನ ಹಾಕ್ತಾರೆ ಅಂತ. ಅವನು ಅದೇ ಛತ್ರಕ್ಕೆ ಬಂದು ಉಳಕೊಂಡ. ಇಳ್ಹೊತ್ತು ಕಡೇ ಪಂಕ್ತಿಗೆ ರತ್ನಾವತೀನೆ ಅನ್ನ ಬಡಿಸೋದು ವಾಡಿಕೆ. ಹಂಗೇ ಅನ್ನ ಇಕ್ಕಾಕೆ ಬಂದಾಗ ಅವನ ಮ್ಯಾಲೆ ದೃಷ್ಟಿ ಬಿತ್ತು. ಗಡ್ಡ ಬವರ ಎಲ್ಲಾ ಬೆಳೆದುಹೋಗಿತ್ತು. ಕೊತ್ತಿ ಮುರ್ಕಾಟಿ ತೊಡೇಮ್ಯಾಲೇ ಕೂತಿದ್ದೋ. ಆಗ ಅವಳಿಗೆ ಅವನೇ ತನ್ನ ಗಂಡ ಅನ್ನೋದು ಗೊತ್ತಾಗ್ಹೋಯ್ತು. ಮಾತಾಡ್ಸೋಹಂಗಿಲ್ಲ, ಮಾತಾಡಿಸ್ದೆ ಇರೋಹಂಗಿಲ್ಲ, ಮಾತಾಡ್ಸಿದ್ರೂ ಉಂಗುರ ಇಲ್ದೆ ಏನೂ ಪ್ರಯೋಜನವಿಲ್ಲ. ಅವಳಿಗೆ ಉಬೇಸಂಕಟವಾಯ್ತು. ಹಂಗೇ ಮುಂದಕ್ಕೆ ಹೋದಳು. ಅವನು ಉಂಡು ಛತ್ರದ ಜಗಲೀಲಿ ಮನೀಕೊಂಡ.

ಆ ಛತ್ರದಲ್ಲಿ ಇಲಿಗಳ ಹಿಂಡೋ ಹಿಂಡು. ಮನುಷ್ಯರಂಗೆ ಓಡಾಡೋವು. ಕೊತ್ತಿ ಏನುಮಾಡ್ತು? ಆ ಯಜಮಾನ ಇಲೀನೇ ಹಿಡಿದುಬುಡ್ತು. ಆಗ ಆ ಇಲಿ "ಗುರುಗಳೇ ನನ್ನ ಸಾಯಿಸಬ್ಯಾಡಿ. ನಿಮಗೆ ನನ್ನಿಂದ ಏನು ಕೆಲಸ ಆಗ್ಬೇಕು ಹೇಳಿ ಮಾಡ್ತೀನಿ. ನನ್ನ ಪರಾಣ ಬುಟ್ಬುಡಿ" ಅಂತ ಬೇಡಿಕೊತ್ತು. ಅದಕ್ಕೆ "ನಿಮ್ಮ ಪರ್ವತರಾಜನ ಹತ್ರ ನಮ್ಮ ಯಜಮಾನನ ವಜ್ರದ ಉಂಗುರ ಅದೆ. ಆ ಉಂಗುರ ತಂದುಕೊಟ್ರೆ ನಿನ್ನ ಬುಡ್ತೀನಿ. ಇಲ್ದೇ ಇದ್ರ ನಿನ್ನ ಕಡಿದು ತುಂಡು ಮಾಡ್ತೀನಿ" ಅಂತು. ಆಗ ಯಜಮಾನಿಲಿ "ನಮ್ಮ ರಾಜ ಸಮುದ್ರದ ಆಚೆ ಅವ್ನೆ. ಅಲ್ಲಿಗೆ ನಾನು ಹ್ಯಂಗೆ ಹೋಗಲಿ?" ಅಂತ ಕೇಳ್ತು. ಆಗ ಮುರ್ಕಾಟಿ "ನಾನು ನಿನ್ನ ದಾಟಿಸ್ತೀನಿ" ಅಂತು, ಸರಿ ಬೆಕ್ಕು ಇಲಿ ಮುರ್ಕಾಟಿ ಮೂರೂ ಹೊರಟವು. ಮುರ್ಕಾಟಿ ಬೆಕ್ನೂ ಇಲೀನೂ ತನ್ನ ಮ್ಯಾಲೆ ಕುಂಡಿರಿಸಿಕೊಂಡು ಬರಬರನೆ ಒಂದೇ ಲಾಜಾದಲ್ಲಿ ಸಮುದ್ರ ಈಜಿ ದಾಟಿಬುಟ್ತು. ತಾನು ಆಚೆ ದಡದಲ್ಲೇ ಉಳೀತು. ಕೊತ್ತಿ ಇಲೀ ಎರಡೂ ರಾಜ ಇಳಕೊಂಡಿದ್ದ ಅರಮನೆಗೆ ಹೋದವು. ರಾಜಹಗಲು ಹೊತ್ನಲ್ಲಿ ಉಂಗುರ ಕೈಗೆ ಹಾಕ್ಕೊಂಡಿರ್ತಿದ್ದ. ರಾತ್ರಿ ಹೊತ್ನಲ್ಲಿ ಬಾಯಲ್ಲಿ ಮಡೀಕೊಂಡು ಮನೀಕೊತ್ತಿದ್ದ. ಕೊತ್ತಿ ಇಲಿ ಎರಡೂ ಸಮಯ ಕಾದೊ ಕಾದೊ. ಹಂಗೆ ಕಾದೊ. ಉಂಗುರ ಕದಿಯಾಕೆ ಆಗ್ನೇ ಇಲ್ಲ. ಏನು ಮಾಡೋದೂ ಅಂತ ಯೋಚನೆ ಮಾಡಿದೊ. ಒಂದು ಸರಿಯಾದ ಉಪಾಯ ಹೊಳೀತು.

ರಾಜ ರಾತ್ರಿ ಹೊತ್ತು ಮಂಚದ ಮ್ಯಾಲೆ ಅಂಗಾತನಾಗಿ ಮನೀಕೊಂಡು ಗೊರಕೆ ಹೊಡೀತಿದ್ದ. ಅವನಿಗೆ ಮಾಮೇರಿ ನಿದ್ದೆ ಬಂದುಬುಟ್ಟಿತ್ತು. ಇಲಿ ತನ್ನ ಉದ್ದನೆ ಕುಡಿಬಾಲ ತಕ್ಕೊಂಡು ರಾಜನ ಮೂಗಿಗೆ ಜಡದುಬುಡ್ತು. ರಾಜ ಉಸುರು ಕಟ್ಟಿದಂಗಾಗಿ ಸೀತ, ಸೀತ, ಹಂಗೆ ಸೀತುಬುಟ್ಟ. ಆಗ ಅವನ ಬಾಯೊಳಗಿದ್ದ ಉಂಗುರ ಪಟ್ ಅಂತ ಹೊರಕ್ಕೆ ಹಾರ್ತು. ಅದ್ನೇ ಕಾಯ್ತಾ ಇದ್ದ ಕೊತ್ತಿ ಅದ ಬಾಯಲ್ಲಿ ಕಚ್ಚಿಕೊಂಡು ಓಡಿಬುಡ್ತು.

ಇಲಿ ಕೊತ್ತಿ ಎರಡೂ ಕಾಯ್ತಾ ಇದ್ದ ಮುರ್ಕಾಟಿ ಹತ್ರ ಬಂದೊ. ಅದರ ಬೆನ್ನಮ್ಯಾಲೆ ಕೂತು ಸಮುದ್ರ ದಾಟಿ ಛತ್ರಕ್ಕೆ ಬಂದೊ. ತನ್ನ ಕೊತ್ತಿ ಮುರ್ಕಾಟಿ ಎಲ್ಲಿಗೆ ಹೋದೋ ಅಂದ್ಕೊಂಡು ಅನ್ನ ನೀರು ಬುಟ್ಟು ಪೆದ್ದಣ್ಣ ಯೋಚನೆ ಮಾಡ್ತಾ ಅಲ್ಲೇ ಇದ್ದ. ಕೊತ್ತಿ ಉಂಗುರ ತಂದು ಅವನಕೈಗೆ ಕೊಡ್ತು. ತಕ್ಷಣ ಅವನಿಗೆ ದಿವ್ಯದೃಷ್ಟಿ ಬಂದುಬುಡ್ತು. ಅವನ ರೂಪೇ ಬದ್ಲಾಸಿಹೋಯ್ತು. ಮೊಖದಲ್ಲಿ ದೇವಕಳೆ ಉಕ್ತು. ಇದ್ನೇ ಕಾಯ್ತಾ ಇದ್ದ ರತ್ನಾವತಿ ಸರ್ರ್ ಅಂತ ಬಂದಳು.



ಗಂಡನಿಗೆ ಬೇಕು ಬೇಕಾದ ಉಪಚಾರ ಮಾಡಿದಳು. ಆದ ಕತೆ ಹೇಳಿ ತನ್ನದು ತಪ್ಪಾಯ್ತು ಅಂತ ಬೇಡಿಕೊಂಡಳು. ಕೂಟ್ಲೆ ಕುಂಟಣಿ ಕರಸಿದರು. "ಮಾಯಂಗಣಿ ಮುಂಡೆ, ಏಟೇಟು ಮನೆ ಹಾಮಾಡಿದ್ದೀ" ಅಂತ ಹೇಳಿ ಅವಳ್ನ ಮೂರು ತುಂಡಿಗೆ ಕತ್ತರಿಸಿ ಎಸೆದರು. "ಇಕ್ಕು ದೊಣ್ಣೆ ಪಾದರಕ್ಷೆ ಆಗಲಿ" ಅಂದರು. ಅವು ಮುಂದಕ್ಕೆ ಬಂದು "ಏನಪ್ಪಣೆ?" ಅಂತ ನಿಂತುಕೊಂಡೊ. ಪಾದರಕ್ಷೆ ಮ್ಯಾಲೆ ಕೂತು ಇಕ್ಕುದೊಣ್ಣೆ ಹಿಡದು ಮೊದಲು ಕಾಡಿಗೆ ಬಂದರು. ಅಲ್ಲಿ ಮುದುಕಿ ಒಬ್ಬಳೇ ಪರದೇಸಿಯಾಗಿ ಅಲಿತಿದ್ಲು. ಅವಳ್ನೂ ಕರಕೊಂಡರು. ಮೊದಲಿನಂಗೇ ಅರಮನೆ ಗುರು ಮನೆ ಪಟ್ಣ ದಂಡು ದಾಳಿ ಮಂದಿ ಮಾರ್ಬಲ ಎಲ್ಲಾ ಆಯಿತು. ರತ್ನಾವತಿ "ಪರ್ವತ ರಾಜನಿಗೆ ಕಪಿರೂಪ ಬರಲಿ" ಅಂದ್ಲು. ಅವನು ಕಾಡುಕಪಿಯಾಗ್ಬುಟ್ಟ. "ಪರ್ವತ ರಾಜನ ಪಟ್ಣ ನಮ್ಮ ವಶವಾಗ್ಲಿ" ಅಂದ್ಲು. ಕಣ್ಣು ಕಣ್ಮುಚ್ಚಿ ಬುಡೋದ್ರೊಳಗೆ ಆಗಿ ಹೋಯ್ತು. ಆಗ ಪೆದ್ದಣ್ಣ ಮಹಾರಾಜನಾದ. ಹಾವು, ಬೆಕ್ಕು, ಮುರ್ಕಾಟಿ ಹೆಸರು ಹೇಳಿಕೊಂಡು ಎಲ್ರೂ ನಿರುಂಬಳವಾಗಿ ಬದೀಕ್ಕೊಂಡರು.

* * * *

# *ಗುಲಗಂಜಿ ಮಾದೇವಿ

ಒಬ್ಬ ರಾಜ. ಅವನಿಗೆ ಮೂರು ಜನ ಹೆಂಡತೀರು. ಆದ್ರೂ ಒಬ್ಬರಿಗೂ ಮಕ್ಕಳೇ ಇರಲಿಲ್ಲ. ಅವನಿಗೆ ಹಗಲೂ ರಾತ್ರೇ ಅದೇ ಚಿಂತೆ ಕುಟ್ಟೇಹುಳ ಕೊರೆದಂಗೆ ಕೊರೀತಿತ್ತು. ಒಂದು ಸಾರಿ ಅವನ ರಾಜ್ಯದಲ್ಲಿ ದಂಗೆ ಎದ್ಬುಡ್ತು. ಅದನ್ನ ಅಡಗಿಸೋಕೆ ದೊರೆ ಅರಮನೆ ಬುಟ್ಟು ಬಾಳ ದೂರ ಹೋಗಬೇಕಾಗಿ ಬಂತು. ಹೋಗುವಾಗ ಮೂರು ಜನ ಹೆಂಡತೀರ್ನೂ ಕರೆದು ಹೇಳಿದ: "ನಾನು ಬರೋದು ಯಾವಾಗ ಅಂತ ನಿರ್ಧಾರವಾಗಿ ಹೇಳಕಾಗೋದಿಲ್ಲ. ಎರಡು ಮೂರು ವರ್ಷ ಆದ್ರೂ ಆಗಬಹುದು. ಅದರಿಂದ ಅರಮನೆ ಕಡೆ ತುಂಬಾ ಜೋಪಾನವಾಗಿರಿ" ಅಂತ. ಅವನು ಸಜ್ಜಾಗಿ ಹೊರಡುವಾಗ ಮೂರು ಜನ ರಾಣೀರೂ ಬಂದು ಅವನಿಗೆ ಮುತ್ತಿನಾರತಿ, ರತ್ನದಾರತಿ, ಹವಳದಾರತಿ ಎತ್ತಿದರು. ಆರತಿ ಎತ್ತುವಾಗ ಅವನ ಕಾಲ ಹತ್ತಿರ ಒಂದು ಗುಲಗಂಜಿ ಬಿದ್ದಿತ್ತು. ಏನನ್ನಿಸ್ತೋ ಏನೋ ಕಿರೀರಾಣಿ ಅದ ತಕ್ಕೊಂಡು ಯಾರಿಗೂ ಕಾಣದಂಗೆ ಬಾಯಿಗೆ ಹಾಕಿಕೊಂಡಳು. ಯಾರಿಗೂ ಅದನ್ನ ಹೇಳಲೇ ಇಲ್ಲ. ರಾಜ ಯುದ್ಧಕ್ಕೆ ಹೊರಟು ಹೋದ – ದಂಡು ದಾಳಿ ಮಂದಿ ಮಾರ್ಬಲ ತಕ್ಕೊಂಡು.

ಈ ಕಡೆ ಕಿರೀರಾಣಿ ಹೊರಗಡೆ ಆಗಲೇ ಇಲ್ಲ. ಒಂದು ತಿಂಗಳು ತುಂಬ್ತು, ಎರಡು ತಿಂಗಳು ತುಂಬ್ತು, ಮೂರು ತಿಂಗಳು ತುಂಬ್ತು. ಅವಳಿಗೆ ಬಸಿರಿ ಅನ್ನೋದು ಖಾತ್ರಿಯಾಯಿತು. ಆಗ ಹಿರೀರಾಣಿಯರಿಗೆ ಸುದ್ಧಿ ಗೊತ್ತಾಯಿತು. ಅವರಿಗೆ ಬಲು ಗಾಬರಿ ಆಯ್ತು, ಭಯ ಆಯ್ತು, ದಿಕ್ಕೇ ತೋರದಂಗೆ ಆಯ್ತು. ಇಬ್ರೂ ಕಿರಿಯೋಳ ಹತ್ರಕ್ಕೆ ಬಂದು ಕೇಳಿದರು.

"ಅಯ್ಯಯ್ಯೋ ಇದೇನು ತಂಗ್ಯಮ್ಮ, ನೀನು ಹಿಂಗ್ ಮಾಡಿಕೊಂಡಿದ್ದೀಯಲ್ಲ. ಇದು ಆಗಬಹುದಾ? ದೊರೆ ಮೊದಲೇ ಕೋಪಿಷ್ಟರು. ಅವರು ಬಂದರೆ ನಮ್ಮ ಜೀವಸಹಿತ ಬುಡ್ತಾರಾ? ನಮ್ಮ ಮೂರು ಜನಾನೂ ಸಿಗಿದು ಹದ್ದು ಕಾಗೆಗೆ ಹಬ್ಬ ಮಾಡಿ ಬುಡ್ತಾರೆ. ಇದೇನು ಕತೆ ಹೇಳವ್ವ, ಹೇಳು".

---

* ಹೇಳಿದವರು : ನನ್ನ ಸೌಭಾಗ್ಯವತಿ ಕಮಲ.



ಕಿರೀಯೋಳು ನಗುನಗ್ತಾಹೇಳಿದಳು : "ಅಯ್ಯಯ್ಯೋ ನೀವ್ಯಾಕೆ ಹಿಂಗೆ ಗಾಬರಿ ಆಗಿದ್ದೀರಿ. ನಾನೇನೂ ಮಾಡಬಾರದ ಅಚಾತುರ್ಯ ಮಾಡಿಕೊಂಡಿಲ್ಲ. ದೊರೆಗಳು ಹೋಗುವಾಗ ನಾವು ಆರತಿ ಎತ್ತೋ ಜಾಗದಲ್ಲಿ ಒಂದು ಗುಲಗಂಜಿ ಅವರ ಪಾದದ ತಾವು ಬಿದ್ದಿತ್ತು. ಅದ ತಕ್ಕೊಂಡು ನಾನು ನುಂಗಿಕೊಂಡೆ. ಆಗಲಿಂದ ಹಿಂಗಾಗ್ಯದೆ. ಇದಕ್ಕೆ ನೀವೇನೂ ಚಿಂತೆ ಮಾಡಬೇಡಿ. ಏನೋ ದೇವರು ಕಣ್ಣು ಬುಟ್ಟವ್ನೆ ಅಂತ ಕಾಣ್ತದೆ".

ರಾಣೀರಿಗೆ ತುಂಬಾ ಸಮಾಧಾನವಾಯಿತು. ಆದರೂ ದೊರೆ ಏನಂತಾರೋ ಅನ್ನೋ ಭಯ ಇತ್ತು. ಹಂಗಾಡಿ ಹಿಂಗಾಡಿ ಹಿಂಗಾಡಿ ಕಿರೀ ರಾಣಿಗೆ 'ನವಮಾಸೊಂಬತ್ತು' ತಿಂಗಳು ತುಂಬ್ತು. ಒಂದು ಒಳ್ಳೆ ಮುಹೂರ್ತದಲ್ಲಿ ಒಂದು ಹೆಣ್ಮಗು ಹಡೆದಳು. ಮಕ್ಕಳ್ನೇ ಕಾಣದೆ ಹಲುಬಿ ಹಂಬಲಿಸುತಿದ್ದೋರಿಗೆ ಈ ಮಗು ಒಂದು ದೊಡ್ಡ ನಿಧಿ ಸಿಕ್ಕಿದಂಗಾಯಿತು. ಆ ಮಗುವೋ ಒಳ್ಳೇ ಕೆಂಡಸಂಪಿಗೆ ಹೂವಿನಂಗೆ ಇತ್ತು. ರತ್ನದಂಗೆ ರವರವನೆ ಉರೀತಿತ್ತು. ಇಂಥ ರೂಪಸ್ತ ಮಗು ಈ ಜಂಬೂಜಾತಕದಲ್ಲೇ ಇಲ್ಲ ಅಂದುಕೊಂಡು ಅಕ್ಕತಂಗೇರು ಬಹಳ ಅಕ್ಕರೆಯಿಂದ ಅದ ಸಾಕಿದರು.  ಅದಕ್ಕೆ ಮಾದೇವಿ ಅಂತ ನಾಮಕರಣ ಮಾಡಿದರು.

ಮಗು ಹೊತ್ತಿಗೆ ಬೆಳಿ ಅಂದರೆ ಜಾವಕ್ಕೆ ಬೆಳೀತು. ಅದೇನು ಮಾಯವೋ ಏನೋ. ಒಂದು ದಿನದ ಮಗು ಒಂದು ತಿಂಗಳಂಗೆ ಬೆಳೀತು: ಒಂದು ತಿಂಗಳ ಮಗು ಒಂದು ವರ್ಷದಂಗೆ ಬೆಳೀತು: ಎರಡು ವರ್ಷದ ಮಗು ಇಪ್ಪತ್ತು ವರ್ಷದಂಗೆ ಬೆಳೀತು. ಎರಡೇ ವರ್ಷಕ್ಕೆ ಇಪ್ಪತ್ತು ವರ್ಷದಂಗೆ ಬೆಳೆದ ಹೆಣ್ಣು ದೇವಲೋಕದ ಅಪ್ಸರೆಗಿಂತಲೂ ಸುಂದರವಾಗಿದ್ದಳು. ನೋಡಿದರೆ ಕಣ್ಣೆಸರು ಆಗೋಹಂಗೆ, ಮುಟ್ಟಿದರೆ ಮಾಸಿ ಹೋಗೋಹಂಗೆ ಇದ್ದಳು. ಅವಳ್ನ ನೋಡ್ತಾ ರಾಣಿರಿಗೆ ಯಾಕೋ ಒಂಥರಾ ಭಯವಾಯಿತು. ದೊರೆ ಬಂದರೆ ತಮ್ಮ ಸುಮ್ಮನೆ ಬುಡೋದಿಲ್ಲ ಅಂದುಕೊಂಡು ರಾಣೀರು ಒಂದು ನೆಲಮಾಳಿಗೆ ಮಾಡಿಸಿದರು ಗುಟ್ಟಾಗಿ. ಮಾದೇವೀನ ಅಲ್ಲಿ ಇರಿಸಿದರು. ಮೂರು ಹೊತ್ತೂ ಅವಳ ಜೊತೆಲೇ ಇದ್ದುಕೊಂಡು ತುಂಬಾ ಸಂತೋಷವಾಗಿ ಕಾಲ ಕಳೀತಿದ್ದರು.

## ೨

ಮೂರು ವರ್ಷ ಆಡಾಡಿದಂಗೆ ಕಳೆದುಹೋಯ್ತು. ದೊರೆ ಅರಮನೆಗೆ ಅವತ್ತು ಹಿಂತಿರುಗಿ ಬರ್ತಾನೆ ಅನ್ನೋ ಸುದ್ದಿ ಬಂತು. ಪಟ್ಟಣ ಎಲ್ಲಾ ಸಿಂಗಾರ ಮಾಡಿದರು. ರಾಣೀರು ಸಂಭ್ರಮದಿಂದ ರಾಜನ್ನ ಎದುರುಗೊಳ್ಳೋದಕ್ಕೆ ಸಿದ್ಧವಾದರು. ಮಾದೇವಿಗೆ ಎಂದೂ ನೋಡದ ತಮ್ಮ ಅಪ್ಪನ್ನ ನೋಡಬೇಕೂಂತ

ಬಹಳ ಆಸೆಯಾಯಿತು. "ಅವ್ವ ಅವ್ವ ಅಪ್ಪನಿಗೆ ಆರತಿ ಎತ್ತಿ ಎದುರುಗೊಳ್ಳಾಕೆ ಹೋಯ್ತೀರಲ್ಲ ನಾನೂ ಬರ್ತೀನಿ. ನನಗೂ ಅಪ್ಪನ ನೋಡಬೇಕೂಂತ ಬಹಳ ಆಸೆ" ಅಂದಳು. ಅದಕ್ಕೆ ಅವ್ವದೀರು "ಅವರು ಯಾವಾಗಲೂ ನಿನ್ನ ನೋಡಿಲ್ಲ. ನೀನು ಮಗಳೂ ಅಂತ ಅವರಿಗೆ ಗೊತ್ತೂ ಇಲ್ಲ. ನಿನ್ನ ನೋಡಿದ್ರೆ ಎಂಥ ಹೆಂಗಸರಿಗೂ ಮೂರ್ಛೆಹೋಗೋಹಂಗೆ ಆಯ್ತದೆ. ಆದ್ರಿಂದ ಯಾವ ಗಳಿಗೇಲಿ ಏನೋ ಎಂತೊ. ನೀನು ಈ ಗಳಿಗೇಲಿ ಇದ್ದಕ್ಕಿದ್ದಂಗೆ ಅವರಿಗೆ ಕಾಣಿಸ್ಕೊಳ್ಳೋದು ಒಳ್ಳೇದಲ್ಲ. ಈಗ ಬ್ಯಾಡ ಸುಮ್ನಿರು. ಆಮೇಲೆ ನಿಧಾನವಾಗಿ ನೋಡೀವಂತೆ" ಅಂದರು. ಮಾದೇವಿ ಒಪ್ಪಲಿಲ್ಲ. "ಏನವ್ವ ನೀವು ಹೇಳೋದು? ಮಗಳು ಅಪ್ಪನ್ನ ನೋಡಿದ್ರೆ ಏನು ತಪ್ಪು? ನೀವು ಸುಮ್‌ಸುಮ್ನೆ ಭಯ ಪಟ್ಕೊತ್ತೀರಿ. ನಾನು ಅಪ್ಪನ್ನ ನೋಡಲೇಬೇಕು" ಅಂತ ಹಠ ಹಿಡಿದಳು. ರಾಣೀರು ತಾವು ಕಲಿತ ಬುದ್ಧೀನೆಲ್ಲಾ ವೆಚ್ಚ ಮಾಡಿದರು. ಆದ್ರೂ ಅವಳು ತಾನು ಹಾಡೋ ರಾಗ ಬುಡಲೇ ಇಲ್ಲ. ಅವರಿಗೆ ಬೇರೆ ದಾರೀನೇ ಇರ್ಲಿಲ್ಲ. ಕೊನೆಗೆ "ಹೆಂಗೋ ನಿನ್ನ ಹಣೇಬರಹ ಇದ್ದಂಗಾಗಲಿ ಬಾ, ನಮಗೇನು, ನೀನು ಹೇಳಿದ ಮಾತು ಕೇಳೋ ಮಗಳಲ್ಲ ಆದ್ರೆ ಇದೊಂದ್ ಮಾತಾದ್ರೂ ಕೇಳು. ನಾವು ನಿಮ್ಮಪ್ಪನ ಎದುರುಗೊಳ್ಳಾಕೆ ಮುಂದೆ ಹೋಗ್ತೀವಿ. ನೀನು ಸಾಧಾರಣವಾದ ಬಟ್ಟೆ ಹಾಕಿಕೊಂಡು ನಮ್ಮ ಸಂದೀಲಿ ಬಾ, ಅವರ ಕಣ್ಣಿಗೆ ಮಾತ್ರ ನೀನು ಬೀಳಬಾರ್ದು – ಕಾಲ ಬರೋಗಂಟ" ಅಂತ ಹೇಳಿ ಅವಳನ್ನೂ ಕರಕೊಂಡು ಹೋದರು. ರಾಜ ಆನೇ ಮೇಲೆ ಕೂತುಗೊಂಡು ಭಾರೀ ವೈಭವದಿಂದ ಅರಮನೆ ಮುಂದಕ್ಕೆ ಬಂದ, ಇಳಿದ. ರಾಣಿಯರು ಆರತಿ ಎತ್ತಿದರು. ಮಾದೇವಿ ರಾಜನಿಗೆ ಕಾಣಿಸಿಕೊಳ್ಳದಂತೆ ಅವನ್ನ ನೋಡಿದಳು. ರಾಜ ಇನ್ನೂ ಹುಡುಗನಂತೆ ಕಾಣ್ತಿದ್ದ. ಅಪ್ಪನ್ನ ನೋಡಿ ಅವಳಿಗೆ ಬಹಳ ಆನಂದವಾಯಿತು. ರಾಣಿಯರು ಆರತಿ ಎತ್ತಿ ಹಿಂದಕ್ಕೆ ತಿರುಗಿದರು. ಮಾದೇವಿ ರಾಜ ತನ್ನ ನೋಡಿ ಬುಟ್ಟಾನೂ ಅಂತ ಸರಕ್ಕನೆ ಅವಸರದಲ್ಲಿ ಮರೆಯಾದಳು. ಆತುರದಲ್ಲಿ ಹೋಗುವಾಗ ಅವಳ ಕಾಲಿನ ಒಂದು ಪಿಲ್ಲಿ ಜಾರಿ ಬಿದ್ದುಹೋಯಿತು. ರಾಜ ಅರಮನೆ ಒಳಕ್ಕೆ ಕಾಲಿಕ್ಕುವಾಗ ಹೊಸ್ತಿಲ ಹತ್ರ ರವರವನೆ ಉರೀತಿದ್ದ ಪಿಲ್ಲಿ ನೋಡಿ ಕೈಗೆತ್ತಿಕೊಂಡು ಜೇಬಿಗೆ ಮಡಗಿಕೊಂಡ.

ಎಲ್ಲಾ ಸಂಭ್ರಮ ಮುಗಿದ ಮೇಲೆ ರಾಜ ಹಿರೀರಾಣಿ ಮನೇಗೆ ಬಂದ. ತನ್ನ ಜೇಬಿನಲ್ಲಿ ಮಡಗಿಕೊಂಡಿದ್ದ ಪಿಲ್ಲಿ ತಗದು ತಿರುಗಿಸಿ ಉರುಗಿಸಿ ನೋಡಿದ. ಅದನ್ನ ನೋಡ್ತಾ ನೋಡ್ತಾ ಅವನಿಗೆ ಬಹಳಸಂತೋಷವಾಯಿತು. 'ಈ ಕಾಲಿನ



ಪಿಲ್ಲೀನೆ ಇಷ್ಟೊಂದು ಸುಂದರವಾಗಿರಬೇಕಾದ್ರೆ, ಈ ಪಿಲ್ಲಿ ಹಾಕಿದ ಹೆಣ್ಣು ಇನ್ನೆಷ್ಟು ಸುಂದರವಾಗಿರಬೇಕು. ಅವಳು ದೇವಲೋಕದ ಅಪ್ಸರೆಯೇ ಆಗಿರಬೇಕು. ಅವಳು ಯಾರಾದ್ರೂ ಆಗ್ಲಿ. ಅವಳನ್ನ ಏನಾದ್ರೂ ಮಾಡಿ ಲಗ್ನ ಆಗಲೇ ಬೇಕು' ಅಂತ ಮನಸ್ಸಿನಲ್ಲಿ ಯೋಚನೆ ಮಾಡಿಕೊಂಡ. ರಾಣಿ ಕೇಳಿದಳು "ಏನು ಇಷ್ಟೊಂದು ಯೋಚನೆ ಮಾಡ್ತಾ ಇದ್ದೀರಿ" ಅಂತ. "ನೀನು ಏನೂ ತಿಳ್ಕೊಳ್ಳೋದಿಲ್ಲ ಅಂದರೆ ಹೇಳ್ತೀನಿ" ಅಂದ ರಾಜ. "ಪ್ರಮಾಣವಾಗೂ ಇಲ್ಲ, ಹೇಳಿ" ಅಂದಳು. ರಾಣಿ. ನೋಡು, ಈ ಪಿಲ್ಲಿ ನಮ್ಮ ಬಾಗಿಲ ಹತ್ರ ಸಿಕ್ತು. ಇದ ಹಾಕಿರೋ ಸುಂದ್ರಿ ಯಾರೂ ಅಂತ ಪತ್ತೆ ಮಾಡಿ ಅವಳ್ನ ನನಗೆ ಮದುವೆ ಮಾಡಿಕೊಡಬೇಕು" ಅಂತ ಪಿಲ್ಲಿ ತೋರಿಸಿದ. ಅದ ನೋಡಿದ ರಾಣೀಗೆ ಆಕಾಶವೇ ಕಳಚಿಕೊಂಡು ಬಿದ್ದಂಗಾಯಿತು. "ಅಯ್ಯಯ್ಯೋ ದೇವ್ರೆ, ಬುಡ್ತು ಅನ್ನಿ ಬುಡ್ತು ಅನ್ನಿ" ಅಂದಳು ಒಂದೇ ಉಸುರಿಗೆ. ರಾಜನಿಗೆ ಆಶ್ಚರ್ಯವಾಯಿತು. "ಯಾಕ್ ಹೀಗಂತಿ? ಏನ್ ಸಮಾಚಾರ? ಏನಾಯ್ತು?" ಅಂತ ಕೇಳಿದ. ಏನೂ ಇಲ್ಲ, ಈ ಪಿಲ್ಲೀ ಕಾಲಿನೋಳ ನೀವು ಮದುವೆ ಯಾಗಾಕೆ ಆಗೋದಿಲ್ಲ, ಆಗಬಾರ್ದು. ಅದು ಮಹಾಪಾಪ" ಅಂದಳು ರಾಣಿ. ರಾಜನಿಗೆ ಅವಳ ಮಾತಿನ ತಲೆಬುಡ ತಿಳೀಲಿಲ್ಲ. "ಏನ್ ನೀನು ಹೇಳ್ತಿರೋದು? ಯಾಕ್ ಮದುವೆ ಆಗೋದಿಲ್ಲ, ಯಾಕ್ ಆಗಬಾರ್ದು? ಯಾಕ್ ಪಾಪ ? ಏನೇ ಆಗಲಿ. ನಾನು ಅವಳ್ನ ಮದುವೆಯಾಗದೆ ಬಿಡೋದಿಲ್ಲ. ಅವಳು ಯಾರಾದ್ರೂ ಆಗಿರ್ಲಿ. ಅದರಿಂದ ಏನ್ ಪಾಪ ಬಂದ್ರೂ ಬರಲಿ. ಹೇಳು" ಅಂದ. ರಾಣಿಗೆ ಮೈ ಎಲ್ಲಾ ಬೆವತು ಹೋಯಿತು. ಎದೆ ಹೊಡೆದುಕೊಳ್ತು. ಅವಳಿಗೆ ಏನು ಮಾತಾಡ್ಬೇಕು ಅನ್ನೋದೇ ಹೊಳೀಲಿಲ್ಲ. ಕೊನೆಗೆ ಆದದ್ದಾಗಲಿ ಅಂತ ಮನಸು ಗಟ್ಟಿ ಮಾಡಿಕೊಂಡು ದೇವರ ಮೇಲೆ ಭಾರ ಹಾಕಿ ನಡೆದ ಸಂಗತೀನೆಲ್ಲಾ ಹೇಳಿದಳು. ರಾಜನಿಗೆ ಆಶ್ಚರ್ಯವಾಯಿತು. ಒಂದು ಸ್ವಲ್ಪ ಹೊತ್ತು ಯೋಚನೆ ಮಾಡಿ ಹೇಳಿದ: 'ಏನೇ ಆಗಲಿ, ನಾನು ಮದುವೆ ಮಾಡ್ಕೊತ್ತೀನಿ ಅಂತ ಈ ಬಾಯಲ್ಲಿ ಅಂದುಬಿಟ್ಟಿವ್ನಿ. ಅದೂ ಅಲ್ದೆ ನನ್ನ ವಂಶಕ್ಕೆ ಹುಟ್ಟಿದ ಸ್ವಂತ ಮಗಳೂ ಅಲ್ಲ. ಆದ್ರಿಂದ ನಾನು ಇವಳ್ನ ಮದುವೆಯಾಗ್ಲೇಬೇಕು. ನೀವು ಎಲ್ಲಾ ಏರ್ಪಾಡು ಮಾಡಿ." ರಾಣಿ ಕೈಮುಗಿದಳು, ಅಂಗಲಾಚಿದಳು, ಗೋಳಾಡಿದಳು. ಏನಾದ್ರೂ ರಾಜ ಹಿಡಿದ ಪಟ್ಟು ಬುಡಲಿಲ್ಲ. ಈ ಸುದ್ದಿ ಕಿರೀರಾಣಿಗೆ ಮಾದೇವಿಗೆ ಎಲ್ಲರಿಗೂ ತಿಳೀತು. ಮಾದೇವಿ ಹಾಡಿಕೊಂಡು ಗುಡಿಸಿಕೊಂಡು ಅತ್ತಳು. 'ಅಯ್ಯೋ ಶಿವನೆ, ಇದೆಂಥಾ ಕಷ್ಟ ಕೊಟ್ಟೆಪ್ಪಾ, ಎಲ್ಲಾದ್ರೂ ಲೋಕದಲ್ಲಿ ಉಂಟಾ, ತಂದೆ ಮಗಳು ಮದುವೆಯಾಗೋದು' ಅಂತ ಅನ್ನ ನೀರು ಬುಟ್ಟು ಯೋಚಿಸಿದಳು.

ರಾಜ ಯಾರ ಮಾತ್ನೂ ಕೇಳದೆ ಮದುವೆಗೆ ಏರ್ಪಾಟು ಮಾಡೇ ಬುಟ್ಟ. ನಾಳಿಕ್ಕೇ ಮದುವೆ ಆಗಬೇಕು. ಮಾದೇವಿ 'ನಾನು ಪ್ರಾಣ ಕಳ್ಕೊತ್ತೀನಿ' ಅಂದಳು. ರಾಣೀಯರೆಲ್ಲ ಕೂಡಿ ಏನುಮಾಡೋದು ಅಂತ ಆಲೋಚನೆ ಮಾಡಿದರು. ಕೊನೆಗೆ ಅವಳ ಆಯಸ್ಸು ಗಟ್ಟಿಯಾಗಿದ್ರೆ ಎಲ್ಲಾದ್ರೂ ಬದೀಕೊತ್ತಾಳೆ' ಅಂದುಕೊಂಡು ಒಂದು ಉಪಾಯ ಮಾಡಿದ್ರು. ರಾಜನಿಗೆ ಕಾಣದಂಗೆ ಒಂದು ಕಂಚಿನ ತೇರು ಮಾಡಿಸಿದರು. ಹತ್ತು ವರ್ಷಕ್ಕೆ ಆಗೋವರ್ಷ್ಟ ಸಾಮಾನು ಸರಂಜಾಮು ತುಂಬಿದರು. ಮಾದೇವೀನ ಅದರಲ್ಲಿ ಕೂರಿಸಿ "ನೀನು ಸತ್ಯವಂತೆಯಾಗಿದ್ರೆ ಏನೂ ಕಷ್ಟ ಬರದಂಗೆ ಎಲ್ಲಾರಂತೆ ಬದುಕು ಹೋಗು" ಅಂತ ಹೇಳಿ ಕಂಚಿನ ತೇರನ್ನು ಒಂದು ದಟ್ಟಡವಿಗೆ ನೂಕಿದರು.

೩

ಗುಲಗಂಜಿ ಮಾದೇವಿ ಒಬ್ಬಳೇ. ಮಾತಿಗಿಲ್ಲ ಕತೆಗಿಲ್ಲ. ಅಡಿಗೆ ಮಾಡೋದು, ಉಣ್ಣೋದು, ಹರಶಿವಾ ಅಂತ ಮಲಗೋದು. ಆ ಕಾಡಿಗೆ ಒಂದು ನರಪಿಳ್ಳೆಯೂ ಸುಳೀತಿರಲಿಲ್ಲ. ಹಿಂಗೇ ಎಷ್ಟೋ ದಿನ ಕಳೀತು. ಒಂದು ದಿನ ಮಾದೇವಿ ಊಟಾ ಮಾಡಿ ಎಲಡಕೆ ಹಾಕ್ಕೊಳ್ತಾ ಕೂತವಳೆ. ರಪ್ಪ, ರಪ್ಪ, ರಪ್ಪ, ರಪ್ಪ – ಅಂತ ಸದ್ದು ಕೇಳಿಸ್ತು. 'ಇಷ್ಟು ದಿನವಾದ್ರೂ ಒಂದು ಸಲವೂ ಇಂಥ ಸದ್ದು ಇರ್ಲಿಲ್ಲ. ಇದೇನಿರಬಹುದು' ಅಂತ ತೇರಿನಿಂದ ಕೆಳಕ್ಕೆ ಇಳಿದು ಬಂದಳು. ಅದಕ್ಕೆ ಸ್ವಲ್ಪ ದೂರದಲ್ಲಿ ಒಂದು ಹೊಳೆ ಹರೀತಾ ಇತ್ತು. ಅಲ್ಲಿ ಒಬ್ಬ ಅಗಸ ರಪ್ಪರಪ್ಪನೆ ಬಟ್ಟೆ ಒಗೀತಿದ್ದ. ಮಾದೇವಿಗೆ ನರಮನುಷ್ಯರ ದರ್ಶನ ಮಾಡಿ ಎಷ್ಟೋ ಸಂತೋಷವಾಯ್ತು. ಅವನ ಹತ್ರಕ್ಕೆ ಬಂದು ಕೇಳಿದಳು : "ಏನಯ್ಯಾ, ಇವತ್ತು ಈ ಹೊಳೆಗೆ ಬಂದು ಬಟ್ಟೆ ಒಗೀತಿದ್ದೀಯಲ್ಲ. ಇಷ್ಟು ದಿವಸ ಎಲ್ಲಿ ಒಗೀತಿದ್ದೆ?" ಅವನು "ಮಳೆ ಇಲ್ದೆ ಕೆರೆ ಕಾಲುವೆ ಎಲ್ಲಾ ಬತ್ತಿ ಹೋಗ್ಯವೆ. ಅದಕ್ಕೇ ಇವತ್ತು ಇಷ್ಟುದೂರ ಬಂದೆ ಕನ್ರಮ್ಮಣ್ಣಿ" ಅಂದ. "ನನ್ನ ಬಟ್ಟೇನೂ ಒಗೆದುಕೊಡ್ತೀಯಾ ಹಂಗಾದರೆ?" ಅಂತ ಕೇಳಿದಳು. ಹೂಂ ಅಂದ. ಸರಿ, ಅವತ್ತಿನಿಂದ ಅವಳ ಬೇಕುಬೇಕಾದಂಥ ಸೊಗಸಾದ ಬೆಲೆ ಬಾಳೋ ಬಟ್ಟೇನೆಲ್ಲಾ ಅವನೇ ಒಗೆದು ಕಣ್ಣಿಗೆ ಒತ್ತಿಕೊಳ್ಳೋಹಂಗೆ ಮಡಿ ಮಾಡಿ ಕೊಡ್ತಾ ಇದ್ದ.

೪

ಇನ್ನೊಂದೂರಲ್ಲಿ ಒಬ್ಬ ರಾಜ. ಅವನಿಗೆ ಏಳು ಜನ ಗಂಡು ಮಕ್ಕಳು. ಆರು ಮಕ್ಕಳಿಗೂ ಮದುವೆಯಾಗಿತ್ತು. ಕಿರೀಮಗ ಮಾತ್ರ ಎಂಥೆಂಥ ಹೆಣ್ಣು ತೋರಿದ್ರೂ ಒಪ್ಪದೇ ಇದ್ದ. ಅವರೂ ಹುಡುಕೀ ಹುಡುಕೀ ಸಾಕಾಗಿ ಸತ್ತುಗೆಟ್ಟು



'ನಮ್ಮಿಂದ ಇನ್ನು ಹೆಣ್ಣು ಹುಡುಗಾಕೆ ಆಗೋದಿಲ್ಲ. ನಿನಗೆ ಒಪ್ಪೋ ಅಂತ ಹೆಣ್ಣು ನೀನೇ ಹುಡೀಕೊಂಡು ಬಾ. ನಾವು ಮದುವೆ ಮಾಡ್ತೀವಿ' ಅಂದರು. ಅವನು 'ಹಂಗೇ ಆಗಲಿ' ಅಂತ ರೊಟ್ಟಿ ಬುತ್ತಿ ಕಟ್ಕೊಂಡು ಹೊಂಟ. ತಿರುಗಿದ, ತಿರುಗಿದ. ಅವನು ಎಷ್ಟು ಗರಗರನೆ ಸುತ್ತಿ ಬರಬರನೆ ಬಂದ್ರೂ ಅವನ ಕಣ್ಣಿಗ ಒಪ್ಪೋ ಅಂತ ಹೆಣ್ಣು ಸಿಗಲಿಲ್ಲ. ಹಂಗೇ ಕಾಡಿನಲ್ಲಿ ಹೋಗ್ತಾ ಇರುವಾಗ ಹೊಳೇ ಹತ್ರ ಅಗಸ ಬಟ್ಟೆ ಒಗೆದು ಸೀರೆಗಳ್ನೆಲ್ಲಾ ಬಿಸಿಲಿಗೆ ಒಣಗ್ಹಾಕಿದ್ದ, ಆ ಬಟ್ಟೆಗಳನ್ನ ನೋಡಿ ದೊರೆ ಮಗನಿಗೆ ಕಣ್ಗೆ ಮಿಂಚು ಹೊಡೆದಂಗಾಯಿತು. 'ಸೀರೆಗಳೇ ಇಷ್ಟೊಂದು ಚಂದಾಗಿರಬೇಕಾದ್ರೆ, ಇಂಥ ಸೀರೆ ಉಡೋ ಹೆಣ್ಣು ಇನ್ನೆಂಥಾ ಸುಂದರಿಯಾಗಿರಬೇಕು' ಅಂದು ಕೊಂಡು "ಅಯ್ಯಾ ಅಯ್ಯಾ ಈ ಸೀರೆ ಬಟ್ಟೆಗಳೆಲ್ಲ ಯಾರೋವು?" ಅಂತ ಕೇಳಿದ. ಅವನು ಹೇಳಿದ. "ಅಯ್ಯಾ ಅಯ್ಯಾ ನೀನು ಕೇಳಿದಷ್ಟು ದುಡ್ಡು ಕೊಡ್ತೀನಿ. ನನ್ನ ಏನಾದ್ರೂ ಮಾಡಿ ಅವಳ ಮನೆಗೆ ಕರಕೊಂಡು ಹೋಗು" ಅಂದ. "ಅಯ್ಯಯ್ಯೋ ಅದಾಗೋದಿಲ್ಲ. ನನ್ನ ಸುಮ್ನೆ ಬುಟ್ಟಾರ?" ಅಂದ ಅಗಸ. ಹೋಗಲಿ. ನಾನು ಒಂದು ಗಜನಿಂಬೆ ಹಣ್ಣಾಗ್ತೀನಿ. ಅದ ಬಟ್ಟೆವಳಗೆ ಇಟ್ಕೊಂಡು ಹೋಗಿ ಅವಳ ಮನೆಗೆ ತಲಪಿಸಿ ಬುಡು" ಅಂದ. ಅಗಸ 'ಆಗಲಿ' ಅಂತ ಒಪ್ಪಿಕೊಂಡ. ರಾಜಕುಮಾರ ಒಂದು ಸೊಗಸಾದ ಗಜನಿಂಬೆ ಹಣ್ಣಾದ. ಅಗಸ ಅದನ್ನ ಸೀರೆವಳಗೆ ಇಟ್ಟು ತಕ್ಕೊಂಡ್ಹೋಗಿ ಕೊಟ್ಟ. ಮಾದೇವಿ ಬಟ್ಟೆ ಎಲ್ಲಾನೂ ಬೀರಿನಲ್ಲಿ ಇಟ್ಟುಕೊಂಡಳು.

ಒಂದು ದಿನ ಬೀರಿನ ಬಾಗಲು ತೆಗೆದು ಸೀರೆ ಎಳೆದಳು. ನಿಂಬೆ ಹಣ್ಣು ದುಬುಕ್ ಅಂತ ಕೆಳಕ್ಕೆ ಬಿತ್ತು. ಅವಳಿಗೆ ಆಶ್ಚರ್ಯವಾಯಿತು. 'ಇದೆಲ್ಲಿಂದ ಬಂತು?' ಅಂದುಕೊಂಡಳು. 'ಎಲ್ಲೋ ನಾನೇ ಮರತು ಇಟ್ಟಿರಬೇಕು' ಅಂದು ಕೊಂಡು ಅದನ್ನ ಎಂದಿಂತೆ ಬೀರಿನಲ್ಲೇ ಇಟ್ಟಳು.

ಮಾದೇವಿ ರಾತ್ರಿ ಹೊತ್ತಿಗೆ ಅಡಿಗೆ ಮಾಡಿ ಊಟ ಮಾಡಿ ಮಿಕ್ಕಿದ್ದನ್ನು ಬುಟ್ಟು ಎಡಲಕೆ ಹಾಕ್ಕೊಂಡು ಮಲಗ್ತಿದ್ದಳು. ರಾಜಕುಮಾರ ನಿಜರೂಪ ತಾಳಿ ಕೊಂಡು ಅಡಿಗೆ ಮನಿಗೆ ಹೋಗಿ ಉಳಿದ ಬಳಿದದ್ನೆಲ್ಲಾ ಉಂಡು, ಅವಳು ಮಲಗೋ ಮನೆಗೆ ಬಂದು ಮಿಕ್ಕ ಎಲಡಕೇನೆಲ್ಲಾ ಹಾಕ್ಕೊಂಡು ಮತ್ತೆ ನಿಂಬೆಹಣ್ಣಾಗಿ ಬೀರಿಗೆಹೋಗ್ತಿದ್ದ. ಬೆಳಿಗ್ಗೆ ಎದ್ದು ಮಾದೇವಿ 'ರಾತ್ರಿ ಉಳಿದ ಅಡಿಗೆ, ಎಲಡಕೆ ಎಲ್ಲಾ ಏನಾಯ್ತು?' ಅಂತ ಆಶ್ಚರ್ಯಪಟ್ಟುಕೊಂಡಳು. ಸ್ವಲ್ಪ ದಿನ ಹಿಂಗೇ ನಡೀತು. 'ಇವತ್ತು ಇದನ್ನ ಕಂಡುಹಿಡೀಲೇಬೇಕು' ಅಂದುಕೊಂಡು ಊಟಾ ಮಾಡಿ ಮುಸುಗು ಹಾಕ್ಕೊಂಡು ನಿದ್ರೆ ಬಂದವಳಂತೆ ಮಲಗಿಕೊಂಡಳು.

ರಾಜಕುಮಾರ ಊಟಾಮಾಡಿ ಸೆಜ್ಜೆ ಮನೆಗೆ ಹೋಗಿ ಮೆತ್ತಗೆ ತಟ್ಟೇಲಿದ್ದ ಎಲೆ ಎಳಕೊಂಡ. ಮಾದೇವಿ ತಟ್ಟನೆ ಅವನ ಕೈ ಹಿಡಕೊಂಡಳು. 'ಪತಿವ್ರತೆ ಹೆಂಗಸು ಒಬ್ಬನ ಕೈ ಹಿಡಿದ್ರೆ ಮತ್ತೆ ಬುಡೋದಿಲ್ಲ' ಅಂದ ರಾಜಕುಮಾರ. ಮಾದೇವಿ ಅವನು ಯಾರು ಏನು ಎಂತು ಎಲ್ಲಾನೂ ಕೇಳಿ ಕೊಂಡಳು. ಇಬ್ಬರಿಗೂ ಹೇಳಿ ಮಾಡಿಸಿದಂಗೆ ರುಸ್ತುಂ ಜೋಡಿ ಆಯಿತು. ಗಂಡ ಹೆಂಡತೀರಾದರು.

ಮಾದೇವಿ ಗರ್ಭಿಣಿಯಾದಳು. ಒಂದು ಚಿನ್ನದಂಥ ಗಂಡು ಮಗು ಹಡೆದಳು. ರಾಜಕುಮಾರನಿಗೆ ಅಪ್ಪ ಅವ್ವನ್ನ ನೋಡಬೇಕೂ ಅಂತ ಚಿಂತೆ ಹತ್ತಿಕೊತ್ತು.

ಸಣ್ಣಗೆ ಕಡ್ಡಿಯಾಗ್ತಾ ಬಂದ. ಮಾದೇವಿ 'ಏನು ಚಿಂತೆ?' ಅಂತ ಕೇಳಿದಳು. ಅವಳಿಗೆ ಹೇಳಿಬುಟ್ಟು ಊರಿಗೆ ಹೋದ.

ಇತ್ತಕಡೆ ಮಾದೇವಿ ಒಬ್ಬಳೇ ಆದಳು. ಮಗು ನೋಡಿಕೋ ಬೇಕು, ಅಡಿಗೆ ಮಾಡಬೇಕು, ಕೆಲಸ ಮಾಡಬೇಕು. 'ಯಾರಾದ್ರೂ ಒಬ್ಬಳು ಕೆಲಸದೊಳಿದ್ರೆ ಅಂದು ಕೊಂಡಳು. ಅಷ್ಟು ಹೊತ್ತಿಗೆ ಯಾರೋ 'ಅವ್ವ ಅವ್ವ' ಅಂತ ಬಾಗಿಲು ತಟ್ಟಿದರು. ಯಾರೂ ಅಂತ ಹೋಗಿ ನೋಡ್ತಾಳೆ ! ಒಬ್ಬಳು ಹಣ್ಣು ಹಣ್ಣು ಮುದುಕಿ ! 'ನೀನು ಯಾರು?' ಅಂದಳು ಮಾದೇವಿ. 'ನಾನೊಬ್ಬಳು ಪರದೇಶಿ'. 'ಇಲ್ಲಿಗೆ ಯಾತಕ್ಕೆ ಬಂದೆ?' 'ಹೊಟ್ಟೆಗೆ ತಿನ್ನಾಕೆ ಏನೂ ಗತಿಲ್ಲ. ನಿಮ್ಮನೆ ಕೆಲಸ ಮಾಡ್ಕೊಂಡಿರ್ತೀನಿ. ಒಂದ್ ತುತ್ತು ಅನ್ನ ಹಾಕವ್ವ, ದೊಡ್ಮನಸು ಮಾಡಿ'. 'ಅದ್ಕೇನಂತೆ ಆಗಲಿ ಬಾ, ನಂಗೂ ಒಬ್ಬಳೇ ಇದ್ದೂ ಬೇಜಾರಾಗಿತ್ತು'. 'ನಂಗೊಬ್ಬಳು ಚಿಕ್ಕ ಮಗಳವಳೆಕನ್ರವ್ವ. ಅವಳ್ನೂ ಕರ್ಕೊಂಬತ್ತೀನಿ ನಿಮ್ಮ ಮೊಗ ನೋಡ್ಕೋತಾಳೆ' ಅಂದಳು. 'ಆಗಲಿ ಕರ್ಕೊಂಬಾ' ಅಂದಳು ಮಾದೇವಿ.

ಆ ಮುದುಕಿ ಒಬ್ಬಳು ರಾಕ್ಷಸಿ. ಸಮಯ ನೋಡಿ ಇವಳನ್ನ ತಿಂದು ಹಾಕಬೇಕು ಅಂತ ಅವಳು ಲೆಕ್ಕ ಹಾಕ್ಕೊಂಡಿದ್ದಳು. ತಾಯಿ ಮಕ್ಕಳಿಬ್ಬರೂ ಕೆಲವು ದಿನ ಏನೂ ಅನುಮಾನ ಬರದಂಗೆ ಕೆಲಸ ಮಾಡಿಕೊಂಡಿದ್ದರು. ಒಂದಿ ದಿನ ಮುದುಕಿ ರಾಕ್ಷಸಿ ಎಲ್ಲೋ ಹೋಗಿದ್ದಳು. ಮಾದೇವಿ ಸ್ನಾನಕ್ಕೆ ಅಂತ ಹೊಳೆಗೆ ಹೋಗಿದ್ದಳು. ಮುದುಕಿ ಮಗಳು ಮಗೂನ ತೂಗ್ತಾ ಇದ್ದಳು. ಮಾದೇವಿ ಸ್ನಾನ ಮಾಡಿಕೊಂಡು ಬಾಗಿನ ಹತ್ರ ಬಂದಳು. ಒಳಗಿನಿಂದ ಹಾಡು ಕೇಳಿಸ್ತು. ಇದೇನು ಅಂತ ಒಂದು ಗಳಿಗೆ ನಿಂತುಕೊಂಡಳು. ಹುಡುಗಿ ಹಾಡು ಹೇಳ್ತಾ ಮಗು ತೂಗ್ತಾ ಇತ್ತು:

ನೀವು ಮನುಷ ಸಂತಾನ
ನಾವು ರಾಕ್ಷಸಿ ಸಂತಾನ
ನಿನ್ನ ನಾನು ತಿನ್ನ
ನಿಮ್ಮವ್ವನ್ನ ನಮ್ಮವ್ವ ತಿನ್ನ ..... ಸುವ್ವೀ



ಈ ಹಾಡು ಕೇಳಿ ತಕ್ಷಣ ಮಾದೇವಿಗೆ ಎಲ್ಲಾ ಗೊತ್ತಾಗೋಯ್ತು. ಏನೂ ಕಾಣದೋಂಗೆ ಮೆಲ್ಲಗೆ ಒಳಕ್ಕೆ ಹೋದಳು. ಹುಡುಗಿ ಹಾಡು ನಿಲ್ಲಿಸ್ತು. ಒಂದೆರಡುದಿನ ಆದ ಮೇಲೆ ಮಾದೇವಿ ಮಹಡಿಯ ಬಾಗಿಲ ಹತ್ರ ನಿಂತುಕೊಂಡು "ಅಯ್ಯೋ ಅಯ್ಯೋ ಇದೆಂತೇದು.... ನೋಡ ಬನ್ನಿ" ಅಂತ ಕೂಗಿದಳು. ಮುದುಕಿ, ಮುದುಕಿ ಮಗಳು ಇಬ್ರೂ ದಡದಡನೆ ಓಡಿ ಬಂದ್ರು – "ಎಲ್ಲಿ ಎಲ್ಲಿ ಏನು ಏನು" ಅಂತ, 'ಅಲ್ಲಿ ಅಲ್ಲಿ' ಅಂತ ಕೈ ತೋರಿಸ್ತಾ ಒಂದೇ ಸಲಕ್ಕೆ ಅವ್ವ ಮಗಳಿಬ್ರನ್ನೂ ಕೆಳಕ್ಕೆ ಜಾಡಿಸಿ ನೂಕಿ ಬಿಟ್ಟಳು ಮಾದೇವಿ. ಅವರು ಅಯ್ಯಯ್ಯೋ ಅಂತ ಕಿರಿಚ್ತಾ ರಾಕ್ಷಸ ರೂಪ ತಾಳಿ ಕೊಂಡು ಕೆಳಕ್ಕೆ ಬಿದ್ದು ಶಿವನ ಪಾದ ಸೇರಿದರು. ಮಾದೇವಿ "ನಾನು ಸತ್ಯವಂತೆಯಾಗಿದ್ರೆ ಈ ಕಂಚಿನ ತೇರು ಈ ಕಾಡು ಬುಟ್ಟು ಇನ್ನೊಂದು ದೊಡ್ಡ ಕಾಡಿಗೆ ಹೋಗ್ಲಿ" ಅಂದಳು. ಅದು ಭರ್ರ್ ಅಂತ ಹಾರಿಹೋಗಿ ಇನ್ನೊಂದು ಅರಣ್ಯದ ಮಧ್ಯದಲ್ಲಿ ಕುಕ್ಕನೆ ಕೂತುಗೊತ್ತು.

೫

ರಾಜಕುಮಾರ ಊರಿಗೆ ಬಂದ. ತಂದೆತಾಯಿಗಳಿಗೆ ಎಲ್ಲೂ ಇಲ್ಲದಷ್ಟು ಸಂತೋಷವಾಯಿತು ಮಗನ್ನ ನೋಡಿ. ಅಣ್ಣದೀರು ಅತ್ತಿಗೇರು ಎಲ್ಲಾರೂ ತುಂಬಿಕೊಂಡು ಕೇಳಿದರು: "ಇಷ್ಟು ದಿನ ಎಲ್ಲಿಗೆ ಹೋಗಿದ್ದೆ? ಹೆಣ್ಣು ನೋಡಿಕೊಂಡು ಬಂದ್ಯಾ? ಅವಳೆಲ್ಲಿದ್ದಾಳೆ? ಹೇಗಿದ್ದಾಳೆ?" ರಾಜಕುಮಾರ ನಡೆದ ಸಂಗತೀನೆಲ್ಲ ಹೇಳಿದ. ಎಲ್ಲರಿಗೂ ದೊಡ್ಡ ಭಾರ ಇಳಿಸಿದಂಗಾಯಿತು. "ಹಾಗಾದ್ರೆ ನಡಿ ಅವಳನ್ನ ಕರ ಕೊಂಡು ಬರಾನೆ" ಅಂದರು. ಆದರೆ .... ರಾಜಕುಮಾರನಿಗೆ, ಏನು ದುರಾದೃಷ್ಟವೋ ಏನೋ, ಬಂದ ದಾರಿಯೇ ಮರತು ಹೋಯ್ತು. ಕೈಗೆ ಬಂದ ತುತ್ತು ಬಾಯಿಗಿಲ್ಲದೆ ಹೋಯಿತಲ್ಲಾ ಅಂತ ಕೊರಗ್ತಾ ಕೊರಗ್ತಾ ಹಾಸಿಗೆ ಹಿಡಿದುಬುಟ್ಟ.

೬

ಮಾದೇವಿಯ ಕಂಚಿನತೇರು ಇದ್ದ ಕಾಡಿನಲ್ಲಿ ಒಂದು ದೊಡ್ಡ ಆಲದ ಮರ ಇತ್ತು. ಅದರಲ್ಲಿ ಒಂದು ದೊಡ್ಡ ಕಪಿ ಹಿಂಡು ವಾಸಮಾಡ್ತಿತ್ತು. ಆ ಯಜಮಾನ ಕಪಿ ಬಹಳ ಶಿಸ್ತು ಅಂದರೆ ಶಿಸ್ತು. ಒಂದು ದಿನ ಆಹಾರ ಹುಡುಕ್ಕೊಂಡು ಎಲ್ಲಾ ಹೋದ್ರೊ. ಸಂಜೆಹೊತ್ತಿಗೆ ಬರಬಾರದ ಮಳೆ ಬಂದು

ಹೂದುಬುಡ್ತು. ಕಪಿಗಳೆಲ್ಲ ನೆಂದು ತೊಪ್ಪೆಯಾಗಿ ನಡಗ್ತಾ ಬಂದ್ರೊ. ಒಂದು ಕಪಿತಿಮ್ಮಣ್ಣ ಮಾತ್ರ ಬರಲಿಲ್ಲ. ಅದು ಎಲ್ಲಿ ಏನಾಯ್ತೋ ಅಂತ ಎಲ್ಲಾ ಕಪಿಗಳೂ ಕಣ್ಣು ಹೂಯದೆ ಬೆಳಗಾನ ಕಾದ್ರೊ. ಚೆನ್ನಾಗಿ ಬೆಳಗಿನ ಬಿಸಲು ಹತ್ತಿದಮೇಲೆ ಅದು ಹೆದರಿಕೊಂಡು ಹೆದರಿಕೊಂಡು ಬತ್ತು. ಯಜಮಾನ ಕಪಿ ಬಹಳ ಕೋಪಮಾಡ್ಕೊಂಡು "ನೀನು ಹಿಂಡು ಬುಟ್ಟು ಹೋದ್ದು ಬಹಳ ತಪ್ಪು. ಅದ್ರಿಂದ ನಿನ್ನ ಹಿಂಡಿಗೆ ಸೇರಿಸೋದಿಲ್ಲ. ನಿನ್ನಂಗೆ ಹಿಂಡಿನಿಂದ ಅಗಲಿರೋ ಮನುಷ್ಯರ್ನೋ ಪ್ರಾಣಿಗಳ್ನೋ ಅವರವರ ಹಿಂಡು ಸೇರಿಸಿದ ಮೇಲೆ ನೀನು ನಮ್ಮ ಹಿಂಡಿಗೆ ಬಾ" ಅಂತ ಹೇಳಿಬುಡ್ತು. ಕಪಿತಿಮ್ಮಣ್ಣ ಪೆಚ್ಚು ಮೋರೆಹಾಕ್ಕೊಂಡು ಕಾಡಿನಲ್ಲಿ ಅಲೀತಾ ಹೋಯ್ತು. ಹಿಂಗೆ ಹೋಗುವಾಗ ಕಂಚಿನ ತೇರು ಕಾಣಿಸ್ತು. ಬಂದು 'ಅಕ್ಕಾ ಅಕ್ಕಾ ಬಾಗಿಲು ತಗಿ' ಅಂತ ಕದ ತಟ್ತು. ಮಾದೇವಿ ಬಾಗಿಲು ತಗದಳು. 'ನೀನ್ಯಾರು?' ಅಂದಳು. 'ನಾನೂ ನಿನ್ನಂಗೆ ಹಿಂಡು ಬುಟ್ಟು ಬಂದಿರೊ ಅನಾಥ. ನಾನೂ ಜೊತೀಲಿ ಇರ್ತಿನಿ ಕನಕ್ಕ, ಮೊಗಾನು ಆಡಿಸ್ಕೊಂಡು' ಅಂತು. ಅವಳಿಗೂ ಒಬ್ಬಳೇ ಇದ್ದು ಬೇಜಾರಾಗಿತ್ತು 'ಆಗಲಿ' ಅಂದಳು. "ಅಕ್ಕ ಅಕ್ಕ ಭಾವ ಎಲ್ಲಿಗ್ಹೋದ್ರು?" ಅಂತ ಕೇಳ್ತು. ಅವಳು ತನ್ನ ಕತೇನೆಲ್ಲ ಸಾಂಗವಾಗಿ ಹೇಳಿದಳು. ಕಪಿತಿಮ್ಮಣ್ಣನಿಗೆ ಬಹಳ ಸಂಕಟವಾಯಿತು. "ಅಕ್ಕ ಅಕ್ಕ, ನನಗೆ ರೊಟ್ಟಿ ಬುತ್ತಿಕಟ್ಕೊಡು. ನಾನು ಅವರೆಲ್ಲಾರ್ನೂ ಹುಡುಕಿ ಕರ್ಕೊಂಬರ್ತೀನಿ" ಅಂತ ಹೇಳ್ತು. ಅವಳೂ ಆಸೆಯಿಂದ ಅದು ಹೇಳಿದಂಗೆ ಮಾಡಿಕೊಟ್ಟು. ಕೋತಿ ಮಾದೇವಿಯ ಅಪ್ಪನ ಊರಿಗೆ ಹೋಯ್ತು.

ಅಲ್ಲೊಂದು ದೊಡ್ಡಕೆರೆ, ಅದರ ದಡದಲ್ಲೊಂದು ಅತ್ತಿಮರ. ಅದರ ಮೇಲೆ ಹತ್ತಿ ಕೋತಿ ತಿಮ್ಮಣ್ಣ ಕೂತುಕೊತ್ತು. ಆವತ್ತು ಗೌರಿ ಹಬ್ಬ. ಎಲ್ಲಾ ಹೆಣ್ಮಕ್ಕಳೂ ಗೌರಿಗೆ ಬಂದು ಹೊಸಹೊಸ ಬಟ್ಟೆ ಉಟ್ಕೊಂಡು ಒಡವೆ ತೊಟ್ಕೊಂಡು ನಗುನಗ್ತಾ ನೀರಿಗೆ ಬರ್ತಾ ಇದ್ದರು. ರಾಜನ ಹೆಂಡತಿರೂ ನೀರಿಗೆ ಬಂದಿದ್ದರು. 'ಅಯ್ಯೋ ನಮ್ಮಗಳೂ ಇದ್ರೆ ಹಿಂಗೆ ಹಬ್ಬಕ್ಕೆ ಬರೋಳು, ಹಿಂಗೇ ಹೊಸಬಟ್ಟೆ ಉಟ್ಟು ನಡಿದಾಡೋಳು. ಈಗ ಆ ಕಂಚಿನ ತೇರು ಎಲ್ಲಿದ್ಯೋ. ಮಾದೇವಿ ಎಲ್ಲಿದ್ದಾಳೋ ಆ ದೇವರಿಗೇ ಗೊತ್ತು' ಅಂದುಕೊಂಡು ಕೊರಗ್ತಾ ಹೋಗ್ತಿದ್ದರು. ಈ ಮಾತ ಕಪಿ ಕೇಳಿಕೊತ್ತು. ಇವರೇ ರಾಣೀರು ಅಂದುಕೊಂಡು ಅವರ ಹಿಂದೇನೇ ಅರಮನೆಗೆ ಹೋಯ್ತು. ಹೋಗಿ "ನನಗೆ ಹೊಟ್ಟೇಹಸೀತದೆ. ಬೇಗ ಬೇಗ ಊಟಹಾಕಿ" ಅಂತು. "ಅವರು ಒಂದಿಷ್ಟು ಮುದ್ದೆ ಹಾಕಿ" ಅಂದರು. ಅದು "ನಾನು ಮುದ್ದೆ ಉಣ್ಣೋದಿಲ್ಲ–ಹಾಲೂ ಅನ್ನ ಬಡಿಸಿ" ಅಂತು, ಬಡಿಸಿದರು.



"ನಾನೂ ಎಲೇಲಿ ಊಟಾ ಮಾಡೋದಿಲ್ಲ, ರಾಜ ಉಣ್ಣೋ ತಟ್ಟೇಲೇ ಬಡಿಸಿ" ಅಂತ ಜಬರುದಸ್ತು ಮಾಡ್ತು. ರಾಜನ ತಟ್ಟೇಲೇ ಬಡಿಸಿದರು. ಉಂಡಾದ ಮೇಲೆ "ನನಗೆ ನಿದ್ದೆ ಬರ್ತದೆ" ಅಂತು. "ಒಂದು ಗೋಣಿಚೀಲ ಹಾಕ್ರೋ" ಅಂದ ರಾಜ. "ಇಲ್ಲ ಇಲ್ಲ. ನಾನು ರಾಜ ತೊಡೇಮೇಲೆ ಮಲಗಬೇಕು" ಅಂತ ಹಠ ಹಿಡೀತು. 'ಹೋಗಲಿ' ಅಂತ ರಾಜ ತೊಡೇಮೇಲೇ ಮಲಗಿಸಿಕೊಂಡ. ಸ್ವಲ್ಪ ಹೊತ್ತಾದ ಮೇಲೆ ಆತರಿಸಿದಂಗೆ ದಡಕ್ಕನೆ ಮೇಲಕ್ಕೆದ್ದು "ಅಯ್ಯಯ್ಯೋ ...... ನಾನೆಂಥಾ ಕನಸು ಕಂಡುಬುಟ್ಟೆ !" ಅಂತು. ರಾಜ 'ಎಲಾ ಕಪಿಗೂ ಕನಸಾ!' ಅಂದುಕೊಂಡು ನಗ್‌ನಗ್ತಾ "ಅದೇನು ಹೇಳು" ಅಂದ. ರಾಣೀರೂ ಅಲ್ಲಿಗೆ ಬಂದರು. ಕಪಿ "ಒಂದೂರಲ್ಲಿ ಒಬ್ಬ ರಾಜ. ಅವನಿಗೆ ಮೂರು ಜನ ಹೆಂಡತೀರು. ರಾಜ ಯುದ್ಧಕ್ಕೆ ಹೋಗಾವಾಗ ಕಿರಿಹೆಂಡತಿ ಒಂದು ಗುಲಗಂಜಿ ನುಂಗಿ ಬಸಿರಿಯಾದಳು. ಒಂದು ಹೆಣ್ಮಗು ಹೆತ್ತಳು. ರಾಜ ಹಿಂತಿರುಗಿ ಬರೋಹೊತ್ಗೆ ಅವಳು ಬೆಳೆದು ದೊಡ್ಡೋಳಾಗಿದ್ದಳು. ರಾಜ ಮಗಳ್ನೇ ಮದುವೆ ಆಗಬೇಕು ಅಂತ ಹಠ ಹಿಡಿದ....." – ಹಿಂಗೇ ಎಲ್ಲಾ ಕಥೇನೂ ಹೇಳ್ತು. ರಾಜ ರಾಣೀರಿಗೆ ಅದು ತಮ್ಮದೇ ಕಥೆ ಅಂತ ಗೊತ್ತಾಯ್ತು. ರಾಜನಿಗೂ ತನ್ನದು ತಪ್ಪು ಅಂತ ಗೊತ್ತಾಗಿ ಸಂಕಟಪಡ್ತಿದ್ದ. ಈಗ ಸ್ವಲ್ಪ ಸಮಾಧಾನ ಆಯ್ತು. "ಅವಳಿರೋ ಜಾಗಕ್ಕೆ ನಮ್ಮ ಕರ್ಕೊಂಡು ಹೋಗ್ತೀಯಾ?" ಅಂತ ಕೇಳಿದರು. "ಹೂಂ ಬರ್ತೀನಿ ತಡೀರಿ" ಅಂದುಬುಟ್ಟು ಹೊರಟುಹೋಯಿತು.

ಅಲ್ಲಿಂದ ರಾಜಕುಮಾರನ ಪಟ್ಟಣಕ್ಕೆ ಬತ್ತು. ಅಲ್ಲು ಕೆರೆ ಹತ್ರ ಒಂದು ಮರದ ಮೇಲೆ ಕೂತುಗೊತ್ತು. ರಾಜಕುಮಾರನ ಅತ್ತಿಗೇರು ನೀರಿಗೆ ಬಂದಿದ್ದರು. ಅವರು "ಅಯ್ಯೋ, ನಮ್ಮ ಮೈದರಸು ಚೆಂದುಳ್ಳ ಹೆಣ್ಣು ಮದುವೆಯಾಗ್ಯವರಂತೆ. ಅಲ್ಲಿಗೆ ಹೋಗೋ ದಾರೀನೇ ಮರೆತುಹೋಗಿ ಕೊರಗಿ ಕೊರಗಿ ಹಂಚಿಕಡ್ಡೀಹಂಗೆ ಆಗ್ಯವರೆ. ಅವಳೂ ಬಂದಿದ್ರೆ ನಾವು ಏಳು ಜನೂವೆ ಒಟ್ಟಿಗೆ ನೀರು ತರಬಹುದಾಗಿತ್ತು" ಅಂದುಕೊಂಡು ಹೋಗ್ತಾ ಇದ್ದರು. ಕೋತಿ ಅವರ ಹಿಂದೇನೆ ಅರಮನೆಗೆ ಹೋಯ್ತು. "ನನಗೆ ಹೊಟ್ಟೆ ಹಸೀತದೆ" ಅಂತು. ಹಿಂದಿನಂಗೇ "ರಾಜಕುಮಾರನ ತೊಡೆಯ ಮೇಲೆ ನಿದ್ರ ಮಾಡಬೇಕು" ಅಂತು. ರಾಜಕುಮಾರ ತೊಡೇ ಮೇಲೆ ಮಲಗಿಸಿಕೊಂಡ. ಸ್ವಲ್ಪ ಹೊತ್ತಾದ ಮೇಲೆ ದಡಕ್ಕನೇ ಎದ್ದು "ಓಹೋ ಎಂಥಾ ಕನಸು !" ಅಂತು. "ಏನು ಏನು ?" ಅಂದರು. "ಒಂದೂರಲ್ಲಿ ಒಬ್ಬರಾಜ. ಅವನಿಗೆ ಏಳು ಜನ ಗಂಡುಮಕ್ಕಳು. ಕಿರೀ ಮಗ ಎಂಥಾ ಹೆಣ್ಣು ತೋರಿದರೂ ಒಪ್ಪಲಿಲ್ಲ. ತಾನೇ ಹುಡುಕ್ತಾಹೊರಟ. ಒಬ್ಬ ಅಗಸ ಸೀರೆಗಳ

ಒಗೆದು ಒಣಗ್ಹಾಕಿದ್ದ. ಆ ಸೀರೆ ಉಡೋಳ ಮನೆಗೆ ಗಜನಿಂಬೆ ಹಣ್ಣಾಗಿ ಸೇರಿಕೊಂಡ......" ಹಿಂಗೇ ಎಲ್ಲಾ ಕತೇನೂ ಹೇಳ್ತು ಕೊನೆವರೆಗೆ. ಅದು ತನ್ನ ಕತೇನೇ ಅಂತ ರಾಜಕುಮಾರನಿಗೆ ಗೊತ್ತಾಯ್ತು. "ಅಲ್ಲಿಗೆ ಕರ್ಕೊಂಡು ಹೋಗ್ತೀಯಾ" ಅಂದ. "ಹೂಂ" ಅಂತ ಹೇಳಿ ರಾಜಕುಮಾರ, ಅವರ ಅಪ್ಪ ಅವ್ವ, ಅಣ್ಣದೀರು, ಅತ್ತಿಗೇರು ಎಲ್ಲಾರ್ನೂ ಕರಕೊಂಡು ಮಾದೇವಿಯ ಅಪ್ಪನ ಪಟ್ಟಣಕ್ಕೆ ಬಂತು. ಆ ರಾಜ ರಾಣೀರ್ನೂ ಕರಕೊತ್ತು. ಎಲ್ಲರೂ ಕಂಚಿನ ತೇರಿನ ಹತ್ರಕ್ಕೆ ಬಂದರು. ಕಪಿ ತಿಮ್ಮಣ್ಣ "ನೀವು ನಿಧಾನವಾಗಿ ಬನ್ನಿ, ನಾನು ಮುಂದೆ ಹೋಗ್ತೀನಿ" ಅಂತ ಹೇಳಿಬುಟ್ಟು ಬೇಗ ಬೇಗ ಕಂಚಿನ ತೇರಿಗೆ ಬಂದು ಮಾದೇವಿಗೆ ಎಲ್ಲಾನೂ ಹೇಳಿ ಅವಳ್ನ ಅಡಗಿಸಿ ಇಡ್ತು. ಅವಳ ಸುಂದರವಾದ ಸೀರೆ ರವಕೆ ಆಭರಣ ಎಲ್ಲಾನೂ ತಾನೇ ಹಾಕ್ಕೊಳ್ತು. ಬಂದೋರಿಗೆಲ್ಲಾ ಊಟ ಬಡಿಸ್ತು. ರಾಜ ರಾಣೀರು "ಇವಳು ನಮ್ಮಗಳಲ್ಲ" ಅಂದುಕೊಂಡರು. ರಾಜಕುಮಾರನ ಅತ್ತಿಗೇರು "ಇಂಥಾ ಚೆಲುವೆ ತರಾಕೇ ಇಲ್ಲೀವರೆಗೆಬರ್ಬೇಕಾಗಿತ್ತಾ?" ಅಂತ ಹಾಸ್ಯಮಾಡಿ ನಗಾಡಿದರು. ರಾಜಕುಮಾರ "ಇಲ್ಲ ಇಲ್ಲ, ಇವಳು ನನ್ನ ಹೆಂಡತಿಯಲ್ಲ" ಅಂದ. ಎಲ್ಲಾ ಆಗೋವರೆಗೂ ಕೋತಿ ತಿಮ್ಮಣ್ಣ ಒಳಗೊಳಗೇ ನಗ್ತಾ ಇತ್ತು. ಎಲ್ಲಾ ಆದ ಮೇಲೆ "ಎಲಡ್ಕೆ ಕೊಡಬಾರಕ್ಕಾ" ಅಂತ ಹೇಳಿ ಕೈ ಹಿಡಕೊಂಡು ಕರಕೊಂಡುಬತ್ತು. ಆಗ ಎಲ್ರಿಗೂ ಅವಳೇ ಗುಲಗಂಜಿ ಮಾದೇವಿ ಅಂತ ಗೊತ್ತಾಯ್ತು. ಬಹಳ ಆನಂದವಾಯಿತು. ಕೋತಿ ತಿಮ್ಮಣ್ಣ "ಅಕ್ಕಾ, ನಿನ್ನ ನೆಂಟರಿಷ್ಟರೆಲ್ಲಾನೂ ನಿನ್ನ ಹತ್ರಕ್ಕೆ ತಂದುಬುಟ್ಟಿವ್ನಿ. ಇನ್ನು ನೀನು ಅವರ್ನ ಸೇರಿ ಸುಖವಾಗಿ ಬದೀಕೋ. ನಾನೂ ನನ್ನ ಹಿಂಡು ಸೇರಿಕೊಳ್ತೀನಿ" ಅಂದು ಹೊರಟುಹೋಯಿತು.

ರಾಜ ಮಗಳನ್ನ ಮೊಮ್ಮಗನ್ನ ಎಲ್ಲಾರ್ನೂ ಊರಿಗೆ ಕರಕೊಂಡು ಬಂದ. ಬಹಳ ಅದ್ದೂರಿಯಾಗಿ ಮಗಳ ಮದುವೆಮಾಡಿ ದಂಡು ದಾಳಿ ಮಂದಿ ಮಾರ್ಬಲ ಸಕಲ ಸಂಪತ್ನೂ ಕೊಟ್ಟು ಅವರೂರಿಗೆ ಕಳಿಸಿಕೊಟ್ಟ. ಎಲ್ಲರೂ ಸಂತೋಷವಾಗಿ ಬದುಕಿಕೊಂಡರು.

* * * *



# ವಿನೋದ ಕಥೆಗಳು

**Blank**



# ಪೆದ್ದಪಾಪಣ್ಣ*

ಒಬ್ಬ ಗೌಡ. ಅವನಿಗೆ ಒಬ್ಬನೇ ಮಗ. ವಂಶದ ಒಂದೇ ಕುಡಿ ಅಂತ ಅವನನ್ನು ಬಹಳ ಮುದ್ದಿನಿಂದ ಅಪ್ಪ ಅವ್ವ ಅಂಗೈಮ್ಯಾಲೇ ಬೆಳೆಸಿದರು. ಹುಡುಗ ಹೊರವಾಗಿ ಉದ್ದುದ್ದವಾಗಿ ದುಂಡುದುಂಡಾಗಿ ಗಣೇಮರದಂಗೆ ಬೆಳೆದ. ಆದರೆ ವಯಸ್ಸಿಗೆ ತಕ್ಕಂತೆ ಬುದ್ಧಿ ಬೆಳೆಯಲಿಲ್ಲ. ಇದರಿಂದ ನಾಲ್ಕು ಆಡು ತೆಗೆದು 'ಇವನ್ನಾದರೂ ಮೇಸಲಿ, ಇವನು ಇನ್ಯಾತಕ್ಕೂ ಲಾಯಕಲ್ಲ' ಅಂತ ಅವನ್ನು ಮೇಸಲು ಕಾಡಿಗೆ ಕಳುಹಿಸುತ್ತಿದ್ದರು.

ಮಳೆಗಾಲ ಬಂತು. ಸೋನೆಮಳೆ ಹಿಟ್ಟು ಉದುರೋಹಂಗೆ ಉದುರುತ್ತಿತ್ತು. 'ಸಳಿ' ಹೊಟ್ಟೆಯ ಕರುಳನ್ನೆಲ್ಲಾ ಕುಣಿಸುತ್ತಿತ್ತು. ಒಂದು ದಿನ ಪಾಪಣ್ಣ ಅವ್ವನನ್ನು ಕೇಳಿದ:

"ಅವ್ವ, ಇವತ್ತು ಅಪಾರ ಸಳಿ ಆಯ್ತದೆ. ಮಳೇನೂ ಬರೋ ಹಂಗದೆ. ಒಂದು ಪಡಿ ಹುಳ್ಳೀ ಕಾಳ್ನಾರೂ ಹುರುಕೊಡು. ಬಾಯಿ ಪರಗುಟ್ಟುತದೆ. ಸಳೀಲಿ ಬೆಚ್ಚಗೆ ಮಾಡ್ಕೋತ್ತೀನಿ".

ಅವ್ವ ಒಂದು ಪಡಿ ಹುಳ್ಳೀ ಹುರಿದು ಗಂಟುಕಟ್ಟಿ ಮಗನಿಗೆ ಕೊಟ್ಟಳು. ಅದನ್ನ ಚಡ್ಡೀ ಜೋಬಿಗೆ ಹಾಕಿಕೊಂಡ. ಹಸಿಬೇ ಚೀಲದ 'ಗೊಮಟೆ' ತಲೇಮ್ಯಾಲೆ ಹಾಕಿಕೊಂಡು ಆಡು ಬಿಟ್ಟುಕೊಂಡು ಹೋದ. ತಲೆಮಾಲೋ ಹೊತ್ತಾಯಿತು. ಮಳೆ ಜೋರಾಗಿ ಹನಿಯಲು ಆರಂಭಿಸಿತು. ಆಡುಗಳನ್ನು ಹೊಡೆದುಕೊಂಡು ಒಂದು ಮರದ ಅಂಡಿಗೆ ಬಂದ. ತಾನು ಗೆಡ್ಡೆಯಾಗಿದ್ದ ಮರದ ಬೊಡ್ಡೆಯಲ್ಲಿ ಮಂಡಿ ಮೇಲೆ ಮೊಖ ಹಾಕಿಕೊಂಡು ಹುರಳಿ ಕುರುಕುತ್ತಾ ಕುಳಿತ. ಗಡಗುಟ್ಟಿಸುವ ಚಳಿಯಲ್ಲಿ ಮೈಯೆಲ್ಲಾ ಮುದುರಿಕೊಂಡ. ಜೋಬಿನಲ್ಲಿ ತುಂಡು ಬೀಡಿಯೊಂದನ್ನು ಹುಡುಕಿ ತೆಗೆದು ತುಟಿಗೆ ಸಿಕ್ಕಿಸಿಕೊಂಡ. ಚಕಮಕಿ ಹೊಡೆದು ಬೆಂಡಿಗೆ ಬೆಂಕಿ ಹತ್ತಿಸಿದ. ಅದರಿಂದ ಬೀಡಿ ಹಚ್ಚಿ ಚುರ್ ಅಂತ ಒಂದು ಗುಟುಕು ಎಳೆದು ಮೂಗಿನಲ್ಲಿ ಹೊಗೆ ಬಿಟ್ಟ. ನಾಲ್ಕೈದು ದಂ ಎಳೆಯೋ ಹೊತ್ತಿಗೆ ಬೀಡಿ ತುಟಿ

---

* ಹೇಳಿದವರು : ಹೊನ್ನನಳ್ಳಿ ದೊಡ್ಡೇಗೌಡ, ಕೃಷ್ಣರಾಜನಗರ ತಾಲ್ಲೂಕು, ಬಡಗನ ಕೊಪ್ಪಲು.

ಸೀಯಿತು. 'ಥತ್' ಅಂತ ಅದನ್ನ ಬಿಸಾಡಿ ಮತ್ತೆ ಹುರುಳಿ ಕುರುಕುತ್ತಾ ಕುಳಿತುಕೊಂಡ. ರುಚಿ ಹತ್ತಿ ಜೋರಾಗಿ ಅಗಿಯಲು ಆರಂಭಿಸಿದ. ಅಗಿಯುತ್ತಾ ಅಗಿಯುತ್ತಾ ಎಷ್ಟೋ ಹೊತ್ತಾದ ಮೇಲೆ ಆಡುಗಳ ಕಡೆ 'ಗ್ಯಾನ' ತಿರುಗಿಸಿದ. ಆಡುಗಳು 'ಸಳಿ'ಗೆ ನಡುಗುತ್ತಾ 'ಮಲುಕಾಡಿಸು'ತ್ತಿದ್ದುವು. ಹಾಗೇ ಸ್ವಲ್ಪ ಹೊತ್ತು ನೋಡಿದ. ತಾನು ಹುರುಳಿ ತಿನ್ನುವುದನ್ನು ಅವು ಅಣಕಿಸುತ್ತಾ ಇವೆಯೆಂದುಕೊಂಡ. "ಎಲಾ ಇವ! ನನ್ನನ್ನೇ ಆಡಿಕೋತೀರ? ಬ್ಯಾಡಿ ನೋಡಿ. ನಾನು ಬಲು ಕೆಟ್ಟ ಮನುಷ. ಕ್ವಾಪ ಹತ್ತಿದರೆ ನಾನು ಸುಮ್ನಿರೋದಿಲ್ಲ" ಅಂದ. ಅವುಗಳ ಪಾಡಿಗೆ ಅವು ಬಾಯಾಡಿಸುತ್ತಲೇ ಇದ್ದವು. "ಬ್ಯಾಡಿ, ಬ್ಯಾಡಿ, ಆಡ್ಕೋಬ್ಯಾಡಿ" ಅಂತ ಇನ್ನೂ ಒಂದು ಸಲ ಹೇಳಿದ. ಅವು ಕೇಳಿಸಿಕೊಳ್ಳಲಿಲ್ಲ. ಅವನಿಗೆ ಹುಚ್ಚುಗೋಪ ಬಂತು. ಎದ್ದದ್ದೇ ಕೈಲಿದ್ದ ಕಡಕತ್ತಿಯಿಂದ ನಾಲ್ಕು ಆಡುಗಳ ತಲೆಯನ್ನು ಒಂದೊಂದೇ ಏಟಿಗೆ ಕಡಿದು ಬಿಟ್ಟ. ಸಂದೆಯಾಯಿತು ಮನೆಗೆ ಬಂದ. ಅಪ್ಪ ಅವ್ವ "ಆಡೆಲ್ಲೋ" ಅಂತ ಕೇಳಿದರು.

"ಅಲ್ಲಾ ಮತ್ತೆ. ಏಟಪ್ಪಾ ಸೊಕ್ಕು ಅವಕೆ? ನಾನು ಹುಳ್ಳೀಕಾಳ ತಿಂತಾ ಇದ್ರೆ ನನ್ನ ಆಡ್ಕೋತವೆ. ನಾನೂ ಬ್ಯಾಡ ಬ್ಯಾಡ ಅಂತ ಹೇಳಿ ಸಾಕಾಯ್ತು, ಅವು ಕೇಳ್ನೇ ಇಲ್ಲ. ನಂಗೆ ಕ್ವಾಪ ಬಂದು ಬುಡ್ತು. ಮಚ್ಚಿನಲ್ಲಿ ಒಂದೊಂದೇ ಏಟಿಗೆ ಕಡದು ಬುಟ್ಟೆ, ಅಲ್ಲಿ ಬಿದ್ದವೆ. ಅಲ್ಲಾ ಮತ್ತೆ, ನನ್ನ ಆಡ್ಕೋತವೆ !" – ಅಂದ.

ಅಪ್ಪ ಅವ್ವ ತಲೆ ತಲೆ ಚಚ್ಚಿಕೊಂಡರು. ಹಣೆ ಹಣೆ ಬಡಿದುಕೊಂಡರು. ಹೋಗಿ ಸತ್ತ ಆಡುಗಳನ್ನು ತಂದರು.

೨

ಆಡು ಮೇಸಲು ಕಳಿಸಿದರೆ ಕಡಿದು ಹಾಕುತ್ತಾನೆ ಅಂದುಕೊಂಡು ಹತ್ತು ಕುರಿಗಳನ್ನು ತೆಗೆದು ಮೇಸಲು ಕಳಿಸಿದರು. ದಿನವೂ ಬೋರೆ ಮೇಲೆ ಹೋಗಿ ಅರೆಕಲ್ಲಿನ ಮೇಲೆ ಚೀಲ ಹಾಕಿ ಮನಗಿ ಬಿಡುತಿದ್ದ. ಕುರಿಗಳು ಎಲ್ಲೆಲ್ಲೋ ಮೇದು ಮನೆಗೆ ಬರುತ್ತಿದ್ದವು. ಒಂದು ದಿನ ಇವನು ಎಂದಿನಂತೆ ಅರೆಕಲ್ಲ ಮೇಲೆ ಕುಳಿತಿದ್ದ. ನಾಕು ಜನ ಕಳ್ಳರು ಮೈಗೆ ಪಟ್ಟೆ ಪಟ್ಟೆ ಬಣ್ಣ ಬಳಿದುಕೊಂಡು ತಲೆಗೆ ಹುಲಿ 'ಚಮ್ಡ'ದ, 'ತೋಪಿ' ಹಾಕಿಕೊಂಡು ಎರಡು ಕೈಗಳನ್ನೂ ನೆಲಕ್ಕೂರಿಕೊಂಡು ಹುಲಿಯಂತೆ ನಡೆಯುತ್ತಾ ಇವನ ಹತ್ತಿರ ಬಂದು ಗಟರು ಹಾಕಿದರು. 'ನಾಕು ಹುಲಿಗಳು ಒಟ್ಟಿಗೆ ಬತ್ತಾ ಅವೆ' ಅಂದುಕೊಂಡು 'ಅಯ್ಯಯ್ಯಪ್ಪೋ' ಅಂತ ಕಿರುಚಿ 'ಬಿದ್ದಂಬೀಳ ಪಂಚಂಪಾಡಾಗಿ' ಮನೆಗೆ ಓಟಕಿತ್ತ. ಕಳ್ಳರು ಕುರಿಗಳನ್ನು ಹೊಡಕೊಂಡು ಹೋದರು. ಒಂದೇ ಹಾರತಕ್ಕೆ ಏಳೋದು



ಬೀಳೋದು ಒಂದೂ ಕಾಣದೆ ಓಡಿಬಂದ ಮಗನನ್ನು ಅವ್ವ ಕೇಳಿದಳು:

"ಯಾಕೋ ಪಾಪಣ್ಣ ಹಿಂಗೆ ಓಡಿಬತ್ತಾ ಇದ್ದೀ. ಕುರಿ ಏನಾದವೋ?"

"ಅಯ್ಯೋ, ನಿನ್ನ ಕುರಿ ಕಿರುಬ ಹಿಡಿಯಾ ತಡಿ. ನನ್ನ ಪರಾಣ ಉಳಿದದ್ದೇ ಹೆಚ್ಚು"– ಮೇಲುಸಿರು ಬಿಡುತ್ತಾ ಹೇಳಿದ ಪಾಪಣ್ಣ.

"ಏನಾಯ್ತೋ?"

"ಅವ್ವಾ, ಏನ್ ಹೇಳ್ಳಿ...... ನಾಕು ಹಗ್ಗ ಬರೆ ಹುಲಿ ನಾಕು ಕಡಿಂದ಼್ೂ ಬಂದು ಗಟರು ಹಾಕ್‌ಬುಟ್ಟೋ. ಅವು ಬಂದಿದ್ದೇ ಗೊತ್ತಾಗ್ನಿಲ್ಲ ಬಡ್ಡೀವು. ಒಂದು ಗಳಿಗೆ ಹಿಂಚು ಮುಂಚಾಗಿದ್ರೆ ನನ್ನ ಮೆಟ್ರೆ ಹಿಡಿದು ರಕ್ತ ಹೀರಿಬುಡೋವು. ಆ ಕುರಿ ಹೋದರೆ ಹೋಗಲಿ. ಕಾಯೋ ಕಷ್ಟವೇ ತಪ್ತು" ಅಂದ.

ಅವ್ವ ಹಣೆ ಹಣೆ ಚಚ್ಚಿಕೊಂಡು ಬೋದು ಸುಮ್ಮನಾದಳು. ಅಪ್ಪ ಬೋರೆಗೆ ಹೋಗಿ ನೋಡಿದ. ಹುಲಿ ಹೆಜ್ಜೆಯೂ ಇರಲಿಲ್ಲ. ಕುರಿಯೂ ಇರಲಿಲ್ಲ. ಮನೆಗೆ ಬಂದು ನಾಲ್ಕು ಗುದ್ದು ಹೇರಿದ. ಅಲ್ಲಿಗೆ ಇವನನ್ನ ಹೊರಗಡೆ ಏನಾದರೂ ಕಳಿಸುವುದನ್ನು ಬಿಟ್ಟರು.

೩

ಪಾಪಣ್ಣನ ಅವ್ವನಿಗೆ ಮತ್ತೊಂದು ಮಗು ಆಯಿತು. ಒಂದು ದಿನ ಅವ್ವ ಮಗನಿಗೆ ಹೇಳಿದಳು: "ನೋಡೋ ಪಾಪಣ್ಣ, ನಾನು ಕಾವಲೆಗೆ ಹೋಗಿ ಬಟ್ಟೆ ಒಕ್ಕೊಂಡು ಬತ್ತೀನಿ. ನೀನು ಮಗೀನ ಕಡೆ ಜೋಪಾನವಾಗಿ ನೋಡ್ಕೊ. ಅಳಿಸ್ಬ್ಯಾಡ"

"ಆಗಲಿ ಹೋಗವ್ವ ನಾನು ಪಾಪ ಅಳದಂಗೆ ನೋಡ್ಕೋತ್ತೀನಿ" – ಅಂದ ಪಾಪಣ್ಣ.

ಅವ್ವ ಬಟ್ಟೆ ಕುಕ್ಕೆ ಹೊತ್ತು ಕಾಲುವೆಗೆ ಹೋದಳು

ಮಗು ಅಳಲು ಶುರು ಮಾಡಿತು. ಪಾಪಣ್ಣ 'ನ್ಯಾಕೆ' ಹಿಡಿದು ಜಡಿದು ತೂಗಿದ. ಮಗು ಅಳು ನಿಲ್ಲಿಸಲಿಲ್ಲ. 'ಹೊಟ್ಟೆ ಹಸೀತದೇನೋ' ಅಂತ ಒಂದು ಚೆಂಡಿನ ಗಾತ್ರ ಅನ್ನ ತಂದು ದಪ್ಪ 'ಗುಕ್ಕು' ಮಾಡಿ ಬಾಯಿಗೆ ಗಿಡಿದ. ಉಗಿದು ಬಿಟ್ಟಿತು. ಇನ್ನೂ ಜೋರಾಗಿ ಅಳಲು ಶುರುಮಾಡಿತು. ಪಾಪಣ್ಣನಿಗೆ ಏನು ಮಾಡಲೂ ತೋರಲಿಲ್ಲ. ತಾನು ಅಳುತಿದ್ದಾಗ ಅಪ್ಪ ಏಟು ಕೊಟ್ಟು ಸುಮ್ಮನಾಗಿಸುತಿದ್ದುದನ್ನು ನೆನೆದುಕೊಂಡ. ಫಟೀರನೆ ಒಂದೇಟು ಕೊಟ್ಟ. ಮಗುವಿನ ತೊಡೆ ಮೇಲೆ ಕೆಂಪಗೆ ಬಾಸುಂಡೆ ಮೂಡಿತು. ಅದು ಇನ್ನೂ ಉಸಿರುಹಿಡಿದು ಅಳತೊಡಗಿತು. ಪಾಪಣ್ಣ ತಲೆ ಕೆರೆದುಕೊಂಡ. ಒಂದು ಉಪಾಯ ಹೊಳೆಯಿತು.

'ಮಗುವಿಗೆ ಎಲ್ಲಾದರೂ ಗಾಯವಾಗಿದೆಯೇ?' ಅಂತ ಅದನ್ನು ತಿರುತಿರುಗಿಸಿ ನೋಡಿದ. ಆ ಚಿಕ್ಕ ಕಿಸಲೆಯ 'ನೆತ್ತಿಬಾಯಿ' ಮಾತ್ರ ಪಟಪಟನೆ ಎಕ್ಕುತ್ತಿತ್ತು. 'ಓಹೋ ಇಲ್ಲೇ ನೋವಿರಬೇಕು' ಅಂತ ಅದನ್ನು ಬೆರಳಿನಿಂದ ಬಲವಾಗಿ ಅದುಮಿದ. ಮಗು ಕಿಟಾರನೆ ಕಿರಿಚಿಕೊಂಡು ಕೈಕಾಲು ಜಾಡಿಸುತ್ತಾ ಅಳತೊಡಗಿತು. ಆಗ ಅದೇ ಗಾಯವೆಂದು ಪಾಪಣ್ಣನಿಗೆ ಖಾತ್ರಿ ಆಯಿತು. ಅಲ್ಲೇನೋ ಮುಳ್ಳು ಹೊಕ್ಕಿರಬಹುದೆಂದು ತಿಳಿದು ಒಂದು ದೊಡ್ಡ ದಬ್ಬಳವನ್ನು ತಂದು ಮುಳ್ಳು ಬಗಿಯುವ ಹಾಗೆ ನೆತ್ತಿಬಾಯನ್ನು ಬಗೆದ. ಮಗು ಒಂದು ಸಲ ಜೋರಾಗಿ ಕಿರುಚಿ ಸುಮ್ಮನಾಯಿತು. ಪಾಪಣ್ಣನಿಗೆ ಪರಮಾನಂದವಾಯಿತು. ತಾನು ಮಾಡಿದ ಬುದ್ಧಿವಂತ ಕೆಲಸವನ್ನು ಅವ್ವನಿಗೆ ಹೇಳಿ ಬೆಲ್ಲ ಗಿಟ್ಟಿಸಬೇಕು ಅಂದುಕೊಂಡ.

ಅವ್ವ ಬಟ್ಟೆ ಒಗೆದುಕೊಂಡು ಬಂದಳು. ಬಂದ ತಕ್ಷಣವೇ,

"ಮೊಗ ಅಳ್ತೇನೋ ಪಾಪಣ್ಣ?" – ಅಂತ ಕೇಳಿದಳು

ಪಾಪಣ್ಣ ತುಂಬ ಖುಷಿಯಿಂದ ಹೇಳಿದ:

"ಅಯ್ಯೋ ಬೇಕಾದಷ್ಟು ಅತ್ತು ರಚ್ಚೆಹಿಡಿದ್ ಬುಟ್ಟಿತ್ತು ಕನವ್ವ. ನಂಗೂ ಸಾಕಾಗ್ ಹೋಯ್ತು."

ಆಮ್ಯಾಲೆ ಏನು ಮಾಡಿದೋ?"

"ಒಂದು ಗಾಯಾಗಿತ್ತ, ಅದರ ನೋವ್ಗೇ ಅದು ಹಂಗೆ ರಗಳೆ ಮಾಡ್ತಿತ್ತು. ನಿಂಗೆ ಗೊತ್ತಾಗ್ನೇ ಇಲ್ವವ್ವ ಅದು? ಆ ಗಾಯ ಪತ್ತೆ ಮಾಡಿ ಮಾಡಿ ನಾನು ಬಗೆದೆ. ಈಗ ಸುಖವಾಗಿ ನಿದ್ದೆ ಮಾಡ್ತಾ ಅದೆ !" ಅವ್ವ ಗಾಬರಿಯಿಂದ ಹೌಹಾರಿ "ಅಯ್ಯೋ ಏನ್ ಮಾಡ್‌ಬುಟ್ಟೋ ನನ್ನ ಮಗೀಗೇ" ಅಂತ ತೊಟ್ಟಿಲಿನಿಂದ ಮಗು ಎತ್ತಿ ನೋಡಿದಳು, ಅಳಲಿಲ್ಲ. ಅದು ಸತ್ತು ಹೋಗಿತ್ತು. ಎದೆಎದೆ ಬಡಿದುಕೊಂಡು ಅತ್ತಳು. ಅಕ್ಕಪಕ್ಕದ ಮನೆಯವರೆಲ್ಲಾ ಬಂದು ನೋಡಿದರು. ಮಗುವಿನ ನೆತ್ತಿ ಮೇಲೆ ಅವರೆಬೇಳೆ ಅಗಲಕ್ಕಿಂತ ಹೆಚ್ಚಾಗಿ ಕಿತ್ತುಹೋಗಿ ಗುಂಡಿಯಾಗಿತ್ತು. ಅಪ್ಪ ಬಂದು ಮೈ ಊದೋವರೆಗೆ ಹೊಡೆದ. ತಮ್ಮ ಕರ್ಮವನ್ನು ಬೈದುಕೊಂಡು ಸುಮ್ಮನಾದ.

ೞ

ಕೆಲವು ತಿಂಗಳು ಕಳೆದವು. ಗದ್ದೆಯ ನಾಟಿಯ ಕಾಲ. ಗಂಡಸರು ಹೆಂಗಸರೆಲ್ಲಾ ಗದ್ದೆಯಲ್ಲಿ ಹಾಡಿಕೊಂಡು ನಾಟಿ ಹಾಕುತ್ತಿದ್ದರು. ಪಾಪಣ್ಣನ ಅವ್ವನಿಗೆ ಮನಸ್ಸು ತಡೆಯಲಿಲ್ಲ. ಆರಂಬಗಾರನ ಹೊಟ್ಟೇಲಿ ಹುಟ್ಟಿ ಆರಂಬಗಾರನ ಮನೆ ಸೇರಿ ಅರಸಗಿತ್ತಿ ಹಂಗೆ ಮನೇಲಿ ಕೂತಿರಲು ಅವಳಿಗೆ ಬೇಜಾರಾಯಿತು.



"ಪಾಪಣ್ಣ, ಮನೆ ಕಡೆ ನೋಡ್ಕೊತ್ತಾ ಇರು. ಇವತ್ತು ನಮ್ಮ ಗದ್ದೆ ನಾಟೀ ಹಾಕ್ತಾ ಅವರೆ. ನಾನು ಹೋಗಿ ನೋಡ್ಕೊಂಡು ಬತ್ತೀನಿ, ಒಂದಡಕೆ ಕಡಿಯೋ ಹೊತ್ನಲ್ಲಿ. ಜೋಕೆ ಹುಸಾರಾಗಿ ನೋಡ್ಕೋ" – ಅಂತ ಮಗನಿಗೆ ಹೇಳಿ ಗದ್ದೆ ಕಡೆಗೆ ಹೋದಳು.

ಪಾಪಣ್ಣನಿಗೆ ಕೂತು ಕೂತು ಬೇಜಾರಾಯಿತು. 'ಈ ಹಾಳು ಅವ್ವ ಏಟ್ ಹೊತ್ತಾದ್ರೂ ಬರ್ನೇ ಇಲ್ಲ. ಇದ್ಕೇ ಅಲ್ವಾ ನಂಗೆ ಕ್ವಾಪ ಹತ್ತೋದು' ಅಂದುಕೊಂಡ. ಬಾಯಿ ಪರಗುಟ್ಟಿತು. ಅಡಿಗೆ ಕೋಣೆಗೆ ಹೋದ ಅನ್ನದ ಮಡಕೆ ಹತ್ತಿರ ಒಂದು ಸುಂಡ ನೆಗೆದು ಓಡಿತು. 'ಎಲಾ ಇದರ !' ಅಂದುಕೊಂಡು ಅದನ್ನ ಅಟ್ಟಿಸಿಕೊಂಡು ಹೋದ. ಅದು ಹಟ್ಟಿಯ ಅಟ್ಟದ ಮೇಲಿದ್ದ ಹುಲ್ಲಿನೊಳಕ್ಕೆ ಹೊಕ್ಕಿತು. "ನನ್ನ ಕೈಯಿಂದ ತಪ್ಪಸ್ಕೋಬೇಕು ಅಂತ ಮಾಡ್ತೀಯಾ? ನೀನೇ ಈಟು ಬುದ್ಧಿ ಕಂಡಿದ್ರೆ ನಾನೇಟು ಕಂಡಿವ್ನಿ ಗೊತ್ತಾ?" – ಅಂತ ಬೆಂಕಿ ತಂದು ಹುಲ್ಲಿಗೆ ಹಿಡಿದ. ಹುಲ್ಲು ಭುಗ ಭುಗನೆ ಹತ್ತಿಕೊಂಡಿತು. ಭಾವಣಿ ಕತ್ತಿಕೊಂಡು ಗಳ ಛಟಛಟನೆ ಸಿಡಿದವು. ಪಾಪಣ್ಣ ಕೈತಟ್ಟಿ ಕುಣಿಯುತ್ತಾ.

"ಸುಂಡಣ್ಣ, ನನ್ನ ಕೈಯಿಂದ ತಪ್ಪಿಸ್ಕೊಂಡು ಹುಲ್ಲಿನೊಳಕ್ಕೆ ಹೋದ್ಯಲ್ಲಾ? ಈಗ ಸಾಯಿ ಸಾಯಿ" ಅಂದ.

ಬೆಂಕಿಯ ಶಾಖ ಜೋರಾಗಲು ಈಚೆಗೆ ಬಂದ. ಊರಿನಲ್ಲಿದ್ದವರೆಲ್ಲ ಮಕ್ಕಳು ಮುದುಕರು ಮೋಟರು, ಬೆಂಕಿ ಕಂಡು ಕೂಗಾಡಿದರು. ಹತ್ತಿರ ಹೋಗಲು ಎಲ್ಲರಿಗೂ ಹೆದರಿಕೆ. ಗದ್ದೆಗೆ ಸುದ್ದಿ ಹೋಯಿತು. ಅವರು ಬರುವ ಹೊತ್ತಿಗೆ ಮನೆ ಪೂರ್ತಿ ಬೆಂದುಹೋಗಿತ್ತು. ಅಪ್ಪ ಅವ್ವ ಬಾಯಿ ಬಾಯಿ ಬಡಿದುಕೊಂಡರು. 'ಏನಾಯ್ತು?' ಅಂತ ಮಗನ್ನ ಕೇಳಿದರು.

"ಬಡ್ಡೀ ಸುಂಡಿನಿಗೆ ಏಟು ಸೊಕ್ಕಪ್ಪಾ? ನನ್ನ ಕೈಯಿಂದ ತಪ್ಪಿಸ್ಕೊಂಡು ಓಡಾನೆ ಅಂತ ಹುಲ್ಲಿನೊಳಕ್ಕೆ ಹೋಯ್ತು. ನಾನು ಬುಟ್ಟೇನಾ ಅದ, ಹುಲ್ಲಿಗೇ ಬೆಂಕಿ ಹಾಕ್ದೆ. ಇಲಿ ಸುಟ್ಟು ಬೂದಿಯಾಗ್ಹೋಯ್ತು ನೋಡು" ಅಂದ. ಇಂಥ ಮಗನಿಗೆ ಏನು ಮಾಡಬೇಕು ಅನ್ನೋದೇ ಅವರಿಗೆ ಗೊತ್ತಾಗಲಿಲ್ಲ.

* * * * *

ಯಾರ ಜಗಲಿ ಮೇಲೋ 'ನೆರಿಕೆ' ಕಟ್ಟಿಕೊಂಡರು. ಯಾರ್‍ಯಾರೋ ಪುಣ್ಯಾತ್ಮರು ಒಂದೊಂದಿಷ್ಟು ಹುಳ್ಳಿ, ರಾಗಿ, ಬತ್ತ ಕೊಟ್ಟರು. ಅಪ್ಪ ಮನೆ ಕಟ್ಟುವ ಸಲುವಾಗಿ ಹೊಳೆಯಿಂದ ಆಚೆಗಿರುವ ಬಿದಿರಹಿಂಡಲಿನ ಕಾಡಿಗೆ ಬಿದಿರು ಕಡಿಯಲು ಹೋಗುತ್ತಿದ್ದ. ಅವ್ವ ಮಗನ ಕೈಯ್ಯಲ್ಲಿ ಅವನಿಗೆ ಹೊಟ್ಟೆಗೆ ಏನಾದರೂ

‘ಅವಾರ’ ಕೊಟ್ಟು ಕಳಿಸುತ್ತಿದ್ದಳು. ಒಂದು ದಿನ ಒಂದು ಕುಡಿಕೆಗೆ ಬೇಯಿಸಿದ ಹುಳ್ಳಿಕಾಳನ್ನೂ, ಇನ್ನೊಂದು ಕುಡಿಕೆಗೆ ಅಂಬಲಿಯನ್ನೂ ಬಿಟ್ಟು ಅವುಗಳ ಕುತ್ತಿಗೆಗೆ ‘ಉಗ್ಗ’ ಹಾಕಿ ಮಗನ ಕೈಯಲ್ಲಿ ಕೊಟ್ಟಳು ಅವ್ವ. ಅದನ್ನು ಹಿಡಕೊಂಡು ಬರುವಾಗ ಅವನಿಗೆ ‘ಬೈಲುಕಡೆ’ ಹೋಗುವ ಹಾಗಾಯಿತು. ಸ್ವಲ್ಪ ದೂರ ಹೋಗಿ ಒಂದು ಬಿದಿರು ಮೆಳೆಯ ಮರೆಯಲ್ಲಿ ಕೂತುಕೊಂಡ. ಒಂದು ಬಿದಿರ ಹಿಣಿಲುಗಾಳಿಗೆ ಬಾಗಿತು. ಅದಕ್ಕೆ ಕುಡಿಕೆಗಳನ್ನು ಸಿಕ್ಕಿಸಿದ. ಗಾಳಿ ಕಡಿಮೆಯಾದ ತಕ್ಷಣ ಕುಡಿಕೆ ಸಮೇತ ಮೇಲಕ್ಕೆ ಹೋಯಿತು. ಪಾಪಣ್ಣನಿಗೆ ತುಂಬಾ ಕೋಪ ಬಂತು. “ಎಲಾ ಇದ ! ನೋಡಿದಾ ಮತ್ತೆ ಇದಕ್ಕೆ ಏಟ್‌ಸೊಕ್ಕು !” ಅಂತಾ ಒಂದುಕಲ್ಲು ತೆಗೆದು ಕುಡಿಕೆಗೆ ಬೀರಿದ. ಅದು ಅಂಬಲಿ ಕುಡಿಕೆಗೆ ತಗಲಿ ತೂತಾಯಿತು. ಅಂಬಲಿ ‘ಚೊಳ್’ ಅಂತ ಸುರಿಯಿತು. ಕೆಳಗಡೆ ನಿಂತಿದ್ದ ಪಾಪಣ್ಣ ಅದಕ್ಕೆ ಬಾಯೊಡ್ಡಿದ. ಅಷ್ಟು ಹೊತ್ತಿಗೆ ಮತ್ತೆ ಗಾಳಿ ಬೀಸಿ ಬಿದಿರು ಜಲ್ಲೆ ಕೆಳಕ್ಕೆ ಬಾಗಿತು. ಆಗ ಹುಳ್ಳಿಕಾಳಿನ ಕುಡಿಕೆಯನ್ನು ತೆಗೆದುಕೊಂಡ. ಅಪ್ಪನಿಗೆ ಅದನ್ನು ತೆಗೆದುಕೊಂಡು ಹೋಗಿ ಕೊಟ್ಟ.

ಅಪ್ಪ ಬಿದಿರುಗಳನ್ನು ಸವರಿ ಸವರಿ ಒಂದು ಕಡೆ ಹಾಕಿದ. “ಪಾಪಣ್ಣ, ಈ ಗಳಾನೆಲ್ಲ ಒಂದೊಂದಾಗಿ ಹೊತ್ಕೊಂಡು ಹೋಗಿ ಹೊಳೆ ಆಚೆಗೆ ಹಾಕು” ಅಂದ. ಹೊಳೆಯಲ್ಲಿ ಮಂಡಿ ಉದ್ದದ ನೀರು ಹರೀತಾ ಇತ್ತು. ಒಂದು ಗಳಾ ಹೊತ್ತು ಕೊಂಡು ಬರುವಾಗ ಅಲ್ಲಿ ಯಾರೋ ದನ ಕಾಯುವವರು ನಿಂತಿದ್ದರು. ಪಾಪಣ್ಣ ಅವರನ್ನು ಕೇಳಿದ:

“ಗಳಾವ ಈ ನೀರಿಗೆ ಹಾಕಿದರೆ ಎಲ್ಲಿಗೆ ಹೋಯ್ತದೆ?”

ಅವರು ತಮಾಷೆಯಾಗಿ ಹೇಳಿದರು:

“ನಿಮ್ಮವ್ವನ ಕೋಣೆಗೆ ಹೋಯ್ತದೆ!”

ಪಾಪಣ್ಣ ಆ ಮಾತನ್ನು ನಿಜವೆಂದು ನಂಬಿಯೇ ಬಿಟ್ಟ. ‘ಗಳಾನೆಲ್ಲ ಸುಮ್ಮನೆ ಕಷ್ಟಪಟ್ಟು ಮನೆಗಂಟಾ ಹೊತ್ಕೊಂಡ್ ಹೋಗೋ ಬದ್ಲು ಇಲ್ಲೇ ನೀರಿಗೆ ಬುಟ್‌ಬುಟ್ರೆ ಅವೇ ಹೋಯ್ತಾವಲ್ಲ, ಎಷ್ಟು ಸಲೀಸು ! ನಮ್ಮಪ್ಪನಿಗೆ ಇಷ್ಟು ಬುದ್ಧಿ ತಿಳಿಯೋದಿಲ್ವಲ್ಲಾ !’ ಅಂದುಕೊಂಡ. ಗಳುಗಳನ್ನೆಲ್ಲಾ ತಂದು ತಂದು ನೀರಿಗೆ ತೇಲಿಬಿಟ್ಟ. ಅವು ಕೊಚ್ಚಿಕೊಂಡು ಹೊರಟುಹೋದವು. ಸಂಜೆಯಾಗುತ್ತಾ ಬಂತು. ಗಳ ಕಡಿಯತ್ತಿದ್ದ ಅಪ್ಪ ಮಗನ ಹತ್ತಿರ ಬಂದು ಕೇಳಿದ‘

“ಗಳಾನೆಲ್ಲ ಆಚೆಗೆ ಸಾಗಿಸ್ದೇನೋ ಪಾಪಣ್ಣ?”

“ಹೂಕನಪ್ಪಾ.......”



“ಎಲ್ಲಿ ಲಾಟ್ಹಾಕಿದ್ದಿ?”

“ಲಾಟ್ ಯಾಕ್ ಹಾಕ್ಬೇಕಪ್ಪ ? ಮನೇಗಂಟ ಹೊರೋ ತಾಪತ್ರೆ ಯಾಕೆ? ಹೊಳೆ ನೀರಿಗೆ ಹಾಕ್ ಬುಟ್ರೆ ಅವು ನಮ್ಮನೇ ತಾವ್ಕೆ ಹೋಗಾಕಿಲ್ವ?”

“ಅಯ್ಯೋ ನಿನ್ನ ನೆಗದು ಬೀಳ ! ಯಾರೋ ಹಂಗಂದೋರು?”

“ಅದ್ಯಾರೋ ದನಾ ಕಾಯೋರು ಹಂಗಂದ್ರು, ನಾನು ಗಳಾನೆಲ್ಲ ನೀರಿಗೆ ಹಾಕ್ಬುಟ್ಟೆ. ಮನೇ ತಾವು ಹೋಗಿ ಹಿಡ್ಕೊಳ್ಳಾನೆ ಬಾರಪ್ಪ !” – ಅಂದ ಪಾಪಣ್ಣ.

ಅಪ್ಪನಿಗೆ ಬರಬಾರದ ಸಿಟ್ಟು ಬಂತು.

“ಉದ್ಕೂ ಕಾಲ್ಕೂ ಹಿಂಗೇ ಮಾಡಿ ಮಾಡಿ ನನ್ನ ಮನೇನೇ ಹಾಳ್ಮಾಡಿ ಬುಟ್ಟೈಲ್ಲೋ ಮನೆಹಾಳ. ನೀನು ನೆಗದು ಬಿದ್ದು ನೆಲಕಚ್ಚ, ಬರಬಾರದ ರೋಗ ಬಂದು ನಿನ್ನ ಬಡಕೊಂಡು ಹೋಗ. ನೀನು ಇನ್ನು ನನಗೆ ಮೊಖ ತೋರ್ಬ್ಯಾಡ, ನನ್ನ ಮನಿಗೆ ಬರಬ್ಯಾಡ. ಎಲ್ಯಾರೂ ದಾರಿ ಬಡಕೊಂಡು ತಿನ್ಕೊಂಗು” ಅಂತ ಹೇಳಿ ಒಂದು ಏಟ್ ಬುಟ್ಟ ಬಿದಿರು ಬಡಿಗೇಲಿ. ಅವನು ‘ಅಯ್ಯಯ್ಯಪ್ಪಾ’ ಅಂತ ಗೋಳಾಡ್ತಾ ಓಡಿಬಿಟ್ಟ.

೫

ಪಾಪಣ್ಣ ಆ ರಾತ್ರೆ ಯಾವುದೋ ಮರದಡಿ ಮಲಗಿ ಕಾಲಕಳೆದ. ಹೊತ್ತಾರೆ ಎದ್ದು ಒಂದು ಬೋರೆ ಮೇಲಕ್ಕೆ ಹೋದ. ಒಂದು ಬಲವಾದ ದೊಣ್ಣೆ ತೆಗೆದುಕೊಂಡು ಅಪ್ಪ ಹೇಳಿದಂತೆ ದಾರಿ ಬಡಿಯುತ್ತಾ ಕೂತುಕೊಂಡ. ಅವನ ಬಡಿತದಿಂದ ಕೆಂದೂಳು ಕೆಮ್ಮುಲಾಗಿ ಎದ್ದಿತು. ಅದೇ ದಾರಿಯಲ್ಲಿ ಒಬ್ಬಳು ಮುದುಕಿ ಬರುತ್ತಿದ್ದಳು. ಅವಳು ಒಂದು ಹರಬಿ ತುಂಬಾ ಹಣ ತುಂಬಿಕೊಂಡು ಮಗಳ ಮನೆಗೆ ತೆಗೆದುಕೊಂಡು ಹೋಗುತ್ತಿದ್ದಳು. ಬಡಿಗೆಯಲ್ಲಿ ದಾರಿ ಬಡಿಯುತ್ತಿದ್ದ ಪಾಪಣ್ಣ ಆ ಹಾದಿಗುಂಟ ಬಂದ. ಆ ಮುದುಕಿಯ ಸೊಂಟಕ್ಕೆ ಎತ್ತಿ ಒಂದು ಏಟು ಕೊಟ್ಟ. ಅವಳ ಸೊಂಟ ಮುರಿಯಿತು. ಅವಳು ‘ಅಯ್ಯಯ್ಯೋ ದಮ್ಮಯ್ಯ ಕನಪ್ಪಾ’ ಅನ್ನುತ್ತಾ ಹಣದ ಹರಬಿಯನ್ನು ಅಲ್ಲಿಯೇ ಬಿಟ್ಟು ಮೆಳೆಯ ಮರೆಯಲ್ಲಿ ತೆವಳಿಕೊಂಡು ಹೋದಳು. ಪಾಪಣ್ಣ ಆ ಹಣವನ್ನು ತೆಗೆದುಕೊಂಡು ಒಂದು ಅರೆ ಕಲ್ಲಿನ ಮೇಲಕ್ಕೆ ಹೋದ. ಅದರ ಮೇಲೆ ನಿಂತು,

“ಗಟ್ಟಿಯಾದ ಹಣ ಉಳ್ಕೊಳ್ಳಲಿ, ಜಳ್ಳಾದದ್ದು ಹೋಗಲಿ” – ಅಂತ ಹಣವನ್ನು ತೂರಿದ. ಹಣವೆಲ್ಲಾ ಕಲ್ಲಿನಿಂದ ಜಾರಿ ಕೆಳಕ್ಕೆ ಬಿದ್ದಿತು. ಒಂದು ರೂಪಾಯಿ ಮಾತ್ರ ಕಲ್ಲಮೇಲೆ ಉಳಿಯಿತು. “ಓಹೋ ಇದೊಂದೇ ಗಟ್ಟಿದುಡ್ಡು” – ಅಂತ ಅದನ್ನು ಜೇಬಿಗಿಟ್ಟುಕೊಂಡ. ಮತ್ತೆ ಹಿಂದಿರುಗಿ ಬಂದು ದಾರಿ

ಬಡಿಯುತ್ತಾ ಕುಳಿತ. ದೂಳು ಮುಗಿಲಾಗಿ ಮೇಲೆದ್ದಿತು. ಆ ಮಾರ್ಗದಲ್ಲಿ ನಾಲ್ಕು ಜನ ಕಳ್ಳರು ಬಂದರು. ಅವರು ಎಲ್ಲೆಲ್ಲೋ ಕಳ್ಳತನ ಮಾಡಿ ಬೇಕಾದಷ್ಟು ಒಡವೆ ವಸ್ತ್ರ, ನಗನಾಣ್ಯ, ದುಡ್ಡು ಕಾಸು ಸಂಪಾದನೆ ಮಾಡಿಕೊಂಡು ಊರಿಗೆ ಹೋಗಲು ಬರುತ್ತಿದ್ದರು. ಪಾಪಣ್ಣ ಅವರನ್ನು ಕರೆದು ಬಂಡೆಯ ಸುತ್ತಲೂ ಬಿದ್ದಿದ್ದ ಹಣವನ್ನು ತೋರಿಸಿದ. ಅವರಿಗೆ ಸ್ವರ್ಗವೇ ಕೈಗೆ ಸಿಕ್ಕಿದಂತಾಯಿತು. ಅದನ್ನೆಲ್ಲಾ ಗಬಗಬನೆ ಆದುಕೊಂಡರು. "ಇವನು ನಮಗಿಂತ ದೊಡ್ಡ ಕಳ್ಳನಂತೆ ಕಾಣುತ್ತಾನೆ' ಅಂತ ಅವರವರು ಮಾತಾಡಿಕೊಂಡರು. ಪಾಪಣ್ಣ ಮತ್ತೆ ಅವರಿಗೆ ಹೇಳಿದ:

"ಅಷ್ಟೇ ಅಲ್ಲ, ನನ್ನ ಜೊತೆ ಬಂದರೆ ಇನ್ನೂ ಬೇಕಾದಷ್ಟು ಬೆಳ್ಳಿಬಂಗಾರ ಎಲ್ಲಾ ತೋರಿಸ್ತೀನಿ" ಅಂದ. ಕಳ್ಳರಿಗೆ ದುರಾಸೆ ಜಾಸ್ತಿಯಾಯಿತು. "ಹ್ಯಾಂಗೂ ಊರಿಗೆ ಹೊಂಟಿದ್ದೀವಿ, ಕೊನೆಗೆ ಇದೂ ಒಂದು ನೋಡ್ಕೊಂಡು ಹೋಗಾನೆ" ಅಂದುಕೊಂಡರು.

"ನೀನು ಹೇಳಿದಂಗೆ ಆಗಲಿ, ನಡಿ ಹೋಗಾನೆ" – ಅಂದರು.

ಪಾಪಣ್ಣ ಅವರನ್ನು ಕರೆದುಕೊಂಡು ಒಂದೂರಿಗೆ ಹೋದ. ಹೋದಾಗ ಆಗಲೇ ಕತ್ತಲೆಯಾಗಿತ್ತು. ಅಲ್ಲೊಂದು ಹೆಸರುವಾಸಿಯಾದ ದೇವಸ್ಥಾನ. ಆ ದೇವರಿಗೆ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಚಿನ್ನ, ವಜ್ರದ ಒಡವೆಗಳನ್ನೇ ಜಗಿಯುವಂತೆ ಅಲಂಕಾರ ಮಾಡಿದ್ದರು. ಪಾಪಣ್ಣ ಆ ದೇವಸ್ಥಾನಕ್ಕೆ ಅವರನ್ನು ಕರೆದುಕೊಂಡು ಹೋದ.

"ಈಗ ಬಾಗಲ ಬೀಗ ತಗೀರಿ. ನೀವು ಸಾಯೋಗಂಟಾ ತಿಂದ್ರೂ ಮುಗೀದಂಥ ಗಂಟು ಸಿಕ್ತದೆ ನಿಮಗೆ" – ಅಂದ.

ಕಳ್ಳರು ಬಾಗಿಲನ್ನು ತೆಗೆದರು. ಬೀಗದ ಎಸಳನ್ನು ಪಾಪಣ್ಣ ತೆಗೆದುಕೊಂಡ. ಕಳ್ಳರೆಲ್ಲಾ ಆತುರಾತುರವಾಗಿ ಒಳಕ್ಕೆ ನುಗ್ಗಿದರು. ತಕ್ಷಣವೇ ಬಾಗಿಲನ್ನು ಮುಚ್ಚಿ ಬೀಗಹಾಕಿದ. ಈಚೆಯಿಂದ ಇಟ್ಟಿದ್ದ ಕಹಳೆಯನ್ನು ಜೋರಾಗಿ ಒಂದು ಸಾರಿ ಊದಿದ. ಚಕ್ರವಾದಿಯನ್ನು ಡಬಡಬನೆ ಬಡಿದ. ಆಮೇಲೆ ಕಾಲಿಗೆ ಬುದ್ಧಿ ಹೇಳಿದ. ಮಲಗಿದ್ದ ಊರಜನರೆಲ್ಲಾ ದಡಬಡನೆ ಎದ್ದು ದೇವಸ್ಥಾನಕ್ಕೆ ಓಡೋಡಿ ಬಂದರು. ದೀಪ ಹತ್ತಿಸಿದರು. ಕೆಲವರು ಬಾಗಿಲಿನ ಬೀಗ ತೆಗೆದು ಒಳಕ್ಕೆ ನುಗ್ಗಿದರು. ಅಲ್ಲಿ ನೋಡುತ್ತಾರೆ ! ಕಳ್ಳರು ದೇವರ ಒಡವೆಯನ್ನೆಲ್ಲಾ ಜೇಬಿನಲ್ಲಿ ಚೀಲದಲ್ಲಿ ಸಿಕ್ಕಿದ ಕಡೆ ತುರುಕಿಕೊಂಡು ಗಡಗಡನೆ ನಡುಗುತ್ತಾ ನಿಂತಿದ್ದರು. ಅವರನ್ನು ಹಿಡಿದು ಜನವೆಲ್ಲಾ ಚೆನ್ನಾಗಿ ತದಕಿದರು. ಒದ್ದರು, ಉಗಿದರು,



ಅವರ ಮೈಮೂಳೆಯನ್ನೆಲ್ಲಾ ಪುಡಿಪುಡಿ ಮಾಡಿದರು. ಕಳ್ಳರು ಒರಲುತ್ತಾ,

"ದಮ್ಮಯ್ಯ, ನಂಬುಟ್ಬುಡಿ. ಇನ್ನು ಇಂಥಾ ಕೆಲಸ ಮಾಡೋದಿಲ್ಲ. ಯಾರ ಮಾತ್ನೋ ಕೇಳಿ ನಾವು ಮಣ್‌ತಿಂದೋ" – ಅಂತ ಅಂಗಲಾಚಿದರು.

ಅವರ ಹತ್ತಿರವಿದ್ದ ಎಲ್ಲಾ ಸಂಪತ್ತನ್ನೂ ಊರವರು ಕಿತ್ತುಕೊಂಡು ಊರ ಗಡಿಯಾಚೆ ಅವರನ್ನು ಬಿಟ್ಟುಬಂದರು. ಅವರು ಮೈ ಕೈ ನೋವಿನಿಂದ, ಹಣ ಕಳೆದುಕೊಂಡ ದುಃಖದಿಂದ ನರಳುತ್ತಾ ಮೆತ್ತಗೆ ಕಾಲೆಳದುಕೊಂಡು ಹೆಜ್ಜೆಹಾಕಿದರು.

ಬೆಳಗಾಯಿತು. ಕಳ್ಳರು ಪಾಪಣ್ಣ ದಾರಿಕಾಯುತ್ತಿದ್ದ ಜಾಗಕ್ಕೆ ಬಂದರು. ಅವನು ಅಲ್ಲಿ ಆಗಲೇ ಕೂತು ಎಂದಿನಂತೆ ದಾರಿ ಬಡಿಯುತ್ತಿದ್ದ. ಕಳ್ಳರು ಹೋಗಿ ಅವನನ್ನು ಹಿಡಿದು ಹಣ್ಣು ಗಾಯಿ ನೀರುಗಾಯಿಯಾಗುವಂತೆ ಚಚ್ಚಿದರು. ಕೈಕಾಲುಸೊಂಟ ಮುರಿದರು. ಅವನ ಕಾಲು ಹಿಡಿದುಕೊಂಡು ದಾರಿಗುಂಟ ಮುಳ್ಳುಕಲ್ಲುಗಳ ಮೇಲೆಲ್ಲಾ ದರದರನೆ ಎಳೆದುಕೊಂಡು ಹೋದರು. ಎಷ್ಟೋ ದೂರ ಹೀಗೆ ಎಳೆದ ಮೇಲೆ ಪಾಪಣ್ಣನ ಪ್ರಾಣ ಹೋಯಿತು. ಅವನ ಶರೀರವನ್ನು ಅತ್ತ ಎಸೆದು ಕಳ್ಳರು ಊರಿಗೆ ಹೋದರು.

* * * *

## ಚದುರ ಚನ್ನಯ್ಯ*

ಹೊನ್ನವಳ್ಳಿ ಅಂತ ಒಂದೂರು. ಅಲ್ಲಿ ಒಬ್ಬಳು ಬಡವೆ. ಚಿಕ್ಕಂದಿನಲ್ಲೇ ಗಂಡನನ್ನು ಕಳೆದುಕೊಂಡು ತನ್ನ ಒಬ್ಬನೇ ಮಗನನ್ನು ತುಂಬ ಕಷ್ಟದಿಂದ ಸಾಕಿದಳು. ಕೂಲಿನಾಲಿ ಮಾಡಿ ಮಗನನ್ನು ಬೆಳೆಸಿದಳು. ಹೊತ್ತಿಗೆ ಬೆಳಿ ಅಂದರೆ ಜಾವಕ್ಕೆ ಬೆಳೆದ. ಬಾಳೆ ಕಂಬದಂಥ ಕೈಕಾಲುಗಳು; ಅರಳು ಹುರಿದಂತೆ ಮಾತು. ವಿದ್ಯೆಗಿದ್ಯೆ ಕಲಿಯದಿದ್ದರೂ ಬಲು ಚಾಲೂಕಿನ ಹುಡುಗ. ಯಾರಿಗೂ ಬಾಯಿ ಕೊಡುತ್ತಿರಲಿಲ್ಲ ಮಾತಿನಲ್ಲಿ. ಊರಿನವರಿಗೆಲ್ಲ ಅವನನ್ನು ಕಂಡರೆ ಅಕ್ಕರೆ. ತಾಯಿಗಂತೂ ಮೇಲೋಕವೇ ಕೈಗೆ ಸಿಕ್ಕಿದ ಹಾಗೆ.

ಹುಡುಗ ವಯಸ್ಸಿಗೆ ಬಂದ. ಮುಖದ ಮೇಲೆ ಚಿಗುರು ಮೀಸೆ. ಓರಗೆ ಹುಡುಗರೆಲ್ಲಾ ಮದುವೆಯಾಗಿ ಅತ್ತೆಮನೆ ಊಟ ಉಂಡು ಬಂದು ಹಾಗೆ ಹೀಗೆ ಎಂದು ಅವನೆದುರು ಜಂಭ ಹೊಡೆದುಕೊಳ್ಳುತ್ತಿದ್ದರು. ಅವರ ಕೈಮುರಿ, ಕೆಂಪುಚೌಕ, ಕಿವಿಯಲ್ಲಿ ಥಳಥಳಿಸುವ ಹತ್ತಕಡಕು ಕಂಡಾಗಲೆಲ್ಲಾ ತನಗೂ ಮದುವೆಯಾಗಬೇಕೆಂಬ ಬಯಕೆ ಅವನ ಮನಸ್ಸಿನಲ್ಲಿ. ತಾಯಿ ಆ ವಿಚಾರವನ್ನೇ ಎತ್ತುವುದಿಲ್ಲ. ತಾನೇ ಹೇಳಲು ನಾಚಿಕೆ. ಕೊನೆಗೊಂದು ದಿನ ಗಟ್ಟಿಮನಸ್ಸು ಮಾಡಿ ತಾಯಿಯ ಬಳಿಗೆ ಬಂದ. ತಾಯಿ ಒಲೆ ಮುಂದೆ ಕೂತಿದ್ದಳು. ಒಲೆಯ ಮೇಲೆ ಹಿಟ್ಟು ಕುದಿಯುತ್ತಿತ್ತು. ಎದುರಿಗೆ ಕುಳಿತ ಮಗನನ್ನು ಒಂದು ಸಾರಿ ಕಣ್ಣು ತುಂಬ ನೋಡಿ ಅವಳು ಬೇರೆ ಕಡೆ ತಿರುಗಿ ದೊಡ್ಡ ನಿಟ್ಟುಸಿರು ಬಿಟ್ಟಳು. 'ಕಂಟ'ದ ಸೌಟಿನಿಂದ ಮಡಿಕೆಯಲ್ಲಿ ಕುದಿಯುತ್ತಿದ್ದ ಹಿಟ್ಟಿನ ಎಸರನ್ನು ತಿರುವಿದಳು. ಆಗ, 'ಅವ್ವಾ' ಅಂದ. "ಏನಪ್ಪಾ ಚನ್ನ..... ಹೊಟ್ಟೆ ಹಸೀತದೇನೋ. ಒಂದೀಟು ತಾಳು. ಎಸ್ರು ಆಗ್ಹೋಗ್ಯದೆ. ಹಿಟ್ ತಿರುವಿ ಕೆಳಕ್ಕೆ ಇಳ್ಸಿ ಇಕ್ಕೊಡ್ತೀನಿ. ಹೊತ್ತಾರೆ ಉಂಡಿದ್ದು ನೀನೂವೆ. "ಹ್ಯಾಂಗ್ ತಾನೇ ತಡೀತಿ."..... "ಅದಲ್ಲಾ ಕನವ್ವ ...... ಮತ್ತೆ ........ "

"ಮತ್ತಿನ್ನೇನೋ .......... ಹುಸಾರಿಲ್ವ ? .......... ಬ್ಯಾಡ ಅಂದ್ರೂ ಕೇಳಕಿಲ್ಲ.

* ಹೇಳಿದವರು : ಕೃಷ್ಣರಾಜನಗರದ ತಾಲ್ಲೂಕು ಕಲ್ಯಾಣಪುರದ ಕರೀಗೌಡ.



ಅಲ್ಲಿ ಇಲ್ಲಿ ಸುಮ್ನೆ ಗಾಳಿನಾಯಿತಿರುಗೋ ಹಂಗೆ ತಿರುಗ್ತೀ – ಸರುವತ್ತು ಅನ್ನಾಕಿಲ್ಲ. ಸಮತ್ತು ಅನ್ನಾಕಿಲ್ಲ. ಸಂದೆ ಆದ್ಮೇಲೆ ತೆಪ್ಪನೆ ಮನೇಲಿರಪ್ಪ ಅಂದ್ರೆ ನನ್ಮಾತು ಕೇಳೋ ಮುಗ್ಗಾ ನೀನು ....." – ತಾಯಿ ಇನ್ನೂ ಮುಂದುವರಿವುದರಲ್ಲಿದ್ದಳು.

"ಅದಲ್ಲಾ ಕನವ್ವ ಅಂದ್ರೆ ..... ಹುಸಾರಿಲ್ದೆ ನಂಗೇನು ಧಾಡಿ..... "

"ಮತ್ತಿನ್ನೇನೋ ........ ಎಲ್ಲಾದ್ರೂ ಆಟಗೀಟ ನೋಡಕೆ ಹೋಗ್ಬೇಕೇನೋ?"

"ಅಂದು ಒಂದೂ ಅಲ್ಲ ಕನವ್ವ ............. ಮತ್ತೆ ಮತ್ತೇ ಮತ್ತೇ ..........."

"ಅದೇನ್ ಹೇಳೋ.........."

"ನಮ್ಮ ನರಸಪ್ಪೋರ ಕಾಳ ಇಲ್ವಾ ...... ಅವನ್ಗೆ ಈ ಬ್ಯಾಸ್ಗೇಲಿ ಮದ್ವೆ ಮಾಡ್ತಾರಂತೆ........"

"ಹಂಗಾ..... ಮಾಡ್ಲಿ ಬಿಡು...... ನೀನೂ ಹೋಗೀವಂತೆ.

"ನನ್ ಜೊತೇರೆಲ್ಲಾ ಮದ್ವೆ ಆಗೋದ್ರು .........." ಅಂದು ತಲೆ ತಗ್ಗಿಸಿದ.

ತಾಯಿ ಮೂಕಳಾದಳು. ಕಣ್ಣಿನಲ್ಲಿ ನೀರು ತುಂಬಿತು. ಹರಿದ ಸೀರೆ ಸೆರಗಿನಿಂದ ಅದನ್ನು ಒರಸಿಕೊಂಡಳು.

"ಅವ್ರೆಲ್ಲಾ ದೊಡ್ಡೋರು ಕನಪ್ಪಾ......... ದುಡ್ಡು ಕಾಸು ಬೇಕಾದಂಗ್ ಮಡಗ್ಯವ್ರೆ. ನಮ್ಗೆ ಒಂದ್ ಹೊತ್ತಿಗಿದ್ರೆ ಇನ್ನೊಂದು ಹೊತ್ಗಿಲ್ಲ. ನನ್ ಮಗನ ಮದ್ವೆಮಾಡಿ ಕಣ್ಣಲ್ಲಿ ನೋಡೋ ಭಾಗ್ಯ ನನ್ನ ಹಣೇಲಿ ಬರೀನಿಲ್ಲ, ಶಿವ...... ಉದ್ಧೂಕಾಲ್ಕೂ ನನಗೆ ಇದೇ ಕಷ್ಟ ಕೊಟ್ಟ ಭಗವಂತ. ಉಣ್ಣೋರ ಕಂಡು ಉಣ್ಣಿಲ್ಲ, ಉಡೋರ ಕಂಡು ಉಡ್ನಿಲ್ಲ".

ಹಿಟ್ಟನ್ನು ತಿರುವಿ ಒಲೆಯಿಂದ ಕೆಳಕ್ಕಿಳಿಸಿ ಬಾಯಿ ಮುಚ್ಚಿದಳು. ಚನ್ನ ಹೇಳಿದ: "ನೀನು ಅಳ್ಬ್ಯಾಡಕನವ್ವ. ಮಾತೆತ್ತಿದ್ರೆ ಕಣ್ಣೀರು ಸುರಿಸ್ತಿ...... ಹುಟ್ಟಿಸಿದ ಶಿವ ಹುಲ್ಲು ಮೇಸ್ಯಾನ. ಆಳ್ ಕೊಟ್ಟ ಶಿವ ಅನ್ನಾನೂ ಕೊಡ್ತಾನೆ ಕಂತೆ ಸುಮ್ನಿರು. ನೋಡ್ಕೊಂಡು ಬತ್ತೀನಿ. ನೀನೇನೂ ಯೇಚ್ನೆ ಮಾಡ್‌ಬ್ಯಾಡ...... ಅದೇನಾರ ಆಗ್ಲಿ, ಈ ವರ್ಷ ಮದ್ವೆ ಆಗೇಬುಡಬೇಕು. ನಿನ್ ತಾನೇ ಏಟ್ ದಿನ್ಗಂಟ ಹಿಂಗೆ ದುಡ್ದು ದುಡ್ದು ಸಣ್ಣಾಯ್ತಿ.......... ನಾಳಿಕ್ಕೆ ನಾನು ಹೋಯ್ತೀನಿ. ಇದರ ಮೇಲೆ ಭಗವಂತನ್ನೆ"

### ೨

ಬೆಳಿಗ್ಗೆ 'ಮಸುಕಿ'ನಲ್ಲೇ ಎದ್ದು ರಾಗೀ ಬೀಸಿ ಹಸಿ ಮಣಸಿನಕಾಯಿ, ಉಪ್ಪು ಈರುಳ್ಳಿ ಹಾಕಿ 'ಘಟ್ಟದ ರೊಟ್ಟಿ' ಮಾಡಿ ಮಗನಿಗೆ ಕೊಟ್ಟಳು. ಬಾಯಿ

ಚಪ್ಪರಿಸುತ್ತಾ ನಾಲ್ಕು ರೊಟ್ಟಿ ತಿಂದು ಇನ್ನೂ ನಾಲ್ಕು ರೊಟ್ಟಿಯನ್ನು ಒಂದು ಹಳೇ ಬಟ್ಟೆಯಲ್ಲಿ ಕಟ್ಟಿಕೊಂಡು ಮರದ–ತಾನೇ ತಯಾರಿಸಿದ–ಜೋಡನ್ನು ಮೆಟ್ಟಿ, 'ನಾನು ಹೋಗ್ ಬತ್ತಿನವ್ವಾ..... ನೀನೇನೂ ಸಿಂತೆ ಮಾಡಬ್ಯಾಡ........ ದೇವ್ರವನೆ........ ನಾನು ಮೂರ್ನಾಕ್ದಿನದಲ್ಲಿ ಬಂದ್ ಬುಡ್ತೀನಿ' ಎಂದು ಹೇಳಿ ಹೊರಟ. ತಾಯಿ ತಲೆ ಬಾಗಿಲಲ್ಲಿ ನಿಂತು ಮಗನನ್ನು ನೋಡಿದಳು. 'ಜೋಕೆಕನ್ ಮಗ..... ಹುಷಾರಾಗಿರು...... ಬಿರ್ನೆ ಬಂದ್ಬುಡು' – ಎಂದಳು.

ಚನ್ನ ನಡೆದ ನಡೆದ. 'ಆರಂದ ಅಡವಿ'. ಉಟ್ಟುರು ಬಿಸಿಲು, ಮಧ್ಯಾಹ್ನವಾಯಿತು. ಹೊಟ್ಟೆ ಚುರುಗುಟ್ಟಿತು. ಆದರೂ ರೊಟ್ಟಿ ಬಿಚ್ಚಲಿಲ್ಲ. ದಾರಿಯಲ್ಲಿ ಒಂದೂರು ಸಿಕ್ಕಿತು. ಅಲ್ಲಿ ಯಾರ ಮನೆಯಲ್ಲೋ ಒಂದಿಷ್ಟು ನೀರು ಕುಡುದ. ಮುಂದಕ್ಕೆ ಹೋದ. ಊರ ಮುಂದೆ ಒಂದು ಅರಳೀ ಮರ. ಅದರಡಿಯಲ್ಲಿ ಒಬ್ಬಳು ಮುದುಕಿ ವಡೆಮಾರುತ್ತಾ ಕುಳಿತಿದ್ದಳು. ಕಾಗೆ 'ಕಾ ಕಾ' ಎನ್ನುತ್ತಿದ್ದವು. ಚೆನ್ನನಿಗೆ ಬಾಯಿನೀರು ಬಂತು. ಹೊಟ್ಟೆ ಬಡಿತು. ನೆಟ್ಟಗೆ ಅಲ್ಲಿಗೆ ಹೋದ.

"ನಾಕಾಣೆ ಒಡೆ ಕೊಡಮ್ಮ" ಎಂದ.

"ನೀನು ಯಾವೂರಪ್ಪ?"

"ನಾನು ಬುಟ್‌ಬಂದೂರು ಕನವ್ವ"

"ನಿನ್ನ ಹೆಸರು?"

"ಸಪ್ಪಟ್ಟೆ."

ಒಡೆ ತಿಂದು ರುಚಿ ಹತ್ತಿತು. ಇನ್ನೂ ಎಂಟಾಣೆಗೆ ತಿಂದ.

"ಇನ್ನೊಂದ್ ರೂಪಾಯಿಗೆ ಕೊಡಮ್ಮ, ಕೊಡ್ತೀನಂತೆ ತಿಂದಾದ್ಮೇಲೆ"

ಇನ್ನೂ ಒಂದು ರೂಪಾಯಿಗೆ ತಿಂದ. ಹೊಟ್ಟೆ ತುಂಬಿತು. ಆ ಮುದುಕಿಯಿಂದಲೇ ನೀರನ್ನೂ ಕೇಳಿಕುಡಿದ. ಅಂಗಿಗೆ ಕೈ ವರೆಸಿಕೊಂಡು 'ನಾ ಬರ್ತೀನಿ' ಅಂದು ಸರಸರ ನಡದೇ ಬಿಟ್ಟ. ಮುದುಕಿ ಕೂಗಿ ಕೊಂಡಳು: "ಅಯ್ಯಯ್ಯೋ ದುಡ್‌ಕೊಡೋ ಸಪ್ಪಟ್ಟೇ...... ದುಡ್ ಕೊಡೋ ಸಪ್ಪಟ್ಟೇ, ಸಪ್ಪಟ್ಟೇ...... ಅಯ್ಯೊ ನನ್ ದುಡ್ಡು.... ನನ್ ದುಡ್ಡು ಹೋಯ್ತಲಪ್ಪೋ, ಇವ್ನಮನೆ ಹಾಳಾಗ....... ಇವ್ನ ನೆಗೆದ್ ಬಿದ್ದು ನೆಲಕಚ್ಚ...... ನನ್‌ದುಡ್ಡು ಹೋಯ್ತಲ್ಲೋ.........". ಜನ 'ಗುಜ ಗುಂಪಲು' ಹಾಕಿಕೊಂಡರು. ಮುದುಕಿ ತಲೆತಲೆ ಚಚ್ಚಿಕೊಂಡಳು. ಧೂಳು ಬಾಚಿ ಹಾಕಿದಳು. ಜನಕೇಳಿದರು :

"ಏನಾಯ್ತಮ್ಮ..... ಏನಾಯ್ತು?"

"ಅಯ್ಯೋ ವಡೆ ತಿಂದ ದುಡ್ ಕೊಡ್ದೇ ಹೋದಕನಪ್ಪೋ...... ಅವ್ನು ಬಾಳ್ದೇ ಹೋಗ........"

"ಯಾರಮ್ಮ?"

"ಸಪ್ಪಟ್ಟೆ"

"ಅಂದರೆ?"

"ವಡೆ ತಿಂದೋನು ಸಪ್ಪಟ್ಟೆ........ ದುಡ್ ಕೊಡ್ದೇ ಹೋದೋನು ಸಪ್ಪಟ್ಟೆ" ಜನಕ್ಕೆ 'ಕಕಮಕ'ವಾಯಿತು ಯಾರಿಗೂ ಏನೂ ಗೊತ್ತಾಗಲಿಲ್ಲ.

"ಸಪ್ಪಟ್ಟೆ..... ಸಪ್ಪಟ್ಟೆ..... ಅಂತೀಯಾ........ ಮತ್ಯಾಕ್ ಹಂಗೆ ಹೊಡ್ಕೋತೀಯಾ...... ನಿಂಗೆಲ್ಲೋ ತಲೆಕೆಟ್ ಹೋಗ್ಯದೆ........ ಅರಳೋ–ಮರಳೋ ಅಂತ" ಎಂದು ಜನ ಅವರ ಪಾಡಿಗೆ ಅವರು ಹೋದರು. ಮುದುಕಿ ಶಾಪ ಹಾಕುತ್ತಲೇ ಇದ್ದಳು.

ಚನ್ನ 'ಬಿರ್ ಬಿರ್ನೆ' ಓಡಿದ. ಅಲ್ಲೊಂದು ಕೆರೆಸಿಕ್ಕಿತು. ಅಗಸರು ಬಟ್ಟೆಗಳನ್ನು ಒಗೆದು ಸಾಲುಸಾಲಾಗಿ ಒಣಹಾಕಿದ್ದರು. ಕಣ್ಣಿಗೆ ಬೇಕಾದ ಬಟ್ಟೆಗಳು ಬಿಸಿಲಿಗೆ ಹೊಳೆಯುತ್ತಿದ್ದವು. ಚನ್ನ ತನ್ನ ಬಟ್ಟೆಗಳನ್ನೂ ಅವುಗಳನ್ನೂ ನೋಡಿ ಕೊಂಡ ಹೆಣ್ಣು ಕೇಳಲು ಹೋಗುವವನು ಒಳ್ಳೆ 'ದಿರಸ್'ನಲ್ಲಿ ಹೋಗಬೇಕು ಅಂದು ಕೊಂಡ. ಬಟ್ಟೆ ಒಗೆಯುತ್ತಿದ್ದ ಅಗಸರ ಬಳಿ ಕುಳಿತುಕೊಂಡ. ಒಬ್ಬ ಅಗಸ ಒಗೆದು ಒಗೆದು ಸಾಕಾಗಿ 'ಉಸ್' ಎಂದು ನಿಟ್ಟುಸಿರು ಬಿಡುತ್ತಾ ಚನ್ನನ ಬಳಿಗೆ ಬಂದು "ಬೆಂಕಿ ಇದ್ರೆ ಕೊಡಯ್ಯ" ಅಂದ. ಚನ್ನ ತನ್ನ ಜೇಬಿನಿಂದ 'ಚಕಮುಕಿ'ಯನ್ನು ತೆಗೆದು ಹೊಡೆದು ಬೀಡಿಗೆ ಬೆಂಕಿ ಹತ್ತಿಸಿದನು. ಅಗಸರವನು ಒಂದು ಮೋಟು ಬೀಡಿಯನ್ನು ತೆಗೆದು ಅದರಲ್ಲಿ ಹೊತ್ತಿಸಿಕೊಂಡು ಎರಡು ದಮ್ ಹೊಗೆ ಎಳೆದು ಬಿಟ್ಟು "ನಿನ್ನ ಹೆಸರೇನಯ್ಯ?" ಎಂದ.

"ನನ್ ಹೆಸ್ರು ಸುಂಟರಗಾಳಿ ಅಂತ"

"ಒಳ್ಳೇ ಹೆಸ್ರು. ಯಾವೂರು ನಿನ್ದು?"

"ಹುಟ್ಟೂರು"

ಸ್ವಲ್ಪ ಹೊತ್ತಾದ ನಂತರ ಚನ್ನ ಕೇಳಿದ:

"ಇಷ್ಟೊಂದು ಬಟ್ಟೆ ಒಗೀತೀರಲ್ಲ..... ಮೈಕೈ ನೋಯಾಕಿಲ್ವಾ?"

"ನೋಯ್ತದೆ, ಏನ್ಮಾಡೋದಪ್ಪ...... ಹೊಟ್ಟೆ ಹೊರೀ ಬೇಕಲ್ಲಾ..... ಒಗ್ದು ಒಗ್ದು ಸಾಕಾಯ್ತು. ಅಷ್ಟು ಬಟ್ಟೇನೂ ಈಗ 'ಹಿಂಡ'ಬೇಕು."

"ಪಾಪ...... ನೀನ್ ಒಗಿ, ನಾನ್ ಬೇಕಾದ್ರೆ ಒಣಗ್ ಹಾಕ್ತೀನಿ"

"ಅಯ್ಯೋ ಬ್ಯಾಡ ಬುಡು. ನಮ್ ಕೆಲ್ಸ ಯಾವಾಗಲೂ ಇದ್ದೇ ಅದೆ".

ಆದರೂ ಚನ್ನ ಬಿಡದೆ ಅವನು ಹಿಂಡಿ ಹಾಕಿದ್ದ ಬಟ್ಟೆಗಳನ್ನು ಒಂದೊಂದಾಗಿ ತಂದು ದಡದ ಹಸುರು ಹುಲ್ಲಿನ ಮೇಲೆ ಒಣಗು ಹಾಕಲು ಷುರುಮಾಡಿದ. ಆ ಅಗಸರವನು ತುಂಬಾ ಸಂತೋಷದಿಂದ ಮತ್ತೆ ಬಟ್ಟೆ ಒಗೆಯಲು ಪ್ರಾರಂಭಿಸಿದ. ಅವನ "ಸ್ಸ..... ರಪ್.... ರಪ್" ಸದ್ದು ಒಂದೇ ಸಮನೆ ಹೊರಡಲಾರಂಭವಾಯಿತು. ಸ್ವಲ್ಪ ಹೊತ್ತು ಸುಮ್ಮನಿದ್ದ. ಚನ್ನ ಒಂದು ದೊಡ್ಡ ಜಮಖಾನವನ್ನು ಒಣಹಾಕಲು ಬಂದು ಸುತ್ತಮುತ್ತ ಕಣ್ಣಾಡಿಸಿದ. ಎಲ್ಲರೂ ಕೆಲಸದಲ್ಲಿ ಮುಳುಗಿದ್ದರು. ಒಂದೇ ಉಸಿರಿಗೆ ಹತ್ತಾರು ಒಳ್ಳೆಯ ಬಟ್ಟೆಗಳನ್ನು ಕಟ್ಟಿಕೊಂಡು ಅವನು ದೌಡುಕಿತ್ತ. ಒಂದು 'ಚಣ' ಹೊತ್ತು ಕಳೆದ ನಂತರ ಅಗಸರವನು ತಲೆ ಎತ್ತಿ ನೋಡಿದ. ಚನ್ನ ಇರಲಿಲ್ಲ. ಕೆಲವು ಬೆಲೆ ಬಾಳುವ ಬಟ್ಟೆಗಳೂ ಇರಲಿಲ್ಲ. ಎದ್ದೆನೋ ಬಿದ್ದೆನೋ ಎಂದು ಏದುಸಿರು ಬಿಡುತ್ತಾ ಅತ್ತ ಇತ್ತ ಕೂಗಿಕೊಂಡು ಓಡಾಡಿದ. ಸುತ್ತ ಮತ್ತುಲಿದ್ದವರೆಲ್ಲ ಓಡಿಬಂದರು.

"ಏನಾಯ್ತು?...... ಏನಾಯ್ತು?......... ಅದ್ಯಾಕ್ ಹಂಗ್ ಕೂಕ್ಕೊತ್ತೀಯೇ?" ಎಂದರು.

"ಅಯ್ಯೋ ನನ್ನ ಬಟ್ಟೇ ...... ನನ್ನ ಬಟ್ಟೇ"

"ಏನಾದ್ವೋ?"

"ಸುಂಟರಗಾಳಿ ಹೊತ್ಗೊಂಡ್ಹೋದ !"

ಜನ ಜೋರಾಗಿ 'ನಗಾಡಿ'ದರು. "ಇವನ್ಗೆಲ್ಲೋ ಹುಚ್ಚು ಕನ್ರೊ. ಸುಂಟರಗಾಳಿ ಬಟ್ಟೆ ಹೊತ್ಕೊಂಡ್ ಹೋದ್ರೆ ನಾವೇನ್ಮಾಡನೇ.... ಒಳ್ಳೆ ಚಂದಾಯ್ತು......... ಇಲ್ಲೆಲ್ಲಾ ಹುಡ್ಕು ಬಿದ್ದಿದ್ರೆ ಸಿಕ್ತವೆ !"

"ಅಯ್ಯೋ..... ಅಲ್ಲಾಕನ್ರಪ್ಪಾ...... ಗಾಳಿ ಅಲ್ಲ. ಸುಂಟರಗಾಳಿ ನನ್ನ ಬಟ್ಟೆ ಹೊತ್ಕೊಂಡೋದ !" ಹಣೆ ಹಣೆ ಚಚ್ಚಿಕೊಳ್ಳುತ್ತಾ ಕಿರುಚಿಕೊಂಡ ಅಗಸರವನು.

ಅವನ ಮಾತು ಅರ್ಥವಾಗದ ಜನ, "ನಿನಗೇನೋ ಬೆಪ್ಪು. ಸುಂಟರ ಗಾಳಿ ಅಂದ್ಮ್ಯಾಲೆ ಬಟ್ಟೇ ಎಲ್ಲಾನೂ ಎಲ್ಲೋ ದೂರ ತಕ್ಕೊಂಡ್ಹೋಗಿ ಎಸದ್ ಬುಟ್ಟದೆ. ಸುಮ್ನೆಯಾಕ್ ಅಳ್ತೀ, ಚಂದಾಗಿ ಹುಡುಕು" – ಎಂದು ಹೇಳಿ ತಮ್ಮ ಪಾಡಿಗೆ ತಾವು ಹೊರಟು ಹೋದರು.

ಎರಡು ದಿನ ಕಳೆದವು. ಚನ್ನ ಸೊಗಸಾಗಿ 'ಕಾಸೆ' ಪಂಚೆ ಹಾಕಿ, ತುಂಬು ದೋಳಿನ ಅಂಗಿತೊಟ್ಟು ಅದರ ಮೇಲೆ ಕೋಟು ಹಾಕಿಕೊಂಡು. ಒಂದು ಮಲ್ಲು ಪಂಚೆಯನ್ನು ಪೇಟ ಸುತ್ತಿಕೊಂಡ. ಮತ್ತೊಂದನ್ನು ಹೆಗಲಮೇಲೆ ಇಳಿ ಬಿಟ್ಟು ಕೊಂಡ. ಹೊರಟು ಒಂದು ಸಂತೆಗೆ ಬಂದ. ಸಂತೆ ಎಲ್ಲವನ್ನೂ ತಿರುಗಿದ.



ಅಲ್ಲಿ ಒಂದು ಕಡೆ ಕುದುರೆ ವ್ಯಾಪಾರ ನಡೆಯುತ್ತಿತ್ತು. ಹತ್ತಿರಕ್ಕೆ ಹೋದ. ಆದರೆ ಅದು ವ್ಯಾಪಾರವಾಗಿರಲಿಲ್ಲ. ತನಗೆ ಹಣ ಕೊಡ ಬೇಕಾದ್ದದ್ದಕ್ಕೆ ಯಾವನೋ ಒಬ್ಬ ಸಾಬಿ ಸುಣ್ಣದವನ ಹತ್ತಿರ ಜಗಳವಾಡುತ್ತಿದ್ದ. ಸುಣ್ಣದವನು "ದಮ್ಮಯ್ಯ ಸ್ವಾಮಿ........ ನನ್ ಹೆಡ್ತಿ ಮಕ್ಳು ಸಾಯ್ತವೆ. ಹೊಟ್ಗೇ ಹಿಟ್ಟಿಲ್ಲ. ನಿಮ್ಮ ದುಡ್ಡು ಹ್ಯಂಗಾರೂ ಮಾಡಿ ಇನ್ನೊಂದು ತಿಂಗ್ಳಲ್ಲಿ ಕೊಡ್ತೀನಿ" ಎಂದು ಅಂಗಲಾಚುತ್ತಿದ್ದ. "ಅವೆಲ್ಲಾ ಆಗಾಕಿಲ್ಲ..... ಅರೆ ಐತಲ್ಲಾ........ ನನ್ನ ದುಡ್ನ ಮಡಗ್ ಬಿಟ್ಟು ಮಾತಾಡಯ್ಯ". ಸುಣ್ಣದವನು ದಮ್ಮಯ್ಯ ಎನ್ನುವುದನ್ನು ಬಿಡಲಿಲ್ಲ; ಸಾಬಿ ಬಯ್ಯುವುದು ತಪ್ಪಲಿಲ್ಲ.

"ಹೋಗ್ಲಿ....ನನ್ನ ಕುದುರೆನಾದ್ರು ತಕ್ಕೊಂಡು ಬಾಕಿ ದುಡ್ಕೊಡಿ ಸಾಹೇಬರೆ"

"ಅರೆ ನಿಂದೂಕೆ ಕುದ್ರೆ ನಮ್ಕೂದೆ ಯಾಕ್ ಬೇಕು. ನನ್‌ದುಡ್ಡು ಮಡ್ಗಿ ಮಾತಾಡಯ್ಯ". ಚನ್ನ ಮಧ್ಯೆಬಂದ. ಅವನ ವೇಷ ಭೂಷಣಗಳನ್ನು ನೋಡಿದ ಸುಣ್ಣದವನು ದೊಡ ಮನುಷ್ಯರೆಂದು ಭಾವಿಸಿ "ನೀವಾರೂ ಹೇಳಿಬುದ್ದಿ" ಅಂದ.

"ನನಗೆ ಒಂದು ಕುದ್ರೆ ಬೇಕಾಗ್ಯದೆ, ಕೊಡೊದಾದ್ರೆ ಕೊಡು ಮತ್ತೆ, ಏನಯ್ಯ ಸಾಬು?"

"ಅರೆ ಐತಲ್ಲಾ ಹಂಗೇನೆ ಮಾಡಿಸಾಮಿ. ಒಳ್ಳೆ ಟೇಮ್ನಲ್ಲೇ ಬಂದ್ರಿ"

"ಹಂಗಾದ್ರೆ ಕುದ್ರೆ ಮೇಲೆ ಸ್ವಲ್ಪ ಹತ್ತಿ ನೋಡ್ಬೇಕು, ಹ್ಯಂಗ್ ಹೋಯ್ತದೋ ನೋಡಾನಾ"

"ಅದ್ಕೆನ್ ಬುದ್ದಿ, ಹತ್ತಿ ನೋಡಿ.... ಅಂದಂಗೆ ನಿಮ್ಮೆಸ್ರು ಬುದ್ಧಿ?"

"ನನ್ ಹೆಸ್ರು 'ಸಾಲಗಾರ್' ಅಂತ"

"ಸರಿಬುದ್ಧಿ ...... ಹತ್ತಿನೋಡಿ."

ಚನ್ನ ಕುದುರೆ ಮೇಲೆ ಹತ್ತಿ 'ಕಡಿವಾಣ' ಹಿಡಿದು ಜೋರಾಗಿ ಒಂದೇಟು ಕೊಟ್ಟ. ಕುದುರೆ ನಾಗಾಲೋಟದಿಂದ ಓಡಿತು–ಭೂಮ್ಗೂ ಆಕಾಸ್ಕೂ ಒಂದೇ ಸಮನಾಗಿ.

ಸುಣ್ಣದವನೂ ಸಾಬಿ ಅಷ್ಟುಹೊತ್ತು ನೋಡಿದರು, ಇಷ್ಟೊತ್ತು ನೋಡಿದರು. ಇಲ್ಲವೇ ಇಲ್ಲ. ಇಬ್ಬರೂ ಕೂಗಿಕೊಂಡರು: "ಅಯ್ಯೋ ಕುದುರೆ........ ಕುದ್ರೆ ಹೋಯ್ತು...... ಹೋಯ್ತು........." ಜನ 'ಬಿದ್ದಂಬೀಳ' ಓಡಿ ಬಂದರು. "ಏನು........ ಏನು ......... ಏನಾಯ್ತು?" ಎಂದರು. ಸುಣ್ಣದವನು ಬಾಯಿ ಬಾಯಿ ಬಡಿದುಕೊಂಡ: "ನನ್ನ ಕುದ್ರೆ ಹೊಡ್ಕೊಂಡ್ ಹೋದ್ನಲಪ್ಪೊ, ನನ್ನ ಬಡವನ

ತಲೆಮ್ಯಾಲೆ ಕಲ್ ಹಾಕಿದ್ನಲ್ಲಪ್ಪೋ...."

"ಯಾರಯ್ಯ ಹೊಡ್ಕೊಂಡು ಹೋದೋರು?"

"ಸಾಲಗಾರ ಕನ್ನಪ್ಪೋ"

"ಸರೀ ಬುಡುಮತ್ತೆ. ಕೊಟ್ಟ ಸಾಲಗಾರ ಹೊಡಕೊಂಡ್ ಹೋಗ್ದೇ ಇದ್ದಾನ........ ಹೋಗ್ ಹೋಗ್ ಮನ್ಗೆ !" – ಜನ ಚದುರಿದರು.

ಸಂಜೆಯ ವೇಳೆಗೆ ಚನ್ನ ಮನೆಯ ಮುಂದೆ ಕುದುರೆ ಕಟ್ಟಿಹಾಕಿ ಜಗುಲಿಯ ಮೇಲೆ ಕುಳಿತು ಕೊಂಡ ಸಾಕಾಗಿ, ಬೆವರನ್ನು ವರಸಿಕೊಳ್ಳುತ್ತಾ. ಸ್ವಲ್ಪಹೊತ್ತಾದ ಮೇಲೆ ಒಂದು ಮುದುಕಿ ಈಚೆಗೆ ತಲೆಹಾಕಿತು.

"ಒಂದೀಟ್ ಕುಡಿಯಾಕ್ ನೀರ್ಕೊಡ್ತೀಯಾ ಮುದ್ಕಮ್ಮ" – ಚನ್ನ ಕೇಳಿದ.

"ಅಯ್ಯೋ ಅದ್ಕೇನಪ್ಪಾ ........ ನೀರ್ನೂ ಕೊಂಡ್ಕೋ ಬರ್ಬೇಕಾ ..... ನೀನು ಕೇಳೋದ್ ಹೆಚ್ಚೋ ನಾವ್ ಕೊಡೋದ್ ಹೆಚ್ಚೋ ......... ಲೇ ಅಮ್ಮೀ, ಒಂದ್ ಚೊಂಬಲಿ ನೀರ್ ತಂದ್ಕೊಡವ್ವ" – ಬಾಗಿಲಲ್ಲಿ ಕುಳಿತುಕೊಳ್ಳುತ್ತಾ ಅಜ್ಜಿ ಹೇಳಿತು.

'ಥಣಥಣನೆ' ಹೊಳೆಯುವ ಹಿತ್ತಾಳೆ ಚೆಂಬಿನಲ್ಲಿ ನೀರನ್ನು ತೆಗೆದುಕೊಂಡು ಒಂದು 'ಸೂಬಾಲೆ' ಯಂತಹ ಹುಡುಗಿ ಹೊರಕ್ಕೆ ಬಂತು. ಚನ್ನ ನೀರು ಕುಡಿದ. ಮನಸ್ಸೆಲ್ಲಾ ಆ ಹುಡ್ಗೀ ಮೇಲಿತ್ತು. ಒಳ್ಳೆ ಪ್ರಾಯಸ್ಥೆ. ರೂಪಸ್ಥೆ ಹೆಣ್ಣು. ಮಿಂಚಿನಂತೆ ಒಳಕ್ಕೆ ಹೋಯಿತು. ಚನ್ನ ಕೇಳಿದ:

"ನಿಮ್ಮ ಮಗ್ಳಾ ಮುದುಕಮ್ಮ ............"

"ಅಲ್ಲಾ ಕನಪ್ಪ ........ ನನ್ನ ಮೊಮ್ಮಗಳು. ಅವ್ರವ್ವ ಇವಳ್ನ ಹೆತ್ಬುಟ್ಟು ಜವರಾಯ್ನ ಮನ್ಗೆ ಹೊಂಟೋದ್ಲು. ನಾನು ಸಾಕಿ ಸಲಹಿ ಅಡ್ ದೊಡ್ಡದು ಮಾಡ್ದೆ .........." – ಮಗಳನ್ನು ನೆನೆದು ಸೆರಗಿನಿಂದ ಮುದುಕಿ ಕಣ್ಣೊರಸಿ ಕೊಂಡಳು.

"ಇನ್ನೂ ಮದ್ವೆ ಆಗಿಲ್ವಾ?"

"ಇಲ್ಲ ಕನಪ್ಪ...... ಬರೊ ವೈಸಾಕ ಮಾಸಕೆ ಲಗ್ನ ಮಾಡ್ಬೇಕೊ ಅಂತ ಇವ್ನಿ, ಅಪ್ರಂಜಿಯಂಥ ಗಂಡೂ ಗೊತ್ತಾಗವ್ನೆ. ಅಂದಂಗೆ ನಿನ್ನ ಹೆಸ್ರೇನಪ್ಪ?"

ಚನ್ನ ತಟ್ಟನೆ ಉತ್ತರ ಹೇಳಿದ: ನನ್ನೆಸ್ರು 'ಅವಳ ಗಂಡ' ಅಂತ ಕನಜ್ಜಿ "

"ಇದೆಂಥ ಹೆಸ್ರಪ್ಪಾ .... ಒಂದು ದೇವ್ರ ಹೆಸ್ರಲ್ಲ, ದೆಯ್ದ ಹೆಸ್ರಲ್ಲ."

"ಏನೋ ಅಜ್ಜಿ ........ ನಮ್ಮೂರಲ್ಲಿ ಹಂಗೇ ಕರೆಯೋದು. ನನ್ ಹುಟ್‌ಹೆಸ್ರು ಮರ್ತೇ ಹೋಗ್ಯದೆ."



"ಇಲ್ಲೇ ಉಂಡ್‌ಬುಟ್ ಮನಿಕ್ಕೊಳೀವಂತೆ, ಹೋಗ್ಲಿ. ಇಲ್ಲೇ ಇರಪ್ಪ" ಎಂದು ಹೇಳಿ ಮುದುಕಿ ಒಳಗೆ ಹೋದಳು. ದನಕರುಗಳೆಲ್ಲಾ ಮನೆಗೆ ಬಂದವು. ಕೆಲವು ಜನ ಕುದುರೆ ಕಡೆ ಇಣುಕು ಹಾಕಿ ಯಾರೋ ನಂಟರು ಬಂದಿರುವರೆಂದು ಕೊಂಡು ಮನೆಗೆ ಹೋದರು. ಕತ್ತಲಾಯಿತು ಚನ್ನ ಮನಸ್ಸಿನಲ್ಲೇ ಏನೇನೋ ಹೂಟ ಹಾಕಿದ.

ಊಟದ ಹೊತ್ತು. ಕೆಲವರ ಮನೆಯಲ್ಲಿ ಊಟಮಾಡಿ ಮಲಗಿದರು. ಮುದುಕಿಯ ಮಗಳು ನೀರು ಕೊಡಲು ಹೊರಬಂದಳು. ಚನ್ನ ಕೆಳಕ್ಕಿಳಿದ. ಅವಳ ಬಾಯನ್ನು ಮುಚ್ಚಿ ತಕ್ಷಣ ಬಟ್ಟೆ ತುರುಕಿದ ಕೂಗಿಕೊಳ್ಳದಂತೆ. ಕುದುರೆಯ ಮೇಲೆ ಹಾಕಿಕೊಂಡು ನಡದೇ ಬಿಟ್ಟ,, ಆ 'ಅಮಾಸೆ'ಯ ಕತ್ತಲಲ್ಲಿ.

ಕೆಲಹೊತ್ತು ಕಳೆಯಿತು. ಮಗಳು ಬರಲೇ ಇಲ್ಲ. "ಲೇ..... ಅಮ್ಮೀ .... ಅಮ್ಮೀ ....." ಎಂದು ಕೂಗಿದಳು. ಯಾರೂ 'ಓ' ಕೊಳ್ಳಲಿಲ್ಲ. ದೀಪ ಹಿಡಿದು ಕೊಂಡು ಈಚೆಗೆ ಬಂದು ನೋಡಿದಳು. ಮಗಳಿಲ್ಲ. 'ಅವಳ ಗಂಡ' ನಿಲ್ಲ, ಕುದುರೆಯೂ ಇಲ್ಲ.

"ಅಯ್ಯಯ್ಯೋ ಓಡ್ಬನ್ರಪ್ಪೋ ...... ನನ್ ಮಗಳ ಹೊತ್ಕೊಂಡುಹೋಗ್ತಾವನೆ. ಅವನ ವಂಶ ನಿರ್ವಂಸವಾಗಾ ......" ಅಜ್ಜಿ ಲಬಲಬನೆ ಬಾಯಿ ಬಡಿದುಕೊಂಡಿತು. ಜನ ಓಡೋಡಿ ಬಂದರು.

"ಯಾರು ಕರ್ಕೊಂಡು ಹೋದೋರು?"

"ಅಯ್ಯಯ್ಯೋ 'ಅವಳ ಗಂಡ' ಕನ್ರಪ್ಪೋ ?"

"ಅವಳ ಗಂಡನ ಜೊತೆ ಅವಳು ಹೋದ್ರೆ ನಿಂಗೇನ್ ಹೋಗು"

ಅರ್ಧ ರಾತ್ರಿಯ ವೇಳೆಗೆ ಚನ್ನ ಆ ಹುಡುಗಿಯನ್ನು ಕರೆದುಕೊಂಡು ಮನೆಗೆ ಬಂದ. ನಿದ್ದೆಗಣ್ಣಿನಲ್ಲಿ ಎದ್ದು ಬಂದ ತಾಯಿಗೆ ನಮಸ್ಕಾರ ಮಾಡಿದ.

"ನಿನ್ ಸೊಸೆ ಕರ್ಕೊಂಬಂದಿವ್ನಿ ನೋಡವ್ವ" ಎಂದ. ಬೆಳಗಾದ ಮೇಲೆ ಮದುವೆಯಾಯಿತು. ಸುಖವಾಗಿ ಅವರು ಬದುಕಿದರು.

* * * *

## *ಘಾಟಿ ಸೊಸೆ

ಒಂದೂರಿನಲ್ಲಿ ಅತ್ತೆ, ಸೊಸೆ ಮತ್ತು ಮಗ ಮೂರು ಜನರಿದ್ದರು. ಅತ್ತೆ ಮಹಾ ತಾಟಕಿ; ಸೊಸೆಯನ್ನು ಹುರಿದು ಮುಕ್ಕುತ್ತಿದ್ದಳು. ಅವಳಿಗೆ ಯಾವ ಸ್ವತಂತ್ರವೂ ಇರಲಿಲ್ಲ. ಅಡಿಗೆ ಮನೆಯೊಳಗೆ ಸೊಸೆಗೆ ಪ್ರವೇಶವಿಲ್ಲ. ಬೆಳಿಗ್ಗೆ ಎದ್ದು ತುಂಬುದನದ ಕೊಟ್ಟಿಗೆಯನ್ನು ಗುಡಿಸಿ, ಕಸಹಾಕಿ, ಮನೆಗೆ ನೀರು ತರಬೇಕು. ಆ ವೇಳೆಗೆ ತಲೆಮಾಲುತ್ತಿತ್ತು. ಆಗ ಅತ್ತೆ ತಾನೂ ಮತ್ತು ತನ್ನ ಮಗನೂ ಉಂಡು ತಿಂದು ಉಳಿದ ಸೀಕು, ತಂಗಳ, ಮುಸುರೆಯನ್ನು ಅವಳಿಗೆ ಹಾಕುತ್ತಿದ್ದಳು. ಅವಳು ಏನಾದರೂ ರವಷ್ಟು ಗೊಣಗಿದರೂ ತಲೆಯ ಮೇಲೆ ಬೀಳುತ್ತಿತ್ತು ಕಸಬರಿಕೆ ಏಟು. ಒಂದೊಂದು ದಿನ ನಾಯಿಯೂ ತಿನ್ನಲಾರದ ಹಳಸಲು ಅನ್ನ ಇವಳಿಗೆ ಎಡೆಯಾಗುತ್ತಿತ್ತು. ಕಣ್ಣೀರು ಸುರಿಸಿದರೆ, "ಅತ್ತೂ ಅತ್ತೂ ನಮ್ಮನೇನೇ ತೊಳೆದು ಬಿಟ್ಟಲ್ಲೇ ಹಾದರಗಿತ್ತಿ ಮುಂಡೇ ......" ಮುಂತಾದ ಕೇಳಬಾರದ ಮಾತುಗಳು ಅತ್ತೆಯ ಬಾಯಿಂದ ಉದುರುತ್ತಿದ್ದುವು. ಗಂಡ ಇದನ್ನೆಲ್ಲಾ ನೋಡಿದರೂ ತುಟಿ ಪಿಟಕ್ ಎನ್ನದೆ ಬಾಯ್ಮುಚ್ಚಿಕೊಂಡಿರುತ್ತಿದ್ದ. ತಾಯಿಗೆ ತುಂಬ ಹೆದರುವ ಮಗನಾಗಿದ್ದ ಅವನು.

ಅವರ ಹಿತ್ತಲಿನಲ್ಲಿ ಒಂದು ದೊಡ್ಡ ಹರವಾಗಿ ಬೆಳೆದ ಪಡವಲಕಾಯ ಗಿಡವಿತ್ತು. ಒಂದೊಂದು ಅಳೆತ್ತರದ ಕಾಯಿಗಳು ಸದಾ ಅದರಲ್ಲಿ ನೇತಾಡುತ್ತಿದ್ದುವು. ಅದನ್ನು ನೋಡಿದರೆ ಯಾರಿಗಾದರೂ ಬಾಯಿನೀರು ಬರುವಂತಿತ್ತು. ದಿನನಿತ್ಯವೂ ಒಂದೊಂದು ದೊಡ್ಡ ಮಡಕೆಯಷ್ಟು ಪಡವಲಕಾಯಿಯ ತಾಳದವನ್ನುಅತ್ತೆ ಮಾಡುತ್ತಿದ್ದಳು. ತಾಯಿ ಮಗ ಇಬ್ಬರೂ ತಿಂದು ಉಳಿಕೆ ಬಳಿಕೆಯನ್ನು ಸೊಸೆಗೆ ಹಾಕುತ್ತಿದ್ದರು. ಹೀಗೇ ಹಲವಾರು ದಿನ ಕಳೆದವು. ಪಡವಲ ಕಾಯಿಯನ್ನು ಮನಸ್ಪೂರ್ತಿ ಒಂದು ದಿನವಾದರೂ ತಿನ್ನಬೇಕೆಂಬ ಬಯಕೆ ಬಲವಾಗಿ ಬೆಳೆಯುತ್ತಾ ಬಂತು ಅವಳಿಗೆ.

ಒಂದು ಬೆಳಿಗ್ಗೆ ಸೊಸೆ ಕಸದ ಮಂಕರಿಯನ್ನು ಹೊತ್ತು ಸಡಗರದಿಂದ

---

* ಹೇಳಿದವರು : ಹಾಸನ ಜಿಲ್ಲಾ ಅರಕಲಗೂಡು ತಾಲ್ಲೂಕು ಹಂಪಾಪುರದ ಈರಮ್ಮ.



ಮನೆಗೆ ಬಂದಳು. "ಅತ್ತೇ ........ ಅತ್ತೇ ........." ಎಂದು ಕೂಗಿದಳು.

"ಏನೇ ಅದು ಬಳ್ಳುವನಂಗೆ ಬಡ್ಕೋತೀಯಲ್ಲಾ ...... ಏನಾಯ್ತುನಿಂಗೆ?"

"ಮೂಡ್ಲಕೊಪ್ಪಲ ದೊಡ್ಡತ್ತೆ ಗಂಡ ಸಿಕ್ಕಿದ್ರು, ಅತ್ತೆಗೆ ಬಾಳ ಹುಸಾರಿಲ್ಲವಂತೆ. ಈಗಲೋ ಆಗಲೋ ಅನ್ನೊಂಗಾಗಿ ಹಟ್ಟೀಗೆ ಹಿಡ್ಕೊಂಡವರಂತೆ. ನಿಮ್ಮನ್ನು ನೋಡ್ಬೇಕೂ ಅಂತ ರಾತ್ರಿಂದ್ಲೂ ಒಂದೇ ಸಮನೆ ಅಂತಾವ್ರಂತೆ. ಅದ್ಕೆ ನಿಮ್ಮ ಅರ್ಜೆಂಟಾಗಿ ಈಗಿಂದೀಗ್ಲೆ ಬರಾಕೆ ಹೇಳಿ ಹೊಂಟೋದ್ರು ........"

"ಅಯ್ಯೋ .......... ನನ್ನಕ್ಕನೇ ........ ಚೆಂದಾಗಿದ್ಯಲ್ಲಾ ಏನಾಯ್ತವ್ವ ನಿಂಗೇ .........." ಎಂದು ಒಂದೇ ಸಮನೆ ಲಬಲಬನೆ ಬಾಯಿಬಡಿದುಕೊಳ್ಳುತ್ತಾ. "ವಸಿ ತಾಳ್ದ ವಗ್ಗರಣೆ ಹಾಕಿವ್ನಿ. ಒಳಕ್ಕೆ ಬಾ, ನಾನ್ಹೋಗಿ ಬತ್ತೀನಿ ........." ಎಂದವಳೇ ಉಟ್ಟ ಬಟ್ಟೆಯಲ್ಲೇ ಹೊರಟುಬಿಟ್ಟಳು ಅತ್ತೆ.

ಸೊಸೆ ಸಡಗರದಿಂದ ಅಡಿಗೆಮನೆ ಹೊಕ್ಕಳು. ತಾಳದ ಮಾಡಿದಳು. ಅಡಿಗೆ ಮಾಡಿದಳು. ಗಂಡನಿಗೆ ಇಕ್ಕಿದಳು. ತಾನು ತಿನ್ನುವಾಗ ಯಾರಾದರೂ ಬಂದಾರೆಂದು ತಾಳದವನ್ನೆಲ್ಲಾ ತಪ್ಪಲೆಗೆ ತುಂಬಿದಳು. ನೀರಿಗೆ ಹೋಗುವವಳಂತೆ ಹೊರಟಳು. ಕೆರೆಯ ಪಕ್ಕದಲ್ಲಿ ಒಂದು ಕಾಳಿದೇವಿಯ ಗುಡಿ. ಅದರೊಳಕ್ಕೆ ನುಗ್ಗಿ ಬಾಗಿಲು ಹಾಕಿಕೊಂಡಳು. ತಪ್ಪಲೆ ತೆಗೆದು ಅದರಲ್ಲಿದ್ದ ತಾಳದವನ್ನೆಲ್ಲಾ ಗಬಗಬನೆ ತಿನ್ನಲು ಷುರುಮಾಡಿದಳು. ಅದನ್ನು ನೋಡುತ್ತಲೇ ಇದ್ದ ಕಾಳಿಕಾ ದೇವಿಗೆ ಅಪಾರ ಆಶ್ಚರ್ಯವಾಯಿತು. ಅಬ್ಬಾ ಎನ್ನಿಸಿತು. ಬೆರಗಿನಿಂದ ತನ್ನ ಬಲ ಗೈಯ್ಯನ್ನೆತ್ತಿ ಬಾಯಿಯ ಮೇಲೆ ಇಟ್ಟುಕೊಂಡಳು. ಸೊಸೆ ಇದೊಂದನ್ನೂ ಗಮನಿಸಲಿಲ್ಲ. ಮನಸಾರೆ ತಾಳದವನ್ನು ತಿಂದು ಠರ್ರನೆ ತೇಗಿ ಸಂತೃಪ್ತಿಯಿಂದ ಕೆರೆಗೆ ಹೋದಳು.

ನೀರನ್ನು ಹೊತ್ತುಕೊಂಡು ಮನೆಗೆ ಬಂದಾಗ ತಲೆಬಾಗಿಲು ಹಾಕಿತ್ತು.

ಅತ್ತೆ ಬಂದಿರುವಳೆಂಬುದು ಅವಳಿಗೆ ತಿಳಿದುಹೋಯಿತು. ಆದರೂ ಧೈರ್ಯದಿಂದಲೇ "ಬಾಗ್ಲು .... ಬಾಗ್ಲು ....." ಎಂದಳು. ಬಾಗಿಲು ತೆರೆಯಿತು. ಅತ್ತೆಯ ಕಣ್ಣಿನಲ್ಲಿ ಕಿಡಿ ಹಾರುತ್ತಿತ್ತು. ಒಳಗೆ ಬಂದು ತಪ್ಪಲೆ ಇಳಿಸಿದ್ದೇ ತಡ. ದಡದಡನೆ ಹತ್ತಾರು, ದೊಣ್ಣೆಯ ಏಟುಗಳು ಬೆನ್ನಿನ ಮೇಲೆ ಸೊಂಟದ ಮೇಲೆ ಬಿದ್ದುವು. "ಅಯ್ಯೋ ........" – ಎಂದು ಕಿರುಚಿ ನೆಲಕ್ಕುರುಳಿದಳು ಸೊಸೆ. "ಕಳ್ ನನ್ನ ಹಾ ....ನ ಮಗಳೇ, ದರದೇಶಿ ಮುಂಡೇ .... ಏಟ್ ದಿನದಿಂದ ಕಾಯ್ಕೊಂಡಿದ್ದೇ ಹಿಂಗ್ ಸುಳ್ ಹೇಳಾಕೇ .... ಈವತ್ತು ಅವ್ನು ಬರಲೀ, ನಿನ್ನ ಸಿಗ್ದು ತೋರಣ ಕಟ್ಟಿಸ್ತೀನಿ..... ಪಡ್ಲಕಾಯ್ ತಾಳ್ದಾನೆಲ್ಲ ಎಮ್ಮೆಹಂಗ್ ತಿಂದ್ಕೊಳಾನೆ

ಅಂತ ಈ ಪಳಾನ್ ಮಾಡಿದ್ದೀಯಾ ಕನನ್ ಸವತಿ" – ಮಾತಿನೊಂದಿಗೇ ಮುಖ ಮೈ ನೋಡದೆ ಏಟಿನ ಮಳೆ ಸುರಿಯಿತು; ಗಂಡ ಬಂದಮೇಲೆ ಅವನಿಂದಲೂ ವದೆಗಳು ಸಿಕ್ಕಿದವು.

೨

ಕಾಳಿಕಾದೇವಿಯ ವಿಗ್ರಹದ ಬಲಗೈ ಮೇಲೆದ್ದು ಬಾಯಿಮುಚ್ಚಿಕೊಂಡಿರುವ ಸುದ್ದಿ ಊರಿನಲ್ಲೆಲ್ಲಾ ಹರಡಿತು. ಸುತ್ತಮುತ್ತಿನ ಊರಿನವರೂ ಬಂದು ಈ ಚೋದ್ಯವನ್ನು ಕಂಡು ಬೆರಗಾಗಿ ಮನಸ್ಸಿಗೆ ಬಂದಂತೆ ವ್ಯಾಖ್ಯಾನ ಮಾಡುತ್ತಾ ಹೊರಟರು. ಎಲ್ಲರ ಮನಸ್ಸಿನಲ್ಲೂ ಭಯ, ಆತಂಕ, ಕುತೂಹಲ, ಊರಿಗೆ ಏನೋ ಕೇಡುಗಾಲ ಬಂದಿದೆಯೆಂದು ಎಲ್ಲರೂ ನಡುಗತೊಡಗಿದರು. ಗ್ರಾಮದಲ್ಲೆಲ್ಲಾ ಪೂಜೆಪುರಸ್ಕಾರಗಳು ನಡೆಯಲು ಆರಂಭವಾದುವು. 'ಏನೋ ಮಹಾತಾಯಿಗೆ ಮುಟ್‌ಚಿಟ್ ಆಗ್ಯದೆ ..... ಅದ್ಕೇ ಅವಳು ಬಾಯ್ ಮುಚ್ಕೊಂಡವ್ಳೆ. ಇನ್ನು ನಮ್ಮೂರಿಗೆ ಮಳೆ ಹುಯ್ಯಾಕಿಲ್ಲ; ಮಕ್ಳು ಹುಟ್ಟಾಕಿಲ್ಲ' ಎಂದು ಜನ ಭೀತಿಯಿಂದ ಕೊರಗತೊಡಗಿದರು. ಕಾಳಿಕಾದೇವಿಗೆ ಹಬ್ಬ ಮಾಡಿದರು, ಬಲಿಕೊಟ್ಟರು. ಯಾವುದೂ ಪ್ರಯೋಜನವಾಗಲಿಲ್ಲ. ಕೊನೆಗೆ 'ಯಾರಾದರೂ ಕಾಳಿಕಾ ದೇವಿಯ ಬಾಯಮೇಲಿನ ಕೈ ತೆಗೆಸಿದವರಿಗೆ ನೂರು ರೂಪಾಯಿ ಉಡುಗೊರೆ ಕೊಡ್ತೀವಿ' – ಎಂದು ಊರಿನಲ್ಲೆಲ್ಲಾ ಕುಳುವಾಡಿಯ ಕೈಯಲ್ಲಿ ಡಂಗುರ ಹೊಡೆಸಿ ಸಾರಿಸಿದರು. ಯಾರೂ ಮುಂದೆ ಬರಲಿಲ್ಲ.

ಸೊಸೆ ಅತ್ತೆಯ ಬಳಿಗೆ ಬಂದು ಹೇಳಿದಳು; "ಅತ್ತಮ್ಮ .... ನೀವು ಒಪ್ಕೊಳಿ 'ನಾವು ತಾಯಿ ಕೈ ತಗಸ್ತೀವಿ' ಅಂತ. ನಾನು ತಗಸ್ತೇನಿ." ಅತ್ತೆಗೆ ಅಪರಿಮಿತ ಆಶ್ಚರ್ಯವಾಯಿತು. "ಹೋಗೆ ಹೋಗೆ ದರವೇಶೀ ......... ನಿನ್ನ ಮೋರೆನೋಡು. ನಿನ್ನ ಮಾತು ಕಟ್ಕೊಂಡು ನಾನು ಮಾನ ಕಳ್ಕೋಬೇಕು ಅಷ್ಟೇಯ, ನೀನು ಮಹಾ ಪತಿವರ್ತೆ. ಯಾರ ಕೈಲೂ ಆಗ್ದೇ ಇರೋದು ನಿನ್ಕೈಲಾಯ್ತದೆ ........ ಅಲ್ವಾ ?" – ಎಂದು ಮೋರೆಗೆ ತಿವಿದಳು. ಹಾಗಾದರೂ ಸೊಸೆ ಬಿಡಲಿಲ್ಲ ; ಕೋಪಗೊಳ್ಳಲಿಲ್ಲ. ಬಲವಂತ ಮಾಡಿ ಒಪ್ಪಿಸಿದಳು.

ಸೊಸೆ ಕಸವನ್ನು ಹಾಕಿ ಮಂಕರಿ ಪೊರಕೆಗಳನ್ನು ಹಿಡಿದೇ ಕಾಳಿಕಾ ದೇವಾಲಯಕ್ಕೆ ಹೋದಳು. ಬಾಗಿಲು ಹಾಕಿದಳು. ಮಂಕರಿಯನ್ನು ಕೆಳಗಿಟ್ಟು ಪೊರಕೆಹಿಡಿದು ನಿಂತು ಕಾಳಿಕಾದೇವಿಗೆ ಸವಾಲು ಹಾಕಿದಳು: "ಅಲ್ಲಕಣೇ ಹೊಟ್ಟೆಕಿಚ್ಚಿನ ಮುಂಡೇ ..... ನಮ್ಮನೇ ಪಡ್ಲಕಾಯಿ ನಾನು ಹ್ಯಂಗಾರ ತಿಂತೀನಿ, ಏಟಾದರೂ ತಿಂತೀನಿ ನಿನಗ್ಯಾಕೆ ಕಣ್ಣುರಿ ? ನೀನೂ ಕೇಳಿದ್ರೆ ನಿಂಗೂ ಒಂದೀಟು ಕೊಡ್ತಿದ್ನ್ಯಲ್ಲಾ. ನಿನ್ನ ಮೊಕಕ್ಕೆ ಅಷ್ಟು ಬೆಂಕಿಹಾಕ, ನಿನ್ನ ಹೊಟ್ಟೆಗೆ ಸಿಡ್ಲು ಹೊಡೆಯಾ, ನಿನ್ನ ಕಣ್ಣಿಂಗಿ ಕಪಾಲ ಸಿಡಿಯಾ !..... ಕೈ ತಗೀತೀಯೋ, ಹುಣ್ಸೆ ಬರ್ಲಲ್ಲಿ ಹೊಡಿಯಾನೋ ...... ಹ್ಞೂ........" ಒಂದೆರಡು ಗಳಿಗೆ ಯಾವ ಬದಲಾವಣೆಯೂ ಆಗಲಿಲ್ಲ. ಸೊಸೆಯೇ ಕಾಳಿಯಾದಳು. ಹುಣಿಸೆಯ ಬರಲಲ್ಲಿ ರಪರಪನೆ ಕಾಳಿಕಾದೇವಿಯ ಮುಖಕ್ಕೆ ಬಡಿದಳು. 'ಅಯ್ಯೋ ..... ' ಎಂದಳು ಕಾಳಮ್ಮ. ಬಾಯಿಯ ಮೇಲಿನಿಂದ ಕೈತೆಗೆದಳು. ಮಂಕರಿ ಬರಲನ್ನು ಕಂಕುಳಲ್ಲಿ ಇರಿಕಿಕೊಂಡು ಯಥಾ ಪ್ರಕಾರ ಸೊಸೆ ಮನೆ ಸೇರಿ ತಾನು ಕಾಳಿಕಾದೇವಿಯ ಕೈ ತೆಗೆಸಿದ್ದೇನೆಂದು ಅತ್ತೆಗೆ ಹೇಳಿದಳು.



ಊರಲ್ಲೆಲ್ಲಾ ಸುದ್ದಿಹರಡಿತು. ಜನ ಗುಂಪುಗುಂಪಾಗಿ ದೇವಾಲಯದ ಬಳಿ ಬಂದು ನೋಡಿದರು; ತಮ್ಮ ಕಣ್ಣನ್ನು ತಾನೇ ನಂಬದಾದರು. ಸೊಸೆ 'ಮಹಾ ಪತಿವರ್ತೆ'ಯೆಂದು ಕೊಂಡಾಡಿದರು. ನೂರು ರೂಪಾಯಿಯ ಬಹುಮಾನವನ್ನು ಸೊಸೆಗ ಕೊಡಲಾಯಿತು.

ಅತ್ತೆಗೆ ಈ ಪ್ರಸಂಗದಿಂದ ತುಂಬ ಭಯವಾಯಿತು. ತಾನು ಇದುವರೆಗೂ ಅವಳನ್ನು ಗೋಳು ಹೊಯ್ದು ಕೊಂಡದ್ದರಿಂದ ಒಂದಲ್ಲ ಒಂದು ದಿನ ತನಗೂ ಸರಿಯಾದ 'ಸಾಸ್ತಿ' ಮಾಡದೇ ಅವಳು ಬಿಡುವುದಿಲ್ಲವೆಂದು ಭಾವಿಸಿ ದಿಗಿಲುಗೊಂಡಳು.

ಆದಿನ ಅಮಾವಾಸ್ಯೆಯ 'ಕಾರಂದ ಕತ್ತಲೆ', ನಡುರಾತ್ರಿ. ತಾಯಿ ಮಕ್ಕಳಿಬ್ಬರೂ ಎದ್ದು ಪಿಸ ಪಿಸನೆ ಮಾತಾಡಿದರು.

'ಲೋ ಮಗಾ .... ಕಾಳಮ್ಮನ್ನೊರ್ನೇ ಹೆದರಿಸಿ ಕೈ ತೆಗೆಸಿದೋಳು ನಮ್ಮನ್ನ ಬುಡಾಕಿಲ್ಲ ಕನೋ. ಇಲ್ಲಗಂಟ ಅವಳ್ನ ನಾವು ಗೋಳಾಡ್ಸೀವಿ. ಅದ್ಕೆ ಸೇಡುತೀರಿಸ್ಕೊಳ್ದೇ ಅವ್ಳು ಇರಾಕಿಲ್ಲ. ನನ್ನೂ ನಿನ್ನೂ ಇಬ್ಬರನ್ನೂ ಸಾಯಿಸ್ತಾಳೆ. ಏನ್ಮಾಡೋದೋ? ......"

"ನಂಗೊಂದೂ ಗೊತ್ತಾಗಾಕಿಲ್ಲ ........ ಏನ್ಮಾಡೋದು ನೀನೆ ಹೇಳವ್ವ"– ಪುಕ್ಕಲುಮಗ ಹೇಳಿದ.

"ಈಗ ಹ್ಯಂಗೂ ಮನಗ್ಯವಳೆ. ಸ್ಯಾಪೆ ಸಮೇತ ಸುತ್ಕೊಂಡು ಹೋಗಿ ನಮ್ಮ ಬೋರೆ ಹೊಲದ ಹಳ್ಳದಲ್ಲಿ ಮನಗಿಸಿ ಸುಟ್ಬುಡೋದು ...... ನಿಂಗೆ ಬ್ಯಾರೊಬ್ಬಳು ಚಂದುಳ್ಳಿ ಹೆಣ್ತಂದು ಮದ್ವೆ ಮಾಡ್ತೀನಿ .... ಏನ್ ಹೇಳ್ತೀಯಾ ?"

"ಹೂ, ಕನವ್ವಾ ನೀ ..... ಹೇಳ್ದಂಗೇ ಮಾಡಾನೇ"

ತಾಯಿಮಗ ಇಬ್ಬರೂ ಮೆಲ್ಲನೆ ಬಂದು ಮಲಗಿದ್ದ ಸೊಸೆಯ ಬಾಯಿಗೆ

ಬಲವಾಗಿ ಬಟ್ಟೆತುರುಕಿದರು. ಇವರು ತನ್ನನ್ನು ಏನೋ ಮಾಡುತ್ತಾರೆ ಎಂದು ತಿಳಿದರೂ ಮಿಸುಕಾಡದೆ ಧೈರ್ಯ ತಂದುಕೊಂಡು ಸುಮ್ಮನಾದಳು ಸೊಸೆ. ಚಾಪೆಸಹಿತ ಅವಳನ್ನು ಸುತ್ತಿ ಇಬ್ಬರೂ ಹೊತ್ತುಕೊಂಡು ಊರಾಚೆಯ ಹಳ್ಳದ ಬಳಿಗೆ ಬಂದರು. ಅಲ್ಲಿ ಉಡುಬೆ ಬೆಳೆದುನಿಂತಿತ್ತು. ಅಲ್ಲಿ ಚಾಪೆಯನ್ನು ಕೆಳಕ್ಕೆ ಇಳಿಸಿ ಆ ಕತ್ತಲೆಯಲ್ಲೇ ಇಬ್ಬರೂ ಸೌದೆ ಪುಳ್ಳೆಗಳನ್ನು ತರಲು ಹೋದರು. ಅವರು ದೂರವಾದ ಮೇಲೆ ಸೊಸೆ ಅತ್ತಿತ್ತ ಬಲವಾಗಿ ಉರುಳಿದಳು. ಚಾಪೆ ಸಡಿಲವಾಯಿತು. ಅಲ್ಲಿಂದ ಹೊರಕ್ಕೆ ಚಿಮ್ಮಿ ಕಟ್ಟಿದ್ದ ಕೈಗಳನ್ನು ಬಲವಾಗಿ ಅಲುಗಾಡಿಸಿ ಕಿತ್ತಳು. ಬಾಯಿಯ ಬಟ್ಟೆಯನ್ನು ತೆಗೆದಳು. ಸ್ವಲ್ಪ ದೂರ ಹೋಗಿ ಅಲ್ಲಿಂದ ಒಂದು ಕೊಂಟನ್ನು ತಂದು ಅದಕ್ಕೆ ಚಾಪೆಯನ್ನು ಸುತ್ತಿದಳು. ಹಾಗೆಯೇ ತುಸುದೂರ ನಡೆದು ಅಲ್ಲಿದ್ದ ಒಂದು ಆಲದ ಮರವನ್ನು ಹತ್ತಿ ಮೇಲೇರಿ ಎಲೆಗಳ ಮರೆಯಲ್ಲಿ ಕುಳಿತಳು.

ತಾಯಿ ಮಗ ಇಬ್ಬರೂ ಆತುರ ಆತುರವಾಗಿ ತಂದ ಪುಳ್ಳೆ.ಯನ್ನು ಆ ಸುತ್ತಿದ್ದ ಚಾಪೆಯ ಮೇಲೆ ಒಟ್ಟಿ ಅದರ ಮೇಲೆ ದಪ್ಪ ದಪ್ಪ ಸೌದೆಗಳನ್ನು ಹಾಕಿ ಬೆಂಕಿ ಹಚ್ಚಿದರು. ಸುತ್ತಮುತ್ತಲಿದ್ದ ಹಂಚಿಯ ಹುಲ್ಲನ್ನು ತಂದು ಅದರ ಮೇಲೆ ರಾಶಿ ಹಾಕಿದರು. ಬೆಂಕಿ ದಗ ದಗನೆ ಉರಿಯಿತು. ಇಬ್ಬರೂ ಸುಮಾರು ದೂರಹೋಗಿ ಕುಳಿತರು. ಬೆಂಕಿ ಉರಿಯಿತು, ಉರಿಯಿತು. ಸಣ್ಣ ಸಣ್ಣ ಸೌದೆಗಂಟುಗಳು ಸಿಡಿದು ಶಬ್ದಮಾಡಿದಾಗ 'ಮೂಳೆಗಳು ಸಿಡಿಯುತ್ತಿವೆ' ಎಂದುಕೊಳ್ಳುತ್ತಿದ್ದರು. ಕೊನೆಗೊಮ್ಮೆ ಒಳಗಿದ್ದ ಕೊಂಟಿನ ದೊಡ್ಡ ಗಂಟು ಬೆಂಕಿ ಹತ್ತಿ ಸಿಡಿದಾಗ ಜೋರಾಗಿ ಬಂದೂಕ ಹೊಡೆದಂತೆ ಶಬ್ದವಾಯಿತು. ಆಗ ತಲೆ ಸಿಡಿಯಿತೆಂದು ಸಮಾಧಾನಪಟ್ಟು ಕೊಂಡರು ತಾಯಿ ಮಗ. ಬೆಳಗಾಗುವ ಸಮಯವಾಗಿತ್ತು. ಇಬ್ಬರೂ ಊರಿಗೆ ಹೋದರು.

೩

ಆಲದ ಮರದ ಮೇಲೆ ಸೊಸೆ ಕುಳಿತೇ ಇದ್ದಾಳೆ. ಅದೇ ಮರದ ಕೆಳಕ್ಕೆ ನಾಲ್ಕು ಜನ ಕಳ್ಳರು ಬಂದರು. ಒಬ್ಬ ಸಾಹುಕಾರನ ಮನೆಗೆ ಕನ್ನ ಹಾಕಿ ಅಪರಿಮಿತವಾದ ಚಿನ್ನದ ಒಡವೆಗಳು, ಹಣ ಎಲ್ಲವನ್ನೂ ತಂದು ಹಂಚಿಕೊಳ್ಳಲು ಅಲ್ಲಿ ಕುಳಿತರು. ದೂರದಲ್ಲಿ ಬೆಂಕಿ ಉರಿಯುತ್ತಿದ್ದರಿಂದ ಅಲ್ಲಿ ಯಾರಾದರೂ ಇರುವರೇನೂ ಎಂದು ನೋಡಲು ಆ ಮರದ ಮೇಲಕ್ಕೆ ಏರಿ, ಸೊಸೆ ಕುಳಿತಿದ್ದ ಕೊಂಬೆಗೇ ಬಂದ. ಅಲ್ಲಿ ಯಾರೋ ಕುಳಿತಿದ್ದುದು ಕಾಣಿಸಿತು. "ಯಾರದು?" – ಎಂದ. ಮೆಲ್ಲಗೆ ಮೃದುವಾಗಿ "ಷ್ ... ಕೂಗ ಬ್ಯಾಡ. ನಾನೊಬ್ಬಳು ದೇವಕನ್ಯೆ. ನಿನ್ನನ್ನು ಮದುವೆಯಾಯ್ತೀನಿ ..... ನಿಂಗೆ ಬೇಕಾದಷ್ಟು ಐಸ್ವಿರಿ ಕೊಡ್ತೀನಿ ಸುಮ್ನಿರು ...!" ಎಂದಳು. ಕಳ್ಳನಿಗೆ ಸ್ವರ್ಗವೇ ಕೈಗೆ ಸಿಕ್ಕಿದಂತಾಯಿತು; ದೇವೆಂದ್ರನ ಬಿಳಿಯಾನೆಯೇ ಇಳಿದಂತಾಯಿತು. ಅವಳ ಕೈಯನ್ನು ಹಿಡಿದು "ನಿಜವಾ?" – ಎಂದ. "ಹ್ಞೂ..." ಎಂದು ತನ್ನ ಎಲೆಯಡಕೆಯ ಚಂಚಿಯನ್ನು ಬಿಚ್ಚಿ ಅವನಿಗೆ ವೀಳಯ ಕೊಟ್ಟು ತಾನೂ ಹಾಕಿಕೊಂಡಳು. ಆತ ಅವಳನ್ನು ಮುದ್ದಿಸಲು ಬಂದ. ಆಕೆ ಕೊಸರಿ 'ನೋಡು. ನಾವು ಇನ್ನೂ ಗಂಡ ಹೆಂಡಿರಾಗಿಲ್ಲ. ನೀನು ನಿನ್ನ ಬಾಯ ತಾಂಬೂಲಾನ ನಾಲಿಗೇಲಿ ನನ್ನ ಬಾಯಿಗೆ ಹಾಕು. ಹಂಗೆ ನಿನ್ನ ಎಂಜಲು ತಿಂದ ಮೇಲೆ ನಾನು ನಿನ್ನ ಹೆಂಡ್ತಿಯಾಯ್ತೀನಿ. ತಿಳೀತಾ ?" – ಎಂದಳು. ಆತ ಸಂತೋಷಪರವಶನಾಗಿ ತನ್ನ ಬಾಯ ತಾಂಬೂಲವನ್ನು ನಾಲಿಗೆ ತುದಿಯಲ್ಲಿಟ್ಟು ನೀಡಿ ಅವಳ ಬಾಯಿಗೆ ಹಾಕಿದ. ಕೂಡಲೇ ಅಕೆ ಬಲವಾಗಿ ಅವನ ನಾಲಿಗೆಯನ್ನು ಕಚ್ಚಿಬಿಟ್ಟಳು. ಕೈತಪ್ಪಿ ಕೆಳಕ್ಕೆ ಬಿದ್ದ. ಕೆಳಗಿದ್ದ ಕಳ್ಳರು ಗಾಬರಿಯಾಗಿ ಓಡತೊಡಗಿದರು. ಬಿದ್ದವನು ಸರಿಯಾಗಿ ಮಾತನಾಡಲು ನಾಲಿಗೆ ಹೊರಳದೆ "ದದದದ . ದ ದದದದಾ ...." – ಎಂದು ಅಸಂಬದ್ಧವಾಗಿ ತೊದಲುತ್ತಾ ಅವರ ಹಿಂದೆಯೇ ಓಡತೊಡಗಿದ. – ಅವರಿಗೆ ಮತ್ತೂ ಭಯವಾಗಿ ಜೋರಾಗಿ ಚೆಲ್ಲಾಪಿಲ್ಲಿಯಾಗಿ ಓಡಿದರು ಅವರು ಮುಂದೆ; ಅವನು ಹಿಂದೆ.

ಬೆಳಗಾಯಿತು. ಸೊಸೆ ಮರದಿಂದ ಕೆಳಗೆ ಇಳಿದು ನೋಡುತ್ತಾಳೆ ! ಚೆಲ್ಲಾ ಪಿಲ್ಲಿಯಾಗಿ ಬಿದ್ದಿದ್ದ ಹಣ, ಒಡವೆ ವಸ್ತುಗಳು ! ಬೇಗ ಬೇಗ ಅವುಗಳನ್ನು ತೆಗೆದುಕೊಂಡು ಗಂಟುಕಟ್ಟಿಕೊಂಡು ನೇರವಾಗಿ ಮನೆಗೆ ಬಂದಳು.

"ಅತ್ತೇ ..... ಅತ್ತೇ ಬಾಗಿಲು ತಗೀರೀ ...."

– ಅತ್ತೆ ಗಾಬರಿಯಾಗಿ ನಡಗುತ್ತಾ ಬಂದು ಬಾಗಿಲು ತೆಗೆದಳು. ಎದುರಿಗೆ ನಗುತ್ತ ನಿಂತಿರುವ ಸೊಸೆ ! ಅವಳಿಗೆ ದಿಗ್ಭ್ರಾಂತಿಯಾಗಿ ಜ್ಞಾನ ತಪ್ಪಿ ಕೆಳಕ್ಕೆ ಕುಸಿದಳು. ಸೊಸೆ ಅವಳನ್ನು ನಡುಮನೆಗೆ ತಂದು ತಣ್ಣೀರೆರಚಿ ಗಾಳಿ ಹಾಕಿದಳು. ಪ್ರಜ್ಞೆ ಬಂದು ಕಣ್ಣುಬಿಟ್ಟಳು. ಪಕ್ಕದಲ್ಲಿ ಮಗ ಏನೂ ತೋರದೆ ನಿಂತಿದ್ದ.

"ನೀನು ಮತ್ತೆ ಹ್ಯಾಗೆ ಬಂದೆ ?"

"ನೀವು ನನ್ನ ಸುಟ್ಟಮ್ಯಾಲೆ ಯಮದೂತರು ನನ್ನ ಮೇಲೋಕಕ್ಕೆ ಕರ್ಕೊಂಡು ಹೋದರು. ಅಲ್ಲಿ ಯಮಧರ್ಮರಾಯ ನಮ್ಮೂರ ಮಾರಮ್ಮನಂಗೆ ಉರಿಯೋ ಕೆಂಡದಂಥ ಕಣ್ಬುಟ್ಟು "ಇವಳನ್ನು ಹಿಂದಕ್ಕೆ ಕಳಿಸಿ. ಇವ್ರತ್ತೆ ಮಹಾಪಾಪಿ. ಅವಳನ್ನು ಎಳ್ಕೋಬಂದು ಕಬ್ಬಿಣದ ಕಾಗೆಕೈಲಿ ಕೀಳಿಸಿ. ಸುಡೋ ಎಣ್ಣೆ ಬಾಣಲೇವಳ್ಗೆ ಅವಳ್ನ ಅದ್ದಿ ತಗೀರಿ ....' ಹಂಗೆ ಹಿಂಗೆ ಅಂತ ಕೂಗಾಡ್ಬುಟ್ರು. ನಾನು

ಕೈಮುಗಿದು 'ಸ್ವಾಮಿ ಹಂಗ್ಮಾಡ್ಬ್ಯಾಡಿ. ನಮ್ಮತ್ತೆ ತುಂಬಾ ಒಳ್ಳೇರು. ಬೇಕಾದ್ರೆ ನನ್ಗೆ ಯಾವ ಶಿಕ್ಷೆನಾದ್ರೂ ಕೊಡಿ. ಅವರ್ನ ಮಾತ್ರ ಕರೆಸಿ ಹಿಜ ಮಾಡ್‌ಬ್ಯಾಡಿ .....' ಅಂತ ಬೇಡ್ಕೊಂಡೆ. ಆಗ ಯಮಧರ್ಮರಾಜರು ಸಂತೋಸ್ಪಟ್ಟು 'ಹೊಂಟೋಗು .... ನೀನು ಹೇಳಿದ ಹಂಗೇ ಆಗ್ಲಿ. ನಿನ್ನ ಅತ್ತೆ ಏನಾದ್ರೂ ಮತ್ತೆ ನಿನಗೆ ಹಿಂಸೆ ಕೊಟ್ರೆ ಅವಳ್ನ ಎಳ್ದು ತರಿಸ್ತೀನಿ. ನನ್ನ ದೂತರು ಅವಳ್ನ ಯಾವಾಗ್ಲು ಕಾಯ್ತ ಇರ್ತಾರೆ' ಅಂತ ಹೇಳಿ ಈ ಹಣ ಒಡವೆಯಲ್ಲಾ ಕೊಟ್ಟು ಕಳ್ಸಿದ್ರು ....."

ಅತ್ತೆ ಗಾಬರಿಯಿಂದ, ಭಯದಿಂದ ಸೊಸೆಯನ್ನು ತಬ್ಬಿಕೊಂಡಳು.

"ಅಯ್ಯೋ ನೀನು ನಮ್ಮನೇ ದೇವ್ತೆಕಣವ್ವ, ನನ್ನ ಬದಕಿಸ್ದೆ ಕಣವ್ವ .... ನಾನು ಇನ್ಮೇಲೆ ನೀನ್ ಹೇಳಿದಂತೆ ಕೇಳ್ಕೊಂಡಿರ್ತೀನಿ ..... ನಿನ್ನ ದಮ್ಮಯ್ಯ ..... ನಾನು ಮಾಡಿದ್ನೆಲ್ಲಾ ಮರತುಬಿಡು .... ಏನವ್ವಾ ....." – ಎಂದು ಮತ್ತೆ ಸೊಸೆಯ ಗಲ್ಲವನ್ನು ಹಿಡಿದು ಮುದ್ದಿಸಿದಳು.

ಸೊಸೆ ಮನೆಯ ಯಜಮಾನಿಯಾದಳು. ತಾಯಿ ಮಗ ಅವಳು ಹೇಳಿದಂತೆ ಕೇಳಿಕೊಂಡು ಸುಖವಾಗಿದ್ದರು.

* * * *



## ಗುರುವ ಗುರುವಾದ*

ಸೌಟು ಶೂದ ಅನ್ನೋ ಗ್ರಾಮ. ಅದು ಗದ್ದೆಹಳ್ಳಿ. ಅಲ್ಲಿ ಒಬ್ಬ ಹಂದಿಚಿಕ್ಕ ವಾಸವಾಗಿದ್ದ. ಅವನ ಹೆಸರು ಗುರುವ. ಅವನು ದಿನಾ ರಸ್ತೇಲಿ ಹಂದಿ ಅಟ್ಟಿಕೊಂಡು ಹೋಯ್ತಿದ್ದ. ಅಲ್ಲೆಲ್ಲಾ ಬಾಯಾಡಿಸಿಕೊಂಡು ಮನೆಗೆ ಬತ್ತಿದ್ದ. ಅವನು ದಿನಾ ಬರೋ ರಸ್ತೇವತ್ತೀಲಿ ಗದ್ದೆಗಳಿದ್ದೊ. ಅದು ಅಟ್ಲುಗದ್ದೆ ಕಾಲ. ಆ ಗದ್ದೇಲಿ ಒಬ್ಬ ದಿನಾ ಬದ ಕೆತ್ತುತಾ ಇರ್ತಿದ್ದ. ಅವನೋ ಬಾಳ ಎಲಡಕೆ ತೆವಲುಗಾರ. ದಿನಕ್ಕೆ ಒಂದು ಕಟ್ಟು ಎಲೆ, ಒಂದು ಪಡಿ ಅಡಕೆ, ಒಂದು ಪಡಿ ಕಡ್ಡೀಪುಡಿ ಆದ್ರೂ ಅವನಿಗೆ ಸಾಕಾಯ್ತಿರ್ಲಿಲ್ಲ. ಹೊತ್ತಾರೆ ಎದ್ದು ಗದ್ದೆಗೆ ಬರುವಾಗ ಮಗ್ಗಲು ಜೋಬಿ ಒಳಜೋಬಿ ಎಲ್ಲಾನೂ ತುಂಬಿಕೊಂಡು ಬತ್ತಿದ್ದ. ಬದ ಅಗೆಯೋದು, ಎಲಡಕೆ ಅಗಿಯೋದು ಉಗಿಯೋದು ಹಿಂಗೇ ಮಾಡಿ ಗುರುವ ಬರೋ ಹೊತ್ಗೆ ತಾನು ತಂದದ್ನೆಲ್ಲಾ ಬುಕ್ಕಿಬುಡುತ್ತಿದ್ದ. ಗುರುವನೂ ಏನಾತಿ ತೆವಲುಗಾರನೇ. ಅವನ ಸೊಂಟದಲ್ಲಿ ಯಾವಾಗಲೂ ಒಂದು ಒತ್ತೋಳುದ್ದದ ಕಡ್ಡೀಪುಡಿ ಚೀಲ ನ್ಯಾತಾಡ್ತಿತ್ತು. ಹೊಗೇ ಕಡ್ಡೀ ಜೊತೆಗೆ ಅವರಿಕೆ ಚಕ್ಕೆ ಅದೂ ಇದೂ ಸೇರಿಸಿ ಪಸಂದಾಗಿ ಪುಡಿ ಮಾಡ್ತಿದ್ದ. ಅವನು ರಸ್ತೇಲಿ ಬರೋ ಹೊತ್ತಿಗೆ ಸರಿಯಾಗಿ ಬದಾ ಕೆತ್ತೋನು "ಒಂದಿಷ್ಟು ಕಡ್ಡಿಪುಡಿ ಕೊಡೋ ಗುರುವ" ಅಂತಿದ್ದ. ಗುರುವ ಒಂದು ದಿನ ಕೊಟ್ಟ. ಅವನ ಹಲ್ಲಿಗೆ ರಸ ಇಳೀತು. ದಿನಾ ಕೇಳಾಕೆ ಮುಟ್ಟಿಕೊಂಡ.

ಇನ್ನೊಂದು ಪಟ್ಟಣ. ಅಲ್ಲೊಬ್ಬ ದೊರೆ. ಅವನೋ ಶತದಡ್ಡ. ಅವನಿಗೆ ತನ್ನ ಗುರು ಯಾರೂ ಅಂತ ಗೊತ್ತಿರ್ಲಿಲ್ಲ. ಅವನಿಗೆ ಒಬ್ಬ ಮಗ ಇದ್ದ. ಅವನಿಗೆ ಹೆಣ್ಣು ತರಬೇಕೂ ಅಂತ ಹೊಂಟ. ಅಲ್ಲಿ ಇಲ್ಲಿ ದೇಸ ದೇವಾಲ್ಯ ಎಲ್ಲಾನೂ ಸುತ್ತಿದ. ಅಲ್ಲೊಬ್ಬ ರಾಜನಿಗೆ ಸುಂದರಿ ಅಂತ ಒಬ್ಬಳು ಮಗಳಿದ್ದಳು. ಅವಳನ್ನೇ ತರಬೇಕೂ ಅಂತ ಅವನಿಗೆ ಚಪಲ ಹತ್ತಿತು. ಆ ರಾಜನ ಅರಮನೆಗೆ ಹೋದ. ಉಂಡ ಉಟ್ಟ. ಎಲಡಕೆ ಹಾಕ್ತಾ ಎಲ್ಲಾ ಕೂತುಕೊಂಡ್ರು. ಆಗ ಈ ರಾಜ

* ಹೇಳಿದವರು; ಕೃಷ್ಣರಾಜನಗರ ತಾಲ್ಲೂಕು ಬಡಗನಕೊಪ್ಪಲಲ್ಲಿರುವ ಕಂಟ್ರಾಕ್ಟರ್ ಜವರೇಗೌಡ

ಆ ರಾಜನಿಗೆ "ನಿನ್ನ ಮಗಳನ್ನ ನನ್ನ ಮಗನಿಗೆ ಕೊಡ್ಬೇಕು" ಅಂದ. ಅದಕ್ಕೆ ಅವನು "ಆಗಲಿ ಅದ್ಕೇನಂತೆ. ಋಣ ಇದ್ರೆ ತಪ್ಸಾಕಾಯ್ತದ ? ಹಣ್ಣಿರೋ ಮರಕೆ ನಾಕು ಗಿಣಿಬಂದ್ರೆ ಋಣ ಇದ್ದದ್ಕೆ ಸಿಕ್ತದೆ. ಅದ್ಕೇನು ? ಕುಲಗೋತ್ರ ನಕ್ಷತ್ರ ಎಲ್ಲಾ ಹೊಂದಿದರೆ ಆಗಲಿ. ಮೊದ್ಲು ನಿಮ್ಮ ಗುರು ಯಾರು ಹೇಳು?" ಅಂದ. ಈ ರಾಜನಿಗೆ ಬಾಯಿ ಕಟ್ಟಿಹೋಯ್ತು. ನೆಲ ಬಗೆದು ಹೊಕ್ಕೊಳ್ಳೋವಷ್ಟು ಅವಮಾನವಾಯಿತು. "ನಂಗೊತ್ತಿಲ್ಲ, ಕೇಳಿಕೊಂಡು ಬಂದು ಹೇಳ್ತೀನಿ" ಅಂದುಬುಟ್ಟು ತನ್ನ ಊರಿಗೆ ಗಾಡಿಬುಟ್ಟ.

ರಾಜನಿಗೆ ಅದೇ ಚಿಂತೆ ಹಿಡೀತು. ಹಾಸಿಗೆ ಹಿಡಿದು ಮಲಗಿ ಬುಟ್ಟ. ಮಂತ್ರಿ ಬಂದು ಕೇಳಿದ: "ಯಾಕ್ ದೊರೆಗಳೇ ಹಿಂಗೆ ಮುಸುಕು ಹಾಕಿ ಮಂಚದ ಮ್ಯಾಲೆ ಪವಡಿಸಿದ್ದೀರಿ" ಅಂತ. "ಅಯ್ಯೋ ಅದ ನೀನು ಹಾರಿಸ್ತೀಯೋ ತೀರಿಸ್ತಿಯೋ ?" ಅಂದ ರಾಜ. ಅದಕ್ಕೆ ಮಂತ್ರಿ "ನಾನು ಹಾರಿಸೋದಾದ್ರೆ ಹಾರಿಸ್ತೀನಿ ತೀರಿಸೋದಾದ್ರೆ ತೀರಿಸ್ತೀನಿ, ಅದೇನು ಅಪ್ಣೆ ಕೊಡಿ" ಅಂದ. ರಾಜ "ಗುರು ಅಂದ್ರೆ ಯಾರು ? ನಂಗೊಬ್ಬ ಗುರು ತಂದ್ಕೊಡು. ಇಲ್ದೇ ಹೋದ್ರೆ ಈ ಅವಮಾನದಲ್ಲಿ ನಾನು ಪರಾಣ ಬುಟ್ಬುಡ್ತೀನಿ" ಅಂದ. "ಓ, ಇದೇನು ಮಹಾ ಸಾಮ್ರಾಜ್ಯವಾ ? ನಾನು ಗುರು ಕರ್ಕೊಂಬತ್ತೀನಿ ಸುಮ್ನಿರಿ. ಎದ್ದು ಊಟಾ ಮಾಡಿ" ಅಂತ ಹೇಳಿ ಮಂತ್ರಿ ಮನೆಗೆ ಹೋದ. ಊಟಗೀಟ ತೀರಿಸ್ಕೊಂಡ. ದಿರಸು ಧರಿಸಿಕೊಂಡ. ಕುದುರೆ ಮೇಲೆ ಏರಿ ಚಂದ್ರಾಯ ಹಿಡಕೊಂಡು ಗುರು ಹುಡೀಕ್ಕೊಂಡು ಹೊರಟ. ಊರೂರು ಸುತ್ತಿದ. ಮಟಮಟ ಮಧ್ಯಾನ. ಹನ್ನೆರಡು ಗಂಟೆ ಸಮಯ. ಮಂತ್ರಿ ರಸ್ತೇಲಿ ಕುದುರೆ ಬುಟ್ಟುಕೊಂಡು ಬತ್ತಿದ್ದ. ಅದೇ ಸಮಯಕ್ಕೆ ಸರಿಯಾಗಿ ಗುರುವ 'ಗೂಟಿ ಗೂಟಿ ಹಚ್ ಹಚ್ ಹಚ್' ಅಂತ ಹಂದಿ ಹೊಡ್ಕೊಂಡು ರಸ್ತೇಲಿ ಹೋಯ್ತಿದ್ದ. ಗದ್ದೆ ಬದ ಕೆಕ್ತಾ ಇದ್ದೋನು "ಒಂದಿಷ್ಟು ಕಡ್ಡೀಪುಡಿ ಕೊಡೋ ಗುರುವಾ" ಅಂದ. ಆ ಮಾತ ಕೇಳ್ತಿದ್ದ ಹಂಗೇ ಮಂತ್ರಿ ಗಕ್ಕನೆ ಕುದುರೆಯಿಂದ ಕೆಳಕ್ಕೆ ಇಳಿದ. "ಲೋ ಹಂದಿ ಚಿಕ್ಕ, ನಿಂತ್ಕೊಳ್ಳೋ" ಅಂದ. ಗುರುವ ಕುಮಕ ಹಿಡಿದೋನಂಗೆ ನಿಂತ್ಕೊಂಡ. ನಾಲಿಗೇಲಿ ತುಟಿ ಸವರಿಕೊಂಡು,

"ಅದೇನು ಹೇಳ್ರಪ್ಪಾ ....... ನನ್ನ ಹಂದಿ ಹೋಗಿಬುಡ್ತವೆ" ಅಂದ.

"ನಿನ್ನ ಹೆಸರೇನೋ?" ಅಂದ ಮಂತ್ರಿ.

"ನನ್ನ ಹೆಸ್ರು ಗುರುವಾ ಅಂತ ಕರೀತಾರೆ ಬುದ್ಧೀ"

"ನಿನ್ನ ಹಂದಿ ಓಡ್ಸೋ ಅತ್ಲಾಗಿ"



"ಅಯ್ಯಯ್ಯೋ ಶಿವ್ನೆ, ಅದ್ಯಾಕೆ ಓಡಿಸ್ಲಿ ಬುದ್ಧಿ. ಅದರಿಂದ್ಲೇ ನನ್ನ ಜೀವನ".

"ಏಯ್ ಪುರಾಣ ಓದಬ್ಯಾಡ, ನಾನು ಹೇಳಿದಂಗೆ ಕೇಳು. ಹಂದಿ ಓಡ್ಸು. ಕುದ್ರೆ ಹತ್ತಿ ಹಿಂದ್ಗಡೆ ಕೂತ್ಕೋ. ಇಲ್ದೇ ಇದ್ರೆ ನಿನಗೆ ತಕ್ಕದ್ದು ಮಾಡ್ತೀನಿ ನೋಡು" ಅಂತ ಮಂತ್ರಿ ಜಬರುದಸ್ತು ಮಾಡಿದ. ಗುರುವನಿಗೆ ಕೈಕಾಲೆಲ್ಲಾ ನಡುಗಾಕೆ ಹತ್ತಿಕೊಂಡೊ. ತೊಡೇ ಮೇಲೇ ಒಂದ ಮಾಡ್ಕೊಂಡ್ ಬುಟ್ಟ. ಕೊದ್ ಕೊದ್ಲಸ್ತಾ "ನಾನೇನು ತಪ್ಪು ಮಾಡಿವ್ನಿ ಬುದ್ಯೋರಾ ?" ಅಂದ. "ಅದೆಲ್ಲಾ ಪುರಾಣ ಬ್ಯಾಡ, ಬಾಯ್ಮುಚ್ಕೊಂಡು ಹೇಳಿದಂಗೆ ಕುದ್ರೆ ಹತ್ತೀಯೋ, ಇಲ್ಲಾ ಲಾತ ಬೀಳ್ಬೇಕೋ ?" ಅಂತ ಮಂತ್ರಿ ಇನ್ನೂ ಜೋರು ಮಾಡಿದ. ಗುರುವ ಕಷ್ಟ ಪಟ್ಕೊಂಡು ಕುದ್ರೆ ಹತ್ತಿ ಮಂತ್ರಿ ಹಿಂದೆ ಕೂತುಗೊಂಡ. ಕುದುರೆ ದಡಕ್ಕನೆ ಮುಂದಕ್ಕೆ ಹೆಜ್ಜೆ ಹಾಕಿದಾಗೆಲ್ಲಾ ಗುರುವ ಅತ್ಲಾಗಿ ಇತ್ಲಾಗಿ ಜಾರಿಕೊಂಡು 'ಅಯ್ಯಯ್ಯೋ' ಅಂತ ಮಂತ್ರಿ ಸೊಂಟಾವ ಬಾಚಿ ಬಿಗಿಯಾಗಿ ತಬ್ಬಿಕೊಂಡು ಬುಡೋನು. "ಕಳ್ಳ ಬಡ್ಡೀ ಮಗನೆ. ಸರಿಯಾಗಿ ಬಿಗಿಯಾಗಿ ಕೂತ್ಕೊಳ್ಳೋ. ಕಳ್ಳಾಟ ಆಡ್ತೀಯಾ ಲವಡೀ ಮಗನೇ" ಅಂತ ಮಂತ್ರಿ ಬಾಯಿಗೆ ಬಂದಂಗೆ ಬೋಯೋನು. ಹಂಗೂ ಹಿಂಗೂ ಎಡತೊರೇ ಅಂತ ಒಂದು ತಾಲ್ಲೋಕಿಗೆ ಬಂದರು. ಅಲ್ಲಿ ಮಂತ್ರಿ ಕುದುರೆಯಿಂದ ಇಳಿದ. ಅಂಗಡಿ ಬೀದಿಗೆ ಹೋಗಿ ಸೊಗಸಾದ ಕಾವಿ ಬಟ್ಟೆ ತಂದ. ಈಬೂತಿ ಗಟ್ಟಿ ರುದ್ರಾಕ್ಷಿ ಮಣಿ ಎಲ್ಲಾನೂ ತಂದ. ಅವನ್ನ ಒಂದು ಕೆರೇತಾಕೆ ಕರಕೊಂಡು ಹೋದ. "ಇಲ್ಲಿ ಇಳದು ನಿನ್ನ ಮೈಗವಲೆಲ್ಲ ಹೋಗೋಹಂಗೆ ಚಂದಾಗಿ ಉಜ್ಜಿ ಸ್ನಾನಮಾಡು. ಈ ಬಟ್ಟೆ ಧರಿಸ್ಕೊ, ರುದ್ರಾಕ್ಷಿ ಹಾಕ್ಕೊ" ಅಂದ. ಗುರುವನಿಗೆ ಇದರ ತಲೆ ಬುಡ ಒಂದೂ ತಿಳೀದೆ ತಬ್ಬಿಬ್ಬಾಯ್ತು. ಉಸಿರಾಡದೆ ಇಳಿದು ಕೆರೇಲಿ ಮಿಂದ. ಕಲ್ಲಲ್ಲಿ ಮೈಯ್ಯ ಪರ್ರಪರ್ರನೆ ಇಬ್ಬರದಕ್ಕೊಂಡು ಉಜ್ಜಿದ. ಮೈಯ್ಯಕೊಳೆ ಬಚ್ಚಲು ನೀರು ಹರಿಯೋ ಹಂಗೆ ಹರೀತು. ಮೈ ಸ್ವಲ್ಪ ಪಳ್‌ಪಳ್ಗೆ ಆಯ್ತು. ಮಂತ್ರಿ ಹೇಳಿದಂಗೇ ಕಾವಿ ಪಂಚೆ ಉಟ್ಕೊಂಡ. ಕಾವಿ ಜುಬ್ಬ ತೊಟ್ಕೊಂಡ. ಕಾವಿ ಪೇಟ ಹಾಕ್ಕೊಂಡ. ರುದ್ರಾಕ್ಷಿಯ ಕೊಳ್ಳಿಗೆ ಹಾಕ್ಕೊಂಡ. ಮೊಖಕ್ಕೆ ಮೈಗೆ ಎಲ್ಲಾ ಈಬೂತಿ ಬಳಕೊಂಡ. ಥೇಟ್ ಗುರೀನಯ್ಯನಂಗೇ ಆಗಿಬುಟ್ಟ. ಆಗ ಮಂತ್ರಿ ಹೇಳಿದ: "ನೋಡೋ ಹಂದಿ ಚಿಕ್ಕ. ನಿನ್ನ ನಮ್ಮ ಮಹಾರಾಜರಿಗೆ ಗುರುಮಾಡ್ತೀನಿ". ಗುರುವನಿಗೆ ಹ್ಯಂಗಂಗೋ ಆಯಿತು. ಮೈಲಿ ಬೆಟ್ಟುಗಾತರ ಬೆವರು ಕಿತ್ತುಕೊತ್ತು. "ಅಯ್ಯಯ್ಯೋ ಬ್ಯಾಡಿ ಬುದ್ಧಿ. ನಾನು ಅಂದ್ರೇನು, ಮಾರಾಜ್ರು ಅಂದ್ರೇನೂ ? ನಿಮ್ಮ ದಮ್ಮಯ್ಯ ಅಂತೀನಿ, ನಿಮ್ಮ ಕಾಲು ಕಟ್ಕೊತ್ತೀನಿ, ನನ್ನ ಬುಟ್ಬುಡಿ ನನ್ನ ಬುಡ್ಬುಡಿ" ಅಂತ

ಅಂಗಲಾಚಿದ. ಮಂತ್ರಿ "ನೀನು ಅಟ್ಟಕೆ ಹಾರಿ ನೆಲಕ್ಕೆ ಬಿದ್ರೂ ಬುಡೋದಿಲ್ಲ. ನಾನು ಹೇಳಿದಂಗೆ ಕೇಳಿದ್ರೆ ನಿಂಗೇನೂ ಬಯವಿಲ್ಲ. ರಾಜ ನಿನ್ನ ಏನಾದ್ರೂ ಉಪದೇಶ ಕೇಳಿದಾಗ 'ಹೇಳೋಕೂ ಕೇಳೋಕೂ ಈಗ ಸಮಯವಲ್ಲ' ಅಂತ ಹೇಳು. ಬ್ಯಾರೆ ಏನೂ ಪಟ್‌ಪಿಟ್ ಅಂತ ಉಸುರು ಬುಡಬ್ಯಾಡ" ಅಂತ ಹೇಳಿದ. ಇನ್ನೇನೂ ದಾರಿ ಕಾಣದೆ ಹೆದರಿಕೊಂಡು ಗುರುವ ಅವನು ಹೇಳಿದ್ದಕ್ಕೆ ಸೈಪಟ್ಟ.

ಮಂತ್ರಿ ಗುರುವನ್ನ ಕರಕೊಂಡು ಬಂದು ರಾಜನ ಹತ್ರ ನಿಲ್ಲಿಸಿದ. "ನಾನೂ ದಿಳ್ಳಿ ದೀಪಾಂತರ ಎಲ್ಲಾನೂ ಸಿದಿಕಿ ಬುಟ್ಟೆ. ಕೊನೆಗೆ ಈ ಮಾನುಬಾವರು ಸಿಕ್ಕಿದ್ರು. ನಂಪುಣ್ಯ ಚಂದಾಗಿತ್ತು" ಅಂದ. ರಾಜ ಗುರುವನ್ನ ಮ್ಯಾಲಿಂದ ಕೆಳೀಕೆ ನೋಡಿದ. ಅವನ ಭರ್ಜರಿ ಮೈಕಟ್ಟು ವೇಷ ಭೂಷಣ ಎಲ್ಲಾನೂ ನೋಡಿ ದಂಗಾಗಿ ಬುಟ್ಟ. ಕೈಮುಗಿದ. ಪನ್ನೀರಲ್ಲಿ ಪಾದ ತೊಳದು ಪೂಜೆಮಾಡಿದ, ಬಿದ್ದು ಬೇಡಿಕೊಂಡ. "ನನ್ನ ಹಿಂದೇಳು ಮುಂದೇಳು ಜನ್ಮದ ಪುಣ್ಯದಿಂದ ನೀವು ದೊರಕಿದ್ರಿ. ನಂಗೆ ಉಪದೇಶ ಮಾಡಿ" ಅಂತ ಪ್ರಾರ್ಥನೆ ಮಾಡಿಕೊಂಡ. ಆಗ ಗುರುವ ಮಂತ್ರಿ ಹೇಳಿಕೊಟ್ಟಂಗೇ "ಹೇಳೋಕೂ ಕೇಳೋಕೂ ಇದು ಸಮಯವಲ್ಲ" ಅಂದ. ರಾಜ ತುಟಿ ಪಿಟಕ್ ಅನ್ನದೆ ಸುಮ್ಮನಾದ. ಅವನಿಗೆ ಸೊಗಸಾದ ಬಿಡಾರಗಿಡಾರ ಆಳುಕಾಳು ಯವಸ್ತೆ ಮಾಡಿದ.

ಒಂದು ದಿನ ಅರಮನೆಯಲ್ಲಿ ಗಣಾರಾಜನೆ. ರಾಜ ಬಂದು ಕೈಮುಗದು ಅಡ್ಡ ಬಿದ್ದು "ನಾಳೆ ದೇವತಾ ಕಾರ್ಯ. ಮೊದಲು ನಿಮ್ಮ ಪಾದಪೂಜೆ ಆಗಬೇಕು" ಅಂದ. ಆಗ ಗುರುವ "ನಾನು ಹಂಗಾದ್ರೆ ಗಂಗಾನದೀಲಿ ಸ್ನಾನಮಾಡಬೇಕು. ನಂತರ ಪೂಜೆ" ಅಂದ. "ಸರಿ" ಅಂದುಬುಟ್ಟು ರಾಜ ಹೊಂಟೋದ. ಬೆಳಿಗ್ಗೆ ಪರಿವಾರ ಸಮೇತ ಹೂವಿನ ಪಲ್ಲಕ್ಕಿಯಲ್ಲಿ ಕೊಂಬು ಕಾಳೆ ಸಹಿತ ಗುರುವ ನದೀ ಸ್ನಾನಕ್ಕೆ ಹೊಂಟ. ಒಳಗೆ ಜೀವ ಪುಕ ಪುಕ ಅಂತಿತ್ತು. 'ನಾನು ಹ್ಯಂಗೆ ತಪ್ಪಿಸಿಕೊಳ್ಳಿ' ಅಂತ ಅವನು ಒಳಗೇ ಲೆಕ್ಕಾಚಾರ ಹಾಕಿದ. ಏನೋ ಒಂದು ಹಿಕ್ಮತ್ತು ಹೊಳೀತು. ತಕ್ಷಣ "ಎಲ್ರೂ ಇಲ್ಲಿ ನಿಲ್ಲಿ" ಅಂದ. ಎಲ್ರೂ ಗಕ್ಕನೆ ಇದ್ದಿದ್ದ ಕಡೇಲೇ ನಿಂತುಕೊಂಡ್ರು, ಗುರುವಿನ ಆಗ್ನೆ ಮೀರಬಾರ್ದು ಅಂತ. ಆಗ ಗುರುವ ಹೇಳಿದ: "ನಾನು ನರಪ್ರಾಣಿ ಕಾಣದಂಗೆ ಸ್ನಾನ ಮಾಡ್ಬೇಕು. ಗಂಗಾದೇವಿ ಜೊತೆ ಮಾತಾಡ್ಬೇಕು. ಅದೆಲ್ಲಾ ಆದ ಮ್ಯಾಲೆ ಮೇಲಕ್ಕೆ ಬಂದು ನಾನು ಕೈ ಬೀಸಿದಾಗ ನೀವು ಹತ್ರಕ್ಕೆ ಬರಬೇಕು. ಅಲ್ಲೀಗಂಟ ಎಲ್ರೂ ದೂರದಲ್ಲೇ ಇರ್ಬೇಕು. ಯಾರಾದ್ರೂ ನನ್ನ ಮಾತು ಮೀರಿದರೆ ಹುಸಾರು." ಎಲ್ಲರೂ "ಹಂಗೇ ಆಗಲಿ"



ಅಂತ ಒಪ್ಪಿಕೊಂಡರು. ಗುರುವ ಪಲ್ಲಕ್ಕಿಯಿದ ಇಳಿದು ಒಬ್ಬನೇ ಬರಬರನೆ ಹೋದ. ಓಟು ದೂರ ಹೋಗಿ ಹಿಂತಿರುಗಿ ನೋಡಿದ. ಪರಿವಾರದೋರು ಯಾರೂ ಕಾಣನಿಲ್ಲ. ಸರಿ, ತನ್ನ ಬಟ್ಟೆಬರೆ ಕಳಚಿ ಕಂಕುಳಲ್ಲಿ ಇರಿಸಿಕೊಂಡು, ತನ್ನ ಮೊದಲ ಚಿಂದಿ ಬಟ್ಟೆ ಉಟ್ಟುಕೊಂಡು ಹೊಳೆ ಮಗ್ಗುಲಲ್ಲೇ ಓಡಿದ, ಓಡಿದ, ಹಂಗೆ ಓಡಿದ. ಅಲ್ಲಿ ಒಂದು ಅರ್ಧ ಎಕರೆ ಸುತ್ತಳತೆ ಇರೋ ಆಲದ ಮರ. ಅದರ ಅಂಡೀಲಿ ಒಂದಾಳೆತ್ತರ ಒಣದರಗು ಬಿದ್ದಿತ್ತು. ಗುರುವ ಆ ತರಗ ತನ್ನ ಮೈಮೇಲೆ ಕವಿಚಿಕೊಂಡು ಕೂತುಗೊಂಡು ಬುಟ್ಟ.

ಒಬ್ಬ ಬ್ಯಾಡ. ಒಂದು ಹಂದಿ ಅವನಿಗೆ ಬಾಳ ದಿನದಿಂದ ಚಕ್ಕರ್ ಹಾಕ್ತಿತ್ತು. ಅದ ಏನಾರೂ ಮಾಡಿ ಹೊಡೀಬೇಕೂ ಅಂತ ದಿನಾ ಕಾಯ್ತಾ ಇದ್ದ. ಆವತ್ತು ಅದು ಅವನ ಏಟಿಗೆ ಸಿಕ್ಕಿಬುಡ್ತು, ಹೊಡೆದ. ಆದ್ರೆ ತಪ್ಪಿಸ್ಕೊಂಡು ಓಡಿಬಂದು ಆ ಆಲದಮರ ಉಜ್ತಾ ನಿಂತಿತ್ತು. ಆ ಬ್ಯಾಡ ನತ್ತರದ ಹೆಜ್ಜೆ ಗುರುತು ಹಿಡಿದು ಬಂದು ಹಂದಿ ನೋಡಿದ. ನೋಡಿದೋನು ಸುಮ್ನೆ ಇರಲಿಲ್ಲ. "ನೀನು ಕದ್ದು ಬಂದಿರೋದು ನಾನು ಬಲ್ಲೆ" ಅಂದ. ಗುರುವನಿಗೆ ಅದು ಕೇಳ್ತು. ಅವನಿಗೆ ದೊಡ್ಡ ಜೀವವೇ ಹೋದಂಗಾಯ್ತು. 'ನಾನು ಕದ್ದು ಬಂದಿರೋದು ಗೊತ್ತಾಗಿಬುಡ್ತಲ್ಲ, ಏನು ಮಾಡೋದು' ಅಂದುಕೊಂಡು ಧೈರ್ಯ ತಾಳಿ "ನೀನು ಉಜ್ಜೋದು ನಾ ಬಲ್ಲೆ, ನೀನು ತಿಕ್ಕೋದ ನಾ ಬಲ್ಲೆ" ಅಂದ. ಹಂಗಂತಾ ಮೇಕೆದ್ದು 'ಹ್ಯಂಗೂ ಗೊತ್ತಾಯ್ತು, ಆದದ್ದಾಗಲಿ' ಅಂದುಕೊಂಡು ಹಿಂತಿರುಗಿ ಹೊಳೆತಾಕೆ ಬಂದ. ಸ್ನಾನಮಾಡಿದ. ಬಟ್ಟೆ ಧರಿಸಿದ, ಬಂದ ಮೇಲಕ್ಕೆ. ಅವರೆಲ್ಲಾ ಕಾದೂ ಕಾದೂ ಹಣ್ಣಾಗಿದ್ದರು. ಕೈ ಬೀಸಿದ. ಅವನ ಕಂಡು ಅವರಿಗೆಲ್ಲ ಪ್ರಾಣ ಬಂದಂಗಾಯ್ತು. ಪಲ್ಲಕ್ಕಿ ತಂದರು. ಕೂತು ಅರಮನೆಗೆ ಬಂದ. ಮಹಾರಾಜರು ಗುರುಗಳು ಬರೋದನ್ನೇ ಕಾದು ಕೂತಿದ್ದರು. ಗುರುವನ ಪಾದ ಪೂಜೆ ಎಲ್ಲಾ ಆಯಿತು. ಕೊನೇಲಿ ರಾಜ "ಉಪದೇಶ ಕೊಡಬೇಕು" ಅಂತ ಬೇಡಿಕೊಂಡ. ಆಗ ಗುರುವ 'ನೀನು ತಿಕ್ಕೋದು ನಾ ಬಲ್ಲೆ" ಅಂದ. ಆ ದಡ್ಡ ರಾಜ ಇದೇ ಗುರುಗಳ ಉಪದೇಶ ಅಂತ ತಿಳುಕೊಂಡ. ಅವನಿಗೆ ಅದೇ ಧ್ಯಾನವಾಯಿತು. ಕುಂತಾಗ ನಿಂತಾಗ ಎಲ್ಲಾ ಇದೇ ಸೊಲ್ಲೇ. ಇದೇ ಧ್ಯಾನದಲ್ಲಿ ಅವನಿಗೆ ಗಡ್ಡ ಬವರ ಎಲ್ಲಾ ಬೆಳೀತು.

ಒಂದು ದಿನ ತನ್ನ ಗಡ್ಡಮೀಸೆ ಎಲ್ಲಾನೂ ಬೋಳಿಸಿಕೊಳ್ಳಾಕೆ ಅಂತ ಹಜಾಮನ್ನ ಕರಸಿದ. ಅವನು ಬಂದ. ರಾಜ ಮೆಲ್ಲಗೆ "ನೀ ಉಜ್ಜೋದ ನಾ ಬಲ್ಲೆ" ಅಂದ. ಅದು ಹಜಾಮನಿಗೆ ಸರಿಯಾಗಿ ಕೇಳಿಸಲಿಲ್ಲ. ಅವನು ಎಲ್ಲಾ

ಕಡೇನೂ ಕೆರೆದು ಮೆಟರೆ ಹತ್ರಕ್ಕೆ ಬಂದಾಗ ಕತ್ತಿಯ ಹರಿತ ಕಡಿಮೆಯಾಯಿತು. ಆಗ ಹಜಾಮ ಸ್ವಲ್ಪ ನಿಲ್ಲಿಸಿ ಮಸೆಗಲ್ಲಿನಲ್ಲಿ ಕತ್ತಿ ತಿಕ್ಕಿದ, ಉಜ್ಜಿದ. ಅದೇ ಸಮಯದಲ್ಲಿ ರಾಜ ಜೋರಾಗಿ "ನೀನು ತಿಕ್ಕೋದ ನಾ ಬಲ್ಲೆ, ನೀ ಉಜ್ಜೋದ ನಾ ಬಲ್ಲೆ" ಅಂದ. ಹಜಾಮನಿಗೆ ಗಾಬರಿಯಾಯಿತು. ಕೈ ಗಡಗಡನೆ ಹೇಡಿಸಳಿ ಬಂದೋರ ಹಂಗೆ ನಡಾಗಾಕೆ ಸುರುವಾದೊ. ಅವನು ಬ್ಯಬ್ಬಬ್ಬಾ ಅಂತ ಕೊದ್ಲಕ್ಕೆ ಸುರುಮಾಡಿದ. ರಾಜನಿಗೆ ಆಶ್ಚರ್ಯವಾಯಿತು. "ಯಾಕೋ ಯಾಕೋ ಹಿಂಗೆ ನಡುಗ್ತೀ ?" ಅಂತ ಕೇಳಿದ. ಆಗ ಹಜಾಮ "ನಂದೇನೂ ತಪ್ಪಿಲ್ಲ ಮಾಸ್ವಾಮಿ. ಮಾರಾಣಿಯೋರೆ ಹೇಳಿದ್ರು, "ಮೆಟರೆ ಹತ್ರಕ್ಕೆ ಬಂದಾಗ ಕತ್ತಿ ಮಸಕೊಂಡು ಕತ್ರಿಸಿಬುಡು' ಅಂತ" ಅಂದ. ಆಗ ರಾಜನಿಗೆ ಗುರುವಿನ ಉಪದೇಶ ಎಂತಾ ಸತ್ಯವಾಯಿತು ಅಂತ ಗೊತ್ತಾಯಿತು. ತನ್ನ ಪ್ರಾಣ ಉಳಿಸಿದ ಅವರು ಸಾಕ್ಷಾತ್ ದೇವರೇ ಅಂತ ಭಾವಿಸಿಕೊಂಡ. ಹೆಂಡತಿ ಸಿಗಿಸಿ ಕೋಟೆ ಬಾಗಿಲಿಗೆ ತೋರಣ ಕಟ್ಟಿಸಿದ. ಗುರುವನ್ನ ಹಿಂದಿಲ್ಲ ಮುಂದಿಲ್ಲ ಅನ್ನೋಹಂಗೆ ವಾಲಂಗಣೆ ಮಾಡಿದ. ಹಿಂಗೆ ಗುರುವ ದೊಡ್ಡ ಗುರುವಾದ.

* * * *



## ಕಥೆಗಳನ್ನು ಹೇಳಿದವರು

**೧. ಅಣ್ಣಯ್ಯಾಚಾರ್ :** ಬಡಗನಕೊಪ್ಪಲು, ಕೃಷ್ಣರಾಜನಗರ ತಾಲ್ಲೂಕು, ಮೈಸೂರು ಜಿಲ್ಲೆ. ಅರವತ್ತೈದು ವರ್ಷ, ಚಿನ್ನ ಬೆಳ್ಳಿಯ ಆಭರಣಗಳ ಕೆಲಸದಲ್ಲಿ ನಿಪುಣ. ಕನ್ನಡ ಓದಿಬರೆಯಲು ಬರುತ್ತದೆ. ನಗರಗಳ ಸಂಪರ್ಕ ಉಂಟು (ಸಂಗ್ರಹ : ೧೯೬೬)

ಕಥೆ ಹಣೇಬರಹ:

**೨. ಈರಮ್ಮ :** ಹಂಪಾಪುರ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ. ಅರವತ್ತು ವರ್ಷ. ಅವಿದ್ಯಾವಂತರು. ಇವರ ಹುಟ್ಟೂರು ಇದೇ ತಾಲ್ಲೂಕಿನ ಆನಂದೂರು. ಇಲ್ಲಿ ಬ್ರಾಹ್ಮಣರು ಅಧಿಕ ಪ್ರಮಾಣದಲ್ಲಿರುವುದರಿಂದ ಸೊಗಸಾದ ಅನುಕರಣಪ್ರತಿಭೆಯುಳ್ಳ ಈಕೆಯ ಭಾಷೆ ಮತ್ತು ನಿರೂಪಣೆಯ ಮೇಲೆ ಪರಿಷ್ಕೃತ ಭಾಷೆಯ ಪ್ರಭಾವವಿದೆ. ಅಧಿಕ ಸಂಖ್ಯೆಯ ಕಥೆಗಳು, ಗಾದೆಗಳು, ಒಗಟುಗಳು, ಹಾಡುಗಳು ಈಕೆಯ ಸೊತ್ತು. ತುಂಬ ಸರಾಗವಾಗಿ ವೇಗವಾಗಿ ಸುರಸವಾಗಿ ಕಥೆ ಹೇಳುವ ಕಲೆ ಈಕೆಗೆ ಸಿದ್ಧಿಸಿದೆ. ಇಡೀ ನಾಟಕ ಹರಿಕತೆಗಳನ್ನೇ ಬಾಯಲ್ಲಿ ಇಟ್ಟುಕೊಂಡಿರುವ ಪ್ರತಿಭಾವಂತೆ. ಈಕೆಯ ಕೇವಲ ಒಂದು ಕಥೆಯನ್ನು ಮಾತ್ರ ಇಲ್ಲಿ ಕೊಡಲಾಗಿದೆ. (ಸಂಗ್ರಹ : ೧೯೬೩).

ಕಥೆ : ಘಾಟಿ ಸೊಸೆ.

**೩. ಅಂಗಡಿ ಬೋರೇಗೌಡ :** ಬಡಗನ ಕೊಪ್ಪಲು, ಕೃಷ್ಣ ರಾಜನಗರ ತಾಲ್ಲೂಕು, ಮೈಸೂರು ಜಿಲ್ಲೆ. ಐವತ್ತೈದು ವರ್ಷ. ಬೇಸಾಯ ಮತ್ತು ವ್ಯಾಪಾರದ ವೃತ್ತಿ. ಕನ್ನಡ ಚೆನ್ನಾಗಿ ಓದಿ ಬರೆಯಲು ಬರುತ್ತದೆ. ಕಥೆಗಳು, ಹಾಡುಗಳು ಮತ್ತು ಒಗಟುಗಳನ್ನು ಹೇಳುತ್ತಾರೆ. ಭಾಷೆಯಲ್ಲಿ ಸ್ವಲ್ಪ ನಾಗರಿಕತೆಯ ಪರಿಣಾಮ ಕಾಣುತ್ತದೆ. (ಸಂಗ್ರಹ : ೧೯೬೬)

ಕಥೆಗಳು : ಕಂಚಿನಕೊಳ.

**೪. ಕರೀಗೌಡ :** ಕಲ್ಯಾಣಪುರ, ಕೃಷ್ಣರಾಜನಗರದ ತಾಲ್ಲೂಕು, ಮೈಸೂರು ಜಿಲ್ಲೆ. ಐವತ್ತೈದು ವರ್ಷ. ಅವಿದ್ಯಾವಂತ. ಬೇಸಾಯ, ಕೂಲಿ ವೃತ್ತಿಗಳು. ನಾಗರಿಕತೆಯ ಸಂಪರ್ಕ ತುಂಬ ಕಡಮೆ. ಹೆಚ್ಚು ಸಂಖ್ಯೆಯ ಕಥೆಗಳನ್ನು ಹೇಳುತ್ತಾರೆ. (ಸಂಗ್ರಹ : ೧೯೬೭)

ಕಥೆ : ಚದುರ ಚನ್ನಯ್ಯ

**೫. ಕಮಲಮ್ಮ :** ವಾಸ, ಮಂಗಳೂರು, ಹುಟ್ಟೂರು, ಬಡಗನಕೊಪ್ಪಲು. ಇಪ್ಪತ್ತೆರಡು ವರ್ಷ. ಓದಿ ಬರೆಯಲು ಬರುತ್ತದೆ. ಭಾಷೆಯಲ್ಲಿ ನಾಗರಿಕತೆಯ ಪ್ರಭಾವ ಉಂಟು; ಈ ಕಥೆಗಳನ್ನು ಚಿಕ್ಕಂದಿನಲ್ಲಿ ಇವರ ಸೋದರತ್ತೆಯವರಿಂದ ಕಲಿತದ್ದು. ಇವರ ಸೋದರತ್ತೆ ಕೃಷ್ಣರಾಜ ನಗರದ ತಾಲ್ಲೂಕು ಗಂಧನ ಹಳ್ಳಿಯವರು; ಅವಿದ್ಯಾವಂತರು. ಈ ಕಥೆಗಳಲ್ಲಿ ಆದಷ್ಟೂ ಮೂಲ ಕಥೆಗಾತಿಯ ಭಾಷೆಯನ್ನೇ ಉಳಿಸಿಕೊಳ್ಳಲು ಪ್ರಯತ್ನಿಸಲಾಗಿದೆ. (ಸಂಗ್ರಹ : ೧೯೬೭)

ಕಥೆಗಳು : ನಳ್ಳಿಗೊಮಾರ

ಗುಲಗಂಜಿ ಮಾದೇವಿ.

**೬. ಕಾಳಮ್ಮ :** ಹಂಪಾಪುರ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ. ಐವತ್ತು ವರ್ಷ. ಅನಕ್ಷರಸ್ತರು. ಇವರು ಕತೆ ಕಲಿತದ್ದು ತಮ್ಮ ತಾಯಿ ಹಾಗೂ ಅಜ್ಜಿ.ಯವರಿಂದ. ಅವರು ಮೈಸೂರು ಜಿಲ್ಲೆಯ ಪಿರಿಯಾ ಪಟ್ಟಣ ತಾಲ್ಲೂಕಿನ ಅಲ್ಪನಾಯಕನ ಹಳ್ಳಿಯವರು. ತುಂಬ ನಿರರ್ಗಳವಾಗಿ ಕಥೆ ಹೇಳುತ್ತಾರೆ. ಸುಂದರ ನಿರೂಪಣೆ. ಭಾಷೆಯಲ್ಲಿ ಗ್ರಾಮ್ಯತೆಯ ಸೊಗಡು ಸಹಜತೆ ಸ್ಪಷ್ಟವಾಗಿದೆ. (ಸಂಗ್ರಹ : ೧೯೬೪.)

ಕಥೆ : ಗೌಡನ ಮಗ.

**೭. ಜವರೇಗೌಡ :** ಬಡಗನ ಕೊಪ್ಪಲು, ಕೃಷ್ಣರಾಜನಗರ ತಾಲ್ಲೂಕು, ಮೈಸೂರು ಜಿಲ್ಲೆ. ಎಪ್ಪತ್ತು ವರ್ಷ. ಬೇಸಾಯ ವೃತ್ತಿ ಮತ್ತು ಹರಯದ ದಿನಗಳಲ್ಲಿ ಮನೆ, ರಸ್ತೆ ಇತ್ಯಾದಿ ಕೆಲಸಗಳ ಕಂಟ್ರ್ಯಾಕ್ಟ್. ಕನ್ನಡ ಓದಿಬರೆಯಲು ಬರುತ್ತದೆ. ಅಧಿಕ ಸಂಖ್ಯೆಯ ಕಥೆಗಳು, ಲಾವಣಿಗಳು, ಹಾಡುಗಳು, ಕೋಲಾಟದ ಪದಗಳು ಇವರಿಗೆ ಕಂಠಸ್ಥ. ನೂರಾರು ಊರುಗಳನ್ನು ತಿರುಗಿದ ಅನುಭವಿ, ಚತುರ. ತುಂಬ ವೇಗವಾಗಿ ಕಥೆ ಹೇಳುವ ಕಲೆಯಲ್ಲಿ ನಿಷ್ಣಾತ. ಸೊಗಸಾದ ನಿರೂಪಣೆ ; ಭಾಷೆಯಲ್ಲಿ ಏರಿಳಿತಗಳು, ವ್ಯತ್ಯಾಸಗಳು ಹೆಚ್ಚು. ನಾಟಕ ಬಯಲಾಟಗಳಲ್ಲಿ ಅಭಿರುಚಿ. (ಸಂಗ್ರಹ : ೧೯೬೭)

ಕಥೆಗಳು : ಕುಂಟಣ್ಣ ಕಂಡ ಕೈಲಾಸ

ದೆವ್ವದ ದಯೆ.

ಗುರು – ಶಿಷ್ಯ.

ಹಾವು – ಬೆಕ್ಕು – ಮುರ್ಕಾಟಿ.

ಗುರುವ ಗುರುವಾದ.



**೮. ದೊಡ್ಡೇಗೌಡ :** ಬಡಗನಕೊಪ್ಪಲು. ಮೂಲಸ್ಥಳ ಹೊನ್ನವಳ್ಳಿ, ಹೊಳೇನರಸಿಪುರದ ತಾಲ್ಲೂಕು, ಹಾಸನಜಿಲ್ಲೆ. ನಲವತ್ತೈದು ವರ್ಷ. ಬೇಸಾಯ, ಕೂಲಿ, ವ್ಯಾಪಾರ ಇತ್ಯಾದಿ ವೃತ್ತಿ. ಅವಿದ್ಯಾವಂತ, ಮುಗ್ಧ. ತುಂಬ ಸಹಜವಾಗಿ ಯಾವ ಕೃತಕತೆಗೂ ಎಡೆಯಿಲ್ಲದಂತೆ ಕಥೆ ಹೇಳುತ್ತಾರೆ. ನಾಗರಿಕತೆಯ ಪ್ರಭಾವ ಇಲ್ಲವೇ ಇಲ್ಲವೆನ್ನುವಷ್ಟು ಕಡಮೆ. ಹೆಂಗಸರ ಜೊತೆ ನಿಸ್ಸಂಕೋಚವಾಗಿ ಬೆರೆಯುವ ಸರಳ ಹೃದಯದವರು. ಆದ್ದರಿಂದ ಕಥೆಯಲ್ಲಿ ಹೆಣ್ಣು ಹೃದಯದ ಗುಣ ಸ್ವಲ್ಪ ಹೆಚ್ಚು. ಹಳ್ಳಿಯ ಸ್ವಾಭಾವಿಕ ಗತ್ತು ಬನಿಗಳನ್ನೊಳಗೊಂಡ ಬಣ್ಣಗೆಡದ ಭಾಷೆ, ಅಪಾರ ಸಂಖ್ಯೆಯ ಕಥೆ, ಗಾದೆ, ಒಗಟು, ಹಾಡುಗಳು, ಇವರಿಗೆ ಹೃದ್ಗತ. (ಸಂಗ್ರಹ : ೧೯೬೫ ಮತ್ತು ೬೭)

ಕಥೆಗಳು : ಚಿಕ್ಕ ಹೊನ್ನಿ – ದೊಡ್ಡ ಹೊನ್ನಿ.

ಯಾರು ಹೆಚ್ಚು ?

ಚೆಂದುಳ್ಳಿ ಹೆಣ್ಣು.

ಅಣ್ಣ – ತಂಗಿ.

ಪೆದ್ದ ಪಾಪಣ್ಣ.

**೯. ಬಿ.ಪಿ. ಮಲ್ಲೇಗೌಡ :** ಬಡಗನಕೊಪ್ಪಲು, ಕೃಷ್ಣರಾಜ ನಗರದ ತಾಲ್ಲೂಕು. ಮೈಸೂರು ಜಿಲ್ಲೆ. ಇಪ್ಪತ್ತನಾಲ್ಕು ವರ್ಷ. ಕಾಲೇಜಿನ ವಿದ್ಯಾರ್ಥಿ. ಇವರು ಕಥೆ ಕಲಿತದ್ದು ಅಂಗಡಿ ಬೋರೇಗೌಡರಿಂದ. ಭಾಷೆಯಲ್ಲಿ ನಗರದ ಪ್ರಭಾವವಿದ್ದರೂ ಮಧ್ಯೆ ಮಧ್ಯೆ ನಿಂತು ನಿಂತು ಮೂಲ ಕಥೆಗಾರರ ಭಾಷೆಯನ್ನು ನೆನಪಿಗೆ ತಂದುಕೊಂಡು ಕಥೆ ಹೇಳಿದ್ದಾರೆ. (ಸಂಗ್ರಹ : ೧೯೬೭).

ಕಥೆಗಳು : ಬುದ್ಧಿಯ ಬಲ

ಮಾಡಿದುಣ್ಣೋ ಮಾರಾಯ.

**೧೦. ರಾಮೇಗೌಡ :** ಚನ್ನಂಗೆರೆ, ಕೃಷ್ಣರಾಜನಗರದ ತಾಲ್ಲೂಕು, ಮೈಸೂರು ಜಿಲ್ಲೆ. ಇಪ್ಪತ್ತು ವರ್ಷ : ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿ. ಕಥೆ ಕಲಿತದ್ದು ತನ್ನ ತಾಯಿಯವರಿಂದ. ಆ ಭಾಷೆಯಲ್ಲೇ ಹೇಳಲು ಯತ್ನಿಸಿದ್ದಾನೆ. (ಸಂಗ್ರಹ : ೧೯೬೬).

ಕಥೆ : ಬೆನ್ನ ಹಿಂದೆ ಬಂದ ಭಾಗ್ಯ.

**೧೧. ಎಚ್.ಜಿ. ಹುಚ್ಚೇಗೌಡ :** ಹಂಪಾಪುರ, ಅರಕಲಗೂಡು ತಾಲ್ಲೂಕು, ಹಾಸನಜಿಲ್ಲೆ. ಹತ್ತೊಂಬತ್ತು ವರ್ಷ. ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿ. ಕಥೆ ಕಲಿತದ್ದು ದೊಡ್ಡ ತಾಯಿ ಈರಮ್ಮನವರಿಂದ. ಸಾಹಿತ್ಯದಲ್ಲಿ ಆಸಕ್ತಿ ಇರುವ ಈತ

ತಾನು ಕೇಳಿದ ರೀತಿಯಲ್ಲೇ ಕಥೆ ಹೇಳುಲು ಯತ್ನಿಸಿದ್ದಾನೆ. ಆದರೂ ನಾಗರಿಕ ಭಾಷೆಯ ಪ್ರಭಾವವಿರುವುದನ್ನು ಗುರುತಿಸಬಹುದು. (ಸಂಗ್ರಹ : ೧೯೬೫).

ಕಥೆಗಳು : ಪದ್ಮಾವತಿ

ಕಿಲಾಡಿ ಚಿಕ್ಕ.

ಟೋಪಿ – ಕೋಲು – ಉಂಗುರ.

* * * *



# ಅರ್ಥಕೋಶ

**ಅ**

ಅಂಕಬಿಂಕ ಹೊಡೆ = ಬೆಡಗಿನ ಮಾತಾಡು. ಜಂಬದ ಮಾತಾಡು

ಅಂಕೆ ಅಟ್ಟುಳಿ = ಹಿಂಸೆ, ಶಿಕ್ಷೆ

ಅಂಗೈ ಮೇಲಿನ ಅರಗಿಣಿ ಹಂಗೆ = ತುಂಬಾ ಪ್ರೀತಿಯಿಂದ

ಅಂಗಿ ಹಾಕು = ಮೋಸ ಮಾಡು

ಅಂಗೈಲಿ ಆವಧರಿಸಿಕೊ = ಅಂಗೈಯಲ್ಲಿ ಇಟ್ಟುಕೊಂಡು ಸಲಹಿದ ಹಾಗೆ ಪೋಷಿಸುವುದು

ಅಗ್ಗಿ = ಅಗ್ನಿ

ಅಚ್ಚಗನ್ನೇರು (+ ದೇವಗನ್ನೇರು) = ಅಚ್ಚ ಗನ್ಯೆಯರು ದೇವಕನ್ಯೆಯರು

ಅಚಾತುರ್ಯ = ಆಗಬಾರದ ಕೆಲಸ

ಅಜ್ಜಮುಜ್ಜರು = ಅಜ್ಜ ಮುತ್ತಜ್ಜರು

ಅಜ್ಜಜ್ಜಿ (ಮುದುಕ) = ಅಜ್ಜನ ಅಜ್ಜನಂಥ ಮುದುಕ

ಅಟಕಾಯಿಸು = ಗದರಿಸು, ಅಧಿಕಾರ ತೋರು

ಅಟ್ಟಲು, ಅಟ್ಲು (ಅಟ್ಟಲೊಳಕ್ಕೆ) = ಕೆಸರು, ಉಸುಬು

ಅಡ್ರಕಾಲು = ಅಡರುಗಾಲು, ಮುಂಗಾಲುಗಳನ್ನು ಮೇಲೆತ್ತಿ ಬರುವುದು

ಅಂಡಿ, ಅಂಡೀಲಿ = ಅಡಿ, ಅಡಿಯಲ್ಲಿ

ಅಡ್ಡಾಕಿಕೊ = ದಾರಿಯಲ್ಲಿ ಅಡ್ಡನಿಲ್ಲುವುದು

ಅಡ್ಡಾಯ್ತದೆ = ಅಡ್ಡಲಾಗುತ್ತದೆ, ಅಡ್ಡಿಯಾಗುತ್ತದೆ

ಅಡಾವುಡಿ = ಗಲಾಟೆ, ಒರಟುತನ

ಅಡೇಲೇ = ಹತ್ತಿರದಲ್ಲೇ

ಅಂತದೆ = ಅನ್ನುತ್ತದೆ

ಅತ್ತಾಗಿ ಇತ್ತಾಗಿ = ಆಕಡೆ ಈಕಡೆ

ಅಂತಿತ್ತಿಲ್ಲ = ಅನ್ನುತ್ತಿರಲಿಲ್ಲ

ಅಂತು = ಅಂದಿತು

ಅದಂತೆ = ಇದೆಯಂತೆ
ಅನಾದ್ರಿ = ಅನಾಥ
ಅಪ್ಪಾರ = ಅಪಾರ
ಅಮಾಸೆ = ಅಮಾವಾಸ್ಯೆ
ಅಪ್ಪಚ್ಚಿ ಆಗು = ಜರ್ಝರಿತವಾಗು, ನೆಲಹತ್ತು
ಅಮಾದಿ = ಮಲ
ಅಮುರ್ತಸಿಲೆ = ಅಮೃತ ಶಿಲೆ
ಅಮುರ್ತ, ಅಮೂರ್ತ = ಅಮೃತ
ಅರಸುಗೋಳ = ಅರಸುಗಳ
ಅರಕೊಂಡು = ಅರೆದುಕೊಡು
ಅರಿಬೆ = ಅರಿವೆ
ಅರೀದ = ಅರಿಯದ
ಅರಿಕೋಲು = ಹೊಲ ಉಳುವಾಗ ಬಳಸುವ ಕೋಲು
ಅರ್ಲು = ಕೆಸರು
ಅಲ್ಯಾದರೂ = ಅಲ್ಲಿಯಾದರೂ
ಅವರು, ಅವರಿಬುಡು = ಪರಚು
ಅವತುಗೊಂಡು = ಅವಿತುಕೊಂಡು
ಅವಾರ = ಆಹಾರ
ಅವಿಸಿಡು, (ಅವಿಸಿಟ್ಟರು) = ಬಚ್ಚಿಡು.
ಅವ್ರೆ, (ಅವರೆ) = ಇದ್ದಾರೆ
ಅಷ್ಟೇಯ = ಅಷ್ಟೇ
ಅಷ್ಟೊಂತ್ವಾರ (ಅಷ್ಟೊಂದು ತೋರ) = ಅಷ್ಟು ಹೆಚ್ಚಾದ
ಅಳುಮೋರೆ = ಅಳುಮುಖ
ಅಳ್ಳಾಡು = ಅಲುಗಾಡು
ಅಳ್ಳೀಮರ = ಅರಳೀ ಮರ
ಅಳದು ಸುರುದು (ಯೋಚನೆ) ಮಾಡು = ಮತ್ತೆ ಮತ್ತೆ ಯೋಚಿಸು.

**ಆ**

ಆಕ್ಲಾಸ = ಅಪಹಾಸ್ಯ
ಆಗಾಕಿಲ್ಲ = ಆಗುವುದಿಲ್ಲ



ಆಗಾ (ಉಣ್ಣು) = (ಯೋಗ ?) ಸುಖ
ಆಗ್ನೆ = ಆಜ್ಞೆ, ಹಿಂಸೆ
ಆಚರ್ಯ = ಆಶ್ಚರ್ಯ
ಆಚಾರಿ = ಆಕ್ಕಸಾಲೆ
ಆಡ್ಕೊಳ್ಳಾಕೆ = ಆಡಿಕೊಳ್ಳುವುದಕ್ಕೆ, ಅಪಹಾಸ್ಯ ಮಾಡುವುದಕ್ಕೆ
ಆಣೆಭಾಷೆ = ಪ್ರತಿಜ್ಞೆ, ಶಪಥ
ಆತರಿಸು = ಬೆಚ್ಚಿಬೀಳು
ಆದು ಆದು = ಆಯ್ದು ಆಯ್ದು
ಆದಳು = ಆಯ್ದಳು
ಆದಾತು, ಆದಾತಾ ? = ಆದೀತು, ಆದೀತಾ?
ಆದೀಲಿ ತರದ್ದು = (ಆದಿಯಲ್ಲಿ ತರದೆ ಇದ್ದದ್ದು) ಹುಟ್ಟಿದಾಗ ತರದೆ ಇದ್ದದ್ದು
–ಆನೆ = (–ಓಣ)
ಆಪು, ಆಪಿದ್ದೋರು = ಶಕ್ತಿ / ಶಕ್ತಿಯಿದೋರು
ಆಯ್ತದೆ = ಆಗುತ್ತದೆ.
ಆರು = ನೇಗಿಲು
ಆರಂಬಸ್ತ = ವ್ಯವಸಾಯಗಾರ
ಆರಭಾರ = ಜವಾಬ್ದಾರಿ
ಆರಂದ ಅಡವಿ = ದೊಡ್ಡ ಅಡವಿ
ಆಲಬ್ಬರ = ಆರ್ಭಟ, ವಿಶಾಲವಾಗಿ
ಆಲಬ್ಬರಿಸು = (ಆಲು + ಅಬ್ಬರಿಸು) ಜೋರಾಗಿ ಕೂಗು
ಆವತ್ತು < ಆ < ಹೊತ್ತು < ಆ ಪೊಳ್ತು = ಆ ದಿನ
ಆವುತಿ = ಆಹುತಿ
ಆಳುದ್ದ ಸರೀರ ಗೇಣುದ್ದ ಮಾಡ್ಕೊ = ದೈನ್ಯದಿಂದ ಕುಗ್ಗು

**ಇ**

ಇಚಾರಿಸು = ವಿಚಾರಿಸು
ಇಚಾರ = ವಿಚಾರ
ಇತಿಷ್ಟೂ = (ಇಂತಿಷ್ಟೂ ?) ಎಲ್ಲವೂ
ಇತ್ತಿಲ್ಲ = ಇರಲಿಲ್ಲ
ಇಂಥೇವು = ಇಂತಹವು

ಇದ್ದೊ = ಇದ್ದುವು
ಇದೊಂದಪ ' ಇದೊಂದು ದಪ = ಇದೊಂದು ಸಲ
ಇಧಾನ = ವಿಧಾನ
ಇನ್ಯಾರು = ಇನ್ನು ಯಾರು
ಇನಿ ಮಾವಿನಹಣ್ಣು = ಒಂದು ಜಾತಿಯ ಮಾವು
ಇಪರೀತ = ವಿಪರೀತ
ಇಬ್ಬರದಕ್ಕೊಂಡು = ಬಲವನ್ನೆಲ್ಲಾ ಉಪಯೋಗಿಸಿ
ಇಬ್ರೂವೆ = ಇಬ್ಬರೂ (ನೂ)
'ಇರಸ್ಥಿತಿ' = ಇರುವಸ್ಥಿತಿ, ಪರಿಸ್ಥಿತಿ
ಇರೋನ = ಇರುವವನ
ಇರೊಂಬತ್ತು ಕೋಟಿ = ೧೮ ಕೋಟಿ
ಇವರಿಸು = < ವಿವರಿಸು
ಇವಿ = ಇದ್ದೀವಿ
ಇಳಿದು ಹೋಗು = ಕೃಶವಾಗು
ಇಳ್ಳೆಲ್ಲಾ = ಇರುಳೆಲ್ಲಾ
ಇಳ್ಳೊತ್ತು = ಇರುಳು ಹೊತ್ತು, ರಾತ್ರಿ

**ಈ**

ಈಟ್, ಈಟು, = ಇಷ್ಟು
ಈಪಟು = ಈ ಸಾರಿ, ಇನ್ನು ಮೇಲೆ
ಈಬೂತಿ = ವಿಭೂತಿ
ಈವಯ್ಯ = ಈ ಅಯ್ಯ
ಈಸಿಕೊಂಡು = ಇಸಿದುಕೊಂಡು, ಪಡೆದುಕೊಂಡು
ಈಳೇದೆಲೆ = ವೀಳೆಯದ ಎಲೆ

**ಉ**

ಉಕ್ಕಡಿಸು = (< ಉತ್ಕರ್ಷಿಸು ?), ಉಕ್ಕಿ ಬರುವುದು
ಉಕ್ಕಂದ, ಉಕ್ಕಂಡ = ಉಕ್ಕಿದ ಅಂದ, ಉಕ್ಕುವ ಹಾಗೆ
ಉಕ್ಕಂಡ ಬರಮಂಡ = ಉಕ್ಕಿ ಹರಿಯುವ ಪ್ರಮಾಣದಲ್ಲಿ
ಉಗ್ಗೆ = ಕೈಯಲ್ಲಿ ಹಿಡಿದು ಕೊಳ್ಳಲು ಅನುಕೂಲವಾಗುವಂತೆ ಕಟ್ಟಿದ ಹುರಿಯ ವಿನ್ಯಾಸ



ಉಟ್ಬುರು (ಬಿಸಲು) = (< ಉರು + ಉರು ?) ಬಹಳ ಸುಡುವ
ಉಂಟಿಕೊಂಡ = ಉರುಳಿಕೊಂಡ
ಉಡುಬೆ = ದೊಡ್ಡಪೊದೆ
ಉದ್ಕೂ = ಉದ್ದಕ್ಕೂ
ಉಪ್ಪರಿಕೆ = ಉಪ್ಪರಿಗೆ
ಉಬೇ ಸಂಕಟ = ಉಭಯ ಸಂಕಟ
ಉರಿಗಿಸು = ಬಗ್ಗಿಸು, ಸೊಟ್ಟ ಮಾಡು
ಉರುಬು = ಊದು, ಬಾಯಲ್ಲಿ ಉಸಿರುತುಂಬಿ ಬೆಂಕಿಯಮೇಲೆ ಬಿಡುವುದು
ಉರುಚಿಕೊಂಡ್ ಬುಡು = ನುಣುಚಿಕೊ, ತಪ್ಪಿಸಿಕೊ
ಉರುಳು = ಉರುಳಾಡು
ಉಳುಕೊಳ್ಳು = ಉಳಿದು ಕೊಳ್ಳು
ಉಳ್ಳಿಕೊಂಡು ಬತ್ತಾ = ಉರುಳಿಕೊಂಡು ಬರುತ್ತಾ

**ಊ**

ಊರು = ಒಂದೇ ಬಾರಿಗೆ ಒಂದು ಕಡೆಯಿಂದ ಬಿಡಿಸು, ಬಿಗಿಮಾಡು
ಊರುಕೇರಿನೆಲ್ಲ ಒಂದು ಮಾಡು = ಜೋರಾಗಿ ಗದ್ದಲವೆಬ್ಬಿಸು

**ಋ**

ಋಷ್ಯಾಂತೆ = ಋತುಮತಿ

**ಎ**

ಎಳ್ಳಿಟ್ರೆ ಎಳ್ಳು ಕೆಳಕ್ಕೆ ಬೀಳದಂಗೆ = ಅತಿ ಒತ್ತೊತ್ತಾಗಿ
ಎಕ್ಕಾಸ = (ವಿಕಾಸ), ಅತಿ ಹೆಚ್ಚಾಗಿ
ಎಕ್ಕು = ಮಿಡಿ, ಸ್ಪಂದಿಸು
ಎಗರಿಸು = ಲಪಟಾಯಿಸು, ಕದಿ
ಎಡಗುತ್ತಿ = ಮಧ್ಯಮಗಾತ್ರದ ಪೊದೆ
ಎಂಡು = ಎರಡು
ಎತ್ರ = ಎತ್ತರ
ಎತ್ಲಾಗಾರೂ = ಎತ್ತಲಾದರೂ
ಎತ್ಲಿಲ್ಲ = ಎತ್ತಲಿಲ್ಲ
ಎಲಡಕೆ = ಎಲೆ ಅಡಕೆ
ಎಲ್ಯಾರೂ = ಎಲ್ಲಿಯಾದರೂ

(ಬೀಗದ) ಎಸಳು = (ಬೀಗದ) ಕೈ
ಎಸರು = ಸಾರು

### ಏ

ಏಕವಾಗು = ಒಂದೇ ರೀತಿಯಾಗು, ಅಖಂಡವಾಗು
ಏಕಾನ = ಉಪಾಯ, ಆಲೋಚನೆ
ಏಟಿ (ಬರೆದರು) = ನಾಮ, ಉದ್ದನೆಯ ಗೆರೆ
ಏಟ್ಟೋ = ಎಷ್ಟೋ ?
ಏಟೇಟ್ತರ = ಎಷ್ಟೆಷ್ಟು ತರಹ
ಏನ್ರತ್ಯಮ್ಮಾ = ಏನ್ರಿ ಅತ್ಯಮ್ಮಾ
ಏನಾರೂ = ಏನಾದರೂ
ಏಳ್ತಾ = ಏಳುತ್ತಾ
ಏಳಿಸು = ಎಬ್ಬಿಸು
ಐದ್ತಾಲಿ = (ಐದೆ ತಾಲಿ) ಮಾಂಗಲ್ಯ
ಐನಾತಿ = ಒಳ್ಳೆಯ, ನಿಪುಣ
ಐಭೋಗ (ವೈಭೋಗ) = ವೈಭವ
ಐಸ್ಬಿರಿ = ಐಶ್ವರ್ಯ

### ಒ

ಒಟ್ಗೇ = ಒಟ್ಟಿಗೇ
ಒಕ್ಕೊಂಡು = ಒಗೆದುಕೊಂಡು
ಒಡೆದು ಮೂಡಿದ್ಹಂಗೆ = ಭೇದಿಸಿಕೊಂಡು ಮೇಲೆದ್ದ ಹಾಗೆ
ಒತ್ತೋಳು = ಒಂದು ತೋಳು
ಒಂತಕೆ (ಒಂದು ತಾವ್ಕೆ) = ಒಂದು ಕಡೆಗೆ
ಒಪ್ಪತ್ತು = < ಒರ್ ಪೊಳ್ತು = ಒಂದು ಹೊತ್ತು
ಒಂದ ಮಾಡು = ಮೂತ್ರ ವಿಸರ್ಜನೆ ಮಾಡು
ಒದರು = ಕೆಡಹು, ಕೊಡಹು.
ಒಂದೀಟು = ಒಂದಿಷ್ಟು
ಒಷ್ಟು = ಒಂದಿಷ್ಟು
ಒಷ್ಟರ = ಅಷ್ಟು ಅಗಲ
ಒಳಸುಂಟಿ ಹಿಡಿ = ಸೊಂಟದ ಬಳಿ ಚರ್ಮವನ್ನು ಹಿಂಡುವುದು



### ಔ

ಔಸ್ತಿ = ಔಷಧಿ

### ಕ

ಕಕಮಕರು = ದಿಗ್ಭ್ರಾಂತಿ
ಕಕಮಕ ಹಿಡಿ = ದಿಗ್ಭ್ರಮೆಗೊಳ್ಳು
ಕಕ್ಕು = ವಾಂತಿಮಾಡು
ಕರ್ಚು = ಖರ್ಚು
ಕಜೆ = ಅಳು
ಕಟ್ಟರಯ = < ಕಡು + ಹರಯ
ಕಟ್ಟೆಹಾಕು = ಕಟ್ಟೆ ಕಟ್ಟು
ಕಟ್ಲೆ = ಕಟ್ಟಲೆ, ನಿಯಮ
ಕಡಕತ್ತಿ = ಕಡಿಯುವ ಕತ್ತಿ, ದೊಡ್ಡ ಕುಡುಗೋಲು
ಕಡಿ, ಕಡೀತಾ (ಉದಾ ॥ ಹೊಗೆ ಕಡೀತಾ ಇತ್ತು) = ಕಡೆಯುತ್ತಾ, ಚಿಮ್ಮುತ್ತಾ
ಕಂಡಿ = ಕರಡಿ
ಕಡಿಂದ = ಕಡೆಯಿಂದ
ಕಡ್ಡೀಲಿ ಬರದಂಗೆ = ಬರೆದಹಾಗೆ, ವಿವರವಾಗಿ
ಕಡುಕು = ಗಂಡಸು ಧರಿಸುವ ಒಂದು ಕರ್ಣಾಭರಣ
ಕಣ್ಣಿಗೆ ಮೂಗಿಗೆ ಒತ್ತಿಕೊಳ್ಳೋ ಅಂತ = ಸುಂದರವಾದ
ಕಣ್ಣಿಗೆ ಕಣ್ಣು ಹತ್ತಿಸು = ನಿದ್ರೆ ಮಾಡು
ಕಣ್ಣು ಹೂದರೆ ಕಣ್ಣು ಕಾಣದಂತ = ದಟ್ಟವಾದ
ಕಣ್ಣೆಸರು = (ಕಣ್ಕೆಸುರ್?) ದೃಷ್ಟಿಬಡಿ
(ದೀಪ) ಕತ್ತಿಸು = ಹಚ್ಚು
ಕತ್ತಿಕೊಳ್ಳು = ಹತ್ತಿಕೊಳ್ಳು
ಕತ್ತು = ಹಚ್ಚು, ಕುತ್ತಿಗೆ, ಕೊರಳು
ಕದುರು = ಎಳೆಯದು (ಕದಿರ್?)
ಕದರು, (ಕದರಿದಂಗೆ) = ಕದಡು
ಕದ್ದಂಗೆ ಕಾಣದಂಗೆ = ಗೊತ್ತಿಲ್ಲದ ಹಾಗೆ
ಕಂದಲು = ದೊಡ್ಡ ಕುಡುಗೋಲು
(ಕಳಲೆ) ಕದಿರು = ಮೊಳಕೆ

ಕರ್ದಿದ್ದೊ = ಕರೆದಿದ್ದು
ಕನುಗು = ರಸತುಂಬಿ ಹೊಳೆ
'ಕಪ್ಪೆ ಚಿಪ್ಪಿನರ' = ಕಪ್ಪೆ ಚಿಪ್ಪಿನ ಅಗಲ
ಕಯ್ಯೆಣ್ಣೆ = ಹರಳೆಣ್ಣೆ
ಕರದ = ಕರೆದ
ಕರಾಯ = ಕ್ರಯ
(ಕದನ) ಕಲಾವಲಿ = (ಕಲಹಾವಳಿ ?) ಜಗಳ
ಕವ್ ಕೊಳ್ಳು = ಕವಿದುಕೊಳ್ಳು
ಕಸುಗೊಂಡು = ಕಸಿದು ಕೊಂಡು
ಕಳಚಿಗೊತ್ತು = ಕಳಚಿಕೊಂಡಿತು
ಕಳಲೆ ಕದಿರಿನಂತೆ = ಎಳೆಯ ಬಿದಿರಿನಂತೆ
ಕಳ್ಳು ಮುಚ್ಚೋಗಂಟ = ಹೊಟ್ಟೆ ತುಂಬುವವರೆಗೆ
ಕಳ್ಳು = ಕರುಳು
ಕಳೇವೇ = ಕಳೆಯೇ
ಕಳೇವು, ಕಲಿ, = ಕಾಂತಿ, ಉಲ್ಲಾಸ, ಲವಲವಿಕೆ
ಕಾಣನಿಲ್ಲ = ಕಾಣಲಿಲ್ಲ
ಕ್ವಾಪ = ಕೋಪ
ಕಾರವಾಗಿ (ಹೇಳು) = ತೀಕ್ಷ್ಣವಾಗಿ
ಕಾವಲೆ = ಕಾಲುವೆ
ಕಾಸೆ = ಕಚ್ಚೆ
ಕಾಲಿಯಾಯ್ತಾ = ಖಾಲಿಯಾಗುತ್ತಾ
ಕಾಳೆ = ಕಹಳೆ
ಕ್ಯಾತಾರ = (<ಕೇದಾರ ?) ಯಾರಿಗೂ ಕಾಣದ ಮೂಲೆ
ಕಿತ್ತರೆ ಬರದಂಥ = ಅನ್ಯೋನ್ಯ
ಕಿಬ್ಬರಿ = ಕಣಿವೆ
ಕಿಸಕೊಂಡು = ತೆರೆದುಕೊಂಡು
ಕಿಸಲೆ = ಎಳೆಯ ಮಗು
ಕಿಲ್ಲೆಗೊಂಬೆ = (ಪುತ್ಥಳಿಗೊಂಬೆ ?) ಸೂತ್ರದ ಗೊಂಬೆ
ಕುಟ್ಟಣ = ಎಲೆ ಅಡಿಕೆಯನ್ನು ಪುಡಿಮಾಡಿಕೊಳ್ಳುವ ಸಾಧನ



ಕುಟ್ಟೆ = ಕೊಂಡು ಜೊತೆಯಲ್ಲಿ
ಕುಂಡಿರಿಸು = ಕುಳ್ಳಿರಿಸು
ಕುಡಿ = ಮಗು
ಕುಂಡ್ಹೋಗ = (ತೆಗೆದು) ಕೊಂಡುಹೋಗುವುದಕ್ಕೆ
ಕುತ್ತು = ಮತ್ಸರ, ಅಪಾಯ
(ಕೆಳಕ್ಕೆ) ಕುಪ್ಪು = ಹಾರುವುದು
ಕುನ್ನಕುಟಕ = ಚಿಕ್ಕವರು, ಪುಟ್ಟವರು
ಕುಮರಿಸು = ತಿನ್ನು
ಕುರುವು = ಕುರುಹು
ಕುರುಕು = ಮೆಲ್ಲಗೆ ಜಗಿ
ಕುಷಿ = ಖುಷಿ, ಸಂತೋಷ
ಕುಸುಮೆ (ಅನ್ನ) = ಒಂದು ರೀತಿಯ ಬತ್ತ (ಕುಸುಬಲು?)
ಕುಸುಕು = ಸಣ್ಣದಾಗಿ ಅಳು
ಕೂಕ್ಕೊತ್ತಿ = ಕೂಗಿಕೊಳ್ಳುತ್ತಿ
ಕೂಟಲೆ, (ಕೂಟ್ಲೆ) = ಕೂಡಲೆ
ಕೂಟಲೋರು = ಜೊತೆಯವರು
ಕೂಡಾವಳಿ (ಮಾಡ್ಕೋ) = ಕೂಡಿಕೆ, ವಿಧುರ ಮತ್ತು ವಿಧವೆಯರ ಮದುವೆ
ಕೂದು = ಕುಯ್ದು
ಕೂನುಕುರಾ = ಕುರುಹು, ಗುರುತು
'ಕೂರಮಿಕ' = ಕ್ರೂರ ಮೃಗ
ಕೂರ ಪರಾಣಿ = ಕ್ರೂರ ಪ್ರಾಣಿ
ಕೂಲಿಮಠ = Private School
ಕೆಲಸಿ = ಕ್ಷೌರಿಕ
ಕೈ ಅಳ್ಳಾಡಿಸು = ಅಸಮ್ಮತಿ ಸೂಚಿಸು, ಅಸಾಧ್ಯವೆಂದು ಹೇಳು
ಕೈಮುರಿ = ಗಂಡಸರು ಕೈಗೆ ಹಾಕುವ ಲೋಹದ ದಪ್ಪ ಬಳೆ
ಕೈತೊಳೆದುಕೊಂಡು ಮುಟ್ಟೋ ಅಂತ = ಶುದ್ಧವಾದ, ಸುಂದರವಾದ
ಕೈ ಕಾಯ = ಕಣ್ಣಿಟ್ಟು ಪರೀಕ್ಷಿಸು
ಕೈವಸ = ಕೈವಶ
ಕೊಂಟು = ಕೊರಡು

ಕೊಕ್ಕರಿಸು = ಮಡಿಸು, ಚಿಕ್ಕದು ಮಾಡು, ಮುದುರು
ಕೊಂಡ = ಕುಂಡ, ಅಗ್ನಿಕುಂಡ
ಕೊಡ್ನಿಲ್ಲ = ಕೊಡಲಿಲ್ಲ
ಕೊದ್ಲಿಸ್ತಾ = ತೊದಲುತ್ತಾ
ಕೊರತ(ನೆ) = ಚಿಂತೆ
ಕೊಟ್ಟಣ ಕುಟ್ಟಿ ಪಟ್ಟಣ ಸಾರಿಸು = ಧಾನ್ಯವನ್ನು ಕುಟ್ಟಿಸಿ, ಪಟ್ಟಣವನ್ನು ಸಿಂಗರಿಸು
ಕೊಸಾರನೆ = ರೇಗಿನಿಂದ
ಕೊಳದಪ್ಪಲೆ = ಕೊಳಗದಂತಿರುವ ತಪ್ಪಲೆ, ದೊಡ್ಡ ಪಾತ್ರೆ
ಕೊಳ್ಳು = ಕೊರಳು

### ಖ

ಖಂಡ್ರಾಕ್ಷಸಿ = ಕಣ್ಣಿನ ರಾಕ್ಷಸಿ (ಕಣ್ರಾಕ್ಷಸಿ > ಕಂಡ್ರಾಕ್ಷಸಿ)
ಗವಲು ಹೊಡಿ = ದುರ್ವಾಸನೆ ಬರುವಿಕೆ
'ಗವ್' ಅನ್ನೋ = (ಗವಿಯಂತಹ ?) ಭಯ ಹುಟ್ಟಿಸುವ
ಗರುಡಾಳ = ಗರುಡ
ಗಮನ = ಸುವಾಸನೆ
ಗತಿಕಾಲ = ಸಾಯುವ ಕಾಲ
ಗಡಗುಟ್ಟು = ನಡುಗು
ಗರ್ತಿ = ಗರತಿ
ಗಟರು ಹಾಕು = ಗರ್ಜಿಸು
ಗರೀಬ = ಬಡವ
ಗಮಾರ = ಮುಗ್ಧ, ದಡ್ಡ
ಗ್ಯಪ್ತಿ = ಜ್ಞಾಪಕ
ಗಂಗಳ = ಊಟದ ತಟ್ಟೆ
ಗಣಾರಾಜನೆ (ಹಬ್ಬ) = < ಗಣಾರಾಧನೆ
ಗಂಟ – ಗಂಟ್ಲೂ = ವರೆಗೆ, ತನಕ , ವರೆಗೂ, – ತನಕವೂ
ಗ್ಯಬಿಕೊ = ನಿರಾಯಾಸವಾಗಿ ಪಡೆ
ಗನಂಧಾರಿ = ಶ್ರೀಮಂತ, ಪ್ರಬಲ
ಗಿಲೀಟು = ಉಪಾಯ



ಗಿಟಗಿಟಿ ಅನ್ನು = ಸಪ್ಪಳಮಾಡು, ತುಂಬಿ ತುಳುಕು
ಗಿಂಜಲು = ದೊನ್ನೆ
ಗುಪ್ಪು = ಕುಪ್ಪು, ನೆಗೆ
ಗುಳ್ಳೇಲಕ್ಕ = ನರಿ
– ಗುರ, ಕುರ, = ಕುರು, ಬೊಕ್ಕೆ
ಗುದ್ದು, (ಗುದ್ದಿನ) = ಸಮಾಧಿ
ಗುರೀನಯ್ಯ = ಗುರುವಿನ ಅಯ್ಯ, ಗುರು
ಗುಕ್ಕು = ತುತ್ತು
ಗುಡ್ಲು = ಗುಡಿಸಲು
ಗುಂಡಿ = ಹಳ್ಳ
ಗುದ್ದು = ಏಟು
ಗುತ್ತಿ = ಚಿಕ್ಕ ಪೊದೆ
ಗುದ್ಲೀಪುರಕ್ಕೆ ಕಳಿಸಿಬುಡು = ಸಾಯಿಸು ; ಯಮಪುರಕ್ಕೆ ಕಳುಹಿಸು
ಗುಜಗುಂಪಲು = ಮುತ್ತಿಕೊಳ್ಳುವುದು
ಗೇದ್ರೂವೆ = (< ಗೆಯ್) ಕೆಲಸಮಾಡಿದರೂ
ಗೆಂಡೆ ಮೀನು = ಒಂದು ಜಾತಿಯ ಮೀನು
ಗೇದುಣ್ಣಾಕೆ = ಗೆಯ್ದು ಉಣ್ಣುವುದಕ್ಕೆ
ಗೊಟಕ್ ಅನ್ನು = ನೆಲೆಗೆ ಸೇರಿಸು, ಸತ್ತು ಹೋಗು
ಗೋರುಕಲ್ಲು = ದೊಡ್ಡ ಬಂಡೆ
ಗೋರ್ಚ್ = ನುಜುರುಗಲ್ಲು
ಗೋಜಿಹೋಯ್ತು = ಕೆದರಿಹೋಯಿತು, ಗೋಜಲಾಯಿತು
ಗೋಮಟೆ = ಗೋಣಿಚೀಲವನ್ನು ∧ ಆಕಾರಕ್ಕೆ ಮಡಿಸಿ ಮಳೆಯಲ್ಲಿ ನೆನೆಯದಂತೆ ತಲೆಮೇಲೆ ಹಾಕಿಕೊಳ್ಳುವುದು
ಗೋಟಿಗೆ = ಗೋಷ್ಠಿಗೆ, ಮನೆಗೆ
ಗೋಳು ಹುಯ್ಯು = ಪೀಡಿಸು, ತೊಂದರೆಕೊಡು
ಗೌಗರಿಯೋ = ಭಯಹುಟ್ಟಿಸುವ
ಗೌಡಿ = ಸೇವಕಿ
ಗಾಚಾರ = (< ಗ್ರಹಚಾರ) ಅದೃಷ್ಟ
ಗಾಡಿಬುಡು = ಹೋಗು

ಗ್ಯಾನ < ಜ್ಞಾನ = ನೆನಪು
ಗ್ಯಾಪಕ = < ಜ್ಞಾಪಕ
ಗ್ವಾಬೆ = ಗೋಳು, ಕಷ್ಟ
ಗಾಳಿನಾಯಿ = ಗಾಳಿಯವಾಸನೆ ಹಿಡಿಯುತ್ತಾ ಓಡಾಡುವ ನಾಯಿ

**ಘ**

ಘಟ್ಟದ ರೊಟ್ಟಿ = ಹಿಂದೆ ದೂರದ ಪ್ರಯಾಣ ಹೋಗುವವರು ವಾರಗಟ್ಟಲೆ ಇಟ್ಟುಕೊಂಡು ತಿನ್ನುತ್ತಿದ್ದ ವಿಶೇಷವಾದ ರೊಟ್ಟಿ.
ಚಕಮಕಿ = ಉಕ್ಕಿನ ಚಪ್ಪಟೆಯಾದ ತುಂಡು. ಇದಕ್ಕೆ ಬೆಣಚುಗಲ್ಲಿನಿಂದ ಹೊಡೆದರೆ ಕಿಡಿಹಾರುತ್ತದೆ.

**ಚ**

ಚಕ್ರವಾದಿ = ಚಕ್ರವಾದ್ಯ
ಚಂಚಿ = ಸಂಚಿ, ಚೀಲ
ಚಾಚ್ತೇನಿ = ಎದುರು ಇಡುತ್ತೇನೆ
ಚಂಚಾರ = ಸಂಚಾರ
ಚಣ = ಕ್ಷಣ
ಚಂದುಳ್ಳಿ = ಸುಂದರವಾದ
ಚಂದ್ರಾಯ = ಚಂದ್ರಾಯುಧ, ಖಡ್ಗ
ಚಮ್ಡ = ಚರ್ಮ
ಚರ್ಬಿ = ಕೊಬ್ಬು, ಶಕ್ತಿ, ಧೈರ್ಯ
ಚಬುಕು = ಚುರುಕು, ಲವಲವಿಕೆ
ಚಲುವಾಡು = ಅತ್ತಿತ್ತ ಜಗ್ಗುವುದು
ಚಾಮ = < ಕ್ಷಾಮ
ಚಾರೀಲಿ = ಸುಲಭ ಬೆಲೆಯಲ್ಲಿ
ಚಾಲು = ಕಿಲಾಡಿತನ
ಚಾಲೂಕು = ಚಟುವಟಿಕೆ, ಚಾತುರ್ಯ
ಚರಿ (ಗೆ) < ಸರಿ (ಗೆ) = (ಸಲಕ್ಕೆ) ಬಾರಿಗೆ
ಚಳಿಸು = ಸಾಕುಮಾಡು, ಬೇಸರಪಡಿಸು
ಚ್ವಾಟೆ = (ಸೋಟೆ) ಮುಸುಡಿ
ಚಿಮಟ = ಕಮಟು



ಚೌರಿಗೆ = ಬಿಂದಿಗೆ
ಚೌರ್ಯೋಳಿಗೆ = ಚಾರಿಯವಳಿಗೆ, ಸಲದವಳಿಗೆ
ಚೂರುಮೂಗು = ಉದ್ದವಾದ ನೇರವಾದ ಮೂಗು
ಚೆಂದುಳ್ಳಿ = ಸುಂದರ
ಚೊಂಬು = ತಂಬಿಗೆ
ಚೋಜಿಗ = (< ಸೋಜಿಗ), ಆಶ್ಚರ್ಯ
ಚೌರ = ಕ್ಷೌರ

**ಜ**

ಜಗನ್ ಜಾತ್ರೆ = ದೊಡ್ಡಜಾತ್ರೆ, ಜಗಜ್ಜಾತ್ರೆ
ಜಗಿ = ಇಳಿಬೀಳು
ಜಟ್ನ್ = ಜಟ್ಟನೆ, ಬೇಗ
ಜಡಾಯಿಸು = ಹಾಕು
ಜನಾದ್‌ಜನ = ಇಡೀ ಜನವೆಲ್ಲ
ಜಬರುದಸ್ತು = ಜೋರು, ದರ್ಪ
ಜಲ್ಮ = ಜನ್ಮ
ಜವ = ಜಾವ
ಜಂಬೂಜಾತಕ = ಭರತಖಂಡ, ಪ್ರಪಂಚ
ಜ್ವಾಕೆ = ಜೋಕೆ
ಜಾಡು = ದಾರಿ, ಗುರುತು
ಜಾತ್ಯೋರು = ಜಾತಿಯವರು
ಜ್ವಾಕೇಲಿ = ಜೋಕೆಯಲ್ಲಿ, ಎಚ್ಚರಿಕೆಯಿಂದ
ಜಿಂಜಿನ್‌ಜಿರಿ (ಹತ್ತಿಸು) = ಬಲವಂತ, ಒತ್ತಾಯ
ಜಿದ್ದು = ದ್ವೇಷ, ಪೈಪೋಟಿ
ಜಿನ = < ದಿನ
ಜೀವಕೆ ಜೀರಿಗೆ ಅರಿ = ಒತ್ತಾಯ ಮಾಡು
ಜೀವಮಾಡು = ಜೀವ ಬರಿಸು
ಜೀವಾಳ = ಪ್ರಾಣ
ಜೀರುದುಂಬೆ = ದೊಡ್ಡ ದುಂಬಿ
ಜೀವಣ = < ಜೀವನ

ಜುಜಿಬಿ = ಕನಿಷ್ಠ, ಅಗಣ್ಯ
ಜೂರತ್ತು = ಜೋರು
ಜೊತಾಗಿ = ಜೊತೆಯಾಗಿ
ಜೊಂಪು = ತೂಕಡಿಕೆ
ಜೋಕು = ಕೊಬ್ಬು, ಹೆಮ್ಮೆ, ಅಹಂಕಾರ
ಜೋಬು = ಜೇಬು

**ತ**

ತಗದೇಬುಡು = ಕೊಂದು ಬಿಡು
ತಟವಟ = ಮೋಸ, ವಂಚನೆ
ತಟ್ಟುಲಾಡಿ ತಾರಾಡಿ = ಪರದಾಡು
ತಡದೂ ತಡದೂ = ಸಹಿಸೀ ಸಹಿಸೀ
ತಂತು = ಸಂಚು, ತಂತ್ರ
ತದಕು = ಹೊಡೆ, ಜಜ್ಜು
ತನುವಾದ = ಶ್ರೀಮಂತವಾದ, ಫಲವತ್ತಾದ
ತಪ್ಪಾಗಿದ್ದಾದಾ ? = ತಪ್ಪಾಗಿದ್ದೀತಾ ?
ತರ = ತರಹ, ರೀತಿ
ತರಾಕಾದಾತ ? = ತರಲಿಕ್ಕಾದೀತೆ ?
ತರಾಕೆ = ತರುವುದಕ್ಕೆ
ತಲೆಯಾಳು = ಮುಖಂಡ
ತಲೆದಸೀಲಿ = ತಲೆಯದೆಸೆಯಲ್ಲಿ
ತಲೆದೆಸೆ = ತಲೆಯೆಡೆ
ತಲೆಬುಡ = ಆದಿ ಅಂತ್ಯ
ತಲೆಮಾಲು = ಮಧ್ಯಾನ್ನ ಮೂರು ಗಂಟೆಯಹೊತ್ತು
ತಲೆಸವರು = ಬುಟ್ಟಿಗೆ ಹಾಕಿಕೊಳ್ಳು
ತಲೆಬಾಗಿಲು = ಮಹಾದ್ವಾರ, Main gate
ತಲೆತಿರುಗು = ಅಹಂಕಾರ, ಗರ್ವ
ತಳಾರಿಸಿಕೊಳ್ಳು = ಸುಧಾರಿಸಿಕೊಳ್ಳು, ತಳ ಆರಿಸಿಕೊಳ್ಳುವುದು
ತಾನ = ಸ್ನಾನ
ತಾನಗಟ್ಟ = ಸ್ನಾನಘಟ್ಟ



ತಾಪತ್ರೆ = ತಾಪತ್ರಯ
ತಾಬೀಲುಮಾಡು = ಜವಾಬ್ದಾರನನ್ನಾಗಿ ಮಾಡು, ಹೊಣೆಮಾಡು
ತಾರಿಗೆ ಮಾರಿಗೆ = ಬೇಗ ಬೇಗ
ತ್ವಾರಣ = < ತೋರಣ
ತಾಳದ = ಪಲ್ಯ
– ತಾವು, –ತಾಕೆ = ಹತ್ತಿರ, ಹತ್ತಿರಕ್ಕೆ
ತಿಟ್ಟು = ದಿಣ್ಣೆ
ತಿಂತು = ತಿಂದಿತು
ತಿನ್ನಾಕೂ = ತಿನ್ನುವುದಕ್ಕೂ
ತಿರಗ = ಮತ್ತೆ, ಆಮೇಲೆ
ತೀರನಿಲ್ವಾ ? = ತೀರಲಿಲ್ಲವೇ?
ತೀರ್ (ನೋಡಿದ್ರೆ) = ಮುಖ, ರೀತಿ
ತುಣಿ = ತುಳಿ
ತುತ್‌ಗಟ್ = ಮಿತಿಮೀರಿದ, ಹಿಡಿತಪ್ಪಿದ
ತೆಪ್ಪು = ತಪ್ಪು
(ಬೀಡಿ) ತೆವಲು = ಚಟ, ಹವ್ಯಾಸ
ತೆವರಾಡು = ಕೋಪದ ಮಾತಾಡು
ತೊಟ್ಲು = ತೊಟ್ಟಿಲು
ತೊಲೇ = < ತೊಲೆಯ
ತೊಳಸಿಗಿಡ = ತುಳಸಿಗಿಡ
ತೊಳೀನಿಲ್ಲ = ತೊಳೆಯಲಿಲ್ಲ
ತೋಪಿ = ಟೋಪಿ
ತೊಪ್ಪೆಯಾಗಿ = ವದ್ದೆಯಾಗಿ
'ತೋಳಿಸಿ'ದ = ಕಮ್ಮಾರನ ಕುಲುಮೆಯಲ್ಲಿ ಹರಿತ ಮಾಡಿಸಿದ

**ದ**

ದಕ್ಷತ್ತು = ದಕ್ಷತೆ, ಶಕ್ತಿ
ದಗನ = ಗಗನ
ದಬ್ಬಾಕು = ಡಬ್ಬುಹಾಕು, ಬಾಯಿ ಅಡಿಯಾಗಿ ಹಾಕು
ದಬ್ಬೆ (ಗಿಬ್ಬೆ) = ತೆಳುವಾಗಿ ಸೀಳಿದ ಬಿದಿರು

ದಯ್ಯಾಲದ ಮರ = ದೆವ್ವ – ಆಲದ ಮರ, ದೊಡ್ಡ ಆಲದ ಮರ
ದರಬಾರು = ದರ್ಬಾರ್, ಅಧಿಕಾರ
ದಾಟಿದೋನಿಗೆ = ದಾಟಿದವನಿಗೆ
ದಾಪು, (ದಾಪಿಗೆ) = ದೂರದೂರಕೆ ಹೆಜ್ಜೆ ಇಡುವುದು
ದಾವಾಗು = < ದಾಹವಾಗು
ದಿಗಂತರವಾಗಿ = ದಿಕ್ಕು ದಿಕ್ಕನ್ನೂ ವ್ಯಾಪಿಸುವಂತೆ
ದಿಟ್ಟ = ಧೈರ್ಯ, ದೃಢ
ದಿಂಡು = ಏರಿ, ಎತ್ತರವಾದ ಜಾಗ
ದಿನಾ ರೋಜೀನು = ಪ್ರತಿನಿತ್ಯ
ದಿಂಬಾಗಿ = ದಪ್ಪವಾಗಿ
ದಿರಸ್ = Dress
'ದಿವನಾದ' = ದಿವ್ಯವಾದ
ದೀಪತುಂಬಿಸು = ದೀಪ ಆರಿಸು
ದೀಪಾಂತರ = ದ್ವೀಪಾಂತರ
ದುಂಡು = ಬಾಯಿ, ಮೂತಿ
ದುರಾದೃಷ್ಟ = ದುರದೃಷ್ಟ
ದುಳ್ಳಾಡಿಕೊಂಡು = ತೂರಾಡಿಕೊಂಡು
ದೆಂಗು = ಕುಂಟು
ದೂರ್ತಾರೆ = ದೂರುತ್ತಾರೆ
ದೊಕ್ ಸಲಾಂ = ಡೊಗ್ಗು ಸಲಾಮು
ದೊಕ್ಕೆ (ದೊಕ್ಕೇಲಿ) = ಹೊಟ್ಟೆ, ಹೃದಯ
ದೊಂದಿ = ಗೊರವಿಕಡ್ಡಿಯ ಒಂದು ಭಾಗವನ್ನು ಜಜ್ಜಿ ಪಂಜಿನಂತೆ ಉರಿಸುವುದು
ದೂಪರಿಸ್ಯಾಡ್ತಾ = ತೂರಾಡುತ್ತಾ
ದೇವಾಲ್ಯ = ದೇವಾಲಯ, ಪಾಳೂರು
ದೇವೇಂದ್ರಾಯ = ದೇವೇಂದ್ರರಾಯ
ದೇಸ = ದೇಶ
ದ್ರೇಹ = ದೇಹ
ದೊಮ್ಮ = ದೊಂಬ
ದೊಸಗೊಳ್ಳು = ಹೂತುಕೊಳ್ಳು



ದೋಸರಿ = ಜ್ಯೋತಿಷಿ
ದೌಡುಕಿತ್ತು = ವೇಗವಾಗಿ ಓಡು

**ನ**

ನಕ್ಚತ್ರ = ನಕ್ಷತ್ರ
(ನಟಿಗೆ) ನುಗ್ಗು = ಬೆರಳಿನ ನಟಿಕೆ ಮುರಿ
ನಡೆ ಬಾಗಿಲು = ಹೆಬ್ಬಾಗಿಲು
ನಜ್ಜುಗುಜ್ಜಿಯಾಗು = ಛಿದ್ರ ಛಿದ್ರವಾಗು, ಜರ್ಝರಿತವಾಗು
ನತ್ತರ – ರಕ್ತ
ನನಿಗಿ ಹೋಗು = ಕೃಶವಾಗು, ಬಾಡಿಹೋಗು
ನನ್ನ ನೆಳ್ಳಿಗೆ ನಾನು ಅಂಜ್ಕೊಂಡಿರೋದು = ತುಂಬಾ ಎಚ್ಚರದಿಂದಿರು
ನಮ್ಮೆತ್ಗೂ = ನಮ್ಮ ಎತ್ತಿಗೂ
ನಮ್ಮಿಚ್ಚ್ಯಾ = ನಮ್ಮ ಇಚ್ಛೆಯೇ ?
ನಸೀಪ = ನಸೀಬು, ಅದೃಷ್ಟ
ನಳ್ತಾ = ನರಳುತ್ತಾ
ನಳ್ಳಿ (ಗೊಮಾರ) = ಏಡಿ (ಕುಮಾರ)
'ನಳ್ಳಿ' ನಲ್ಲಿ = ನೆರಳಿನಲ್ಲಿ
ನಾಕೊರ್ಷ = ನಾಲ್ಕು ವರ್ಷ
ನಾಡ್ದು = ನಾಡಿದ್ದು
ನಾಮರ್ದ = ನಿಷ್ಪ್ರಯೋಜಕ
ನಾಮಹಾಕು = ಮೋಸಮಾಡು
ನಾಳಿಕ್ಕೆ = ನಾಳೆಗೆ
ನ್ಯಾಕೆ = ತೊಟ್ಟಿಲು ಕಟ್ಟಿರುವ ಹಗ್ಗ
ನ್ಯಾತಾಡು = ನೇತಾಡು
ನಿದ್ಯಾನೆ = ನಿಧಿಯನ್ನೇ
ನಿದ್ಯಾವ = ನಿಧಾನವನ್ನು, ನಿಧಿಯನ್ನು
ನಿಪ್ಪಣ = ತೃಪ್ತಿ
ನಿಪಿ = ನಿರ್ಗತಿಕ, ಏಕಾಂಗಿ
ನಿಮ್ಮೆಣ್ಣು = ನಿಮ್ಮ ಹೆಣ್ಣು
ನಿಮ್ಮೂರ್ತಾವು (ನಿಮ್ಮೂರ ತಾವು) = ನಿಮ್ಮೂರ ಹತ್ತಿರ

ನಿಂದುರಿದು = ನಿಂತು ಉರಿದು
ನಿಂದೊಬ್ಬನ = ನಿಂತು ಒಬ್ಬನನ್ನು
ನಿಂದೇಯ = ನಿನ್ನದೇ
ನಿರುಂಬಳ = < ನಿರುಮ್ಮಳ, ನೆಮ್ಮದಿ
ನಿಲ = ಕದದ ಮೇಲ್ಭಾಗ
ನಿಸಮಾಯ = ಅನಿರೀಕ್ಷಿತ, ನಂಬಲಾಗದಂಥ, ಇದ್ದಕ್ಕಿದ್ದಂತೆ
ನೀವು, ನೀವ್ತಾ = ಮೆಲ್ಲಗೆತೀಡು, ತೀಡುತ್ತಾ
ನೀಸ್ಯವಳೆ = ನೀಸಿದ್ದಾಳೆ
ನೀಸು, (ನೀಸಿ) = ನಿಭಾಯಿಸು
ನುಜುರುಗಲ್ಲು = ಅತಿಸಣ್ಣ ಕಲ್ಲು
ನುಲಿಚು = ತಿರಿಚು, ನುಲಿ
ನುಲಿ = ತಿರುವು
ನೂಕೋಗ = ನೂಕುವಾಗ
ನೆಕ್ಕೊಂಡು = ನೆಕ್ಕಿಕೊಂಡು
ನೆಟ್ಟ (ಉದಾ॥ ನೆಟ್ಟ ಮಧ್ಯಾಹ್ನ) = ನಡು
ನೆನೀತಾ = ನೆನೆಯುತ್ತಾ
ನೆಪ್ಪು = ನೆನಪು
ನೆರಿಕೆ = ಬೆರಳು ಗಾತ್ರದ ಮರದಕಡ್ಡಿಗಳಿಂದ ಮಾಡಿದ ಗೋಡೆ
ನೆವರು = ರೇಗು
ನೆಲಕಚ್ಚು = ಸಾಯುವುದು
ನೆಳ್ಳು = < ನೆರಳು < ನೆಳಲ್
ನೇತ್ರ = ತುಂಬ ತೆಳುವಾದ
ನೇರ್ಹಾಕು = ನೇತುಹಾಕು
ನೋಡಿದೇಟಿಗೇ = ನೋಡಿದ ಕೂಡಲೆ
ನೋಡ್ತಾನೆ ಅವನೆ = ನೋಡುತ್ತಲೇ ಇದ್ದಾನೆ
ನಂಗಿದೇ = ನನಗೆ ಇದೇ

**ಪ**

ಪಡೂಲು = ಪಡುವಣ ದಿಕ್ಕು
ಪಡ್ಡೆಕೊತ್ತಿ = ಯೌವನಶಾಲಿಯಾದ ಬೆಕ್ಕು



ಪರ್ಪಂಚ = ಪ್ರಪಂಚ
ಪತಿವರ್ತೆ = ಪತಿವ್ರತೆ
ಪರ್ದಕ್ಷಣೆ = ಪ್ರದಕ್ಷಿಣೆ
'ಪರಮಾಷಿ' = ಒಳ್ಳೆಯ, ಸೊಗಸಾದ
ಪರಾಣ = < ಪ್ರಾಣ
ಪರಿಯತ್ನ = ಪ್ರಯತ್ನ
ಪವಳಿಸು < ಪವಡಿಸು = ಮಲಗು
ಪಸಂದು = ಚೆನ್ನು, ಸೊಗಸು
ಪರ್ಸಂಗ = ಪ್ರಸಂಗ
ಪಳ್‌ಪಳ್ಗೆ = ಶುಭ್ರ, ನಿರ್ಮಲ
ಪಳಾನ್ = Plan
ಪಾಚೀನ = ಪ್ರಾಚೀನ
ಪಾವಡೆ = ಬಟ್ಟೆ
ಪಾಸಲೆ = ದೂರ, ಅಂತರ
ಪಿಂಡಿ = ಹೊರೆ, (bundle)
ಪಿಂಡಾಡಿಸು = ಹಿಂಸೆಮಾಡು, ಬಲಾತ್ಕರಿಸು
ಪೀಕಲಾಟ = ತೊಂದರೆ
ಪಿಲ್ಲಿ = ಹೆಂಗಸರು ತಮ್ಮ ಕಾಲಿನ ಎರಡನೇಬೆರಳಿಗೆ ಹಾಕಿಕೊಳ್ಳುವ ಒಂದು ಆಭರಣ
ಪುಕ್ಕಲ = ಭೀರು, ಅಳ್ಳೆದೆಯವನು
ಪುಟ್ಟಗೆ = ಪೂರ್ತಿಯಾಗಿ
ಪುದರುಗುಟ್ಟು = ಹೆದರು
ಪುದುರ್‌ಗಿರಿ = ನಡುಗು
ಪುಸಲಾಯಿಸು = ಹುರುಪುತುಂಬು, ಹೊಗಳು, ಉಬ್ಬಿಸು
ಪುಳ್ಳೆ = ಸಣ್ಣ ಸಣ್ಣ ಕಡ್ಡಿಗಳು
ಪೂಸಿಮಾತಾಡು = ಮನಸ್ಸಿಗೆ ಆಪ್ಯಾಯಮಾನವಾಗುವಂತೆ ಮಾತಾಡುವುದು
ಪೂಸಿಮಾಡು = ಒಲಿಸಿಕೊ, ಅನುನಯದಿಂದ ಒಗ್ಗಿಸಿಕೊ
ಪೆಗ್ಗಿ ಬಿದ್ದೆ = ಹಳ್ಳಕ್ಕೆ ಬಿದ್ದೆ, ಮೋಸಹೋದೆ
ಪಂಚಂಪಾಡಾಗು = ಚೆಲ್ಲಾ ಪಿಲ್ಲಿಯಾಗು

ಪಂಚಾಯಿತಿ = ವಿವರವಾದ ವಿಮರ್ಶೆ
'ಪ್ರತ್ಯೇಕವಾಗು = ಪ್ರತ್ಯಕ್ಷವಾಗು, ಸಾಕ್ಷತ್ಕಾರವಾಗು

### ಬ

ಬಗಸೆ = ಬೊಗಸೆ
ಬಗವಂತ = ಭಗವಂತ
ಭಂಗೇಳಿಸು = ಭಂಗಗೊಳಿಸು, ಅವಮಾನಿಸು
ಬಂಡ ಧೈರ್ಯ = ಭಂಡ ಧೈರ್ಯ, ಶಕ್ತಿ ಇಲ್ಲದಿದ್ದರೂ ತೋರಿಸುವ ಧೈರ್ಯ
ಬಡುಕೊಂಡ್ರೆ = ಅತ್ತರೆ
ಬಡಿಗೆ = ದೊಣ್ಣೆ
ಬಡವೆ = ಬಡವಿ
ಬತ್ತಾ = ಬರುತ್ತಾ
ಬತ್ತಿದ್ಯಲ್ಲ = ಬರುತ್ತಿದ್ದಿರಲ್ಲ
ಬಂದೊ = ಬಂದೆವು
ಬದ್ಲ್ = ಬದಲು
ಬದುಕು = ಪದಾರ್ಥ, ಸಾಮಾನು
ಬದುಕಾಟ ಮಾಡು = ಜೀವನ ಸಾಗಿಸು
ಬದೀಕೋ = ಬದುಕಿಕೊ
ಬಣಗು = ಗೋಗರೆ, ಒರಲು
ಬಯ = ಭಯ
ಬರಗಾಳಿ = < ಬಿರುಗಾಳಿ
ಬರ್ಲು = ಪೊರಕೆ
ಬರಗೆಟ್ಟ ದೇವರಿಗೆ ಪರ ಮಾಡಿದಂಗೆ = ಕ್ಷಾಮಪೀಡಿತ ದೇವರಿಗೆ ಹಬ್ಬ ಮಾಡಿದಂತೆ
ಬರಗೆಟ್ಟಂಗೆ (ಬರಗೆಟ್ಟ ಹಾಗೆ) = ಕ್ಷಾಮ ಬಂದಹಾಗೆ
ಭರಕತ್ತಾಗು = ಪ್ರಬಲವಾಗು, ಶ್ರೀಮಂತವಾಗು
ಬರಿಸ್ನೇಬೇಕು = ಬರಿಸಲೇ ಬೇಕು
ಬರೋಹೊತ್ಗೆ = ಬರುವ ಹೊತ್ತಿಗೆ
ಬಲವ್ವ = ಮಲತಾಯಿ
ಬಲಕಾಯಿಸು = ಪ್ರಬಲವಾಗು, ಪ್ರವರ್ಧಮಾನಕ್ಕೆ ಬರು,



'ಬಲ್ಮಿಷ್ಟಿ'ಗೆ = ಬಲವಂತಕ್ಕೆ, ಒತ್ತಾಯಕ್ಕೆ
ಬವಕೆ = ಬಯಕೆ
'ಬಸುಂ' ಅಂದ್ಹೋಗು = ಬಣಬಣ, ಶೂನ್ಯ (ವಾಗು)
ಬಳ್ಳಿಕೊತ್ತಿತ್ತು = ಬಳಕುತ್ತಿತ್ತು
ಬಳ್ಳಿಕೊಂಡು = ಬಳಲಿಕೊಂಡು
ಬಳ್ಳುವ = ನರಿ
ಬ್ಯಾಗನೆ = < ಬೇಗನೆ
ಬಾಡು = ಮಾಂಸ
ಬಾಣ್ಣ = ಬಾ ಅಣ್ಣ
ಬಾರ್ದ ? = ಬಾರದಾ ?
ಬಾಯ್ಮೇಲೆ ಕಯ್ ಮಡೀಕೊ = ಬಾಯಿಯ ಮೇಲೆ ಕೈ ಇಟ್ಟುಕೊ, ವಿಸ್ಮಯ ಪಡು
ಬಾಯಾರು = ಬಾಯಾರಿಕೆಯಾಗು
ಬಾಯಾಡಿಸು = ಮೇಯಿಸು, ತಿನ್ನಿಸು
ಬಾಯಿಕೊಡು = ಮಾತಿಗೆ ಪ್ರತಿಮಾತು ಹೇಳು
ಬಾವಿಸು = ಭಾವಿಸು
ಬಾಳಾಟ ಮಾಡು = ಜೀವನ ಸಾಗಿಸು
ಬಾಳ = ಬಹಳ
ಬಿಕ್ಕಿನ್‌ಬಿರಿಯ = ಕಂಠಪೂರ್ತಿ, ಸಂಪೂರ್ಣ
ಬೀಗದ ಎಸಳು = ಬೀಗದ ಕೈ (Key)
ಬಿದ್ದಂಬೀಳ (ಓಡು) = ಬೀಳುವ ಹಾಗೆ
ಬಿದರೆ ಮೇಗಳ ಚದುರೆ = ಸುಂದರಿ
ಬಿದ್ದಂಬೀಳ ಪಂಚಂಪಾಡಾಗಿ = ಬೀಳುವುದನ್ನೂ ಲೆಕ್ಕಿಸದೆ ಚೆಲ್ಲಾಪಿಲ್ಲಿಯಾಗಿ
ಬೀಡಿಕೆ ಹೂಡು = ಬಿಡಾರ ಮಾಡು
ಬಿಮ್ಮನಸೆ = ಗರ್ಭಿಣಿ
ಭೀಮರಾಶಿ ಬಳೆ = ಒಂದು ರೀತಿಯ ಬಳೆ
ಬಿರ ಬಿರನೆ = ಬೇಗಬೇಗ
ಬಿರದು = ಬಿರಿದು, ಛಿದ್ರವಾಗು
ಬಿರ್ನೆ = ಬೇಗನೆ

ಬುಕ್ಕು = ತಿನ್ನು (ಗಬಗಬನೆ ತಿನ್ನು)
ಭುಗಂತರ = ಭೂಗತ, ಹಾಳು, ನಾಶ
ಬುಡಕ್ಕೆ ನೀರು ತಿದ್ದಿಬುಡು = ಅಡಿಪಾಯವನ್ನು ನಾಶಮಾಡು
ಬುಡು, ಬುಟ್ಟು, ಬುಟ್ಟೋ = ಬಿಡು, ಬಿಟ್ಟು, ಬಿಟ್ಟುವು
ಬುಂಡುಬುಂಡಗೇ = ನಗ್ನವಾಗಿ
ಬೆಟ್ಟು = ಬೆರಳು
ಬೆಸೆ (ಬೆಸೆದಳು) = ಚಾಡಿ ಹೇಳು
ಬೆಳ್ಳೇವು = ಮರಳುಗೊಳಿಸುವುದು
ಬೆಳಕು ಹರಿಸು = ರಾತ್ರಿಯನ್ನು ಕಳೆ
ಬೆಳ್ಳಲಿ = ಬೆರಳಿನಲ್ಲಿ
ಬೇಕಾದೋಟು = ಬೇಕಾದಷ್ಟು
ಬೆಚ್ತೀಯಾ = ಬೆಚ್ಚುತ್ತೀಯಾ
ಬೇವಾಗ = (ಬೇಯುವಾಗ)
ಬೈಲುಕಡೆ = ಬಯಲುಕಡೆ, ಮಲವಿಸರ್ಜನೆ
ಬೈಲು = ಬಯಲು
ಬೋ = < ಬಹು
ಬೊಡ್ಡೆ = ಬುಡ
ಬೊಮ್ಮಟೆ = ಮಗು
ಬೊಮ್ಮರಾಕ್ಷಸ = ಬ್ರಹ್ಮರಾಕ್ಷಸ
ಬೋಗಳು = ಬೈಗಳು
ಬೋದು = ಬೈದು
ಬೋಮಾನ = ಬಹುಮಾನ
ಬೋರೆ = ಎತ್ತರವಾದ ಪ್ರದೇಶ

ಮ

ಮಂಕರಿ = ಸಗಳಿಯನ್ನು ತುಂಬಲು ಈಚಲು ಅಥವಾ ಬಿದಿರುಕಡ್ಡಿಗಳಿಂದ ಮಾಡಿದ ಕುಕ್ಕೆ
ಮಂಗಾಣಿ = ಬಿಲ್ಲೆ
ಮಠ = ಶಾಲೆ
ಮಠಕ್ಕೆ ಮಣ್ ಹಾಕು = ಓದು, ಶಾಲೆಗೆ ಹೋಗು



ಮಡ = < ಮಡು
ಮಂಜಲಿಗೆ = ಮಂದಲಿಗೆ, ಚಾಪೆ
ಮಟ್ಟೆ = ಗಂಟು
ಮಡಲು = ಮಡಿಲು
ಮಡಗು = ಇಡು
ಮಡೀಕೊಂಡದೆ = ಮಡಗಿಕೊಂಡಿದೆ
ಮಣ್ಣಿಗೆ ಮಣ್ಣುತಿನ್ನಿಸು = ಕಷ್ಟಪಡಿಸು
ಮಂತ್ರಮರೂಡಿ = ವಶೀಕರಣ, ಆಕರ್ಷಣೆ
ಮದುವಣ್ಣ = ಮದುವೆಯ ವರ
ಮನಗು, ಮನಗಿಸು = ಮಲಗು, ಮಲಗಿಸು
ಮನೇಲೇ = ಮನೆಯಲ್ಲೇ
ಮನೀಕೊಳ್ಳಿ = ಮಲಗಿಕೊಳ್ಳಿ
ಮಸುವು = ನಸುಕು, ಉಷಃಕಾಲ
ಮರಿಜವಳಿ ಕಡ್ಡಿ = ಮಂತ್ರದಂಡ
ಮಲುಕಾಡಿಸು = ಮೆಲಕುಹಾಕು
ಮಸಲತ್ತು = ಒಳಸಂಚು
ಮಸಾಣ = ಶ್ಮಶಾನ
ಮಸ್ತಾವಾಗಿ = ಅಧಿಕ ಪ್ರಮಾಣದಲ್ಲಿ
ಮಹಾಂತ = (< ಮಹಾ ಅಂತ್ಯ), ದೊಡ್ಡ
ಮಳ್ಳುಂಡೆ = ಮರಳಿನ ಉಂಡೆ
ಮಾಮೇರಿ = ಅತಿಶಯವಾಗಿ, ಬಹಳ
ಮ್ಯಾಗಳ = ಮೇಲಿನ
ಮ್ಯಾಕೆ = ಮೇಲಕ್ಕೆ, ನಂತರ
ಮ್ಯಾಕೂ ಕೆಳೀಕೂ = ಮೇಲಕ್ಕೂ ಕೆಳಕ್ಕೂ
ಮಾ = < ಮಹಾ
ಮಿಕ = ಮೃಗ
ಮಿಜಾರಷ್ಟಿ = < ಮೆಜಾರಿಟಿ (majority), ವಯಸ್ಕ
ಮಿತಿ ಮಿತಿ ಅಂತಿದ್ದೋ = ಮುಲುಗುಟ್ಟುತ್ತಿದ್ದವು
ಮಿತ್ತು = ಮೃತ್ಯು

ಮೀಟಿಸು = ಮೇಲಕ್ಕೆ ಎತ್ತು
ಮೀದು = ಸ್ನಾನಮಾಡಿ
ಮೀಯಕ್ಕೆ = ಸ್ನಾನಕ್ಕೆ (< ಮೀಹಕ್ಕೆ)
ಮೀಸೆ ಮಿಂಡಾಳ = ಮೀಸೆ ಇರುವಂಥ ವಯಸ್ಕ
ಮುಕ್ಕರಗೊಂಡು = ಶಕ್ತಿಯನ್ನೆಲ್ಲಾ ಪ್ರಯೋಗಿಸಿ
ಮುಕ್ಕುರಿ = ತೀಣುಕು, ಮುಲುಗು
ಮುರ್ಕಾಟಿ = ಆಮೆಜಾತಿಯದು
ಮುಂದಾರಕೆ = ಮುಂದಕ್ಕೆ, ಎದುರಿಗೆ
ಮುನೀಲೇ = (ಮುನಿಯಲೇ), ಲಕ್ಷಿಸು
ಮುಟ್ಟಾಕೂ = ಮುಟ್ಟುವುದಕ್ಕೂ
ಮುಟ್ಟಿಕೊಂಡ = ಅಭ್ಯಾಸಮಾಡಿಕೊಂಡ, ಪ್ರಾರಂಭಿಸಿದ
ಮುಟ್‌ಚಿಟ್ = ಮೈಲಿಗೆ
ಮುಖ ದಪ್ಪಗೆಮಾಡು = ಅಸಮಾಧಾನ ತೋರಿಸು
ಮುಂಡೆ = ಅನಿಷ್ಟ ಹೆಂಗಸು, ವಿಧವೆ
ಮುಂಡು (ಉದಾ ॥ ನೇಗಿಲ ಮುಂಡು) = ತೊಗಟೆ ತೆಗೆಯದಿರುವ ದಪ್ಪಮರದ ತುಂಡು
ಮುಡುಕಲು = ಮೂಲೆ
ಮುಡಿಕೊಳ್ತಾ = ಮುಡಿದುಕೊಳ್ಳುತ್ತಾ
ಮೂಡೆ (ಗಾತ್ರ) = ಮುಡಿ (ಧಾನ್ಯ ತುಂಬುವ ಚೆಂಡಿನಾಕಾರದ ಹುಲ್ಲಿನಲ್ಲಿ ಹೆಣೆದ ಸಾಧನ)
ಮೂರ್ತ = ಮುಹೂರ್ತ
ಮುಳೀಕೊತ್ತು = ಮುಳುಗಿಕೊಂಡಿತು
ಮೇಕೆ = ಮೇಲಕ್ಕೆ
ಮೆಟ್ರೆ = ಕುತ್ತಿಗೆ
ಮೆಟ್ಟಿಸು, (ಮೆಟ್ಟಿಸ್ಕೋ) = ಹಚ್ಚು, ಅಂಟಿಸು
ಮೇಟಿ = ಯಜಮಾನ
ಮೇಯಾಕೆ = ಮೇಯುವುದಕ್ಕೆ
ಮೆಳೆ = ಗಿಡ, ಸಸಿ
ಮೇಲಕ್ ಮುನ್ನಾಗಿ = ಮೇಲುಗಡೆಗೆ



ಮೈಕಡಿ = ಮೈನವೆ (ಏಟು ಬೇಕು ಎಂದು)
ಮೈನವನಾರಸಂದು = ಶರೀರದ ಅಂಗಾಂಗಗಳೆಲ್ಲಾ
ಮೈನೀರು = ಮೂತ್ರ
ಮೈಮೆ = ಮಹಿಮೆ
ಮೈಯ್ಯಾರಿಂಗು = ಹಡೆಯುವುದು
ಮೈಲಿ = ಮೈಯಲ್ಲಿ
ಮೊಗ = < ಮಗು
ಮಾಗಿಬುಂಡೆ = ಒಣಗಿದ ಮಾಗಿ ಬುರುಡೆ
ಮೊಖ್ತ = ಮುಖತಃ
ಮೊಖಾಡೆ = ಮುಖ ಅಡಿಯಾಗಿ
ಮೊಖ = ಮುಖ
ಮಾಡಾಕೂ = ಮಾಡುವುದಕ್ಕೂ
ಮಾಡಿ = ಮಹಡಿ
ಮಾದಿಗ್ಗೇರಿ = < ಮಾದಿಗ ಕೇರಿ
ಮಾನ ಕಾಸಿಗೆ ಪಂಚೇರು ಮಾಡು = ಮರ್ಯಾದೆ ಕಳೆಯುವುದು
ಮಾನುಭಾವ = ಮಹಾನುಭಾವ
ಮಾನಾಡು = (< ಮಹಾನಾಡು?), ತೀರಾಹೆಚ್ಚು ವಯಸ್ಸಿನ
ಮಾನಿದ್ದೇಲಿ = < ಮಹಾನಿದ್ರೆಯಲ್ಲಿ
ಮಾರ್ಬಲ = ಮರುಬಲ, ಮಹಾಬಲ, ದೊಡ್ಡ ಸೈನ್ಯ
ಮಾರಾಯರಾಗಿ = ಮಹಾರಾಯರಾಗಿ
ಮಾರಣೆ (ದಿನ) = ಮಾರನೆಯ (ದಿನ)
ಮಾರಾಜ್ರು = ಮಹಾರಾಜರು
ಮೋಚಿಸು = ಬೇಸರದಿಂದ ಕೊಡುವುದು.
ಮೋಟರು = ಅಂಗವಿಹೀನರು, invalids
ಮೋತೆ = ಹೂವಿನ ಭಾಗ
ಮೊರ = ಕಿವಿಯ ಆಕಾರದ, ಧಾನ್ಯವನ್ನು ಕೇರುವ ಸಾಧನ
ಮೋರೆ = ಮುಖ
ಯಚ್ಚ = ವೆಚ್ಚ, ಖರ್ಚು
ಯತಾರ್ಥ = ವ್ಯರ್ಥ

ಯಥೆ = ವ್ಯಥೆ
ಯರ್ಥ = ವ್ಯರ್ಥ
ಯದ್ವಾತದ್ವ = ಮಿತಿಯಿಲ್ಲದೆ, ಅತಿಯಾಗಿ
ಯಲ್ಲಾ = ಎಲ್ಲಾ
ಯವಾರ = ವ್ಯವಹಾರ
ಯವಸ್ಥೆ = ವ್ಯವಸ್ಥೆ
ಯಂಕಟ = < ವೆಂಕಟ
ಯಂಡು = ಎರಡು
ಯಾರ್ತಾವಾದ್ರೂ (ಯಾರ ತಾವು ಆದರೂ) = ಯಾರ ಹತ್ತಿರವಾದರೂ
ಯಾಲೇ = ಆಗಲೇ
ಯಾವೋನಪ್ಪ = ಯಾವನ ಅಪ್ಪ
ಯಾವತ್ತಾರೂ = ಯಾವತ್ತಾದರೂ
ಯಾಸ = < ವೇಷ
ಯಾಸ್ತಾರಿ (< ವೇಷಧಾರಿ ?) = ವೇಷ
ಯಿದ್ಯಮಾನ = ವಿದ್ಯಮಾನ
ಯಿದ್ಯ = < ವಿದ್ಯೆ
ಯಿಧಿ = ವಿಧಿ
ಯಿಮಾನ = < ವಿಮಾನ
ಯೇಗ = ಯೋಗ
ಯೇಚ್ನೇ (ಲಿ) = ಯೋಚನೆ (ಯಲ್ಲಿ)
ಯೇದ = ವೇದ

ರ

ರಂಜನೆ (ಹೊಡೆದ ಹಾಗೆ) = ಮಿಂಚು
ರತ = ವ್ರತ
ರತನೀರು = ವ್ರತನೀರು, ಕೆಂಪು ನೀರು ಮತ್ತು ಕಪ್ಪು ನೀರು
ರವಷ್ಟು = ರವೆಯಷ್ಟು, ಸ್ವಲ್ಪ
ರಾವು ಬಡಿ = ರಾಹುಬಡಿ
ರುಜುಬಲ = (< ಋಜುಬಲ ?), ಪುಷ್ಟಿ
ರುಸ್ತುಂಜೋಡಿ = ಸೊಗಸಾದ ಜೊತೆ, ಅನುರೂಪದ ಜೊತೆ



ರೂಪಸ್ಥೇರು = ರೂಪವತಿಯರು
ರೇಣುತೂಕದ ಬರಾಬರಿ = ಅಣುವಿನ ಸಮಾನ
ರೋತೆಮೊಗ = ರೋಗದ ಮಗು
ರೋಜೀನು = ನಿತ್ಯವೂ

ಲ

ಲಕ್ಷ್ಮಿ ಕಾಲುಮಡೇಹಾಕ್ಕೊಂಡು ಮಲಗಿದ್ದಳು = ಶ್ರೀಮಂತಿಕೆ ತುಂಬಿತ್ತು
ಲಾಗಾಯ್ತು (ಉದಾ ॥ ಸಿಕ್ಕಿದಲಾಗಾಯ್ತು) = ಕಾಲದಿಂದಲೂ
ಲಾಜಾ = ಕ್ಷಣ
ಲಾಟ್ಹಾಕಿದ್ದಿ = ಲಾಟ್ (lot) ಹಾಕಿದ್ದೀಯೆ
ಲಾತ = ಏಟು, ವದೆತ
ಲಾಯಕ್ = ಅರ್ಹ, ಯೋಗ್ಯ
ಲೊಟಗಾಲೆ = ಗೊಣಗು, ವಟಗುಟ್ಟು, ಬೈಯುವುದು

ವ

ವಗ್ಗು = ಹೊಂದಿಕೊ
ವತ್ತೀಲೇ = ಪಕ್ಕದಲ್ಲೇ
ವತ್ತೀಯ = ಹತ್ತಿರದ, ಪಕ್ಕದ
ವದ್ದಾಡಿಕೊಳ್ಳು = ಕಸಿವಿಸಿಪಡು, ಚಿಂತಿಸು
ವದ್ದಾಡು = ಒದ್ದಾಡು
'ವರ' = ವರಹ
ವರಸು = ಒರೆಸು
ವಲವರ = ಪಕ್ಷಪಾತ
ವಲ್ಲಿ = ಚಿಕ್ಕ ವಸ್ತ್ರ, ಟವೆಲ್
ವಸ್ತ = ವಸ್ತ್ರ
ವಸಿ = ಸ್ವಲ್ಪ
ವಸಿಜನ = ಸ್ವಲ್ಪಜನ
ವಾಂಕಾರ = ಗೋಳು, ಕಷ್ಟ
ವಾಂಕಾರು ಹತ್ತು = ಕಷ್ಟಪಡು
ವಾಲಗ = ಓಲಗ
ವಾಲಂಗಣೆ = ಓಲೈಸು

ವಾಲೆ = ಓಲೆ
ವಾಸ್ಯಾಯ್ತದೆ = ವಾಸಿಯಾಗುತ್ತದೆ
ವುಡುಗಿ = ಹುಡುಗಿ
ವೈನಾಗಿ = ಚೆನ್ನಾಗಿ
ವೈಭೋಗ, (ಐಭೋಗ) = ವೈಭವ
ವೈಸಾಕ = ವೈಶಾಖ

**ಶ**

ಶಲ್ಯ = ಅಂಗವಸ್ತ್ರ
ಶಿವಸಾಪ = ಶಿವಶಾಪ, ಶಿವನ ಅನುಗ್ರಹ
ಶಿಸ್ತಾಗಿ = ನೇರವಾಗಿ, ಸರಿಯಾಗಿ
ಶಾಪ = ಮಂತ್ರ, ಕೆಟ್ಟದ್ದನ್ನು ಬಯಸುವುದು.
ಶಾನೆ = ಬಹಳ
ಶ್ಯಾಲೆ = ಸೀರೆ
'ಶಾಸೀನ'ವಾದ (< ಶಾಸನ) = ಸ್ಥಿರವಾಗಿ ಉಳಿಯುವಂಥ

**ಸ**

ಸಟಾಗಿ = ಸ್ವಲ್ಪ
ಸಣ್ಣ ಪುಟ್ಟ ಮಾತಾಡು = ಹೀನಾಯವಾದ ಮಾತು
ಸಣ್ಣಾಡು = ಶರಣುಮಾಡು
ಸತಾಗತಾ = (ಶತಾಗತ ?), ಏನಾದರೂ
ಸತಿ = ಸಲ, ಸಾರಿ, ಬಾರಿ
ಸದ್ದಾ ಮುದ್ದಾ ವಾಸುದೇವ = ದಡ್ಡ
ಸಂದೆ = ಸಂಜೆ
ಸಂದಿ = ತಂತ್ರ, (Plan)
ಸಂದಿಸಲೇ = ಗೋಚರಿಸು
ಸಂದೀ = ಸಂದಿಯಲ್ಲಿ
ಸಂರಂಭ = ಸಂಭ್ರಮ
ಸನ್ನೇಲಿ ಬನ್ನೇಲಿ = ಸಂಜ್ಞೆಯಲ್ಲಿ
ಸಪ್ಪಟ್ಟೆ = ಸುಳ್ಳು, (ಸಟೆ)
ಸಬ = ಶವ



ಸಬಗಸ್ತು = ಮೆರವಣಿಗೆ
ಸಬೂಬು = ನೆಪ, ತಪ್ಪಿಸಿಕೊಳ್ಳುವ ಉತ್ತರ
ಸಮತ್ತು = ಸಮಹೊತ್ತು, ಅರ್ಧರಾತ್ರಿ
ಸಮಂತ್ರ = ಸಮಯ
ಸರವು = ಲೇಪಿಸು
ಸರಸತಿ ಗೂಡು = ಸರಸ್ವತಿ ಗೂಡು (ಹಳ್ಳಿಯ ಮನೆಗಳಲ್ಲಿ ನಡುಮನೆಯ ದೇವರ ಗೂಡು)
ಸರಳೆಮ್ಮೆ = ಒಂದು ಜಾತಿಯ ವಿಶಿಷ್ಟವಾದ ಎಮ್ಮೆ
ಸರೀರ = < ಶರೀರ
ಸಲಬು = ಸಲಹು
ಸಲ್ಲಿಗೆಲ್ಲಾ = ಸೊಲ್ಲಿಗೆಲ್ಲಾ
ಸಳಿ = ಚಳಿ
ಸ್ಯಾಪೆ = ಚಾಪೆ
ಸುಂದ್ರಿ = ಸುಂದರಿ
ಸೊಂಪಲು = ಸಂಧಿ, ಎರಡು ಮನೆಗಳ ನಡುವಣ ಕಿರಿದಾದ ಜಾಗ
ಸೂಬಾಲೆ = ಸುಂದರಳಾದ ಒಬ್ಬಳು ಹೆಣ್ಣು
ಸೂರ = < ಶೂರ
ಸೂಲ = ಶೂಲ
ಸಾವರಿಸಿಕೊಂಡು = ಸುಧಾರಿಸಿಕೊಂಡು, ಸಹಿಸಿಕೊಂಡು
ಸಾವರ = ಸಾವಿರ
ಸಾವಾಸ = ಸಹವಾಸ, ಸಂಪರ್ಕ
ಸಾಯಾ = ಸಹಾಯ
ಸಾವು ಸತ್ತು ಬಾಳುಬತ್ತು = ಸತ್ತು ಹುಟ್ಟು, ಸತ್ತಂತೆ ಜೀವಿಸು
ಸಾಸ = ಸಾಹಸ
ಸಾಸೀನ = ಶಾಸನ, ಶಾಶ್ವತ
ಸಾಸ್ತ್ರ = < ಶಾಸ್ತ್ರ
ಸೀಕ್ಸೆ = ಶಿಕ್ಷೆ
ಸೀಕುಪಾಕು = ಸೀದು ಪಾತ್ರೆಗೆ ಅಂಟಿಕೊಂಡ ಭಾಗ
ಸೀಪಕ್ಕೂ = ಚೀಪುವುದಕ್ಕೂ

ಸೀಮೇಲಿಲ್ಲ = ಸೀಮೆಯಲ್ಲಿ ಇಲ್ಲದ / ಅಪರೂಪದ
ಸೀರಣಿಗೆ = ತಲೆಗೂದಲಿನ ಸಿಕ್ಕು ಬಿಡಿಸುವ ಸಾಧನ
ಸಿಗಿ, ಸಿಗಿಸು = ಸೀಳು, ಸೀಳಿಸು
ಸಿಂತೆ = ಚಿಂತೆ
ಸಿದಿಕು = ಹುಡುಕು
ಸಿನೇಹಿತಗಾರ = ಸ್ನೇಹಿತ
ಸಿಲುಬು = ಕಡೆ, ಮಥಿಸು
ಸಿಲೋಟಾಗಿ = ತೆಳುವಾಗಿ
ಸಿವ = ಶಿವ
'ಸಿಸ್ಯ' = ಶಿಷ್ಯ
ಸುಂಕ = ಸೂತಕ
ಸುಂಡ = ಸಣ್ಣ ಇಲಿ
ಸುತರಾಂ = ಕೊಂಚವಾದರೂ
ಸುದ್ಧ = ಶುದ್ಧ
ಸುರವಾನ್ನೆ = ಸುರಹೊನ್ನೆ
ಸಿರೇಷ್ಟ = ಶ್ರೇಷ್ಠ
ಸುಳಿ ಸಂತಾನ = ಮಕ್ಕಳು
ಸೂಂದರ = ಸುಂದರ
ಸೂಲೀಂದ್ರ = ಸೂರ್ಯಚಂದ್ರ
ಸೋಕ = < ಶೋಕ
ಸೋಟೆ ಹಿಂಡು = ಕೆನ್ನೆಹಿಂಡು
ಸೋರಿಹಾಕಿದ ಹಾಗೆ = ಬಾಡಿಹೋಗು, ಶಕ್ತಿಗುಂದು
ಸೆಡೆ = ಹೆಡೆ
ಸೆಡಾರತ್ತು = ಜಂಬ
ಸೆಜ್ಜೆಮನೆ = ಶಯನಗೃಹ
ಸೇಷ್ಟ = < ಶ್ರೇಷ್ಠ
ಸೈಸು, (ಸೈಸಾಕೆ) = ಸೈರಿಸು, (ಸೈರಿಸುವುದಕ್ಕೆ) ಸಹಿಸು
ಸಿವನ ಪಾದಸೇರು = ಮರಣಹೊಂದು
ಸಟೀಗೆ = ಸ್ವಲ್ಪ



## ಹ

ಹಲುಬೆ = ಹಲ್ಲುಗಳ ಸಾಲಿನಂತಿರುವ ವ್ಯವಸಾಯದ ಉಪಕರಣ
ಹಲ್ಲುಗುಡಲು = ಗರಗಸದಂತಿರುವ ಕುಡುಗೋಲು
ಹರಬಿ = ಹರವಿ
ಹರವಾಗಿ = ಅಗಲವಾಗಿ, ವಿಸ್ತಾರವಾಗಿ
ಹರಿಸಿಕೊಂಡು = ಬೆನ್ನಟ್ಟಿಕೊಂಡು, ಓಡಿಸಿಕೊಂಡು
ಹಣೇಬರ = ಹಣೆಯ ಬರಹ
ಹಣ್ಣುಗಾಯಿ ನೀರುಗಾಯಿ = ಕಾಯನ್ನು ಬಲವಂತವಾಗಿ ಹಣ್ಣುಮಾಡಿ, ನೀರು ಮಾಡುವ ಹಾಗೆ ಚೆನ್ನಾಗಿ ಸದೆಬಡಿ
ಹತ್ತೊರ್ಷ = ಹತ್ತು ವರ್ಷ
ಹತ್ತ ಕಡೇ = < ಕಟ್ಟ ಕಡೆಯ
ಹಡಿಕಾಗೆ = ದಪ್ಪಕಾಗೆ
ಹನ್ನೆಂಡು = ಹನ್ನೆರಡು
ಹನಾಸ = ಹಾಸ್ಯ
ಹಮೆಜಮೇವು = ಅಗತ್ಯವಸ್ತುಗಳು
ಹಮ್ = ಹಮ್ಮು
ಹಟ್ಟೀಗೆ ಹಿಡ್ಕೊ = ಪ್ರಾಣ ಹೋಗುವ ವೇಳೆ ಆ ವ್ಯಕ್ತಿಯನ್ನು ಹೊರಕ್ಕೆ ಇಡುವುದು
ಹಗ್ಗಿ = (ಅಗ್ಗಿ) = ಬೆಂಕಿ
ಹಗ್ಗಬರೆ (ಹುಲಿ) = ಪಟ್ಟೆಹುಲಿ
ಹಗಲು ಮಾಡಿಕೊಂಡು = ಬೆಳಕು ಮಾಡಿಕೊಂಡು
ಹಕ್ಕಳು = ಮಕ್ಕಳು
ಹೂಟ ಹಾಕಿಕೋ = ಉಪಾಯ ಮಾಡು
ಹೊಕ್ಕೊಳ್ತು = ಹೊಕ್ಕು ಕೊಂಡಿತು, ಪ್ರವೇಶಿಸಿತು
ಹೊಚ್ಚಿ = ಮುಚ್ಚಿ
(ಬಾಗಿಲು) ಹೊಚ್ಚಿ = ಮುಚ್ಚಿ
ಹೇಡಿಸಳಿ = ಹೆದರಿಕೆಯ ಚಳಿ
ಹೇಳ್ನೇ = ಹೇಳಲೇ
ಹೇರು = ಹೊಡೆ, ಹಾಕು, ಭಾರವಾದ ಹೊರೆ

ಹೆಣ್ಣಿಗ = ನಪುಂಸಕ, ಹೆಣ್ಣಿನ ನಡವಳಿಕೆಯವನು
ಹೆಣ್ಮೊಗ = ಹೆಣ್ಣುಮಗು
ಹೆಡ್ತಿ ಹೆಡತಿ = ಹೆಂಡತಿ
ಹೆಡಗೆ = ಬಿದಿರಿನ ದೊಡ್ಡ ಕುಕ್ಕೆ
ಹೆಡತಲೆ (ಮಿತ್ತು) = ಹಿರಿತಲೆ
ಹೆಜ್ಜಿಗೆ = ಚಚ್ಚೌಕವಾದ ಬಿದಿರು ಕುಕ್ಕೆ
'ಹೆಚ್ಚಿಗೆ' ಅಂತ ಮೀಸಲಕ್ಕಿ ಹಾಕು = ಧಾನ್ಯವನ್ನು ಕೊಯ್ಯುವ ಆರಂಭದ ದಿನ ಧಾನ್ಯ ಹೆಚ್ಚಲಿ ಎಂದು ಮಾಡುವ ಪೂಜೆ
ಹೆಕ್ಕತ್ತು = ಕತ್ತಿನ ಹಿಂಭಾಗ
ಹುನಾರು = ತಂತ್ರ, ಉಪಾಯ
ಹೂದಳು = ಹುಯ್ದಳು
ಹೂದಂಗೆ = ಹುಯ್ದ ಹಾಗೆ
ಹೂಣು = ಹೂಳು
ಹುಳ್ಳಿ = ಹುರುಳಿ
ಹುಟ್ಟಿದ ನಿರ್ವಾಣ ನಿಲ್ಲು = ಬೆತ್ತಲೆ ನಿಲ್ಲು
ಹೀನಾಮಾನ = ತುಂಬಾಹೀನಾಯವಾಗಿ
ಹಿಸಿ, (ಹಿಸಕೊಳ್ಳು) = ಸೀಳು
ಹಿಸ್ಕಿ = ಹಿಸುಕಿ
ಹಿಮ್ಮೆಣ್ಣಿ ಚೀಲ = ದುಡ್ಡು ತುಂಬಿ ಸೊಂಟಕ್ಕೆ ಕಟ್ಟುವ ಚೀಲ
ಹಿಂಡೇಕುಳ್ಳು = ಹಿಂಡುಗೊಳು, ಪಿಂಡ
ಹಿಂಡಲು = ಪೊದೆ
ಹಿಂದುಗುಟ್ಟೇ = ಹಿಂದುಗಡೆಯಲ್ಲೇ
ಹಿಣಿಲು = ಜಲ್ಲೆ , ಎತ್ತಿನ ಡುಬ್ಬ
ಹಿಜ = ಶಿಕ್ಷೆ, ಹಿಂಸೆ, ಪೀಡೆ
ಹಿಡಿದು ನಿಲ್ಸು = ತಡೆಹಾಕು
ಹಿಡಿಬಿಟ್ಟೀ = ಬಲವಂತ, ಮನಸ್ಸಿಲ್ಲದೆ ಮಾಡು
ಹಿಡಿನಾಚಿಕೆ = ಅಪಾರವಾದ ನಾಚಿಕೆ
ಹಿಗ್ಗಿ ಹೀರೇಕಾಯಿ ಆಗು = ಸಂತೋಷದಿಂದ ವಿಕಸಿತವಾಗು
ಹಿಕಮತ್ತು = ಉಪಾಯ, ಮೋಸ, ತಂತ್ರ



ಹಾಸನರಿ = ಅಂಗಾತನಾಗಿ
ಹಾಲುಗೋಟೆ = ಹಾಳು ಕೋಟೆ
ಹಾಲುಗೊಣ = ಹಾಲಿನ ಕೊಳ
ಹಾಲಕ್ಕಿ = ರಾತ್ರಿವೇಳೆ ಶಕುನಹೇಳುವ ಹಕ್ಕಿ (ತೇನೆ ಹಕ್ಕಿ ?)
ಹಾರೋ ಹಂಗೆ = ಹಾರುವ ಹಾಗೆ
ಹಾರತ = ಜಿಗಿತ, ನೆಗೆತ
ಹಾರಹೊಡೆ = ಅಗಲವಾಗಿ ತೆರೆ
ಹಾಯ್ಗಡ = ಹಾಯುವ ಕಡ, ನೀರನ್ನು ಹಾದು ಹೋಗಬಹುದಾದ ಜಾಗ
ಹ್ಯಾಪ್‌ಮೋರೆ = ಅಳುಮುಖ
ಹಾರ್ತ = (ಹಾರಿತ?) ನೆಗೆತ
ಹಾಡಿಕೊಂಡು ಗುಡಿಸಿಕೊಂಡು = ದೀರ್ಘವಾಗಿ ರಾಗತೆಗೆದು
ಹಾಕ್ಬುಟ್ಟೆ = ಹಾಕಿಬಿಟ್ಟೆ
ಹ್ಯಂಗೆ = ಹೇಗೆ
ಹಂಡಿ = ಹರಡಿ
ಹಂಗಾಡಿ ಹಿಂಗಾಡಿ = ಹಾಗಾಗಿ ಹೀಗಾಗಿ
ಹಂದಿಚಿಕ್ಕ = ಹಂದಿಕಾಯುವವನು
ಹಂಡು, (ಹಂಡಿದ) = ಹರಡು
ಹಂಡೆ = ಎತ್ತರವಾದ ಪಾತ್ರೆ
ಹಂಜಿಕುಕ್ಕೆ = ಹತ್ತಿ ತುಂಬಿದ ಬುಟ್ಟಿ
ಹಂಗಾರೆ = ಹಾಗಾದರೆ
ಹಳೇರಾಗಿ ಹುಳಿಮಜ್ಜಿಗೆ ಕುಡಿ = ಪಿತ್ರಾರ್ಜಿತವಾದ ಆಸ್ತಿ ಅನುಭವಿಸು
ಹಳೇರಾಗಿ ತರೋಕೆ ಹೋಗು = ಮರಣ ಹೊಂದು
ಹಳಿಮೊಸರು = ಗಟ್ಟಿ ಮೊಸರು
ಹಸಕರೆಯೋ = (ಹಸು ಕರೆಯುವ ಅಂದರೆ ಹಾಲು ಕರೆಯುವ) ರಾತ್ರಿ ಊಟದ ಹೊತ್ತು
ಹೈಲಾಟ = ಹುಡುಗಾಟ
ಹೊಂದು = ಅಕ್ಕಿ ಹಿಟ್ಟು ಕಲಸಿದ ನೀರು
ಹೊಂಡ್ತು = ಹೊರಟಿತು
ಹೊಂಟುಬುಡು = ಹೊರಟು ಬಿಡು

ಹೊಸಗವಲು = ಹೊಸವಾಸನೆ
ಹೊಲ್ತಾಕ್ಹೋಗಿ = ಹೊಲದ ಹತ್ತಿರಕ್ಕೆ ಹೋಗಿ
ಹೊರವಾಗಿ = ತೋರವಾಗಿ, ದಪ್ಪವಾಗಿ
ಹೊರಗಾಗು = ಮುಟ್ಟಾಗು
ಹೊಪ್ಪಳೆ = ಪದರ, ಗುಳ್ಳೆ
ಹೋಯ್ತಾ = ಹೋಗುತ್ತಾ
ಹೋತ = ಗಂಡು ಆಡು
ಹೊತ್ತಿಗೆ ಬೆಳಿ ಅಂದ್ರೆ ಜಾವಕ್ಕೆ ಬೆಳಿ = ಅತಿಕ್ಷಿಪ್ರದ ಬೆಳವಣಿಗೆ
ಹೊತ್ತಾರಿಂದ್ಲೂ = ಹೊತ್ತರೆಯಿಂದಲೂ ಬೆಳಗಿನಿಂದಲೂ
ಹೊಡ್ಕೊಂಡ್ ಬಂದ್ಬುಡು = ಅಪಹರಿಸು
ಹೊತ್ತಾರೆ = ಹೊತ್ತರೆ, ಬೆಳಿಗ್ಗೆ
ಹೊತ್ಮೂಡೋ = (ಹೊತ್ತು ಮೂಡುವ) ಸೂರ್ಯ ಉದಿಸುವ
ಹೊಡಕೋ ಬೇಕು = ಹೊಡೆದುಕೊಳ್ಳಬೇಕು, ಅಪಹರಿಸಬೇಕು
ಹೊಟ್ಟೆಸೂಲ = ಹೊಟ್ಟೆನೋವು
ಹೊಟ್ಟೆಗೆ ತಾಳ ಹಾಕ್ಕೊತ್ತು = ಊಟಕ್ಕೆ ಇಲ್ಲವಾಯಿತು

* * * *